

ವಿರಕ್ತ ರಾಷ್ಟ್ರಕ ಡಿವಿಜಿ



ಡಿ. ವಿ. ಜಿ. ಜನ್ಮಶತಮಾನೋತ್ಸವ ಸ್ಮೃತಿಮಾಲೆ–೧೩

ವಿರಕ್ತ ರಾಷ್ಟ್ರಕ ಡಿವಿಜಿ

ಡಿ. ಆರ್. ವೆಂಕಟರಮಣನ್

ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ
ಬೆಂಗಳೂರು–೫೬೦ ೦೧೯
೧೯೮೮

Virakta Raashtraka D. V. G. : A Biography of
Dr. D. V. Gundappa in Kannada by D. R. Venkataramanan.
Published by Gokhale Institute of Public Affairs,
Bangalore-19. First Edition 1988.

Pages. 480+xxxii Price Rs. 25/-

ಮೊದಲನೆ ಮುದ್ರಣ: 1988

ಬೆಲೆ: 25/- ರೂಪಾಯಿಗಳು

ಮುದ್ರಣ:
ಶ್ರೀ ನಿತ್ಯಾನಂದ ಪ್ರಿಂಟರ್ಸ್
ಅಶೋಕನಗರ, ಬೆಂಗಳೂರು-೫೬೦ ೦೫೦

ವಿಷಯಸೂಚಿ

ಮುನ್ನುಡಿ

ಕನ್ನಡ ನಾಡುನುಡಿಗಳ ಸೇವೆಗೆ ತಮ್ಮ ಇಡಿಯ ಬದುಕನ್ನು ಮುಡುಪಿಟ್ಟ, ನಾಡಿನ ದಿಗ್ಗಜಗಳಲ್ಲಿ ಒಬ್ಬರಾದ, ಧೀಮಂತಿಕೆಯಿಂದಲೂ ಆರ್ಜವ ಹೃದಯ ಸಂಪನ್ನತೆಗಳಿಂದಲೂ ಪಂಡಿತ ಪಾಮರರರನ್ನು ಸಮಭಾವದಿಂದ ಕಾಣುತ್ತಿದ್ದ ಡಾ. ಡಿ. ವಿ. ಜಿ. ಅವರು ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಸಂಸ್ಥಾಪಕರೂ ಆಗಿದ್ದಾರೆನ್ನುವುದು ನಾವೆಲ್ಲ ಹೆಮ್ಮೆ ಪಡಬೇಕಾದ ವಿಷಯ. ಈ ಮಹನೀಯರ ಜನ್ಮಶತಮಾನೋತ್ಸವದ ಆಚರಣೆಯನ್ನು ಏರ್ಪಡಿಸಬೇಕಾದದ್ದು ತನ್ನ ಕರ್ತವ್ಯ ಎಂದು ತೀರ್ಮಾನಿಸಿ, ಅವರ ಜನ್ಮದಿನವಾದ 1987, ಮಾರ್ಚ್ 17 ರಿಂದ ತೊಡಗಿ ಒಂದು ವರ್ಷ ಪೂರ್ತಿ ಉತ್ಸವವು ನಾಡಿನಾದ್ಯಂತ ನಡೆಯಬೇಕೆಂಬ ನಿರ್ಧಾರವನ್ನು ಸಂಸ್ಥೆ ಕೈಗೊಂಡಿತು. ಉತ್ಸವವನ್ನು ವೈಭವೋಪೇತವಾಗಿ ನೆರವೇರಿಸಲು ಒಂದು ಪ್ರಾತಿನಿಧಿಕವಾದ ಮತ್ತು ಅನೇಕ ಗಣ್ಯವ್ಯಕ್ತಿಗಳನ್ನೊಳಗೊಂಡ ಉತ್ಸವ ಸಮಿತಿಯೂ ನಿಯೋಜಿತವಾಯಿತು.

ಉತ್ಸವದ ಉದ್ಘಾಟನೆಯನ್ನು ಡಿ.ವಿ.ಜಿ. ಅವರ ಸ್ವಸ್ಥಳವಾದ ಕೋಲಾರ ಜಿಲ್ಲೆಯ ಮುಳಬಾಗಿಲಿನಲ್ಲಿ ನಡಸತಕ್ಕದ್ದೆಂದೂ, ಉತ್ಸವದ ಅಂಗವಾಗಿ ವಿಚಾರ ಗೋಷ್ಠಿಗಳು, ಸಂಭಾವನಾ ಸಂಪುಟ, ಸಂಸ್ಮರಣ ಸಂಚಿಕೆ ಮತ್ತು ಅವರ ಸಂಕ್ಷಿಪ್ತ ಜೀವನ ಚರಿತ್ರೆ ಇವುಗಳ ಪ್ರಕಟನೆ, ಮುಂತಾದ ಕಾರ್ಯಗಳ ಜೊತೆಗೆ ಡಿ.ವಿ.ಜಿ. ಅವರ ಕೃತಿಗಳ ಪೈಕಿ ಆಯ್ದ ಕೆಲವು ಕೃತಿಗಳನ್ನು ಪ್ರಕಟಿಸತಕ್ಕದ್ದೆಂದೂ, ಇವುಗಳನ್ನು ಮುಳಬಾಗಿಲಿನಲ್ಲಿ ನಡೆಯುವ ಉದ್ಘಾಟನಾ ಸಮಾರಂಭದ ದಿನ ಬಿಡುಗಡೆ ಮಾಡತಕ್ಕದೆಂದೂ ತೀರ್ಮಾನಿಸಲಾಯಿತು.

ಕರ್ನಾಟಕ ಸರ್ಕಾರವು ಡಿ.ವಿ.ಜಿ. ಅವರ ಸಮಗ್ರ ಕೃತಿರಾಶಿಯನ್ನು ಹತ್ತು ಸಂಪುಟಗಳಲ್ಲಿ ಪ್ರಕಟಿಸುವ ಅತ್ಯಂತ ಶ್ಲಾಘ್ಯವಾದ ಯೋಜನೆಯನ್ನು ಕೈಗೊಂಡಿದೆ. ಈ ಸಂಪುಟಗಳ ಬೆಲೆ ಎಷ್ಟೇ ಕಡಮೆ ಎಂದರೂ ಜನಸಾಮಾನ್ಯರು

ಕೊಳ್ಳುವ ಶಕ್ತಿಗೆ ಎಟುಕುವಂತಿರಲು ಸಾಧ್ಯವಿಲ್ಲ. ಆದ್ದರಿಂದ, ಡಿ.ವಿ.ಜಿ. ಅವರ ಬಹುಮುಖ ಸಾಹಿತ್ಯ-ಪ್ರತಿಭೆ ವ್ಯಕ್ತಪಡುವಂತೆಯೂ ಅವರ ಕೃತಿಬಾಹುಳ್ಯವನ್ನು ಪ್ರತಿನಿಧಿಸುವಂತೆಯೂ ಪುಸ್ತಕಗಳನ್ನು ಸಿದ್ಧಪಡಿಸುವ ಆಲೋಚನೆ ಮಾಡಲಾಯಿತು. ಆ ಪುಸ್ತಕಗಳ ಪೈಕಿ ಡಿ ವಿ ಜಿ ಯವರ ಜೀವನ ಚರಿತ್ರೆಯ ಪುಸ್ತಕವೂ ಒಂದಾಗಿದೆ.

ಸಾಮಾನ್ಯ ಜನರೂ ಕೊಳ್ಳಲಾಗುವಂತಿರಬೇಕೆಂಬ ನಮ್ಮ ಆಶಯಕ್ಕೆ ಅನುಗುಣವಾಗಿ ಪುಸ್ತಕಗಳ ಬೆಲೆಯನ್ನು ಕೂಡಿದಮಟ್ಟಿಗೂ ಕಡಮೆಯಾಗಿ ನಿಗದಿಮಾಡಿದೆ. ಈ ಪುಸ್ತಕಗಳ ಆಯ್ಕೆ, ಕರಡು ತಿದ್ದುವುದು, ಮುಂತಾದ ಕೆಲಸಗಳ ಹೊಣೆಗಾರಿಕೆಯನ್ನು ಪ್ರಕಟಣ ಸಮಿತಿಯ ಮಾನ್ಯ ಮಿತ್ರರು ಒಪ್ಪಿಕೊಂಡು ಅತ್ಯಂತ ಶ್ರದ್ಧೆಯಿಂದಲೂ ಉತ್ಸಾಹದಿಂದಲೂ ನಿರ್ವಹಿಸಿ ಉಪಕಾರ ಮಾಡಿದ್ದಾರೆ. ಈ ಸನ್ಮಿತ್ರರಿಗೆ ಗೋಖಲೆ ಸಂಸ್ಥೆ ಕೃತಜ್ಞವಾಗಿದೆ.

ಶ್ರೀ ನಿತ್ಯಾನಂದ ಪ್ರಿಂಟರ್ಸ್ ಅವರು ಇದನ್ನು ಉತ್ತಮವಾಗಿ ಮುದ್ರಿಸಿ ಕೊಟ್ಟು ಉಪಕರಿಸಿದ್ದಾರೆ.

ನಿಟ್ಟೂರು ಶ್ರೀನಿವಾಸ ರಾವ್
ಕಾರ್ಯದರ್ಶಿ,
ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ
ಮತ್ತು
ಅಧ್ಯಕ್ಷ, ಡಿ.ವಿ.ಜಿ. ಜನ್ಮಶತಮಾನೋತ್ಸವ ಸಮಿತಿ.

31-8-1988
ಬೆಂಗಳೂರು-19

ಅರಿಕೆ

ಡಿ ವಿ ಜಿ ಜನ್ಮಶತಮಾನೋತ್ಸವ ಸಮಿತಿಯ ಅಧ್ಯಕ್ಷರೂ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಕಾರ್ಯದರ್ಶಿಗಳೂ ಹಿರಿಯರೂ ಆದ ಮಾನ್ಯ ಶ್ರೀಮಾನ್ ನಿಟ್ಟೂರು ಶ್ರೀನಿವಾಸರಾವ್ ಅವರು, ಡಿ ವಿ ಜಿ ಜನ್ಮಶತಮಾನೋತ್ಸವ ಸಮಿತಿಯ ಕಾರ್ಯಾಧ್ಯಕ್ಷರೂ ಮತ್ತು ಶತಮಾನೋತ್ಸವದ ಕಾರ್ಯಕ್ರಮಗಳೆಲ್ಲವೂ ಸುವ್ಯವಸ್ಥಿತವಾಗಿ ನಡೆಯುವಂತೆ ವಿಶೇಷ ಶ್ರದ್ಧಾಸಕ್ತಿಗಳನ್ನು ವಹಿಸಿದವರೂ ಆದ ಶ್ರೀಮಾನ್ ಜಿ. ನಾರಾಯಣ ಅವರು— ಈ ಮಹನೀಯರಿಬ್ಬರ ಪ್ರಚೋದನೆ ಮತ್ತು ಉತ್ತೇಜನಗಳಿಂದ ನಾನು ಡಿ ವಿ ಜಿ ಯವರ ಜೀವನ ಚರಿತ್ರೆಯನ್ನು ಬರೆಯಲು ಹೊರಟೆ.

ಡಿ ವಿ ಜಿ ಯವರಂಥ ಬಹುಮುಖ ಪ್ರತಿಭೆಯ ಮಹಾನುಭಾವರ ಜೀವನ ಚರಿತ್ರೆಯನ್ನು ಬರೆಯುವುದು ಬಹು ಶ್ರಮಸಾಧ್ಯವಾದ ಕೆಲಸವೆಂದು ತಿಳಿದಿದ್ದರೂ ಸ್ವಲ್ಪ ಕಷ್ಟಪಟ್ಟರೆ ನಿಭಾಯಿಸಿಬಿಡಬಹುದೆಂಬ ಹುಚ್ಚು ಧೈರ್ಯದಿಂದ ಕೆಲಸವನ್ನು ಪ್ರಾರಂಭಿಸಿದೆ.

ಬೆಲ್‌ವಾಳ್‌ಕರ್ ಎಂಬ ವಿದ್ವಾಂಸರು ತಾವು ಭಗವದ್ಗೀತೆಯನ್ನು ಕುರಿತು ಬರೆಯಲು ಹೊರಟಾಗ ತಮಗಾದ ಅನುಭವವನ್ನು ಒಂದು ಶ್ಲೋಕದಲ್ಲಿ ಹೀಗೆ ವರ್ಣಿಸಿದ್ದಾರೆ :

> ಪ್ರಸನ್ನತ್ವಾತ್ ಅಸ್ಮಿನ್ ಸುಭಗ ಇತಿ ಸರ್ವಃ ಪ್ರವಿಶತಿ ।
> ಪ್ರವಿಷ್ಟೋ ಗಾಂಭೀರ್ಯಾತ್ ಅನವಗತಾಗಾಧೋಽತ್ರ ಪತತಿ ॥

(ಇದು ತಿಳಿಯಾಗಿದೆ, ಸುಲಭವಾಗಿ ದಾಟಿಬಿಡಬಹುದು ಎಂದು ಎಲ್ಲರೂ ಇದರಲ್ಲಿ ಪ್ರವೇಶ ಮಾಡುತ್ತಾರೆ. ಹಾಗೆ ಹೊಕ್ಕವರು, ಅದರ ಅಗಾಧತೆಯನ್ನು ಅರಿಯದೆ ಸಾಗುತ್ತಾ, ಬಿದ್ದುಬಿಡುತ್ತಾರೆ.)

ಡಿ ವಿ ಜಿ ಯವರ ಪರಿಚಯು ನನಗುಂಟು, ಅವರನ್ನು ಕುರಿತು ನಾನು ಬರೆದುಬಿಡುತ್ತೇನೆ ಎಂದು ಹೊರಟ ನನಗೂ ಅದೇ ಪರಿಸ್ಥಿತಿ ಒದಗಿತು. ಕೆಲಸ ಮುಂದುವರಿಯುತ್ತಿದ್ದಂತೆ ಅದರ ಅಗಾಧತೆಯ ಗಾಂಭೀರ್ಯದ ಅರಿವಾಗಿ, ನಾನು ಈ ಕೆಲಸಕ್ಕೆ ಕೈಹಾಕಿದ್ದು ಬೆಪ್ಪುತನವಲ್ಲವೆ ಎನ್ನಿಸಿತು. ಆದರೆ ಅಂತರಂಗಕ್ಕೆ ಬೆಳಕನ್ನು ಅನುಗ್ರಹಿಸಿದ ಗುರುವನ್ನು ಗ್ರಂಥರೂಪದಲ್ಲಿ ಸ್ಮರಿಸಿಕೊಳ್ಳುವ, ಅವರು ತಿಳಿಸಿದ್ದನ್ನು ಇತರರಿಗೂ ತಿಳಿಸುವ ಪ್ರಯತ್ನ

ಮಾಡುವ ಅವಕಾಶ ಒಂದು ಪುಣ್ಯವಿಶೇಷದಿಂದ ಬರತಕ್ಕದ್ದು; ಆದ್ದರಿಂದ ಈ ಕೆಲಸವನ್ನು ಒಪ್ಪಿಕೊಂಡೂ ಕೈಬಿಟ್ಟರೆ ಕರ್ತವ್ಯಭ್ರಷ್ಟನಾಗುತ್ತೇನೆಂಬ ಅಳುಕು ನನ್ನನ್ನು ಕೆಲಸದಲ್ಲಿ ಮುಂದಕ್ಕೆ ತಳ್ಳಿತು.

ಪರಮಪುರುಷನನ್ನು "ಅತ್ಯತಿಷ್ಠದ್ದಶಾಂಗುಲಂ" ಎಂದು ಪುರುಷ ಸೂಕ್ತ ವರ್ಣಿಸುತ್ತದೆ. ಹಾಗೆ ನಾವು ಕಂಡು ಮಾತನಾಡಿಸಿದ ವ್ಯಕ್ತಿ ಡಿ ವಿ ಜಿ ಯವರಿಗಿಂತ ನಿಜವಾದ ಡಿ ವಿ ಜಿ ಇನ್ನೂ ದೊಡ್ಡವರು ಎಂಬುದು ನನಗೆ ಈ ಚರಿತ್ರೆಯನ್ನು ಮುಂದುವರಿಸುತ್ತ ಹೋದಂತೆಲ್ಲ ಮನವರಿಕೆ ಯಾಯಿತು. ಮತ್ತು ಶ್ರೀಮಾನ್ ಹೆಚ್. ವೈ. ಶಾರದಾಪ್ರಸಾದ್ ಅವರು ಡಿ ವಿ ಜಿ ಯವರನ್ನು ಕುರಿತು: "ಆ ಮಹಾನುಭಾವನ ಸಾಧನೆಯನ್ನು ಕುರಿತು ಯೋಚಿಸಿ ಯೋಚಿಸಿದಂತೆಲ್ಲಾ ನನ್ನ ಸೋಜಿಗ ಇಮ್ಮಡಿಯಾಗುತ್ತ ಹೋಗುತ್ತದೆ" ಎಂದು ತಮ್ಮ ಒಂದು ಪತ್ರದಲ್ಲಿ* ಹೇಳಿದ್ದ ಮಾತುಗಳ ಅರ್ಥ ಮುಂದಟ್ಟಾಯಿತು. ಆದ್ದರಿಂದ ನಾನು ಡಿ ವಿ ಜಿ ಯವರಲ್ಲಿ ಕಂಡ ಹಿರಿತನ ವನ್ನೂ ಮತ್ತು ಆ ಹಿರಿತನದ ಹಿಂದೆ ಅವರು ಬೆಳೆಸಿಕೊಂಡಿದ್ದ ಮನೋ ಭಾವವನ್ನೂ ಮಹಾಜನರ ಗಮನಕ್ಕೆ ತರುವುದು ನನ್ನ ಮುಖ್ಯ ಉದ್ದೇಶ ವಾಯಿತು.

ಡಿ ವಿ ಜಿ ಯವರು "ಸಾಹಿತಿ"ಯಾಗಿ ಮಾಡಿರುವ ಕೆಲಸಕ್ಕಿಂತ ಸಾರ್ವ ಜನಿಕ ಕಾರ್ಯಕರ್ತನಾಗಿ ಮತ್ತು "ರಾಷ್ಟ್ರಕ"ನಾಗಿ ಮಾಡಿರುವ ಕೆಲಸವೇ ಹೆಚ್ಚಾದದ್ದು. ಸಾಹಿತಿಯಾಗಿ ಮಾಡಿದ ಕೆಲಸ ಕೈಗೆ ಸಿಗುತ್ತದೆ, ಗ್ರಂಥ ಗಳಲ್ಲಿ ಸ್ಪಷ್ಟವಾಗಿ ಕಾಣಬರುತ್ತದೆ. ಆದರೆ ಸಾರ್ವಜನಿಕ ಕಾರ್ಯಕರ್ತನಾಗಿ ಅವರು ಮಾಡಿರುವ ಕೆಲಸದ ಒಂದು ಸ್ವಲ್ಪಭಾಗ ಮಾತ್ರ ನಮಗೆ ಸಿಗುತ್ತದೆ. ಬಹುಭಾಗ ನಮಗೆ ತಿಳಿದು ಬರುವುದೇ ಇಲ್ಲ ಎನ್ನಬಹುದು. ಆ ತಿಳಿದು ಬರುವ ಭಾಗವನ್ನಾದರೂ ತಿಳಿಸುವುದೇ ಇಲ್ಲಿಯ ಉದ್ದೇಶ.

ಅವರ ಬರವಣಿಗೆಯ—ಲೇಖನಗಳ, ವರದಿಗಳ, ಪತ್ರಗಳ, ಉಪನ್ಯಾಸ ಗಳ, ಟಿಪ್ಪಣಿಗಳ, ಸಂಪಾದಕೀಯಗಳ—ಗಾತ್ರ ಬಹು ದೊಡ್ಡದು. ಅವರು ಸಂಪರ್ಕವಿಟ್ಟುಕೊಂಡಿದ್ದ ವ್ಯಕ್ತಿಗಳು ನೂರಾರು, ಸಂಸ್ಥೆಗಳು ಹಲವಾರು. ಹೀಗಾಗಿ ಅವರ ಸಮಗ್ರ ಜೀವನ ಚರಿತ್ರೆಗಾಗಿ ನಮಗೆ ಬೇಕಾದದ್ದನ್ನು ಆರಿಸಿ ಕೊಳ್ಳುವುದು ಒಂದು ಪರೀಕ್ಷೆಯಾಗಿ-ಸವಾಲಾಗಿ-ಪರಿಣಮಿಸಿತು.

---

* ನಮ್ಮ ಕಾಗದಗಳು : ಸಂ. ನಾಡಿಗ ಕೃಷ್ಣಮೂರ್ತಿ (1950)

ಡಿ ವಿ ಜಿ ಯವರು ಪತ್ರಿಕೆಗಳನ್ನು ನಡಸಿದ ರೀತಿ, ಸಾಹಿತ್ಯ ಪರಿಷತ್ತನ್ನು ಬೆಳೆಸಿದ ವೈಖರಿ, ಶಾಸನ ಸಭೆಯಲ್ಲಿ ಮಾಡಿದ ಕೆಲಸ, ಗೋಖಲೆ ಸಂಸ್ಥೆಯ ಚರಿತ್ರೆ, ಅವರ ವಿದ್ವತ್ತು ಮತ್ತು ವಾಙ್ಮಯ ರಾಶಿ, ಅವರ ಮಿತ್ರಮಂಡಳಿ— ಇವು ಪ್ರತಿಯೊಂದೂ ಒಂದೊಂದು ಪ್ರತ್ಯೇಕ ಗ್ರಂಥಕ್ಕೆ ವಿಷಯವಾಗ ಬಲ್ಲದು. ಅವೆಲ್ಲವನ್ನೂ ಸೇರಿಸಿ ಒಂದೇ ಗ್ರಂಥದಲ್ಲಿ ಹೇಳುತ್ತೇನೆಂದು ಹೊರ ಡುವುದೇ ಸಾಹಸದ ಕೆಲಸ.

ಈ ಹಿನ್ನೆಲೆಯಲ್ಲಿ ಬರೆದಿರುವುದು ಈ ಗ್ರಂಥ. ಆದ್ದರಿಂದ ಡಿ ವಿ ಜಿ ಯವರನ್ನು ಹತ್ತಿರದಿಂದ ಬಲ್ಲ ಅನೇಕ ವಾಚಕಮಹನೀಯರಿಗೆ ಇದರಲ್ಲಿ ಹೇಳದೆ ಬಿಟ್ಟಿರುವ ಇನ್ನೂ ಎಷ್ಟೋ ವಿಷಯಗಳು ಮನಸ್ಸಿಗೆ ಬಂದು, ಈ ಚರಿತ್ರೆ ಅಸಮಗ್ರ, ಅಪೂರ್ಣ ಎನಿಸಬಹುದು. ಆದರೆ ಗ್ರಂಥವಿಸ್ತರಭಯ ದಿಂದ ಅನೇಕ ವಿಷಯಗಳನ್ನು ಅನಿವಾರ್ಯವಾಗಿ ಕೈಬಿಡಬೇಕಾಗಿ ಬಂದು ದಕ್ಕೆ ಕ್ಷಮೆ ಬೇಡುತ್ತೇನೆ.

ಉದಾಹರಣೆಗೆ ಡಿ ವಿ ಜಿ ಯವರ ತಮ್ಮಂದಿರಾದ ಶ್ರೀಮಾನ್ ಡಿ ವಿ ರಾಮರಾಯರು, ಅವರ ಕುಟುಂಬ ಶಾರದಮ್ಮನವರು, ಮಕ್ಕಳು ಚಂದ್ರ ಮೌಳಿ ಮತ್ತು ಶ್ಯಾಮಲ, ಸೊಸೆ ಲಲಿತಮ್ಮ, ಮೊಮ್ಮಗ ಶಿಬಿ ಇವರು ಡಿ ವಿ ಜಿ ಯವರನ್ನು ನಡೆಸಿಕೊಂಡ ರೀತಿ, ಅವರು ಇವರಲ್ಲಿ ತೋರಿಸಿದ ಅಕ್ಕರೆ ಇವು ಗಳನ್ನು ಕುರಿತು, ತಮ್ಮ ಹೆಣ್ಣುಮಕ್ಕಳಿಗೆ ಬರೆದ ಪತ್ರಗಳನ್ನು ಕುರಿತು, ಗೋಖಲೆ ಸಂಸ್ಥೆಗಾಗಿಯೇ ತಮ್ಮ ಜೀವನದ ಬಹುಭಾಗವನ್ನು ಮುಡಿಪಾ ಗಿಟ್ಟು ಡಿ ವಿ ಜಿ ಯವರೊಡನೆ ಸಂಸ್ಥೆಯನ್ನು ಕಟ್ಟುವ ಕೆಲಸದಲ್ಲಿ ನೆರವಾದ ಸ. ವೆಂಕಟಾಚಲಪತಿಯವರನ್ನು ಕುರಿತು, ಡಿ ವಿ ಜಿ ಯವರ ಪ್ರಿಯ ಸ್ನೇಹಿತ ರಾಗಿದ್ದವರನ್ನು ಕುರಿತು, ಸಂಸ್ಥೆಯ ಆಡಳಿತ ಮಂಡಳಿಯಲ್ಲಿದ್ದ ಎಂ. ಪಿ. ಸೋಮಶೇಖರರಾಯರು, ಈಗ ಭಾರತದ ಉಚ್ಚ ನ್ಯಾಯಾಲಯದಲ್ಲಿ ನ್ಯಾಯ ಮೂರ್ತಿಗಳಾಗಿರುವ ಇ. ಎಸ್. ವೆಂಕಟರಾಮಯ್ಯನವರು, ಕೆ. ಸಂಪದ್ಗಿರಿ ರಾಯರು, ಡಿ. ರಾಮಸ್ವಾಮಿ ಅಯ್ಯಂಗಾರ್ಯರು, ಈಗ ಆಡಳಿತ ಮಂಡಳಿ ಯಲ್ಲಿರುವ ನಿಟ್ಟೂರು ಶ್ರೀನಿವಾಸರಾಯರು, ಎಂ. ಎಸ್. ಶಂಕರರಾಯರು, ಆರ್. ವಿ. ಪ್ರಭಾಕರರಾಯರು, ಸಂಸ್ಥೆಯ ಲೆಕ್ಕಪತ್ರಗಳನ್ನು ಪರಿಶೋಧಿಸು ತ್ತಿರುವ ಟಿ. ರಾಮಕೃಷ್ಣಯ್ಯನವರು, ಅವರ ಪುಸ್ತಕಗಳನ್ನು ಪ್ರಕಟಿಸಿದ ಕೂಡಲಿ ಚಿದಂಬರಂ ಇವರಲ್ಲಿ ಡಿ ವಿ ಜಿ ನಡೆದುಕೊಂಡ ರೀತಿಯನ್ನು ಕುರಿತು,

ಸಂಸ್ಥೆಯು ಸ್ನೇಹಿತರುಗಳನ್ನು ಕುರಿತು, ಅವರು ತಮ್ಮ ಸೋದರ ಸಾಹಿತಿಗಳೊಂದಿಗೆ, ಪತ್ರಕರ್ತರೊಂದಿಗೆ, ರಾಜಕೀಯಸ್ಥರೊಂದಿಗೆ ನಡೆದುಕೊಂಡ ರೀತಿಯನ್ನು ಕುರಿತು, ಅವರ ಸಂಭಾಷಣೆಯ ಸ್ವಾರಸ್ಯವನ್ನು ಕುರಿತು–ಇಲ್ಲಿ ಬರೆಯಲಾಗಲಿಲ್ಲ. ಅವರು ವಿಶ್ವವಿದ್ಯಾನಿಲಯದ ಸಮಿತಿಗಳಲ್ಲಿ, ನಿಘಂಟುಗಳಿಗಾಗಿ, ಷಾರ್ಟ್‌ಹ್ಯಾಂಡ್ ರೈಟರ್ಸ್ ಸಂಘಕ್ಕಾಗಿ ಮಾಡಿದ ಕೆಲಸಗಳನ್ನು ಹೇಳಲಾಗಲಿಲ್ಲ.

"ಲಿಬರಲ್" ಎಂದೋ "ಮಾಡರೇಟ್" ಎಂದೋ ಅಥವಾ ಇನ್ಯಾರೋ ಎಂದೋ ರಾಜಕೀಯದ ಚೀಟಿಯೊಂದನ್ನು ಡಿ ವಿ ಜಿ ಯವರಿಗೆ ಅಂಟಿಸಿಬಿಡುವುದು ಅವರ ವ್ಯಕ್ತಿತ್ವವನ್ನು ತಿಳಿಯುವುದಕ್ಕೆ ಅಡ್ಡಿಯಾಗುತ್ತದೆ ಎನ್ನಬಹುದು. ಅವರು ಜೀವನದಲ್ಲಿ ಇಟ್ಟುಕೊಂಡ ಗುರಿ ಜೀವೋತ್ಕರ್ಷ; ಅದರ ಒಂದು ಅಂಶ, ಅದಕ್ಕಾಗಿ ಅವರು ಕಂಡುಕೊಂಡ ಸಾಧನಗಳಲ್ಲಿ ಒಂದು, ಪ್ರಜಾಪ್ರಭುತ್ವದ ರಾಜಕೀಯ. ಪ್ರಜಾಪ್ರಭುತ್ವದ ಸಫಲತೆಗಾಗಿ ಅವರು ಅನುಸರಿಸಿದ್ದು ಸಮಾಧಾನಮಾರ್ಗವನ್ನು. ಅಂದಿನ ಸರಕಾರಗಳಿಗೆ—ದೇಶೀಯ ಮತ್ತು ಬ್ರಿಟಿಷ್ ಸರಕಾರಗಳಿಗೆ—ಈ ಸಮಾಧಾನಮಾರ್ಗದ ಭಾಷೆ ಅರ್ಥವಾಗಲಿಲ್ಲ. ಆ ಸರಕಾರಗಳಿಗೆ ಅರ್ಥವಾದದ್ದು ಚಳವಳಿಯ ಮಾರ್ಗದ ಭಾಷೆಯೇ ಎಂಬುದು ಈಗ ಚರಿತ್ರೆಯ ಮಾತಾಗಿ ಹೋಗಿದೆ. ಆದರೆ ಅಂದಿನ ಸರಕಾರಗಳ ಜಾಡಿನಲ್ಲೇ ಬಿದ್ದು, ಸ್ವಾತಂತ್ರ್ಯೋತ್ತರ ಭಾರತದ ಸರಕಾರಗಳೂ ಸಮಾಧಾನಮಾರ್ಗದ ಅರ್ಥವನ್ನು ತಿಳಿಯದವಾಗಿವೆ; ಮತ್ತು ಸರಕಾರಗಳಿಗೆ ತಿಳಿಯುವ ಚಳವಳಿಯ ಭಾಷೆಯನ್ನೇ ಜನ ಆಡಬೇಕಾಗಿ ಬಂದಿದೆ ಎಂಬುದೂ ನಮ್ಮ ಈಚಿನ ಸಾರ್ವಜನಿಕ ಜೀವನದ ದುರದೃಷ್ಟಗಳಲ್ಲಿ ಒಂದು. ಆದರೆ ಸಮಾಧಾನಮಾರ್ಗವೇ, ಅದರ ಮನೋಭಾವವೇ, ಅದರ ಭಾಷೆಯೇ ಪ್ರಜಾಪ್ರಭುತ್ವದ ವಿಜಯಕ್ಕೆ ಸಾಧನಗಳು ಮತ್ತು ಜನದ ನೆಮ್ಮದಿಗೆ ದಾರಿ ಎಂದು ನಂಬಿದ್ದವರು ಡಿ ವಿ ಜಿ. ಆದ್ದರಿಂದಲೇ ಅವರು ಸಮಾಧಾನಮಾರ್ಗದ ತತ್ತ್ವಗಳನ್ನು ತಾವು ಸಾರ್ವಜನಿಕ ಜೀವನದಲ್ಲಿ ಅನುಸರಿಸಿ ಅದರ ಶ್ರೇಷ್ಠತೆಯನ್ನು ಪ್ರತಿಪಾದಿಸಲು ತಮ್ಮ ಜೀವನವನ್ನೇ ಮುಡಿಪಾಗಿಟ್ಟರು. ಮತ್ತು ಪ್ರಜಾಭಿಪ್ರಾಯವು ತಿಳಿವಳಿಕೆಯಿಂದ ಕೂಡಿದ್ದಾಗಿ ವ್ಯವಸ್ಥಿತ ರೀತಿಯಲ್ಲಿ ವ್ಯಕ್ತಪಡಬೇಕೆಂದು ಹೇಳಿ ಅದಕ್ಕಾಗಿ ಪ್ರಯತ್ನಪಟ್ಟರು. ಹಾಗಾಗಿ ಡಿ ವಿ ಜಿ ಯವರ ಬದುಕು ಉದ್ದಕ್ಕೂ ಸಮಾಧಾನಮಾರ್ಗದ ಅನುಸರಣೆಯ ಕಥೆಯಾದುದರಿಂದ, ಪ್ರಜಾಭಿಪ್ರಾಯವನ್ನು ರೂಪಿಸುವ ಪ್ರಯತ್ನವಾದುದರಿಂದ, ಅದು ಇಂದಿಗೂ

ಮಾರ್ಗದರ್ಶಕವಾಗಬಲ್ಲದ್ದು ಎಂಬ ಎಣಿಕೆಯಿಂದ ಅವರ ಸಾರ್ವಜನಿಕ ಜೀವನದ ಚರಿತ್ರೆಯನ್ನು ಸ್ವಲ್ಪ ವಿಸ್ತಾರವಾಗಿಯೇ ಬರೆಯಬೇಕಾಯಿತು.

ಡಿ ವಿ ಜಿ ಉಚಿತ ಶಬ್ದಜ್ಞರೂ ಪದಪ್ರಯೋಗಕುಶಲರೂ ಆದ ಗದ್ಯಶಿಲ್ಪಿ. ಗಂಭೀರವಾದ ವಿಷಯಗಳನ್ನೂ ಸುಲಭವಾಗಿ ಮನೋಜ್ಞವಾಗಿ ತಿಳಿಸುವುದರಲ್ಲಿ ಅತ್ಯಂತ ಸಮರ್ಥರು. ಅಂಥವರನ್ನು ಕುರಿತು ಬರೆಯುವವನಿಗೆ 'ಎಂಟೆರ್ದೆ'ಯಿರಬೇಕು. ಆದರಲ್ಲೂ ಯಾವುದೋ ಸರಕಾರಿ ಕಛೇರಿಯಲ್ಲಿ ಕೂತು ಲೆಕ್ಕಪತ್ರಗಳನ್ನು ನೋಡುತ್ತಿದ್ದ ಸಾಧಾರಣ ಮನುಷ್ಯನಲ್ಲಿ ಅಂಥ ಧೀಮಂತರ ಚರಿತ್ರೆಯನ್ನು ಬರೆಯಲು ಬೇಕಾದ ಭಾಷಾಸಾಮರ್ಥ್ಯವನ್ನೂ ನಿರೂಪಣ ಕಲೆಯನ್ನೂ ಹೇಗೆ ನಿರೀಕ್ಷಿಸಲಾದೀತು ? ಆದ್ದರಿಂದ ಈ ಚರಿತ್ರೆಯಲ್ಲಿ ಡಿ ವಿ ಜಿ ಯವರ ಬರಹಗಳಿಂದ ತೆಗೆದ ಮಾತುಗಳನ್ನೇ ಹೆಚ್ಚಾಗಿ ಉಪಯೋಗಿಸಿ ಅವನ್ನು ಒಂದು ಕ್ರಮದಲ್ಲಿ ಪೋಣಿಸುವ ಕೆಲಸ ಮಾಡಿ ನನ್ನ ಕೆಲಸವನ್ನು ಹಗುರಮಾಡಿಕೊಂಡಿದ್ದೇನೆ. ಈ ಗ್ರಂಥ ಡಿ ವಿ ಜಿ ಯವರ 'ಆತ್ಮಕಥನ'ದಂತಿರುವ ಅವರದೇ ಬರವಣಿಗೆಯ ಸಂಕಲನ ಎಂದರೂ ತಪ್ಪಾಗುವುದಿಲ್ಲ.

ದಾಖಲೆಗಳ ಆಧಾರವಿಲ್ಲದೆ ಯಾವ ವಿವರವನ್ನೂ ಇಲ್ಲಿ ಹೇಳಿಲ್ಲ ಎಂಬುದನ್ನು ಬಿನ್ನಯಿಸ ಬಯಸುತ್ತೇನೆ.

ವಾಚಕರ ಕ್ಷಮೆಯನ್ನು ಬೇಡಬೇಕಾದ ವಿಚಾರ ಇನ್ನೊಂದುಂಟು. ಅದು ಇಲ್ಲಿ ಉದ್ಧರಿಸಿರುವ ಇಂಗ್ಲಿಷ್ ಭಾಷೆಯ ಭಾಗಗಳ ವಿಷಯ. ಆ ಭಾಗಗಳನ್ನು ಕನ್ನಡದಲ್ಲಿ ಅನುವಾದ ಮಾಡಿದ್ದರೆ ಗ್ರಂಥದ ಗಾತ್ರವೂ ಮುದ್ರಣವೆಚ್ಚವೂ ಹೆಚ್ಚಿ ಗ್ರಂಥಕ್ಕಿಡಬೇಕಾದ ಮಾರುಬೆಲೆಯೂ ಹೆಚ್ಚಾಗಿ ಬಿಡಬಹುದೆಂಬ ಭೀತಿಯಿಂದ ಆಂಗ್ಲಮೂಲವನ್ನು ಹಾಗೆಯೇ ಕೊಟ್ಟಿದೆ.

ಈ ನನ್ನ ಬರವಣಿಗೆಯನ್ನು ಮಿತ್ರರಲ್ಲೋ ಪಂಡಿತರಲ್ಲೋ ತೋರಿಸಿ ಪರಿಷ್ಕಾರಪಡಿಸಿಕೊಳ್ಳುವಷ್ಟು ಕಾಲಾವಕಾಶವಿಲ್ಲದುದರಿಂದ ಇದರಲ್ಲಿ ದೋಷಗಳು ಹಲವಾರಿರಬಹುದು. ಅವನ್ನು, ವಿಷಯದ ಹಿರಿಮೆಯನ್ನು ಗಮನದಲ್ಲಿರಿಸಿಕೊಂಡು, ದಯಮಾಡಿ ಸಹಿಸಿಕೊಳ್ಳಬೇಕೆಂದು ಬೇಡುತ್ತೇನೆ. ಈ ಗ್ರಂಥದಲ್ಲಿರುವ ವಿಷಯದ, ಭಾಷೆಯ, ನಿರೂಪಣೆಯ ನ್ಯೂನತೆಗಳನ್ನು, ಕೃಪೆಮಾಡಿ ತೋರಿಸಿಕೊಟ್ಟಲ್ಲಿ ನಾನು ತಿದ್ದಿಕೊಳ್ಳಲು ಸಿದ್ಧನಾಗಿದ್ದೇನೆ.

16ನೆಯ ಪುಟದಲ್ಲಿ ಡಿ ವಿ ಜಿ ಯವರಿಗೆ ಉಪನಯನವಾದದ್ದು ಅವರಿಗೆ 11 ವರ್ಷಗಳಾಗಿದ್ದಾಗ ಎಂದೂ, ಪುಟ 94 ರಲ್ಲಿ 9.2.1924 ಎಂಬ ತಾರೀಖನ್ನು 9.3.1294 ಎಂದೂ, ಪುಟ 195 ರ ಕೊನೆಯ ಪ್ಯಾರಾದಲ್ಲಿ ನಿರೂಪಿಸಿರುವ ನೆನಪು ಎಂ. ವಿ. ಸೀತಾರಾಮಯ್ಯನವರದೂ ಎಂದೂ, ಪುಟ 262 ರ ಶೀರ್ಷಿಕೆಯನ್ನು 'ಪಾರಕ್ಯಾ ಕ್ರಾಂತಿಯಿೀಗಳ್ ಪರಿದುದು' ಎಂದೂ ದಯವಾಡಿ ಓದಿಕೊಳ್ಳಬೇಕೆಂದು ಬೇಡುತ್ತೇನೆ.

ಹೆಸರುಗಳನ್ನು ಓದಿಕೊಳ್ಳುವಾಗ ಶ್ರೀ ಅಥವಾ ಶ್ರೀಮತಿ ಎಂದು ಸಮಯೋಚಿತವಾಗಿ ಅಧ್ಯಾಹಾರ ಮಾಡಿಕೊಳ್ಳಬೇಕೆಂದು ಬೇಡುತ್ತೇನೆ.

ಈ ಕೆಲಸಕ್ಕಾಗಿ ಬೇಕಾದ ಎಲ್ಲ ವಿಷಯಗಳನ್ನೂ ಗೋಖಲೆ ಸಂಸ್ಥೆಯ ಅಮೂಲ್ಯವಾದ ಸಮೃದ್ಧವಾದ ಗ್ರಂಥಭಂಡಾರದಿಂದ ಸಂಗ್ರಹಿಸಿದ್ದೇನೆ. ಆದ್ದರಿಂದ ನನ್ನ ಕೃತಜ್ಞತೆಗಳು ಗೋಖಲೆ ಸಂಸ್ಥೆಗೆ ಸಲ್ಲುತ್ತವೆ.

ಇಷ್ಟು ದೊಡ್ಡ ಕೆಲಸವನ್ನು ಮಾಡಲು ಪ್ರೇರೇಪಿಸಿದ ಹಿರಿಯರು ಶ್ರೀಮಾನ್ ನಿಟ್ಟೂರು ಶ್ರೀನಿವಾಸರಾಯರಿಗೆ ಮತ್ತು ಶ್ರೀಮಾನ್ ಜಿ. ನಾರಾಯಣ ಅವರಿಗೆ ನನ್ನ ವಂದನೆಗಳು. ಅವರು ನನಗೆ ಗೊತ್ತುಮಾಡಿದ್ದ ಸಮಯದ, ಗ್ರಂಥದ ಗಾತ್ರದ, ಗಡುವನ್ನು ಮೀರಿದ್ದಕ್ಕಾಗಿ ಅವರಲ್ಲಿ ಕ್ಷಮೆಯನ್ನು ಯಾಚಿಸುತ್ತೇನೆ.

ಈ ಕೆಲಸ ಅವಶ್ಯವಾಗಿ ಆಗಬೇಕಾದದ್ದು ಎಂದು ನನಗೆ ಸರ್ವಕಾಲದಲ್ಲೂ ಉತ್ತೇಜನ ಕೊಟ್ಟ ಸ್ನೇಹಿತರು ಬಿ. ಪಿ. ರಾಧಾಕೃಷ್ಣ, ಎಸ್. ವೆಂಕಟಾಚಲಪತಿ, ಎಂ. ವಿ. ರಾಮಚೈತನ್ಯ, ಮಾಧವ ಮಲ್ಯರು ಮತ್ತು ನನ್ನ ಕುಟುಂಬದವರು. ಇವರೆಲ್ಲರ ಪ್ರೋತ್ಸಾಹವೇ ನನ್ನ ಸ್ವಲ್ಪ ಶಕ್ತಿಯನ್ನು ಹೆಚ್ಚಿಸಿತು.

ಈ ಕೆಲಸದಲ್ಲಿ ನನ್ನಷ್ಟೇ ಶ್ರಮಪಟ್ಟು ಶ್ರದ್ಧೆವಹಿಸಿ ತುಂಬ ಮುತುವರ್ಜಿಯಿಂದ ಮುದ್ರಣ ಮಾಡಿ ಮಜಬೂತಾಗಿ 'ಬೈಂಡ್' ಮಾಡಿಕೊಟ್ಟ ಶ್ರೀ ನಿತ್ಯಾನಂದ ಪ್ರಿಂಟರ್ಸ್ ಅವರಿಗೂ, ಚಿತ್ರಗಳನ್ನು ಸುಂದರವಾಗಿ ಮುದ್ರಿಸಿಕೊಟ್ಟ ಬಿ. ಬಿ.ಡಿ ಪ್ರೆಸ್ಸಿನ ಮಲ್ಯ ಸಹೋದರರಿಗೂ ನನ್ನ ಕೃತಜ್ಞತೆಗಳು ಮತ್ತು ವಂದನೆಗಳು.

ಇದೊಂದು ಪವಿತ್ರ ಕರ್ತವ್ಯವೆಂದು ತಿಳಿದು, ಸಾಧ್ಯವಾದಷ್ಟು ಎಚ್ಚರ ವಹಿಸಿ ಕೆಲಸ ಮಾಡಿದ್ದೇನೆ. 'ಮೀಕು ಶ್ರಮಂ, ಮಾಕು ದುರ್ಭೋಜನಂ' ಎಂಬ ತೆಲುಗು ಗಾದೆಯಂತಾಗದೆ, ಈ ಗ್ರಂಥ, ವಾಚಕರನ್ನು ಬೇಸರಗೊಳಿಸದೆ, ಡಿ ವಿ ಜಿ ಯವರ ಹಿರಿತನದ ಪರಿಚಯವನ್ನು ಮಾಡಿಸಿದರೆ ನಾನು ಕೃತಾರ್ಥ, ಧನ್ಯ.

ಮಹಾಜನ ಇದನ್ನು ಕೃಪೆಯಿಂದ ಸ್ವೀಕರಿಸಬೇಕೆಂದು ಬೇಡುತ್ತೇನೆ.

ಇಂತು ಶುಭಂ

25–8–1988 ಡಿ. ಆರ್. ವೆಂಕಟರಮಣನ್

ಬೆಂಗಳೂರು

ಚಿತ್ರಗಳ ಸೂಚಿ

8. ಮೈಸೂರು ಮಹಾರಾಜಾ ಕಾಲೇಜು ಕರ್ಣಾಟಕ ಸಂಘದ ವಾರ್ಷಿಕೋತ್ಸವ (೨೨-೨-೧೯೨೮) ದ ಚಿತ್ರ :

೧ನೇ ಸಾಲು, ನಿಂತಿರುವವರು : ಜಿ. ಸಿ. ಶಂಕರಪ್ಪ; ಪಿ. ನಾರಾಯಣ ಅಯ್ಯಂಗಾರ್; ಎ. ಕೆ. ಪುಟ್ಟರಾಮು; ಕೆ. ವಿ. ಪುಟ್ಟಪ್ಪ; ಡಿ. ಎಲ್. ನರಸಿಂಹಾಚಾರ್; ಟಿ. ಎನ್. ಶ್ರೀಕಂಠಯ್ಯ; ಎಲ್. ಗುಂಡಪ್ಪ; ಕೆ. ನರಸಿಂಹಾಚಾರ್.

೨ನೇ ಸಾಲು, ನಿಂತಿರುವವರು : ರಾಮರಾವ್; ಎಂ. ಸುಬ್ಬರಾವ್; ಹೆಚ್. ರಾಮಣ್ಣ; ಕೆ. ಜಿ. ಸಂಪತ್ಕುಮಾರಾಚಾರ್; ಜಿ. ಕೃಷ್ಣಸ್ವಾಮಿ ಅಯ್ಯಂಗಾರ್; ಶ್ರೀ ತಾಂಡವೇಶ್ವರ; ಡಿ. ಎಂ. ಶೇಷಗಿರಿರಾವ್; ಎನ್. ಅನಂತರಂಗಾಚಾರ್; ಕೆ. ನರಹರಿ.

೩ನೇ ಸಾಲು, ನಿಂತಿರುವವರು : ಎಂ. ಎಸ್. ಬಸವಲಿಂಗಯ್ಯ; ಎನ್. ಎಸ್. ನಾರಾಯಣ ಶಾಸ್ತ್ರಿ; ಬಿ. ವೆಂಕೋಬರಾವ್; ಎ. ಎನ್. ನರಸಿಂಹಯ್ಯ; ಕೆ. ರಾಮನರಸಿಂಹಯ್ಯ; ಆರ್. ಅನಂತ ಕೃಷ್ಣಶರ್ಮ; ಎ. ಎಂ. ದೊರೆಸ್ವಾಮಿ ಅಯ್ಯಂಗಾರ್; ಎಸ್. ವಿ. ರಂಗಣ್ಣ; ಎ. ಎನ್. ಮೂರ್ತಿರಾವ್; ವಿ. ಸೀತಾರಾಮಯ್ಯ.

೪ನೇ ಸಾಲು, ಕುಳಿತಿರುವವರು : ಎಂ. ಹೆಚ್. ಕೃಷ್ಣಅಯ್ಯಂಗಾರ್; ಎಸ್. ವಿ. ಕೃಷ್ಣಸ್ವಾಮಿ ಅಯ್ಯಂಗಾರ್; ಸಿ. ನರಸಿಂಹಯ್ಯ; ಎಂ. ವೆಂಕಟೇಶ ಅಯ್ಯಂಗಾರ್; ಎನ್. ಎಸ್. ಸುಬ್ಬರಾವ್ (ಪ್ರಿನ್ಸಿಪಾಲರು); ಬಿ. ಎಂ. ಶ್ರೀಕಂಠಯ್ಯ (ಸಂಘದ ಅಧ್ಯಕ್ಷರು); ಡಿ ವಿ ಜಿ (ಸಭಾಧ್ಯಕ್ಷರು); ಎ. ಆರ್. ಕೃಷ್ಣಶಾಸ್ತ್ರಿ (ಉಪಾಧ್ಯಕ್ಷರು), ಸಾಲಿ ರಾಮಚಂದ್ರರಾವ್; ಟಿ. ಎಸ್. ವೆಂಕಣ್ಣಯ್ಯ (ಉಪಾಧ್ಯಕ್ಷರು).

ಕೆಳಗೆ ಕುಳಿತಿರುವವರು : ವಿ. ಕೆ. ಶ್ರೀನಿವಾಸನ್; ಬಿ. ಕೃಷ್ಣಮೂರ್ತಿ; ವಿ. ವೆಂಕಟಾಚಾರ್; ಕೆ. ಗೋಪಾಲಕೃಷ್ಣರಾವ್.

9. ವಿ. ಎಸ್. ಶ್ರೀನಿವಾಸ ಶಾಸ್ತ್ರಿಗಳು, ಬ್ರಜೇಂದ್ರನಾಥ ಶೀಲರೊಂದಿಗೆ ಡಿ ವಿ ಜಿ.

10. ಸಿ. ಪಿ. ರಾಮಸ್ವಾಮಿ ಅಯ್ಯರ್ ಅವರೊಂದಿಗೆ ಡಿ ವಿ ಜಿ.

11. ಮೈಸೂರು ಪತ್ರಿಕೋದ್ಯೋಗಿಗಳ ಸಂಘ 13-9-1932 ರಲ್ಲಿ ಎಂ. ವೆಂಕಟಕೃಷ್ಣಯ್ಯನವರನ್ನು ಸನ್ಮಾನಿಸಿದಾಗ.

ಎಡದಿಂದ ಬಲಕ್ಕೆ, ನಿಂತಿರುವವರು : ಟಿ. ಟಿ. ಶರ್ಮ (ವಿಶ್ವಕರ್ನಾಟಕ); ಪಿ.ಆರ್. ರಾಮಯ್ಯ (ತಾಯಿನಾಡು); ಸಿ. ಅಶ್ವತ್ಥನಾರಾಯಣರಾವ್ (ನವಜೀವನ); ಪಿ. ಎಂ. ರಾಮಶರ್ಮ (ಸ್ವದೇಶಮಿತ್ರನ್); ಎಸ್. ಪಾರ್ಥಸಾರಥಿ (ಹಿಂದೂ); ಪಿ. ಬಿ. ಶ್ರೀನಿವಾಸ್ (ಆಂಧ್ರ ಪತ್ರಿಕಾ); ಆರ್. ಗೋಪಾಲಕೃಷ್ಣರಾವ್ (ಬೆಂಗಳೂರು ಮೈಲ್); ಎ. ನಂಜುಂಡರಾವ್ (ಟೈಮ್ಸ್ ಆಫ್ ಇಂಡಿಯ).

ಕುಳಿತಿರುವವರು : ಕೆ. ಎಸ್. ರಾಮಸ್ವಾಮಿ (ಹಿಂದೂ) ಕಾರ್ಯದರ್ಶಿ; ಕೆ.ಟಿ. ಭಾಷ್ಯಂ (ಮೈಸೂರು ಲಾ ಜರ್ನಲ್); ಡಿ ವಿ ಜಿ (ಅಧ್ಯಕ್ಷರು); ಎಂ. ವೆಂಕಟಕೃಷ್ಣಯ್ಯ, ಸಿ. ಹಯವದನರಾವ್ (ಮೈಸೂರು ಎಕನಾಮಿಕ್ ಜರ್ನಲ್); ಎಸ್. ಸೀತಾರಾಮಯ್ಯ (ಮೈಸೂರು ವಿಲೇಜ್ ಪಂಚಾಯತ್); ವಿ. ಭಾಸ್ಕರನ್ (ಸ್ವರಾಜ್ಯ).

ಕೆಳಗೆ ಕುಳಿತಿರುವವರು : ಎಸ್. ಆರ್. ಎಸ್. ರಾಘವನ್ (ಡೆಮೊಕ್ರೆಟ್); ಎಸ್. ವಿ. ರಾಮಸ್ವಾಮಿ; ಧರ್ಮಲಿಂಗಂ; ಹೆಚ್. ಎಸ್. ನಾರಾಯಣ ರಾವ್ (ಬೆಂಗಳೂರು ಮೈಲ್); ಎ. ಎನ್. ಸುಬ್ಬರಾವ್ (ಕಲಾ).

12. ಗೋಖಲೆ ಸಂಸ್ಥೆಯಲ್ಲಿ ಒಂದು ಸಭೆ.

13. ಡಿ ವಿ ಜಿ ಯವರು ವಂದನಾರ್ಪಣೆ ಮಾಡುತ್ತಿರುವುದು.

14. ಮೈಸೂರು ಮಹಾರಾಜ ಜಯಚಾಮರಾಜ ಒಡೆಯರಿಂದ ಮೈಸೂರು ವಿಶ್ವವಿದ್ಯಾನಿಲಯದ ಡಾಕ್ಟರೇಟ್ ಸ್ವೀಕರಿಸುತ್ತಿರುವುದು.


15. ಜಿ. ಪಿ. ರಾಜರತ್ನಂ ಅವರೊಂದಿಗೆ ಡಿ ವಿ ಜಿ.

16. ಡಿ ವಿ ಜಿ ಯವರ ಹಸ್ತಾಕ್ಷರದಲ್ಲಿ ಅಂತಃಪುರ ಗೀತೆಯ ಒಂದು ಗೀತೆ.

17. ಡಿ ವಿ ಜಿ ಯವರ ಇಂಗ್ಲಿಷ್ ಹಸ್ತಾಕ್ಷರ :
ಮೋಕ್ಷಗುಂಡಂ ವಿಶ್ವೇಶ್ವರಯ್ಯನವರಿಗೆ ಬರೆದಿರುವ ಒಂದು ಪತ್ರ.

18. ಕೊನೆಯ ದಿನ, ಮಾಸ್ತಿಯವರ ಬೀಳ್ಕೊಡುಗೆ.







3





5












11


12




13





15



ಆನಂದ ಭೈರವಿ ರಾ ಧನ್ಯಾಸಿ ೯. 40, 7. ೨೮

ಶಾರದೆ

ಶಾರದೆ ಶಬ್ದಾರ್ಥ ಕೃತ್ಯ ವಿಶಾರದೆ
ಜೀವಿತ ರಸ ಕೋವಿದೆ - ಆಮೋದೆ
ಪ್ರತ್ಯಕ್ಷ ಲೋಕದ ಮಸ್ತಕ ಅಖಿಲದ
ಪ್ರಸ್ತುತ ಟೀಕೆಯ ವಿಸ್ತರಿಸುವ ವೆಯೋನೆ

ಬ್ರಹ್ಮಾಂಡ ವಿಭ್ರಮ ಮರ್ಮವಿದೇ ನಾವು
ನಿನ್ನ ಪ್ರಿಯ ಕೌತುಕಾರ್ಥಿಗಳೋ ।
ನಿಶ್ಚಲ ಸತ್ಯಕೆ ಭೌಮಾಂಗ ವೇಷಮ್ಮ
ದಂ ಮೋದನಾ ಕಾಣಿಸೋ ॥
ಕಾರ್ಯದ ಸರದಲಿ ಕಾರ್ಯವೆ ಮಲ್ಲಿಗೆ ।
ಸೌಖ್ಯ ಕೋಶವ ರಾಜ್ಯ ಸ್ವಾತಂತ್ರ್ಯ ಪತಾಕೆ ॥

16

D. V. GUNDAPPA

Nagasandra Road
BASAVANGUDI P.O.
BANGALORE CITY (South India)

July 14, 1936.

My dear & esteemed Sir,

I much regret I was not able to join the party at 5 o'c. last Sunday as I had proposed to do. The function at the Parishat lasted beyond 5 o'c. I pray you would forgive me. I realize what a loss I have suffered.

I beg to submit with this a copy of the Itinerant Lectures Scheme which the Parishat has adopted. I shall be most grateful if you could spare a few minutes for a perusal of it. The Government have given it their general approval and asked me to work out the details for putting the scheme in operation in one or two Districts in

in the first instance. I have to consult the Presidents of the District Boards and the Director of Public Instruction[s] as to details; and the Parishat will have to work in collaboration with these public authorities.

I need scarcely say how deeply thankful we shall be for your kind advice as to how the scheme may be improved and worked, and for your blessings for the effort.

With the deepest respect and admiration,

I remain,
Ever sincerely yours,
D. V. Gundappa

I am taking the liberty of enclosing for your very kind acceptance and perusal a copy of the latest Report of the Parishat and other connected literature.

Sir M. Visvesvaraya, K.C.I.E., LL.D., D.Sc., M. Inst. C.E., etc.
Uplands, High Ground,
Bangalore.



18

ಪೀಠಿಕೆ

ಜ್ಞಾನಿನಾ ಚರಿತುಂ ಶಕ್ಯಂ ಸಮ್ಯಗ್ರಾಜ್ಯಾದಿ ಲೌಕಿಕಂ ||

(ಶ್ರೀ ವಿದ್ಯಾರಣ್ಯ ಸ್ವಾಮಿಗಳು)

ಮಾನವ ಸಂಸ್ಕಾರಕ ಧ- |
ರ್ಮಾನುವ್ರತಮಕ್ಕೆ ಸಾರ್ವಜನಿಕ ವಿಚಾರಂ |
ಜ್ಞಾನಿಯಿನಕ್ಕುಂ ಶುಭಸಂ- |
ಧಾನಂ ರಾಜ್ಯಾದಿ ಲೌಕಿಕ ವ್ಯವಹೃತಿಯೊಳ್ ||

"ನಮಗೆ ಒಂದು ಜೀವನ ಚರಿತ್ರೆಯಿಂದ ಸಂಪೂರ್ಣ ಪ್ರಯೋಜನ ದೊರೆಯಬೇಕಾದರೆ ನಾವು ಆ ಜೀವಿತದ ಬೆಳಕಿನ ಭಾಗಗಳ ಜೊತೆಗೆ ನೆರಳಿನ ಭಾಗಗಳನ್ನೂ ನೋಡಬೇಕು. ಆ ಮನುಷ್ಯ ಯಾವ ದುರ್ಬಲತೆಯೂ ಇಲ್ಲದ ಸರ್ವಾಂಗ ಸುಂದರನೆಂದು ಅಭಿಪ್ರಾಯ ಕೊಟ್ಟಲ್ಲಿ ಆದರಿಂದ ಓದುಗನಿಗೇನು ಲಾಭ ? ಓದುಗನು ಸಾಮಾನ್ಯ ಮನುಷ್ಯ. ಅವನು ಇತರ ಸಾಮಾನ್ಯ ಮನುಷ್ಯ ನೊಬ್ಬನನ್ನು ನೋಡುತ್ತಾನೆ. ತನ್ನಲ್ಲಿದ್ದಂತೆಯೇ ಆ ಇತರನಲ್ಲಿಯೂ ಗುಣ ದೋಷಗಳು ಬೆರೆತುಕೊಂಡಿರುತ್ತವೆ. ಆ ಇತರನು ದೋಷವಿದ್ದರೂ ಗುಣಾತಿ ಶಯದಿಂದ ನಮಗಿಂತ ಉತ್ತಮನಾದ — ಇದು ಮುಖ್ಯಾಂಶ. ದೋಷವು ಮುಖ್ಯವಲ್ಲ. ಗುಣವೇ ಮುಖ್ಯ. ಮತ್ತು ಆ ಗುಣದೊಡನೆ ದೋಷವಿದ್ದರೂ ಗುಣವು ಕಲಂಕವನ್ನು ಮೀರಿತ್ತು— ಎಂಬುದು ಗ್ರಾಹ್ಯವಾದ ವಿಷಯ."

ಡಿ ವಿ ಜಿ ಯವರು ಹೇಳಿರುವ ಈ ಮಾತುಗಳೇ ಈ ಗ್ರಂಥಕರ್ತನಿಗೂ ಮಾರ್ಗದರ್ಶಕವಾಗಿರುವ ಸೂತ್ರ.

ಇದು ಯಾರ ಜೀವನ ಚರಿತ್ರೆಯೋ ಆ ಮಹಾನುಭಾವರಲ್ಲಿ ದೋಷ ಗಳಿರಲಿಲ್ಲವೆಂದಲ್ಲ; ಕೋಪತಾಪಗಳಿರಲಿಲ್ಲವೆಂದಲ್ಲ; ಆಶೆ ಆಕಾಂಕ್ಷೆಗಳಿರಲಿಲ್ಲ ವೆಂದಲ್ಲ. ಅವರನ್ನು ಸಂದೇಹ ಕಾಡಲಿಲ್ಲವೆಂದಲ್ಲ. ಉಪ್ಪು ಹುಳಿ ಖಾರಗಳನ್ನು ತಿಂದು ಈ ಜಗತ್ತಿನಲ್ಲಿ ಬದುಕುವ ಯಾವ ಮನುಷ್ಯನಲ್ಲಿ ತಾನೆ ಇವೆಲ್ಲ ಇರು

ವುದಿಲ್ಲ? ಮನುಷ್ಯಸಾಮಾನ್ಯವಾದ ದೋಷಗಳು ಅವರಲ್ಲೂ ಇದ್ದುವು. ಅವರಿಗೆ ಕಷ್ಟಗಳು ಬಂದುವು, ದುಃಖ ಒದಗಿತು, ನಿರಾಶೆಗಳಾದುವು. ಇಷ್ಟಾದರೂ—

ಘನತತ್ತ್ವವೊಂದಕ್ಕೆ ಮನಸೋತು |
ನೆನೆಯದಿನ್ನೊಂದನೆಲ್ಲವ ನೀಡುತದರಾ |

ಅನುಸಂಧಿಯಲಿ....

ತಮ್ಮ ಜೀವನವನ್ನು ಅವರು ಕಳೆದರು, ಎಂಬುದೇ ಅವರನ್ನು ಸಾಮಾನ್ಯ ಜನರಿಂದ ಪ್ರತ್ಯೇಕ ಮಾಡಿ ತೋರಿಸುವ ಗುಣವಿಶೇಷ.

ಅವರು ಯಾವ ಘನತತ್ತ್ವವನ್ನು ಕಂಡುಕೊಂಡರು ? ಅದಕ್ಕಾಗಿ ಅವರು ಹೇಗೆ ದುಡಿದರು ?— ಎಂಬುದನ್ನು ವಿವರಿಸುವುದೇ ಈ ಬರಹದ ಉದ್ದೇಶ.

ಶ್ರೀಮಾನ್ ಡಿ. ವಿ. ಗುಂಡಪ್ಪನವರದು ಒಂದು ದೊಡ್ಡ ಜೀವನ. ಪತ್ರಿಕೋದ್ಯಮ, ರಾಜಕೀಯ, ಸಾಹಿತ್ಯ, ಸಮಾಜ ಸುಧಾರಣೆ, ತತ್ತ್ವಪ್ರಚಾರ, ಸಂಘ ಸಂಸ್ಥೆಗಳ ಸ್ಥಾಪನೆ, ವಿದ್ಯಾಭ್ಯಾಸ, ವಿಜ್ಞಾನ ಮುಂತಾದ ಜೀವನದ ಹಲವು ಕ್ಷೇತ್ರಗಳಲ್ಲಿ ಅವರು ದುಡಿದರು. ಅವರ ಕಾರ್ಯಕ್ಷೇತ್ರದ ಹರಹು ಎಷ್ಟು ವಿಸ್ತಾರವಾದದ್ದೋ ಅದರಂತೆ ಅದರ ಆಳವೂ ಅಷ್ಟೇ ದೊಡ್ಡದು. ಮತ್ತು ಅದಕ್ಕಾಗಿ ಅವರು ತೊಡಗಿಸಿದ ಬುದ್ಧಿಶಕ್ತಿಯೂ ಅಷ್ಟೇ ನಿಶಿತವಾದದ್ದು, ಗಂಭೀರವಾದದ್ದು. ವಿವಿಧ ಕ್ಷೇತ್ರಗಳಲ್ಲಿ ಪರಿಣಾಮಕಾರಿಯಾಗಿ ಕೆಲಸಮಾಡಲು ಅವರು ಮಾಡಿಕೊಂಡ ಸಿದ್ಧತೆ ಅಸಾಧಾರಣವಾದದ್ದು, ಅನನ್ಯಸದೃಶವಾದದ್ದು. ಅವರು ಸಂಪಾದಿಸಿಕೊಂಡ ವಿದ್ವತ್ತೂ, ಸಮಾಜದಲ್ಲಿ ಅವರಿಗೆ ಪ್ರಾಪ್ತವಾಗಿದ್ದ ಪ್ರಭಾವವೂ ಆಶ್ಚರ್ಯಕರವಾದವು.

ಅವರ ಜೀವನವನ್ನು ಕುರಿತು ಬರೆಯುವುದೆಂದರೆ ನಮ್ಮ ದೇಶದ— ಅದರಲ್ಲೂ ಮೈಸೂರು ಸಂಸ್ಥಾನದ — ಅರವತ್ತು ವರ್ಷಗಳ ಚರಿತ್ರೆಯನ್ನು ಬರೆದಂತೆಯೇ. ಆ ಪ್ರಯತ್ನದಲ್ಲಿ ತೊಡಗುವವನಿಗೆ ನಾಲ್ಕಾರು ಶಾಸ್ತ್ರಗಳಲ್ಲಿ ಪ್ರವೇಶವಿರಬೇಕು. ಸಾಹಿತ್ಯ, ರಾಜ್ಯಶಾಸ್ತ್ರ ಮುಂತಾದುವಲ್ಲದೆ ಸಮಕಾಲೀನ ಚರಿತ್ರೆಯನ್ನು ಕುರಿತು ಮತ್ತು ಆ ಚರಿತ್ರೆಯಲ್ಲಿ ಬರುವ ವ್ಯಕ್ತಿಗಳನ್ನು ಕುರಿತು ಚೆನ್ನಾಗಿ ತಿಳಿದಿರಬೇಕು. ಅದಕ್ಕಿಂತ ಮುಖ್ಯವಾಗಿ ಪತ್ರಿಕೆಗಳಲ್ಲಿ, ಗ್ರಂಥಗಳಲ್ಲಿ, ಪತ್ರಗಳಲ್ಲಿ ಕಾಣಬರದಿರುವ, ರುಜುವಾತಿಗೆ ಸಿಕ್ಕದಿರುವ, ಆದರೆ ಅವಶ್ಯವಾಗಿ ಇದ್ದೇಇರುವ, ಜನದ ಮನೋಗತಗಳು, ಜನನಾಯಕರ ಅಂತರಂಗದ

ಆಶಯಗಳು, ಆಡಳಿತಗಾರರ ಸ್ವಾರ್ಥತಾತ್ಪರ್ಯಗಳು, ಮಂತ್ರಿಗಳ ಹುನ್ನಾರುಗಳು, ಮುಂತಾದ ಪ್ರಭಾವಗಳನ್ನೂ ಶಕ್ತಿಗಳನ್ನೂ ಊಹಿಸಿ ಗುರುತಿಸಿಕೊಳ್ಳುವ ಪ್ರತಿಭೆಯಿರಬೇಕು. ಅಂಥಾ ಸಾಮರ್ಥ್ಯ ತನಗಿದೆಯೆಂಬ ಭ್ರಾಂತಿಯೂ ಈ ಲೇಖಕನಿಗಿಲ್ಲ.

ಶ್ರೀಮಾನ್ ಡಿ ವಿ ಜಿ ಯವರ ಪದತಲದಲ್ಲಿ ಕುಳಿತು ಹದಿನೆಂಟು ವರ್ಷಗಳ ಕಾಲ ಅವರ ನಿಕಟವರ್ತಿಯಾಗಿದ್ದು, ಅವರು ಹೇಳಿದ್ದನ್ನು ಮಾಡುತ್ತಾ, ತಿಳಿಸಿದ್ದನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡುತ್ತಾ, ಅವರ ಅನುಗ್ರಹಕ್ಕೆ ಪಾತ್ರನಾಗಿದ್ದುದೇ ಈ ಲೇಖಕನಿಗಿರುವ ಶಕ್ತಿ ಮತ್ತು ಇದನ್ನು ಬರೆಯುವುದಕ್ಕೆ ಅವನು ಸಂಪಾದಿಸಿಕೊಂಡಿರುವ ಅಧಿಕಾರ. ಒಂದು ಸಮ್ಯಕ್-ಜೀವನ ದರ್ಶನವನ್ನು ಮಾಡಿಸಿದ ಆ ಗುರುವಿಗೆ ಕಾಣಿಕೆಯ ರೂಪದಲ್ಲಿ ಸಮರ್ಪಿಸುತ್ತಿರುವುದೇ ಈ ಸಾಹಸ.

ಒಬ್ಬನ ಜೀವನ ಚರಿತ್ರೆಯಲ್ಲಿ ನಡೆದ ಕೇವಲ ಘಟನೆಗಳ ಪಟ್ಟಿಯಷ್ಟನ್ನೇ ಕೊಟ್ಟರೂ ಅದು ಆತನ ಜೀವನ ಚರಿತ್ರೆಯಾಗುತ್ತದೆ. ಆದರೆ ಆ ಸಾಧನೆಗೆ ಮೂಲವೇನು? ಆ ಸಾಧನೆಯಲ್ಲಿ ಆತನು ತೊಡಗಲು ಕಾರಣವೇನು? ಆತನ ಜೀವನದಿಂದ ನಮಗೇನಾದರೂ ಪ್ರಯೋಜನವುಂಟೇ? —ಇವೆಲ್ಲ ತಿಳಿದು ಬರುವುದು ಆ ಘಟನೆಗಳ ಹಿಂದಿರುವ ಮನಸ್ಸಿನ ಧಾಟಿ ಮತ್ತು ಧರ್ಮಗಳನ್ನು ತಿಳಿಯುವುದರಿಂದ. ಹಾಗೆಂದ ಮಾತ್ರಕ್ಕೆ ಮಹಾಪುರುಷರ ಮನಸ್ಸನ್ನು ತಿಳಿದುಕೊಂಡುಬಿಡುವ ಶಕ್ತಿ ನಮಗಿದೆಯೆಂದಲ್ಲ. ಅವರಾಗಿಯೇ ಹೇಳಿರುವ ಮಾತುಗಳಿಂದ, ಬರೆದ ಬರಹಗಳಿಂದ, ಅವರು ಮಾಡಿದ ಕೆಲಸಗಳಿಂದ ನಾವು ಊಹಿಸಿಕೊಳ್ಳಬಹುದಾದ ಅವರ ಅಂತರಂಗದ ಒಂದು ಚಿತ್ರ ನಮಗೆ ಸಿಗುತ್ತದೆ. ಅದು ನಮಗೆ ಬಹು ಪ್ರಯೋಜನಕಾರಿಯಾದದ್ದು, ಮಾರ್ಗದರ್ಶನವಾಗಬಲ್ಲದ್ದು.

ಆದ್ದರಿಂದ ಡಿ ವಿ ಜಿ ಯವರ ಜೀವನ ಚರಿತ್ರೆಯನ್ನು ಪ್ರಾರಂಭಿಸುವುದಕ್ಕೆ ಪೀಠಿಕೆಯಾಗಿ ಅವರ ಅಂತರಂಗದ ಕಟ್ಟಡವನ್ನು ಕುರಿತು ಕೆಲವು ಮಾತುಗಳನ್ನು ಹೇಳುವುದು ಅಪ್ರಸ್ತುತವಾಗಲಾರದು. ಅಮೆರಿಕದ ಪ್ರಸಿದ್ಧ ನ್ಯಾಯವೇತ್ತನಾದ ಆಲಿವರ್ ವೆಂಡಲ್ ಹೋಮ್ಸ್ ಮಹಾಶಯನ "The inarticulate major premise" (ಅನಭಿವ್ಯಕ್ತ ಆಧಾರ ವಚನ) ಎಂಬ ಪದಪುಂಜವೊಂದಿದೆ. ಮನಸ್ಸು ಗಟ್ಟಿಮಾಡಿಕೊಂಡಿರುವ ನಂಬಿಕೆಯೇ ಆ major premise ಆಧಾರ ವಚನ. ಅದರ ಬೆಳಕಿನಲ್ಲಿಯೇ ಮನಸ್ಸು ಎಲ್ಲವನ್ನೂ

ನೋಡುತ್ತದೆ. ಇದನ್ನೇ ಭಗವದ್ಗೀತೆ ಈ ಮಾತುಗಳಲ್ಲಿ ಹೇಳುತ್ತದೆ:

ಶ್ರದ್ಧಾಮಯೋಽಯಂ ಪುರುಷೋ ಯೋ ಯಚ್ಛ್ರದ್ಧಃ ಸ ಏವ ಸಃ
(17:3)

ಮನುಷ್ಯ ಎಂದರೆ ಅವನಿಗಿರುವ ನಂಬಿಕೆಯೇ. ಯಾವೊಬ್ಬನು ಯಾವುದಕ್ಕೆ ಹೆಚ್ಚು ಬೆಲೆ ಕೊಟ್ಟು ಅದೇ ತನಗೆ ದೊಡ್ಡದೆಂದು ನಂಬಿಕೊಂಡಿರುತ್ತಾನೋ ಅದರಂತೆಯೇ ಅವನ ಪಾಡಾಗುತ್ತದೆ. ಯಾವುದರಲ್ಲಿ ಅವನಿಗೆ ನಂಬಿಕೆಯೋ ಅದೇ ಅವನ ಗತಿ. ಅವನವನ ಶ್ರದ್ಧೆಯಂತೆ ಅವನವನು.

ಅದೇ ಅಂತರಂಗದ ಜೀವಾಳ. ಅದೇ ಜೀವನವೆಲ್ಲದರ ಮೂಲಾಧಾರವಾದ ಸ್ರೋತ.

ತಮ್ಮ ಒಲವು ಎತ್ತ ಕಡೆ ಎಂಬುದನ್ನು ಕುರಿತು ಡಿ ವಿ ಜಿ ಯವರು:

"ನನಗೆ ಬಾಲ್ಯದಿಂದ ಜೋಗಿಗಳು, ದಾಸಯ್ಯಗಳು, ಬೈರಾಗಿಗಳು, ಸಂನ್ಯಾಸಿಗಳು, ಫಕೀರರು — ಇಂಥವರನ್ನು ನೋಡಿದಾಗ ನಾನು ಅವರಂತೆ ನಿರುಪಾಧಿಕನಾಗಿ ಯಾವಾಗ ತಿರುಗಾಡಿಯೇನು?—ಎನ್ನಿಸುತ್ತಿತ್ತು. ಜೋನಿ ನೊಳಗಣ ಕೋತಿಗಳಿಗೆ ಅನ್ನಿಸುವ ಹಾಗೆ. ಆ ಪರಿವ್ರಾಜಕ ಜೀವನದಲ್ಲಿ ನನಗೆ ಆಕರ್ಷಕವಾಗಿದ್ದದ್ದು ಅವರ ನಿಶ್ಚಿಂತತೆ. ಅವರು ರಾತ್ರಿಯೇನು, ನಾಳೆಗೆಲ್ಲಿ ಎಂದು ಕ್ಷಣಮಾತ್ರವೂ ಯೋಚಿಸುತ್ತಿದ್ದವರಲ್ಲ. ಯಾವುದೋ ಒಂದು ತತ್ತ್ವ ದಲ್ಲಿ ಸಂಪೂರ್ಣವಾದ ನಂಬಿಕೆ; ಆ ನಂಬಿಕೆ ದೃಢವಾದದ್ದರಿಂದ ಸಂಪೂರ್ಣ ವಾದ ಧೈರ್ಯ, ಮತ್ತು ನಿರಂಕುಶವಾದ ಮನೋವೃತ್ತಿ. ನನ್ನ ಅಂತರಂಗದಲ್ಲಿ ಸುಳಿದಾಡುತ್ತಿದ್ದದ್ದು ಆ ನಿಸ್ಸಂಸಾರದ ಮೇಲಣ ಉತ್ಸಾಹ"—ಎಂದಿದ್ದಾರೆ.

ಚಿಕ್ಕಂದಿನಲ್ಲಿ ಅವರ ಮನಸ್ಸಿನಲ್ಲಿ ಸುಳಿದ ಆ ಉತ್ಸಾಹ ಅವರನ್ನು ಬಿಡಲೇ ಇಲ್ಲ. ಅವರು ಅರವತ್ತರ ವಯಸ್ಸನ್ನು ಮುಟ್ಟುತ್ತಿದ್ದಾಗ ಅಂತ ರಂಗದ ಆ ಆಸೆಯೇ "ಮಂಕುತಿಮ್ಮನ ಕಗ್ಗ"ದಲ್ಲಿ ಹೀಗೆ ಅಭಿವ್ಯಕ್ತವಾಯಿತು:

ಜೋಳಿಗೆಯ ಪಿಡಿದು ನೀನೂರಿನೂರಿಗೆ ನಡೆದು |
ಹೇಳುತ್ತ ಹಾಡುಗಳ ಭಾರಗಳ ಮರೆತು ||
ಬೀಳು ಮೇಲುಗಳೆಣಿಕೆಯಿಂ ಮನವನಲುಗಿಸದೆ |
ಬಾಳ ನಡೆಸುವುದೆಂದೊ —ಮಂಕುತಿಮ್ಮ ||

ಅವರ ಬಳಿ ಒಂದು ಏಕನಾದವಿದ್ದದ್ದನ್ನೂ, ಯಾವಾಗಲೋ ಏಕಾಂತದಲ್ಲಿ ಅದನ್ನು ಅವರು ನುಡಿಸುತ್ತ ಹಾಡಿಕೊಳ್ಳುತ್ತಿದ್ದದ್ದನ್ನೂ, ತಲೆದಿಂಬಿನಡಿ

ಯಲ್ಲಿ ಒಂದು ರುದ್ರಾಕ್ಷಿ ಮಾಲೆ, ಒಂದು ಸಾಲಿಗ್ರಾಮ ಶಿಲೆ ಇರುತ್ತಿದ್ದುದನ್ನೂ ಇಲ್ಲಿ ಸ್ಮರಿಸಿಕೊಳ್ಳಬಹುದು.

ಅವರ ಈ ಅಂತರಂಗ ಭಾವನೆಯನ್ನು ಕಂಡಾಗ ಬೃಹದಾರಣ್ಯಕದ ಈ ಮಾತುಗಳು ಜ್ಞಾಪಕಕ್ಕೆ ಬರುತ್ತವೆ :

"ಏತಂ ವೈ ತಮಾತ್ಮಾನಂ ವಿದಿತ್ವಾ ಬ್ರಾಹ್ಮಣಾಃ
ಪುತ್ರೈಷಣಾಯಾಶ್ಚ, ವಿತ್ತೈಷಣಾಯಾಶ್ಚ, ಲೋಕೈಷಣಾಯಾಶ್ಚ,
ವ್ಯುತ್ಥಾಯಾಽಥ ಭಿಕ್ಷಾಚರ್ಯಂ ಚರಂತಿ."

(ಆತ್ಮವನ್ನು ತಿಳಿದ ಬ್ರಾಹ್ಮಣನು ಪುತ್ರ ಧನ ಲೋಕ ಸಂಬಂಧಗಳಾದ ಎಲ್ಲ ಆಸೆಗಳನ್ನೂ ತೊರೆದು ಭಿಕ್ಷಾಟನೆ ಮಾಡುತ್ತಾನೆ.)

ಇದೇ, ಉಪನಿಷತ್ತುಗಳು ವರ್ಣಿಸುವ ಬ್ರಹ್ಮವೇತ್ತನ ಲಕ್ಷಣ; ಅವಧೂತ ಸ್ಥಿತಿ. ವಿಶ್ವವೆಲ್ಲ ಅವನದೇ. ಅವನು ಎಲ್ಲಿದ್ದರೂ ಒಂದೇ. ಎಲ್ಲವೂ ಅವನೇ ಆಗಿರುವಾಗ ಅವನಿಗೆ ದ್ವೇಷವೆಂಬುದು ಹೇಗೆ ಬರಬೇಕು.

ಇದೇ ಡಿ ವಿ ಜಿ ಯವರ ಅಂತರಂಗದ ಒಲವು. ಈ ಕಾರಣದಿಂದಲೇ ಅವರಿಗೆ ಸದಾಶಿವ ಬ್ರಹ್ಮೇಂದ್ರರು, ಬೆಂಗಳೂರಿನ ಮಹದೇವ ಶಾಸ್ತ್ರಿಗಳು, ರೋಣೂರಿನ ವೀರಬ್ರಹ್ಮಂ, ಬೆಂಗಳೂರಿನ ಅನಂತಪ್ಪ ಸ್ವಾಮಿಗಳು ಇಂಥವರಲ್ಲಿ ಅಗಾಧವಾದ ಭಕ್ತಿ.

ಹಾಗಾದರೆ ಅವರು ಆ ಮನಸ್ಸಿನ ಒಲವಿನಂತೆಯೇ ಏಕೆ ನಡೆದುಕೊಳ್ಳಲಿಲ್ಲ?

ಸಮಾಜ ಸಂಪ್ರದಾಯಗಳಲ್ಲಿ ಭೀತಿ ಮತ್ತು ದೇಹಕ್ಕೆ ಉಂಟಾಗಬಹುದಾದ ಕಷ್ಟಗಳ ಭೀತಿ, ತಮಗೆ ಮದುವೆಯಾದದ್ದು—ಎಂದು ಅದಕ್ಕೆ ಅವರು ಸಮಾಧಾನ ಹೇಳುತ್ತಾರೆ.

ಆದರೆ ಇದರ ಇಂಗಿತವೇ ಬೇರೆ. ಇನ್ನೊಂದು ಕಡೆ ಅವರೇ ಹೇಳುತ್ತಾರೆ : "ನಾನು ಪ್ರಬುದ್ಧನೆನಿಸಿಕೊಂಡ ಮೇಲೆ ನನ್ನ ಹಿರಿಯರು ನನಗೆ ತಕ್ಕಷ್ಟು ಸ್ವಾತಂತ್ರ್ಯ ಕೊಟ್ಟಿದ್ದರು. ಆದರೂ ಹೇಗೋ ಸಾಕ್ರಟಿಸನ ಸಂವಾದಗಳು ಮೊದಲಾದ ಗ್ರಂಥಗಳ ಪ್ರಭಾವದಿಂದಲೋ ಏನೋ — ಸಮಾಜ ಸಂಪ್ರದಾಯಗಳು ಗೌರವಾರ್ಹಗಳೆಂದು ನನ್ನ ಮನಸ್ಸಿನಲ್ಲಿ ದೃಢಪಟ್ಟಿತ್ತು."

ಮಾನವ ಕುಲದ ಆತ್ಮವಿಕಸನ ಚರಿತ್ರೆಯಲ್ಲಿ, ಬುದ್ಧಿ ಸ್ವಾತಂತ್ರ್ಯದ ಚರಿತ್ರೆಯಲ್ಲಿ, ವಿವೇಕವ್ಯಾಪನೆಯ ಚರಿತ್ರೆಯಲ್ಲಿ, ನೀತಿ ಪರಿಷ್ಕಾರದ ಚರಿತ್ರೆಯಲ್ಲಿ, ಪರಮಾರ್ಥದ ಪರಾಮರ್ಶೆಯ ಚರಿತ್ರೆಯಲ್ಲಿ, ದೇಶಭಕ್ತಿಯ ಚರಿತ್ರೆ

ಯಲ್ಲಿ, ಶಾಸನ ಪಾಲನೆಯ ಚರಿತ್ರೆಯಲ್ಲಿ, ರಾಜ್ಯಶಾಸ್ತ್ರದ ಚರಿತ್ರೆಯಲ್ಲಿ, ವಿಜ್ಞಾನದ ಚರಿತ್ರೆಯಲ್ಲೂ ಸಹ—ಸಾಕ್ರಟಿಸನು ಶಕಕರ್ತನಾಗಿ ಮನುಷ್ಯತ್ವಕ್ಕೆ ಒಂದು ಹೆಮ್ಮೆಯನ್ನೂ ಭರವಸೆಯನ್ನೂ ಕೊಟ್ಟವನಾಗಿ ಬೆಳಗಿದವನು. ಇಂಥ ಸಾಕ್ರಟಿಸನಿಂದ ಪ್ರಾರಂಭವಾದ ಪಾಶ್ಚಾತ್ಯ ರಾಜಕೀಯ ತತ್ತ್ವಶಾಸ್ತ್ರಗಳ ಅಧ್ಯಯನ, ಸಹಜವಾಗಿ ಬಂದಿದ್ದ ಡಿ ವಿ ಜಿ ಯವರ ಒಲವಿಗೆ ಒಂದು ಕಡಿವಾಣವಾಯಿತು.

ಇದರ ಫಲವಾಗಿ ಅವರು ಮಾಡಿಕೊಂಡ ತೀರ್ಮಾನ ಇದು :

"ದೇವರೆಂಬುದು ಬೇರೆ ಇದ್ದರಿರಲಿ. ಇಲ್ಲದಿದ್ದರೂ ಪರವೆಯಿಲ್ಲ. ನಮ್ಮ ಜೀವನವಂತೂ ನಮಗೆ ಪ್ರತ್ಯಕ್ಷ ಸಂಗತಿ. ನಮ್ಮ ಜೀವನವೇ ನಮಗೆ ದೇವರ ಸಾಕ್ಷಿ. ಜೀವನದ ಕಾರಣದಿಂದಲೇ ನಮಗೆ ದೇವರ ಸ್ಮರಣೆ. ಹೀಗಿರಲಾಗಿ ಜೀವನವನ್ನು ದೈವ ಮಹಿಮೆಯ ಪ್ರತ್ಯಕ್ಷರೂಪವೆಂದು ನಾವು ಗೌರವಿಸಬೇಕಾದದ್ದು. ಜೀವನವು ದೇವರು ಕೊಟ್ಟಿರುವ ವರ. ಜೀವನವನ್ನು ಅಂದಗೊಳಿಸುವುದೇ ನಾವು ದೇವರಿಗೆ ಸಲ್ಲಿಸುವ ಕೃತಜ್ಞತೆ. ಜೀವನ ಸಮೃದ್ಧಿ – ಜೀವನ ಸಂಸ್ಕಾರ–ಜೀವನ ಸೌಂದರ್ಯ, — ಇವು ಬರಿಯ ಐಹಿಕಾಸಕ್ತಿಯಲ್ಲ, ಚಾರ್ವಾಕತನವಲ್ಲ, ಭೋಗನಿಷ್ಠೆಯಲ್ಲ ; ಅದು ವೇದ ವೇದಾಂತಗಳ ಸಾರಾಂಶ."

"ಅಂತರಾತ್ಮಪಾರಮ್ಯ ಮತ್ತು ಅಧ್ಯಾತ್ಮ ದೃಷ್ಟಿಯ ಲೋಕ ವ್ಯವಹಾರ", ಇದು ಅವರ ಜೀವಿತ ಸಿದ್ಧಾಂತವಾಯಿತು. ಹೀಗೆ ಅವರು ತಮ್ಮ ಅಂತರಂಗವನ್ನು ಬ್ರಹ್ಮವಸ್ತುವಿಗೆ ಮೀಸಲಾಗಿಟ್ಟು ಲೋಕಜೀವನದಲ್ಲಿ ತೊಡಗಿದರು. ಅದೇ ಅವರು ಕಂಡುಕೊಂಡ, ಇತರರಿಗೂ ತಿಳಿಯಹೇಳಿದ ಘನತತ್ತ್ವ, "ಪರ ಯೋಗಮಾರ್ಗ".

ಹೊರಗೆ ಲೋಕಾಸಕ್ತಿಯೊಳಗೆ ಸಕಲ ವಿರಕ್ತಿ ।
ಹೊರಗೆ ಕಾರ್ಯಧ್ಯಾನವೊಳಗುದಾಸೀನ ॥
ಹೊರಗೆ ಸಂಸ್ಕೃತಿಭಾರವೊಳಗದರ ತಾತ್ಸಾರ ।
ವರಯೋಗ ಮಾರ್ಗವಿದು—ಮಂಕುತಿಮ್ಮ ॥

ಡಿ ವಿ ಜಿ ಯವರು ಬೇಡುತ್ತಿದ್ದ ಅವಧೂತ ಜೀವನವನ್ನು ಭಗವಂತನು ಅವರಿಗೆ ಅನುಗ್ರಹಿಸದೆ ಹೋದದ್ದು ದೇಶದ ಭಾಗ್ಯವಾಯಿತು.

ಈ ಜೀವಿತ ಸಿದ್ಧಾಂತದ ಫಲವಾಗಿ ಬಂದದ್ದು ಸಂಪೂರ್ಣವಾದ ಧೈರ್ಯ, ನಿರಂಕುಶವಾದ ಮನೋವೃತ್ತಿ, ಆತ್ಮನಿಸ್ತರಣಾಭ್ಯಾಸ, ಮತ್ತು ಎಷ್ಟು ದೊರೆತರೆ ಅಷ್ಟರಿಂದಲೇ ತೃಪ್ತಿಪಡುವ ಮನೋಭಾವ.

ಈ ಜೀವಿತಸಿದ್ಧಾಂತ ಅವರಿಗೆ ಹುಟ್ಟಿನಿಂದಲೇ ಬಂದಿತ್ತು ಎಂದಲ್ಲ. ತಮ್ಮ ಜೀವನಕ್ಕೆ ಮಾರ್ಗದರ್ಶಕವಾಗಬೇಕಾದ ಇಂಥ ಒಂದು ಸಿದ್ಧಾಂತ ಕ್ಕಾಗಿ ಅವರು ಹುಡುಕಿದರು. ತಮಗೆ ಇದ್ದ ಬುದ್ಧಿಶಕ್ತಿಯಿಂದ, ಶ್ರದ್ಧೆಯಿಂದ, ಮಹಾ ಪ್ರಯತ್ನಮಾಡಿ ಅದನ್ನು ಕಂಡುಕೊಂಡು, ಅದರಂತೆ ನಡೆಯಲು ಹೆಣಗಿದರು. ಅವರಿಗೆ ತಾರುಣ್ಯದಲ್ಲಿಯೇ ಒಂದು ಜೀವಿತ ಸಿದ್ಧಾಂತ ಸಿಕ್ಕಿ ಬಿಟ್ಟದ್ದು ಅವರ ಭಾಗ್ಯ.

ಇದರ ವಿವರಣೆಯೇ ಡಿ ವಿ ಜಿ ಯವರ ಜೀವನ ಚರಿತ್ರೆ.

******

ವಂಶವೃತ್ತಾಂತ

ತಮ್ಮ ಪೂರ್ವಿಕರನ್ನು ಕುರಿತು ತಾವು ಹಿರಿಯರಿಂದ ಆಗಾಗ ಕೇಳಿದ ಸಂಗತಿಗಳ ವಿನಾ ಹೆಚ್ಚು ಸಾಮಗ್ರಿ ಯಾವುದೂ ತಮಗೆ ದೊರಕಲಿಲ್ಲ ಎಂದು ಹೇಳುತ್ತ ಡಿ ವಿ ಜಿ ಯವರು, "ನನ್ನ ಪೂರ್ವಿಕರೆಲ್ಲ ಸಾಮಾನ್ಯರು, ಸಾಮಾನ್ಯ ಜನರಲ್ಲಿ ಅತಿ ಸಾಮಾನ್ಯರು. ಅವರ ಮನಸ್ಸು ಮೇಲ್ಮಟ್ಟಕ್ಕೆ ಹತ್ತಲೇ ಇಲ್ಲ. ದೇಹಧಾರಣೆ ಮಾಡಿದರು. ಅಷ್ಟರಲ್ಲಿ ಅವರಿಗೆ ತೃಪ್ತಿ. ವಂಶ ಬೆಳೆಸಿದರು. ಆ ಕಾಲದಲ್ಲಿ ರೂಢಿಯಾಗಿದ್ದ ಮದುವೆ ಮುಂಜಿಗಳನ್ನು ಹಬ್ಬ ಹರಿದಿನಗಳನ್ನು ಆಯಾ ಸಂದರ್ಭದಲ್ಲಿ ಅನುಕೂಲಿಸಿದಂತೆ ನಡಸಿದರು. ಕಾಲ ಬಂದಾಗ ಕಣ್ಣು ಮುಚ್ಚಿದರು. ಇದೇ ಅವರ ಬಾಳು. ನನ್ನ ವಂಶವನ್ನು ಕುರಿತು ಹೆಮ್ಮೆಯಾದ ದ್ದೇನನ್ನೂ ಹೇಳಿಕೊಳ್ಳುವಂತಿಲ್ಲ" ಎಂದುಕೊಂಡಿದ್ದಾರೆ.

ಆದರೆ ಈ "ಸಾಮಾನ್ಯ ಜನ" ಸಮಾಜದಲ್ಲಿ ನೆಮ್ಮದಿಯನ್ನೂ ಒಳ್ಳೆಯ ತನವನ್ನೂ ಹರಡುತ್ತಿದ್ದವರು. ಅಂಥವರನ್ನು ಕುರಿತು : "ನಮ್ಮಲ್ಲಿ ಒಳ್ಳೆಯ ವರೆಂಬವರು — ಸಾಧು ಸತ್ಪುರುಷರು — ಸಾಮಾನ್ಯವಾಗಿ ಆಡಂಬರದ ಜನ ವಲ್ಲ. ಎಲ್ಲರಂತೆಯೇ ಇರುತ್ತಾರೆ. ನೆಲದಲ್ಲಿ ಆಳವಾಗಿ ಊಟೆಗಳೂ ಚಿಲುಮೆ ಗಳೂ ಹರಿಯುತ್ತಿರುತ್ತವಷ್ಟೆ. ಸಾಧುಸಜ್ಜನರು ಈ ಅಂತರಾಳದ ನಾಳಗಳಂತೆ. ಅವು ಕಣ್ಣಿಗೆ ಕಾಣುವುದಿಲ್ಲ. ಅವುಗಳ ಹರಿವಿನಲ್ಲಿ ಒಂದು ರಭಸವಿರುವುದಿಲ್ಲ. ಎಲ್ಲವೂ ಮಂದವಾಗಿ ಶಾಂತವಾಗಿರುತ್ತದೆ. ನೀರು ತೊಟ್ಟು ತೊಟ್ಟಾಗಿ ಕೊಂಚ ಕೊಂಚವಾಗಿ ಸ್ರವಿಸುತ್ತದೆ. ನೆಮ್ಮದಿ, ಒಳ್ಳೆಯತನ — ಇವೂ ಹಾಗೆ" ಎಂದಿದ್ದಾರೆ ಅವರು.

ಇಂಥ ಸಾಮಾನ್ಯ ಮನೆತನದ ಒಂದು ಕುಟುಂಬದವರು ಸುಮಾರು ಆರು ನೂರು ವರ್ಷಗಳ ಹಿಂದೆ ತಮಿಳು ದೇಶದ ತಿರುಚ್ಚಿನಾಪಳ್ಳಿಯ ಹತ್ತಿರದ ಪ್ರಾಂತದಿಂದ ಮೈಸೂರು ಸೀಮೆಗೆ ಜೀವನಾರ್ಥಿಗಳಾಗಿ ಬಂದರಂತೆ. ದೇವನ ಹಳ್ಳಿಯ ಹತ್ತಿರದಲ್ಲಿ ನೆಲಸಿದ ಆ ಕುಟುಂಬದ ಸಂತತಿಯವರು ಡಿ ವಿ ಜಿ ಯವರ ಮುತ್ತಾತಂದಿರು ಗುಂಡಪ್ಪನವರು. ಅದೇ ಡಿ ವಿ ಜಿ ಎಂಬ ಹೆಸರಿನಲ್ಲಿರುವ 'ಡಿ' ಎಂಬ ದೇವನಹಳ್ಳಿಯ ಹ್ರಸ್ವರೂಪ. ತಾಲೂಕು ಕಛೇರಿಯಲ್ಲಿ

ಯಾವುದೋ ಸಣ್ಣ ಉದ್ಯೋಗದಲ್ಲಿದ್ದ ಗುಂಡಪ್ಪನವರಿಗೆ ದೊಡ್ಡ ಉದ್ಯೋಗ ಲಭಿಸಿದ್ದು ಬ್ರಿಟಿಷ್ ಕಮಿಷನರುಗಳ ಆಡಳಿತದ ಆದಿಭಾಗದಲ್ಲಿ; ಅಂದರೆ 19ನೆಯ ಶತಮಾನದ ಮಧ್ಯಭಾಗದಲ್ಲಿ. ಆಗ ಮದರಾಸಿನಿಂದ ಬೆಂಗಳೂರಿಗೆ ಬರುತ್ತಿದ್ದ ಸೈನ್ಯಕ್ಕೆ ಮುಳಬಾಗಿಲು ಒಂದು ತಂಗುವ ಸ್ಥಳ. ಹಾಗೆ ಸೈನ್ಯ ತಂಗಿದಾಗ ಅದಕ್ಕೆ ತೀನಿಯ ಸರಬರಾಜಿನ ಕೆಲಸ ಶೇಖ್‌ದಾರರದು. ಆಗ ಅಧಿಕಾರದಲ್ಲಿದ್ದವರು ಗುಂಡಪ್ಪನವರನ್ನು ಮುಳಬಾಗಿಲಿಗೆ ಆ ಹುದ್ದೆಗಾಗಿ ಕರೆಸಿಕೊಂಡರು. ಹೀಗೆ ದೇವನಹಳ್ಳಿಯಿಂದ ಮುಳಬಾಗಿಲಿಗೆ ಡಿ ವಿ ಜಿ ಯವರ ಪೂರ್ವಿಕರು ಬರುವಂತಾಯಿತು. ಗುಂಡಪ್ಪನವರು ತಮ್ಮ ಕೆಲಸವನ್ನು ಜಬರ್ದಾರಿಯಿಂದಲೂ ದರ್ಪದಿಂದಲೂ ನಡೆಸುತ್ತಿದ್ದರಂತೆ.

ಶೇಖ್‌ದಾರ್ ಗುಂಡಪ್ಪನವರಿಗೆ ನಾಲ್ವರು ಗಂಡು ಮಕ್ಕಳೂ ಇಬ್ಬರು ಹೆಣ್ಣು ಮಕ್ಕಳೂ ಇದ್ದರು. ಶೇಷಗಿರಯ್ಯ, ರಾಮಣ್ಣ, ಶೀನಪ್ಪ ಮತ್ತು ವೆಂಕಟರಮಣಯ್ಯ. ವೆಂಕಟರಮಣಯ್ಯ ಚಿಕ್ಕಂದಿನಲ್ಲಿಯೇ ತೀರಿ ಕೊಂಡರಂತೆ. ಹೆಣ್ಣು ಮಕ್ಕಳಲ್ಲಿ ಒಬ್ಬಾಕೆಯನ್ನು ಮಾಲೂರಿನ ಸಂಪಂಗಿ ರಾಮಯ್ಯ ಎಂಬವರಿಗೆ ಲಗ್ನ ಮಾಡಿ ಕೊಟ್ಟಿದ್ದರಂತೆ. ಇನ್ನೊಬ್ಬಾಕೆಯ ಹೆಸರಾಗಲಿ ಬೇರೆ ಸಂಗತಿಯಾಗಲಿ ತಿಳಿಯದು.

ಶೇಷಗಿರಯ್ಯನವರು ಯಾವುದೋ ಸರಕಾರಿ ಹುದ್ದೆಯಲ್ಲಿದ್ದು, ಸರಕಾರದವರು ಪ್ಲೀಡರ್ ಪರೀಕ್ಷೆಯನ್ನು ಏರ್ಪಡಿಸಿದ ಸಮಯದಲ್ಲಿ ಆ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಕೋಲಾರದಲ್ಲಿ ಪ್ಲೀಡರ್ ವೃತ್ತಿಯನ್ನು ಹಿಡಿದರು. ರಾಮಣ್ಣನವರು ಚಿಕ್ಕಂದಿನಲ್ಲಿ ಸುಂಕದ ಇಲಾಖೆಯಲ್ಲಿ ಯಾವುದೋ ಸಣ್ಣ ಉದ್ಯೋಗದಲ್ಲಿದ್ದವರು. ಅವರ ತಮ್ಮ ಶೀನಪ್ಪ ಅಬ್ಕಾರಿ ಗುಮಾಸ್ತರಾಗಿದ್ದವರು.

ಗುಂಡಪ್ಪನವರ ಪತ್ನಿ ಕಾಮಾಕ್ಷಮ್ಮ ತಮ್ಮ ಕಡೆಯ ಮಗ ವೆಂಕಟರಮಣಯ್ಯ ತೀರಿಕೊಂಡ ಒಂದೆರಡು ತಿಂಗಳುಗಳೊಳಗಾಗಿ ಪುತ್ರ ವಿಯೋಗ ದುಃಖದಿಂದ ಇಹಲೋಕವನ್ನು ಬಿಟ್ಟರು. ಆಕೆಯ ಮೂವರು ಸೊಸೆಯರೂ ಒಂದೆರಡು ವರ್ಷಗಳ ಅವಧಿಯೊಳಗೆ ಕಾಲಾಧೀನರಾದರು.

ಹೀಗೆ ಆ ಸಂಸಾರ ಹೆಣ್ಣು ದಿಕ್ಕಿಲ್ಲದ ಸಂಸಾರವಾಯಿತು.

ಶೇಷಗಿರಯ್ಯನವರಿಗಾದ ಒಂದು ಗಂಡು ಮಗು (ವೆಂಕಟರಮಣಯ್ಯ : ಡಿ ವಿ ಜಿ ಯವರ ತಂದೆ) ಅವರ ಮಾತಾಮಹರ ಪೋಷಣೆಯಲ್ಲಿತ್ತು. ರಾಮಣ್ಣನವರಿಗಾದ ಒಂದು ಹೆಣ್ಣುಮಗು ಚಿಕ್ಕಂದಿನಲ್ಲಿಯೇ ತೀರಿಕೊಂಡಿತ್ತು. ಶೀನಪ್ಪನವರಿಗೆ ಒಂದು ಹೆಣ್ಣು ಮತ್ತು ಒಂದು ಗಂಡು ಸಂತಾನ. ಈ

ಮಕ್ಕಳನ್ನು ಅಣ್ಣನ ಜವಾಬ್ದಾರಿಗೆ ಬಿಟ್ಟು ಅವರು ಕಾಶೀಯಾತ್ರೆ ಮೊದಲಾದ ನಿಶ್ಚಿಂತೆಯ ಕಾಲಕ್ಷೇಪದಲ್ಲಿ ಪ್ರವೃತ್ತರಾದರು.

ಶೇಷಗಿರಯ್ಯನವರ ವಾಸ ಕೋಲಾರದಲ್ಲಾದರೂ ಮುಳಬಾಗಿಲಿನಲ್ಲಿ ರಾಮಣ್ಣ ನಡಸುತ್ತಿದ್ದ ಸಂಸಾರಕ್ಕೆ ಅವರು ಸಹಾಯವಾಗಿ ನಿಂತಿದ್ದರು. ಕುಟುಂಬಕ್ಕೆ ಸೇರಿದ ಜಮೀನಿನಿಂದ ಮನೆಗೆ ಬೇಕಾದ ದವಸ ಧಾನ್ಯಗಳು ಸಿಗುತ್ತಿದ್ದುವು. ರಾಮಣ್ಣನವರು ಸ್ವಲ್ಪ ಲೇವಾದೇವಿಯನ್ನು ನಡಸುತ್ತಿದ್ದರು. ಅದಕ್ಕೆ ಬೇಕಾದ ಬಂಡವಾಳವೂ ಜಮೀನಿನಿಂದಲೇ ಬರುತ್ತಿತ್ತು.

ಹೀಗೆ ನಡೆಯುತ್ತಿದ್ದ ಸಂಸಾರಕ್ಕೆ ಇನ್ನೊಂದು ಸಂಸಾರವನ್ನು ದೈವ ಗಂಟು ಹಾಕಿತು.

ಇವರ ಜನವೇ ಆಗಿದ್ದ ಬೈರಕೂರು ಹೋಬಳಿಯ ಶೇಖ್‌ದಾರ್ ಆಗಿದ್ದ ಗುಂಜೂರು ಲಕ್ಷ್ಮೀನಾರಣಪ್ಪನವರು ಶೇಷಗಿರಿಯಪ್ಪನವರ ಪರಿಚಯಸ್ಥರು. ಮತ್ತು ಯಾವುದೋ ಒಂದು ಮೊಖದ್ದಮೆಯಲ್ಲಿ ಶೇಷಗಿರಿಯಪ್ಪನವರ ವಕಾಲತ್ತಿನ ಚತುರತೆಯಿಂದ ಪಾರಾಗಿದ್ದವರು. ಅವರ ಕುಟುಂಬ ಸಾಕಮ್ಮನವರು, ಮಕ್ಕಳು ವೆಂಕಟರಮಣಯ್ಯ, ತಿಮ್ಮಪ್ಪ ಮತ್ತು ಅಲಮೇಲಮ್ಮ. ಬೈರಕೂರು ಪ್ರಾಂತದಲ್ಲಿ ಕಾಲರಾವ್ಯಾಧಿಯ ಹಾವಳಿಗೆ ತುತ್ತಾದರು ನಾರಣಪ್ಪನವರು ಮತ್ತು ಅವರ ಮಗ ವೆಂಕಟರಮಣಯ್ಯ. ಈ ವರ್ತಮಾನವನ್ನು ಕೇಳಿದ ರಾಮಣ್ಣನವರು, ಆಪತ್ತಿನಿಂದ ದಿಕ್ಕುತೋರದೆ ಹೋಗಿದ್ದ ಆ ಸಂಸಾರವನ್ನು ಮುಳಬಾಗಿಲಿಗೆ ಕರೆದುಕೊಂಡು ಬಂದು ತಮ್ಮ ಮನೆಯಲ್ಲಿಯೇ ಉಳಿಸಿಕೊಂಡರು.—ಉತ್ತರೋತ್ತರ ಆಕೆಯ ತೌರೂರಾದ ಸರ್ಜಾಪುರಕ್ಕೆ ಕಳುಹಿಸುವ ಉದ್ದೇಶದಿಂದ.

ಈ ಸುದ್ದಿಯನ್ನು ತಿಳಿದು ಮುಳಬಾಗಿಲಿಗೆ ಬಂದ ಶೇಷಗಿರಿಯಪ್ಪನವರು, ಸಾಕಮ್ಮನವರು ಮುಳಬಾಗಿಲಿನ ಮನೆಯಲ್ಲಿಯೇ ಸ್ಥಿರವಾಗಿ ನೆಲಸಬೇಕೆಂದು ಬೇಡಿಕೊಂಡಾಗ, ಆಕೆಗೆ ಈ ಮನೆ ಒಂದು ನೆಲೆಯಾದುದಲ್ಲದೆ ಈ ಕುಟುಂಬಕ್ಕೂ ಒಂದು ಹೆಣ್ಣು ದಿಕ್ಕಾಯಿತು. ಮಾತಾಮಹರ ಮನೆಯಲ್ಲಿದ್ದ ಶೇಷಗಿರಿಯಪ್ಪನವರ ಮಗ ವೆಂಕಟರಮಣಯ್ಯನೂ ಮುಳಬಾಗಿಲಿನ ಮನೆಗೆ ಹಿಂತಿರುಗುವಂತಾಯಿತು.

ಕೆಲವು ಕಾಲ ಕಳೆದ ಮೇಲೆ ಇವರ ಮನೆಯೆದುರಿಗೇ ಇದ್ದ ಪುರೋಹಿತ ಅನ್ನಂಭಟ್ಟರ ಮಗಳು ಅನ್ನಮ್ಮನವರ ಹಿತೋಪದೇಶದ ಮೇರೆಗೆ ಶೇಷಗಿರಿಯಪ್ಪನವರ ಮಗ ವೆಂಕಟರಮಣಯ್ಯನಿಗೂ ಸಾಕಮ್ಮನವರ ಮಗಳು ಅಲ

ಮೇಲಮ್ಮನಿಗೂ ವಿವಾಹವಾಯಿತು. ಹಿಂದೆ ಆಗಿದ್ದ ಕೇಸಿಗೆ ಶೇಷಗಿರಿಯಪ್ಪ ನವರು ನಾರಣಪ್ಪನವರಿಂದ ಫೀಸು ತೆಗೆದುಕೊಂಡಿರಲಿಲ್ಲವಂತೆ. ಈಗ ಕನ್ಯಾ ದಾನದ ಮೂಲಕ ಆ ಫೀಸು ಸಂದಿತು. ಇವರೇ ಡಿ ವಿ ಜಿ ಯವರ ಮಾತಾ ಪಿತೃಗಳು.

ಮದುವೆಯಾದಾಗ ಹೆಣ್ಣಿಗೆ ಐದಾರು ವರ್ಷ. ಗಂಡಿಗೆ ಹನ್ನೆರಡು ವರ್ಷ. ಈ ದಾಂಪತ್ಯ ಎಪ್ಪತ್ತುವರ್ಷಗಳ ಕಾಲ ಅವಿಚ್ಛಿನ್ನವಾಗಿ ನಿರ್ಮಲ ವಾಗಿ ಪರಸ್ಪರ ಸಂತೋಷಕರವಾಗಿ ಸಾಗಿತು.

ಬಾಲ್ಯ

ಇಂಥ ಕುಟುಂಬದಲ್ಲಿ ಹುಟ್ಟಿದವರು ಡಿ ವಿ ಜಿ ಯವರು.

ಶಾಲೀವಾಹನ ಶಕ 1808, ವ್ಯಯನಾಮ ಸಂವತ್ಸರ, ಉತ್ತರಾಯಣ, ಫಾಲ್ಗುಣ, ಅಸಿತಪಕ್ಷ 8, ಗುರುವಾರ ಗುಂಡಪ್ಪನ ಜನನ ಎಂದು ಅವರ ತಂದೆ ಅವರ ಉಪನಯನದ ಸಂದರ್ಭದಲ್ಲಿ ಬರೆದಿಟ್ಟ ಜಾತಕ ತಿಳಿಸುತ್ತದೆ. ಇದಕ್ಕೆ ಸರಿಯಾದ ಕ್ರಿಸ್ತಶಕದ ತಾರೀಖು 17ನೆಯ ಮಾರ್ಚ್ 1887.

ಮಗು ಮುದ್ದಿನಿಂದಲೇ ಬೆಳೆಯಿತು. ಶೇಷಗಿರಿಯಪ್ಪನವರು ಮೊಮ್ಮಗನಿಗೆ ಹನುಮಂತ ತಾಳೀಸರವನ್ನು ಮಾಡಿಸಿಹಾಕಿದರು. ರಾಮಣ್ಣನವರು ಎರಡು ಕೈಗಳಿಗೂ ಚಿನ್ನದಗಟ್ಟಿಯ ಗುಂಡುಕಂಡಿಯ ಕಡಗವನ್ನು ತೊಡಿಸಿದರು. ಸಂತೆಯ ದಿನ ತಾತನ ಹೆಗಲಮೇಲೆ ಕೂತು ಒಂದು ದಮ್ಮಡಿ ವಸೂಲು ಮಾಡಿಕೊಂಡು ಸ್ನೇಹಿತರೊಡನೆ ಸೇರಿ, ಅವರ ದಮ್ಮಡಿಗಳನ್ನೂ ಸೇರಿಸಿ, ಸೌತೆಕಾಯಿ ಕೊಂಡುಕೊಂಡು ಅದರೊಂದಿಗೆ ಕೊತ್ತಂಬರಿಸೊಪ್ಪು, ಹಸಿಮೆಣಸಿನಕಾಯಿ ಉಪ್ಪು ಸೇರಿಸಿಕೊಂಡು, ಚಟ್ನಿಮಾಡಿಕೊಂಡು ಚಿಕ್ಕ ಆಂಜನೇಯನ ಗುಡಿಯ ಬಳಿ ತಿನ್ನುತ್ತಿದ್ದುದನ್ನು ಅವರು ಇಳಿ ವಯಸ್ಸಿನಲ್ಲಿಯೂ ಆನಂದದಿಂದ ಜ್ಞಾಪಿಸಿಕೊಳ್ಳುತ್ತಿದ್ದರು.

ಮನೆಯಲ್ಲಿ ಆರೇಳು ಶ್ರಾದ್ಧಗಳು, ಏಳೆಂಟು ಹುಟ್ಟಿದ ಹಬ್ಬಗಳೂ ನಡೆಯುತ್ತಿದ್ದುದರಿಂದ ಮನೆಯಲ್ಲಿ ಯಾವಾಗಲೂ ತಿಂಡಿಗಳ ಸಂಭ್ರಮ ಹೆಚ್ಚು. ಆದದ್ದರಿಂದಲೇ ಇವರ ಸೋದರತ್ತೆ, ಸೋದರಳಿಯನ 'ಹಂಡೀಬಾಗ್'ತನವನ್ನು ಕಂಡು ಹೀಗೆ ಹೇಳಿದ್ದು :

ಗುಂಡಂ ಭಂಡಂ
ತಿಂಡಿಕಿ ಶೂರಂ
ಚಂಡಾಲ ಮುಂಡೇ ಗಂಡಂ

ಇವರದು ತಿರುಪತಿ ಒಕ್ಕಲಾದುದರಿಂದ ಗುಂಡಪ್ಪನವರ ಹುಟ್ಟುಕೂದಲನ್ನು ತಿರುಪತಿಯಲ್ಲಿ ತೆಗೆಯಿಸುವೆನೆಂದು ಹರಕೆ ಮಾಡಿಕೊಂಡಿದ್ದದ್ದರಿಂದ ಅದರಂತೆ ಚೌಲಕರ್ಮ ತಿರುಪತಿಯಲ್ಲಿ ನಡೆಯಿತು.

ಹುಡುಗನಿಗೆ ಆಕಳು, ಎಮ್ಮೆ ಇವುಗಳನ್ನು ಮುಂದೆ ಹೊಡೆದುಕೊಂಡು ಹೋಗುವ ಅಭ್ಯಾಸ, ಮಹಸೂಲಿ ವಸೂಲಿಯ ಅಭ್ಯಾಸ, ಹುಣಸೇ ಹಣ್ಣಿನ ಫಸಲನ್ನು ತಂದುಕೊಳ್ಳುವ ಅಭ್ಯಾಸ ಮುಂತಾದ ಅಭ್ಯಾಸಗಳಾಗಿತ್ತು. ಹಾಗೆಯೇ ಬೆಳಗಾಗುವ ಮೊದಲೇ ರಾಮಣ್ಣನವರು ಹೇಳುತ್ತಿದ್ದ ಸ್ತೋತ್ರ ಪಾಠಗಳ ಪರಿಚಯವೂ ಇತ್ತು.

ಆ ಕಾಲದ ವಾಡಿಕೆಯಂತೆ ಅವರಿಗೆ ಅಕ್ಷರಾಭ್ಯಾಸ ಸಂಸ್ಕಾರವಾಯಿತು. ಅದನ್ನು ಆಗ ಮಾಡಿಸಿದವರು ಕುಲಗುರುಗಳು ವೇದಮೂರ್ತಿ ವೆಂಕಟರಾಮ ಭಟ್ಟರವರು. ಅವರ ತರುವಾಯ ಕ್ರಮಕ್ರಮವಾಗಿ ದಿನದಿನವೂ ಪಾಠ ಹೇಳಿ ಅಕ್ಷರ ಕಲಿಸಿದವರು ಮುಳಬಾಗಿಲಿನ ಸಮೀಪದಲ್ಲಿದ್ದ ಯಾವುದೋ ಹಳ್ಳಿಯ ಸ್ಕೂಲು ಮೇಷ್ಟರು ಪುಟ್ಟಪ್ಪ ಎಂಬವರು.

ಸೋದರಮಾವ ತಿಮ್ಮಪ್ಪ ಹುಡುಗನನ್ನು ಬೆಳಿಗ್ಗೆ ಮಧ್ಯಾಹ್ನ ತಾನು ಕೆಲಸ ಮಾಡುತ್ತಿದ್ದ ತೆಲುಗು ಸ್ಕೂಲಿಗೆ ಎತ್ತಿಕೊಂಡು ಹೋಗಿ ಹತ್ತಿರದಲ್ಲೇ ಕೂಡಿಸಿಕೊಳ್ಳುವನು.

ಮುಂದೆ ಕನ್ನಡ ಸ್ಕೂಲಿಗೆ ಸೇರಿದಾಗ ಹುಡುಗರೆಲ್ಲ ಸಾಲುಸಾಲಾಗಿ ನೆಲದ ಮೇಲೆ ಕುಳಿತು ಮುಂದುಗಡೆ ಮರಳನ್ನು ಹರವಿಕೊಂಡು ಬೆರಳುಗಳಿಂದ ಅಕ್ಷರ ಬರೆಯುತ್ತಿದ್ದರು. ಗಜ್ಜುಗದ ಕಾಯನ್ನೊಡೆದು ಅದರ ಚಿಪ್ಪುಗಳನ್ನು ಬೆರಳಿಗೆ ಟೋಪಿಯನ್ನಾಗಿ ಮಾಡಿಕೊಂಡು ಅಕ್ಷರ ತಿದ್ದುತ್ತಿದ್ದದ್ದೂ ಉಂಟು.

ಕಾಗುಣಿತವನ್ನು ಬಾಯಿಪಾಠದಿಂದ ಕಲಿಯಬೇಕು. ಆದರೆ ಮಗ್ಗಿ ಮಾತ್ರ ತಲೆ ನೋವಿನ ಪ್ರಸಂಗ. ಹನ್ನೊಂದನೆಯ ಮಗ್ಗಿಯವರೆಗೆ ಹೇಗೋ ನಿಭಾಯಿಸಿದರೂ ಹನ್ನೆರಡೊಂದಲಿಂದ ಮುಂದಕ್ಕೆ ಪದೇ ಪದೇ ತಪ್ಪುಗಳು. ಆದರೆ ಉಪಾಧ್ಯಾಯರು ಕ್ಷಮಿಸುತ್ತಿದ್ದವರಲ್ಲ. ಹೇಳಲೇ ಬೇಕು. ಆಮೇಲೆ ವಾರಗಳು, ತಿಂಗಳುಗಳು, ಋತುಗಳು, ಪ್ರಭವಾದಿ ಸಂವತ್ಸರಗಳು, ಇವುಗಳ ಪಾಠ.

ಎಲ್ಲ ಪಾಠಗಳಲ್ಲೂ ಇವರನ್ನು ತಯಾರು ಮಾಡಿ ಒತ್ತಾಸೆಯಾಗಿ ನಿಂತವರು ಇವರ ಸೋದರ ಮಾವ.

ಹೀಗೆಯೇ ಮುಂದುವರಿದು ಡಿ ವಿ ಜಿ ಯವರು ಕನ್ನಡ ಲೋಯರ್ ಸೆಕಂಡರಿ ಪರೀಕ್ಷೆಯಲ್ಲಿ ಪಾಸಾದರು. ಅವರು ಮುಂದೆ ಇಂಗ್ಲಿಷನ್ನು ಕಲಿಯಲೆಂಬ ಹಿರಿಯರ ಆಸೆಯ ಮೇರೆಗೆ ಅವರಿಗೆ ರಾಮಚಂದ್ರಾಚಾರ್ಯರೆಂಬವರ ಬಳಿ ಇಂಗ್ಲಿಷ್ ಅಕ್ಷರಾಭ್ಯಾಸ ಪ್ರಾರಂಭವಾಯಿತು.

ತಂದೆ ವೆಂಕಟರಮಣಯ್ಯನವರ ಸತತ ಪ್ರಯತ್ನದಿಂದ ಮುಳಬಾಗಿಲಿನ ಮಿಡಲ್ ಸ್ಕೂಲಿಗೆ ಇಂಗ್ಲಿಷ್ ಮೇಷ್ಟರು ಬಂದದ್ದು ಸುಮಾರು 1900ರಲ್ಲಿ. ಕೋಯಮುತ್ತೂರು ಪ್ರಾಂತಕ್ಕೆ ಸೇರಿದ ಕೆ. ವಿ. ರಾಮಸ್ವಾಮಿ ಅಯ್ಯರ್ ಎಂಬ ಆ ಇಂಗ್ಲಿಷ್ ಮೇಷ್ಟರು, ಹುಡುಗನಿಗೆ ಇಂಗ್ಲಿಷ್ ಅಕ್ಷರಾಭ್ಯಾಸ ಆಗಲೇ ಆಗಿದ್ದುದರಿಂದ, ಅವನನ್ನು ಇಂಗ್ಲಿಷಿನ ಎರಡನೆಯ ಕ್ಲಾಸಿಗೆ ಸೇರಿಸಿಕೊಂಡರು. ಅವರ ಬೋಧನ ಕ್ರಮವನ್ನು ಡಿ ವಿ ಜಿ ಯವರು ಬಹು ಮೆಚ್ಚಿಕೊಂಡು, "ನನಗೆ ಈಗ ಬರುವ ಇಂಗ್ಲಿಷ್ ರಾಮಸ್ವಾಮಯ್ಯರು ಕಲಿಸಿದ್ದಿಷ್ಟೋ ಅಷ್ಟೇ" ಎಂದಿದ್ದಾರೆ.

ಶಾಲೆಯ ಓದಿನ ಜೊತೆಗೆ ಪ್ರತಿ ಸಂಜೆಯೂ ಅವರ ಮನೆಯಲ್ಲಿ ಹೆಚ್ಚುವರಿ ಓದು ನಡೆಯುತ್ತಿತ್ತು. ಸುಮಾರು ಒಂದು ಘಂಟೆಯಾದರೂ Robinson Crusoe, Swiss Family Robinson, Stanford and Merton ಮುಂತಾದ ಬಾಲಸಾಹಿತ್ಯದ ಓದು ನಡೆಯುತ್ತಿತ್ತು.

ರಾಮಸ್ವಾಮಯ್ಯರ ಪ್ರಭಾವ ಪುಸ್ತಕಮಾತ್ರದ್ದಲ್ಲ. ಅವರು ವಿದ್ಯಾರ್ಥಿಗಳನ್ನು ರಜಾ ದಿನಗಳಲ್ಲಿ ಸುತ್ತಾಡಲು ಕರೆದುಕೊಂಡು ಹೋಗಿ ಬೆಟ್ಟ ಹತ್ತಿಸಿ, ಕಣಿವೆಯ ನೀರಿನ ತೊರೆ, ಬಯಲುಗಳಲ್ಲಿ ಸುತ್ತಾಡಿಸಿ, ಮರಗಳ ಕಡೆ ಗಮನ ಸೆಳೆದು, ಚಿಗುರಿನ ಸೊಗಸನ್ನು, ಹರಿಯುವ ನೀರಿನ ಸೊಗಸನ್ನು ತೋರಿಸುವರು. ಡಿ ವಿ ಜಿ ಹೇಳುತ್ತಾರೆ: "ಸೌಂದರ್ಯವು ಪ್ರಕೃತಿಯಲ್ಲಿರುತ್ತದೆಂಬುದು ನಿಜ. ಆದರೆ ನಮ್ಮ ಕಣ್ಣು ಅದಕ್ಕೆ ತೆರೆದಿರುತ್ತದೆಯೆಂಬುದು ಅಷ್ಟು ನಿಜವಲ್ಲ. ಯಾರಾದರೊಬ್ಬರು ನಮ್ಮ ಕಣ್ಣಿನ ರೆಪ್ಪೆಯನ್ನು ತೆರೆದು ನಮ್ಮ ದೃಷ್ಟಿಯನ್ನು ಸೌಂದರ್ಯ ಸ್ಥಾನದ ಕಡೆಗೆ ತಿರುಗಿಸಬೇಕು." ಹೀಗೆ ಮಾಡಿದವರು ರಾಮಸ್ವಾಮಯ್ಯರ್.

ಅವರ ಮೇಲೆ ಪ್ರಭಾವ ಬೀರಿದ ಇನ್ನೊಬ್ಬ ಮಹನೀಯರು ಮುಳಬಾಗಲಿನಲ್ಲಿ ಸಬ್‌ರಿಜಿಸ್ಟ್ರಾರ್ ಆಗಿದ್ದ ರಾಮದಾಸಪ್ಪನವರು. ರಾಮಸ್ವಾಮಯ್ಯರ್ ಊರಿಗೆ ಹೋಗಿದ್ದಾಗ ಓದು ತಪ್ಪಬಾರದೆಂದು ಮನೆಯ ಹಿರಿಯರು ರಾಮದಾಸಪ್ಪನವರ ಬಳಿ ಹುಡುಗನನ್ನು ಕಳುಹಿಸಿದರು. ಅವರು ಪಠ್ಯಪುಸ್ತಕದಿಂದ ಪ್ರಾರಂಭಿಸಿ, ಮದರಾಸಿನಿಂದ ಆಗ ಬರುತ್ತಿದ್ದ "ದಿ ಮೆಯಿಲ್" ಎಂಬ ಪತ್ರಿಕೆಯನ್ನು ಓದಿಸುವರು. ಹಾಗೆಯೇ ಅವರು ಷೇಕ್ಸ್‌ಪಿಯರಿನ ಜೂಲಿಯಸ್ ಸೀಸರ್ ನಾಟಕವನ್ನು ಓದುವಂತಾಯಿತು. ಆಗಲೇ ಅವರು "ವಿದ್ಯಾದಾಯಿನಿ" ಪತ್ರಿಕೆಯನ್ನು ಓದುತ್ತಿದ್ದದ್ದು.

ಹೀಗೆ ಇಂಗ್ಲಿಷ್ ಓದು ಮುಂದುವರೆದು ಎರಡನೆಯ ತರಗತಿಯಿಂದ ನಾಲ್ಕನೆಯ ತರಗತಿಗೆ ಡಬಲ್ ಪ್ರಮೋಷನ್ ಸಿಕ್ಕಿತು. ಹುಡುಗನ ಯೋಗ್ಯತೆಯನ್ನು ಕಂಡು ರಾಮಸ್ವಾಮಯ್ಯರ್ ಲೋಯರ್ ಸೆಕೆಂಡರಿ ಪರೀಕ್ಷೆಗಾಗಿ ಆಯ್ಕೆಯ ಪರೀಕ್ಷೆಗೆ ಕೂಡಿಸಿದರು, ಅದರಲ್ಲಿ ಒಳ್ಳೆಯ ನಂಬರೂ ಬಂದಿತ್ತು. ಆದರೆ ಎಲ್. ಎಸ್. ಪರೀಕ್ಷೆಗೆ ಕೂಡುವವನು ಐದನೆಯ ತರಗತಿಯಲ್ಲಿ ವ್ಯಾಸಂಗ ಮಾಡಿದವನಾಗಿರಬೇಕೆಂಬ ನಿಯಮ ಇಲ್ಲಿ ಅಡ್ಡಿ ಬಂತು. ಜಿಲ್ಲೆಯ ಸ್ಕೂಲ್ ಇನ್ಸ್‌ಪೆಕ್ಟರ್ ಅನುಮತಿ ನೀಡಲಿಲ್ಲ.

ಹಿರಿಯರಿಗಾದ ನಿರಾಸೆ, ಹುಡುಗನಿಗಾದ ನಿರಾಸೆ ಹೇಳತೀರದು. ಆಗ ಕಾಶಿಗೆ ಹೊರಟ ಒಂದು ಕುಟುಂಬದೊಡನೆ ಕಾಶಿಗೆ ಹೊರಟು ಹೋಗುತ್ತೇನೆಂಬ ಮೊಮ್ಮಗನ ತೀರ್ಮಾನ ಅಜ್ಜಿಯ ಪಾಲಿಗೆ ಸಿಡಿಲು ಬಡಿದಂತಾಯಿತು. ಆಗ ವಿದ್ಯಾ ಇಲಾಖೆಯ ಮುಖ್ಯಸ್ಥರನ್ನು ಕಾಣಬಹುದೆಂಬ ಅಜ್ಜಂದಿರ ಸೂಚನೆಯ ಮೇರೆಗೆ ವೆಂಕಟರಮಣಯ್ಯನವರು, ಹುಡುಗನ ಉತ್ತರ ಪತ್ರಿಕೆಯೊಂದಿಗೆ ಇಲಾಖೆಯ ಮುಖ್ಯಸ್ಥರಾದ ಬಾಬಾಸಾಹೇಬರನ್ನು ಕಾಣಲು ಬೆಂಗಳೂರಿಗೆ ಬಂದರು. ಮನೆಯಿಂದ ಆಗತಾನೆ ಹೊರಟಿದ್ದ ಸಾಹೇಬರು ಅಹವಾಲನ್ನು ಕೇಳಿ, ಹುಡುಗನ ಉತ್ತರ ಪತ್ರಿಕೆಯನ್ನು ಅಲ್ಲಿಯೇ ಪರಿಶೀಲಿಸಿ, ಅನುಮತಿ ನೀಡಲು ಕಛೇರಿಗೆ ಅಪ್ಪಣೆ ಕೊಟ್ಟರು.

ಹೀಗೆ "ಅಜ್ಜಿಯ ಪ್ರಭಾವದಿಂದ ನಾನು ಇಂಗ್ಲಿಷ್ ವಿದ್ಯೆಯ ಹಿಮವತ್ಪರ್ವತದ ಶಿಖರಾಗ್ರವನ್ನು ಮುಟ್ಟಿದೆ" ಎನ್ನುತ್ತಾರೆ ಡಿ ವಿ ಜಿ. ಏಕೆಂದರೆ ಅವರು ಪಾಸ್ ಮಾಡಿದ್ದು ಕನ್ನಡ ಮತ್ತು ಇಂಗ್ಲಿಷ್ ಲೋಯರ್ ಸೆಕೆಂಡರಿ ಪರೀಕ್ಷೆಗಳನ್ನಷ್ಟೆ.

ಡಿ ವಿ ಜಿ ಯವರ ಸ್ಕೂಲ್ ವಿದ್ಯಾಭ್ಯಾಸದ ಚಿತ್ರ ಇದಾದರೆ, ಅಂದಿನ ಮುಳಬಾಗಿಲಿನ ವಾತಾವರಣ ಅವರ ಅಂತರಂಗವನ್ನು ಪೋಷಿಸಿ ಅವರ ಮುಂದಿನ ಜೀವನವನ್ನು ರೂಪಿಸಿದ ಗೂಢಶಕ್ತಿಯಾಗಿತ್ತು. ಇದರಲ್ಲಿ ಮುಳಬಾಗಿಲಿನ ವಿಶಿಷ್ಟತೆಯೆಂದರೆ ಅದು ಭಾರತೀಯ ಸಂಸ್ಕೃತಿಯ ಪ್ರತೀಕವಾಗಿದ್ದುದು. ಆ ಸಂಸ್ಕೃತಿಯ ಮುಖ್ಯಾಂಶಗಳನ್ನು ಹೀರಿಕೊಂಡು ಅದನ್ನು ತಮ್ಮ ಅಂತರಂಗದ ಸ್ವತ್ತನ್ನಾಗಿ ಮಾಡಿಕೊಂಡದ್ದು ಡಿ ವಿ ಜಿ ಯವರ ಪ್ರತಿಭೆ.

ಆ ಜೀವನ ವಿಧಾನದಲ್ಲಿ ಎದ್ದು ಕಾಣುತ್ತಿದ್ದ ಲಕ್ಷಣಗಳೆಂದರೆ ಈಶ್ವರನ ಪ್ರಭುತ್ವದಲ್ಲಿ, ಪುಣ್ಯ ಪಾಪಗಳಲ್ಲಿ ಇದ್ದ ನಂಬಿಕೆ. ಇದರ ಪರಿಣಾಮವಾಗಿ ಜೀವನದಲ್ಲಿ ಒಂದು ನೆಮ್ಮದಿ. ಬಂದ ಕಷ್ಟಗಳನ್ನು ಹೇಗೋ ಸಹಿಸಿಕೊಂಡು,

ಬಂದದ್ದರಲ್ಲಿ ಸಂತೋಷಪಡುವ ಮನೋಭಾವ. ಹೀಗೆ ನೆಮ್ಮದಿಯ ಮನೋಭಾವ ಇದ್ದದ್ದರಿಂದ ಆ ಜನಕ್ಕೆ ಲೋಕ ವಿಷಯದಲ್ಲಿ ಸ್ನೇಹದಿಂದ ಇರುವುದು ಸಾಧ್ಯವಾಗಿತ್ತು. ಊರಿನ ಜನರೆಲ್ಲ, ಹಿಂದುಗಳೇ ಆಗಲಿ, ಮುಸ್ಲಿಮರೇ ಆಗಲಿ ಪರಸ್ಪರ ಸ್ನೇಹ ಸೌಹಾರ್ದಗಳಿಂದ ಬಾಳಿದರು.

ಡಿ ವಿ ಜಿ ಯವರಿಗೆ ಉಪನಯನವಾದದ್ದು ದುರ್ಮುಖಿ ಸಂವತ್ಸರದ, ವೈಶಾಖ ಬಹುಳದಲ್ಲಿ. ಅಂದರೆ 1898, ಇವರಿಗೆ ಒಂಬತ್ತು ವರ್ಷಗಳಾಗಿದ್ದಾಗ. ಅವರಿಗೆ ಉಪನಯನ ಮಾಡಿಸಿ, ಸ್ತೋತ್ರಪಾಠಗಳನ್ನು ಹೇಳಿಕೊಟ್ಟು ನಕ್ಷತ್ರೇಷ್ಟಿಯಿಂದ ಪ್ರಾರಂಭಿಸಿ ವೇದಾಧ್ಯಯನವನ್ನು ಮಾಡಿಸಿದವರು ವೆಂಕಟರಾಮಭಟ್ಟರು. ಥಿಯಸಾಫಿಕಲ್ ಸೊಸೈಟಿಯ ತತ್ತ್ವಗಳ ಪರಿಚಯವನ್ನು ಹೊಂದಿದ್ದ ಸುಬ್ಬಾಭಟ್ಟರು, ಸೊಗಸಾಗಿ ಪಾಠ ಹೇಳುತ್ತಿದ್ದ, ಹಾಗೆಯೇ, ಕಾವ್ಯಗಾಯನ ಮಾಡುತ್ತಿದ್ದ ಚಂದ್ರಶೇಖರ ಶಾಸ್ತ್ರಿಗಳು, ಪುರಾಣ ಹೇಳುತ್ತಿದ್ದ ರಾಮಚಂದ್ರ ಶಾಸ್ತ್ರಿಗಳು, ಮಾಧ್ವ ಶ್ರೀಪಾದಮಠದ ಶ್ರೀಶ್ರೀಗಳವರು, ಸಂಸ್ಕೃತ ಹೇಳಿಕೊಟ್ಟ ಕಾಶಿ ರಾಘವೇಂದ್ರಾಚಾರ್ಯರು — ಇವರೆಲ್ಲರ ವಿದ್ವತ್ತೂ ಸೌಜನ್ಯವೂ ಡಿ ವಿ ಜಿ ಯವರ ಬೆಳವಣಿಗೆಯ ಒಂದು ಮುಖ್ಯವಾದ ಭಾಗ.

ಆಗ ಅಲ್ಲಿ ಇವರ ತೀರ್ಥರೂಪರೂ, ಅವರ ಸ್ನೇಹಿತರೂ ಮಾಡುತ್ತಿದ್ದ ಕಾವ್ಯವ್ಯಾಸಂಗ, ಇವರಿಗೂ ಕಾವ್ಯರಸದಲ್ಲಿ ರುಚಿಯನ್ನು ಹುಟ್ಟಿಸಿತು. ಕಾವ್ಯರಸಾಸ್ವಾದನೆ ಇವರ ಅಂತರಂಗವನ್ನು ಪೋಷಿಸಿ ಅದಕ್ಕೆ ದೃಢತೆಯನ್ನೂ ಶಕ್ತಿಯನ್ನೂ ದಿವ್ಯದರ್ಶನ ಸಾಮರ್ಥ್ಯವನ್ನೂ ಕೊಟ್ಟಿತು.

ಇವರ ಚಿಕ್ಕ ತಾತಂದಿರು ರಾಮಣ್ಣನವರು ರುದ್ರಪ್ಪ ಎಂಡ್ ಸನ್ಸ್ ಅವರು ಪ್ರಕಟಿಸಿದ್ದ ಶ್ರೀಕೃಷ್ಣರಾಜವಾಣಿವಿಲಾಸ ಕನ್ನಡ ವಚನಭಾರತ, ಶ್ರೀ ಚಾಮರಾಜೇಂದ್ರ ವಿಲಾಸ ಎಂಬ ಕನ್ನಡ ರಾಮಾಯಣ ಗ್ರಂಥಗಳನ್ನು ಇವರಿಂದ ಓದಿಸಿದ್ದರು.

ಹಾಗೆಯೇ ಇವರ ತಾತಂದಿರಿಂದ ಆದ, ಇವರ ಮನಸ್ಸಿನಲ್ಲಿ ಸ್ಥಿರವಾಗಿ ನಿಂತು ಹೋದ, ಇನ್ನೊಂದು ಸಂಸ್ಕಾರವನ್ನು ಇಲ್ಲಿ ಹೇಳಬೇಕು.

ಆಗ ಆ ಊರಿನಲ್ಲಿ ಹರಡಿದ್ದ ಕಾಲರಾ ವ್ಯಾಧಿಯ ಪರಿಹಾರವನ್ನುದ್ದೇಶಿಸಿ ಕೆಲ ಮಂದಿ ಮಿತ್ರರು ಒಂದೊಂದು ವಾರ ಒಬ್ಬೊಬ್ಬರ ಮನೆಯಲ್ಲಿ ಭಗವದ್ಭಜನೆ ನಡಸುವ ಏರ್ಪಾಟು ಮಾಡಿದ್ದರು. ಇವರ ಮನೆಯ ಸರದಿಯ ದಿನದಂದು ಡಿ ವಿ ಜಿ ಮತ್ತು ಅವರ ಸ್ನೇಹಿತರು ಅವರ ಮನೆಯ ಹಜಾರದಲ್ಲಿ

ಮಧ್ಯರಂಗದಲ್ಲಿ ಸುಪ್ರತಿಷ್ಠಿತರಾಗಿ ಕುಳಿತಿದ್ದರು. ಏರ್ಪಾಟುಗಳನ್ನು ನೋಡಿ ಕೊಂಡು ಹೋಗಲು ಬಂದಿದ್ದ ಇವರ ಚಿಕ್ಕ ತಾತಂದಿರು ಇವರನ್ನು ನೋಡಿ, ರಟ್ಟೆ ಹಿಡಿದು ಎಬ್ಬಿಸಿ ಸರ್ರನೆ ಒಂದು ಮೂಲೆಗೆ ಕರೆದುಕೊಂಡು ಹೋಗಿ ಕುಳ್ಳಿರಿಸಿದರು. ಭಜನೆಯ ಸಂಭ್ರಮವೆಲ್ಲ ಮುಗಿದ ಮೇಲೆ, ಊಟದ ಸಮಯ ದಲ್ಲಿ ಮೊಮ್ಮಗನನ್ನು ಕುರಿತು, "ಮಗೂ, ನಾಲ್ಕು ಮಂದಿ ಇರುವ ಕಡೆ ನೀನು ಹೋದಾಗ ನಿನಗೆ ತಕ್ಕ ಜಾಗ ಯಾವುದೆಂಬುದನ್ನು ತಿಳಿದು ಅಲ್ಲಿರ ಬೇಕು. ಅದೇ ಜಾಣತನ. ಬರೆಯುವ ಗುಮಾಸ್ತನು ಮಶೀ ಕುಡಿಕೆಯನ್ನು ಎಲ್ಲಿಟ್ಟುಕೊಂಡಿರುತ್ತಾನೆಂಬುದನ್ನು ನೋಡಿ ಅವನ ಯೋಗ್ಯತೆಯನ್ನು ಗೊತ್ತು ಮಾಡಬಹುದು. ಹಾಗೆಯೇ ಒಬ್ಬ ಮನುಷ್ಯ ಒಂದುಕಡೆ ಬಂದಾಗ ಎಲ್ಲಿ ಕುಳಿತುಕೊಳ್ಳುತ್ತಾನೆ ಎಂಬುದನ್ನು ನೋಡಿ ಗೊತ್ತುಮಾಡಬಹುದು. ನೀನು ಕುಳಿತ ಬಳಿಕ ಯಾರಾದರೂ ಬಂದು ನಿನ್ನನ್ನು, "ಇಲ್ಲಿ ಬೇಡ, ಅಲ್ಲಿ ಹೋಗು" ಎಂದು ಹೇಳುವಂತೆ ಆಗಬಾರದು," — ಎಂದು ವಿವೇಕವನ್ನು ಹೇಳಿಕೊಟ್ಟರು. ಬಾಲ್ಯದಲ್ಲಾದ ಈ ಅನುಭವ ಅವರ ಮನಸ್ಸಿನಲ್ಲಿ ಬೇರೂರಿ ಹೋದ ಒಂದು ಮುಖ್ಯವಾದ ಘಟನೆಯೆನ್ನಬಹುದು. ಮುಂದೆ "ಸಂಸ್ಕೃತಿ"ಯನ್ನು ಕುರಿತು ಬರೆಯುವಾಗ "ಸ್ವಸ್ಥಾನ ಪರಿಜ್ಞಾನ" ಎಷ್ಟು ಅವಶ್ಯವಾದದ್ದು ಎಂಬುದನ್ನು ಅವರು ವಿಸ್ತಾರವಾಗಿ ವಿವರಿಸಿದ್ದಾರೆ.

ಮುಳಬಾಗಿಲಿನಲ್ಲಿ ಅವರಿದ್ದ ಮನೆಯ ನೆರೆ ಹೊರೆಯಲ್ಲಿ ಗಾಯಕರ ಮತ್ತು ನರ್ತಕರ ಮನೆಗಳಿದ್ದವು. ಅಂಥ ಸಹವಾಸ ಚಿಕ್ಕಂದಿನಿಂದ ದೊರಕಿದ್ದ ರಿಂದ ಅವರ ಕಲಾಭಿರುಚಿಗೆ ಆಗಲೇ ಅಂಕುರಾರ್ಪಣವಾಯಿತು. ಅವರು ಸೊಗಸಾದ ಸಂಗೀತ, ನರ್ತನ, ಅಭಿನಯ ಎಲ್ಲವನ್ನೂ ಚಿಕ್ಕಂದಿನಿಂದಲೇ ಕಂಡವರು.

ಒಟ್ಟಿನಲ್ಲಿ ಮನೆಯಲ್ಲಿ ಒಳ್ಳೆಯ ತುಪ್ಪ, ಒಳ್ಳೆಯ ಹಾಲು ಹೇಗೋ ಮನಸ್ಸಿನ ಜೀವನಕ್ಕೆ ಸಂಗೀತ ಸಾಹಿತ್ಯಗಳು ಹಾಗೆ ಅವಶ್ಯ ದ್ರವ್ಯಗಳೆಂದು ತಿಳಿದಿದ್ದ ಜನ ಅಂದಿನ ಮುಳಬಾಗಿಲಿನ ಜನ. ಆ ವಾತಾವರಣದಲ್ಲಿ ಬೆಳೆದವರು ಡಿ ವಿ ಜಿ.

ಡಿ ವಿ ಜಿ ಯವರ ಮುಂದಿನ ಓದಿನ ವಿಷಯದಲ್ಲಿ ಮನೆಯ ಹಿರಿಯರು ಉತ್ಸಾಹಶಾಲಿಗಳಾಗಿರಲಿಲ್ಲ. ಆದರೆ ಇವರ ತಂದೆಯವರ ಇಬ್ಬರು ಸ್ನೇಹಿತರ —ಬಂಡಿ ರಸೂಲ್ ಖಾನ್ ಮತ್ತು ಮಾರಶೆಟ್ಟಿ ಎಂಬವರ—ಒತ್ತಾಯಕ್ಕೆ ಮಣಿದು, ಇವರನ್ನು ಮುಂದಿನ ಓದಿಗೆ ಕಳುಹಿಸುವುದೆಂದು ನಿಶ್ಚಯವಾಯಿತು.

ಅಷ್ಟರಲ್ಲಿ ಈ ಹುಡುಗನ ವಿದ್ಯಾವೈದುಷ್ಯವನ್ನು ಕಿವಿಯಿಂದ ಕೇಳಿದ್ದ ದೂರದ ಸ್ವಜನ, ಅನುಕೂಲವಾಗಿದ್ದವರು, ತಮಗೆ ಬೇಕಾದ ವರನು ಈ ಹುಡುಗನಲ್ಲಿರಬಹುದೇನೋ ಎಂದು ಭ್ರಮಿಸಿ ಒಂದಿಷ್ಟು ದ್ರವ್ಯ ಸಹಾಯ ಮಾಡಲು ಒಪ್ಪಿಕೊಂಡದ್ದರಿಂದ, ಅವರ ಓದು ಮೈಸೂರಿನಲ್ಲಿ ಮಹಾರಾಜಾ ಕಾಲೇಜಿಗೆ ಸೇರಿದ ಹೈಸ್ಕೂಲಿನಲ್ಲಿ ಮುಂದುವರಿಯುವಂತಾಯಿತು. ಅದು ನಡೆದದ್ದೂ ಐದಾರು ತಿಂಗಳೇ.

ಮೈಸೂರಿನಲ್ಲಿ ಅವರಿಗೆ ಪಾಠ ಹೇಳಿದವರಲ್ಲಿ ಬಾಪು ಸುಬ್ಬರಾಯರು, ಬೆಳವಾಡಿ ದಾಸಪ್ಪನವರು, ಕಾಸಕಾಸಹಳ್ಳಿ ವರದಾಚಾರ್ಯರು ಮುಖ್ಯರು. ಕಾಲೇಜು ಹಾಸ್ಟೆಲಿನ ವಿದ್ಯಾರ್ಥಿ ಸಂಘಕ್ಕೆ ಇವರು ಕಾರ್ಯದರ್ಶಿಗಳು. ಒಂದು ಸಲ ಸಂಘದಲ್ಲಿ ಏರ್ಪಡಿಸಿದ್ದ ಉಪನ್ಯಾಸವೊಂದರ ಸಮಯದಲ್ಲಿ ವಂದನಾರ್ಪಣೆ ಮಾಡಿ ಬಿ.ಎ. ಓದುತ್ತಿದ್ದ ಸ್ನೇಹಿತರಿಂದ ಮೆಚ್ಚಿಕೆ ಗಳಿಸಿಕೊಂಡರು.

ನೂತನ ವಿದ್ಯಾವಿಧಾನಗಳನ್ನು ನಮ್ಮ ಜನರಲ್ಲಿ ಹರಡಲು ಕೆಲವು ಉತ್ಸಾಹಶಾಲಿ ತರುಣರು ಮೈಸೂರಿನಲ್ಲಿ ಪ್ರಾರಂಭಿಸಿದ್ದ ಜಿ. ಟಿ. ಎ. (ಗ್ರಾಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್) ಎಂಬ ಪ್ರಕಟನ ಸಂಸ್ಥೆಗೆ ಇವರು ಆಗಾಗ ಹೋಗುತ್ತಿದ್ದರು ಅಲ್ಲಿ ಸಿಗುತ್ತಿದ್ದ ಜಿಂಜರ್ ಬಿಸ್ಕತ್ತುಗಳು ಇವರಿಗಿದ್ದ ಮೊದಲನೆಯ ಆಕರ್ಷಣೆ. ಎರಡನೆಯದು ಅಲ್ಲಿ ಜೋಡಿಸಿಟ್ಟಿರುತ್ತಿದ್ದ ಎರಡಾಣೆ ಮೂರಾಣೆಯ ಪುಸ್ತಕಗಳು. ಪುಸ್ತಕಗಳನ್ನು ಪರೀಕ್ಷೆ ಮಾಡುವ ನೆಪದಲ್ಲಿ ಇವರು ಅಲ್ಲಿಯೇ ಕುಳಿತು ಅದಷ್ಟು ಪುಸ್ತಕಗಳನ್ನು ಓದಿ ಮುಗಿಸಿಬಿಡುತ್ತಿದ್ದರು. ಎರಡು ಮೂರುದಿನಕ್ಕೊಂದು ಬಾರಿ ಎರಡಾಣೆ ಕೊಟ್ಟು ಒಂದು ಪುಸ್ತಕವನ್ನು ಕೊಂಡುಕೊಳ್ಳುತ್ತಿದ್ದರು. ಹೀಗೆ ಟೆನಿಸನ್, ಲಾಂಗ್ ಫೆಲೋ ಮೊದಲಾದ ಕವಿಗಳ ಪದ್ಯ ಸಂಗ್ರಹವನ್ನು ಕೊಂಡುಕೊಂಡರು. ಹಾಗೆಯೇ ಷೇಕ್ಸ್‌ಪಿಯರನ್ನು ಓದಿದ್ದೂ ಸಹ.

ಮೈಸೂರಿನಲ್ಲಿದ್ದಾಗ ಎಂ. ವೆಂಕಟಕೃಷ್ಣಯ್ಯನವರು ಅಧ್ಯಕ್ಷತೆ ವಹಿಸಿದ್ದ ಸಭೆಯೊಂದಕ್ಕೆ ಹೋಗಿದ್ದು ಜನರು ಅವರ ಬಗೆಗೆ ಆಡಿದ ಮೆಚ್ಚಿಕೆಯ ಮಾತುಗಳನ್ನು ಕೇಳಿದರು. ಸ್ನೇಹಿತನೊಬ್ಬನೊಂದಿಗೆ ಅವರ ಮನೆಗೆ ಹೋಗಿಬರುವ ಅವಕಾಶ ದೊರಕಿದರೂ ಅವರಲ್ಲಿ ಭಯ ಭಕ್ತಿಗಳಿಂದಾಗಿ ಆಗ ಸಲಿಗೆ ಬರಲಿಲ್ಲ.

ಮೈಸೂರಿನಲ್ಲಿರುವಾಗ, ಅವರ ಅಜ್ಜಿ ಸಾಕಮ್ಮನವರು ತೀರಿಕೊಂಡರೆಂದೂ, ಅದಾದ ಎರಡು ದಿನಗಳಲ್ಲಿ ಅವರ ತಾತ ರಾಮಣ್ಣನವರು ತೀರಿಕೊಂಡರೆಂದೂ ಸುದ್ದಿ ಬಂದಿತು. ತತ್ತರಿಸಿ ಹೋದ ಹುಡುಗ ಊರಿಗೆ ಹಿಂತಿರುಗಿ

ಬಂದಾಗ ಅಜ್ಜಿ ತಾತಂದಿರು ಪ್ಲೇಗಿಗೆ ತುತ್ತಾದರೆಂದು ತಿಳಿದು ಬಂತು. ಪರಸ್ಥಳದಲ್ಲಿದ್ದ ಇವರ ತಂದೆ ಊರಿಗೆ ಹಿಂತಿರುಗಿ ಬರುವ ವೇಳೆಗೆ ಮನೆಯಲ್ಲಿದ್ದ ಸಾಮಾನುಗಳೆಲ್ಲ ಕಳವಾಗಿ ಹೋಗಿದ್ದವು. ರಾಮಣ್ಣನವರ ಪೆಟ್ಟಿಗೆಯಲ್ಲಿ, ಸಾಲ ತೆಗೆದುಕೊಂಡವರು ಬರೆದು ಕೊಟ್ಟಿದ್ದ ಪತ್ರಗಳು, ಒತ್ತೆಯಿಟ್ಟಿದ್ದ ಚಿನ್ನ ಬೆಳ್ಳಿಯ ಒಡವೆಗಳು, ಎಲ್ಲ ಕಳವಾಗಿದ್ದುವು. ಇದ್ದ ನಗದೂ ಹೋಗಿತ್ತು. ರೈತರು ಬರೆದು ಕೊಟ್ಟಿದ್ದ ಗುತ್ತಿಗೆ ಚೀಟಿಗಳೂ ಮಾಯವಾಗಿದ್ದುವು. ಹೀಗೆ ಆ ಕುಟುಂಬದ ಆಸ್ತಿ ಸೊನ್ನೆಯಾಯಿತು, ಅವರ ಸಂಸಾರಕ್ಕೆ ದೊಡ್ಡ ವಿಪತ್ತು ಎರಗಿತ್ತು.

ಮೂರನೆಯ ವರ್ಷ ಅತಿವೃಷ್ಟಿಯಾಗಿ ಜಮೀನೆಲ್ಲ ಹಾಳಾಯಿತು. ಅದನ್ನು ದುರಸ್ತು ಮಾಡಲು ತ್ರಾಣವಿಲ್ಲದೆ ಹೋಯಿತು. ಸರಕಾರದವರಿಂದ ಕಂದಾಯಕ್ಕೆ ತಗಾದೆ ಬಂದಿತು. ಅದನ್ನು ಕೊಡಲಾರದೆ ವೆಂಕಟರಮಣಯ್ಯನವರು: "ಈ ಜಮೀನನ್ನು ನೀವೇ ಒಪ್ಪಿಸಿಕೊಂಡು ಹರಾಜು ಮಾಡಿ ಬಂದದ್ದನ್ನು ನಿಮ್ಮ ಕಂದಾಯದ ಬಾಕಿಗಾಗಿ ಪಾವತಿ ಮಾಡಿಕೊಳ್ಳುವುದು"– ಎಂದು ಸರಕಾರಕ್ಕೆ ಬರೆದುಬಿಟ್ಟರು.

ಅನಂತರ ಸಂಸಾರಕ್ಕೆ ಸ್ಕೂಲು ಮೇಷ್ಟರಾಗಿದ್ದ ವೆಂಕಟರಮಣಯ್ಯನವರ ಸಂಪಾದನೆಯೇ ದಿಕ್ಕಾಯಿತು.

ಸಂಸಾರದ ಈ ಪರಿಸ್ಥಿತಿಯನ್ನು ಕಂಡು ನಾಲ್ಕನೆಯ ಫಾರಂ ಆದ ನಂತರ ಡಿ ವಿ ಜಿ ಯವರು ಮೈಸೂರಿಗೆ ಹಿಂತಿರುಗಲಿಲ್ಲ. ಮೂರನೆಯ ವರ್ಷ ಕೋಲಾರದಲ್ಲಿ ಹೈಸ್ಕೂಲಿಗೆ ಸೇರಿದರು. ಮೊದಲನೆಯ ವರ್ಷ ವೆಂಕಟರಾಮಯ್ಯ ಎಂಬವರ ಮನೆಯಲ್ಲಿ ಊಟ, ಮಣಿಕುಂಡಲಂ ಸುಬ್ಬರಾಯಶಾಸ್ತ್ರಿಗಳೆಂಬವರ ಮನೆಯಲ್ಲಿ ವಸತಿ. ವೆಂಕಟರಾಮಯ್ಯನವರ ಮನೆಯಲ್ಲಿ ಅವರ ಮಕ್ಕಳಿಗೆ ಪಾಠ ಹೇಳಬೇಕಾಗಿತ್ತು, ಅವರು ಊರಿನಲ್ಲಿ ಇಲ್ಲದಿದ್ದಾಗ ದೇವತಾರ್ಚನೆ ಮಾಡಬೇಕಾಗಿತ್ತು. ಶಾಸ್ತ್ರಿಗಳ ಮನೆಯಲ್ಲಿ ಅಧ್ಯಯನವೂ ಸ್ವಲ್ಪ ನಡೆಯುತ್ತಿತ್ತು. ಆದರ ಮೂರನೆಯ ವರ್ಷ ಹಾಸ್ಟಲಿನ ವಾಸ.

ಹೈಸ್ಕೂಲಿನಲ್ಲಿ ಉಪಾಧ್ಯಾಯರಾಗಿದ್ದವರು ಕನ್ನಡ ಪಂಡಿತ ಹನುಮಂತರಾಯರು. "ಕಂದ" ರಚನೆ ಹೇಗೆ ಎಂಬ ಡಿ ವಿ ಜಿ ಯವರ ಪ್ರಶ್ನೆಗೆ ಅವರು ಕೊಂಚ ವಯಸ್ಸಾಗಿ ಅನುಭವವಾದರೆ ತಾನೇ ತಿಳಿದು ಬರುತ್ತದೆಂದು ಹೇಳಿದರಂತೆ. ಆದರೆ ಶಿಷ್ಯ ಬಿಡಲಿಲ್ಲ. ಗಣೇಶ ಹಬ್ಬದ ಸಂದರ್ಭದಲ್ಲಿ ಪದ್ಯ

ಗಳನ್ನು ಹೊಸೆದರಂತೆ. ಅನೇಕ ವರ್ಷಗಳಾದ ಮೇಲೆ, ಅವರಿಗೆ ಜ್ಞಾಪಕವಿದ್ದ ಆ ಮೊದಲ ರಚನೆಯ ತುಣುಕು ಇದು :

ಧರೆಯೊಳ್ ಕಾಂಚನ ಭಾಗ ಸಂಸ್ಥಿತ ಲಸತ್–
ಕೊಲಾಹಲಾಭಿಖ್ಯ ಸತ್–
ಪುರದಾಂಗ್ಲೇಯ ಕಲೋಚ್ಚಾಪಾಠ ಗೃಹದೊಳ್
ನಾವೋದುವರ್ ಬಾಲಕರ್ ||

ಹಾಗೆಯೇ ಈ ಎರಡು ಕಂದ ಪದ್ಯಗಳು :

ಶ್ರೀ ಗೌರೀ ಪ್ರಿಯ ತನಯಂ
ವಾಗೀಶಾದ್ಯಮರ ವಿನುತ ಪಾದಂ ವರದಂ ||
ಭೋಗೀಶ ಭೂಷಿತಾಂಗಂ |
ರಾಗದಿ ಪೊರೆಯೆಮ್ಮ ಗುರುಗಳಂ ಬಾಲಕರಂ ||
ಪುರದಹನ ಸಮಯದಂದಾ |
ಪುರಹರನುಂ ನಿನ್ನನೈದೆ ಪೂಜಿಸಿದನೆನಲ್ ||
ಧರೆಯೊಳ್ ಮನುಜನ ಮಾತೇಂ |
ಪರಿಪರಿವಿದ್ಯೆಗಳನಿತ್ತು ಪೊರೆ ಗಣನಾಥಾ ||

ಉತ್ಸವಕ್ಕೆ ಬಂದಿದ್ದ ಹನುಮಂತರಾಯರು "ಕಂದ"ಗಳನ್ನು ಮೆಚ್ಚಿ ಕೊಂಡರಂತೆ.

ಕೋಲಾರದ ಉಪಾಧ್ಯಾಯರಲ್ಲಿ ಡಿ ವಿ ಜಿ ಯವರಿಗೆ ಮೆಚ್ಚಿಕೆಯಾದ ವರು ಆರ್.ವಿ. ಕೃಷ್ಣಸ್ವಾಮಿ ಅಯ್ಯರ್. ಅವರು ಚರಿತ್ರೆಯ ಪಾಠ ಹೇಳು ತ್ತಿದ್ದರಂತೆ. ಅಂದಂದಿನ ಪಾಠ ಹೇಳುವುದಕ್ಕೆ ಮುಂಚೆ, ಪೀಠಿಕಾರೂಪವಾಗಿ, ಸಮಕಾಲೀನ ಸುದ್ದಿಗಳನ್ನು ಕುರಿತು ಎರಡು ಮಾತುಗಳನ್ನು ಹೇಳುತ್ತಿದ್ದ ರಂತೆ. ಒಂದು ದಿನ ಅವರು ಲಾರ್ಡ್ ಮಾರ್ಲೆ ಮಹಾಶಯನು ಗ್ಲಾಡ್ ಸ್ಟನ್ ಮಹಾಶಯನ ಜೀವನ ಚರಿತ್ರೆಯನ್ನು ಬರೆದಿರುವನೆಂದು ವೃತ್ತ ಪತ್ರಿಕೆಗಳಲ್ಲಿ ಬಂದಿದ್ದ ಸುದ್ದಿಯನ್ನು ಪ್ರಸ್ತಾಪಿಸಿ, ಮಾರ್ಲೆಯನ್ನು ಕುರಿತು ಗ್ಲಾಡ್‌ಸ್ಟನ್‌ನನ್ನು ಕುರಿತು ಹೇಳಿ, ಆ ಜೀವನ ಚರಿತ್ರೆಯನ್ನು ನಮ್ಮ ದೇಶದ ಜನವೂ ಓದಬೇಕಾದದ್ದೆಂದು ಹೇಳಿದರಂತೆ. ಆ ಮಾತುಗಳನ್ನು ಕುರಿತು, "ನನ್ನ ಹೃದಯದ ಅಂತರಾಳದಲ್ಲಿ ಏನೋ ಒಂದು ದೊಡ್ಡ ಬೆಳಕಿನ ಅನುಭವವಾಯಿತು. ಇಂಥ ಮಹಾನುಭಾವರಿರುತ್ತಾರೆಯೆ ! ಅಂಥ ಒಳ್ಳೆಯ ಲೇಖಕರಿರುತ್ತಾರೆಯೆ ? ನಾನು ಆ ಗ್ರಂಥವನ್ನೋದುವುದೆಂದಿಗೆ ?—ಇವ

ನ್ನೆಲ್ಲುಂಟಾದ ಆಲೋಚನೆಗಳು" ಎಂದು ಆ ಕ್ಷಣದಲ್ಲಾದ ಅನುಭವವನ್ನು ಡಿ ವಿ ಜಿ ಯವರು ಜ್ಞಾಪಿಸಿಕೊಂಡಿದ್ದಾರೆ.

ಹೀಗೆ ಆದ ಅನುಭವ, ಅವರಿಗೆ ಕಂಡಬೆಳಕು, ಅವರ ಜೀವನದುದ್ದಕ್ಕೂ ಅವರಿಗೆ ದಾರಿದೀಪವಾಯಿತು. ಗ್ಲಾಡ್‌ಸ್ಟನ್ ಮಹಾಪುರುಷನು ಅವರಿಗೆ ಒಂದು ರಾಜಕೀಯ ಆದರ್ಶದ ಸಾಕಾರ ಪುರುಷನಾದ. ಮಾರ್ಲೆಯಂತೂ ಅವರಿಗೆ ಗುರುವೇ ಆದ. ಇದರತ್ತ ಕೈತೋರಿಸಿದವರು ಕೃಷ್ಣಸ್ವಾಮಿ ಅಯ್ಯರ್.

ಅವರ ಗ್ರಂಥ ಭಂಡಾರ, ಅವರು ತರಿಸುತ್ತಿದ್ದ ರಾಮಕೃಷ್ಣ-ವಿವೇಕಾನಂದರ ಉಪದೇಶಗಳನ್ನು ಪ್ರಚಾರ ಮಾಡುತ್ತಿದ್ದ 'ಬ್ರಹ್ಮವಾದಿನ್' ಪತ್ರಿಕೆ ಇವರ ಕುತೂಹಲವನ್ನು ಕೆರಳಿಸಿದುವು. ಸಾಮಾನ್ಯ ಗ್ರಂಥಾವಲೋಕನದಲ್ಲಿ ಅಭಿರುಚಿಯನ್ನು ಹೆಚ್ಚು ಮಾಡಿಕೊಂಡು ಹೈಸ್ಕೂಲು ವಿದ್ಯಾರ್ಥಿ ತನ್ನ ಜ್ಞಾನ ಭಂಡಾರದ ಭದ್ರ ತಳಪಾಯವನ್ನು ಹಾಕಿಕೊಂಡ.

ಹಾಸ್ಟಲಿನ ಫೀಸ್ ಕೊಡಲು ಕಷ್ಟವಾಗುತ್ತಿತ್ತು. ಇದನ್ನು ಕಂಡ ಹಾಸ್ಟಲ್ ವಾರ್ಡನ್ ಹನುಮಂತರಾಯರು ತಾವು ಸಹಾಯ ಮಾಡುತ್ತಿದ್ದ ಕ್ರೈಸ್ತ ಸಂಸ್ಥೆಯೊಂದಕ್ಕೆ ಈ ಹುಡುಗನಿಂದ ಕೆಲವು ಪತ್ರಿಕೆಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿಸಿಕೊಂಡು ಐದ್ವೈದು ರೂಪಾಯಿಗಳ ಸಂಭಾವನೆಯನ್ನು ಕಳಿಸಿಕೊಡುತ್ತಿದ್ದರು. ಈ ಹುಡುಗ ಆ ಸಂಪಾದನೆಯನ್ನು ಹಾಸ್ಟಲಿಗೆ ಕೊಡಬೇಕಾದ ಫೀಸಿಗೆ ದಾಖಲೆ ಮಾಡಿಕೊಳ್ಳಬೇಕೆಂದು ಹೇಳಿ ತನ್ನ ಜೀವನಾಸು ಕೂಲಕ್ಕೆ ಪ್ರಾರಂಭ ಮಾಡಿಕೊಂಡ. "ತನ್ನ ಮಶಿಕುಡಿಕೆ ಜೀವನ ಅಂದಿನಿಂದ ಪ್ರಾರಂಭವಾಯಿತು" ಎನ್ನುತ್ತಾರೆ ಡಿ ವಿ ಜಿ.

ಅಲ್ಲಿ ಅಮಲ್ದಾರರಾಗಿದ್ದ ವೆಂಕಟೇಶಯ್ಯನವರು ಕೊಟ್ಟ ಸಾಕ್ರಟೀಸನ ಸಂವಾದಗಳನ್ನು ಇವರು ಓದಿದ್ದೂ, ಅಸಿಸ್ಟೆಂಟ್ ಕಮಿಷನರಾಗಿದ್ದ ಹಾಡ್ಯದ ರಾಮಸಪ್ಪನವರು ಕೊಡುತ್ತಿದ್ದ ಸ್ಟ್ರ್ಯಾಂಡ್ ಮ್ಯಾಗಜೈನನ್ನು ಓದಿದ್ದೂ ಆಗಲೇ.

ಹೀಗೆ ಇತರ ಗ್ರಂಥಾವಲೋಕನದಲ್ಲಿ ಕಾಲವನ್ನು ಕಳೆದ ಡಿ ವಿ ಜಿ ಯವರು ಪಠ್ಯಪುಸ್ತಕಗಳನ್ನು ಓದಿರಲಿಲ್ಲ. ಕ್ಲಾಸಿನಲ್ಲಿ ಪ್ರಶ್ನೆ ಕೇಳಿದಾಗ ಏನೇನೋ ಉಢಾಫೆಯಿಂದ ಜವಾಬು ಕೊಟ್ಟು ಭೇಷ್ ಎನಿಸಿಕೊಂಡಿದ್ದರೂ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಕನ್ನಡ, ವಿಜ್ಞಾನ, ಗಣಿತ ಇವುಗಳಲ್ಲಿ ಫೆಯಿಲ್ ಆದರು.

ಡಿ ವಿ ಜಿ ಯವರ ಸ್ಕೂಲಿನ ಓದು ಹೀಗೆ ಮುಕ್ತಾಯವಾಯಿತು.

1904ರ ಏಪ್ರಿಲ್ 25ನೆಯ ತಾರೀಖು ಡಿ ವಿ ಜಿ ಯವರಿಗೆ ಸುಬ್ಬಯ್ಯನವರ ಮಗಳಾದ ಸೌಭಾಗ್ಯವತಿ ಭಾಗೀರಥಮ್ಮನೊಡನೆ ಮದುವೆಯಾಯಿತು. ಬಾರ್ಟನ್ ಕಂಪೆನಿಯಲ್ಲಿದ್ದ, ಹೆಣ್ಣಿನ ಚಿಕ್ಕಪ್ಪ ಶ್ರೀ ಬಿ. ಎಸ್. ರಾಮಯ್ಯನವರ ಹೆಸರಿನಲ್ಲಿದೆ ಮದುವೆಯ ಆಹ್ವಾನಪತ್ರಿಕೆ. 27ನೆಯ ತಾರೀಖು ರಾಮಯ್ಯನವರ ಮಗಳು ಸೌಭಾಗ್ಯವತಿ ಅಕ್ಕಮ್ಮನ ಮದುವೆಯೂ ಕೂಡ. ಮದುವೆ ನಡೆದದ್ದು ಚಾಮರಾಜಪೇಟೆಯ ಎರಡನೆಯ ಮೈನ್ ರೋಡಿನ ಎರಡನೆಯ ನಂಬರ್ ಮನೆಯಲ್ಲಿ. 26, 28, 29, 30ನೆಯ ಏಪ್ರಿಲ್ ಮತ್ತು 1ನೆಯ ಮೇ, ದಿನಗಳಲ್ಲಿ ಸಂಗೀತ ಸಮಾರಂಭಗಳು. ಆಂಧ್ರದಿಂದ ಯಾರೋ ಪ್ರಖ್ಯಾತ ವಿದ್ವಾಂಸರೊಬ್ಬರು ವೀಣೆ ನುಡಿಸಿದರೆಂದು ಡಿ ವಿ ಜಿ ಯವರು ಹೇಳಿದಂತೆ ಲೇಖಕನಿಗೆ ನೆನಪು. ಆಗ ಡಿ ವಿ ಜಿ ಐದನೆಯ ಫಾರಂನಲ್ಲಿದ್ದರು.

1905ರ ವೇಳೆಗೆ ಇವರ ಸ್ಕೂಲಿನ ಓದು ಸಂಪೂರ್ಣವಾದಾಗ ಇವರು ಇಟ್ಟುಕೊಂಡಿದ್ದ ಪುಸ್ತಕ ಭಂಡಾರದ ಹೆಸರು ಶ್ರೀಮಾನಸೋಲ್ಲಾಸ ಲೈಬ್ರರಿ ಎಂದು. 15.11.1905ರಲ್ಲಿ ಓದಿದ ವರ್ಡ್ಸ್‌ವರ್ತ್ ಕವಿಯ 'ಬರ್ನ್ಸ್ ಸಮಾಧಿಯ ಬಳಿ' ಎಂಬ ಕವಿತೆಯಲ್ಲಿನ "How verse may build a princely throne, on humble birth" ಎಂಬ ಸಾಲನ್ನು ಗುರುತು ಮಾಡಿಕೊಂಡಿದ್ದಾರೆ. ಹಾಗೆಯೇ "A peep into various works about India" ಎಂದು ಮಾಕ್ಸ್‌ಮುಲ್ಲರ್, ಡಾಯ್‌ಸನ್ ಮುಂತಾದವರ ಗ್ರಂಥಗಳಿಂದ ಟಿಪ್ಪಣಿಗಳನ್ನು ಬರೆದಿಟ್ಟುಕೊಂಡಿದ್ದಾರೆ, ಹಾಗೆಯೇ ದಿ ಸಂಸ್ಕೃತ್ ಜರ್‌ನಲ್ ಎಂಬ ಪತ್ರಿಕೆಗಳಿಂದಲೂ ವಿಷಯಗಳನ್ನು ಬರೆದಿಟ್ಟುಕೊಂಡಿದ್ದಾರೆ.

ಸ್ಕೂಲು ಓದು ಮುಗಿದ ಮೇಲೆ ಸ್ವಲ್ಪ ಕಾಲ ಎಲ್ಲೂರಿನಲ್ಲಿ ಬಂಧುಗಳ ಮನೆಯಲ್ಲಿದ್ದರು. ಆಗ ಸ್ವಲ್ಪ ವೇದಾಧ್ಯಯನವೂ ನಡೆಯಿತು.

ಅನಂತರ ಜೀವನೋಪಾಯಕ್ಕಾಗಿ ಛಾಂಪಿಯನ್ ರೀಫ್ಸ್‌ನಲ್ಲಿ ಹಾಜಿ ಇಸ್ಮಾಯಿಲ್ ಸೇಟ್‌ರ ಅಂಗಡಿಯಲ್ಲಿ 3.12.1905 ರಿಂದ 6.6.1906 ರ ವರೆಗೂ ಕೆಲಸಮಾಡುತ್ತಿದ್ದರು. ಇವರು ಕೆಲಸ ಬಿಟ್ಟಾಗ ಅಂಗಡಿಯವರು ಈ ಸರ್ಟಿಫಿಕೇಟನ್ನು ಕೊಟ್ಟಿದ್ದಾರೆ :

"This is to certily that Mr. D.V. Gundappa was working in this Department (Metal and Mine Store Department) as a clerk from 3-12-1905 to 6-6-1906 during which time his conduct was good, attendance regula r and work satisfactory."

ಚಾಕರಿಗಾಗಿ ಪರದಾಟ

ಕುಟುಂಬದಲ್ಲಿ ಆಗಿದ್ದ ವಿಪತ್ತಿನ ಕಾರಣದಿಂದ ಹೈಸ್ಕೂಲಿನಲ್ಲಿದ್ದಾಗಲೇ ಡಿ ವಿ ಜಿ ಯವರಿಗೆ ತಾನು ಯಾವುದಾದರೊಂದು ಚಾಕರಿ ಸಂಪಾದಿಸಿಕೊಳ್ಳ ಬೇಕೆಂಬ ಜವಾಬ್ದಾರಿಯ ಅರಿವಾಗಿಬಿಟ್ಟಿತ್ತು ಎಂದು ಕಾಣುತ್ತದೆ. ಹೀಗಾಗಿ ಅವರ ಸ್ವಾವಲಂಬನ ಪ್ರಯತ್ನಗಳು ಆಗಲೇ ಮೊದಲಾದುವು.

ಆಗ ಮದರಾಸಿನ ಸರಕಾರದವರು ನಡಸುತ್ತಿದ್ದ ಸ್ಕೂಲ್ ಆಫ್ ಆರ್ಟ್ಸ್ ಸಂಸ್ಥೆಯ ಮೂಲಕ ಲೋಹ ತಗಡಿನ ಕೆಲಸವನ್ನು ಪ್ರಾರಂಭಿಸಬೇಕೆಂದು ಉದ್ದೇಶಿಸಿ ತಮ್ಮ ತಂದೆಯವರಿಗೆ ಪತ್ರಬರೆದರಂತೆ. ಹಿತಚಿಂತಕರಾದ ರಾಮ ದಾಸಪ್ಪನವರ ಸಲಹೆಯನ್ನು ಅವರ ತಂದೆ ಕೇಳಲು ಹೋದ ಸಮಯದಲ್ಲಿ ರಾಮದಾಸಪ್ಪನವರು ಕ್ಷೌರ ಮಾಡಿಸಿಕೊಳ್ಳುತ್ತಿದ್ದರು. ಲೋಹ ತಗಡಿನ ಉದ್ಯಮವೆಂದರೆ, ಕ್ಷೌರಿಕನು ಇಟ್ಟುಕೊಂಡಿದ್ದ ನೀರಿನ ಬಟ್ಟಲನ್ನು ತೋರಿಸಿ, ಇಂಥಾದ್ದನ್ನು ತಯಾರು ಮಾಡುವುದು ಎಂದು ಹೇಳಿದರು. ತಂದೆ ಮಗನಿಗೆ ಈ ಉದ್ಯಮದಲ್ಲಿ ತೊಡಗುವುದು ಖಂಡಿತವಾಗಿ ಬೇಡ ಎಂದು ಬರೆದರು. "ಹೀಗೆ ನನ್ನ ಇಂಡಸ್ಟ್ರಿಯಲ್ ಕೆರಿಯರ್ ಹಾಳಾಗಿ ಹೋಯಿತು" ಎನ್ನುತ್ತಿದ್ದರು ಡಿ ವಿ ಜಿ.

ಕೆಲವು ಕಾಲ ಅವರು ಮುಳಬಾಗಿಲಿನಲ್ಲಿ ಬದಲಿ ಉಪಾಧ್ಯಾಯರಾಗಿ ಕೆಲಸ ಮಾಡುತ್ತಿದ್ದರು. ಆಗ ಒಮ್ಮೆ ಕೋಲಾರದ ಡೆಪ್ಯುಟಿ ಕಮಿಷನರ್ ಆಗಿ ಕೆಲಸ ಮಾಡುತ್ತಿದ್ದ ಕೆ. ಪಿ. ಪುಟ್ಟಣ್ಣ ಶೆಟ್ಟರವರು ಇವರ ಶಾಲೆಗೆ ಬಂದಿದ್ದರು. ಡಿ ವಿ ಜಿ ಯವರು ನಡಸುತ್ತಿದ್ದ ತರಗತಿಗೆ ಬಂದು ಏನೋ ಪ್ರಶ್ನೆ ಕೇಳಿದರು. ಇವರು ಕೊಟ್ಟ ಉತ್ತರದಿಂದ ಸಂತೋಷಗೊಂಡು, ಸ್ಕೂಲಿನ ವಿಸಿಟರ್ಸ್ ಬುಕ್ಕಿನಲ್ಲಿ ತಮ್ಮ ಮೆಚ್ಚಿಕೆಯ ಮಾತನ್ನು ಬರೆದರು. ಅದು ಊರಲ್ಲೆಲ್ಲ ಕೋಲಾಹಲವನ್ನೇ ಎಬ್ಬಿಸಿತು. ಈ ಸಮಯವನ್ನು ಉಪಯೋಗಿಸಿಕೊಂಡು, ಡೆಪ್ಯುಟಿ ಕಮಿಷನರ ಮೂಲಕ ಮಗನಿಗೆ ಒಂದು ಕೆಲಸ ಗಿಟ್ಟಿಸಬೇಕೆಂದು ತಂದೆ ಯೋಚಿಸಿದರು. ಡಿ ವಿ ಜಿ ಯವರು ಸರಕಾರಿ ಚಾಕರಿ ಬೇಡವೆಂದು ಹಠ ಹಿಡಿದರು. ಅದಕ್ಕೆ ತಿರುಗಿ ಚರ್ಚೆ ನಡೆದು, ಹಿರಿಯರ

ಮಾತಿಗೆ ಒಪ್ಪಿಗೆಯಿತ್ತರೂ ಇನ್ನೊಂದು ತಕರಾರು ಹುಟ್ಟಿಕೊಂಡಿತು. ಸಾಹೇಬರನ್ನು ನೋಡಲು ಹೋಗುವಾಗ ತಲೆಗೆ ರುಮಾಲನ್ನು ಧರಿಸಿಕೊಂಡು ಹೋಗಲು ಡಿ ವಿ ಜಿ ಯವರು ನಿರಾಕರಿಸಿದರು. ಈ ಸಮಸ್ಯೆಗೆ ಪರಿಹಾರ ವಾಗಿ ಬೀದಿಯಲ್ಲಿ ಹೋಗುವಾಗ ರುಮಾಲು ಧರಿಸಬೇಕಾಗಿಲ್ಲವೆಂದೂ, ಸಾಹೇಬರ ಬಂಗಲೆ ತಲಪಿದ ಮೇಲೆ ತಲೆಯ ಮೇಲೆ ರುಮಾಲು ಬಂದರೆ ಸಾಕೆಂದೂ ತೀರ್ಮಾನವಾಯಿತು. ಇಷ್ಟೆಲ್ಲ ಆಗಿ ಅದರಂತೆ ಇವರು ಸಾಹೇಬರ ಬಂಗಲೆಗೆ ತಲಪುವ ವೇಳೆಗೆ ಅಹವಾಲುಗಳನ್ನು ಕೇಳುತ್ತಿದ್ದ ಸಾಹೇಬರು ತಮ್ಮ ಕೊಠಡಿಗೆ ಹೋಗಿಬಿಟ್ಟಿದ್ದರು. ಅವರನ್ನು ಕಾಣಲಾಗಲಿಲ್ಲ. ನಿರಾಸೆ ಗೊಂಡ ಅವರ ತಂದೆ "ಮುಖೇಡಿ, ದುರಹಂಕಾರಿ, ದೊಡ್ಡವರ ಮಾತಿನಲ್ಲಿ ಗೌರವವಿಲ್ಲದವನು, ತಲೆಹೋಕ ಮುಂಡೇದು, ಪೋಲಿಪುಂಡರ ಸಹವಾಸ" ಎಂದು ಮುಂತಾಗಿ ನಾಮಾರ್ಚನೆ ಮಾಡಿದರು.

ಆ ಕಾಲಕ್ಕೆ ಜನಪ್ರಿಯರಾಗಿದ್ದ ಸ್ಕೂಲ್ ಇನ್ಸ್‌ಪೆಕ್ಟರ್ ವೆಂಕಟಪತ ಯ್ಯಂಗಾರ್ ಅವರಲ್ಲಿ ಡಿ ವಿ ಜಿ ಯವರು ಸರಕಾರಿ ಚಾಕರಿಗೆ ಸೇರುವುದಿಲ್ಲವೆಂಬ ಹಠವನ್ನು ಹೇಳುವುದೆಂದೂ ಅವರು ತೀರ್ಮಾನಿಸಿದಂತೆ ನಡೆದುಕೊಳ್ಳುವು ದೆಂದೂ ಒಂದು ಒಪ್ಪಂದಕ್ಕೆ ಬಂದರು. ಡಿ ವಿ ಜಿ ಯವರಾದರೋ ಹೊರ ನೋಟಕ್ಕೆ ಒಪ್ಪಿಗೆ ಕೊಟ್ಟಿದ್ದರೂ, "ಅವರು ಏನಾದರೂ ಹೇಳಲಿ, ನನ್ನ ತೀರ್ಮಾನ ನನ್ನದು" ಎಂದು ಮನಸ್ಸನ್ನು ಗಟ್ಟಿ ಮಾಡಿಕೊಂಡಿದ್ದರಂತೆ. ವೆಂಕಟಪತಯ್ಯಂಗಾರ್ಯರಾದರೋ ಎಲ್ಲವನ್ನೂ ಕೇಳಿ "ವೆಂಕಟರಮಣ, ನಿನಗೇಕೋ ಚಿಂತೆ. ತನ್ನ ಜೀವನ ತಾನು ಸಂಪಾದಿಸಿಕೊಳ್ಳುತ್ತೇನೆಂದು ಅವನು ಹೇಳುತ್ತಿದ್ದಾನೆ. ಹಾಗೆಯೇ ಮಾಡಲಿ ಬಿಡು" ಎಂದು ಬಿಟ್ಟರು. ಹೀಗಾಗಿ ಡಿ ವಿ ಜಿ ಯವರ ಹಠವೇ ಗೆದ್ದಿತು.

"ನಾನು ಸಾರ್ವಜನಿಕ ಕ್ಷೇತ್ರದಲ್ಲಿ ಅಷ್ಟಿಷ್ಟು ಹೆಣಗಾಡಿದ್ದೇನಷ್ಟೆ. ಇದಕ್ಕೆ ಕಾರಣಕರ್ತರಾದವರು ವೆಂಕಟಪತಯ್ಯಂಗಾರ್ಯರು" ಎಂದು ಅವರನ್ನು ಕೃತಜ್ಞತೆಯಿಂದ ಸ್ಮರಿಸಿಕೊಂಡಿದ್ದಾರೆ.

ಆದರೂ ಕೆಲಸಕ್ಕಾಗಿ ಪರದಾಟ ಮುಗಿಯಲಿಲ್ಲ. ಜೀವನೋಪಾಯಕ್ಕೆ ಉದ್ಯೋಗ ಬೇಕಲ್ಲ. ಲೈಫ್ ಇನ್ಶೂರೆನ್ಸ್ ಏಜೆಂಟಾದರೆ ಹೇಗೆ? ಕೆಲವು ಸ್ನೇಹಿತರು ನಿರುತ್ಸಾಹ ಮಾಡಿದರು. ಪೋಸ್ಟ್ ಆಫೀಸಿನ ಅವಕಾಶವನ್ನು ಚಿಂತಿಸಿದರಂತೆ. ಪುರೋಹಿತನಾಗಿ ಯಾಕೆ ಆಗಬಾರದು ? ಪಟೇಲಗಿರಿ ಹೇಗೆ ? ಯಾವುದೂ ಮನಸ್ಸಿಗೆ ಒಪ್ಪಿಗೆಯಾಗಲಿಲ್ಲ.

ಮುಂದೆ ಬೆಂಗಳೂರಿಗೆ ಬಂದಾಗಲೂ ಕೆಲಸಕ್ಕಾಗಿ ಹುಡುಕಾಟ ಮುಂದುವರಿಯಿತು. ಬಣ್ಣದ ತಯಾರಿಕೆಗಾಗಿ ಪ್ರಯತ್ನ ಪಟ್ಟು ಇದ್ದ ಪ್ರತಿಕಾಸನ್ನೂ ಕಳೆದುಕೊಂಡರಂತೆ. ಸಾಬೂನಿನ ತಯಾರಿಕೆಯ ಪ್ರಯತ್ನವೂ ಆಯಿತು. ಸಾಬೂನು ತಯಾರಿಕೆಯ ವ್ಯಾಜದಲ್ಲಿ ಬಾಂಬುಗಳ ತಯಾರಿಕೆಯ ಪ್ರಯತ್ನ. ಇವಕ್ಕೆ ಗುರು ಉತ್ತರ ದೇಶದ ಯಾವುದೋ ಕ್ರಾಂತಿಕಾರ. ಇದು ಯಾವುದೂ ಕೆಲಸಕ್ಕೆ ಬರಲಿಲ್ಲ.

ಬೆಂಗಳೂರಿನಲ್ಲಿ ಕೆಲಸಕ್ಕಾಗಿ ಬೀದಿ ಬೀದಿ ಸುತ್ತಿದರು. ಇವರ ಚಿಕ್ಕ ಮಾವ ಇವರನ್ನು ಸರಕಾರಿ ಪ್ರೆಸ್ಸಿನ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಆಗಿದ್ದ ಡಿ. ಬಿ. ರಾಮಚಂದ್ರ ಮೊದಲಿಯಾರ್ ಅವರ ಬಳಿ ಕಳುಹಿಸಿದರು. ಇವರ ಕುಟುಂಬದ ಜನರನ್ನು ಬಲ್ಲ ಅವರು, “ಇಲ್ಲಿ ನಿನಗೆ ತಕ್ಕ ಚಾಕರಿ ಯಾವುದೂ ಇಲ್ಲ” ಎಂದುಬಿಟ್ಟರು. ಆಗ ಇವರು, “ಬಿಡಿ ಸಾರ್. ಪರವಾಗಿಲ್ಲ. ಅನ್ನ ಹಾಕುವವನು ದೇವರು” ಎಂದು ಹೇಳಿಬಿಟ್ಟರು.

“1905–6 ರಲ್ಲಿ ನಾನು ಬೆಂಗಳೂರಿಗೆ ಬಂದದ್ದು ಚಾಕರಿ ಸಂಪಾದಿಸುವುದಕ್ಕೋಸ್ಕರ;” “ಪತ್ರಿಕಾವೃತ್ತಿ ನಾನು ಆರಿಸಿಕೊಂಡ ಕಸಬಲ್ಲ. ಅದು ನನ್ನ ಪಾಲಿಗೆ ಸಂದರ್ಭ ನಿರ್ಬಂಧದಿಂದ ಬಂದದ್ದು;” “ಬೇರೆ ವೃತ್ತಿ ಯಾವುದೂ ಇಲ್ಲ. ಇದರಲ್ಲೇ ನಿನಗೆ ಅನ್ನ, ಅಂತ ವಿಧಿ ತೋರಿಸಿದಹಾಗೆ ನನಗನ್ನಿಸುತ್ತದೆ. ಆದ್ದರಿಂದ ನಾನಿದಕ್ಕೆ ಬಂದಿದ್ದೇನೆ;” “ನನಗೆ ಎಲ್ಲಿಯಾದರೂ ಮಾಹೆಯಾನ 12–15 ರೂಪಾಯಿನ ತಲಬಿನ ಮೇಲೆ ಚಾಕರಿ ದೊರೆತಿದ್ದಿದ್ದರೆ ನಾನು ಎಷ್ಟೋ ನೆಮ್ಮದಿಯಾಗಿರುತ್ತಿದ್ದೆನೆಂದು ನನಗೆ ಈಗಲೂ ಅನ್ನಿಸುತ್ತದೆ;”— ಎಂದು ಡಿ ವಿ ಜಿ ಯವರು ತಾವು ವೃತ್ತಪತ್ರಿಕಾ ಪ್ರಪಂಚಕ್ಕೆ ಬಂದದ್ದಕ್ಕೆ ಕಾರಣವನ್ನು ಹೇಳಿದ್ದಾರೆ.

ಆದರೆ ಕೇವಲ ಚಾಕರಿಗಾಗಿಯೇ ಆಗಿದ್ದರೆ ಪುಟ್ಟಣ್ಣ ಶೆಟ್ಟರನ್ನು ನೋಡಲು ಹೋಗಲು ಅಷ್ಟು ರಾದ್ಧಾಂತ ಏಕೆ ಮಾಡಬೇಕಾಗಿತ್ತು; ವೆಂಕಟವರದಯ್ಯಂಗಾರ್ಯರ ಹಿತವಾದವನ್ನು ಕೇಳಬಹುದಿತ್ತಲ್ಲ. ಕೋಲಾರದಲ್ಲಿಯೇ ಕೆಲಸದಲ್ಲಿ ಮುಂದುವರೆಯಬಹುದಿತ್ತಲ್ಲ.

ಇದರ ಇಂಗಿತವೇ ಬೇರೆಯಿರಬಹುದು ಎನ್ನಿಸುತ್ತದೆ.

ಆ ವೇಳೆಗಾಗಲೇ ದೇಶದ ಸ್ಥಿತಿಗತಿಗಳನ್ನು ಕುರಿತು ರಾಮಮೋಹನ ರಾಯ್, ಸ್ವಾಮಿ ವಿವೇಕಾನಂದರು, ಕಾಂಗ್ರೆಸ್ ಅಧ್ಯಕ್ಷರುಗಳು, ದೇಶಾಭಿಮಾನಿಗಳಾದ ವೃತ್ತಪತ್ರಿಕೆಗಳು ಬರೆದಿದ್ದುದನ್ನು ಓದಿ, ಅವರ ಬಗ್ಗೆ

ವ· ಶಿ

, ವೇದಾಂತ ಸಾರ್ವಜನಿಕ ವಿಚಾರಗಳಲ್ಲಿ ಆಸಕ್ತಿ ಬ್ಬನು, ಅದರಲ್ಲೂ ಅಸಾಧಾರಣ ಬುದ್ಧಿಶಕ್ತಿಯನ್ನು ಯು ಚಿಕ್ಕ ಚಾಕರಿಯಲ್ಲಿ ಜೀವನೋಪಾಯವನ್ನು ಕಂಡು , ತೃಪ್ತನಾಗುತ್ತಿದ್ದನೆಂದು ನಂಬುವುದು ಕಷ್ಟ. ನಿಜ. ತತ್ಕ್ಷಣದ ಅನ್ನವಸತಿಗಳಿಗಾಗಿ ಒಂದು ದಾರಿ ಹುಡುಕುತ್ತಾ ಇದ್ದಿರಬಹುದು. ಆದರೆ ಆ ಜೀವದ ಒಲವು ಇದ್ದದ್ದು ಬೇರೆ ಕಡೆ. "ಪ್ರಕೃತಿಸ್ತ್ವಾಂ ನಿಯೋಕ್ಷ್ಯತಿ" ಎಂಬ ಭಗವದ್ವಾಕ್ಯಕ್ಕೆ ಉದಾಹರಣೆಯಾಗಿ ಪ್ರಕೃತಿ ಅವರನ್ನು ಬೇರೆಯ ದಾರಿ ಹಿಡಿಯಲು ಪ್ರೇರೇಪಿಸುತ್ತಿತ್ತು.

ಡಿ ವಿ ಜಿ ಯವರ ಆ ಒಲವಿನ ಕಾರಣವನ್ನು ತಿಳಿಯಬೇಕಾದರೆ ನಮ್ಮ ದೇಶದ ಚರಿತ್ರೆಯ ಒಂದು ಹಿನ್ನೋಟವೂ, ಅವರ ಕಾಲದ ಪರಿಸ್ಥಿತಿಯ ಪರಿಚಯವೂ, ಅಗತ್ಯ. ಅದನ್ನು ಕುರಿತು ಸ್ಥೂಲವಾಗಿ ಇಲ್ಲಿ ತಿಳಿದುಕೊಳ್ಳ ಬಹುದು.

ಎಲ್ಲ ದೇಶಗಳ ಚರಿತ್ರೆಯಲ್ಲಿ ಉಚ್ಛ್ರಾಯದ ಕಾಲವೊಂದು ಅವನತಿಯ ಕಾಲವೊಂದು ಇರುತ್ತದೆ. ಪ್ರಪಂಚದ ಅನೇಕ ನಾಗರಿಕತೆಗಳಲ್ಲಿ ಇದು ಹೇಗೆ ಕಂಡು ಬರುತ್ತದೆ ಎಂಬುದನ್ನು ಆರ್ನಾಲ್ಡ್ ಟಾಯಿನ್‌ಬೀ ಎಂಬ ಪ್ರಸಿದ್ಧ ಚರಿತ್ರಕಾರನು ವಿಸ್ತಾರವಾಗಿ ಹೇಳಿದ್ದಾನೆ. ಭಾರತದ ಚರಿತ್ರೆಯಲ್ಲಿಯೂ ಒಂದು ಕತ್ತಲೆಯ ಯುಗವನ್ನು, ನಿದ್ದೆಯಿಂದ ಭಾರತ ಎಚ್ಚೆತ್ತ ಸಮಯವನ್ನು ನಾವು ಗುರುತಿಸಬಹುದು.

ವೇದಕಾಲದ ಮಹರ್ಷಿಗಳು ಕಂಡದ್ದನ್ನೂ ಕೇಳಿದ್ದನ್ನೂ ಉಪನಿಷತ್ತು ಗಳೂ, ಭಗವದ್ಗೀತೆಯೂ ವಿಮರ್ಶಿಸುವುದನ್ನು ನಾವು ಕಾಣುತ್ತೇವೆ. ಬೌದ್ಧ, ಜೈನ, ನ್ಯಾಯ, ವೈಶೇಷಿಕ ದರ್ಶನಗಳು ಈ ವಿಮರ್ಶೆಯನ್ನು ಇನ್ನೂ ಮುಂದಕ್ಕೆ ಒಯ್ಯುತ್ತವೆ. ಹಾಗೆಯೇ ವೇದದ ಉಪಾಂಗಗಳಾಗಿ ವಿಜ್ಞಾನದ ವಿವಿಧ ಶಾಖೆ ಗಳು ಬೆಳೆಯುವುದನ್ನೂ ನಾವು ಕಾಣುತ್ತೇವೆ. ಆದರೆ ಭಾರತದ ಮೇಲೆ ಪರಕೀಯರ ಧಾಳಿ ಮೊದಲಾದಾಗ ಗ್ರೀಕರು, ಕುಶಾನರು, ಹೂಣರು ಮುಂತಾದ ವರು ದೇಶದ ಕೆಲವು ಭಾಗಗಳನ್ನು ಆಕ್ರಮಿಸಿಕೊಂಡರೂ ಹಿಂದೂ ಸಂಸ್ಕೃತಿ ಅವರನ್ನು ತನ್ನಲ್ಲಿ ಅಡಗಿಸಿಕೊಂಡುಬಿಟ್ಟಿತು. ಆದರೆ ಇಸ್ಲಾಮಿನ ಪಂಗಡಕ್ಕೆ ಸೇರಿದ ಜನ ಭಾರತದ ಕೆಲವು ಭಾಗಗಳನ್ನು ಆಕ್ರಮಿಸಿಕೊಂಡಾಗ ಈ ಎರಡು ನಾಗರಿಕತೆಗಳು ಮತಗಳು ಹೆಚ್ಚು ಕಡಿಮೆ ಭಿನ್ನವಾಗಿಯೇ ಉಳಿದವು. ಯಾವಾಗ ರಾಜಕೀಯವಾಗಿ ಭಾರತ ಸ್ವಾತಂತ್ರ್ಯವನ್ನು ಕಳೆದುಕೊಂಡಿತೋ, ಆಗ, ತನ್ನ

ಉಳಿವಿಗೇ ಧಕ್ಕೆ ಬಂದಾಗ, ಇದ್ದದ್ದನ್ನು ಕಾಪಾಡಿಕೊಂಡು ಬರುವ ಕೆಲಸವೇ ಅವಕ್ಕೆ ಮುಖ್ಯವಾಗಿ ಹೋಯಿತು. ಜನರಲ್ಲಿ ಜ್ಞಾನಕುತೂಹಲ ಕುಂಠಿತವಾಗಿ ಹೋಯಿತು. ಇತರ ನಾಗರಿಕತೆಗಳೊಡನೆ ಭಾರತದ ಸಂಬಂಧವೂ ತಪ್ಪಿ ಹೋಯಿತು. ಆದರಿಂದ ಹೊಸ ವಿಚಾರಗಳ ಸಂಪರ್ಕ ತಪ್ಪಿಹೋಯಿತು. ಹೀಗಾಗಿ ನಮ್ಮ ದೇಶದಲ್ಲಿ 19ನೆಯ ಶತಮಾನದವರೆಗಿನ ಒಂದು ಸಾವಿರ ವರ್ಷಗಳ ಕಾಲವನ್ನು ಕತ್ತಲೆಯ ಯುಗವೆಂದು ಕರೆಯಬಹುದು. ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ, ರಾಷ್ಟ್ರಕೂಟ, ಚಾಳುಕ್ಯ ಮನೆತನಗಳ ಆಳ್ವಿಕೆಯ ಕಾಲದಲ್ಲಿ, ಮಹಾರಾಷ್ಟ್ರರ ಉಚ್ಛ್ರಾಯದಲ್ಲಿ ಕೆಲವು ಮೊಗಲ್ ರಾಜರ ಕಾಲದಲ್ಲಿ ಸಾಹಿತ್ಯ, ಶಿಲ್ಪ, ಧರ್ಮಶಾಸ್ತ್ರ, ಮುಂತಾದುವುಗಳಲ್ಲಿ ಸ್ವಲ್ಪ ಕೆಲಸ ನಡೆದಿದ್ದರೂ, ಒಟ್ಟಿನಲ್ಲಿ ಆ ರಾಜ್ಯಗಳು ತಮ್ಮ ಉಳಿವಿಗೋಸ್ಕರವಾಗಿಯೇ ತಮ್ಮ ಸಮಯಗಳೆಲ್ಲವನ್ನೂ ಉಪಯೋಗಿಸಬೇಕಾಗಿ ಬಂದುದರಿಂದ ಬೌದ್ಧಿಕ ಬೆಳವಣಿಗೆಗೆ ಹೆಚ್ಚು ಅವಕಾಶವಾಗಲಿಲ್ಲವೆನ್ನಬಹುದು.

ಇದನ್ನು ಕುರಿತು ಡಾ|| ಎಸ್. ರಾಧಾಕೃಷ್ಣನ್ ಅವರು ಹೇಳಿರುವ ಮಾತುಗಳು ಗಮನಾರ್ಹವಾದವು :

"The Mohammadan conquest with its propogandist work and later the christian missionary movement attempted to shake the stability of Hindu Society and in an age deeply coscious of instability, authority naturally became the rock on which alone it seemed that social safety and ethical order could be reared The Hindu, in face of the clash of cultures fortified himself with conventions and barred all entry to invading ideas. There were no longer any thinkers but only scholars who refused to strike new notes and were content to raise echoes of the old call" *(Indian Philosophy)*

ಈ ಪರಿಸ್ಥಿತಿಯಿಂದಾದ ಪರಿಣಾಮವನ್ನೇ "ಮರುಳ ಮುನಿಯನ ಕಗ್ಗ" ಹೀಗೆ ವಿಶ್ಲೇಷಿಸುತ್ತದೆ :

ಆದಿ ಕವಿಗಳ ವಿಶ್ವಸತ್ಯದೃಷ್ಟಿಯಿನೊಗೆದ |
ವೇದ ನದಿ ಮೂರು ಕವಲಾಯ್ತು ಟೀಕೆಗಳಿಂ ||
ರೋದಿಸುವ ವೈರಾಗ್ಯ, ಬೋಧೆಯುಗಲಿದ ಕರ್ಮ |
ವಾದದೊಣರಗಳೆಯವು — ಮರುಳ ಮುನಿಯ ||

ಹೀಗೆ ಗತಿರಹಿತವಾಗಿಹೋಗಿದ್ದ, ತನ್ನ ಅಂತಸ್ಸತ್ವವನ್ನು ಕಳೆದು ಕೊಂಡಿದ್ದ, ತನ್ನನ್ನೇ ಮರೆತುಕೊಂಡಿದ್ದ ಭಾರತಕ್ಕೆ ಬಂದರು ಬ್ರಿಟಿಷರು.

ವ್ಯಾಪಾರಕ್ಕಾಗಿ ಬಂದ ಪರಂಗಿಯವರು ದೇಶದ ಆಡಳಿತಗಾರರಾದದ್ದು ವಿಧಿವಿಲಾಸ. ಅದರಿಂದ ಕೆಲವು ಅಂಶಗಳಲ್ಲಿ ಭಾರತಕ್ಕೆ ಹಿತವಾದರೂ ಅದ ರಿಂದಾದ ಹಾನಿಗೇನೂ ಕಡಮೆಯಿಲ್ಲ.

ಪಾಶ್ಚಾತ್ಯ ವಿದ್ವಾಂಸರು ನಮ್ಮಲ್ಲಿನ ಸಂಸ್ಕೃತ ಮತ್ತು ಇತರ ದೇಶಭಾಷೆ ಗಳಲ್ಲಿದ್ದ ಗ್ರಂಥಗಳನ್ನು ಹುಡುಕಿ, ಅವುಗಳನ್ನು ಸಂಪಾದಿಸಿ, ಮುದ್ರಿಸಿ, ಅವು ಗಳಲ್ಲಿ ಕೆಲವನ್ನು ಯೂರೋಪಿನ ಭಾಷೆಗಳಿಗೆ ಭಾಷಾಂತರಿಸಿ ಅವುಗಳ ಸ್ವಾರಸ್ಯವನ್ನು ಎತ್ತಿ ತೋರಿಸಿದಾಗ ಭಾರತೀಯರಿಗೆ ಭಾರತೀಯತೆಯ ಹೆಚ್ಚು ಗಾರಿಕೆ ಅರಿವಿಗೆ ಬಂತು. ಆಂಜನೇಯನಿಗೆ ಜಾಂಬವಂತನು ಅವನ ಶಕ್ತಿಗಳನ್ನು ನೆನಪು ಮಾಡಿಕೊಟ್ಟು ಎಚ್ಚರಗೊಳಿಸಿದಂತೆ ಈ ಸಾಹಿತ್ಯಲೋಕದ ಚಟುವಟಿಕೆ ನಮ್ಮ ಹೊಸ ಹುಟ್ಟಿಗೆ ನಾಂದಿಯಾಯಿತು.

ನಮ್ಮ ದೇಶಕ್ಕೆ ಮಬ್ಬು ಕವಿದಿದ್ದ ಕಾಲದಲ್ಲಿ ಹುಟ್ಟಿದ ಮೂಢನಂಬಿಕೆ ಗಳನ್ನೂ, ಸತಿ ಮುಂತಾದ ಕ್ರೂರ ಸಂಪ್ರದಾಯಗಳನ್ನೂ, ಅನಕ್ಷರತೆಯನ್ನೂ ಹೋಗಲಾಡಿಸುವ ಪ್ರಯತ್ನಗಳು ನಡೆದದ್ದು ಪಾಶ್ಚಾತ್ಯ ಸಂಪರ್ಕದ ದೆಸೆ ಯಿಂದ. ಪಾಶ್ಚಾತ್ಯ ರಾಜಕೀಯ ತತ್ತ್ವಗಳೂ, ತತ್ತ್ವಶಾಸ್ತ್ರದ ಚಿಂತನೆ ಗಳೂ, ವಿಜ್ಞಾನದ ಅನ್ವೇಷಣ ರೀತಿಯೂ, ಸಾಮಾಜಿಕ ದರ್ಶನಗಳೂ ನಮ್ಮ ದೇಶದ ಜನರ ಬುದ್ಧಿಗಳನ್ನು ಪ್ರಚೋದಿಸಿ ಒಂದು ನವೋದಯಕ್ಕೆ ಕಾರಣ ವಾದವು.

ಇದು ಒಂದು ಭಾಗ. ವ್ಯಾಪಾರಗಾರರಾಗಿದ್ದ ಪರಂಗಿಯವರು ನಮ್ಮವರೊಂದಿಗೆ ಮೊದಮೊದಲು ಸಲಿಗೆಯಿಂದ ಸಮಾನಸ್ಕಂದರಾಗಿ ನಡೆಯು ತ್ತಿದ್ದು ಆಡಳಿತಗಾರರಾದಾಗ, ತಾವು ಇಲ್ಲಿಯ ಜನಕ್ಕಿಂತ ಶ್ರೇಷ್ಠರು ಎಂದು ತೋರಿಸಿಕೊಳ್ಳಲಾರಂಭಿಸಿದರು. ಅವರ ಯಂತ್ರಶಕ್ತಿಯ ನಾಗರಿಕತೆ, ಕ್ರೈಸ್ತ ಮಿಷನರಿಗಳ ಧಾಳಿ, ನಮ್ಮ ಜನರ ಮನಸ್ಸಿನಲ್ಲಿ ಒಂದು ಗೊಂದಲವನ್ನುಂಟು ಮಾಡಿತು. ಐಹಿಕ ಜೀವನದಲ್ಲಿ ಅವರ ಏಳಿಗೆಯನ್ನು ಕಂಡು ಅವರನ್ನು ಅನುಸರಿಸುವುದೇ ನಮಗಿರುವ ದಾರಿ ಎಂಬ ಮನೋಭಾವ ಹುಟ್ಟಿತು. ಅದೂ ಅಲ್ಲದೆ ನೂರಾರು ವರ್ಷಗಳ ಭಿನ್ನಮತೀಯರ ಕೋಟಲೆಯಿಂದ ತಪ್ಪಿಸಿ ಕೊಳ್ಳಲು, ಬ್ರಿಟಿಷರ ಆಡಳಿತ ದೈವ ತೋರಿಸಿದ ಮಾರ್ಗವೆಂದೇ ರಾಜಾ ರಾಮ ಮೋಹನ ರಾಯ್ ಅಂಥವರಿಗೂ ಕಂಡುಬಂತು.

ಹೀಗೆ 19ನೆಯ ಶತಮಾನ ನಮ್ಮ ದೇಶದ ಚರಿತ್ರೆಯಲ್ಲಿ ಒಂದು ಸಂಧಿ ಕಾಲ. ಒಂದು ಮುಖ್ಯವಾದ ಸಂಧಿಕಾಲ. ಪಾಶ್ಚಾತ್ಯ ಸಂಸ್ಕೃತಿಯ ಮೋಹಕ್ಕೆ ಒಳಗಾಗಿ ಎಲ್ಲ ವಿಷಯಗಳಲ್ಲಿಯೂ ಅವರನ್ನು ಅನುಸರಿಸುವ ಪಂಗಡ ಒಂದಿದ್ದರೆ ಪಾಶ್ಚಾತ್ಯ ಸಂಸ್ಕೃತಿಯ ಹಿನ್ನೆಲೆಯಲ್ಲಿ ನಮ್ಮ ಜೀವನ ರೀತಿಯನ್ನು ವಿಮರ್ಶಿಸಿ ಪರಿಷ್ಕಾರಪಡಿಸಬೇಕೆಂಬ ಮನೋಭಾವದ ಪಂಗಡ ಇನ್ನೊಂದು. ಸಾಮಾನ್ಯ ಜನಕ್ಕೆ ಇದರಿಂದ ಆದದ್ದು ಇನ್ನೂ ಹೆಚ್ಚಾದ ಮನಸ್ಸಿನ ಗೊಂದಲ.

ದೇಶವನ್ನು ಆಕ್ರಮಿಸಿಕೊಂಡಿದ್ದ ಪರಂಗಿಯವರಾದರೋ ಭಾರತದ ಜನ ಅನಾಗರಿಕರು, ಸತ್ಯವಂತರಲ್ಲ; ಅವರ ಮತಾಚಾರವೆಲ್ಲ ಮೂಢನಂಬಿಕೆಗಳ ಮೂಟೆ; ಇವರು ಆಳಲ್ಪಡಲು ಅರ್ಹರೇ ಹೊರತು ಸ್ವಾತಂತ್ರ್ಯಕ್ಕೆ ಅರ್ಹರಲ್ಲ; ಇವರ ಮತ, ಆಚಾರ, ಸಂಸ್ಕೃತಿ ಎಲ್ಲ ಕೀಳು ದರ್ಜೆಯದು; ಇವರಿಗೆ ನಾಗರಿಕತೆಯನ್ನು ತಿಳಿಸುವ ಭಾರವನ್ನು ಭಗವಂತನು ನಮ್ಮ ಮೇಲೆ ಹೊರಿಸಿದ್ದಾನೆ—ಎಂಬ ಮನೋಭಾವವನ್ನು ತಳೆದಿದ್ದವರು.

ಆಗ ಮೂರ್ತಿಪೂಜೆಯನ್ನು ಖಂಡಿಸುವ, ವೇದ ಪ್ರಾಮಾಣ್ಯವನ್ನು ಒಪ್ಪದ, ಸಮಾಜ ಸುಧಾರಣೆಯನ್ನು ಪ್ರೋತ್ಸಾಹಿಸುವ ಬ್ರಹ್ಮ ಸಮಾಜವೊಂದು ಕಡೆ, ವೇದಪ್ರಾಮಾಣ್ಯವನ್ನು ಅಂಗೀಕರಿಸಿ ಅಲ್ಲಿನ ಯಜ್ಞಯಾಗಾದಿಗಳಿಗೆ ಪ್ರಾಶಸ್ತ್ಯವನ್ನು ಕೊಟ್ಟ ಆರ್ಯಸಮಾಜವೊಂದು ಕಡೆ, ಹಿಂದೂಧರ್ಮವನ್ನೇ ಅಲ್ಲಗಳೆದ ಕ್ರೈಸ್ತ ಧರ್ಮವೊಂದು ಕಡೆ—ಹೀಗೆ ಮತ ವಿಚಾರದಲ್ಲಿ ಒಂದು ಚರ್ಚೆ ನಡೆಯುತ್ತಿತ್ತು. ಈ ಸಂದರ್ಭದಲ್ಲಿಯೇ ರಾಮಕೃಷ್ಣರು ಅವತರಿಸಿ ಸನಾತನ ಧರ್ಮದ ನಿರ್ಮಲ ವಿಚಾರಧಾರೆಗೆ ಕವಿದುಕೊಂಡಿದ್ದ ಮುಬ್ಬನ್ನು ತಮ್ಮ ಅನುಭವವೆಂಬ ಬೆಳಕಿನಿಂದ ತಳ್ಳಿ ಅದರ ನಿಜವಾದ ಸ್ವರೂಪವನ್ನು ತೋರಿಸಿದರು.

ಆದರೆ ಸಾಮಾನ್ಯ ಜನರಲ್ಲಿ "ಈ ಪ್ರಪಂಚ ಏನು ಶಾಶ್ವತ, ಇದು ನಶ್ವರ, ಎಲ್ಲ ನಮ್ಮ ಹಣೆಯ ಬರಹದಂತೆ ನಡೆಯುತ್ತದೆ, ಎಲ್ಲ ಅದೃಷ್ಟ. ಆದದ್ದರಿಂದ ನಮ್ಮ ಪ್ರಯತ್ನದಿಂದ ಏನೂ ಸಾಧ್ಯವಿಲ್ಲ" ಎಂಬ ನಿರಾಸೆಯ ಮನೋಭಾವ ಬೇರೂರಿತ್ತು. ಆದದ್ದರಿಂದಲೇ ನಮ್ಮ ಜನವನ್ನು ಅದೃಷ್ಟವಾದಿಗಳು, "ಫೇಟಲಿಸ್ಟ್ಸ್", ಪುರುಷ ಪ್ರಯತ್ನದಲ್ಲಿ ನಂಬಿಕೆಯಿಲ್ಲದವರು ಎಂದು ಕರೆದರು. ಜನಕ್ಕೆ ಜೀವನದಲ್ಲಿ ಜುಗುಪ್ಸೆ ಬರಲು ಕಾರಣ ಹಿಂದೂ ಮತವೇ ಎಂಬ ಅಪಖ್ಯಾತಿಯೂ ಬಂತು.

ವೇದದ ಋಷಿಗಳು "ಜೀವಾಮಶರದಶ್ಶತಂ, ನಂದಾಮ ಶರದಶ್ಶತಂ" ಎಂದು ಪ್ರಾರ್ಥಿಸಿದರು. ಆದರೆ ಸಾವಿರಾರು ವರ್ಷಗಳ ನಂತರ ಬಂದ ಅವರ ಸಂತತಿಯವರು "ಸಾಕುಮಾಡೋ ಜಲ್ಮ", "ಬದುಕಿನಲಿ ಸುಖವಿಲ್ಲ", "ಜನ್ಮ ದುಃಖಂ ಜರಾದುಃಖಂ ಜಾಯಾ ದುಃಖಂ" ಎಂದೂ "ಲೋಕಂ ಶೋಕಹತಂ ಚ ಸಮಸ್ತಂ" ಎಂದೂ ಗೋಳಾಡಿದರು.

ಈ ಪರಿಸ್ಥಿತಿಯನ್ನು ಕಂಡು ಅದನ್ನು ಕುರಿತು ಅಧ್ಯಯನ ಮಾಡಿ, ಚಿಂತಿಸಿದ ಯುವಕ ಡಿ ವಿ ಜಿ ಗೆ "ನಮ್ಮಲ್ಲಿರುವ ಯಾವ ಒಂದು ಲೋಪವನ್ನು ಮೊದಲು ಸರಿಪಡಿಸಿದರೆ ಉಳಿದೆಲ್ಲ ಕಷ್ಟ ನಿವಾರಣೆಯೂ ಸ್ವತಃವ ಆದೀತೋ ಆ ಆದಿ ಕಾರಣವನ್ನು ನಾವೀಗ ಹುಡುಕಬೇಕು" ಎಂದು ತೋರಿತು. ಅದನ್ನು ನಿರ್ದಾಕ್ಷಿಣ್ಯವಾಗಿ ಹುಡುಕುತ್ತ ಹೋಗಿ "ನಮ್ಮ ದುರವಸ್ಥೆಯ ಮೂಲಕಾರಣ ನಿಜವಾಗಿ ನಮ್ಮಲ್ಲಿ ಸಾಮಾನ್ಯವಾಗಿ ಬಂದಿರುವ ಸೋಲು ಮನಸ್ಸಿಂದೇ— ನಮ್ಮ ವಿವೇಕ ಶೂನ್ಯವಾದ ವಿರಕ್ತಿಯಿಂದೇ— ನಾವು ಒಪ್ಪಿಕೊಳ್ಳಬೇಕಾಗು ತ್ತದೆ" ಆದ್ದರಿಂದ ನಮಗೆ ಈಗ ಬೇಕಾದದ್ದು ಜೀವನೋತ್ಸಾಹ ಎಂಬ ನಿಶ್ಚಯಕ್ಕೆ ಬಂದರು.

ಎರಡನೆಯದಾಗಿ ಅವರು ಕಂಡದ್ದು ಮತ ವಿಚಾರಗಳಿಂದ ಭಿನ್ನವಾದ ಲೌಕಿಕ ವ್ಯವಹಾರ. ನಮ್ಮ ವ್ಯವಹಾರ ಜೀವನದಲ್ಲಿ ಸನಾತನ ಧರ್ಮದ ಉಪ ದೇಶದ ಯಾವ ಅಂಶವೂ ಆಚರಣೆಯಲ್ಲಿ ಕಾಣಬರುತ್ತಿರಲಿಲ್ಲ. ಮತದ ಪ್ರಪಂಚ ಬೇರೆ, ಅದು ಪರಕ್ಕಾಗಿ; ಲೌಕಿಕ ವ್ಯವಹಾರದ ಪ್ರಪಂಚ ಬೇರೆ, ಅದು ಇಹ ಕ್ಕಾಗಿ.

ಮೂರನೆಯದಾಗಿ ನಮ್ಮ ಜನ ಪರಕೀಯರ ಆಕ್ರಮಣದಿಂದ ಸ್ವಾತಂತ್ರ್ಯವನ್ನು ಕಳೆದುಕೊಂಡಿದ್ದುದೇ ಅಲ್ಲದೆ, ಆ ಸ್ವಾತಂತ್ರ್ಯಕ್ಕೆ ಅರ್ಹ ರಾಗಲು ಯಾವ ಪ್ರಯತ್ನವನ್ನೂ ಮಾಡುತ್ತಿರುವಂತೆ ತೋರಲಿಲ್ಲ.

ದೇಶದ ಈ ಸ್ಥಿತಿಯನ್ನು ಕಂಡ ಅವರಿಗೆ, ವಿವೇಕಾನಂದರ ಉಪನ್ಯಾಸ ಗಳ ಕಾಂಗ್ರೆಸ್ ಅಧ್ಯಕ್ಷರ ಭಾಷಣಗಳ ಪರಿಚಯವಿದ್ದ ಅವರಿಗೆ, ಈ ದುಃಸ್ಥಿತಿಯನ್ನು ಪರಿಹರಿಸಲು ತಾನೂ ಪ್ರಯತ್ನಪಡಬೇಕು ಎಂದು ಎನ್ನಿಸಿ ದರೆ ಆಶ್ಚರ್ಯವೇನು.

ಹೀಗಾಗಿ "ಯಾವ ತಿಳಿವಳಿಕೆ ನಮ್ಮ ಜನಕ್ಕಿದ್ದರೆ ಒಳ್ಳೆಯದಾದೀತೆಂದು ನನಗನ್ನಿಸಿತೋ ಅಂಥ ತಿಳಿವಳಿಕೆಯನ್ನು ನಾನು ಸಂಪಾದಿಸಿಕೊಂಡ, ಇತರರಿಗೆ ತಿಳಿಯಪಡಿಸಬೇಕು" ಎಂಬ ತೀರ್ಮಾನಕ್ಕೆ ಬಂದು, "ಯಾವ

ಲೋಕಪರಿಜ್ಞಾನವೂ ಆಲೋಚನೆಯೂ ಜನ ಸಾಮಾನ್ಯರಲ್ಲಿ ಹರಡಿದರೆ ದೇಶಕ್ಕೆ ಪ್ರಯೋಜನವಾದೀತೆಂದು ತೋರುತ್ತದೆಯೋ, ಆ ಸಂಗತಿ ಸಮಾಲೋಚನೆಗಳನ್ನು ಜನತೆ ಲಾಲಿಸುವ ರೀತಿಯಲ್ಲಿ ಹೇಳುವುದು ಪತ್ರಿಕೋದ್ಯೋಗಿಯ ಆಶಯ" ಎಂಬ ಅಭಿಪ್ರಾಯದಿಂದ ಅವರು ಪತ್ರಿಕೋದ್ಯೋಗಕ್ಕೆ ಬಂದರು.

ಮುಖ್ಯವಾಗಿ ಅವರು ಪ್ರಚಾರಕರು. ಜೀವನೋತ್ಸಾಹ, ಆತ್ಮವಿಸ್ತರಣಾಭ್ಯಾಸ, ಪ್ರಜಾಸರಕಾರಕ್ಕಾಗಿ ಸಿದ್ಧತೆ — ಇವುಗಳನ್ನು ಕುರಿತು ಜನಕ್ಕೆ ತಿಳಿವಳಿಕೆ ಕೊಡುವುದೇ ಅವರ ಜೀವಿತ ಧ್ಯೇಯವಾಯಿತು. ಪತ್ರಿಕೋದ್ಯೋಗ ಈ ಪ್ರಚಾರಕ್ಕೆ ಅನುಕೂಲವಾದ ಸಾಧನವಾಯಿತು. ಆದ್ದರಿಂದಲೇ ಅವರು "ಈ ಅರವತ್ತು ವರ್ಷವೂ ನಾನು ಮಾಡಿರುವುದು ಅದೊಂದು (ಪತ್ರಿಕಾವೃತ್ತಿ) ಉದ್ಯೋಗವನ್ನೇ. ನಾನು ಬರೆದಿರುವುದು ಏನಾಗಲಿ, ಎಂಥಾದ್ದಾದರಾಗಲಿ, ವಿಷಯ ರಾಜಕೀಯವಾಗಲಿ ತತ್ತ್ವಶಾಸ್ತ್ರವಾಗಲಿ, ಸಾಹಿತ್ಯವಾಗಲಿ, ಪದ್ಯರೂಪದ್ದಾಗಲಿ, ಭಾಷಾರೂಪದ್ದಾಗಲಿ; ಲೆಜಿಸ್ಲೇಟಿವ್ ಮೊದಲಾದ ಸಭೆಗಳಲ್ಲಿ ಮಾಡಿದ್ದಾಗಲಿ, ಇತರ ಸಾರ್ವಜನಿಕ ಸನ್ನಿವೇಶಗಳದ್ದಾಗಲಿ, ಅದೆಲ್ಲ ಪತ್ರಿಕೋದ್ಯೋಗದ ಒಂದಾನೊಂದು ಪ್ರಕಾರವೇ ಹೊರತು ಬೇರೆಯಲ್ಲ" ಎಂದು ಹೇಳಿಕೊಂಡಿರುವುದು.

ಪತ್ರಿಕೋದ್ಯೋಗದ ಪ್ರಾರಂಭ

ಹೀಗೆ ತಮ್ಮ ಧ್ಯೇಯ ಸಾಧನೆಗಾಗಿ ಅವರು ತಾವಾಗಿ ಆರಿಸಿಕೊಂಡದ್ದು ಪತ್ರಿಕೋದ್ಯೋಗ.

ಬೆಂಗಳೂರಿಗೆ ಅವರು ಸುಮಾರು 1907 ರ ಪ್ರಾರಂಭದ ದಿನಗಳಲ್ಲಿ ಬಂದಿದ್ದಿರಬಹುದು. ಆಗ ಇಲ್ಲಿ ಬಿ ನರಸಿಂಗರಾಯರೆಂಬರು ನಡಸುತ್ತಿದ್ದ "ಸೂರ್ಯೋದಯ ಪ್ರಕಾಶಿಕಾ" ಎಂಬ ಪತ್ರಿಕೆಯಲ್ಲಿ "ದಿವಾನ್ ವಿ ಪಿ ಮಾಧವ ರಾಯರು ಮೈಸೂರು ರಾಜ್ಯದ ಬೆಂಗಳೂರು, ಕೋಲಾರ ಜಿಲ್ಲೆಗಳನ್ನು ಬ್ರಿಟಿಷರಿಗೆ ಕೊಟ್ಟು, ಅದಕ್ಕೆ ಬದಲಾಗಿ ಬಳ್ಳಾರಿ, ಅನಂತಪುರ ಜಿಲ್ಲೆಗಳನ್ನು ತೆಗೆದುಕೊಳ್ಳುವ ತರದೂದು ನಡೆಸುತ್ತಿದ್ದಾರೆ. ಹೀಗೆ ಚಿನ್ನದ ನಾಡಿಗೆ ಬೆಂಗಾಡು ಕೊಂಪೆಯನ್ನು ತೆಗೆದುಕೊಳ್ಳುವುದಾಗುತ್ತದೆ" ಎಂಬ ಸುದ್ದಿ ಪ್ರಕಟವಾಯಿತು. ಇದರಿಂದ ಅಸಮಾಧಾನಗೊಂಡ ಸರಕಾರದ ಮುಖ್ಯ ಕಾರ್ಯದರ್ಶಿಯವರು ಪತ್ರಿಕೆಗೆ ಗುದ್ದಿ ಬೆನ್ನಪ್ಪಳಿಸುವ ಇಂಗ್ಲಿಷ್ ಪ್ರಕಟನೆ ಯನ್ನು ಹೊರಡಿಸಿದರು. ಅಷ್ಟರಲ್ಲಿ ಸೂರ್ಯೋದಯ ಪ್ರಕಾಶಿಕೆಯ ಒಡೆತನ ಅದು ಅಚ್ಚಾಗುತ್ತಿದ್ದ ನವರತ್ನ ಪ್ರೆಸ್ಸಿನ ಅನಂತರಾಯರ ಕೈಗೆ ಬಂದಿತ್ತು. ಸರಕಾರದವರ ಈ ಪ್ರಕಟನೆ ಹೊಸ ಒಡೆಯರ ಕಳವಳಕ್ಕೆ ಕಾರಣವಾಯಿತು. ಆಗ ಸರಕಾರಕ್ಕೆ ಉತ್ತರ ರೂಪವಾಗಿ ಆ ಪ್ರೆಸ್ಸಿಗೆ ಆಗಾಗ ಹೋಗುತ್ತಿದ್ದ ಡಿ ವಿ ಜಿ ಯವರು ನಾಲ್ಕು ಪಂಕ್ತಿ ಬರೆದು ಕೊಟ್ಟರು. ಅದನ್ನು ನೋಡಿದ ನಾಲ್ಕು ಮಂದಿ ಅದನ್ನು ಮೆಚ್ಚಿಕೊಂಡರು. ಅದರ ಫಲಿತಾಂಶವಾಗಿ ಅವರು ಸೂರ್ಯೋದಯ ಪ್ರಕಾಶಿಕಾ ಪತ್ರಿಕಾ ಕಛೇರಿಗೆ ದಾಖಲಾದರು.

ಇಷ್ಟರಲ್ಲಿ ಅಮೆರಿಕದಲ್ಲಿ ದಿಗ್ವಿಜಯವನ್ನು ಸಾಧಿಸಿದ್ದ ಸ್ವಾಮಿ ಅಭೇದಾ ನಂದರ ಸವಾರಿ ಬೆಂಗಳೂರಿಗೆ ಚಿತ್ತೈಸಿತು, ಆಗಸ್ಟ್ 1907 ರಲ್ಲಿ. ಆಗ ಅವರನ್ನು ಸ್ವಾಗತಿಸುವುದರಲ್ಲಿ ಇಂಗ್ಲಿಷ್ ಪದ್ಯವೊಂದನ್ನು ರಚಿಸಿ ತಮ್ಮ ಕಾಣಿಕೆಯನ್ನು ಸಮರ್ಪಿಸಬೇಕೆಂಬ ಹಂಬಲದಿಂದ ನಾಲ್ಕು ಪಂಕ್ತಿಗಳನ್ನು ಬರೆದರು. ಆ ಬಾಲಕೃತಿಯ ಯೋಗ್ಯತಾನಿರ್ಣಯ ಮಾಡಿಸುವ ವ್ಯಾಜದಲ್ಲಿ ಅವರಿಗೆ

ಲಂಡನ್ ಮಿಷನ್ ಹೈಸ್ಕೂಲಿನ ಹೆಡ್ಮಾಸ್ಟರು ಕೆ. ರಾಮಚಂದ್ರರಾಯರು, ಸೆಂಟ್ರಲ್ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿದ್ದ ಕೆ. ಎ. ಕೃಷ್ಣಸ್ವಾಮಿ ಅಯ್ಯರ್ ಮತ್ತು ಬಿ. ಎ. ಪಾಸ್‌ಮಾಡಿ ಬಿ. ಎಲ್. ಗೆ ವ್ಯಾಸಂಗ ಮಾಡುತ್ತಿದ್ದ ಎಂ. ಜಿ. ವರದಾಚಾರ್ ಇವರುಗಳ ಪರಿಚಯವಾಯಿತು. ಆ ಪದ್ಯಗಳನ್ನು ಅಚ್ಚುಮಾಡಿಸುವ ಸಮಯದಲ್ಲೇ ನವರತ್ನ ಪ್ರೆಸ್ಸಿಗೆ ಇವರು ಹೋದದ್ದು.

ಅದರ ಆಫೀಸು ಉದ್ದ ಎಂಟಡಿ, ಅಗಲ ಮೂರು ನಾಲ್ಕಡಿ. ಆಗ ಇವರು ಸಂಸಾರದೊಂದಿಗಿರಲಿಲ್ಲ. ಪ್ರತಿದಿನದ ಎರಡು ಹೊತ್ತಿನ ಫಲಹಾರ ಕಾಫಿಗಳು, ತಿಂಗಳಿಗೆ ಇಪ್ಪತ್ತು ರೂಪಾಯಿ ನಗದು—ಇದು ಅನಂತರಾಯರ ಭಾರ. ತಿಂಗಳಿಗೆ ನಾಲ್ಕು ಮುಖ್ಯ ಲೇಖನಗಳನ್ನು, ನಾಲ್ಕು ಕಾಲಂಗಳಷ್ಟು ಪುಡಿ ಲೇಖನಗಳನ್ನು ಒದಗಿಸುವುದು ಇವರ ಭಾರ. ಹೀಗೆ ಮೊದಲಾಯಿತು ಅವರ ಪತ್ರಿಕಾವೃತ್ತಿ.

ಹಾಗೆಯೇ ಕಂಟೋನ್ಮೆಂಟಿನಲ್ಲಿ ನಡೆಯುತ್ತಿದ್ದ 'ಈವಿನಿಂಗ್ ಮೆಯಿಲ್' ಪತ್ರಿಕೆಗೆ ವಾರವಾರವೂ ಎರಡೆರಡು ಸಣ್ಣ ಲೇಖನಗಳನ್ನು ಕೊಟ್ಟು ತಿಂಗಳಿಗೆ ಎಂಟು ರೂಪಾಯಿ ಗಿಟ್ಟಿಸಿಕೊಳ್ಳುತ್ತಿದ್ದರು. ಈ ಸಂಪಾದನೆಯಲ್ಲೇ ಅವರು ತಮ್ಮ ತಂದೆಗೆ ತಿಂಗಳಿಗೆ ಆರೇಳು ರೂಪಾಯಿಗಳನ್ನು ಕಳುಹಿಸುತ್ತಿದ್ದರು.

ತಮಗೆ ಬೇಕಾದ ವಿಷಯ ಸಂಗ್ರಹಕ್ಕಾಗಿ ಹತ್ತಾರು ಕಛೇರಿಗಳಿಗೆ ಹೋಗಿ ಹಲ್ಲು ಕಿರಿಯಬೇಕಾಯಿತು. ಮತ್ತು ಪ್ರೆಸ್ಸಿನಲ್ಲಿ ಮೊಳೆ ಜೋಡಿಸುವುದರಿಂದ ಮೊದಲಾಗಿ, ಅಡ್ರಸ್ ಬರೆದು, ಕಾಗದಗಳನ್ನು ಸುತ್ತಿ ಅದರ ಮೇಲೆ ಸ್ಟಾಂಪ್ ಮೆತ್ತುವುದರವರೆಗೆ ಎಲ್ಲ ಕೆಲಸಗಳ ಅನುಭವವೂ ಅವರಿಗಾಯಿತು.

1907ರ ಕಡೆಯ ಭಾಗದಲ್ಲಿ "ಸೂರ್ಯೋದಯ ಪ್ರಕಾಶಿಕೆ"ಯು ಅಸ್ತಂಗತವಾಯಿತು. ಆ ಪತ್ರಿಕೆ ನಡಸಿದ್ದರಿಂದ ಅನಂತರಾಯರಿಗೆ ಆದದ್ದು ಕೊಂಚ ದ್ರವ್ಯನಷ್ಟ, ಬೇಸರ. "ನನಗಾದದ್ದು ಬಾಲ ವಿದ್ಯಾ ವ್ಯಾಯಾಮ" ಎನ್ನುತ್ತಾರೆ ಡಿ ವಿ ಜಿ.

ಅದಾದ ಕೆಲವು ತಿಂಗಳುಗಳಾದ ಮೇಲೆ ನವರತ್ನ ಕೃಷ್ಣಸ್ವಾಮಿಯೂ ಇವರೂ ಸೇರಿ "ಭಾರತಿ" ಎಂಬ ಕನ್ನಡ ದಿನಪತ್ರಿಕೆಯನ್ನು ಆರಂಭಿಸಿದರು. ಇದರಲ್ಲಿಯೂ ಇವರ ಜವಾಬ್ದಾರಿ ಹಣಕ್ಕೆ ಸಂಬಂಧಪಟ್ಟದ್ದಲ್ಲ. ಕಾಗದವನ್ನು ಮಸಿ ಮಾಡುವಷ್ಟು ಮಾತ್ರ ಇವರ ಪಾಲು. ಈ ಪತ್ರಿಕೆಯನ್ನು

ಕುರಿತು ದ. ಕೃ. ಭಾರದ್ವಾಜರು "ಕಾಲೇಜಿನ ತರಗತಿಯು ಬಿಟ್ಟ ಕೂಡಲೇ ನಾನು ಓಡಿ ಬಂದು ನವರತ್ನ ಸನ್ಸ್ ಅವರ ಮುದ್ರಣಾಲಯದಿಂದ "ಭಾರತಿ" ಸಂಚಿಕೆಯು ಹೊರಬೀಳುವುದನ್ನೇ ಕಾಯುತ್ತಿದ್ದೆನು. ಅದು ಹೊರಗೆ ಬಂದ ಕೂಡಲೆ ಮೂರು ಕಾಸು ಕೊಟ್ಟು ಒಂದು ಸಂಚಿಕೆಯನ್ನು ಕೊಂಡು ಓಡುತ್ತ ಮನೆಯ ಕಡೆ ಹೊರಡುತ್ತಿದ್ದೆನು....ಅದರಿಂದಲೂ ನನ್ನ ಮುಂದಣ ಜೀವನದ ಆದರ್ಶವು ಬಗೆಗೊಳ್ಳಲು ಒಂದು ಕಾರಣವು ದೊರೆಯಿತು. ನನ್ನ ಧಮನಿಗಳಲ್ಲಿ ಹರಿಯುತ್ತಿರುವ ರಕ್ತಕ್ಕೆ ಹೃದಯಕ್ಕೆ ಆ ಬಗೆಯ ಗತಿಯನ್ನೂ ಸ್ಫುರಣವನ್ನೂ ಮತ್ತಾವ ಪತ್ರಿಕೆಯ ಬರಹವೂ (ಗಾಂಧಿಯವರನ್ನುಳಿದು) ಕನ್ನಡದಲ್ಲಿ ಕೊಟ್ಟಿಲ್ಲ" ಎಂದು ಬರೆದಿದ್ದಾರೆ. (ಕನ್ನಡನುಡಿ 10-11-1944)

ಅದೇ ಸಮಯದಲ್ಲಿಯೇ ಎಂ. ಶ್ರೀನಿವಾಸ ಅಯ್ಯಂಗಾರ್ ಎಂಬವರು ನಡಸುತ್ತಿದ್ದ "ದಿ ಮೈಸೂರ್ ಸ್ಟಾಂಡರ್ಡ್" ಎಂಬ ಇಂಗ್ಲಿಷ್ ಅರ್ಧವಾರ ಪತ್ರಿಕೆಗೂ, "ನಡೆಗನ್ನಡಿ" ಎಂಬ ಕನ್ನಡ ವಾರ ಪತ್ರಿಕೆಗೂ ಡಿ ವಿ ಜಿ ಸಣ್ಣಸಣ್ಣ ಲೇಖನಗಳನ್ನು ಬರೆಯುತ್ತಿದ್ದರು. ಡಿ ವಿ ಜಿ ಯವರನ್ನು ಪ್ರೋತ್ಸಾಹಿಸಿ ತಿದ್ದಿ ನಿಜವಾಗಿ ಮಾರ್ಗದರ್ಶನ ಮಾಡಿದವರು ಶ್ರೀನಿವಾಸ ಅಯ್ಯಂಗಾರ್ಯರು. ಪತ್ರಿಕೆಯಲ್ಲಿ ಅವರ ಟೀಕೆಗಳು ಕಟುವಾಗಿ ತೀವ್ರವಾಗಿರುತ್ತಿದ್ದುವು.

ಹೀಗೆ ಇವರ ಪತ್ರಿಕೋದ್ಯೋಗ ಬೆಳೆಯುತ್ತಿದ್ದಾಗ, 1908ರಲ್ಲಿ ವಿ. ಪಿ ಮಾಧವರಾಯರು 'ದಿ ಮೈಸೂರ್ ನ್ಯೂಸ್ ಪೇಪರ್ ರೆಗ್ಯುಲೇಷನ್' ಎಂಬ ಪತ್ರಿಕಾ ನಿರ್ಬಂಧದ ಕಾನೂನನ್ನು ಜಾರಿಗೆ ತಂದರು. ಆ ಕಾನೂನಿನ ಮುಖ್ಯಾಂಶಗಳೆಂದರೆ: ಪತ್ರಿಕೆ ನಡಸುವವರು ಸರಕಾರದ ಅಪ್ಪಣೆ ಪಡೆದಿರಬೇಕು; ಆ ಅಪ್ಪಣೆಯನ್ನು ಸರಕಾರವು ಯಾವಾಗಬೇಕಾದರೂ ವಾಪಸ್ ತೆಗೆದುಕೊಳ್ಳಬಹುದು; ಸರಕಾರದ ಅಪ್ಪಣೆಯಿಲ್ಲದೆಯಾಗಲಿ ಅಥವಾ ಅಪ್ಪಣೆ ರದ್ದಾದ ಮೇಲಾಗಲಿ ಪತ್ರಿಕೆ ನಡಸಿದವರಿಗೆ ದಂಡನೆಯುಂಟು.

ಈ ಕಾನೂನು ಪತ್ರಿಕೆಗಳಿಗೆ ಪ್ರತಿಕೂಲವಾದ ಉದ್ದೇಶವುಳ್ಳದ್ದೆಂದೂ ಪತ್ರಿಕಾ ಸ್ವಾತಂತ್ರ್ಯಕ್ಕೆ ಹಾನಿಕರವೆಂದೂ ಪತ್ರಿಕಾಕರ್ತರಿಗೆಲ್ಲ ಅನ್ನಿಸಿತು. ಆ ಕಾನೂನನ್ನು ಪ್ರತಿಭಟಿಸತಕ್ಕದ್ದೆಂದೂ, ವಿರೋಧ ಸೂಚನೆಯಾಗಿ ಪತ್ರಿಕೆಗಳನ್ನು ನಿಲ್ಲಿಸುವುದು ಯುಕ್ತವೆಂದೂ ಶ್ರೀನಿವಾಸ ಅಯ್ಯಂಗಾರ್ಯರು ಸಲಹೆ ಕೊಟ್ಟರು. ಮೈಸೂರಿನ ಎಂ. ವೆಂಕಟಕೃಷ್ಣಯ್ಯನವರು ಇವನ್ನು ಅನುಮೋದಿಸಿದರು. ಆಗ ಅವರಿಗೆಲ್ಲ ಕಿರಿಯರಾಗಿದ್ದ ಡಿ ವಿ ಜಿ ಯವರು

ವಿಧೇಯರಾಗಿ ನಡೆದರು. ಮೈಸೂರಿನ "ವೃತ್ತಾಂತ ಪತ್ರಿಕೆ" ಮತ್ತು "ಮೈಸೂರ್ ಸ್ಟಾರ್" ಪತ್ರಿಕೆಗಳನ್ನುಳಿದು ಎಲ್ಲ ಪತ್ರಿಕೆಗಳೂ ಪ್ರಕಟನೆಯನ್ನು ನಿಲ್ಲಿಸಿದವು.

ಬೆಂಗಳೂರಿನಲ್ಲಿ ಅಂಗಡಿಗಳನ್ನು ಮುಚ್ಚಿದ ಮೇಲೆ ಡಿ ವಿ ಜಿ ಯವರು ಶ್ರೀನಿವಾಸ ಅಯ್ಯಂಗಾರ್ಯರೊಡನೆ ಮದರಾಸಿಗೆ ಹೋದರು. ಉದ್ದೇಶವೇ ನೆಂದರೆ ಮೈಸೂರಿನ ವೃತ್ತಪತ್ರಿಕಾ ಕಾನೂನಿನ ಮೇಲೆ ಹೊರಗಣ ಪತ್ರಿಕೆಗಳಲ್ಲಿ ಬಂದಿದ್ದ ನಾನಾ ಟೀಕೆಗಳನ್ನು ಸಂಗ್ರಹ ಮಾಡಿ ಪುಸ್ತಕ ರೂಪದಲ್ಲಿ ಪ್ರಕಟಿಸಬೇಕೆಂಬುದು. ಅವುಗಳನ್ನೆಲ್ಲ ಸಂಗ್ರಹಿಸಿ ಸಂಕ್ಷೇಪಮಾಡುವ ಕೆಲಸ, ಅಚ್ಚಿನ ಕಾರ್ಖಾನೆಗೆ ಹೋಗಿ ಪ್ರೂಪುಗಳನ್ನು ತಿದ್ದುವ ಕೆಲಸ, ಪೀಠಿಕೆ ಟಿಪ್ಪಣಿಗಳನ್ನು ಸೇರಿಸುವ ಕೆಲಸ—ಎಲ್ಲ ಕಾರ್ಯಭಾಗಗಳಲ್ಲಿಯೂ ಶ್ರೀನಿವಾಸ ಅಯ್ಯಂಗಾರ್ಯರು ಇವರಿಗೆ ಅವಕಾಶಕೊಟ್ಟರು. ಆ ಪುಸ್ತಕ 'ಲೋಕನಾಥನ್ ಪ್ರೆಸ್' ಎಂಬಲ್ಲಿ ಮುದ್ರಿತವಾಗಿ Press Gag in Mysore ಮೈಸೂರು ಪತ್ರಿಕೆಗಳಿಗೆ ವಾಗ್ಬಂಧನ ಎಂಬ ಹೆಸರಿನಿಂದ ಪ್ರಕಟವಾಯಿತು. ಆಗ ಮದರಾಸಿನಲ್ಲಿ ನೆಲಸಿದ್ದ ಶ್ರೀನಿವಾಸ ಅಯ್ಯಂಗಾರ್ಯರ ಬಾಲ್ಯ ಸ್ನೇಹಿತರಾಗಿದ್ದ ಪಿ. ತಿರುಮಲಾಚಾರ್ಯರ ಹೆಸರಿನಲ್ಲಿ ಅದು ಪ್ರಕಟವಾಯಿತು.

ಇವರು ಮದರಾಸಿನಲ್ಲಿದ್ದಾಗ "ಹಿಂದೂ" ಪತ್ರಿಕೆಗೂ "ಇಂಡಿಯನ್ ಪೇಟ್ರಿಯಟ್" ಪತ್ರಿಕೆಗೂ ಪುಡಿ ಬರವಣಿಗೆಗಳನ್ನು ಬರೆಯುತ್ತಿದ್ದರು. ಹಾಗೆಯೇ ರಾಮರಾವ್ ಎಂಬವರು ನಡಸುತ್ತಿದ್ದ "ವೀರಕೇಸರಿ" ಎಂಬ ಪತ್ರಿಕೆಗೆ ಸಹಾಯ ಮಾಡಲು ಒಪ್ಪಿಕೊಂಡರು. ಇಂಗ್ಲಿಷ್-ಕನ್ನಡ ಮಹಾ ನಿಘಂಟು ಒಂದನ್ನು ಉದ್ದೇಶಿಸಿ ಅದಕ್ಕಾಗಿ ಕನ್ನಡದ ಅಚ್ಚಿನ ಮೊಳೆ ಕೊರೆಯಿಸುವ ಸನ್ನಾಹದಲ್ಲಿ ಪಾಲುಗೊಂಡರು.

ಅದು ಮದರಾಸಿನಲ್ಲಿ ರಾಜಕೀಯ ಚಳುವಳಿಯ ಕಾಲ. ಸ್ವದೇಶಿ ಸ್ಟೀಮ್ ನ್ಯಾವಿಗೇಷನ್ ಕಂಪೆನಿಯ ಮುಖ್ಯಸ್ಥರಾದ ಚಿದಂಬರಂ ಪಿಳ್ಳೆ ಮೊದಲಾದ ಜನನಾಯಕರನ್ನು ಕೈಸೆರೆ ಹಿಡಿಯುತ್ತಿದ್ದರು. ಆ ಸಮಯದಲ್ಲಿಯೇ ಡಿ ವಿ ಜಿ ಯವರು ಪಾಂಡಿಚೆರಿಗೆ ಹೋಗಿದ್ದದ್ದು, ತಮಿಳು ಕವಿ ಸುಬ್ರಹ್ಮಣ್ಯ ಭಾರತಿಯವರೊಡನೆ ಕಾಲಕಳೆದದ್ದು.

ಆಗ ಮದರಾಸಿನಲ್ಲಿ "ಚೆನ್ನೈಜನ ಸಂಘಂ" ಎಂಬ ಸಂಸ್ಥೆಯ ಆಶ್ರಯದಲ್ಲಿ "ಗಂಗೈಕೊಂಡನ್ ಮಂಟಪಮ್" ಎಂಬ ಸಭಾಮಂದಿರದಲ್ಲಿ ಭಾಷಣ ಮಾಡತಕ್ಕದ್ದೆಂದು ತಿರುಮಲಾಚಾರ್ಯರು ಏರ್ಪಡಿಸಿದರು. ಅಲ್ಲಿ ಅವರು

ಮಾಡಿದ ಉಪನ್ಯಾಸ ಅವರ ವಿಚಾರಧಾರೆಯನ್ನು ತಿಳಿಸುವ ಒಂದು ಮುಖ್ಯವಾದ ಉಪನ್ಯಾಸ ಎನ್ನಬಹುದು. ಆ ಉಪನ್ಯಾಸಕ್ಕೆ ಪೀಠಿಕೆಯಾಗಿ, ಉಪಸಂಹಾರವಾಗಿ ಎರಡು ಲೇಖನಗಳನ್ನು ಜೋಡಿಸಿ, "ವೇದಾಂತ ಮತ್ತು ರಾಷ್ಟ್ರೀಯತೆ" ಎಂಬ ಒಂದು 57 ಪುಟಗಳ ಪುಸ್ತಕವನ್ನಾಗಿ ಅವರು ಅದನ್ನು 1909ರಲ್ಲಿ ಪ್ರಕಟಿಸಿದರು. ಈ ಉಪನ್ಯಾಸ ಅವರಿಗೆ ಪ್ರಸಿದ್ಧಿಯನ್ನು ತಂದರೂ ಅವರ ಮದರಾಸ್ ಜೀವನಕ್ಕೆ ಅವಸಾನವಾಯಿತು.

ಮುಳಬಾಗಿಲಿನ ಚಂದ್ರಶೇಖರ ಶಾಸ್ತ್ರಿಗಳ ಮಗ ಶ್ರೀನಿವಾಸಯ್ಯ ಮದರಾಸಿನಲ್ಲಿ ಆಗ ಓದುತ್ತಿದ್ದ. ಇವರ ಹೆಸರನ್ನು ಪತ್ರಿಕೆಗಳಲ್ಲಿ ಕಂಡು ಇವರ ತಂದೆಗೆ ಕಾಗದ ಬರೆದ—ನಿಮ್ಮ ಮಗನನ್ನು ವಾಪಸ್ ಕರೆಸಿಕೊಳ್ಳದಿದ್ದರೆ ಪೋಲೀಸಿನವರು ಹಿಡಿದುಕೊಂಡು ಹೋದಾರು, ಎಂದು. ಇವರ ತಂದೆಯವರ ಬಲವಂತದಿಂದ ಇವರು ಬೆಂಗಳೂರಿಗೆ ಹಿಂತಿರುಗಿದರು, ಜನವರಿ 1909ರಲ್ಲಿ.

ಬೆಂಗಳೂರಿನಲ್ಲಿ ಒಂದು ಪತ್ರಿಕೆಯನ್ನೋ ಪುಸ್ತಕ ಭಂಡಾರವನ್ನೋ ತೆಗೆಯುವ ಯೋಜನೆ. ಹಾಗೆ ಪ್ರಾರಂಭವಾಯಿತು ಸ್ವದೇಶಿ ಲೈಬ್ರರಿ ಎಂಬ ಪುಸ್ತಕ ಭಂಡಾರ, ಚಿಕ್ಕಪೇಟೆಯಲ್ಲಿ. ಅಲ್ಲಿ ಪ್ರಾರಂಭವಾಯಿತು "ವಂದೇ ಮಾತರಂ ಸೀರೀಸ್" ಪುಸ್ತಕಮಾಲೆ. ಅದರ ಮೊದಲನೆಯ ಪುಸ್ತಕ 12 ಪುಟಗಳ "ಸಂಯುಕ್ತ ಅಂಡ್ ಯುನೈಟೆಡ್ ಇಂಡಿಯಾ" ಎಂಬ ಪುಟ್ಟ ಪುಸ್ತಕ. ರಾಣಿ ಸಂಯುಕ್ತೆಯ ಕಥೆಯನ್ನು ಹೇಳಿ ಭಾರತ ದೇಶದ ಜನ ಹೇಗೆ ಒಗ್ಗಟ್ಟಾಗಬೇಕು ಎಂದು ನಿರೂಪಿಸುವ ಪುಸ್ತಕ. ಎರಡನೆಯದು "ರಿಲಿಜನ್ ಅಂಡ್ ನ್ಯಾಷನಲಿಜಂ" ಎಂಬ ಪುಸ್ತಕ. ಇದೆಲ್ಲಾ 1909ರಲ್ಲಿ. ಮೇ 1909 ರಲ್ಲಿ "ವೇದಾಂತ ಮತ್ತು ರಾಷ್ಟ್ರೀಯತೆ" ಎಂಬ ಗ್ರಂಥ ಅದೇ ಮಾಲೆಯಲ್ಲಿ ಹೊರ ಬಂತು. ಡಿ ವಿ ಜಿ ಯವರ ಜೀವನ ಧ್ಯೇಯದ ಒಂದು ನಕ್ಷೆಯನ್ನು ಅಲ್ಲಿ ಕಾಣಬಹುದು.

ಆತ್ಮಸ್ವರೂಪವನ್ನು ವರ್ಣಿಸುವ ಭಗವದ್ಗೀತೆಯ (II-20.23 XIII-12.16) ಶ್ಲೋಕಗಳ ಭಾಷಾಂತರದಿಂದ ಪ್ರಾರಂಭವಾಗುತ್ತದೆ ಆ ಗ್ರಂಥ. ಅಂಥ ಆತ್ಮ ಲೋಕದ ಗೊಂದಲದಲ್ಲಿ ಸಿಕ್ಕಿಕೊಂಡು ಸ್ವ-ಸ್ವರೂಪವನ್ನು ಮರೆತುಕೊಂಡಿರುತ್ತದೆ. ಅನಂತವಾದ ಈ ಆತ್ಮವು ಸಾಂತವಾದ ಲೋಕದಲ್ಲಿ ತನ್ನ ನಿಜ ಸ್ವರೂಪವನ್ನು ಕಂಡುಕೊಳ್ಳುವುದು ಕಷ್ಟದ ಮಾತು. ಆದರೆ ಆತ್ಮವೇ ಎಲ್ಲ ಜೀವಿಗಳಲ್ಲಿಯೂ ಇರುವುದೆಂಬುದನ್ನು ಕಂಡುಕೊಂಡರೆ ಅವನಿಗೆ

ಆನಂದವು ಲಭಿಸುತ್ತದೆ. ಸೌಭ್ರಾತೃತ್ವ, ಸಮಾನತೆ ಮತ್ತು ಸ್ವಾತಂತ್ರ್ಯ ಎಂಬ ಮಾತುಗಳ ವಿವರಣೆಯೇ ಅದು. ಆದ್ದರಿಂದ ಅಸತ್ಯವಾದ ಈ ತನ್ನ ತನವನ್ನು ನಾಶಪಡಿಸಿಕೊಂಡು, ಸ್ವಾರ್ಥವನ್ನು ಕ್ರಮೇಣ ತೊರೆದು, ತನ್ನ ಹೃದಯವನ್ನು ವಿಸ್ತಾರಪಡಿಸುತ್ತ, ಮರ್ತ್ಯವಾದ ಈ ಗೂಡು ತಾನಲ್ಲವೆಂದೂ ಆ ಗೂಡಿನ ಹೊರಗೂ ತನ್ನ ಆತ್ಮ ವ್ಯಾಪಿಸಿಕೊಂಡಿದೆಯೆಂಬುದನ್ನೂ ಅರಿತು ಕೊಂಡು ತನ್ನನ್ನು ವಿಸ್ತಾರಪಡಿಸಿಕೊಳ್ಳಬೇಕು. ಎಲ್ಲೆಲ್ಲೂ ಆತ್ಮವನ್ನೇ ಕಾಣುವ ಅಭ್ಯಾಸ ಮಾಡಿಕೊಳ್ಳಬೇಕು. ಲೌಕಿಕ ವ್ಯವಹಾರಗಳು ಒಬ್ಬರನ್ನು ಇನ್ನೊಬ್ಬರ ಹತ್ತಿರ ತಂದು ಅವರಲ್ಲಿ ಒಂದು ಸಂಬಂಧ ಬೆಳೆಯುವಂತೆ ಮಾಡು ತ್ತದೆ. ಈ ವಿಧವಾದ ಕೊಟ್ಟು–ತೆಗೆದುಕೊಳ್ಳುವಿಕೆಯಿಂದ ಒಂದು ಬಗೆಯಾದ ಸ್ವಾರ್ಥವರ್ಜನೆ ಹುಟ್ಟುತ್ತದೆ. ಇದೇ ಆತ್ಮವಿಸ್ತರಣಾಭ್ಯಾಸದ ಮೊದಲನೆಯ ಹಂತ. ಹೀಗೆ ತನ್ನತನವನ್ನು ಸವೆಯಿಸುವ ಪ್ರತಿಯೊಂದು ಕೆಲಸವೂ ಆತ್ಮ ವಿಸ್ತರಣಾಭ್ಯಾಸವು ಬೆಳೆಯಲು ದಾರಿ ಮಾಡಿಕೊಡುತ್ತದೆ. ನಾವು ಒಂದು ಕೊಳದ ದಡದ ಮೇಲೆ ನಿಂತು ನೀರಿನ ಮಧ್ಯಕ್ಕೆ ಒಂದು ಕಲ್ಲನ್ನೆಸೆದರೆ ಅಲ್ಲಿ ಅಲೆ ಹುಟ್ಟಿ ಬಳೆ ಬಳೆಯಾಗಿ ಹರಡಿ ದಡವನ್ನು ಮುಟ್ಟುವಂತೆ ಆತ್ಮವು ಕ್ರಮೇಣ ಉತ್ತರೋತ್ತರ ವಿಸ್ತಾರವಾಗಿ ಸಕಲ ಪ್ರಪಂಚವನ್ನು ಆವರಿಸಬೇಕು. ರಾಷ್ಟ್ರ ಭಕ್ತಿ, ರಾಷ್ಟ್ರೀಯತೆ ಹೀಗೆ ಆತ್ಮವಿಕಾಸದ ಒಂದು ಹಂತ, ಆತ್ಮವಿಸ್ತರಣೆಗೆ ಒಂದು ಅವಕಾಶ. ಹೀಗೆ ಡಿ ವಿ ಜಿ ಯವರು ವೇದಾಂತಕ್ಕೂ ರಾಜಕೀಯಕ್ಕೂ ಒಂದು ಸೇತುವೆಯನ್ನು ನಿರ್ಮಿಸಿ, ಅವುಗಳನ್ನು ಹತ್ತಿರಕ್ಕೆ ತಂದರು. ಇದರ ವ್ಯಾಖ್ಯಾನವೇ ಅವರ ಜೀವಿತದ ಮುಖ್ಯ ಕೆಲಸವಾಯಿತು ಎನ್ನಬಹುದು.

ಎಲ್ಲ ಮುಂದುವರಿದ ರಾಷ್ಟ್ರಗಳಲ್ಲಿಯೂ ವಿದ್ಯಾಭ್ಯಾಸ ಮತ್ತು ಮಹಾ ಜನರ ತಿಳಿವಳಿಕೆಗೆ ವಾಚನಾಲಯಗಳೂ ಗ್ರಂಥಾಲಯಗಳೂ ಅವಶ್ಯವೆಂಬು ದನ್ನು ಜನ ಅರಿತುಕೊಂಡಿದ್ದಾರೆ. ನಮ್ಮ ದೇಶದಲ್ಲಿರುವ ಇದರ ಅಭಾವವನ್ನು ಹೋಗಲಾಡಿಸುವ ಪ್ರಯತ್ನ ಮಾಡಬೇಕಾದದ್ದು ಅಗತ್ಯ ಎಂಬ ಉದ್ದೇಶದಿಂದ ಶ್ರೀರಾಮಕೃಷ್ಣ ವಾಚನಾಲಯ ಮತ್ತು ಗ್ರಂಥಾಲಯವನ್ನು ಮಾರ್ಚಿ 1909ರಲ್ಲಿ ಅವರೂ ನವರತ್ನ ಕೃಷ್ಣಸ್ವಾಮಿಯವರೂ ಪ್ರಾರಂಭಿಸಿದರು. ಹಾಗೆಯೇ ಶ್ರೀರಾಮಕೃಷ್ಣ ಧರ್ಮಸಮಾಜವೂ (Sri Ramakrishna Ethical Association) ಪ್ರಾರಂಭವಾಯಿತು. ಸಂಘಜೀವಿಯಾದ ಡಿ ವಿ ಜಿ ಯವರು ಸ್ಥಾಪಿಸಿದ ಸಂಘಗಳಲ್ಲಿ ಇದೇ ಮೊದಲನೆಯದು.

ಇದೇ ಸಮಯದಲ್ಲಿಯೇ ಅವರು ಬೆಂಗಳೂರಿನಲ್ಲಿ ಮನೆಮಾಡಿಕೊಂಡು

ಸಂಸಾರ ಹೂಡಿದ್ದು.

1909ರ ಜೂನಿನ ಹೊತ್ತಿಗೆ ಹೊಸಪ್ರಯತ್ನಗಳು ನಡೆದವು. ಮೊದಲನೆಯದು "ಸುಮತಿ" ಎಂಬ ಸಾಪ್ತಾಹಿಕ ಪತ್ರಿಕೆ. "ಇದರಲ್ಲಿ ವರ್ತಮಾನಗಳೂ, ಇತರರನ್ನು ದೂಷಿಸುವ ಅಥವಾ ಹೊಗಳುವ ಲೇಖನಗಳೂ ಇಲ್ಲದೆ, ಮತ, ನೀತಿ, ವಿದ್ಯಾವಿಷಯಕವಾದ ಲೇಖನಗಳೂ ಬರೆಯಲ್ಪಟ್ಟಿರುವುವು. ಇದು ಹಿಂದಣ ಕೆಲ ಪತ್ರಿಕೆಗಳಂತೆ ತೋರಿ ಅಡಗದೆ ಚಿರಾಯುವಾಗಲಿ ಎಂದು ಹರಸುವೆವು. ಇದರ ವಾರ್ಷಿಕ ಚಂದಾ ಅಂಚೆಯ ವೆಚ್ಚ ಸೇರಿ ರೂ ೧-೮-೦" —ಎಂದು ಮೈಸೂರ್ ಸ್ಟಾರ್ ಪತ್ರಿಕೆಯು ಹರಸಿದೆ. ಇನ್ನೊಂದು ಪ್ರಯತ್ನ ಇನ್ನೂ ದೊಡ್ಡದು. ವಾರಪತ್ರಿಕೆಯೂ ಮಾಸಪತ್ರಿಕೆಯೂ ಅಲ್ಲದ ಸುಮತಿ ಗ್ರಂಥಮಾಲೆ. ಇದರಲ್ಲಿ "ಪ್ರಸಿದ್ಧ ಪುರುಷರ ಜೀವನ ಚರಿತೆಗಳೂ, ನಾವೆಲ್ ಮೊದಲಾದ ಕಥಾಪ್ರಬಂಧಗಳೂ, ಕಾವ್ಯನಾಟಕಗಳೂ, ಚರಿತ್ರೆ ಮತ್ತು ದೇಶ ವರ್ಣನೆಗಳೂ, ಜಾನ್ ಸ್ಟೂಅರ್ಟ್‌ಮಿಲ್, ಹರ್ಬರ್ಟ್ ಸ್ಪೆನ್ಸರ್ ಮುಂತಾದ ಪಂಡಿತೋತ್ತಮರ ಲೇಖನಗಳ ಭಾಷಾಂತರಗಳೂ, ವ್ಯವಸಾಯ ಆರೋಗ್ಯ ಮೊದಲಾದ ವಿಷಯಗಳಿಗೆ ಸಂಬಂಧ ಪಟ್ಟ ಶಾಸ್ತ್ರಗ್ರಂಥಗಳೂ ನಮ್ಮ ದೇಶೀಯರಿಗೆ ಅವಶ್ಯಕವಾದ ಇತರ ಎಲ್ಲಾ ವಿಧದ ಪುಸ್ತಕಗಳೂ ಪ್ರಕಟಿಸಲ್ಪಡುವುವು. ಒಂದು ವರ್ಷದೊಳಗಾಗಿ ಕ್ರೌನ್ ಅಷ್ಟಪತ್ರ ಸುಮಾರು 1200 ಪುಟಗಳು ಮುದ್ರಿತವಾಗಿ ಪ್ರಕಾಶವಾಗುವುವು. ಈ ಗ್ರಂಥಮಾಲೆಯ ಪುಸ್ತಕಗಳೆಲ್ಲವನ್ನೂ ಕೊಂಡುಕೊಳ್ಳಲು ಸಮ್ಮತಿಸಿ, ನಾಲ್ಕಾಣೆಯನ್ನು ಮುಂಗಡವಾಗಿ ಕಳುಹಿಸುವವರು ಚಂದಾದಾರರಾಗುವರು. ಚಂದಾದಾರರಿಗೆ ಗ್ರಂಥದ ಬೆಲೆಯು ಸರಾಸರಿ 100 ಪುಟಗಳ ಸಾಮಾನ್ಯ ಪ್ರತಿಗೆ ನಾಲ್ಕಾಣೆ, ಉತ್ತಮ ಪ್ರತಿಗೆ ಆರಾಣೆ. ಇತರರಿಗೆ ಆರಾಣೆ ಮತ್ತು ಎಂಟಾಣೆ."

ಈ ಗ್ರಂಥಮಾಲೆಯಲ್ಲಿ ಪ್ರಕಟವಾದ ಪುಸ್ತಕಗಳು: (1) ಲೇಟ್ ದಿವಾನ್ ರಂಗಾಚಾರ್ಲು ಅವರ ಚರಿತ್ರೆ (2) ಕನಕಾಲುಕಾ (ಟೆನ್ನಿಸನ್ ಕವಿಯ 'ದಿ ಕಪ್' ಎಂಬ ನಾಟಕವನ್ನು ಅವಲಂಬಿಸಿ ವಿರಚಿತವಾದದ್ದು) (3) ಚಿಕ್ಕೋಜಿ (ಮಕ್ಕಳಿಗಾಗಿ ಇಂಗ್ಲಿಷ್ ಕಥೆಗಳ ತರ್ಜುಮೆ) (4) ಜಾರ್ಜ್ ಚಕ್ರವರ್ತಿಗಳ ಕಿರೀಟ ಧಾರಣಾ ಪ್ರಶಂಸೆ. (5) ಇಂದ್ರವಜ್ರ (ನಿವೇದಿತಾ ಎಂಬಾಕೆಯು "ಮಾಡರ್ನ್ ರಿವ್ಯೂ" ಪತ್ರಿಕೆಯಲ್ಲಿ ಬರೆದಿದ್ದ ಹಿಂದೂ ಮಕ್ಕಳ ಕಥೆಗಳು ಮತ್ತು ಇಂಗ್ಲಿಷ್‌ನಲ್ಲಿಯ ಕಥೆಗಳನ್ನು ಆಧರಿಸಿ ಬರೆದ ಮಕ್ಕಳ ಕಥೆಗಳು). ಇದಲ್ಲದೆ "ರಾಮಮೋಹನರಾಯ್", "ವಂದೇ ಮಾತರಂ", "ಸ್ವದೇಶೀ

"ಹರಿಭಕ್ತಿಸಾರ," "ಜೀವಗೀತೆ" ಎಂಬ ಗ್ರಂಥಗಳೂ ಪ್ರಕಟವಾದವು. ಸುಮತಿ ಗ್ರಂಥಮಾಲೆಯಲ್ಲಿ ಆರನೆಯ ಗ್ರಂಥವಾಗಿ "ಶ್ರೀರಾಮಕೃಷ್ಣ-ವಿವೇಕಾನಂದ ವಚನಾಮೃತ"ವು ಹೊರಬರುವ ಉದ್ದೇಶವೂ ಇತ್ತು. ಇಷ್ಟು ಗ್ರಂಥಗಳೂ ಪ್ರಕಟವಾದದ್ದು ಜೂನ್ 1911ರಿಂದ ಜನವರಿ 1912ರ ಒಳಗೆ.

"ಸುಮತಿ" ಪ್ರಕಾಶನದ ಕಥೆ ಇಲ್ಲಿಗೆ ಮುಗಿಯಿತೆಂದು ಕಾಣುತ್ತದೆ.

ಈ ಗ್ರಂಥಗಳಲ್ಲಿ ಮುಖ್ಯವಾದದ್ದು ರಂಗಾಚಾರ್ಲು ಅವರ ಜೀವನ ಚರಿತ್ರೆ. ಇದರ ಪ್ರಕಟನೆ ಡಿ ವಿ ಜಿ ಯವರ ಸಾರ್ವಜನಿಕ ಜೀವನಕ್ಕೆ ನಾಂದಿಯಾಯಿತು ಎನ್ನಬಹುದು. ಇದಕ್ಕೆ ಪೀಠಿಕೆಯನ್ನು ಬರೆದಿದ್ದವರು ಎಂ. ವೆಂಕಟಕೃಷ್ಣಯ್ಯನವರು. ಇದು ಪ್ರಕಟವಾಗುವುದಕ್ಕೆ ಮುಂಚೆಯೇ ಇದನ್ನು ಪರಾಮರ್ಶಿಸಿ, ಪ್ರಕಟವಾದ ಮೇಲೆ ನೂರು ಪ್ರತಿಗಳನ್ನು ಕೊಂಡುಕೊಂಡು ಇಷ್ಟಮಿತ್ರರಿಗೆ ಹಂಚಿ, ಪ್ರೋತ್ಸಾಹಿಸಿದವರು ದಿವಾನ್ ಟಿ. ಆನಂದ ರಾಯರು. ಮೊದಲು ಅಚ್ಚುಮಾಡಿದ ಒಂದು ಸಾವಿರ ಪ್ರತಿಗಳಲ್ಲಿ ಧರ್ಮಾರ್ಥವಾಗಿ ಕೊಟ್ಟ ಇನ್ನೂರು ಪ್ರತಿಗಳೂ (1920ರಲ್ಲಿ) ಕೈಯಲ್ಲಿ ನಿಂತ ಮುನ್ನೂರು ಪ್ರತಿಗಳೂ ಹೋಗಲಾಗಿ ಉಳಿದ ಐನೂರು ಪ್ರತಿಗಳೂ ವಿಕ್ರಯವಾಗಲು 10ವರ್ಷಗಳು ಹಿಡಿದಿವೆ. ಇದನ್ನು ಬರೆದ ಒಂದು ವರ್ಷದ ಮೇಲೆ ಇಂಗ್ಲಿಷಿನಲ್ಲಿಯೂ ರಂಗಾಚಾರ್ಯರ ವೃತ್ತಾಂತವನ್ನು ಬರೆದರು.

ಮೈಸೂರಿನ "ವೃತ್ತಾಂತ ಪತ್ರಿಕೆ"ಯು ಈ ಗ್ರಂಥವನ್ನು ಕುರಿತು ಒಂದು ಅಗ್ರ ಲೇಖನವನ್ನೇ ಬರೆಯಿತು. "ಮೈಸೂರು ಸ್ಟಾರ್" "ವಿಜ್ಞಾನ ವೈಭವ" "ಕರ್ನಾಟಕ ಚಂದ್ರಿಕೆ" "ಒಕ್ಕಲಿಗರ ಪತ್ರಿಕೆ" "ವಿದ್ಯಾನಂದ" ಮುಂತಾದ ಪತ್ರಿಕೆಗಳು ಇದನ್ನು ಪ್ರಶಂಸಿಸಿ ಬರೆದವು.

"ಅವರ ಚರಿತ್ರೆಯಲ್ಲಿ ನನ್ನ ಮನಸ್ಸನ್ನು ಹಿಡಿದು ಅಲ್ಲಿ ದೃಢವಾಗಿ ನಿಲ್ಲಿಸಿರುವ ಸಂಗತಿ ಅವರಿಗೆ ಪ್ರಜಾರಾಜ್ಯ ಪದ್ಧತಿಯ ಅರಿವು ಅಷ್ಟು ಹಿಂದೆ ಆಗಿತ್ತೆಂಬುದು" ಎನ್ನುತ್ತಾರೆ ಡಿ ವಿ ಜಿ.

ಇಷ್ಟರಲ್ಲಿ ಇವರ ಸಂಸಾರ ಬೆಳೆಯಿತು. 29-6-11ರಲ್ಲಿ ಅವರ ತಂದೆಯವರಿಗೆ ಬರೆದ ಕಾಗದ ಇದು: "ಮಗು ಬಾಣಂತಿ ಸೌಖ್ಯವಾಗಿದ್ದಾರೆ. ಧೈರ್ಯವಾಗಿರಬಹುದು. ದೇವರ ಬಳಿ ನಂದಾದೀಪವನ್ನಿರಿಸಿದೆ. ತಾವು ಕೂಡಿದ ಮಟ್ಟಿಗೂ ಜಾಗ್ರತೆಮಾಡಿಕೊಂಡು ಬರುವುದು....ಇಷ್ಟರ ಮೇಲೆ ನನ್ನ ಕೆಲಸ ಕಾರ್ಯಗಳು ಈಚೆಗೆ ಸ್ವಲ್ಪ ಅವ್ಯವಸ್ಥೆಯಲ್ಲಿದೆಯೆಂದು ತಮಗೆ ತಿಳಿದಿದೆ. ಈ ಸಂದರ್ಭದಲ್ಲಿ ಅಲ್ಲಿಂದ ಏನಾದರೂ ಸಹಾಯ ಮಾಡಿದರೆ

ತುಂಬ ಅನುಕೂಲ. ತಾವು ಏನಾದರೂ ಮಾಡಿ ಒಂದು ನೂರು ರೂಪಾಯಿ ತರುವುದಾದರೆ ತುಂಬಾ ಸಂತೋಷ. ಆ ಮೊಬಲಗನ್ನು ಖರ್ಚು ಮಾಡ ಬೇಕಾದ ಕಾರಣವಿಲ್ಲ. ಅದನ್ನು ಕೈಗಾಪಲಾಗಿಟ್ಟುಕೊಂಡು ಆಪತ್ಕಾಲದಲ್ಲಿ ಉಪಯೋಗಿಸಬಹುದು. ಆ ಮೊಬಲಗಿಗೆ ನಾನು ಬಡ್ಡಿ ಕೊಡಲು ಸಿದ್ಧ ನಾಗಿದ್ದೇನೆ. ಪತ್ರ ಬರೆದು ಕೊಡುತ್ತೇನೆ. ನನ್ನ ವ್ಯಾಪಾರಕ್ಕಾಗಿ ಬಂಡ ವಾಳವೂ ಸ್ವಲ್ಪ ಬೇಕಾಗಿರುವ ಕಾರಣ ಇಷ್ಟು ದೂರ ಬರೆದಿದ್ದೇನೆ." ಹಣದ ವಿಚಾರವಾಗಿ ಕರಾರುವಾಕ್ಕು, ಹಣದ ಕೊರತೆ, ಸಾಲ, ಬಡ್ಡಿ ತೆರುವುದು ಇವೆಲ್ಲ ಡಿ ವಿ ಜಿ ಯವರ ಜೀವಮಾನ ಪರ್ಯಂತ ಇದ್ದವೇ.

ಅವರ ತಂದೆಯವರಿಗೆ 1.7.10ರಿಂದ ರಿಟೈರ್ ಆಯಿತು. ಪೆನ್‌ಷನ್ ತಿಂಗಳಿಗೆ ಆರು ರೂಪಾಯಿ. "ತಾವು ರಿಟೈರ್ ಆದ ಕಾರಣದಿಂದ ಅಧೈರ್ಯ ಪಡಬಾರದು. ಮಾನವಾಗಿ ಪೆನ್‌ಷನ್ ತೆಗೆದುಕೊಳ್ಳುವುದು ಈ ಕಾಲದಲ್ಲಿ ದೊಡ್ಡ ಗೌರವ. ಸಂಸಾರ ತಾಪತ್ರಯದ ದೆಸೆಯಿಂದ ಹೆದರಬೇಕಾಗಿದ್ದರೂ, ದೇವರು ಹೇಗಾದರೂ ಮಾನವಾಗಿ ಅನ್ನ ಕೊಡುವ ಭರವಸೆಯಿದೆ. ನಾನು ಕೂಡಿದ ಮಟ್ಟಿಗೂ ಮಿತವ್ಯಯ ಮಾಡಿ ಹತ್ತು ರೂಪಾಯಿ ಕಳುಹಿಸುತ್ತೇನೆ. ಭಯವಿಲ್ಲ. ಸ್ವಲ್ಪಕಾಲ ಹಾಗೆ ತಳ್ಳಿದರೆ ಮುಂದೆ ಒಳ್ಳೆಯ ಕಾಲ ಬರಬಹುದು" ಎಂದು ಬರೆದು, ಈಗಿದ್ದ ಮನೆ ಸಾಲದ್ದರಿಂದ ಬೇರೆ ಮನೆ ಮಾಡಿ ಎಲ್ಲರನ್ನೂ ಕರೆಸಿಕೊಳ್ಳುವ ಉದ್ದೇಶವನ್ನು ಸೂಚಿಸಿದ್ದಾರೆ. (ಜೂನ್ 1910)

1910ರ ಸುಮಾರಿನಲ್ಲಿ ಪ್ರಾರಂಭವಾದದ್ದು "ಮೈಸೂರ್ ಟೈಮ್ಸ್" ಎಂಬ ಪತ್ರಿಕೆ. ಅದಕ್ಕೆ ಸಂಪಾದಕರು ಎನ್. ಎಸ್. ರಾಮಸ್ವಾಮಿ ಅಯ್ಯಂಗಾರ್ಯರೆಂಬವರು. ವಾರಕ್ಕೆರಡು ಬಾರಿ ಅಚ್ಚಾಗುತ್ತಿದ್ದ ಪತ್ರಿಕೆ. ಅದಕ್ಕೆ ಅಸಿಸ್ಟೆಂಟ್ ಎಡಿಟರ್ ಡಿ ವಿ ಜಿ ಯವರು.

ಆ ಪತ್ರಿಕೆಗೆ 1911ರಲ್ಲಿ ಇವರು ಬರೆದ "Western Influence on Indian Society and Relegion" "ಭಾರತದ ಸಮಾಜ ಮತ್ತು ಮತಗಳ ಮೇಲೆ ಪಾಶ್ಚಾತ್ಯ ಪ್ರಭಾವ" ಎಂಬ ಲೇಖನದಲ್ಲಿ ಡಿ ವಿ ಜಿ ಯವರು ಬ್ರಿಟಿಷರ ಸಂಪರ್ಕದಿಂದಾದ ಪರಿಣಾಮಗಳನ್ನು ಗುರುತಿಸಿದ್ದಾರೆ: ಮೊದಲನೆಯದು ಬುದ್ಧಿಸ್ವಾತಂತ್ರ್ಯ. ಎರಡನೆಯದು ಮಹಿಳೆಯರ ವಿಮೋಚನೆ. ಮೂರನೆ ಯದು ವ್ಯಕ್ತಿಸ್ವಾತಂತ್ರ್ಯ ವಿಸ್ತರಣೆ. ನಾಲ್ಕನೆಯದು ಭಾರತೀಯ ಸಮಾಜ ದಲ್ಲಾದ ಒಗ್ಗಟ್ಟು. ಭಾರತೀಯ ಮನಸ್ಸಿನ ಮೇಲೆ ಕಟ್ಟಿದ್ದ ಜಾಡನ್ನು ಪಾಶ್ಚಾತ್ಯ ಸಂಸ್ಕೃತಿಯು ತಂದಿದ್ದ ವಿಜ್ಞಾನವು ಹಾರಿಸಿಬಿಟ್ಟಿದೆ. ಹೊಸ

ವಿದ್ಯಾಭ್ಯಾಸ, ಸಮಾಜ ಸುಧಾರಣೆ, ಪ್ರಯಾಣಕ್ಕೆ ಒದಗಿದ ಅನುಕೂಲಗಳು, ಮತಾಚಾರ ಸುಧಾರಣೆ, ಇವೆಲ್ಲ ಭಾರತದ ನವೋದಯವನ್ನು ಸೂಚಿಸುತ್ತವೆ. ಆದರೆ ನಾವು ಎಚ್ಚರಿಕೆಯಿಂದಿರಬೇಕು ಎಂಬುದನ್ನೂ ಸೂಚಿಸಿದ್ದಾರೆ ಅವರು. "God save us from servile and apish imitation of the westerners. God help us to assimilate the practical and rationalistic spirit of the West and to avoid the extreme individualism, the extreme socialism and the other ugly offsprings of its rank materialism." "A new spirit has been moving on the Indian waters and the eyes of the world are eagerly looking forward to the day when the hoary mother of culture and civilization will rise once more to lend her own Kapila and Sankara to the aid of Mill and Hegel to prove the divinity of man and preach the gospel of love and harmony".

ಹೆಚ್ಚು ಕಡಿಮೆ ಪತ್ರಿಕೆಯ ಜವಾಬ್ದಾರಿಯೆಲ್ಲ ಇವರಿಗೇ ಸೇರಿತ್ತು. ಎಲ್ಲ ಸುಗಮವಾಗಿಯೇ ನಡೆಯುತ್ತಿತ್ತು. ಆಗ ನಡೆಯಿತು ಒಂದು ವಿಷಮ ಪ್ರಸಂಗ. ಸಂಪಾದಕರ ಹೆಸರಿಗೆ ಒಂದು ಪತ್ರ ಬಂತು. ಸೆಂಟ್ರಲ್ ಕಾಲೇಜಿನಲ್ಲಿ ಅಡಿಗೆಯವರಿಗೂ ಅಧಿಕಾರಿಗಳಿಗೂ ಮನಸ್ತಾಪ. ಇದರ ಪರಿಣಾಮವಾಗಿಯೋ ಹೇಗೋ ಒಂದು ದಿನದ ಅನ್ನದಲ್ಲಿ ಒಂದು ಅನಾರೋಗ್ಯ ಪದಾರ್ಥ ಮಿಶ್ರಿತವಾದಂತೆ ಕಂಡಿತಂತೆ. ಇದನ್ನು ಮೇಲಧಿಕಾರಿಗಳ ಗಮನಕ್ಕೆ ತಂದದ್ದಾಯಿತಂತೆ. ಡಿ ವಿ ಜಿ ತಮ್ಮ ಲಾಯರು ಮಿತ್ರರೊಡನೆ ಸಮಾಲೋಚನೆ ಮಾಡಿ ಹಿತ ಸಲಹೆ ಕೇಳಿ ಪತ್ರವನ್ನು ಪತ್ರಿಕೆಯಲ್ಲಿ ಪ್ರಕಟಿಸಿದರು. ಆಗ ಕಾಲೇಜಿನ ಪ್ರಿನ್ಸಿಪಾಲ್ ಜೆ.ಜಿ. ಟೆಯಿಟ್ ಎಂಬವರು, ಹಾಸ್ಟಲ್ ವಾರ್ಡನ್ ಸಿ.ಎಸ್. ವಿಜಯರಾಘವಾಚಾರ್ಯರು. ಹಾಸ್ಟಲಿನ ಅಡಿಗೆಯಾತನು ಪತ್ರಿಕಾಪ್ರಕಟನೆ ತನಗೆ ಅವಮಾನಕರವಾದದ್ದೆಂದು ಕೋರ್ಟಿನಲ್ಲಿ ಮಾನ ನಷ್ಟದ ದಾವೆ ಹೂಡಿದ — ಕಾಲೇಜಿನ ಅಧಿಕಾರಿಗಳ ಪ್ರೋತ್ಸಾಹದಿಂದ. ಯಾವ ಪ್ರಭಾವದಿಂದಲೋ ಏನೋ ಸಂಪಾದಕರಾದ ರಾಮಸ್ವಾಮಯ್ಯಂಗಾರ್ಯರು ಕೋರ್ಟಿನಲ್ಲಿ ಕ್ಷಮಾಪತ್ರವನ್ನು ಅರ್ಪಿಸಿ ಫಿರ್ಯಾದಿಯು ದಾವಾ ವಾಪಸ್ ತೆಗೆದುಕೊಳ್ಳುವಂತೆ ಬೇಡಿದರು. ಅವರು ತಮ್ಮ ಸಹಾಯಕರಾದ ಡಿ ವಿ ಜಿ ಯವರ ಅಭಿಪ್ರಾಯವನ್ನು ಕೇಳಲಿಲ್ಲ, ಅವರೊಡನೆ ಆಲೋಚಿಸಲೂ ಇಲ್ಲ. ನಡೆದ ಸಂಗತಿಯನ್ನು ಕೇಳಿದೊಡನೆಯೇ ಇವರು ಅಸಿಸ್ಟೆಂಟ್ ಎಡಿಟರ್

ಕೆಲಸಕ್ಕೆ ರಾಜಿನಾಮೆ ಕೊಟ್ಟರು. ಸ್ನೇಹಿತರು, ಇವರು ದುಡುಕಿದರೆಂದು ಅಭಿಪ್ರಾಯಪಟ್ಟರು. ಆದರೆ ಸಂಪಾದಕರು ಮಾಡಿದ ಕೆಲಸ ತಮ್ಮ ಮನಸ್ಸಾಕ್ಷಿಗೆ ಒಪ್ಪಲಿಲ್ಲವೆಂದು ಡಿ ವಿ ಜಿ ಹಠ ಹಿಡಿದರು. ಸ್ನೇಹಿತರು, ನಿನ್ನ ಜೀವನಕ್ಕೇನು ಮಾಡುತ್ತೀ ಎಂಬ ಪ್ರಶ್ನೆಗೆ, ಇವರು "ದೇಶೋ ವಿಶಾಲಃ ಪ್ರಭವೋ ಪ್ಯನಂತಾಃ" ಎಂದರು. ಹೀಗೆ ಅವರು ಬೇರೆಯ ಕಡೆ ಚಾಕರಿಮಾಡಿದ ಚರಿತ್ರೆ ಕೊನೆಗೊಂಡಿತು. ಅನಂತರದ ಚರಿತ್ರೆಯಲ್ಲಿ ಅವರು ಬೇರೆಯವರಲ್ಲಿ ಚಾಕರಿಗಿರಲಿಲ್ಲ.

ಆಗಲೇ ಬೆಂಗಳೂರಿನಲ್ಲಿ ಇವರ ಸ್ನೇಹವಲಯ ವಿಸ್ತಾರವಾದದ್ದು.

ಅದರಲ್ಲಿ ಮೊದಲನೆಯದು ವಿದ್ವಾಂಸರ ಸ್ನೇಹ. ನವರತ್ನ ಅಂಡ್ ಸನ್ಸ್ ಮುದ್ರಣ ಶಾಲೆಗೆ ಬರುತ್ತಿದ್ದ ವಿದ್ವಾನ್ ವೆಂಕಟಾಚಾರ್ಯರು (ಟಿ.ಟಿ. ಶರ್ಮರ ಚಿಕ್ಕಪ್ಪಂದಿರು), ಅವರ ಸ್ನೇಹಿತರಾದ ಬಾಲ ಸರಸ್ವತಿಗಳು, ದೊಡ್ಡಬೆಲೆ ನಾರಾಯಣ ಶಾಸ್ತ್ರಿಗಳು, ಛಪ್ಪಲ್ಲಿ ವಿಶ್ವೇಶ್ವರ ಶಾಸ್ತ್ರಿಗಳು ಮುಂತಾದ ವಿದ್ವಾಂಸರು.

ಎರಡನೆಯದು ಚಿಕ್ಕಪೇಟೆಯಲ್ಲಿದ್ದ ಅಪ್ಪಣ್ಣನವರ ಹಿಂದೂ ಕಾಫಿ ಕ್ಲಬ್‌ನಲ್ಲಿ ಸೇರುತ್ತಿದ್ದ ಗೋಷ್ಠಿ. ಇವರ ಚಿಕ್ಕಮಾವನವರ ಮನೆಯ ಪಕ್ಕದಲ್ಲಿ ಅಪ್ಪಣ್ಣನವರ ಮನೆ. ಹೀಗೆ ಡಿ ವಿ ಜಿ ಅಪ್ಪಣ್ಣನವರ ಮನೆಗೂ ಅಳಿಯಂದಿರಾದರು. ಅಪ್ಪಣ್ಣನವರ ಕಾಫಿ ಕ್ಲಬ್ಬಿನಲ್ಲಿ ನಡೆಯುತ್ತಿದ್ದ ಗೋಷ್ಠಿಗೆ "ಇಂಡಿಪೆಂಡೆಂಟ್ ಬೋರ್ಡ್" ಎಂದೇ ಆಗ್ಗೆ ಪ್ರಸಿದ್ಧ ಸಂಗೀತಗಾರರಾಗಿದ್ದ ದಕ್ಷಿಣಾಮೂರ್ತಿ ಶಾಸ್ತ್ರಿಗಳು ಹೆಸರಿಟ್ಟಿದ್ದರು. ಅದನ್ನು ವಿವರಿಸುತ್ತ ಅವರು: "ಸ್ವತಂತ್ರರಯ್ಯ! ನಿಮ್ಮ ಬಾಯಿಗಳಿಗೆ ಲಂಗಿಲ್ಲ ಲಗಾಮಿಲ್ಲ. ಆಡಿದ್ದೇ ಮಾತು, ಕೂಗಿದ್ದೇ ನಾದ" ಎಂದು ಹೇಳಿದರಂತೆ.

ಆಗ ಆದ ಇನ್ನೊಂದು ಸ್ನೇಹ ಡಿ ವಿ ಜಿ ಯವರ ಜೀವನವನ್ನೇ ರೂಪಿಸಿದಂಥಾದ್ದು. ಅದು ಎನ್.ನರಸಿಂಹ ಮೂರ್ತಿಗಳ ಸ್ನೇಹ. ಅವರನ್ನು ಡಿ ವಿ ಜಿ ಯವರು ತಮ್ಮ ಆತ್ಮಗುರುಗಳೆಂದು ಕರೆದುಕೊಂಡಿದ್ದಾರೆ. "ನಾನು ಓದಿದ್ದೇನೆಂದು ಹೇಳಿಕೊಳ್ಳಬಹುದಾದ ದೊಡ್ಡ ರಾಜ್ಯಶಾಸ್ತ್ರ ಗ್ರಂಥಗಳು, ಅರ್ಥಶಾಸ್ತ್ರ ಗ್ರಂಥಗಳು, ಮೂರ್ತಿಗಳಿಂದ ಉಪದಿಷ್ಟವಾದವು. ಅವರು ತಮ್ಮ ಸ್ವಂತ ಪುಸ್ತಕ, ಮಾರ್ಲೆ ಪಂಡಿತನ ಬರ್ಕ್ ಗ್ರಂಥವನ್ನು ನನಗೆ ಕೊಟ್ಟು ಓದ ಹೇಳಿ ಪರೀಕ್ಷೆ ಮಾಡುತ್ತೇನೆಂದರು. ಹಾಗೆಯೇ ಗ್ಲಾಡ್‌ಸ್ಟನ್ನಿನ, ಕಾಬ್ಡನ್ನಿನ, ಪಿಟ್ ತಂದೆ ಮಕ್ಕಳ ಉಪನ್ಯಾಸಗಳನ್ನು ನನ್ನಿಂದ ಓದಿಸಿದರು. ಅರ್ಥಶಾಸ್ತ್ರ

ವಲ್ಲಿ ಮಾರ್ಷಲ್, ಜೆವಾನ್ಸ್, ಸಲಿಗ್ಮನ್, ಮಿಲ್ ಇವರ ಗ್ರಂಥಗಳನ್ನೋದಿಸಿದರು. ಹಾಗೆಯೇ ಆಸ್ಟಿನ್, ಜೇಮ್ಸ್ ಬ್ರೈಸ್ ಇವರ ಗ್ರಂಥಗಳನ್ನೂ ನನ್ನಿಂದ ಓದಿಸಿದರು.... ಕಾರ್ಡಿನಲ್ ನ್ಯೂಮನ್ನಿನ ಇಂಗ್ಲಿಷ್ ಶೈಲಿಯ ಸೊಬಗನ್ನು ನನಗೆ ತೋರಿಸಿಕೊಟ್ಟವರು ಮೂರ್ತಿಗಳು. ಹಾಗೆಯೇ ಫ್ರ್ಯೂಡ್,ಹಟ್ಟನ್, ಬೇಜಟ್ ಮೊದಲಾದ ಲೇಖಕರಲ್ಲಿ ನನಗೆ ಅಭಿರುಚಿಯನ್ನು ಉಂಟುಮಾಡಿದವರೂ ಮೂರ್ತಿಗಳೇ."

ಇವರನ್ನು ಸಾರ್ವಜನಿಕ ಜೀವನಕ್ಕೆ ಒಡಂಬಡಿಸಿ ಸಾರ್ವಜನಿಕರ ನೀತಿಯನ್ನು ಪಾಠ ಕಲಿಸಿದ ಗುರುಗಳಲ್ಲಿ ಮೊದಲನೆಯವರೆಂದರೆ ನರಸಿಂಹ ಮೂರ್ತಿಗಳು. ಇವರ ಬುದ್ಧಿಶಕ್ತಿಯನ್ನು ಬೆಳೆಸಿ, ತಿದ್ದಿ ಪರಿಷ್ಕಾರ ಪಡಿಸಿದವರು ನರಸಿಂಹಮೂರ್ತಿಗಳು.

ಇದೇ ಸಮಯದಲ್ಲೇ ಇವರ ಜೀವನಕ್ಕೆ ಪೋಷಕವಾದ ಇನ್ನೊಂದು ಸ್ನೇಹದ ಅಂಕುರವಾದದ್ದು. 1908ರ ಹೊತ್ತಿಗೆ ಮದರಾಸಿಗೆ ಹೋಗುವುದಕ್ಕಾಗಿ ರೆಯಿಲ್‌ವೇ ಸ್ಟೇಷನ್ನಿಗೆ ಹೋಗಿದ್ದಾಗ ಅಲ್ಲಿ ಮೈಸೂರು ಸ್ಟಾಂಡರ್ಡ್ ಪತ್ರಿಕೆಯ ಶ್ರೀನಿವಾಸಯ್ಯಂಗಾರ್ಯರು ಇವರಿಗೆ ವಿ.ಎಸ್. ಶ್ರೀನಿವಾಸ ಶಾಸ್ತ್ರಿಗಳ ಪರಿಚಯ ಮಾಡಿಸಿಕೊಟ್ಟರಂತೆ. ಮುಂದೆ ಆನಂದರಾಯರ ದಿವಾನಗಿರಿಯಲ್ಲಿ ಏರ್ಪಾಟಾಗಿದ್ದ ಶಾಸ್ತ್ರಿಗಳ ಒಂದು ಉಪನ್ಯಾಸಕ್ಕೆ ಸರಕಾರ ತಡೆ ಹಾಕಿತು. ಇದನ್ನು ಕುರಿತು ಆಗ "ಮೈಸೂರು ಟೈಮ್ಸ್" ಉಪಸಂಪಾದಕರಾಗಿದ್ದ ಡಿ ವಿ ಜಿ ಯವರು ಸರಕಾರದ ವರ್ತನೆಯನ್ನು ಕುರಿತು ಒಂದು ಲೇಖನವನ್ನು ಬರೆದರು. ಅದನ್ನು ಮೆಚ್ಚಿಕೊಂಡ ಸ್ನೇಹಿತರು ಅದನ್ನು ಶಾಸ್ತ್ರಿಗಳ ಗಮನಕ್ಕೆ ತಂದರು. "ಆ ಫೆಲ್ಲರ್ ಎಷ್ಟು ಚೆನ್ನಾಗಿ ಬರೆದಿದ್ದಾನೆ" ಎಂಬ ಪ್ರಶಸ್ತಿ ದೊರಕಿತು ಶಾಸ್ತ್ರಿಗಳಿಂದ. ಆ ರಾತ್ರಿ ಸ್ನೇಹಿತನ ಮನೆಯಲ್ಲಾದ ಭೋಜನ ಕೂಟದಲ್ಲಿ ಮೊದಲ ಮಾತುಕಥೆ ನಡೆಯಿತು. ಬರಿಯ ಯೋಗ ಕ್ಷೇಮ ಪ್ರಶ್ನೆ.

ರಂಗಾಚಾರ್ಲು ಅವರನ್ನು ಕುರಿತು ಮದರಾಸಿನ 'ಇಂಡಿಯನ್ ರೆವ್ಯೂ' ಪತ್ರಿಕೆಯ ಆಗಸ್ಟ್ 1912ರ ಸಂಚಿಕೆಯಲ್ಲಿ ಬರೆದ ಲೇಖನ ಆವರಿಗೆ ತಂದ ಖ್ಯಾತಿ ಅಮೂಲ್ಯವಾದದ್ದು. ಏಕೆಂದರೆ ಅದರೊಂದಿಗೇ ಅವರಿಗೆ ದೊರಕಿದ್ದು ಶ್ರೀ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ, ಶ್ರೀ ಆರ್ಕಾಟ್ ಶ್ರೀನಿವಾಸಚಾರ್ಲು ಅವರ ಪರಿಚಯ.

ಇಂಡಿಯನ್ ರೆವ್ಯೂ ಪತ್ರಿಕೆಯಲ್ಲಿ ರಂಗಾಚಾರ್ಲು ಅವರನ್ನು ಕುರಿತ

ಲೇಖನವನ್ನು ಓದಿದ ಆಗ್ಗೆ ಛೀಫ್ ಇಂಜನೀಯರ್ ಆಗಿದ್ದ ವಿಶ್ವೇಶ್ವರಯ್ಯ ನವರು ಡಿ ವಿ ಜಿ ಯವರಿಗೆ ಒಂದು ಕಾಗದವನ್ನು ಬರೆದು ಅದನ್ನು ಇಂಡಿಯನ್ ರಿವ್ಯೂ ಸಂಪಾದಕರಾದ ಜಿ. ಎ. ನಟೇಶನ್ ಅವರಿಗೆ ಕಳುಹಿಸಿ, ಆ ಕಾಗದವನ್ನು ರಂಗಾಚಾರ್ಲು ಲೇಖನವನ್ನು ಬರೆದ ಆಸಾಮಿಗೆ ತಲಪಿಸಬೇಕೆಂದು ಕೋರಿದ್ದರು. ಹಾಗೆ ಡಿ ವಿ ಜಿ ಯವರಿಗೆ ಬಂದ ಪತ್ರದಲ್ಲಿ ರಂಗಾಚಾರ್ಯರ ಲೇಖನವನ್ನು ಕುರಿತು ಮೆಚ್ಚಿಕೆಯನ್ನು ಸೂಚಿಸಿದ್ದಲ್ಲದೆ ದೇಶೋಪಯುಕ್ತ ಕಾರ್ಯದಲ್ಲಿ ಸಹಕರಿಸಬೇಕೆಂದು ಕೇಳಿದ್ದರು. ಹೀಗೆ ಪ್ರಾರಂಭವಾದ ಸ್ನೇಹ, ಪರಸ್ಪರ ಗೌರವ ವಿಶ್ವೇಶ್ವರಯ್ಯನವರ ಕೊನೆಯ ದಿನದವರೆಗೂ ನಡೆದುಕೊಂಡು ಬಂತು.

"My dear Mr. Gundappa,

I shall be glad if you will give me the pleasure of your company at tea here at 4-30 pm on........

I hope to hear from you that you will be coming,

Yours sincerely
M. Visvesvaraya

1913ರಿಂದ ಹಿಡಿದು ವಿಶ್ವೇಶ್ವರಯ್ಯನವರು ಜೀವಿಸಿರುವವರೆಗೂ ಈ ಮಾದರಿಯ ಆಹ್ವಾನ ಪತ್ರಿಕೆಗಳು ಬರುತ್ತಲೇ ಇದ್ದವು.

"ರಂಗಾಚಾರ್ಲು" ಲೇಖನವನ್ನು ನೋಡಿದ್ದ ಇನ್ನೊಬ್ಬ ಮಹನೀಯರು, ಆಗ ಶ್ರೀರಂಗದಲ್ಲಿ ನೆಲಸಿದ್ದ ಆರ್ಕಾಟ್ ಶ್ರೀನಿವಾಸಚಾರ್ಲು ಅವರು. ಅವರು ಒಮ್ಮೆ ಬೆಂಗಳೂರಿಗೆ ಬಂದಿದ್ದಾಗ ಪುಟ್ಟಣ್ಣ ಶೆಟ್ಟರ ಬಳಿ "ರಂಗಾಚಾರ್ಲು ಬರೆದಾತ ಯಾರು ? ನಿಮಗೆ ತಿಳಿದಾತನೆ ?" ಎಂದು ಕೇಳಿದರಂತೆ. ರಂಗಾಚಾರ್ಲು ಕನ್ನಡ ಗ್ರಂಥವನ್ನು ಓದಿದ್ದ ಪುಟ್ಟಣ್ಣಶೆಟ್ಟರು ಅವರನ್ನು ಶ್ರೀನಿವಾಸಚಾರ್ಲು ಅವರ ಬಳಿ ಕರೆದುಕೊಂಡು ಹೋದರಂತೆ.

ಹೀಗೆ 'ರಂಗಾಚಾರ್ಲು' ಗ್ರಂಥ ಮತ್ತು ಲೇಖನ ಡಿ ವಿ ಜಿ ಯವರಿಗೆ ಬೆಂಗಳೂರಿನಲ್ಲಿ ಸಾರ್ವಜನಿಕ ಜೀವನದಲ್ಲಿ ಮುಖ್ಯವಾದ ಸ್ಥಾನವನ್ನು ಸಂಪಾದಿಸಿಕೊಟ್ಟಿತು.

"ದಿ ಕರ್ಣಾಟಕ"

ಮೈಸೂರು ಸಂಸ್ಥಾನದ ವೃತ್ತಪತ್ರಿಕೆಗಳ ಚರಿತ್ರೆಯಲ್ಲಿ ಡಿ ವಿ ಜಿ ಯವರ ಸ್ಥಾನ ವಿಶಿಷ್ಟವಾದದ್ದು.

ಬ್ರಿಟಿಷರ ಆಳ್ವಿಕೆಯ ಕಾಲದಿಂದಲೂ ಮೈಸೂರಿನಲ್ಲಿ ವೃತ್ತಪತ್ರಿಕೆಗಳು ಪ್ರಚಲಿತವಾಗಿದ್ದವು. ರಂಗಾಚಾರ್ಯರ ಕಾಲದಲ್ಲಂತೂ ಅದಕ್ಕೆ ಪ್ರೋತ್ಸಾಹವೇ ಸಿಕ್ಕಿತು. ಆದರೆ ದಿವಾನ್ ಶೇಷಾದ್ರಿ ಅಯ್ಯರ್ ಅವರ ಕಾಲದಲ್ಲಿ ಮೈಸೂರಿನಲ್ಲಿ ಶ್ರೀನಿವಾಸ ಅಯ್ಯಂಗಾರ್ ಎಂಬವರು 'ದೇಶಾಭಿಮಾನಿ' ಎಂಬ ವೃತ್ತಪತ್ರಿಕೆಯೊಂದನ್ನು ನಡಸುತ್ತಿದ್ದರು. ಅದರಲ್ಲಿ ಬರುತ್ತಿದ್ದ ಕುಹಕ ಕುಚೋದ್ಯಗಳಿಂದ ಕೆರಳಿದ ದಿವಾನರು ಅಚ್ಚಿನ ಕೂಟದ ಸಾಮಾನುಗಳಿಗೆ ಮುಟ್ಟುಗೋಲು ಹಾಕಿಕೊಂಡರು. ಅನಂತರ ದಿವಾನ್ ಪಿ. ಎನ್. ಕೃಷ್ಣಮೂರ್ತಿಗಳ ಕಾಲದಲ್ಲಿ ಎಂ. ಶ್ರೀನಿವಾಸಯ್ಯಂಗಾರ್ಯರು ಬೆಂಗಳೂರಿನಲ್ಲಿ ನಡಸುತ್ತಿದ್ದ ಪತ್ರಿಕೆಗಳ ಟೀಕೆಗಳು ದಿವಾನರ ಸುತ್ತಮುತ್ತಲಿದ್ದ ಜನರ ಅಸಮಾಧಾನಕ್ಕೆ ಕಾರಣವಾಯಿತು. ಇದರ ಫಲಿತಾಂಶ ಪತ್ರಿಕೆಯ ಕಛೇರಿಗೆ ಯಾರೋ ನುಗ್ಗಿ ಕಾಗದ ಪತ್ರಗಳನ್ನು ಹುಡುಕಿ ನೋಡಿದ ಪ್ರಸಂಗ ನಡೆಯಿತು. 1905ರಲ್ಲಿ ಕೃಷ್ಣಮೂರ್ತಿಗಳ ಕಾಲದಲ್ಲಿಯೇ ಪ್ರಜಾಪ್ರತಿನಿಧಿ ಸಭೆಯ ನಡವಳಿಕೆಗಳನ್ನು ವರದಿ ಮಾಡಲು ಬಂದ 'ಸ್ಟ್ಯಾಂಡರ್ಡ್' ಪತ್ರಿಕೆಯ ಪ್ರತಿನಿಧಿಯನ್ನು ಹೊರಗಟ್ಟಲಾಯಿತು. 1908ರಲ್ಲಿ ಮೈಸೂರು ನ್ಯೂಸ್ ಪೇಪರ್ ರೆಗ್ಯುಲೇಷನ್ ಮೈಸೂರು ವೃತ್ತಪತ್ರಿಕಾ ಪ್ರಪಂಚದಲ್ಲಿ ಎಂಥ ಪರಿಣಾಮವನ್ನು ಮಾಡಿತು ಎಂಬುದನ್ನು ಈಗಾಗಲೇ ಹೇಳಿದ್ದಾಗಿದೆ.

ಎನ್. ಎಸ್. ಸೀತಾರಾಮಶಾಸ್ತ್ರಿಗಳು ಇದನ್ನು ಕುರಿತು : "ಇದರ ಪರಿಣಾಮವಾಗಿ ಶ್ರೀ ಡಿ.ವಿ. ಗುಂಡಪ್ಪನವರು ಸಂಪಾದಕರಾಗಿದ್ದ ಕನ್ನಡ ಪ್ರಥಮ ದಿನಪತ್ರಿಕೆ 'ಭಾರತಿ' ಅಧಿಕಾರಶಾಹಿಯ ಬಾಲಬಡಕನಾಗಿರುವುದಕ್ಕಿಂತ ಮುಚ್ಚಿಬಿಡುವುದೇ ಲೇಸೆಂದು ಪ್ರಕಟನೆ ನಿಲ್ಲಿಸಿತು" ಎಂದಿದ್ದಾರೆ. 'ಸುಮತಿ'ಗೂ ಹೆಚ್ಚಿನ ಪ್ರೋತ್ಸಾಹ ಸಿಕ್ಕಿದಂತಿಲ್ಲ. "ಸುಮತಿ"ಯ ಅನಂತರ ಅವರು ಪತ್ರಿಕೆಗಳಿಗೆ ಬಿಡಿ ಲೇಖನಗಳನ್ನು ಬರೆಯುತ್ತಿದ್ದರು. 'ದಿ ಹೀರೋ'

ಎಂಬ ವಾರಪತ್ರಿಕೆ ಅವುಗಳಲ್ಲೊಂದು. ಹಾಗೆಯೇ ಅಲಹಾಬಾದಿನ 'ದಿ ಹಿಂದೂಸ್ಥಾನ್ ರಿವ್ಯೂ' ಎಂಬ ಪತ್ರಿಕೆಯ 1912ರ ಮೇ-ಜೂನ್ ಸಂಚಿಕೆಯಲ್ಲಿ "Ram Mohan Roy, Vivekananda and Indian Nationalism" (ರಾಮ ಮೋಹನ ರಾಯ್, ವಿವೇಕಾನಂದ ಮತ್ತು ಭಾರತದ ರಾಷ್ಟ್ರೀಯತೆ) ಎಂಬ ಲೇಖನ ಪ್ರಕಟವಾಗಿದೆ. ರಂಗಾಚಾರ್ಲು ಅವರ ವಿಷಯವಾಗಿ 1912ರ ಆಗಸ್ಟ್ ತಿಂಗಳಲ್ಲಿ 'ಇಂಡಿಯನ್ ರಿವ್ಯೂ' ಪತ್ರಿಕೆಯಲ್ಲಿ ಬಂದ ಲೇಖನವನ್ನು ಕುರಿತು ಈಗಾಗಲೇ ನೋಡಿದ್ದೇವೆ.

ವೃತ್ತಪತ್ರಿಕೆಗಳಲ್ಲಿ ಬರೆಯುವುದರ ವಿಷಯವಾಗಿ ಅವರು ಕಲಿತುಕೊಂಡ ಪಾಠವೊಂದನ್ನು ಇಲ್ಲಿ ಹೇಳಬೇಕು. ವೃತ್ತಪತ್ರಿಕಾ ನಿರ್ಬಂಧ ಶಾಸನವನ್ನು ಜಾರಿಗೆ ತಂದ ವಿ.ಪಿ. ಮಾಧವರಾಯರಿಗೆ ಒಂದು ಬಹಿರಂಗ ಪತ್ರ, ಮದರಾಸಿನಲ್ಲಿ ಆಗ ಪ್ರಕಟವಾಗುತ್ತಿದ್ದ 'ದಿ ಯುನೈಟೆಡ್ ಇಂಡಿಯ ಎಂಡ್ ನೇಟಿವ್ ಸ್ಟೇಟ್ಸ್' ಎಂಬ ವಾರಪತ್ರಿಕೆಯ 30ನೆಯ ಡಿಸೆಂಬರ್ 1908ರ ಸಂಚಿಕೆಯೊಡನೆ ಪುರವಣಿಯಾಗಿ ಕೊಡಲ್ಪಟ್ಟಿತು. ಈ ಪತ್ರ ಡಾಂಟೆ ಕವಿಯ ಕಾವ್ಯದ ಕೆಲವು ಸಾಲುಗಳೊಂದಿಗೆ ಪ್ರಾರಂಭವಾಗಿ ಮಾಧವರಾಯರ ಆಡಳಿತದ ಪಾಪಗಳನ್ನು ವರ್ಣಿಸಿ ಅವರು ತಮ್ಮ ಮನಸ್ಸನ್ನು ಬದಲಾಯಿಸಿಕೊಳ್ಳಬೇಕೆಂದು ಕೋರುತ್ತದೆ. ಅದಕ್ಕೆ ಸಹಿ ಹಾಕಿರುವವರು "ಹೊಸೂರು ಮರಿ". ಹಾಗೆಯೇ "ಪಿಶಾಚ ರೋದನ" ಎಂಬ ಮತ್ತೊಂದು ಪ್ರಕಟನೆ ಯಾರೋ ಹುದ್ದೆದಾರರ ವಿನೋದ ವಿಲಾಸಗಳನ್ನು ವರ್ಣಿಸುವ ನೆವದಲ್ಲಿ ಕೆಲಸುಂದಿಯ ಅಂತರಂಗ ದೋಷಗಳನ್ನು ಎತ್ತಿಹಾಕುವುದಾಗಿತ್ತು. ಈ ಎರಡು ಪ್ರಕಟನೆಗಳನ್ನೂ ಮದರಾಸಿನ ಕಾಂಗ್ರೆಸ್ ಅಧಿವೇಶನದ ಸಮಯದಲ್ಲಿ ಸಾವಿರಾರು ಪ್ರತಿ ಹಂಚಿದ್ದಾಗಿತ್ತು. ಆದಾದ ಕೆಲವು ದಿನಗಳ ಮೇಲೆ ಎಂ. ಶ್ರೀನಿವಾಸ ಅಯ್ಯಂಗಾರ್ಯರ ಅಣ್ಣಂದಿರು ಗೋಪಾಲಯ್ಯಂಗಾರ್ಯರು, ಈ ಲೇಖನಗಳನ್ನು ಬರೆದವರು ತಮಗೆ ತಿಳಿದ ಹುಡುಗ ಗುಂಡಪ್ಪ ಎಂದು ತಿಳಿದುಕೊಂಡು, ಇವರನ್ನು ಕಂಡಾಗ "ನೀನು ಮಾಡಿರುವುದು ಮಹಾ ಅಪರಾಧ.... ಇದರಲ್ಲಿ ಎರಡು ತಪ್ಪುಗಳು ಸೇರಿವೆ. ಮೊದಲನೆಯದು ಅದರ ವಿಷಯ ಕ್ಷುದ್ರವಾದದ್ದೆಂಬುದು. ಎರಡನೆಯದು ಬೇನಾಮಿಯಾಗಿದೆಯೆಂಬುದು.... ನಿನ್ನ ಬರವಣಿಗೆ ಯುಕ್ತವೆಂದು ನಿನಗೆ ತೋರಿದ್ದಿದ್ದರೆ ನೀನು ಅದಕ್ಕೆ ನಿನ್ನ ಹೆಸರನ್ನು ಸಹಿಹಾಕಬೇಕಾಗಿತ್ತು. ಆಗ ನಾನು ನಿನಗೆ ವಿವೇಕವಿಲ್ಲದಿದ್ದರೂ ಧೈರ್ಯವಿದೆಯೆಂದು ಹೇಳುತ್ತಿದ್ದೆ" ಎಂದು ಚೆನ್ನಾಗಿ ಬಾರಿಸಿಬಿಟ್ಟರು. ಇವರು ಆ ಹಿರಿಯರಲ್ಲಿ ಕ್ಷಮೆಬೇಡಿ ಅಂದಿ

ನಿಂದ ಮುಂದಕ್ಕೆ ಬೇನಾಮಿ ಬರವಣಿಗೆ ಬರೆಯುವುದಿಲ್ಲವೆಂದು ಪ್ರತಿಜ್ಞೆ ಮಾಡಿದರು. "ಈ ಘಟನೆ ನನ್ನ ಜೀವನದಲ್ಲಿ ಬಹು ಹೆಚ್ಚಿನ ಪರಿಣಾಮ ವನ್ನುಂಟು ಮಾಡಿತೆಂದು ನಾನೆಂದುಕೊಂಡಿದ್ದೇನೆ. ಗೋಪಾಲಯ್ಯಂಗಾರ್ಯ ರಿಗೆ ನಾನು ಕೊಟ್ಟ ಭಾಷೆಯಿಂದ ಜಾರಿಲ್ಲವೆಂದೂ ತಿಳಿದುಕೊಂಡಿದ್ದೇನೆ" ಎಂದಿದ್ದಾರೆ ಡಿ ವಿ ಜಿ.

ಏತನ್ಮಧ್ಯೆ ಕೆಲಸಕ್ಕಾಗಿ ಹುಡುಕಾಟ ನಡೆದೇ ಇತ್ತು. ಮದರಾಸಿನ ಸ್ನೇಹಿತರು ಇವರಿಗಾಗಿ 35 ರೂಪಾಯಿನ ಕೆಲಸವೊಂದನ್ನು ಹುಡುಕಿದ್ದರು. ಲಾಹೋರಿಗೆ ಹೊರಟುಹೋಗಿದ್ದ ಇವರ ವೃತ್ತಪತ್ರಿಕಾಶಾಸ್ತ್ರದ ಗುರು ಶ್ರೀನಿವಾಸಯ್ಯಂಗಾರ್ಯರ ಮೂಲಕ "ಪಂಜಾಬೀ" ಎಂಬ ಪತ್ರಿಕೆಯಲ್ಲಿ ಉಪ ಸಂಪಾದಕನಾಗಿ 100 ರೂಪಾಯಿ ತಲಬಿನ ಮೇಲೆ ಬರಲು ಸಮ್ಮತಿಯೇ ಎಂಬ ತಂತಿಯೊಂದೂ ಬಂತು (2.1.1913). ಆದರೆ ಸಂಬಳಕ್ಕಾಗಿ ಕೆಲಸವೇ ಅಥವಾ ಧ್ಯೇಯಕ್ಕಾಗಿ ಬಾಳುವುದೇ ? — ಎಂಬ ಪ್ರಶ್ನೆ ಎದುರಾಯಿತು. ಧ್ಯೇಯವೇ ಗೆದ್ದಿತು. ಈ ಸಮಯದಲ್ಲಿಯೇ "ಕ್ಷೇಮ : ಅಂತರ್ಯ ವಿಷಯ" ಎಂದು ಮೇಲೆ ಬರೆದಿರುವ ಪತ್ರವೊಂದರಲ್ಲಿ (17.1.1913) ಡಿ ವಿ ಜಿ ಯವರು ತಮ್ಮ ತೀರ್ಥರೂಪರಿಗೆ ಸಂದರ್ಭವನ್ನು ಹೀಗೆ ವಿವರಿಸಿದ್ದಾರೆ: "....ತಾವು ಇಲ್ಲಿದ್ದಾಗಲೇ ಮಾ|| ರಾಮದಾಸಪ್ಪನವರು ಪ್ರಸ್ತಾಪಿಸಿದ್ದಂತೆ ನಾನೇ ಸ್ವತಂತ್ರವಾಗಿ ಒಂದು ಇಂಗ್ಲಿಷ್ ಪೇಪರನ್ನು ಹೊರಡಿಸಲು ಪ್ರಯತ್ನಿ ಸಿದ್ದೇನೆ. ಅವರೂ ಇತರ ಸ್ನೇಹಿತರೂ ಸಹಾಯ ಮಾಡುತ್ತಿದ್ದಾರೆ. ಅದಕ್ಕೆ ಬೇಕಾದ ಸರ್ಕಾರದ ಸಹಾಯವನ್ನೂ ಸಂಪಾದಿಸಿದ್ದೇನೆ. ಇದುವರೆಗೆ ಎಲ್ಲವೂ ಅನುಕೂಲವಾಗಿದೆ. ಆದರೂ ಅದು ದ್ರವ್ಯಸಾಧ್ಯವಾದ ಕೆಲಸ. ಧನ ಸಹಾಯವು ತುಂಬಾಬೇಕು. ಅದಕ್ಕೂ ಪ್ರಯತ್ನಮಾಡಿದ್ದೇನೆ. ಆ ಭಾಗದಲ್ಲಿಯೇ ಮಾ|| ರಾಮದಾಸಪ್ಪನವರೂ ಮಾ|| ರಾ|| ನರಸಿಂಹಮೂರ್ತಿ ಗಳವರೂ ಹಿಮ್ಮತ್ತು ಕೊಟ್ಟಿದ್ದಾರೆ. ಆದರೂ ತಮ್ಮಿಂದ ಸಹಾಯವೇನಾ ದರೂ ಆಗುವುದಾದರೆ ಇದು ಸಕಾಲವಾಗಿದೆ. ಈ ಸಂದರ್ಭದಲ್ಲಿ ನನ್ನಿಂದ ತಮಗೆ ಹಣ ದೊರೆಯುವುದು ದುರ್ಲಭ. ನಮ್ಮ ಸ್ವಂತ ಬಂಡವಾಳವೆಷ್ಟಿದ್ದರೆ ಅಷ್ಟು ಉತ್ತಮ. ಈ ವಿಷಯಗಳೆಲ್ಲವನ್ನೂ ತಾವು ಇನ್ನೂ ಮನಸ್ಸಿನಲ್ಲಿಯೇ ಇಟ್ಟಿರಬೇಕು. ಯಾರಿಗೂ ಹೇಳಕೂಡದು. ಕೆಲಸವು ಸಿದ್ಧಿಯಾದ ಮೇಲೆ ಎಲ್ಲರಿಗೂ ತಾನಾಗಿ ತಿಳಿಯುವುದು. ಈಗ ಹೇಳಿ ನಡೆಯದೆ ಹೋದರೆ ಹಾಸ್ಯಾ ಸ್ಪದವಾಗುವುದು. ಅಲ್ಲದೆ ಈ ವಿಷಯಗಳನ್ನು ರಹಸ್ಯದಲ್ಲಿಡಬೇಕೇ ಹೊರತು

ಅನ್ಯರಿಗೆ ತಿಳಿಸಬಾರದು. ನಮಗೆ ಬೇಕಾದ ಬಂಡವಾಳದಲ್ಲಿ ಸ್ವಲ್ಪ ಭಾಗ ವನ್ನಾದರೂ ನಾವೇ ಸಂಪಾದಿಸಿಕೊಳ್ಳಬೇಕು. ಈ ಪೇಪರನ್ನು ಹೊರಡಿಸದಿದ್ದರೆ ಇಲ್ಲಿ ನನ್ನ ಅಭಿವೃದ್ಧಿಗೆ ದಾರಿಯಿಲ್ಲ. ದೇಶಾಂತರ ಹೊರಡುವುದು ತಮ್ಮಗಳಿಗೆ ಇಷ್ಟವಿಲ್ಲವಾದ ಕಾರಣ ಈ ಯೋಜನೆ ಮಾಡಿದ್ದೇನೆ.

"ಈಗ ಸುಮಾರು 10–11 ದಿನಗಳ ಕೆಳಗೆ ನನಗೆ ಪುನಃ ಉತ್ತರ ದೇಶದ ಮತ್ತೊಂದು ಕಡೆಯಿಂದ ತಂತೀ ವರ್ತಮಾನ ಬಂದಿದೆ. ಜವಾಬಿಗೆ ಹಣವನ್ನೂ ಸಹ ಅವರೇ ಕೊಟ್ಟು ಕಳುಹಿಸಿದ್ದಾರೆ. ನೂರು ರೂಪಾಯಿ ಸಂಬಳ, ಉತ್ತರೋತ್ತರ ಪ್ರಮೋಷನ್, ಇಲ್ಲಿಂದ ಪ್ರಯಾಣದ ಖರ್ಚು ಎಲ್ಲವನ್ನೂ ಕೊಡಲು ಒಪ್ಪಿದ್ದಾರೆ. ನನ್ನ ಸ್ನೇಹಿತರೆಲ್ಲರೂ ಮ|| ರಾಮದಾಸಪ್ಪನವರೂ ಸಹ ಹೋಗಬಹುದೆಂದು ಹೇಳಿದರು. ಆದರೂ ನಾನು ಯಾವ ಕಾರಣದಿಂದಲೂ ಹೋಗದೆ ಇಲ್ಲಿಯೆ ನಿಂತಿದ್ದೇನೆ."

ಪತ್ರಿಕೆಗಾಗಿ 4000 ರೂಪಾಯಿ ಬಂಡವಾಳ ಬೇಕಾಗಬಹುದೆಂದು ಅಂದಾಜು ಮಾಡಿ 50 ರೂಪಾಯಿಗಳ ಮೊತ್ತದ, ಶೇಖಡ 5 ರಂತೆ ಬಡ್ಡಿಯ ಮೇಲೆ, 80 ಸಾಲಗಳನ್ನು ಮಾಡಲು ತೀರ್ಮಾನಿಸಿ ಸ್ನೇಹಿತರಿಗೆ ಪತ್ರವನ್ನೂ ಬರೆದರು.

"No one can gainsay that there is now in the Mysore State an urgent need for an independent newspaper to organise as also to articulate public opinion on all matters connected with the welfare of the people. The absence of open criticism and unbiassed discussion of public affairs during the past few years has proved in an unmistakable manner the impending necessity for a strong press as an instrument of vigorous public life." ದೇಶಭಾಷೆಯಲ್ಲಿ ಪತ್ರಿಕೆಗಳಿದ್ದರೂ, ಇತರ ಭಾಷೆಗಳ ಪತ್ರಿಕೆಗಳಿಗೂ ಕೆಲಸವಿದೆ ಎಂಬ ಕಾರಣದಿಂದ ತಾವು ಈ ಪತ್ರಿಕೆಯನ್ನು ಪ್ರಾರಂಭಿಸುತ್ತಿರುವುದಾಗಿ ಆ ಪತ್ರದಲ್ಲಿ ಸೂಚಿಸಿದ್ದಾರೆ.

ಪತ್ರಿಕೆ ಪ್ರಾರಂಭವಾಗುವುದಕ್ಕೆ ಮೊದಲು, ಈಗಾಗಲೇ ಪರಿಚಿತರಾಗಿದ್ದ, ಆಗ್ಗೆ ದಿವಾನರಾಗಿದ್ದ, ವಿಶ್ವೇಶ್ವರಯ್ಯನವರನ್ನು ಬಾಲಬ್ರೂಇ ಬಂಗಲೆಯಲ್ಲಿ ಕಂಡು ತಮ್ಮ ಯೋಜನೆಯನ್ನು ಅವರ ಮುಂದಿಟ್ಟರು. ಅವರು, "ನಿಮ್ಮ ವಯಸ್ಸಿನ ಎರಡರಷ್ಟಾಗಿರುವವರ ಮೇಲೆ ಆಕ್ಷೇಪಣೆ ಹೂಡುತ್ತೀರೋ" ಎಂದು ಕೇಳಿದಾಗ, "ಆಕ್ಷೇಪಣೆಯಲ್ಲ, ಸಹಾಯ. ಗುಣದೋಷ

ವಿಮರ್ಶೆಯಿಂದ ಗುಣವನ್ನು ತಿಳಿಸಿದರೆ ತಮ್ಮ ಸರಕಾರಕ್ಕೆ ಜನದ ಬೆಂಬಲ ದೊರಕೀತು, ದೋಷವನ್ನು ತಿಳಿಸಿದರೆ ತಾವು ಅದನ್ನು ತಿದ್ದಿ ಸರಿಪಡಿಸುವಿರಿ," ಎಂದು ಉತ್ತರವಿತ್ತರು. ಇದನ್ನು ಕೇಳಿ ಗಟ್ಟಿಯಾಗಿ ನಕ್ಕು ದಿವಾನರು, ಇಂಥವರಿಗೆ ಅನುಮತಿ ಕೊಡುವುದರಲ್ಲಿ ಕಷ್ಟವೇನೂ ಇಲ್ಲ ಎಂದು ಹೇಳಿ, ಪತ್ರಿಕೆಗೆ 'ಫಾರ್ವರ್ಡ್', 'ಪ್ರೋಗ್ರೆಸ್' ಎಂದು ಹೆಸರಿಡಬಹುದೆಂದು ಸೂಚಿಸಿದರು. ತಮ್ಮ ಸ್ನೇಹಿತರು "ಕರ್ನಾಟಕ" ಎಂಬ ಹೆಸರನ್ನು ಸೂಚಿಸಿದ್ದಾರೆಂದೂ, ಇನ್ನೂ ನಿಶ್ಚಯ ಮಾಡಿಲ್ಲವೆಂದೂ ಇವರು ಹೇಳಿದರು.

ಹೀಗೆ ದಿವಾನ್ ಸಾಹೇಬರಿಂದ ಭರವಸೆ ದೊರೆತ ಮೇಲೆ ಇವರು 17-1-1913ರಂದು ಪತ್ರಿಕೆಯನ್ನು ಪ್ರಕಟಿಸಲು ಅನುಮತಿಗಾಗಿ ಅರ್ಜಿ ಹಾಕಿಕೊಂಡರು. ಆ ಅರ್ಜಿ ಡೆಪ್ಯೂಟಿ ಕಮಿಷನರ್ ಕುಮಾರಸ್ವಾಮಿಯವರಿಗೆ ಅಭಿಪ್ರಾಯಕ್ಕಾಗಿ ಬಂತು. ಡಿ ವಿ ಜಿ ಯವರ ಹಿಂದಿನ ಬರವಣಿಗೆಗಳನ್ನೆಲ್ಲ ಕಂಡಿದ್ದ ಅವರು ಅರ್ಜಿದಾರನನ್ನು ಖುದ್ದು ನೋಡಿ "ಈತ ಇನ್ನೂ ಹುಡುಗ. ಟೋಪಿ ಹಾಕಿಕೊಂಡಿದ್ದಾನೆ. ಪತ್ರಿಕೆ ನಡೆಸುವಂಥ ದೊಡ್ಡ ಜವಾಬ್ದಾರಿಯನ್ನು ಹೊರತಕ್ಕವನಲ್ಲ" ಎಂದು ಬರೆದು ಹೊತ್ತು ಹಾಕಿದರು. ಆ ಅರ್ಜಿ ಪೋಲೀಸ್ ಇಲಾಖೆಯ ಮುಖ್ಯಸ್ಥರಾದ ಶ್ರೀಕಂಠೇಶ್ವರ ಅಯ್ಯರ್ ಅವರ ಅಭಿಪ್ರಾಯಕ್ಕೆ ಬಂತು. ಇವರ ತಾತಂದಿರಾದ ಶೇಷಗಿರಯ್ಯನವರನ್ನು ಬಲ್ಲ ಅವರು ಈ ಹುಡುಗಸಂಪಾದಕನ ವಿಷಯವಾಗಿ ಅನುಕೂಲವಾಗಿ ಬರೆದರು. ಸರಕಾರದವರು, ಡಿ. ವಿ. ಗುಂಡಪ್ಪನವರು "ದಿ ಕರ್ನಾಟಕ" ಎಂಬ ಇಂಗ್ಲಿಷ್ ಪತ್ರಿಕೆಯನ್ನು ವಾರಕ್ಕೆರಡು ಬಾರಿ ಪ್ರಕಟಿಸಲು ಅನುಮತಿಯನ್ನು 12-3-1913ರಲ್ಲಿ ಕೊಟ್ಟರು. ತಾನು ಆ ಪತ್ರಿಕೆಗೆ ಸಂಪಾದಕನೆಂದೂ, ಮಾಲಿಕನೆಂದೂ, ಆ ಪತ್ರಿಕೆ ಸಿದ್ದಿಕಟ್ಟೆಯಲ್ಲಿರುವ ಕೆ. ಎಸ್. ಕೃಷ್ಣ ಅಯ್ಯರ್ ಅವರ ಐರಿಷ್ ಪ್ರೆಸ್ಸಿನಲ್ಲಿ ಮುದ್ರಿತವಾಗುವುದೆಂದೂ, ಡಿ ವಿ ಜಿ ಯವರು 2-4-1913ರಂದು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಮುಂದೆ ಘೋಷಣೆ ಮಾಡಿಕೊಂಡಿದ್ದಾರೆ.

ಮಾರ್ಲೆ ಮಹಾಶಯನು ಒಂದು ಕಡೆ "Though journalism may kill a man, it quickens his life while it lasts" ಎಂದು ಪತ್ರಕರ್ತನ ಜೀವನವನ್ನು ವರ್ಣಿಸಿದ್ದಾನೆ. "ಪತ್ರಿಕಾ ವೃತ್ತಿ ಒಬ್ಬನ ಪ್ರಾಣವನ್ನೇ ಹೀರಿಬಿಡಬಹುದು. ಆದರೆ ಅವನು ಬದುಕಿರುವವರೆಗೂ ಅವನನ್ನು ಚಟುವಟಿಕೆಯಿಂದಿರುವಂತೆ ಮಾಡುತ್ತದೆ" ಎಂಬ ಈ ಮಾತುಗಳು ಡಿ ವಿ ಜಿ ಯವರ

ವಿಷಯದಲ್ಲಿ ಅಕ್ಷರಶಃ ನಿಜವಾಗಿದೆ. ಈ ಪತ್ರಿಕೆಯನ್ನು ನಡಸುವುದರಲ್ಲಿ ಅವರು ಪಟ್ಟ ಕಷ್ಟ ಅಷ್ಟಿಷ್ಟಲ್ಲ. ಆದರೆ ಇದರಿಂದ ಅವರ ಜೀವ ಬೆಳೆಯಿತು, ದೇಶಕ್ಕೂ ಲಾಭವಾಯಿತು. ಕರ್ನಾಟಕ ಪತ್ರಿಕೆಯ ಕಥೆ ಮೈಸೂರು ದೇಶದ ಚರಿತ್ರೆಯ ಒಂದು ಮುಖ್ಯವಾದ ಭಾಗ ಎನ್ನಬಹುದು.

ಬುಧವಾರ ಶನಿವಾರಗಳು ಪ್ರಕಟವಾಗುತ್ತಿದ್ದ ಆ ಪತ್ರಿಕೆಯ ಮೊದಲನೆಯ ಸಂಚಿಕೆ 2–4–1913 ಬುಧವಾರ, ಪ್ರಕಟವಾಯಿತು. ವಾರ್ಷಿಕ ಚಂದಾ 8 ರೂಪಾಯಿಗಳು, ತಿಂಗಳಿಗೆ 14 ಆಣೆ. ಸರಾಸರಿ 12 ಪುಟಗಳಿದ್ದ ಆ ಪತ್ರಿಕೆಯಲ್ಲಿ ಸಂಪಾದಕರ ಅಭಿಪ್ರಾಯ, ಓದುಗರ ಪತ್ರಗಳು, ಸರಕಾರಿ ಸುದ್ದಿ, ಬೆಂಗಳೂರು ಮತ್ತು ಇತರ ಊರುಗಳ ಸುದ್ದಿಗಳು, ಲೇಖನಗಳು ಇರುತ್ತಿದ್ದುವು. ನಾಲ್ಕು ಪುಟಗಳಷ್ಟು ಜಾಹೀರಾತು ಇರುತ್ತಿತ್ತು. ಸಂಪಾದಕರ ಹೆಸರು ಪತ್ರಿಕೆಯಲ್ಲಿ ಇರುತ್ತಿರಲಿಲ್ಲ. ಆದ್ದರಿಂದಲೇ ಡಾ|| ಬಿ.ಪಿ. ರಾಧಾಕೃಷ್ಣ ಅವರು 'ನನ್ನ ತಂದೆ' ಎಂಬ ಗ್ರಂಥದಲ್ಲಿ, "ಕರ್ನಾಟಕ ಪತ್ರಿಕೆಯ ಸಂಪಾದಕರು ಯಾರಾಗಿದ್ದರೋ, ಆ ಪತ್ರಿಕೆ ಹಾಗೆಯೇ ನಡೆದುಕೊಂಡು ಬರದೆ ಮಧ್ಯದಲ್ಲಿ ಏಕೆ ನಿಂತುಹೋಯಿತೋ ನಾನು ತಿಳಿಯೆ. ಅದರಲ್ಲಿನ ಸಂಪಾದಕೀಯ ಲೇಖನಗಳು ವಿಚಾರಪೂರಿತವಾಗಿದ್ದುವು. ಶೈಲಿಯಲ್ಲಿ ಬಿಗಿ ಇತ್ತು. ಉತ್ತಮ ಪತ್ರಿಕೆಗೆ ಇರಬೇಕಾದ ಲಕ್ಷಣವೆಲ್ಲ ಇತ್ತು. ಇಂಥ ಪ್ರೌಢವರ್ಗದ ಪತ್ರಿಕೆ ಈಗ ನಮ್ಮಲ್ಲಿ ಇಲ್ಲದೆ ಇರುವುದು ನಮ್ಮ ದುರದೃಷ್ಟವೇ ಸರಿ" ಎಂದು ಬರೆದಿದ್ದಾರೆ.

ಸಂಪಾದಕೀಯದ ಜೊತೆಗೆ "Views and Reviews," (ಅಭಿಪ್ರಾಯಗಳು, ಪರಿಶೀಲನಗಳು) ಎಂಬ ಶೀರ್ಷಿಕೆ ಪ್ರಾರಂಭವಾಯಿತು. ಇವರಿಗೆ ಸ್ನೇಹಿತರಾಗಿದ್ದ ಸರ್ಕಾರದ ಮುಖ್ಯ ಕಾರ್ಯದರ್ಶಿಯವರಾಗಿದ್ದ ಡಿ. ಎಂ. ನರಸಿಂಗರಾಯರೂ, ಶಿವಮೊಗ್ಗೆಯ ಅಡ್ವೋಕೇಟ್ ಎಸ್. ಆರ್. ಬಾಲಕೃಷ್ಣ ರಾಯರೂ, ಹಾಸನದ ಪ್ಲೀಡರ್ ನಂಜುಂಡಯ್ಯನವರೂ, ಶಿವಮೊಗ್ಗೆಯ ಬಿ. ಗರುಡಾಚಾರ್ಯರೂ ಇದರಲ್ಲಿ ಬರೆಯುತ್ತಿದ್ದರು ಮತ್ತು ಸುದ್ದಿಗಳನ್ನು ಕಳುಹಿಸುತ್ತಿದ್ದರು. ಡಿ ವಿ ಜಿ ಯವರ ಸ್ನೇಹಿತರಾದ ಎಂ. ಜಿ. ವರದಾಚಾರ್ಯರು, ಎನ್. ನರಸಿಂಹಮೂರ್ತಿಗಳು ಪದ್ಯಗಳನ್ನೂ ವಿದ್ವತ್ಪೂರ್ಣವಾದ ಲೇಖನಗಳನ್ನೂ ಬರೆಯುತ್ತಿದ್ದರು. ಪತ್ರಿಕೆಯ ಮೊದಲನೆಯ ಸಂಚಿಕೆಯಲ್ಲೇ ಕರ್ನಾಟಕದ ಏಕೀಕರಣವನ್ನು ಕುರಿತ ಆಲೂರ ವೆಂಕಟರಾಯರ ಲೇಖನವಿದೆ. ಮುಜರಾಯಿ ಸಂಸ್ಥೆಗಳ ಆಡಳಿತವನ್ನು ಕುರಿತ ದಿವಾನ್ ರಂಗಾಚಾರ್ಯರ

ಟಿಪ್ಪಣಿಯಿದೆ. ಪತ್ರಿಕೆಯಲ್ಲಿ ಸರಕಾರದ ಆಡಳಿತ ವರದಿಯನ್ನು ಕುರಿತ ಲೇಖನಗಳೂ, ಸಮಾಜ ಸುಧಾರಣೆಯನ್ನು ಕುರಿತ ಲೇಖನಗಳೂ, ಶಾಸನ ಸಭೆಯ ನಡೆವಳಿಕೆಗಳ ವರದಿಗಳೂ ಬಂದಿವೆ.

ಮುಖ್ಯವಾಗಿ ಭಾರತೀಯತೆಯ ಹೆಚ್ಚುಗಾರಿಕೆಯನ್ನು ಎತ್ತಿತೋರಿಸುವುದೂ, ದೇಶಭಕ್ತಿಯನ್ನು ಪ್ರೋತ್ಸಾಹಿಸುವುದೂ ಪತ್ರಿಕೆ ಮಾಡಿದ ಮುಖ್ಯವಾದ ಕೆಲಸ. ಮೈಸೂರು ದೇಶದಲ್ಲಿ ಸಾರ್ವಜನಿಕ ಜೀವನದಲ್ಲಿ ಹುರುಪಾಗಲಿ ಗುರಿಯಾಗಲಿ ಇರಲಿಲ್ಲ. ಮೈಸೂರಿನಲ್ಲಿ ಶ್ರೀ ವೆಂಕಟಕೃಷ್ಣಯ್ಯನವರು ಇದರತ್ತ ದುಡಿಯುತ್ತಿದ್ದರೂ, ಪ್ರಜಾ ಪ್ರತಿನಿಧಿ ಸಭೆಯ ಸದಸ್ಯರು ಸಾರ್ವಜನಿಕ ಜೀವನದಲ್ಲಿ ಪಾಲುಗೊಳ್ಳುತ್ತಿದ್ದರೂ ಇದಾವುದೂ ಪರಿಣಾಮಕಾರಿಯಾಗಿರಲಿಲ್ಲ. ಈ ಕೊರತೆಯನ್ನು ನಿವಾರಿಸುವುದು ಬಹು ಮುಖ್ಯ ಎಂದು ತಿಳಿದು ಡಿ ವಿ ಜಿ ಕರ್ನಾಟಕದ ಮೊದಲನೆಯ ಸಂಚಿಕೆಯ ಸಂಪಾದಕೀಯದಲ್ಲಿಯೇ ಇದನ್ನು ಕುರಿತು ಬರೆದಿದ್ದಾರೆ. ಆರೋಗ್ಯಕರವಾದ ಸಾರ್ವಜನಿಕ ಜೀವನವನ್ನು ಬೆಳಸುವುದು, ಸಮರ್ಥವಾದ ಮತ್ತು ವಿವೇಕಯುತವಾದ ಸಾರ್ವಜನಿಕ ಅಭಿಪ್ರಾಯವನ್ನು ಹರಡುವುದು, ಯಾವ ರೂಪದಲ್ಲಾದರೂ ಕಾಣಬರುವ ಕೆಟ್ಟತನವನ್ನು ಖಂಡಿಸುವುದು, ಎಲ್ಲ ಸುದ್ದಿ ಸಮಾಚಾರಗಳನ್ನು ಆದಷ್ಟು ಶೀಘ್ರವಾಗಿ ಒದಗಿಸುವುದು ತಮ್ಮ ಉದ್ದೇಶವೆಂದು ಹೇಳಿದ್ದಾರೆ. ಹಿಮಾಲಯದಿಂದ ಹಿಡಿದು ಕನ್ಯಾಕುಮಾರಿಯವರೆಗೂ ಆಗ್ಗೆ ಕಾಣಬರುತ್ತಿದ್ದ ಒಗ್ಗಟ್ಟಿನ ಭಾವನೆಯನ್ನೂ, ಪ್ರಗತಿಯ ಭಾವನೆಯನ್ನೂ ಕನ್ನಡ ದೇಶದಲ್ಲೂ ಹರಡುವಂತೆ ಮಾಡಿ ಭಾರತ ವರ್ಷದಲ್ಲಿ ಅದಕ್ಕೆ ದೊರಕಬೇಕಾದ ಸ್ಥಾನಕ್ಕೆ ಅರ್ಹವಾಗುವಂತೆ ಮಾಡುವುದೂ ತಮ್ಮ ಉದ್ದೇಶವೆಂದು ಸಾರಿದ್ದಾರೆ.

ಸರಕಾರದ ಕಾನೂನಿನ ಬಲವೊಂದರಿಂದಲೇ ಪ್ರಜೆಗಳ ರಾಜಕೀಯ ಪ್ರಜ್ಞೆ ಬೆಳೆಯುವುದಿಲ್ಲವೆಂದೂ, ಆ ಕಾರಣದಿಂದ ಒಂದೇ ಅಭಿಪ್ರಾಯವನ್ನು ಹೊಂದಿರುವ ಪ್ರಜೆಗಳು ಪಕ್ಷಗಳನ್ನು ರಚಿಸಿಕೊಳ್ಳಬೇಕೆಂದೂ ಪ್ರೋತ್ಸಾಹಿಸಿದರು. ಜನಕ್ಕೆ ಆಡಳಿತದ ವಿಷಯದಲ್ಲಿ ತಿಳಿವಳಿಕೆ ಕೊಡುವ ಉದ್ದೇಶದಿಂದ ಸರಕಾರ ಪ್ರಕಟಿಸುತ್ತಿದ್ದ ಆಡಳಿತವರದಿಗಳ, ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನರು ಮಾಡುತ್ತಿದ್ದ ಭಾಷಣಗಳ ವಿಮರ್ಶೆ ಮಾಡುತ್ತಿದ್ದರು. ಹಾಗೆಯೇ ಅಧಿಕಾರಿಗಳ ಅರ್ಹತೆ ಅನರ್ಹತೆಯನ್ನು ಕುರಿತು ನಿರ್ಭಯವಾಗಿ ಟೀಕಿಸುತ್ತಿದ್ದರು. ಇದಕ್ಕೆ ಎರಡು ಉದಾಹರಣೆಗಳನ್ನು ಇಲ್ಲಿ ಕೊಡಬಹುದು: ಸೆಕ್ರೆಟೇರಿಯಟ್ಟಿನಲ್ಲಿ ಭೂಶಾಸ್ತ್ರದ ಕಛೇರಿಯ ಅನುಭವವಿದ್ದ ಬಿ. ಸುಬ್ಬರಾಯ

ರೆಂಬವರನ್ನು ಲೆಕ್ಕಪತ್ರದ ಇಲಾಖೆಗೆ ಕಳುಹಿಸಿ, ಅವರ ಬದಲು ಒಬ್ಬ ಮುನ್ಸೀಫರನ್ನು ಹಾಕಿದ್ದೇಕೆ? ನಾಲ್ಕು ತಿಂಗಳ ನಂತರ ಸುಬ್ಬರಾಯರನ್ನು ತಿರುಗಿ 'ಅಡಿಷನಲ್' ಅಧಿಕಾರಿಯಾಗಿ ಅದೇ ಸ್ಥಳಕ್ಕೆ ವರ್ಗಾವಣೆ ಮಾಡಿದ್ದೇಕೆ?—ಎಂದು ಕೇಳಿದ್ದಾರೆ. ಸಿ. ಸುಬ್ರಹ್ಮಣ್ಯ ಅಯ್ಯರ್ ಎಂಬವರನ್ನು ನ್ಯಾಯ ಇಲಾಖೆಯ ಪ್ರೊಬೇಷನರ್ ಆಗಿ ನೇಮಿಸಿದಾಗ, 'ಹಿಂಬಾಗಿಲಿನಿಂದ ಬಂದವರು' ಎಂದು ಆಗ್ರಹ ಮಾಡಿದ್ದಾರೆ. ಈತ ಬಿ.ಎ. ಪರೀಕ್ಷೆ ಪಾಸ್ ಮಾಡಲು ಮೂರುಸಲ ಕೂರಬೇಕಾಯಿತು. ಅವರು ಬಿ.ಎಲ್. ಪಾಸು ಮಾಡಿದ ಮೇಲೂ ವಕೀಲರಾಗಿ ಕೆಲಸ ಮಾಡಿಲ್ಲ. ಈ ನೇಮಕಾತಿ ಇವರ ತಂದೆಯೋ ತಾತನೋ ಮಾಡಿದ ಯಾವುದೋ ಕೆಲಸಕ್ಕಾಗಿ ಕೊಡಲ್ಪಟ್ಟ ಬಹುಮಾನದಂಥಾದ್ದು. ಹಿಂದಿನ ಬಾಗಿಲಿನಿಂದ ಬರುವವರು, ಹಿಂದುಳಿದ ಜನಾಂಗಕ್ಕೆ ಸೇರಿದವರೆಂದು ಬರುವವರು – ಹೀಗೆ ಸರಕಾರದ ಹುದ್ದೆಗಳಿಗೆ ಜನರನ್ನು ನೇಮಿಸಿದರೆ ಸಮರ್ಥವಾದ ಸರಕಾರ ಎಂಬ ಮಾತು ದೂರ ಉಳಿಯಿತು ಎಂದಿದ್ದಾರೆ.

ಶಾಸನ ಸಭೆಯು ಒಳಿತನ್ನು ಸಾಧಿಸಬೇಕೆನ್ನುವವರು, ಅದರ ಸದಸ್ಯರು ತಿಳಿವಳಿಕೆಯನ್ನು ಸಂಪಾದಿಸಿಕೊಳ್ಳುವುದಕ್ಕೆ ಯಾವುದಾದರೊಂದು ವಿಧಾನವನ್ನು ಮೊದಲು ಹುಡುಕಬೇಕು. ಅದರಲ್ಲಿ ಮುಖ್ಯವಾದ ಅಂಶಗಳು ಮೂರು: (1) ವೈಯಕ್ತಿಕ ಭಿನ್ನಾಭಿಪ್ರಾಯಗಳನ್ನು ಆದಷ್ಟು ಮರೆಯಬೇಕು (2) ಸಾರ್ವಜನಿಕ ವಿಚಾರಗಳನ್ನು ಕುರಿತು ಅಧ್ಯಯನ ಮಾಡಬೇಕು ಮತ್ತು ಅವುಗಳನ್ನು ಕುರಿತು ಚಿಂತಿಸಬೇಕು (3) ಪ್ರಜಾ ಸಮುದಾಯದೊಡನೆ ಬೆರೆಯಬೇಕು. ನಮ್ಮ ವಿದ್ಯಾವಂತ ಪ್ರಜೆಗಳೂ, ವಕೀಲರೂ, ನಿವೃತ್ತ ಅಧಿಕಾರಿಗಳೂ ಸಾರ್ವಜನಿಕ ಜೀವನದಲ್ಲಿ ಪಾಲುಗೊಳ್ಳಲು ಮುಂದೆ ಬರದೆ ಹೋದರೆ, ಸರಕಾರದ ಅವ್ಯವಸ್ಥೆಯನ್ನು ಕುರಿತು ಸುಮ್ಮನೆ ಪುಕಾರು ಮಾಡುವುದರಲ್ಲಿ ಉಪಯೋಗವೇನು? ಸರಕಾರದ ಕಾರ್ಯರೀತಿಯನ್ನು ವಿಮರ್ಶೆಗೆ ಒಳಪಡಿಸದಿದ್ದರೆ ಅದು ನಿರ್ವೀರ್ಯವಾಗುತ್ತದೆ.

ಆದ್ದರಿಂದ ಪ್ರಜಾಜನ, ಸಾರ್ವಜನಿಕ ವಿಚಾರದಲ್ಲಿ ಆಸಕ್ತಿ ವಹಿಸಬೇಕು. ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಬೇಕು. ಅದಕ್ಕೆ ಒಂದು ಸಾಧನವೆಂದರೆ ಪತ್ರಿಕೆಗಳಿಗೆ ಬರೆಯುವುದು. ಪ್ರಜಾಜನರನ್ನು ಹೀಗೆ ಮಾತನಾಡಲು ಪ್ರೋತ್ಸಾಹಿಸುತ್ತಿದ್ದರೂ, ಆಡಳಿತಗಾರರ ಮಾತುಗಾರತನವನ್ನು ಡಿ ವಿ ಜಿ ಹೀಯಾಳಿಸಿದ್ದಾರೆ.

"ಈಗ ಎಲ್ಲಿ ನೋಡಿದರೂ ಶಬ್ದಮಯವಾಗಿದೆ. ಯಾರನ್ನು ನೋಡಿದರೂ ಕಾನ್‌ಫರೆನ್ಸು, ಕಮಿಟಿ ಇದೇ ಮಾತುಗಳನ್ನಾಡುತ್ತಿರುವರು. ಉಪನ್ಯಾಸಗಳು ಕಂಠದಿಂದ ಹೊರಡುತ್ತಿದೆಯೇ ಹೊರತು ಹೃದಯದಿಂದ ಹೊರಡುತ್ತಿರುವಂತೆ ಕಾಣುವುದಿಲ್ಲ. ದೇಶಾಭಿಮಾನವೂ ಪ್ರಜಾಹಿತ ಚಿಂತನೆಯೂ ನಮ್ಮ ಜನರ ನಾಲಿಗೆಗೆ ರುಚಿಯಾದ ಮಾತುಗಳೋ ಅಥವಾ ಅವರ ಮನಸ್ಸಿನಲ್ಲಿ ಪ್ರಜ್ವಲಿಸುವ ದೀಪಗಳೋ ನಿಶ್ಚಯಿಸಿ ಹೇಳುವುದು ಈಗ ಸುಲಭವಾಗಿಲ್ಲ. ಮತಿವಂತನು ಯಾವಾಗಲೂ ಮಿತಭಾಷಿಯಾಗಿರುವನು."

ಮೈಸೂರು ದೇಶದಲ್ಲಿ ಬ್ರಾಹ್ಮಣೇತರರ ಪಾರ್ಟಿ ಪ್ರಾರಂಭವಾದ ದಿನಗಳ ವಿವರಗಳನ್ನೂ ಆ ಪತ್ರಿಕೆಯಲ್ಲಿ ಕಾಣಬಹುದು. ವಿಶ್ವೇಶ್ವರಯ್ಯನವರು ಸ್ಥಾಪಿಸಿದ್ದ ಇಕನಾಮಿಕ್ ಕಾನ್‌ಫರೆನ್ಸ್ ಸಹ ಇವರ ಟೀಕೆಗೆ ಒಳಗಾಯಿತು. ಅದರ ಕಾರ್ಯವಿಧಾನದಲ್ಲಿ ಗದ್ದಲವೇ ಹೆಚ್ಚು. ಅದರ ವರದಿಗಳು ಕೇವಲ ಮಾತುಗಳು. ಪ್ರಶ್ನೆಗಳನ್ನು ಕೇಳುವುದು, ಜವಾಬುಗಳನ್ನು ತರಿಸುವುದು, ಠರಾವುಗಳನ್ನು ಮಾಡುವುದು, ರಿಕಮಂಡೇಷನ್ ಕಳುಹಿಸುವುದು — ಹೀಗೆ ಈ ಸಂಸ್ಥೆಯು ಅಪಮ್ಯಯಕ್ಕೆ ಕಾರಣವಾಯಿತೆಂದೂ, ಆಡಳಿತವನ್ನು ಅದು ಸಡಿಲಮಾಡಿತೆಂದೂ ಡಿ ವಿ ಜಿ ಆಕ್ಷೇಪಿಸುತ್ತಿದ್ದರು.

ಕನ್ನಡ ಭಾಷೆಯ ಬೆಳವಣಿಗೆಯನ್ನು ಕುರಿತು ನಮ್ಮ ನಾಡಿನ ಜನ ಕನ್ನಡದಲ್ಲಿ ಮಾತನಾಡುವುದೇ ನಾಚಿಕೆಗೇಡು, ತಮ್ಮ ಮಕ್ಕಳು ಕನ್ನಡ ನಾಡಿನಲ್ಲಿ ಹುಟ್ಟಿರುವುದೇ ದುರದೃಷ್ಟಕರ, ಎಂದು ತಿಳಿದಂತಿದೆ. ತಮ್ಮ ತಾಯಿಯ ಹಾಲಿನೊಡನೆ ಬರುವ ಕನ್ನಡದಲ್ಲಿ ಮಾತನಾಡುವುದಕ್ಕಿಂತ ಇಂಗ್ಲಿಷಿನಲ್ಲಿ ತಪ್ಪಾಗಿಯಾದರೂ ಮಾತನಾಡುವುದನ್ನು ಪ್ರೋತ್ಸಾಹಿಸುತ್ತಿರುವಷ್ಟರ ಮಟ್ಟಿಗೆ ನಮ್ಮ ರಾಷ್ಟ್ರೀಯತ್ವವು ಅಧೋಗತಿಗೆ ಇಳಿದಿದೆ ಎಂದು ನೊಂದುಕೊಂಡಿದ್ದಾರೆ.

ನಮ್ಮ ದೇಶ ರಾಜಕೀಯವಾಗಿ ಆರ್ಥಿಕವಾಗಿ ಸಾಮಾಜಿಕವಾಗಿ ಮುನ್ನಡೆಯಬೇಕಾದರೆ ನಮ್ಮ ಭಾಷೆಯಲ್ಲಿ ಒಂದು ನವೋದಯವಾಗಬೇಕು. ಇದಕ್ಕಾಗಿ ಮೈಸೂರು, ಧಾರವಾಡ, ಮಂಗಳೂರು ಮತ್ತು ಇತರ ಪ್ರದೇಶಗಳಲ್ಲಿರುವ ಕನ್ನಡಿಗರ ಒಂದು ಪರಿಷತ್ತು ಸ್ಥಾಪನೆಯಾಗಬೇಕು. ಎಂದು ಸಲಹೆ ಮಾಡಿದ್ದಾರೆ.

ಭಟ್ಕಳ್ಳನ್ನು ಕನ್ನಡ ದೇಶದ ಹೊರದೇಶದ ವ್ಯಾಪಾರದ ಸೌಲಭ್ಯಕ್ಕಾಗಿ ರೇವು ಪಟ್ಟಣವನ್ನಾಗಿ ಮಾಡಿಕೊಳ್ಳಬೇಕೆಂದು ಸೂಚಿಸಿದವರಲ್ಲಿ ಅವರು

ಮೊದಲನೆಯವರು.

ಬೇರೆಡೆಗಳಿಂದ ಬೆಂಗಳೂರಿಗೆ ಜನರ ವಲಸೆ ಹೆಚ್ಚಾಗುತ್ತಿದೆಯೇ ಹೊರತು, ಪಟ್ಟಣದಲ್ಲಿ ಸುಖವಾಗಿ ವಾಸಮಾಡಲು ಬೇಕಾದ ಅನುಕೂಲಗಳು ಅಷ್ಟರ ಮಟ್ಟಿಗೆ ಹೆಚ್ಚಿಲ್ಲ. ಈ ಕಾರಣದಿಂದ ಬೆಂಗಳೂರಿನಲ್ಲಿ ವಾಸಮಾಡುವುದು ಕಷ್ಟಸಾಧ್ಯವಾಗುತ್ತಿದೆ ಎಂಬ ಮಾತನ್ನು ಅವರು 1917ರಲ್ಲೇ ಹೇಳಿದ್ದಾರೆ.

"ಭಾರತವು ಹೇಗೆ ಸ್ವಾತಂತ್ರ್ಯಕ್ಕಾಗಿ ಹೊಡೆದಾಡಿತು" ಎಂಬ ಶೀರ್ಷಿಕೆಯಲ್ಲಿ ದಕ್ಷಿಣಭಾರತದಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಕಾಲದಿಂದಲೂ ಭಾರತದ ಅನೇಕ ಮಹನೀಯರು ದೇಶದ ಸ್ವಾತಂತ್ರ್ಯಕ್ಕಾಗಿ ಹೇಗೆ ದುಡಿದರು ಎಂಬ ಕಥೆಯನ್ನು ಹೇಳಿದ್ದಾರೆ.

ಜಗದೀಶ ಚಂದ್ರ ಬೋಸ್, ಪಿ. ಸಿ. ರೇ, ರಾಮಾನುಜಂ ಮುಂತಾದ ವಿಜ್ಞಾನಿಗಳನ್ನು ಗಣಿತ ಶಾಸ್ತ್ರಜ್ಞರನ್ನು ಕುರಿತು ಲೇಖನಗಳಿವೆ. ಅವರ ಉಪನ್ಯಾಸಗಳ ವರದಿಗಳಿವೆ. ವಿವೇಕಾನಂದರು, ಗಾಂಧಿಯವರು, ಟಿಲಕರು, ಠಾಕೂರರು ಮುಂತಾದ ದೇಶಭಕ್ತರನ್ನು ಕುರಿತ ಲೇಖನಗಳಿವೆ.

ಪತ್ರಿಕೆಯಲ್ಲಿ ಬಂದಿರುವ ಒಂದು ಪ್ರಾರ್ಥನೆ :

Lord, Have mercy
On poor pedestrians
    And shaky cyclists
For our motorists are impatient
Our Police are incompetent
Our municipality is impotent
And our Government is indifferent.

ನಿರ್ದಾಕ್ಷಿಣ್ಯವಾದ ಟೀಕೆಗಳಿಂದ ಸರಕಾರಕ್ಕೂ ಪತ್ರಿಕೆಗೂ ಘರ್ಷಣೆಗಳು ಆಗಾಗ ಬರುತ್ತಿದ್ದುವು. ಆಗಿನ ಬ್ರಿಟಿಷ್ ರೆಸಿಡೆಂಟರಿಗೆ ಪತ್ರಿಕೆಯ ರಾಷ್ಟ್ರಕ ಧೋರಣೆ ಸರಿಬೀಳದೆ ಅವರು ಈ ಪತ್ರಿಕೆಯನ್ನು ದಂಡಿಸತಕ್ಕದೆಂದು ಮೈಸೂರು ಸರಕಾರಕ್ಕೆ ಸಲಹೆ ಮಾಡುತ್ತಿದ್ದರು. ಪಬ್ಲಿಕ್ ಲೈಬ್ರರಿಗೆ ಬಾಂಬೆ ಕ್ರಾನಿಕಲ್ ಮುಂತಾದ ದೇಶೀಯವಾದಿ ಪತ್ರಿಕೆಗಳು ಬರುತ್ತಿದ್ದುದನ್ನು ಕಂಡು ಕಾಬ್ ಎಂಬ ಬ್ರಿಟಿಷ್ ರೆಸಿಡೆಂಟನು "ಈ ವಿಷದ ಕಂತೆಯನ್ನು ಯಾಕೆ ತರಿಸುತ್ತೀರಿ ?" ಎಂದು ಕೇಳಿದ. ಅದಕ್ಕೆ 'ಕರ್ಣಾಟಕ', "ಇವನು ಯಾರು ? ಇವನಿಗೇನು ಸ್ಥಾನ ಮೈಸೂರು ರಾಜ್ಯದಲ್ಲಿ ?" ಎಂದು ಕೇಳಿತ್ತು.

ಇಷ್ಟಾದರೂ ಯಾವ ಸಮಸ್ಯೆಯಾಗಲಿ, ಕರ್ನಾಟಕ ಪತ್ರಿಕೆಯಲ್ಲಿ ಟೀಕೆ ಬಂದಾಗ ದಿವಾನರಾಗಲಿ, ಸಂಬಂಧಪಟ್ಟ ಅಧಿಕಾರಿಗಳಾಗಲಿ ಇವರನ್ನು ಕರೆದು ಸಮಾಧಾನವನ್ನು ಪಡೆದು, ಇವರಿಗೆ ವಿವರಣೆ ಕೊಡಬೇಕಾದರೆ ಕೊಟ್ಟು ಕಳುಹಿಸುತ್ತಿದ್ದರು.

ಇದು ಡಿ ವಿ ಜಿ ಯವರು ಅಂದು ಸಾರ್ವಜನಿಕ ಜೀವನದಲ್ಲಿ ಪಡೆದುಕೊಂಡಿದ್ದ ಸ್ಥಾನದ ಗುರುತಾಗಿದೆ.

6–6–1914 ರಿಂದ ಕೆಲವು ಮಂದಿ ಸ್ನೇಹಿತರ ಪ್ರೇರಣೆಯಿಂದ 'ಕರ್ನಾಟಕ' ಪತ್ರಿಕೆ ಮಾತೃಭಾಷೆಯಲ್ಲಿಯೂ ಮಾತನಾಡಲು ಯತ್ನಿಸಿತು. ಅದರ ಇಂಗ್ಲಿಷಿನ ಸೋದರನಂತೆ ಇದೂ ಸುದ್ದಿ ಸಮಾಚಾರ, ಟೀಕೆ ಇವುಗಳನ್ನು ಹೇಳುತ್ತಿತ್ತು. ಇದರಲ್ಲಿ ತಿಲಕರನ್ನು, ಬಿ. ವೆಂಕಟಾಚಾರ್ಯರನ್ನು ಕುರಿತ, ದೀರ್ಘವಾದ ಲೇಖನಗಳಿವೆ. ಷೇಕ್ಸ್‌ಪಿಯರ್ ಕವಿಯ 'ಮೆರ್ರಿವೈವ್ಸ್ ಆಫ್‌ವಿಂಡ್ಸರ್' ನಾಟಕದ ಭಾವಾವತರಣವಾದ "ಚತುರ ಸ್ತ್ರೀ ಪ್ರಹಸನ" ಇದೆ. ಬ್ರೌನಿಂಗ್ ಕವಿಯ "ದಿ ಪೈಡ್ ಪೈಪರ್ ಆಫ್ ಹ್ಯಾಮಲಿನ್" ಕವಿತೆಯ ಭಾಷಾಂತರ 'ಮಾಸಿದ ಬಟ್ಟೆಯ ಮೇಳಗಾರ' ಇದೆ. ಆದರೆ ಈ ಕನ್ನಡ ಪತ್ರಿಕೆಗೆ ಪ್ರೋತ್ಸಾಹ ಸಿಕ್ಕದ ಕಾರಣದಿಂದ ಇದು ಕೆಲವು ತಿಂಗಳುಗಳೊಳಗಾಗಿ ನಿಂತುಹೋಯಿತು.

ಇಂಗ್ಲಿಷಿನ "ಕರ್ನಾಟಕ" ಪತ್ರಿಕೆಯಾದರೋ ದೇಶದ ಅನೇಕ ಪತ್ರಿಕೆಗಳ, ದೇಶಾಭಿಮಾನಿಗಳ ಮೆಚ್ಚಿಕೆಯನ್ನು ಪಡೆಯಿತು. ಮೈಸೂರು ದೇಶದ ಸಾರ್ವಜನಿಕ ಜೀವನದ ಪ್ರಚೋದಕ ಶಕ್ತಿಯೆಂದು ಹೆಸರು ಪಡೆಯಿತು.

ಈ ಪತ್ರಿಕೆಯನ್ನು ನಡಸುತ್ತಿದ್ದಂತೆಯೇ, ಡಿ ವಿ ಜಿ ಯವರ ರಾಜಕೀಯ ದೃಷ್ಟಿಯಲ್ಲಿಯೂ ಒಂದು ಬೆಳವಣಿಗೆಯನ್ನು ಕಾಣಬಹುದು—ಮೂಲ ತತ್ತ್ವಗಳಲ್ಲಿ, ಸಾಧನಗಳಲ್ಲಿ.

ಗೋಪಾಲಕೃಷ್ಣ ಗೋಖಲೆಯವರ ಪ್ರಭಾವ ಡಿ ವಿ ಜಿ ಯವರ ಮೇಲೆ ಆದದ್ದು ಸುಮಾರು 1915ರಲ್ಲಿ. ಅದರ ಪರಿಣಾಮವೇನು ಎಂಬುದನ್ನು ಕುರಿತು ಮುಂದೆ ಹೇಳುವುದಾಗುತ್ತದೆ. ಆದರೆ ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ 'ಕರ್ನಾಟಕ' ಪತ್ರಿಕೆಯ ಮುಖಪುಟದಲ್ಲಿ "Public life must be spritualised" ಎಂಬ ಗೋಖಲೆಯವರ ಧ್ಯೇಯವಾಕ್ಯ ಕಂಡುಬಂದದ್ದು. 23.2.1916ರ ಪತ್ರಿಕೆಯ ಶೀರ್ಷಿಕೆಯಲ್ಲಿ "Devoted to the cause of National Progress : 'Public life must be spiritulised': G.K.

Gokhale” ಎಂದು ಮುದ್ರಿಸಲ್ಪಟ್ಟಿತು. ಮುಂದೆ ಅವರ ಪತ್ರಿಕೋದ್ಯೋಗದಲ್ಲಿ ಸಂಘಸಂಸ್ಥೆಗಳ ಸ್ಥಾಪನೆಯಲ್ಲಿ ಗೋಖಲೆಯವರ ವಾಕ್ಯ ಡಿ ವಿ ಜಿ ಯವರ ಧ್ಯೇಯವಾಗಿಹೋಯಿತು.

1921 ರಲ್ಲಿ ‘ಕರ್ಣಾಟಕ’ದ ಆಯುಸ್ಸು ಮುಗಿಯಿತು. ಅದನ್ನು ಕುರಿತು ಡಿ ವಿ ಜಿ ಯವರು, “ನಿರ್ದಾಕ್ಷಿಣ್ಯವೂ ಕಟುವೂ ಆದ ಟೀಕೆಯನ್ನು ಸಹಿಸ ಬಲ್ಲವರು ಸಮರ್ಥರಾದ ಅಧಿಕಾರಿಗಳು. ಅಸಮರ್ಥರೂ ಸಣ್ಣಮನಸ್ಸಿನವರೂ ಅಧಿಕಾರ ಪದವಿಗೆ ಏರಿದ ಮೇಲೆ ಪತ್ರಿಕಾವೃತ್ತಿ ಸಂತೋಷವಿಲ್ಲದ್ದಾಗುತ್ತದೆ. ಮೈಸೂರಿನಲ್ಲಿ ಪ್ರಜಾಪಕ್ಷವೆಂಬ ಪಾರ್ಟಿ ಹೊರಟಮೇಲೆ ‘ಕರ್ಣಾಟಕ’ ಪತ್ರಿಕೆ ಯನ್ನು ನಿಲ್ಲಿಸತಕ್ಕದ್ದೆಂದು ನನಗೆ ತೋರಿತು. ಆ ನಿರ್ಧಾರವನ್ನು ಒಪ್ಪಿದವರು ಕೆಲವರು ; ಒಪ್ಪದಿದ್ದವರು ಕೆಲವರು.

“ಒಟ್ಟಿನಲ್ಲಿ ನನಗೆ ವೈಯಕ್ತಿಕವಾಗಿ ಒದಗಿದ್ದ ಕೆಲವು ಕಾರಣಗಳಿಗಾಗಿ ಆಗ ನಾನು ಪತ್ರಿಕೆಯನ್ನು ನಿಲ್ಲಿಸಬೇಕಾಯಿತು. ಆಗ ಚಂದಾದಾರರುಗಳಿಂದ ಪತ್ರಿಕೆಗೆ ಬರಬೇಕಾಗಿದ್ದ ಬಾಕಿ ಸುಮಾರು ಏಳೆಂಟು ಸಾವಿರ ರೂಪಾಯಿಗಳಷ್ಟು” ಎಂದಿದ್ದಾರೆ.

‘ಕರ್ಣಾಟಕ’ ಪತ್ರಿಕೆ ಅಸ್ತಂಗತವಾದ ಮೇಲೆ ಇಂಗ್ಲೆಂಡಿನ ಸ್ಟೆಡ್ ಮಹಾಶಯನ ರೆವ್ಯೂ ಆಫ್ ರೆವ್ಯೂಸ್ ಎಂಬ ಪತ್ರಿಕೆಯ ಮಾದರಿಯಲ್ಲಿ ‘ದಿ ಕರ್ಣಾಟಕ ಅಂಡ್ ದಿ ಇಂಡಿಯನ್ ರೆವ್ಯೂ ಆಫ್ ರೆವ್ಯೂಸ್’ ಎಂಬ ಮಾಸ ಪತ್ರಿಕೆಯನ್ನು ಒಂದೆರಡು ವರ್ಷಗಳು ಪ್ರಕಟಿಸಿದರು. ಇತರ ಪತ್ರಿಕೆಗಳಲ್ಲಿ ಬಂದ ಅಭಿಪ್ರಾಯ ವಿಮರ್ಶೆಗಳನ್ನು ಪ್ರಕಟಿಸುವುದೂ, ಸ್ವತಂತ್ರ ಲೇಖನಗಳನ್ನು ಪ್ರಕಟಿಸುವುದೂ ಇದರ ಉದ್ದೇಶ. ಇದೂ ಅನೇಕ ವಿದ್ವಜ್ಜನರ, ದೇಶಾಭಿಮಾನಿ ಗಳ, ಅಧಿಕಾರಿಗಳ, ರಾಜಮಹಾರಾಜರ ಮೆಚ್ಚಿಕೆಯನ್ನು ಗಳಿಸಿತು. ಆದರೆ ಕೇವಲ ಮೆಚ್ಚಿಕೆಯು ಕಾಗದ, ಮಸಿ, ಮುದ್ರಕರಿಗೆ ಕೊಡಬೇಕಾದ ಬಿಲ್ ಇವುಗಳಿಗೆ ಅಗತ್ಯವಾದ ಹಣವನ್ನು ಒದಗಿಸಲು ಸಮರ್ಥವಾಗಲಿಲ್ಲ.

ದೇಶದ ಸಾರ್ವಜನಿಕ ಜೀವನಕ್ಕೆ ಬೀಜಪ್ರಾಯವಾಗಿದ್ದ ಇಂಥ ಒಂದು ಪತ್ರಿಕೆ ಪೋಷಣೆಯಿಲ್ಲದೆ ಸತ್ತದ್ದು ದೇಶದ ದುರ್ದೈವ.

ಗೋಖಲೆಯವರ ಹೆಜ್ಜೆಯಲ್ಲಿ

ಬೆಂಗಳೂರಿನಲ್ಲಿ ಸಾರ್ವಜನಿಕ ಚಟುವಟಿಕೆ ಪ್ರಾರಂಭವಾದದ್ದು ಕೆ. ಟಿ. ಅಪ್ಪಣ್ಣನವರ ಹಿಂದೂ ಕಾಫಿ ಕ್ಲಬ್ಬಿನಲ್ಲಿ ಮತ್ತು ಕೆ.ಎಸ್. ಕೃಷ್ಣ ಅಯ್ಯರ್ ಅವರ ಮನೆಯಲ್ಲಿ. ಅಲ್ಲಿ ಸೇರುತ್ತಿದ್ದ ಉತ್ಸಾಹಭರಿತ ಯುವಕರ ಪೈಕಿ ಡಿ ವಿ ಜಿ ಯವರೂ ಒಬ್ಬರು. ಅವರೆಲ್ಲ ಸೇರಿ ಪಾಪ್ಯುಲರ್ ಎಡುಕೇಷನ್ ಲೀಗ್ ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಅಲ್ಲಿ ವಾಚನಾಲಯದ ಜೊತೆಗೆ ವಾರವಾರವೂ ಉಪನ್ಯಾಸಗಳು ನಡೆಯುತ್ತಿದ್ದುವು. ಮಾಗಡಿ ರಸ್ತೆಯಲ್ಲಿದ್ದ ಕುಷ್ಠರೋಗದ ಮತ್ತು ಅಸಾಧಾರಣೀಯ ಸಾಂಕ್ರಾಮಿಕ ರೋಗಗಳ ಆಸ್ಪತ್ರೆಯ ರೋಗಿಗಳಿಗೆ ದೀಪಾವಳಿಯ ನಿಮಿತ್ತ ಸಿಹಿ ತಿಂಡಿಯನ್ನು ಹಂಚುವ ಏರ್ಪಾಟು ಆ ಸಂಸ್ಥೆಯ ಕಾರ್ಯಕ್ರಮಗಳಲ್ಲಿ ಒಂದು. ಅವರ ಮತ್ತೊಂದು ಸೇವಾಕಾರ್ಯ ಗುಡ್ಸ್ ಷೆಡ್ ರೋಡಿನ ದೇವಸ್ಥಾನದಲ್ಲಿ ಮಿಲ್ಲಿನ ಕೆಲಸಗಾರರಿಗಾಗಿ ರಾತ್ರಿ ಪಾಠ ಶಾಲೆಯನ್ನು ನಡೆಸಿದ್ದು. ಇವು ಕೇವಲ ನಾಲ್ಕೈದು ವರ್ಷ ಕೆಲಸ ಮಾಡಿದುವು.

ಇದರೊಂದಿಗೇ ನಡೆಯುತ್ತಿದ್ದ ಪ್ರಯತ್ನಗಳೆಂದರೆ "ಬೆಂಗಳೂರು ಸ್ಟಡಿ ಕ್ಲಬ್", "ಬೆಂಗಳೂರು ಬುಕ್ ಕ್ಲಬ್". ಇವುಗಳಲ್ಲೆಲ್ಲ ಡಿ ವಿ ಜಿ ಯವರ ಪಾತ್ರವಿತ್ತು.

1915ನೆಯ ಇಸವಿ ಡಿ ವಿ ಜಿ ಯವರ ಜೀವನದಲ್ಲಿ ಒಂದು ಮುಖ್ಯವಾದ ವರ್ಷವೆನ್ನಬೇಕು. ಆ ವರ್ಷದಲ್ಲಿಯೇ ಅವರು ಬೆಂಗಳೂರು ಮುನಿಸಿಪಲ್ ಸಮಿತಿಗೆ ಸದಸ್ಯರಾಗಿ ನಿಯಮಿತರಾದದ್ದು.

ಪುಟ್ಟಣ್ಣಶೆಟ್ಟರು ಬೆಂಗಳೂರು ಪುರಸಭೆಯ ಅಧ್ಯಕ್ಷರಾದ ಕೆಲವು ದಿನ ಗಳೊಳಗಾಗಿ ಪುರಾಭಿವೃದ್ಧಿಯ ಏರ್ಪಾಟುಗಳನ್ನು ಚರ್ಚಿಸಲು ಸಿಟಿಮಾರ್ಕೆಟ್ ಚೌಕದಲ್ಲಿ ಒಂದು ಸಭೆಯನ್ನು ಕರೆದಿದ್ದರು. ಅದಕ್ಕೆ ದಿವಾನರಾದ ವಿಶ್ವೇಶ್ವ ರಯ್ಯನವರೂ ಬಂದಿದ್ದು ಏನೋ ವಿಚಾರ ಹೇಳುತ್ತಿದ್ದರು. ಡಿ ವಿ ಜಿ ಆಗ ಏನೋ ಒಂದು ಅಡ್ಡಮಾತನ್ನೆತ್ತಿದ್ದರು. ವಿಶ್ವೇಶ್ವರಯ್ಯನವರು ಇವರ ಕಡೆ ತಿರುಗಿ "ನೀನು ದೊಡ್ಡ ಕ್ರಿಟಿಕ್. ಬರಿಯ ಆಕ್ಷೇಪಣೆಯಿಂದ ಏನಾಗುತ್ತದೆ. ಕೆಲಸ ಕ್ಕಿಳಿದು ನಮ್ಮ ಕಷ್ಟಗಳನ್ನು ತಿಳಿದುಕೊಳ್ಳಬೇಕು" ಎಂದಷ್ಟೇ ಅಲ್ಲದೆ, ಈ

ಯುವಕ ಪತ್ರಕರ್ತನ ಆಕ್ಷೇಪಣೆಗಳು ಪ್ರಯೋಜನಕ್ಕೆ ಬರಬೇಕಾದರೆ ಅವನಿಗೆ ಆಡಳಿತದ ಒಳನೋಟ ಸಿಗಬೇಕು ಎಂದು ಡಿ ವಿ ಜಿ ಯವರನ್ನು ಏಪ್ರಿಲ್ 1915ರಲ್ಲಿ ಪೌರಸಭೆಯ ಸದಸ್ಯನನ್ನಾಗಿ ನೇಮಕಮಾಡಿದರು. ಇದರಿಂದ ಪುಟ್ಟಣ್ಣಶೆಟ್ಟರೂ ಸಂತೋಷಪಟ್ಟರು. ಡಿ ವಿ ಜಿ ಯವರಿಗೂ ಆಡಳಿತದ ಕಷ್ಟಗಳ ಅನುಭವವಾಯಿತು.

ಮುಂದಿನ ವರ್ಷ 1916ರಲ್ಲಿ ಡಿ ವಿ ಜಿ "ಬೆಂಗಳೂರು ಸಿಟಿ ಮುನಿಸಿಪಲ್ ಬುಲಿಟಿನ್" ಎಂಬ ಸಮಾಚಾರ ಪತ್ರವನ್ನು ಪ್ರಕಟಿಸುವ ಪ್ರಯತ್ನ ಮಾಡಿದರು. ಇದು ವಿಶ್ವೇಶ್ವರಯ್ಯನವರಿಗೂ ಸಂತೋಷವನ್ನು ತಂದಿತು.

1915ನೇ ಮೇ ತಿಂಗಳು 1ನೆಯ ತಾರೀಖು ಬೆಂಗಳೂರು ಪಬ್ಲಿಕ್ ಲೈಬ್ರರಿ ಪ್ರಾರಂಭವಾಯಿತು. ಅದರ ಬೆಳವಣಿಗೆಗೆ ಪ್ರೋತ್ಸಾಹ ಕೊಡುತ್ತ ಆದರಿಂದ ಬಹುಹೆಚ್ಚು ಉಪಯೋಗವನ್ನು ಪಡೆದರು ಡಿ ವಿ ಜಿ ಯವರು.

ಅದೇ ತಿಂಗಳು ಮೂರನೆಯ ತಾರೀಖು ಕರ್ನಾಟಕ ಸಾಹಿತ್ಯ ಪರಿಷತ್ತಿನ ಪ್ರಾರಂಭೋತ್ಸವ. ಪರಿಷತ್ತಿಗೂ ಅವರಿಗೂ ಇದ್ದ ಸಂಬಂಧವನ್ನು ಕುರಿತು ಬೇರೆಯಾಗಿಯೇ ಹೇಳಬೇಕು.

ಅದೇ ವರ್ಷವೇ ಫೆಬ್ರವರಿ 19ರಂದು ಗೋಪಾಲಕೃಷ್ಣ ಗೋಖಲೆಯವರು ನಿಧನರಾದರು. ಅವರ ನಿಧನ ದೇಶಕ್ಕೆ ಒಂದು ದೊಡ್ಡ ವಿಪತ್ತೆಂದು ದೇಶವೆಲ್ಲ ಗೋಳಿಟ್ಟಿತು. ಗೋಖಲೆಯವರ ಆದರ್ಶವನ್ನು ಕಾರ್ಯರೂಪಕ್ಕೆ ತರುವುದಕ್ಕಾಗಿ ಡಿ ವಿ ಜಿ ಮತ್ತು ಅವರ ಸ್ನೇಹಿತರು ದಿ ಮೈಸೂರ್ ಸೋಷಿಯಲ್ ಸರ್ವಿಸ್ ಲೀಗ್ ಎಂಬ ಸಂಘವನ್ನು ಸ್ಥಾಪಿಸಿದರು. ಈ ಸಂಘದ ನಿಯಮಾವಳಿಯ ಮೊದಲನೆಯ ಪುಟದಲ್ಲಿಯೇ ಗೋಖಲೆಯವರ ಮಾತುಗಳನ್ನು ಮುದ್ರಿಸಲಾಗಿದೆ. ಈ ಸಂಸ್ಥೆಯೇ ಇಂದಿನ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ "ಮೂಲ ಪುರುಷ" ಎಂದು ಹೇಳಬಹುದು.

ಆಗ ಮದರಾಸಿಗೆ ಬಂದಿದ್ದರು ಗಾಂಧಿಯವರು. ಮದರಾಸಿನ ಜಿ. ಎ. ನಟೇಶನ್ ಅವರ ಮೂಲಕ ಸೋಷಿಯಲ್ ಸರ್ವಿಸ್ ಲೀಗಿನ ಈ ಸ್ನೇಹಿತರು ಅವರನ್ನು ಬೆಂಗಳೂರಿಗೆ ಆಹ್ವಾನಿಸಿದರು, ಗೋಖಲೆಯವರ ಆದರ್ಶಪಾಲನೆಗೆ ಸ್ಥಾಪಿಸಲ್ಪಟ್ಟ ಸಂಘಕ್ಕೆ ಇನ್ನೂ ಹೆಚ್ಚಿನ ಬೆಂಬಲ ಸಿಗಬಹುದೆಂಬ ಆಸೆಯಿಂದ. ಹಾಗೆ 5–5–1915 ರಂದು ಬೆಂಗಳೂರಿಗೆ ಗಾಂಧಿಯವರು ಬಂದ ದಿನ ಬೆಂಗಳೂರಿನಲ್ಲಿ ಹಬ್ಬವೋ ಹಬ್ಬ. ಸಂಭ್ರಮವೋ ಸಂಭ್ರಮ. ಅಂದು ನಡೆದ ಎರಡು ಮೂರು ಕಾರ್ಯಕ್ರಮಗಳಲ್ಲಿ ಸೋಷಿಯಲ್ ಸರ್ವಿಸ್ ಲೀಗಿನ ಆಶ್ರಯ

ವಲ್ಲಿ ಗಾಂಧಿಯವರು ಗೋಖಲೆಯವರ ಚಿತ್ರವೊಂದನ್ನು ಅನಾವರಣ ಮಾಡಿದ್ದು ಮುಖ್ಯವಾದದ್ದು. ಆ ಚಿತ್ರ ಇಂದಿಗೂ ಗೋಖಲೆ ಸಂಸ್ಥೆಯ ಸಭಾಂಗಣ ವನ್ನು ಅಲಂಕರಿಸುತ್ತಿದೆ. ಆ ಸಭೆಯ ಪ್ರಾರಂಭದಲ್ಲಿ ಬಳ್ಳಾರಿಯ ರಾಘವಾ ಚಾರ್ಯರು ಗೀತಾಂಜಲಿಯಿಂದ ಒಂದು ಹಾಡನ್ನೂ ಕೆಲವು ಸಂಸ್ಕೃತ ಶ್ಲೋಕ ಗಳನ್ನೂ ಪ್ರಾರ್ಥನಾ ರೂಪವಾಗಿ ಹಾಡಿದರು. ಡಿ ವಿ ಜಿ ಯವರು ಗಾಂಧಿ ಯವರನ್ನು ಸ್ವಾಗತಿಸುತ್ತ ಬಿನ್ನವತ್ತಳೆಯನ್ನು ಅರ್ಪಿಸಿದರು — ಕನ್ನಡದಲ್ಲಿ. ಅದರ ಇಂಗ್ಲಿಷ್ ರೂಪಾಂತರವನ್ನು ಕೆ. ಎಸ್. ಕೃಷ್ಣಅಯ್ಯರ್ ಓದಿದರು. ಅನಂತರ ಮಾತನಾಡಿದ ಗಾಂಧಿಯವರು, "ದೇಶ ಸೇವೆಯನ್ನು ಮಾಡಲು ಹೊರಟ ಪ್ರತಿಯೊಬ್ಬ ಭಾರತೀಯನೂ ರಾಜಕೀಯ ಕ್ಷೇತ್ರದಲ್ಲಿ ದುಡಿಯ ಬೇಕು. ರಾಜಕೀಯ ಜೀವನವನ್ನೂ ರಾಜಕೀಯ ಸಂಸ್ಥೆಗಳನ್ನೂ ಧರ್ಮಾ ಚರಣೆಯೋ ಎಂಬಂತೆ ನಡಸಬೇಕು. ಗೋಖಲೆಯವರು ನನಗೆ ಇದನ್ನು ಕಲಿಸಿದರು. ನಾನು ನನ್ನ ಜೀವನವನ್ನು ಇದರ ಪಾಲನೆಗಾಗಿಯೇ ಮುಡುಪಾ ಗಿಟ್ಟಿದ್ದೇನೆ" ಎಂದು ಹೇಳಿದರು. ಚಿತ್ರದ ಅನಾವರಣದ ನಂತರ ಎಂ. ವೆಂಕಟ ಕೃಷ್ಣಯ್ಯನವರು ಗಾಂಧಿಯವರ ಭಾಷಣದ ಮುಖ್ಯ ವಿವರಗಳನ್ನು ಕನ್ನಡದಲ್ಲಿ ಹೇಳಿದರು. ಎ. ಆರ್. ನಾಗೇಶ್ವರ ಅಯ್ಯರ್ ವಂದನಾರ್ಪಣೆ ಮಾಡಿದರು.

ಗೋಖಲೆಯವರ ಬಗ್ಗೆ ಈಗಾಗಲೇ ತಿಳಿದಿದ್ದ ಡಿ ವಿ ಜಿಯವರಿಗೆ ಗಾಂಧಿ ಯವರ ದೃಷ್ಟಿ ಒಂದು ಸ್ಫೂರ್ತಿಯನ್ನು ನೀಡಿತು. "Public life must be spiritualised" ಎಂಬ ಮಾತುಗಳು ಅವರ ಮನಸ್ಸಿನಲ್ಲಿ ಹೊಕ್ಕು ಅವರನ್ನು ಚಿಂತಿಸುವಂತೆ ಮಾಡಿದುವು : "ಸ ತಪಸ್ತಪ್ತ್ವಾ".

"ಕರ್ನಾಟಕ" ಪತ್ರಿಕೆ ಈ ಚಿಂತನೆಯನ್ನು ಪ್ರತಿಬಿಂಬಿಸುತ್ತದೆ. ಬೆಂಗಳೂರಿಗೆ ಗಾಂಧಿಯವರ ಭೇಟಿಯನ್ನು ಕುರಿತು ಬಂದ ವರದಿಯ ನಂತರ ಪತ್ರಿಕೆಯಲ್ಲಿ ಗೋಖಲೆಯವರ ಸುದ್ದಿಯಿಲ್ಲ. ಆದರೆ ಡಿ ವಿ ಜಿ ಗೋಖಲೆ ಯವರನ್ನು ಕುರಿತು ಒಂದು ಪುಟ್ಟ ಪುಸ್ತಕವನ್ನು ಬರೆದರು. ಅವರ ಉಪನ್ಯಾಸ ಸಂಗ್ರಹವನ್ನು ಮಾಡುವುದಕ್ಕಾಗಿ ಅವರ ಉಪನ್ಯಾಸಗಳನ್ನೂ ಓದಿದರು.

1916ರ ಫೆಬ್ರುವರಿಯಲ್ಲಿ ಗೋಖಲೆಯವರ ನಿಧನದ ವಾರ್ಷಿಕ ಸಮಯದಲ್ಲಿ ಗಾಂಧಿ, ವಿಶ್ವೇಶ್ವರಯ್ಯ ಇವರಿಬ್ಬರ ಧ್ಯೇಯಗಳನ್ನು ಕಾರ್ಯ ರೀತಿಗಳನ್ನು ಕುರಿತ ಲೇಖನವನ್ನು 'ಕರ್ನಾಟಕ'ದಲ್ಲಿ ಬರೆದರು. ಈಗಾಗಲೇ ದಿವಾನ್ ರಂಗಾಚಾರ್ಯರು ಮಾಡಿದ ಕೆಲಸ ಇವರಿಗೆ ಸ್ಫೂರ್ತಿ ನೀಡಿತ್ತು

ತಿಲಕರ ತೀವ್ರ ವಾದ ಇವರಿಗೆ ಇಷ್ಟವೆ.

ಹೀಗೆ ಈ ನಾಲ್ಕು ಮಹನೀಯರ ಆದರ್ಶದ ಜೊತೆಗೆ ಗೋಖಲೆಯವರ ಆದರ್ಶ ಕೂಡಿಕೊಂಡಿತು.

ಗಾಂಧಿಯವರ ಕಾರ್ಯನೀತಿ ಇನ್ನೂ ನಿಶ್ಚಿತವಾಗಿರಲಿಲ್ಲ. ಆತನ ಆಧ್ಯಾತ್ಮಿಕ ಒಲವು ದೇಶಭಕ್ತಿ ಎಲ್ಲ ಬೇಕಾದವುಗಳೇ. ವಿಶ್ವೇಶ್ವರಯ್ಯನವರಾದರೋ ಕೈಗಾರಿಕೋದ್ಯಮ ನಡೆಯಬೇಕೆಂಬ ಒಂದೇ ಗುರಿಯುಳ್ಳವರು. ರಂಗಾಚಾರ್ಯರು ಪ್ರಜಾಪ್ರತಿನಿಧಿಗಳಿಗೆ ಆದಷ್ಟು ಅಧಿಕಾರವನ್ನು ಕೊಡಬೇಕೆಂಬ ಗುರಿಯಿದ್ದ ಆಡಳಿತಗಾರರು. ತಿಲಕರು ಸ್ವರಾಜ್ಯಕ್ಕಾಗಿ ಚಳವಳಿಯನ್ನೇ ಆರಂಭಿಸಿದ್ದವರು.

ಗೋಖಲೆಯವರ ದೇಶಭಕ್ತಿ, ಉದಾತ್ತ ಸಂಕಲ್ಪ, ನಿರ್ಮಲ ಹೃದಯ, ಕ್ಷಮೆ ಮತ್ತು ನ್ಯಾಯ, ನಿಷ್ಪಕ್ಷಪಾತತೆ, ನ್ಯಾಯತತ್ಪರತೆ, ವಿಚಾರಶ್ರದ್ಧೆ, ನಿರ್ಮತ್ಸರವೂ ನಿರುದ್ವೇಗವೂ ಆದ ನಿರ್ಣಯ ಬುದ್ಧಿ ಇವು ಯಾರ ಮನಸ್ಸನ್ನು ತಾನೆ ಸೂರೆಗೊಳ್ಳವು? ಇದೂ ಅಲ್ಲದೆ "ಇಂಡಿಯಾ ದೇಶದ ರಾಜ್ಯ ವ್ಯವಸ್ಥೆಯನ್ನು ಪರಿಶೋಧಿಸಿ ಅದರಲ್ಲಿಯ ನ್ಯೂನಾತಿರೇಕಗಳನ್ನು ತಿದ್ದಿ, ಅದು ಪ್ರಜೆಗಳ ಯೋಗಕ್ಷೇಮಗಳನ್ನು ತೃಪ್ತಿಕರವಾಗಿ ಸಾಧಿಸಿಕೊಡಲಾಗುವಂತೆ ಮಾಡಲು ಶ್ರಮಪಟ್ಟವರಲ್ಲಿ ಗೋಖಲೆಯವರಿಗಿಂತಲೂ ಚತುರರೆಂದೂ ಸತ್ಯವ್ರತರೆಂದೂ ಸಾತ್ವಿಕರೆಂದೂ ಸಮರ್ಥರೆಂದೂ ದೂರದರ್ಶಿಗಳೆಂದೂ ಧೈರ್ಯಶಾಲಿಗಳೆಂದೂ ವಿಶಾಲಹೃದಯರೆಂದೂ ಪರಿಶುದ್ಧಚರಿತರೆಂದೂ ಎನ್ನಿಸಿಕೊಂಡಿರತಕ್ಕವರು ಯಾರೂ ಇಲ್ಲ. .... ಗೋಖಲೆಯವರು ರಾಜ್ಯ ಪರಿಷ್ಕಾರ ಕಾರ್ಯದಲ್ಲಿ ಪಡೆದ ಜಯಕ್ಕೂ ಖ್ಯಾತಿಗೂ ಅವರಲ್ಲಿದ್ದ ಕವಿಸಹಜವಾದ ಗುಣಗಳೇ ಬಹುಮಟ್ಟಿಗೆ ಕಾರಣಗಳೆಂಬುದಕ್ಕೆ ಸಂದೇಹವಿಲ್ಲ. ಅವರು ಸತ್ಕಾವ್ಯಪ್ರಿಯರಾಗಿ, ಅದರಿಂದ ತಮ್ಮ ಉದಾತ್ತಚಿತ್ತತೆಯನ್ನು ದೃಢಪಡಿಸಿಕೊಂಡಿದ್ದರು. ಅಷ್ಟೇ ಅಲ್ಲದೆ — ಜನಜೀವನಕ್ಕೆ ಬೇಕಾದ ಶುಭ ಸೌಂದರ್ಯಗಳಾವುವೆಂಬುದನ್ನು ಕಂಡುಕೊಳ್ಳುವ ಪ್ರತಿಭೆ, ಅವುಗಳನ್ನು ಸಂಪಾದಿಸುವ ಪ್ರಯತ್ನದಲ್ಲಿ ಉಜ್ವಲವಾದ ಉತ್ಸಾಹ, ಅನ್ಯಾಯ ಕೃತ್ರಿಮಗಳ ಖಂಡನೆಯಲ್ಲಿ ವೀರಾವೇಶ, ಸಮಸ್ತ ಜನರ ವಿಷಯದಲ್ಲಿಯೂ ಆರ್ದ್ರ ಹೃದಯತೆ, ಸತ್ಯವನ್ನು ಮರೆಮಾಚದ ನಯವನ್ನೂ ಹಾಗೆಯೇ ಗಾಂಭೀರ್ಯವನ್ನು ತೊರೆಯದ ನಿರ್ದಾಕ್ಷಿಣ್ಯವನ್ನೂ ಪ್ರಕಾಶಪಡಿಸಬಲ್ಲ ತೇಜೋವಿಶಿಷ್ಟವಾದ ವಾಕ್ಯಶಕ್ತಿ — ಈ ಕವಿಲಕ್ಷಣಗಳು ಗೋಖಲೆಯವರ ಜೀವಿತಚರ್ಯೆಯಲ್ಲಿ ತುಂಬಿದ್ದವು. ಒಂದು ಕಡೆ ನಮ್ಮ

ದೇಶದ ನಿಜಸ್ಥಿತಿಯನ್ನು ಕುರಿತು ಉಪನ್ಯಸಿಸುವುದು, ಮತ್ತೊಂದು ಕಡೆ ಮಂತ್ರಿಗಳೊಡನೆ ಮಿಳಿತರಾಗಿ ಕಾರ್ಯಸಾಧನರೀತಿಯನ್ನು ಪರ್ಯಾಲೋಚಿಸುವುದು. ಒಂದು ಕಡೆ ಸ್ನೇಹಿತರನ್ನು ಪ್ರೋತ್ಸಾಹಿಸುವುದು ; ಇನ್ನೊಂದು ಕಡೆ ಅವರು ಆತುರಪಟ್ಟು ನಡೆಯದಂತೆ ನೀತಿಗೊಳಿಸುವುದು. ಒಂದು ಕಡೆ ರಾಜ್ಯಕ್ರಮದ ಲೋಪದೋಷಗಳನ್ನು ಪ್ರಕಾಶಪಡಿಸುವುದು, ಇನ್ನೊಂದುಕಡೆ ಸ್ವದೇಶಿಯರಿಗೆ ಸಹನೆಯನ್ನೂ ಧೈರ್ಯವನ್ನೂ ಉಪದೇಶಿಸುವುದು — ಈ ವಿವಿಧ ಯುಕ್ತ್ಯನುಸಂಧಾನಗಳಲ್ಲಿ ಗೋಖಲೆಯವರು ಸಂತತಪ್ರಯತ್ನರಾಗಿದ್ದರು .... ದೇಶಸೇವಾಪ್ರವರ್ತನೆಯೇ ಗೋಖಲೆಯವರು ತಮ್ಮ ದೇಶೀಯರಿಗೆ ಮಾಡಿರುವ ಉಪಕಾರಗಳಲ್ಲಿ ಸರ್ವೋತ್ಕೃಷ್ಟವಾದದ್ದೆಂಬುದರಲ್ಲಿ ಸಂಶಯವಿಲ್ಲ .... ಅವರ ದೈವಭಕ್ತಿಯೇ ಅನುಷ್ಠಾನದಲ್ಲಿ ದೇಶಭಕ್ತಿಯ ಸ್ವರೂಪವನ್ನು ಪಡೆದಿತ್ತು .... ದೇಶದ ರಾಜಕೀಯ ಪ್ರಸಂಗಗಳಿಗೆ ಕೈಹಾಕುವವನು ಅದು ಒಂದು ಬಗೆಯ ವಿನೋದ ಅಥವಾ ಜೀವನೋಪಾಯ ಎಂದು ತಿಳಿಯದೆ ಅದೂ ಒಂದು ಮಹಾದೀಕ್ಷೆಯೆಂದು ಭಾವಿಸಿ ಪರಿಶುದ್ಧಚಿತ್ತನಾಗಿಯೂ, ಶ್ರದ್ಧಾಳುವಾಗಿಯೂ ಇರಬೇಕೆಂದೂ ಅವರು ನಂಬಿದ್ದರು .... ರಾಜ್ಯದ ಕಷ್ಟವಿರುವುದು ಮೂಲಸೂತ್ರದಲ್ಲಲ್ಲ, ಅದರ ಕ್ರಿಯಾನ್ವಯದಲ್ಲಿ. ಹೀಗೆ ಸರಕಾರದ ನಾನಾ ಇಲಾಖೆಗಳ ದಿನಂಪ್ರತಿಯ ಆಡಳಿತಗಳೂ ಅವುಗಳ ವಿವರಗಳೂ ಬಹು ಮುಖ್ಯವಾದವು. ಅವೇ ರಾಜ್ಯ ಪರಿಷ್ಕಾರಕನ ಮೂಲ ಸಾಮಗ್ರಿ. ಈ ವಾಸ್ತವಾಂಶ ಪರಿಶೋಧನೆಯಲ್ಲಿ ಗೋಖಲೆಯವರು ನಿಸ್ಸೀಮರೆನಿಸಿದ್ದರು .... ನಮ್ಮ ದೇಶಪ್ರೀತಿ ಸತ್ಯವಾದದ್ದಾದರೆ, ನಮ್ಮ ಸ್ವರಾಜ್ಯ ಉಳಿದು ಸಫಲವಾಗಬೇಕಾದರೆ ನಮ್ಮ ನಮ್ಮ ಬುದ್ಧಿಗಳನ್ನು ಯಾರಿಗೂ ಅಡವು ಹಾಕದೆ, ನಮ್ಮ ಅಂತಸ್ಸಾಕ್ಷಿಗಳಿಗೆ ಯಾವ ಬಣ್ಣದ ಮುಸುಕನ್ನೂ ಕವಿಸದೆ, ನಿರ್ಮಲವೂ ಸ್ವತಂತ್ರವೂ ಆದ ಸತ್ಯ ಹಿತ ದೃಷ್ಟಿಯಿಂದ ಸಾರ್ವಜನಿಕ ವಿಚಾರಗಳನ್ನು ನೋಡಿ ನಡಸಬೇಕು. ಇದು ಎಲ್ಲರಿಗೂ ಎಲ್ಲ ಕಾಲವೂ ಇರುವ ರಾಷ್ಟ್ರಕ ಧರ್ಮ. ಆ ಶ್ರೇಷ್ಠ ಧರ್ಮಕ್ಕೆ ಆದರ್ಶಪ್ರಾಯವಾದದ್ದು ಗೋಖಲೆಯವರ ಜೀವನ" — ಎಂದು ಗೋಖಲೆಯವರ ಜೀವನದ ಬಗ್ಗೆ ತಿಳಿದುಕೊಂಡರು ಡಿ ವಿ ಜಿ ಯವರು.

ಜೀವಶುದ್ಧಿಕ್ರಿಯೆಯಲ್ಲಿ ನಿರತರಾಗಿದ್ದ, ಅಧ್ಯಾತ್ಮಾನುಭವದಲ್ಲಿ ಮುಂದುವರಿದಿದ್ದ ಅವರ ದೇಶಸೇವೆಗೇ ತಮ್ಮ ಜೀವನವನ್ನು ಕೊಟ್ಟಿದ್ದ ಗಾಂಧಿಯವರ ಬಾಯಿಂದ "Public life must be spiritualised" ಎಂಬ ಗೋಖಲೆಯವರ ಧ್ಯೇಯವಾಕ್ಯ ಬಂದಾಗ ಡಿ ವಿ ಜಿ ಯವರ ಮನಸ್ಸಿನಲ್ಲಿ

ಒಂದು ಹೊಸ ಬೆಳಕು ಕಾಣಿಸಿರಬೇಕು. ಅವರೇ ಇನ್ನೊಂದು ಕಡೆ ಹೇಳಿರುವಂತೆ "ಮಂತ್ರದಿಂದ ತತ್ತ್ವದರ್ಶನವನ್ನು ಉಂಟಾಗಿಸುವುದು ಮನಸ್ಸಿನ ಕಾವು. ಅದೇ ಶ್ರದ್ಧೆ. ಅದೇ ತಪಸ್ಸು". ಗಾಂಧಿಯವರ ಈ ಮಂತ್ರೋಪದೇಶ ಅವರ ಮನಸ್ಸಿನ ಕಾವಿಗೆ, ತಪಸ್ಸಿಗೆ ಕಾರಣವಾಯಿತು ಮತ್ತು ಅವರು ಮೇಲೆ ವಿವರಿಸಿರುವಂತೆ ಗೋಖಲೆಯವರ ಗುಣಾತಿಶಯಗಳ ಹೆಚ್ಚುಗಾರಿಕೆಯನ್ನು, ನಮ್ಮ ದೇಶದ ಪರಿಸ್ಥಿತಿಯಲ್ಲಿ ಅವುಗಳ ಆವಶ್ಯಕತೆಯನ್ನು ಕಂಡರು. ಲೌಕಿಕ ವೈದಿಕಗಳು ಬೇರೆಬೇರೆಯೆಂದು ಕಾಣುವುದು ತಪ್ಪೆಂಬ ಅಭಿಪ್ರಾಯವಿದ್ದ ಅವರಿಗೆ ಅವೆರಡನ್ನೂ ಸಮನ್ವಯಗೊಳಿಸುವ ಈ ಸಾಹಸ ಒಂದು ಹೊಸ ದಾರಿಯನ್ನೇ ತೋರಿಸಿತು. ಹಾಗೆಯೇ ಕವಿಶಕ್ತಿಗೂ ರಾಜಕೀಯ ಪರಿಷ್ಕಾರಕನ ಶಕ್ತಿಗೂ ಇರುವ ಸಾಮ್ಯವನ್ನೂ ಸಾಹಿತ್ಯಕ್ಕೂ ರಾಜಕೀಯಕ್ಕೂ ಇರುವ ಸಂಬಂಧವನ್ನೂ ಇವರು ಕಂಡುಕೊಂಡರು. ಈ ತಪಸ್ಸು ಸುಮಾರು ಒಂದು ವರ್ಷಕಾಲ ನಡೆದು ಅದರ ಪರಿಣಾಮವಾಗಿ ಅವರು ತಮ್ಮನ್ನು ಗೋಖಲೆಯವರಿಗೆ ತೆತ್ತುಕೊಂಡುಬಿಟ್ಟರು. 23-2-1916 ರಿಂದ "ಕರ್ಣಾಟಕ" ಪತ್ರಿಕೆಯ ಧ್ಯೇಯ ವಾಕ್ಯ "Public life must be spiritualised" ಎಂಬುದಾಯಿತು, ಮತ್ತು 'In his Footsteps' ಎಂಬ ಶೀರ್ಷಿಕೆಯಲ್ಲಿ ಅವರು ಎರಡು ಲೇಖನಗಳನ್ನು ಬರೆದರು. ಗೋಖಲೆಯವರು ಅನುಸರಿಸಿದ ಮಾರ್ಗ ಡಿ ವಿ ಜಿ ಯವರದಾಯಿತು. ಮುಂದೆ ಪತ್ರಿಕರ್ತರಾಗಿ ರಾಜಕಾರಣಿಯಾಗಿ, ಸಾಹಿತಿಯಾಗಿ, ಸಾರ್ವಜನಿಕ ಕಾರ್ಯಕರ್ತನಾಗಿ ಯಾವ ಕೆಲಸ ಮಾಡಿದರೂ ಅವರಿಗೆ public life must be spiritualised ಎಂಬ ಮಂತ್ರ ಮಾರ್ಗದರ್ಶಕವಾಯಿತು.

ಈ ಕಾರಣದಿಂದಲೇ ಅವರ ರಾಜಕೀಯ ಗುರುಪರಂಪರಾ ಸ್ತೋತ್ರವೆಂದು ಹೇಳಲ್ಪಡಬಹುದಾದ ಶ್ಲೋಕವೊಂದರಲ್ಲಿ ಗೋಖಲೆಯವರನ್ನು ಸ್ಮರಿಸುವಾಗ, ಆ ಮಂತ್ರೋಪದೇಶವನ್ನು ಮಾಡಿದ ಗಾಂಧಿಯವರನ್ನೂ ಸೇರಿಸಿದ್ದಾರೆ.

ವಾಸಿಷ್ಠಂವ್ಯಾಸದಿಷ್ಟಂ ವಚನಮನುಸರನ್ ಯದ್ಬಭಾಷೇ ಯತೀಂದ್ರೋ ।
ವಿದ್ಯಾರಣ್ಯಸ್ತದಗ್ರ್ಯಂ ಮತಮುಪದಿದಿಶುರ್ಗೋಖಲೇ ಗಾಂಧಿ ಮುಖ್ಯಾಃ ॥
ಸಮ್ರಾಗ್ರಾಜ್ಯಾದಿ ಲೌಕ್ಯಂ ಚರಿತುಮಿಹಪರ ಜ್ಞಾನಿನಾ ಸಮ್ಯಗಿತ್ಥಂ ।

ಅದೂ ಅಲ್ಲದೆ "ಜನರಿಗೆ ಬದುಕು ಸತ್ಯವೂ ಪ್ರಿಯವೂ ಅರ್ಥಪೂರಿತವೂ ಆಗುವಂತೆ ಮಾಡಬೇಕೆಂಬ ಮಹೋದ್ದೇಶಕ್ಕೆ ರಾಜ್ಯಾಧಿಕಾರವನ್ನು ಸಾಧನವನ್ನಾಗಿ ಉಪಯೋಗಿಸಿ ಕೃತಕೃತ್ಯರಾದವರು ರಂಗಾಚಾರ್ಯರು. ಅದೇ

ಉದ್ದೇಶವನ್ನೇ ಸಾರ್ವಜನಿಕ ಕ್ಷೇತ್ರದೊಳಗಿನಿಂದ ಸಾಧಿಸಲು ಶ್ರಮಿಸಿದವರು ಗೋಪಾಲಕೃಷ್ಣ ಗೋಖಲೆಯವರು. ಅವರಿಬ್ಬರೂ ಪರಸ್ಪರ ಪೂರ್ಣಕಾಂಗಿಗಳು. ರಂಗಾಚಾರ್ಯರು ಬಯಸುತ್ತಿದ್ದಂಥ ಆದರ್ಶ ಪ್ರಜಾಪ್ರತಿನಿಧಿ ಗೋಖಲೆ. ಗೋಖಲೆ ಬಯಸುತ್ತಿದ್ದಂಥ ಆದರ್ಶ ಮಂತ್ರಿ ರಂಗಾಚಾರ್ಯರು." ಎಂದು ಅವರಿಗೆ ಮನದಟ್ಟಾಯಿತು.

ಈ ಇಬ್ಬರು ಮಹನೀಯರ ಜೀವನ ಪ್ರಭೆಯಿಂದ ಡಿ ವಿ ಜಿ ಯವರ ಜೀವನದ ಗುರಿ, ಮಾರ್ಗ ನಿಷ್ಕರ್ಷೆಯಾಗಿಹೋಯಿತು.

ದೇಶೀಯ ಸಂಸ್ಥಾನಗಳು

ಭಾರತಕ್ಕೆ ಸ್ವಾತಂತ್ರ್ಯ ದೊರಕುವುದಕ್ಕೆ ಮುಂಚೆ, ಅಂದರೆ 15-8-1947ಕ್ಕೆ ಹಿಂದೆ, ಫ್ರಾನ್ಸ್, ಪೋರ್ಚುಗಲ್ ದೇಶಗಳಿಗೆ ಸೇರಿದ ಅತ್ಯಲ್ಪ ಭಾಗಗಳನ್ನು ಬಿಟ್ಟರೆ ಭಾರತದ ಮಿಕ್ಕೆಲ್ಲ ಭಾಗಗಳೂ ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಸೇರಿತ್ತು. ಆ ವಿಸ್ತಾರವಾದ ಭಾಗದಲ್ಲಿ ರಾಜಕೀಯವಾಗಿ ಎರಡು ಬಗೆಗಳಿದ್ದವು. ಅದರಲ್ಲಿ ಸುಮಾರು ಮೂರರಲ್ಲೆರಡು ವಿಸ್ತೀರ್ಣವುಳ್ಳದ್ದಾಗಿ, ನಾಲ್ಕರಲ್ಲಿ ಮೂರರಷ್ಟು ಪ್ರಜಾಸಂಖ್ಯೆಯುಳ್ಳದ್ದಾಗಿ ಇದ್ದ ಭಾಗಕ್ಕೆ 'ಬ್ರಿಟಿಷ್ ಇಂಡಿಯ' ಎಂಬ ಹೆಸರು ರೂಢಿಯಲ್ಲಿದ್ದಿತು. ಇನ್ನೊಂದು ಭಾಗವು ದೇಶೀಯ ಸಂಸ್ಥಾನಗಳ ಸಮುದಾಯ. ಅದನ್ನು "ಇಂಡಿಯನ್ ಇಂಡಿಯ" ಅಥವಾ ದೇಶೀಯಭಾರತ ಎಂದು ಕರೆಯುತ್ತಿದ್ದರು.

ಬ್ರಿಟಿಷ್ ಇಂಡಿಯವು ಮದರಾಸು ಬೊಂಬಾಯಿ ಬಂಗಾಳ ಪಂಜಾಬ್ ಮುಂತಾದ 15 ಪ್ರಾಂತಗಳಾಗಿ ವಿಂಗಡಿಸಲ್ಪಟ್ಟಿತ್ತು. ಇದಕ್ಕೆ ಬೇರೆ ಬೇರೆ ಪ್ರಾಂತ ಸರಕಾರಗಳೂ, ಅವುಗಳ ಮೇಲ್ವಿಚಾರಣೆಗಾಗಿ ಗವರ್ನ್ಮೆಂಟ್ ಆಫ್ ಇಂಡಿಯಾ ಎಂಬ ಕೇಂದ್ರ ಸರಕಾರವೂ ಇದ್ದುವು.

ದೇಶೀಯ ಭಾರತದಲ್ಲಾದರೋ ಸುಮಾರು 571 ಸಂಸ್ಥಾನಗಳಿದ್ದುವು. ಕೆಲವು ದೊಡ್ಡ ರಾಜ್ಯಗಳು: ಹೈದರಾಬಾದು, ಮೈಸೂರು, ಕಾಶ್ಮೀರ, ತಿರುವಾಂಕೂರು, ಬರೋಡ ಮುಂತಾದವು. ಮಿಕ್ಕವು ಬಹುಶಃ ದೊಡ್ಡ ಪಾಲು, ಚಿಕ್ಕ ಚಿಕ್ಕ ರಾಜ್ಯಗಳು, ಪಾಳಯಪಟ್ಟುಗಳು. ಹೊರಗಣ ವಿಚಾರದಲ್ಲಿ ಅಂದರೆ ಇತರ ಹೊರರಾಜ್ಯಗಳೊಡನೆ ಸಂಬಂಧ ಬೆಳಸುವ ವಿಷಯದಲ್ಲಿ ಈ ಯಾವ ರಾಜ್ಯಗಳಿಗೂ ಸ್ವತಂತ್ರಾಧಿಕಾರವಿರಲಿಲ್ಲ. ಆ ವಿಷಯದಲ್ಲಿ ಎಲ್ಲವೂ ಬ್ರಿಟಿಷ್ ಸರಕಾರದ ವಶವಾಗಿದ್ದುವುಗಳೇ. ಆದರೆ ಒಳಗಣ ರಾಜ್ಯಭಾರ ವಿಚಾರದಲ್ಲಿ ಅವುಗಳಿಗೆ ಸ್ವಾತಂತ್ರ್ಯ, ಬ್ರಿಟಿಷ್ ಸರಕಾರದ ಉಸ್ತುವಾರಿಯ ಮಿತಿಯಲ್ಲಿ: ಮತ್ತು ಪೋಸ್ಟ್, ಟೆಲಿಗ್ರಾಫ್, ಮಿಲಿಟರಿ ವೆಚ್ಚ, ಆಮದು ರಫ್ತು ಇವುಗಳ ವಿಚಾರದಲ್ಲಿ ಬ್ರಿಟಿಷ್ ಇಂಡಿಯದ ಶಾಸನ ಸಭೆಗಳು ಮತ್ತು ಸರಕಾರಗಳು ತೀರ್ಮಾನಿಸಿದಂತೆ ನಡೆಯಬೇಕಾಗಿತ್ತು.

ಈ ಸಂಸ್ಥಾನಗಳ ಸರಕಾರ ಅವುಗಳ ರಾಜರ ಕೈಯಲ್ಲಿತ್ತು. ಒಂದೆರಡು ಕಡೆಗಳಲ್ಲಿ ವಿನಾ ಅವರೆಲ್ಲ ನಿರಂಕುಶ ಪ್ರಭುಗಳಾಗಿದ್ದವರೇ. ಸಾಂಗವಾದ ಪ್ರಜಾವಿಹಿತ ವ್ಯವಸ್ಥೆಯು ಯಾವ ಸಂಸ್ಥಾನದಲ್ಲಿಯೂ ಇರಲಿಲ್ಲ. ಮೈಸೂರು, ತಿರುವಾಂಕೂರು ಸಂಸ್ಥಾನಗಳಲ್ಲಿ ಪ್ರಜಾಪ್ರತಿನಿಧಿ ಸಭೆಗಳಿದ್ದರೂ ಅವಕ್ಕೆ ಯಾವ ವಿಧವಾದ ಅಧಿಕಾರವೂ ಇರಲಿಲ್ಲ. ಮಹಾಜನರು ತಮ್ಮ ಅಹವಾಲು ಗಳನ್ನು ಹೇಳಿಕೊಳ್ಳಲು ಅವು ಒಂದು ಅವಕಾಶವಾಗಿದ್ದುವು.

ಹೀಗಾಗಿ ಪ್ರಜಾಜನರ ಸ್ಥಿತಿ ಎಲ್ಲ ದೇಶೀಯ ಸಂಸ್ಥಾನಗಳಲ್ಲೂ ಕುಗ್ಗಿತ್ತು. ಒಳಗಡೆ ಜವಾಬ್ದಾರಿಯ ಭಯವಿಲ್ಲದ ಸ್ವಕೀಯರ ದರ್ಬಾರು, ಹೊರಗಡೆ ಆ ಭಾರವನ್ನು ಹೊರದ ಪರಕೀಯರ ಆಧಿಪತ್ಯ.

ಕಾಂಗ್ರೆಸ್ ಮುಂತಾದ ದೇಶೀಯ ಜನಸಂಸ್ಥೆಗಳ ಪ್ರಯತ್ನದಿಂದ ಬ್ರಿಟಿಷ್ ಇಂಡಿಯದ ಆಡಳಿತವ್ಯವಸ್ಥೆಯಲ್ಲಿ ಸುಧಾರಣೆಗಳಾಗಿದ್ದರೂ ಅವೊಂದೂ ದೇಶೀಯ ಸಂಸ್ಥಾನಗಳ ಆಡಳಿತ ವ್ಯವಸ್ಥೆಯಲ್ಲಿ ಯಾವ ಪರಿಣಾಮವನ್ನೂ ಉಂಟುಮಾಡಲಿಲ್ಲ.

ರಂಗಾಚಾರ್ಯರ ಜೀವನವನ್ನು ಅಧ್ಯಯನ ಮಾಡಿದ್ದ ಡಿ ವಿ ಜಿ ಯವರಿಗೆ, ಪಾಶ್ಚಾತ್ಯ ರಾಜಕೀಯ ತತ್ತ್ವಗಳ ಪರಿಚಯ ಹೊಂದಿದ್ದ ಅವರಿಗೆ, ದೇಶೀಯ ಸಂಸ್ಥಾನಗಳ ಸಮಸ್ಯೆ ಒಂದು ದೊಡ್ಡ ಸಮಸ್ಯೆಯಾಗಿ ಕಂಡಿತು. ಹಾಗೆಯೇ ಅದರತ್ತ ಮಹಾಜನರ ಜನಮುಖಂಡರ ಗಮನ ಹರಿಯದೇ ಇದ್ದದ್ದೂ ಕಂಡು ಬಂತು. ಆದದ್ದರಿಂದ ದೇಶೀಯ ಸಂಸ್ಥಾನದ ಸಮಸ್ಯೆ ಏನು, ಎಂದು ತಿಳಿದು ಕೊಳ್ಳಲು ಅವರು ಚರಿತ್ರೆ, ಕರಾರುಗಳು, ರಾಜ್ಯಾಂಗದ ಕಾನೂನು ಮುಂತಾದ ಎಲ್ಲ ವಿಷಯಗಳನ್ನೂ ಅಧ್ಯಯನ ಮಾಡಿದರು. ಇದಕ್ಕೆ ಪರಿಹಾರ ಸೂಚಿಸು ವಲ್ಲಿ ಅವರು ತೋರಿಸುವ ಬುದ್ಧಿಶಕ್ತಿ ಆಶ್ಚರ್ಯಕರವಾದದ್ದು.

ದೇಶೀಯ ಸಂಸ್ಥಾನಗಳ ವಿಷಯದಲ್ಲಿ ಸಾರ್ವಭೌಮತ್ವದ ಹೊಣೆಗಾರಿಕೆ ಮೂರು ತೆರನಾದದ್ದು ಎನ್ನುತ್ತಾರೆ ಡಿ ವಿ ಜಿ.

1) ದೇಶೀಯ ಸಂಸ್ಥಾನಗಳನ್ನು ಹೊರಗಣ ಶತ್ರುಗಳ ಕಾಟದಿಂದ ತಪ್ಪಿಸಿ ಕಾಪಾಡುವುದು ಮಾತ್ರವೇ ಅಲ್ಲದೆ ಅವುಗಳ ಒಳಗಡೆಯೇ ಹುಟ್ಟಿಕೊಳ್ಳಬಹುದಾದ ದಂಗೆ, ವಿಕ್ಷೋಭೆಗಳನ್ನು ಅಡಗಿಸಿ ಸಂಸ್ಥಾನದ ಪ್ರಜೆಗಳನ್ನು ಕ್ಷೇಮದಲ್ಲಿರಿಸುವುದು ಸಾರ್ವಭೌಮ ತ್ವದ ಕರ್ತವ್ಯವಾಗಿರುತ್ತದೆ. ಮತ್ತು ಸಂಸ್ಥಾನದ ಪ್ರಜೆಗೆ, ಸಂಸ್ಥಾನದ ಹೊರಗಡೆ ಎಲ್ಲೆಲ್ಲೂ ಬ್ರಿಟಿಷ್ ಇಂಡಿಯದ ಪ್ರಜೆಗೆ

ಸರಿಸಮಾನವಾಗಿ ಜೀವನ ಸೌಕರ್ಯಗಳೂ ಸ್ವಾತಂತ್ರ್ಯವೂ ದೊರಕುವಂತೆ ನೋಡುವುದು ಸಾರ್ವಭೌಮತ್ವಕ್ಕೆ ಸೇರಿದ ಕರ್ತವ್ಯವೇ.

2) ಸಂಸ್ಥಾನದ ಒಳಗಣ ಆಡಳಿತದಲ್ಲಿ ಅತಿಯಾದ ಅಕ್ರಮಗಳೂ ದೋಷಗಳೂ ತಲೆದೋರದಂತೆಯೂ, ಒಟ್ಟಿನಮೇಲೆ ರಾಜ್ಯ ನೀತಿಯು ಪ್ರಜಾ ಸಾಮಾನ್ಯಕ್ಕೆ ಹಿತಕರವಾಗಿರುವಂತೆಯೂ ಮೇಲುಸ್ತುವಾರಿಯಿರಿಸಿ ಅವಶ್ಯ ತೋರಿದಂತೆ ರಾಜ್ಯಭಾರಕ್ರಮ ವನ್ನು ಪರಿಷ್ಕಾರಗೊಳಿಸುವುದು.

3) ಸಂಸ್ಥಾನಾಧೀಶ್ವರರ, ಎಂದರೆ ರಾಜಮಹಾರಾಜರ ನವಾಬರ ಸಿಂಹಾಸನಾಧಿಕಾರವೂ ಇತರ ರಾಜವಂಶೀಯ ಮರ್ಯಾದೆ ಮೇಲ್ಹಕ್ಕುಗಳೂ ಅಲ್ಲಲ್ಲಿಯ ಶಾಸನ ಸಂಪ್ರದಾಯಗಳಿಗನು ಸಾರವಾಗಿ ನಡೆಯುವಂತೆ ನೋಡುವುದು.

ಎಂದು ಬ್ರಿಟಿಷ್ ಸರಕಾರವು ಸಂಸ್ಥಾನಗಳ ರಾಜರನ್ನು ಅವರ ಸ್ವಂತ ಪ್ರಜೆಗಳ ಆಗ್ರಹದಿಂದ ಕಾಪಾಡುವ ಜವಾಬ್ದಾರಿಯನ್ನು ಹೊತ್ತು ಕೊಂಡಿತೋ, ಅಂದೇ, ಆ ಜವಾಬ್ದಾರಿಯ ಸ್ವೀಕಾರದಲ್ಲಿಯೇ, ಬ್ರಿಟಿಷ್ ಸರ ಕಾರವು ಸಂಸ್ಥಾನದ ಪ್ರಜೆಗಳಿಗೆ ನ್ಯಾಯ ದೊರಕಿಸುವ ಜವಾಬ್ದಾರಿಯನ್ನು ಕೈಗೊಂಡಂತೆ ಆಯಿತು. ಆದದ್ದರಿಂದ ಸಂಸ್ಥಾನದ ಒಳ ಸರಕಾರದ ಮೇಲ್ವಿ ಚಾರಣೆಯ ಮತ್ತು ಪರಿಷ್ಕರಣೆಯ ವಿಷಯದಲ್ಲಿ ಬ್ರಿಟಿಷರಿಗಿರುವ ಸಾರ್ವ ಭೌಮ ಕರ್ತವ್ಯವಾದರೋ ಪ್ರಜಾವಿಹಿತವಾದ ಜವಾಬ್ದಾರಿ ಸರಕಾರದ ಸ್ಥಾಪನೆ ಯಿಂದಲೇ ಪರಿಹಾರವಾಗತಕ್ಕದ್ದು.

ರಾಜ್ಯದ ಮೂಲಸಾಮಗ್ರಿ ಪ್ರಜೆ, ಆಮೇಲೆ ಬರತಕ್ಕವರು ರಾಜರು. ಪ್ರಜೆಯ ಹಿತ ಸಾಧನೆ ರಾಜ್ಯದ ಮೊದಲನೆಯ ಕರ್ತವ್ಯ. ಆ ಕರ್ತವ್ಯವು ನೆರವೇರಲು ನಿರಂಕುಶನಾದ ರಾಜನನ್ನೋ ನವಾಬನನ್ನೋ ನಂಬಲಾಗದು. ಯಾವ ಒಬ್ಬನ ನಿರಂಕುಶಾಧಿಕಾರವೂ ಜನಹಿತಕ್ಕೆ ಅಸಂಗತವಾದದ್ದೇ. ಇಂಥ ನಿರಂಕುಶ ಪ್ರವರ್ತನೆಯ ಲಕ್ಷಣವೇ ಈಗ ನಮ್ಮ ದೇಶೀಯ ಸಂಸ್ಥಾನಗಳಲ್ಲಿ ದೊಡ್ಡದಾಗಿ ಎದ್ದು ಕಾಣುವ ದೋಷ. ನಮ್ಮ ಸಂಸ್ಥಾನದ ಪ್ರಭುಗಳು ರಾಜ್ಯಾಧಿಕಾರದಲ್ಲಿ ತಮ್ಮ ಪ್ರಜೆಗಳನ್ನು ಪ್ರತ್ಯಕ್ಷ ಭಾಗಸ್ಥರನ್ನಾಗಿ ಮಾಡಿ ಪ್ರಜಾಸಮ್ಮತವಾದ ಜವಾಬ್ದಾರಿ ಸರಕಾರವನ್ನು ತಮ್ಮ ಸಂಸ್ಥಾನಗಳಲ್ಲಿ ಸ್ಥಾಪನೆ ಮಾಡಿದಲ್ಲದೆ ಅವರಿಗೆ ಸಾರ್ವಭೌಮಾಧಿಕಾರದ ಕೈ ಹಿಡಿತದಿಂದ ಬಿಡುಗಡೆ

ಆಗಲಾರದು.

ಈ ಅಭಿಪ್ರಾಯಗಳಿಗೆ ಮನ್ನಣೆ ದೊರಕಿಸಬೇಕೆಂದು ಡಿ ವಿ ಜಿ ಅನೇಕ ದೆಸೆಗಳಲ್ಲಿ ವಿಧವಿಧವಾದ ಯುಕ್ತಿಗಳನ್ನು ಉಪಯೋಗಿಸಿ ವಾದ ಮಾಡಿದರು. ಮೊಟ್ಟಮೊದಲನೆಯದಾಗಿ ಮಹಾರಾಜರುಗಳನ್ನೇ ಉದ್ದೇಶಿಸಿ ಅವರಿಗೆ ಕರ್ತವ್ಯದ ಅರಿವು ಮೂಡಿಸಲು ಪ್ರಯತ್ನಪಟ್ಟರು.

1917ರಲ್ಲಿ ಬಿಕಾನೇರ್ ಸಂಸ್ಥಾನದ ಮಹಾರಾಜರು ನರೇಂದ್ರ ಮಂಡಳದ ಅಧ್ಯಕ್ಷರಾಗಿದ್ದರು. ಅವರಿಗೆ ದೇಶೀಯ ಸಂಸ್ಥಾನಗಳ ಸಮಸ್ಯೆಯನ್ನು ಕುರಿತು 'ಕರ್ಣಾಟಕ' ಪತ್ರಿಕೆಯು "ಎ ಮೈಸೂರಿಯನ್" ಬರೆದ ಐದು ಪತ್ರಗಳನ್ನು ಪ್ರಕಟಿಸಿತು. ಅನಂತರ ಅವುಗಳನ್ನು ಸಂಗ್ರಹಿಸಿ ಡಿ ವಿ ಜಿ ಒಂದು ಚಿಕ್ಕ ಪುಸ್ತಕವನ್ನಾಗಿ ತಮ್ಮ ಹೆಸರಿನಲ್ಲಿಯೇ ಪ್ರಕಟಿಸಿದರು. ಅದಕ್ಕೆ ಮದರಾಸಿನ ಸರ್ ಎಸ್. ಸುಬ್ರಹ್ಮಣ್ಯಅಯ್ಯರ್ ಅವರ ಮುನ್ನುಡಿಯಿದೆ. ಆ ಪತ್ರಗಳಲ್ಲಿ ದೇಶೀಯ ಸಂಸ್ಥಾನಗಳ ಸಮಸ್ಯೆಯನ್ನು ಕುರಿತು ಮಾತ್ರವೇ ಅಲ್ಲದೆ ಸರಕಾರವನ್ನು ಕುರಿತು, ಜವಾಬ್ದಾರಿ ಸರಕಾರವನ್ನು ಕುರಿತು, ರಾಜ್ಯಾಧಿಪತಿ ಮತ್ತು ಅವನ ಮಂತ್ರಿಗಳ ಅನ್ಯೋನ್ಯ ಸಂಬಂಧಗಳನ್ನು ಕುರಿತು, ರಾಜನಿಗೆ ಆಗಬೇಕಾದ ವಿದ್ಯಾಭ್ಯಾಸವನ್ನು ಕುರಿತು ದೀರ್ಘವಾದ ವಿವರಣೆಗಳಿವೆ. ಭಾರತದ ಚರಿತ್ರೆಯನ್ನು ರಾಜ್ಯಭಾರ ಕ್ರಮವನ್ನು ಕುರಿತು ಡಿ ವಿ ಜಿ ಯವರು ಎಷ್ಟು ಆಳವಾಗಿ ಅಧ್ಯಯನ ಮಾಡಿದ್ದರು, ಅದನ್ನು ಕುರಿತು ಎಷ್ಟು ಚಿಂತಿಸಿದ್ದರು ಎಂಬುದು ಈ ಪತ್ರಗಳಿಂದ ತಿಳಿದು ಬರುತ್ತದೆ. ಮುಂದೆ ಅವರು ದೇಶೀಯ ಸಂಸ್ಥಾನಗಳನ್ನು ಕುರಿತು ಬರೆದ ಅನೇಕ ಗ್ರಂಥಗಳಿಗೆ, ಲೇಖನಗಳಿಗೆ, ಮನವಿಗಳಿಗೆ, ಪತ್ರಗಳಿಗೆ ಆ ಪುಸ್ತಕ ಪೀಠಿಕಾರೂಪವಾಗಿದೆ ಎನ್ನಬಹುದು.

ಮಾರ್ಲೆ ಮಹಾಶಯನು ಯೂರೋಪಿನ ರಾಜಕೀಯ ತತ್ತ್ವಗಳನ್ನು ಸಂಸ್ಥೆಗಳನ್ನು ಭಾರತಕ್ಕೆ ತರಲು ದೇಶೀಯ ಸಂಸ್ಥಾನಗಳು ಒಂದು ಸಾಧನವಾಗಬಹುದು ಎಂದು ಹೇಳಿದ ಮಾತನ್ನು ಉದಾಹರಿಸುತ್ತ ಅಂಥ ಸಂಸ್ಥೆಗಳನ್ನು ಬ್ರಿಟಿಷ್ ಇಂಡಿಯಕ್ಕೆ ತರುವುದಾದರೆ ದೇಶೀಯ ಸಂಸ್ಥಾನಗಳಲ್ಲೂ ಅಂಥ ಸಂಸ್ಥೆಗಳನ್ನು ತರಬೇಕು; ಜಗತ್ತಿನ ಪೂರ್ವದೇಶಗಳಲ್ಲಾಗಲಿ ಪಶ್ಚಿಮ ದೇಶಗಳಲ್ಲಾಗಲಿ, ಎಲ್ಲೇ ಆಗಲಿ, ಆ ರಾಜ್ಯಗಳ ಪ್ರಜಾಜನರೇ ಎಲ್ಲ ಅಧಿಕಾರಕ್ಕೂ ಮೂಲ ಮತ್ತು ಅವರೇ ಸಾರ್ವಭೌಮರು; ಸ್ವಾತಂತ್ರ್ಯ ಎಂಬುದೇ ಸಮಕಾಲೀನ ರಾಜಕೀಯ ಭಾವನೆಯಾಗಿ ಪ್ರಬಲಿಸುತ್ತಿದೆ; ಆ ಕಾರಣದಿಂದ

ಪ್ರಪಂಚದ ಜನತೆಯು ಮುಂದುವರಿಯುತ್ತಿರುವಾಗ ದೇಶೀಯ ಸಂಸ್ಥಾನಗಳ ಪ್ರಜೆಗಳು ಹಿಂದುಳಿದಿರಬಾರದು. ಈ ಕಾರಣಗಳಿಗಾಗಿ ಈ ವಿಷಯವನ್ನು ಕುರಿತು ಚಿಂತಿಸಬೇಕೆಂದು ಬಿಕನೀರ್ ಮಹಾರಾಜರಿಗೆ ಆ ಪತ್ರಗಳಲ್ಲಿ ಸೂಚಿಸಿದ್ದಾರೆ.

ಒಂದು ನಿಜವಾದ ರಾಜ್ಯ ನಿಬಂಧನೆಯಲ್ಲಿ ಇರಬೇಕಾದ ಅಂಶಗಳಾವುವು ಎಂಬುದನ್ನು ವಿವರಿಸಿದ್ದಾರೆ:

1) ಶಾಸನಪಾರಮ್ಯ
2) ಪ್ರಜೆಗಳಿಂದ ಆರಿಸಲ್ಪಟ್ಟ ಪ್ರತಿನಿಧಿಗಳ ಸಭೆ. ಅದಕ್ಕೆ ಸರಕಾರವು ಜವಾಬ್ದಾರಿಯಾಗಿರತಕ್ಕದ್ದು.
3) ಗ್ರಾಮಾಂತರ ಪ್ರದೇಶಗಳಿಗೆ ಪಂಚಾಯಿತಿ ರಾಜ್ಯದ ಏರ್ಪಾಟು.
4) ಸರಕಾರದ ಕಾರ್ಯನಿರ್ವಾಹಕ ಮಂಡಳಿಯ ಅರ್ಧದಷ್ಟು ಜನ ಪ್ರಜಾಪ್ರತಿನಿಧಿ ಸಭೆಯಿಂದ ಚುನಾಯಿತರಾಗಿರಬೇಕು.
5) ವಾಕ್ ಸ್ವಾತಂತ್ರ್ಯ ಮತ್ತು ವಿಮರ್ಶಾ ಸ್ವಾತಂತ್ರ್ಯಗಳು ಇರಬೇಕು.

ಈಗ ಅಧಿಕಾರಿಗಳ ಕೈಯಲ್ಲಿರುವ ಅಧಿಕಾರವು ಪ್ರಜೆಗಳಿಗೆ ಬರಬೇಕು. ಅದೇ ಸ್ವರಾಜ್ಯ. ಸ್ವರಾಜ್ಯಕ್ಕೆ ಯಾವ ಜನರೂ ಅರ್ಹರಲ್ಲವೆನ್ನಲಾಗದು.

ಅದೂ ಅಲ್ಲದೆ ಮಹಾರಾಜರುಗಳು ಅವರ ಸ್ಥಾನಕ್ಕೆ ತಕ್ಕಂತೆ ನಡೆದು ಕೊಳ್ಳಬೇಕಲ್ಲವೆ! ಅಂದರೆ ಅವರು ಕಾರ್ಯಾಂಗ ಶಾಸನಾಂಗ ಮುಂತಾದ ರಾಜ್ಯಾಂಗಕ್ಕೆ ವಿಧೇಯರಾಗಿರಬೇಕು. ಒಬ್ಬ ರಾಜನೀತಿಜ್ಞರು ಬ್ರಿಟಿಷ್ ರಾಜರನ್ನು ಬ್ರಿಟಿಷ್ ಪ್ರಜಾಪ್ರಭುತ್ವದ ವಂಶಪರಂಪರಾಗತ ಅಧ್ಯಕ್ಷರು ಎಂದು ಕರೆದಿದ್ದಾರೆ. ಹಾಗೆಯೇ ನಮ್ಮ ದೇಶೀಯ ಸಂಸ್ಥಾನಗಳ ಅರಸರು ಪ್ರಜಾ ಸತ್ತಾತ್ಮಕ ಸರಕಾರವನ್ನು ರಚಿಸಿ ಪಕ್ಷಾತೀತರಾಗಿರಬೇಕು. ಅವರನ್ನು ಪಕ್ಷಗಳ ಜಗಳಗಳಿಗೆ ಒಳಗುಮಾಡುವುದು ಅವರ ಸ್ಥಾನಕ್ಕೆ ತಕ್ಕದ್ದಲ್ಲ. ಈ ಕಾರಣದಿಂದ ರಾಜರುಗಳು ತಮ್ಮ ಕೆಲಸಗಳನ್ನು ತಮ್ಮ ರಾಯಭಾರಿಗಳ ಮೂಲಕವೋ ಅಮಾತ್ಯರ ಮೂಲಕವೋ ನಡಸಬೇಕು. ಬ್ರಿಟಿಷ್ ಸಾಮ್ರಾಜ್ಯದ ರಾಜ್ಯಗಳ ಕೂಟವನ್ನು ಸಾರ್ವಭೌಮತ್ವ ಎಂದು ಕರೆಯುವುದಕ್ಕೆ ಬದಲಾಗಿ ಕಾಮನ್ ವೆಲ್ತ್ ಎಂದು ಕರೆಯಬೇಕು.

ಈಗ ಇರುವ ದೇಶೀಯ ಸಂಸ್ಥಾನಗಳಲ್ಲಿ ಕೆಲವು ದೊಡ್ಡವು, ಕೆಲವು ಸಣ್ಣವು, ಕೆಲವಂತೂ ತುಂಬಾ ಚಿಕ್ಕ ಪಾಳಯಪಟ್ಟುಗಳು. ಇವುಗಳಲ್ಲಿ ದೊಡ್ಡ

ಸಂಸ್ಥಾನಗಳನ್ನು ಹಾಗೆಯೇ ಬಿಟ್ಟು ಚಿಕ್ಕ ಚಿಕ್ಕ ಸಂಸ್ಥಾನಗಳನ್ನು ಒಂದು ಗೂಡಿಸಿ ಅವುಗಳನ್ನು ಪ್ರತ್ಯೇಕವಾಗಿರಿಸಬಹುದೆಂಬ ಸಲಹೆಯನ್ನು ಅವರು ಮಾಡಿದ್ದಾರೆ.

ಅವರ ಈ ಗ್ರಂಥದ ಅನೇಕ ಪ್ರತಿಗಳನ್ನು ಬಿಕನೇರ್ ಮಹಾರಾಜರು ತರಿಸಿಕೊಂಡರು ಮತ್ತು ದೇಶದ ಅನೇಕ ಮಹಾರಾಜರುಗಳ ಕಣ್ಣಿಗೂ ಇದು ಬಿತ್ತು. ಅನೇಕ ಪತ್ರಿಕೆಗಳು ಡಿ ವಿ ಜಿ ಯವರ ಗ್ರಂಥದ ಬಗ್ಗೆ ಮೆಚ್ಚಿಕೆಯ ಮಾತುಗಳನ್ನಾಡಿವೆ

ಎರಡನೆಯದಾಗಿ ಕಾಂಗ್ರೆಸ್, ಲಿಬರಲ್ ಫೆಡರೇಶನ್, ಹೋಂ ರೂಲ್ ಲೀಗ್ ಮುಂತಾದ ರಾಜಕೀಯ ಸಂಸ್ಥೆಗಳಿಗೆ ಈ ವಿಷಯದಲ್ಲಿ ಬ್ರಿಟಿಷ್ ಇಂಡಿಯದಲ್ಲಿ ನಡಸಿದಂತೆಯೇ ಚಳವಳಿಯನ್ನು ನಡಸಬೇಕೆಂದು ಡಿ ವಿ ಜಿ ಪ್ರಾರ್ಥಿಸಿದರು. ಇದಕ್ಕಾಗಿ 1918 ರಲ್ಲಿ ಬೊಂಬಾಯಿಯಲ್ಲಿ ನಡೆದ ಕಾಂಗ್ರೆಸ್ಸಿನ ವಿಶೇಷ ಅಧಿವೇಶನಕ್ಕೆ ಹೋಗಿದ್ದರು. ಕಾಂಗ್ರೆಸ್ ಸಂಸ್ಥೆಯು ದೇಶೀಯ ಸಂಸ್ಥಾನಗಳ ರಾಜಕೀಯ ಸಮಸ್ಯೆಗಳನ್ನು ಅಧ್ಯಯನ ಮಾಡಲು ಬೇರೆಯಾದ ಒಂದು ಶಾಖೆಯನ್ನು ಸ್ಥಾಪಿಸಬೇಕು. ದೇಶೀಯ ಸಂಸ್ಥಾನಗಳ ಸಮಸ್ಯೆಗಳನ್ನು ತಿಳಿಯಲು ಬೇಕಾದ ಮಾಹಿತಿಯನ್ನು ಸಂಗ್ರಹಿಸಲು, ಆ ಸಂಸ್ಥಾನದ ಪ್ರಜೆಗಳಿಗೆ ಜವಾಬ್ದಾರಿ ಸರಕಾರ, ಸಮಗ್ರ ಭಾರತ ದೃಷ್ಟಿ ಮುಂತಾದ ವಿಷಯಗಳಲ್ಲಿ ತಿಳಿವಳಿಕೆ ಕೊಡಲು ಮತ್ತು ಅವರನ್ನು ಉತ್ತಮ ರಾಷ್ಟ್ರಕರನ್ನಾಗಿ ಮಾಡಲು ಎಲ್ಲ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು ಎಂದು ಸೂಚಿಸಿದರು.

ದೇಶೀಯ ಸಂಸ್ಥಾನಗಳನ್ನು ಅದರಷ್ಟಕ್ಕೇ ಬಿಡಬೇಕೆಂಬ ಅಭಿಪ್ರಾಯವುಳ್ಳ ಬ್ರಿಟಿಷ್ ರಾಜಕಾರಣಿಗಳ ಧೋರಣೆಯ ವಿಷಯದಲ್ಲಿ ಎಚ್ಚರಿಕೆಯಿಂದಿರಬೇಕೆಂದು ಡಿ ವಿ ಜಿ ಎಚ್ಚರಿಸಿದ್ದಾರೆ. ಅಂಥವರು ದೇಶೀಯ ಅರಸರ ವಿರೋಧವಾಗಿ ಏನನ್ನೂ ಮಾಡಲು ಇಚ್ಛಿಸದೆ, ಯಾವಾಗಲೂ ಅವರನ್ನು ಸಂತೋಷದಿಂದಿರಿಸುವುದರಲ್ಲೇ ನಿರತರಾಗಿದ್ದಾರೆ. ಅದು ಒಳ್ಳೆಯ ಚಾಲಾಕುತನವಿರಬಹುದು. ಆದರೆ ಉನ್ನತ ಮಟ್ಟದ ರಾಜಕಾರಣದ ದೃಷ್ಟಿಯಲ್ಲಿ ನೋಡಿದಾಗ ದೇಶೀಯ ಸಂಸ್ಥಾನಗಳ ಮತ್ತು ಬ್ರಿಟಿಷ್ ಇಂಡಿಯದ ಸಮಸ್ಯೆಗಳು ಒಂದಕ್ಕೊಂದು ಹೆಣೆದುಕೊಂಡಿವೆ ಎಂಬುದು ಕಂಡುಬರುತ್ತದೆ. ಭಾರತದ ಸಮಸ್ಯೆಗೆ ಪರಿಹಾರ ದೊರಕಬೇಕಾದರೆ ದೇಶೀಯ ಸಂಸ್ಥಾನದ ಪ್ರಜೆಗಳನ್ನೂ ಆಂದೋಳನದಲ್ಲಿ ಸೇರಿಸಿಕೊಳ್ಳಬೇಕು.

ಹೀಗೆಂದು ದೇಶೀಯ ಪಕ್ಷಗಳಿಗೆ ಮನವಿ ಮಾಡಿಕೊಂಡರೂ ಯಾರೂ

ದೇಶೀಯ ಸಂಸ್ಥಾನಗಳ ಸಮಸ್ಯೆಯ ಕಡೆ ಕಣ್ಣೆತ್ತಿಯೂ ನೋಡಲಿಲ್ಲ.

ಮದರಾಸಿನ ಪ್ರಖ್ಯಾತ ನ್ಯಾಯವಾದಿಗಳಾಗಿದ್ದ ಸರ್ ಪಿ. ಎಸ್. ಶಿವಸ್ವಾಮಿಅಯ್ಯರ್ ಅವರು ಭಾರತದ ನೂತನ ಸಂವಿಧಾನ (1935ರಲ್ಲಿ ಬಂದದ್ದು)ವನ್ನು ಕುರಿತು ಮದರಾಸು ವಿಶ್ವವಿದ್ಯಾಲಯದಲ್ಲಿ ಕೆಲವು ಉಪನ್ಯಾಸಗಳನ್ನು ಮಾಡಿದ್ದರು. ಅವು ಗ್ರಂಥರೂಪದಲ್ಲೂ ಹೊರಬಂತು. ಅದರಲ್ಲಿ ಡಿ ವಿ ಜಿ ಈ ಸಮಸ್ಯೆಗಳನ್ನು ಕುರಿತು ಮಾಡಿದ್ದ ಸಲಹೆಗಳ ಪ್ರಸ್ತಾಪವೂ ಇತ್ತು. ಅವರೆ ಶಿವಸ್ವಾಮಿ ಅಯ್ಯರ್ ಅವರು ಬ್ರಿಟಿಷ್ ಇಂಡಿಯದ ರಾಜಕೀಯ ಸುಧಾರಕರ ದೃಷ್ಟಿಯಲ್ಲಿ ದೇಶೀಯ ಸಂಸ್ಥಾನಗಳ ಸಮಸ್ಯೆ ಅಷ್ಟು ಮುಖ್ಯವಾದದ್ದಲ್ಲ ಎಂದಿದ್ದರು. ಇದಕ್ಕೆ ಪ್ರತಿಕ್ರಿಯೆಯನ್ನು ಸೂಚಿಸುತ್ತಾ ಡಿ ವಿ ಜಿ ಬ್ರಿಟಿಷ್ ಇಂಡಿಯಕ್ಕೇ ತನ್ನ ಗಮನವನ್ನು ಮಿತಿಗೊಳಿಸಿಕೊಳ್ಳುವ ರಾಜಕೀಯಸ್ಥನು ಸಮಗ್ರ ಭಾರತದೇಶಭಕ್ತನಾಗಲಾರನು. ಬ್ರಿಟಿಷ್ಇಂಡಿಯದಲ್ಲಿ ಆಗುವ ರಾಜಕೀಯ ಸುಧಾರಣೆಗಳಂತೆಯೇ ದೇಶೀಯ ಸಂಸ್ಥಾನಗಳಲ್ಲೂ ಆಗದಿದ್ದರೆ, ಭಾರತವು ಸಂಯುಕ್ತರಾಷ್ಟ್ರವಾಗಬೇಕಾದ ಸಂದರ್ಭದಲ್ಲಿ ಸಂಸ್ಥಾನಗಳು ಆ ವ್ಯವಸ್ಥೆಗೆ ಹೊಂದಿಕೊಳ್ಳುವುದು ಕಷ್ಟವಾಗಬಹುದು ಎಂದಿದ್ದಾರೆ.

ಮೂರನೆಯದಾಗಿ ಬ್ರಿಟಿಷ್ ಆಡಳಿತಗಾರರಿಗೂ ತಮ್ಮ ಜವಾಬ್ದಾರಿಯ ಅರಿವುಂಟುಮಾಡಲು ಡಿ ವಿ ಜಿ ಪ್ರಯತ್ನಿಸಿದ್ದಾರೆ. ಇದಕ್ಕಾಗಿ ಅವರು ಅಂದಿನ ಕೇಂದ್ರ ಸರಕಾರದೊಂದಿಗೂ, ವೈಸ್‌ರಾಯ್ ಅವರೊಂದಿಗೂ ಪತ್ರವ್ಯವಹಾರ ನಡಸಿದ್ದಾರೆ.

ದೇಶೀಯ ಸಂಸ್ಥಾನಗಳ ವಿಷಯವನ್ನು ಇನ್ನೂ ಹೆಚ್ಚು ಅಧ್ಯಯನ ಮಾಡಲು ಮತ್ತು ದೇಶೀಯ ಸಂಸ್ಥಾನಗಳು ಸಂಯುಕ್ತ ಭಾರತದಲ್ಲಿ ಸೇರಿದರೆ ಆಗುವ ಪರಿಣಾಮವನ್ನು ತಿಳಿಯಲು ಅವರು 1925ರ ಹೊತ್ತಿಗೆ ಡೆಲ್ಲಿ, ಬೊಂಬಾಯಿ ಮುಂತಾದ ಪಟ್ಟಣಗಳಿಗೆ ಹೋಗಿ, ತಿಳಿದವರನ್ನು ಭೇಟಿ ಮಾಡಿ, ತಮಗೆ ಬೇಕಾದ ವಿಷಯ ಸಂಗ್ರಹ ಮಾಡಿಕೊಂಡರು.

ಜನವರಿ 1929ರಲ್ಲಿ ತಿರುವಾಂಕೂರು ಸಂಸ್ಥಾನದ ಕೆಲವು ಪ್ರಜಾಮುಖಂಡರ ಉತ್ಸಾಹದಿಂದ ದಕ್ಷಿಣ ಭಾರತ ದೇಶೀಯ ಸಂಸ್ಥಾನಗಳ ಪ್ರಜೆಗಳ ಸಮ್ಮೇಳನ ನಡೆಯಿತು. ಆ ಸಮ್ಮೇಳನಕ್ಕೆ ಅಧ್ಯಕ್ಷತೆ ವಹಿಸಲು ವಿಶ್ವೇಶ್ವರಯ್ಯನವರು ಒಪ್ಪಿಕೊಂಡದ್ದು ಒಂದು ಷರತ್ತಿನ ಮೇಲೆ. ಡಿ ವಿ ಜಿ ಯವರು ಸಹಾಯ ಮಾಡಬೇಕು ಎಂಬುದೇ ಆ ಷರತ್ತು. ಇದರಂತೆ ತಿರುವಾಂಕೂರಿನಲ್ಲಿ ಸಮ್ಮೇಳನ ನಡೆಯಿತು. ಅದಕ್ಕಾಗಿ ಮೈಸೂರಿನಿಂದ ವಿಶ್ವೇಶ್ವರಯ್ಯನವರಲ್ಲದೆ,

ಡಿ ವಿ ಜಿ, ಸಂಪಿಗೆ ವೆಂಕಟಪತಯ್ಯನವರು, ನಿಟ್ಟೂರು ಶ್ರೀನಿವಾಸರಾಯರು, ಹೊಸಕೊಪ್ಪ ಕೃಷ್ಣರಾಯರು, ವಿ. ಎಸ್. ಸಂಜೀವರಾವ್, ಎಂ. ಪಿ. ಸೋಮಶೇಖರರಾಯರು, ಟಿ. ಟಿ. ಶರ್ಮ ಮುಂತಾದವರು ಹೋಗಿದ್ದರು. ಆ ಸಮ್ಮೇಳನದಲ್ಲಿ ಅಂಗೀಕರಿಸಲ್ಪಟ್ಟ ಸೂಚನ ಪತ್ರಿಕೆಯು ಟ್ರಿವಾಂಡ್ರಮ್ ಮೆಮೋರಾಂಡಮ್ ಎಂದೇ ಪ್ರಸಿದ್ಧವಾಗಿ ಬಹಳ ಪ್ರಮುಖರ ಗಮನ ಸೆಳೆಯಿತು. ಬೆರ್ರಿಡೇಲ್ ಕೀತ್ ಮೊದಲಾದ ಪ್ರಖ್ಯಾತ ಗ್ರಂಥಲೇಖಕರು ಅದನ್ನು ಪ್ರಸ್ತಾಪಿಸಿದರು. ಅದರ ಮುಖ್ಯಾಂಶಗಳು ಮೂರು :

1) ಇಂಡಿಯವು ಐಕ್ಯೈಕವಾದ ಸಂಯುಕ್ತ ರಾಷ್ಟ್ರವಾಗಿರತಕ್ಕದ್ದು.
2) ದೇಶೀಯ ರಾಜ್ಯಗಳಲ್ಲಿ ಯಾವ ಯಾವುವು ಭೂವಿಸ್ತಾರ ದಿಂದಲೂ ಉಪಪತ್ತಿಯಿಂದಲೂ ಇತರ ದೃಷ್ಟಿಗಳಿಂದಲೂ ಇರುವಂತೆಯೇ ಉಳಿದಿರಲು ಅರ್ಹವಾದವೆಂದು ತೋರುತ್ತ ದೆಯೋ ಅವು ರೂಪಗೆಡದೆ ತಮ್ಮ ತಮ್ಮ ರಾಜರುಗಳೊಡನೆ ಉಳಿದುಕೊಂಡು ಸಂಯುಕ್ತ ಭಾರತದ ಅಂತರ್ಭಾಗಗಳಾಗಿ ಜೀವಿಸಿರತಕ್ಕದ್ದು.
3) ಸಂಯುಕ್ತ ರಾಷ್ಟ್ರದ ಎಲ್ಲ ಭಾಗಗಳಲ್ಲಿಯೂ ಪ್ರಜಾಭಿಪ್ರಾಯ ಕ್ಕೊಳಪಟ್ಟ ಸರಕಾರಗಳಿರತಕ್ಕದ್ದು.

ಈ ಅಭಿಪ್ರಾಯಗಳೆಲ್ಲ ಡಿ ವಿ ಜಿ ಯವರು ಹಿಂದಿನಿಂದಲೂ ಪ್ರತಿಪಾದಿಸು ತ್ತಿದ್ದವೇ. ಅವರು ಭಾರತ ದೇಶದಲ್ಲಿಯ ಎಲ್ಲ ದೇಶೀಯ ಸಂಸ್ಥಾನಗಳ ಪ್ರಜೆ ಗಳ ಸಮ್ಮೇಳನವನ್ನು ನಡಸಬೇಕೆಂಬ ಉದ್ದೇಶದಿಂದ ವಿಠಲಭಾಯ್ ಪಟೇಲ್ ಮುಂತಾದವರೊಡನೆಯೂ ವ್ಯವಹರಿಸಿದರು. ಆದರೆ ಅದು ಸಫಲವಾಗಲಿಲ್ಲ.

ಬೊಂಬಾಯಿಯಲ್ಲಿ ಸ್ಥಾಪಿತವಾಗಿದ್ದ ಭಾರತ ದೇಶೀಯ ಸಂಸ್ಥಾನಗಳ ಪರಿಷತ್ತಿನ ಜೊತೆಯಲ್ಲಿ ಕೆಲವು ಕಾಲ ಸಹಕರಿಸಿ ಕೆಲಸ ಮಾಡಿದರೂ, ಕೆಲವು ಭಿನ್ನಾಭಿಪ್ರಾಯಗಳ ಕಾರಣದಿಂದ ಆ ಸಹಕಾರ ಮುಂದುವರಿಯಲಿಲ್ಲ. ಮುಖ್ಯ ವಾಗಿ ದೇಶೀಯ ಸಂಸ್ಥಾನದ ಅರಸರನ್ನು ಪ್ರಜೆಗಳಿಂದ ಬೇರೆಯೆಂದು ತಿಳಿಯಲು, ಅವರ ಮೂಲೋತ್ಪಾಟನಕ್ಕೆ, ಡಿ ವಿ ಜಿ ಸಿದ್ಧರಾಗಿರಲಿಲ್ಲ. ಬ್ರಿಟಿಷ್ ಇಂಡಿಯದ ರಾಜಕೀಯಸ್ಥರನ್ನು ಎಲ್ಲ ವಿಧಗಳಲ್ಲೂ ಅನುಸರಿಸುವುದು ಡಿ ವಿ ಜಿ ಯವರ ಅಭಿಪ್ರಾಯವಾಗಿರಲಿಲ್ಲ. ಬ್ರಿಟಿಷರೊಂದಿಗೆ ನಡಸುವ ಸಂಧಾನ ಗಳಲ್ಲಿ ದೇಶೀಯ ಸಂಸ್ಥಾನದ ಪ್ರಜೆಗಳಿಗೂ ಒಂದು ಸ್ಥಾನವಿರಬೇಕೆಂದೂ, ದೇಶೀಯ ಸಂಸ್ಥಾನಗಳು ತಮ್ಮ ರೂಪಗೆಡದೆ ಸಂಯುಕ್ತ ರಾಷ್ಟ್ರದೊಡನೆ ಸೇರ

ಬೇಕೆಂಬುದೂ ಡಿ ವಿ ಜಿ ಯವರ ಅಭಿಪ್ರಾಯವಾಗಿತ್ತು.

1931ರಲ್ಲಿ ಅವರು "The States and their people in the Indian Constitution" "ಭಾರತದ ಸಂವಿಧಾನದಲ್ಲಿ ದೇಶೀಯ ಸಂಸ್ಥಾನಗಳು ಮತ್ತು ಅಲ್ಲಿಯ ಪ್ರಜೆಗಳ ಸ್ಥಾನ" ಎಂಬ ಅಮೂಲ್ಯವಾದ ಗ್ರಂಥವನ್ನು ಬರೆದರು. ಆ ಕಾಲಕ್ಕೆ ಆ ಗ್ರಂಥ ಈ ವಿಷಯವನ್ನು ಕುರಿತ ಒಂದು ಸಮಗ್ರವಾದ ಕೈಪಿಡಿಯೆನ್ನಬಹುದು.

ಬ್ರಿಟಿಷರ ಆಕ್ರಮಣದ ಪರಿಣಾಮವಾಗಿ ದೇಶೀಯ ಸಂಸ್ಥಾನಗಳು ಹೇಗೆ ಹುಟ್ಟಿದವು, ಅವುಗಳ ಬೆಳವಣಿಗೆ ಹೇಗೆ ಎಂಬ ಚರಿತ್ರೆಯಿದೆ ಆ ಗ್ರಂಥದಲ್ಲಿ, ಮತ್ತು ಬ್ರಿಟಿಷರೊಂದಿಗೆ ದೇಶೀಯ ಸಂಸ್ಥಾನಗಳು ಮಾಡಿಕೊಂಡ ಕರಾರುಗಳ ಒಪ್ಪಂದಗಳ ಸಾರಾಂಶವಿದೆ.

ಬ್ರಿಟಿಷ್ ಇಂಡಿಯದಲ್ಲಿ ರಾಜಕೀಯ ಸುಧಾರಣೆಗಳನ್ನು ಜಾರಿಗೆ ತರುತ್ತಿರುವಾಗ ದೇಶೀಯ ಸಂಸ್ಥಾನಗಳಿಗೂ ಅವುಗಳನ್ನು ಏಕೆ ಅನ್ವಯಿಸಬಾರದು ? ಬ್ರಿಟಿಷ್ ಇಂಡಿಯದ ಪ್ರಜೆಗಳಿಗಿಂತ ದೇಶೀಯ ಸಂಸ್ಥಾನದ ಪ್ರಜೆಗಳು ಬೇರೆಯೆಂದು ತಿಳಿಯುವುದು ಸರಿಯೆ ? ರಾಜ್ಯಾಂಗದ ಬೆಳವಣಿಗೆ ಅಲ್ಲಿ ನಡೆದಂತೆ ಇಲ್ಲಿಯೂ ನಡೆಯಬೇಕಲ್ಲವೆ ? ಈ ವಿಚಾರದಲ್ಲಿ ಬ್ರಿಟಿಷ್ ಸರಕಾರ ತನ್ನ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸುತ್ತಿದೆಯೆ ? ದೇಶೀಯ ಸಂಸ್ಥಾನಗಳ ಪ್ರಜೆಗಳು ಇದಕ್ಕಾಗಿ ಹೇಗೆ ಹೊಡೆದಾಡುತ್ತಿದ್ದಾರೆ—ಎಂಬ ಎಲ್ಲ ವಿಷಯಗಳ ಚರಿತ್ರೆ, ಚರ್ಚೆ, ಸೂಚನೆ ಎಲ್ಲ ಅಲ್ಲಿದೆ. ಎಲ್ಲಕ್ಕಿಂತ ಮುಖ್ಯವಾಗಿ ಅವರು ಪ್ರತಿಪಾದಿಸಿರುವುದು ಜವಾಬ್ದಾರಿ ಸರಕಾರದ ಸ್ಥಾಪನೆ ಮತ್ತು ಬ್ರಿಟಿಷರೊಡನೆ ನಡಸುವ ಸಂಧಾನಗಳಲ್ಲಿ ದೇಶೀಯ ಸಂಸ್ಥಾನದ ಪ್ರಜೆಗಳಿಗೆ ಪ್ರಾತಿನಿಧ್ಯ. ಅದರೊಂದಿಗೆ ಅವರು ಸಂಸ್ಥಾನಗಳ ಸರಕಾರಕ್ಕಾಗಿ ಒಂದು ರಾಜ್ಯ ನಿಬಂಧನೆಯ ರೂಪರೇಷೆಗಳನ್ನೂ ಕೊಟ್ಟಿದ್ದಾರೆ.

ಹೀಗೆ ವಿವರವಾಗಿ ಎಲ್ಲವನ್ನೂ ತಿಳಿಯಪಡಿಸಿದ್ದರಿಂದಲೇ ಈ ಸಮಸ್ಯೆ ಪರಿಹಾರವಾಗಿ ಬಿಡುತ್ತದೆಯೆಂಬ ಭ್ರಾಂತಿಯೇನೂ ಅವರಿಗಿರಲಿಲ್ಲ. ಆ ಗ್ರಂಥಕ್ಕೆ ಬರೆದಿರುವ ಮುನ್ನುಡಿಯಲ್ಲಿ ಅವರು ಹೀಗೆಂದಿದ್ದಾರೆ :

"No great optimism has nursed this essay. India's recent experiences prove that reason and righteousness are by themselves not enough to bring success to the people's cause. Not until publie opinion manifests itself in forms which can bring

home to Government a sense of its practical power in things that matter to them can it be certain of a serious response to its demands for reform. This means mass action and that is a subject which the writer does not discuss here".

ಆದದ್ದೂ ಹಾಗೆಯೆ ತಾನೆ?

ದೇಶೀಯ ಸಂಸ್ಥಾನಗಳ ಸಮಸ್ಯೆಯನ್ನು ಕುರಿತು ಪರಿಶೀಲಿಸಲು ಬ್ರಿಟಿಷ್ ಸರಕಾರ 1928ರಲ್ಲಿ ಬಟ್ಲರ್ ಮಹಾಶಯನ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿತ್ತು. ಆ ಸಮಿತಿಯ ಮುಂದೆ ರಾಜರ ಪರವಾಗಿ ವಾದ ಮಾಡಲು ಲೆಸ್ಲಿ ಸ್ಕಾಟ್ ಎಂಬ ವಕೀಲನನ್ನು ಕೆಲವು ರಾಜರುಗಳು ನೇಮಿಸಿಕೊಂಡಿದ್ದರು. ಅದರ ಮುಂದೆ ಡಿ ವಿ ಜಿ ಯವರೂ ಸಾಕ್ಷ್ಯ ನೀಡಿದ್ದರು. ಬಟ್ಲರ್ ಸಮಿತಿಯ ವರದಿಯು ಬಂದ ತರುಣದಲ್ಲಿ 18-6-29ರ ಹಿಂದೂ ಪತ್ರಿಕೆಯಲ್ಲಿ "ಸಮಗ್ರ ಭಾರತ ದೇಶ ಭಕ್ತಿ" ಎಂಬ ಶೀರ್ಷಿಕೆಯಲ್ಲಿ ಒಂದು ಲೇಖನವನ್ನು ಬರೆದು ಸಂಸ್ಥಾನಾಧೀಶರು ಮಾಡಬೇಕಾದದ್ದೇನು ಎಂಬ ಪ್ರಶ್ನೆಗೆ ಉತ್ತರವನ್ನು ಹೇಳುತ್ತ ಬಟ್ಲರ್ ಸಮಿತಿಯ ವರದಿಯನ್ನೂ ಲೆಸ್ಲಿ ಸ್ಕಾಟ್‌ನ ಅಭಿಪ್ರಾಯವನ್ನೂ ತಿರಸ್ಕರಿಸಿ ರಾಜರುಗಳು ಜನಾಭಿಪ್ರಾಯಕ್ಕೆ ಮನ್ನಣೆ ಕೊಟ್ಟು ಭಾರತ ದೇಶೀಯ ದೃಷ್ಟಿಯನ್ನು ಅರ್ಥಮಾಡಿಕೊಳ್ಳಬೇಕೆಂದು ವಾದಿಸಿದ್ದಾರೆ. ದೇಶೀಯ ಸಂಸ್ಥಾನಗಳೊಡನೆ ಸಾರ್ವಭೌಮ ಸರಕಾರ ಮಾಡಿಕೊಂಡಿರುವ ಕರಾರುಗಳು ಇದಕ್ಕೆ ಅಡ್ಡಿ ಎನ್ನುವುದಾದರೆ, ಬ್ರಿಟಿಷರು ಆ ಕರಾರುಗಳನ್ನು ಮಾಡಿಕೊಳ್ಳುವಾಗ ಭಾರತ ಜನಾಂಗದ ಜನನದ ಸೂಚನೆಯಿರಲಿಲ್ಲ. ಈಗ ಅದು ಚಾರಿತ್ರಿಯ ಘಟನೆಯಾಗಿದೆ. ಚರಿತ್ರೆ ನಮ್ಮ ಮುಂದಿರುವಾಗ ಆ ಹಳೆಯ ಕರಾರುಗಳು ಕೆಲಸಕ್ಕೆ ಬಾರವು. ಬಟ್ಲರ್ ಸಮಿತಿಯೂ ಸಹ, ದೇಶೀಯ ಸಂಸ್ಥಾನದ ಸರಕಾರಗಳ ವ್ಯವಸ್ಥೆಯಲ್ಲಿ ಬದಲಾವಣೆಗಳಾಗಬೇಕೆಂದು ಜನಾಭಿಪ್ರಾಯವು ಕೇಳಿದರೆ ಸಾರ್ವಭೌಮ ಸರಕಾರವು ದೇಶೀಯ ಸಂಸ್ಥಾನದ ಅರಸರನ್ನು ತೆಗೆದು ಹಾಕದೆ ಅಂಥ ಬೇಡಿಕೆಗಳನ್ನು ಈಡೇರಿಸಬೇಕಾಗಬಹುದು ಎಂದು ಸೂಚಿಸಿದೆ. ಆದ್ದರಿಂದ ಈಗ ತಾವಾಗಿ ರಾಜರುಗಳು ಜನರಿಗೆ ಜವಾಬ್ದಾರಿಯನ್ನು ಸಂತೋಷದಿಂದ ಒಪ್ಪಿಸದೆ ಹೋದರೆ, ನಾಳೆ ಅರಸರ ಕೈಯಿಂದ ಜನ ಅವನ್ನು ಬಲಾತ್ಕಾರವಾಗಿ ಕಿತ್ತುಕೊಂಡಾರು. ಪ್ರಜಾಸತ್ತಾತ್ಮಕವಾದ ವ್ಯವಸ್ಥೆಯೊಂದೇ ದೇಶಕ್ಕೆ ಬಲ. ನಿರಂಕುಶಾಧಿಕಾರ ಎಷ್ಟೇ ಒಳ್ಳೆಯದಾದರೂ ಆಧುನಿಕ ಜೀವನ ಸಮಸ್ಯೆ

ಗಳನ್ನು ಎದುರಿಸಲು ಬೇಕಾದ ಶಕ್ತಿಯನ್ನು ಅದು ಹೊಂದಲಾರದು. ಮತ್ತು ಪ್ರಜೆಗಳಲ್ಲಿರುವ ಅತ್ಯುತ್ತಮವಾದ ಗುಣಗಳನ್ನು ಸಾರ್ವಜನಿಕ ಹಿತಕ್ಕಾಗಿ ನಿಯೋಜಿಸುವುದರಲ್ಲಿ ಸಫಲವಾಗಲಾರದು. ಆದ್ದರಿಂದ ಜಗತ್ತಿನ ವಿದ್ಯಮಾನ ಗಳ ಅರಿವುಳ್ಳ ಜನ ಪ್ರಜಾಸತ್ತಾತ್ಮಕ ಸರಕಾರ ವ್ಯವಸ್ಥೆಯನ್ನು ಅನು ಮೋದಿಸುತ್ತಾರೆ ಎಂಬ ವಿಚಾರ ದೇಶೀಯ ಸಂಸ್ಥಾನದ ಅರಸರಿಗೂ ತಿಳಿದಿದ್ದೀತು. ಈಗ ವಿರೋಧವಿರುವುದು ನಿರಂಕುಶಾಧಿಕಾರ ಮತ್ತು ಪ್ರಜಾ ಪ್ರಭುತ್ವದ ನಡುವೆ, ಮಹಾರಾಜರನ್ನು ಅಧ್ಯಕ್ಷರಾಗುಳ್ಳ ರಾಜ್ಯಪದ್ಧತಿ ಮತ್ತು ಪ್ರಜಾಪ್ರಭುತ್ವದ ನಡುವೆಯಲ್ಲ. ಆದದ್ದರಿಂದ ಭಾರತದೇಶದ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು, ಅರಸರ ಹಕ್ಕುಗಳನ್ನು ಸಂರಕ್ಷಿಸುವ, ಭಾರತ ಸಂಯುಕ್ತ ರಾಷ್ಟ್ರ ವ್ಯವಸ್ಥೆಗೆ ಎಲ್ಲ ಬೆಂಬಲವನ್ನೂ ಅರಸರು ಕೊಡಬೇಕಾದದ್ದು ಅವರ ಕರ್ತವ್ಯ ಎಂದಿದ್ದಾರೆ.

1931ರಲ್ಲಿ ನಡೆದ ರೌಂಡ್ ಟೇಬಲ್ ಕಾನ್ಫರೆನ್ಸ್‌ಗೆ ದೇಶೀಯ ಪ್ರಜೆಗಳ ಪರವಾಗಿ ಪ್ರತಿನಿಧಿಗಳು ಹೋಗಬೇಕೆಂದು ಡಿ ವಿ ಜಿ ವಾದಿಸಿದರು.

ಮುಂದೆ ಬ್ರಿಟಿಷ್ ಮಂತ್ರಿಮಂಡಳದ ಸೂಚನೆಗಳಲ್ಲಿ ಇಂಡಿಯಕ್ಕೆ ಆಗ ಬೇಕಾದ ಒಂದು ಸ್ವತಂತ್ರ ರಾಜ್ಯ ವ್ಯವಸ್ಥೆಯ ನಿಷ್ಕರ್ಷೆ ಮಾಡುವ ಕೆಲಸ ಒಂದು ರಾಷ್ಟ್ರಯೋಜಕ ಸಭೆಗೆ ವಹಿಸಿಕೊಡತಕ್ಕದ್ದು ಎಂದೂ, ಆ ಸಭೆಯಲ್ಲಿ ದೇಶೀಯ ಸಂಸ್ಥಾನಗಳಿಂದಲೂ ಪ್ರತಿನಿಧಿಗಳು ಇರತಕ್ಕದ್ದೆಂದು ನಿಬಂಧಿಸಿದ್ದರೂ, ಸರಕಾರದ ನಿರೂಪ ಅದನ್ನು ಸ್ಪಷ್ಟಪಡಿಸಲಿಲ್ಲ. ಆ ಪ್ರಶ್ನೆ ಸಂಸ್ಥಾನದ ಪ್ರಭುಗಳೊಡನೆ ಸಂಧಾನದಿಂದ ತೀರ್ಮಾನವಾಗತಕ್ಕದ್ದೆಂದು ಹಾಗೆಯೇ ಉಳಿಸಿಬಿಟ್ಟಿತು. ಇದರಿಂದ ಸಂಸ್ಥಾನದ ಪ್ರಜೆಗೆ ಅಸಮಾಧಾನ ಸಹಜವಾಗಿದೆ ಮತ್ತು ಸಂಯುಕ್ತ ರಾಷ್ಟ್ರ ವ್ಯವಸ್ಥೆಯಲ್ಲಿ ಸಾಂಸ್ಥಾನಿಕ ಪ್ರಜೆ ಗಳ ಸಾಕ್ಷಾತ್ ಪ್ರತಿನಿಧಿಗಳು ಅಧಿಕ ಸಂಖ್ಯಾತರಾಗಿ ಇರಬೇಕಾದದ್ದು ಮಾತ್ರ ವಲ್ಲದೆ ಅವರು ಸಭೆಯ ಮೊಟ್ಟಮೊದಲನೆಯ ಅಧಿವೇಶನದಿಂದಲೂ ಅದರೊಡನೆ ಸೇರಿರಬೇಕಾದದ್ದು ಅವಶ್ಯವೆಂದು 1946ರಲ್ಲಿ ಡಿ ವಿ ಜಿ ಯವರು ವಾದಿಸಿದರು.

ಇಂಡಿಯದ ಸಂಯುಕ್ತ ರಾಷ್ಟ್ರ ವ್ಯವಸ್ಥೆಯೊಡನೆ ದೇಶೀಯ ಸಂಸ್ಥಾನ ಗಳು ಸೇರುವುದೂ ಸೇರದೇ ಇರುವುದೂ ರಾಜ ನವಾಬರುಗಳ ಸ್ವಂತ ತೀರ್ಮಾನಕ್ಕೆ ಸೇರಿದ ವಿಷಯ ಎಂದು ಕೆಲವರ ವಾದ; ಜವಾಬ್ದಾರಿ ಸರಕಾರ ಪದ್ಧತಿ ಇಂಡಿಯದ ಸಂಸ್ಥಾನಗಳಿಗೆ ಹೊಂದಿಕೊಳ್ಳಲಾರದೆಂದು ಸಿ. ಪಿ.

ರಾಮಸ್ವಾಮಿ ಅಯ್ಯರ್ ತಕರಾರು ಎಬ್ಬಿಸಿದರು; ರಾಷ್ಟ್ರಯೋಜಕ ಸಭೆಗೆ ಹೋಗುವ ಪ್ರತಿನಿಧಿಗಳು ಸಂಸ್ಥಾನದ ಸರಕಾರದಿಂದ ನಿಯುಕ್ತರಾದರೂ ಪ್ರಜಾಸಂಸ್ಥೆಗಳಿಂದ ಚುನಾಯಿತರಾಗಿ ಹೋದರೂ ಫಲಿತಾಂಶದಲ್ಲಿ ವ್ಯತ್ಯಾಸವೇನೂ ಆಗಲಾರದು ಎಂಬ ಮೈಸೂರು ದಿವಾನರ ಅಸಂಗತವಾದ ವಾದ; ಈಗ ಎಲ್ಲ ಸಂಸ್ಥಾನಗಳೂ ಪ್ರಜಾಪ್ರತಿನಿಧಿಗಳನ್ನು ಚುನಾಯಿಸಲು ಸಿದ್ಧರಾಗಿಲ್ಲ ಎಂಬ ನಿರಾಶೆಯ ಮಾತು—ಇಂಥ ಎಲ್ಲ ಪ್ರಜಾವಿರೋಧಿ ವಾದಗಳನ್ನು ಡಿ ವಿ ಜಿ ಎದುರಿಸಿದ್ದಾರೆ 1946ರಲ್ಲಿ ಪ್ರಕಟವಾದ "ಇಂಡಿಯ ಸಂಯುಕ್ತ ರಾಷ್ಟ್ರ ಯೋಜಕ ಸಭೆ ಮತ್ತು ದೇಶೀಯ ಸಂಸ್ಥಾನಗಳು" ಎಂಬ ಪುಟ್ಟ ಪುಸ್ತಕದಲ್ಲಿ.

ಡಿ ವಿ ಜಿ ಯವರ ಈ ಹೋರಾಟದಲ್ಲಿ ಅವರೊಬ್ಬರೇ ನಿಲ್ಲಬೇಕಾಯಿತು. ಕಾಂಗ್ರೆಸ್ ಸಂಸ್ಥೆ, ಮೈಸೂರು ಸ್ಟೇಟ್ ಕಾಂಗ್ರೆಸ್ ಸ್ಥಾಪನೆಯಾಗುವುದಕ್ಕೆ ಮೊದಲು, ಇದರಲ್ಲಿ ಕೈಹಾಕಲು ಇಷ್ಟಪಡಲಿಲ್ಲ. ಇವರು ಗೌರವಿಸುತ್ತಿದ್ದ ಶಿವಸ್ವಾಮಿ ಅಯ್ಯರ್, ತೇಜ್ ಬಹದೂರ್ ಸಪ್ರು ಮುಂತಾದವರ ಸಹಾಯ ಇವರಿಗೆ ದೊರಕಲಿಲ್ಲ. ಬ್ರಿಟಿಷ್ ಸರಕಾರಕ್ಕಂತೂ ಇವರ ವಾದವನ್ನು ಕೇಳುವುದು ಲಾಭಕರವಾಗಿರಲಿಲ್ಲ. ಇದೇ ಗುರಿಯಿದ್ದ ಇತರ ಸಂಸ್ಥೆಗಳ ಧೋರಣೆ ಬೇರೆಯಾಗಿದ್ದುದರಿಂದ ಇವರು ಏಕಾಕಿಯಾಗಿ ತಮ್ಮ ಕಾಲ, ಶಕ್ತಿ, ಬುದ್ಧಿ, ಹಣ ಎಲ್ಲವನ್ನೂ ಈ ಕೆಲಸಕ್ಕಾಗಿ ವಿನಿಯೋಗಿಸಿದರು.

ದೇಶೀಯ ಸಂಸ್ಥಾನಗಳಲ್ಲಿ ಪ್ರಜಾಪ್ರಭುತ್ವ ಸ್ಥಾಪನೆಯಾಗಬೇಕು, ಅವು ಸಂಯುಕ್ತ ಭಾರತದೊಡನೆ ಸೇರಿಕೊಳ್ಳಬೇಕು ಎಂಬುದು ಅವರ ಜೀವನದ ಮುಖ್ಯೋದ್ದೇಶಗಳಲ್ಲಿ ಸೇರಿದವು. ಆದರೆ ದೇಶೀಯ ಸಂಸ್ಥಾನದ ಮಹಾರಾಜರುಗಳ ಹಕ್ಕುಬಾಧ್ಯತೆಗಳಿಗೆ ಮನ್ನಣೆ ಕೊಡಬೇಕು ಎಂದಾಗ ಆ ಸಂಸ್ಥಾನಗಳನ್ನು ಹಾಗೆಯೇ ಬಿಡಬೇಕು ಎಂಬುದು ಇಂಗಿತ. ಈ ಕಾರಣದಿಂದಲೇ ಅವರು ಕರ್ನಾಟಕ ಏಕೀಕರಣಕ್ಕೆ ಬೆಂಬಲ ಕೊಡುತ್ತಿದ್ದರೂ, ಅವರ ದೃಷ್ಟಿಯಲ್ಲಿ ಏಕೀಕರಣವೆಂದರೆ ಬ್ರಿಟಿಷ್ ಇಂಡಿಯದಲ್ಲಿನ ಕನ್ನಡ ಪ್ರದೇಶಗಳು ಮಾತ್ರ.

ಸಾರ್ವಜನಿಕ ಜೀವನ

'ಕರ್ಣಾಟಕ' ಪತ್ರಿಕೆ ಡಿ ವಿ ಜಿ ಯವರಿಗೆ ಪ್ರಖ್ಯಾತಿಯನ್ನು ತಂದಿತು. ದೇಶದ ಜನ ಸಾರ್ವಜನಿಕ ಕಾರ್ಯಗಳಲ್ಲಿ ಪಾಲುಗೊಳ್ಳಬೇಕೆಂದು ಪ್ರಚೋದಿಸಿತು ಆ ಪತ್ರಿಕೆ. ಹಾಗೆ ನಡೆದ ಸಾರ್ವಜನಿಕ ಚಟುವಟಿಕೆಗಳಲ್ಲಿ ಅದರ ಸಂಪಾದಕರು ಪಾಲುಗೊಳ್ಳಲೇ ಬೇಕಾಯಿತು.

ಸಾರ್ವಜನಿಕ ಜೀವನದಲ್ಲಿ ತಮ್ಮ ಧ್ಯೇಯವೇನು, ನಡವಳಿಕೆ ಹೇಗಿರಬೇಕು ಎಂಬುದರ ವಿಚಾರದಲ್ಲಿ ಡಿ ವಿ ಜಿ ಯವರು ಹಿಂದೆಯೇ ಒಂದು ತೀರ್ಮಾನಕ್ಕೆ ಬಂದಿದ್ದಿರಬೇಕು. ಆ ತೀರ್ಮಾನವನ್ನು ಅವರು ಜೀವನದುದ್ದಕ್ಕೂ ಅನುಸರಿಸಿಕೊಂಡೇ ಬಂದರು. ಆ ಮನೋಭಾವದ ಎರಡು ಮೂರು ಅಂಶಗಳನ್ನು ಅವರ ಮಾತುಗಳಲ್ಲೇ ಹೇಳಬಹುದು.

ಮಿರ್ಜಾ ಸಾಹೇಬರು ತಮ್ಮ ಒಂದು ಪತ್ರದಲ್ಲಿ "ದಿ ನೇಷನ್ ಅಂಡ್ ದಿ ಅಥೇನಿಯಮ್" ಎಂಬ ಪತ್ರಿಕೆಯಲ್ಲಿ ಬಂದಿದ್ದ ಒಂದು ಅಭಿಪ್ರಾಯವನ್ನು (ಅನುಮೋದನೆಯಿಂದಲೇ ಎನ್ನಬಹುದು) ಡಿ ವಿ ಜಿ ಯವರಿಗೆ ತಿಳಿಸಿದ್ದರು, ಹೀಗೆ :

Instead of concerning ourselves primarily with origins and methods of Government, we should keep our eyes closely set upon the delivery of goods such as health, housing and other material necessaries, education and other solid requisites of a civilised life for which Government, political and economic, exists."

ಸರಕಾರದ ಮೊದಲು ಏನು, ವಿಧಾನಗಳು ಹೇಗೆ, ಮುಂತಾದ ವಿಚಾರಗಳನ್ನು ಕುರಿತು ತಲೆ ಕೆಡಿಸಿಕೊಳ್ಳದೆ, ಸರಕಾರ ಯಾವ ಸರಕೊಪ್ಪಿಸುವುದಕ್ಕಾಗಿ ಹುಟ್ಟಿದೆಯೋ ಅದರ ಮೇಲೆ ನಾವು ಗಮನವಿಡಬೇಕು. ಅಂದರೆ ಆರೋಗ್ಯ, ವಸತಿ, ವಿದ್ಯಾಭ್ಯಾಸ ಮುಂತಾದ ನಾಗರಿಕ ಅನುಕೂಲಗಳನ್ನು ಒದಗಿಸುವುದರಲ್ಲಿ ತೊಡಗಬೇಕು.

ಇದಕ್ಕೆ ಉತ್ತರವಾಗಿ ಡಿ ವಿ ಜಿ ಯವರು ಈ ಅನುಕೂಲಗಳು ಬೇಕಾದವು

ಗಳಾದರೂ, ಅವನ್ನೆಲ್ಲ ಒದಗಿಸುವ ಅಧಿಕಾರ ಪ್ರಜೆಗಳಲ್ಲೇ ಇರಬೇಕೇ ಹೊರತು ನಿರಂಕುಶ ಸರಕಾರದಲ್ಲಿ ಇರತಕ್ಕದ್ದಲ್ಲ ಎಂದು ಹೇಳಿದರು.

ಹೀಗೆ ಮಿರ್ಜಾಸಾಹೇಬರೊಡನೆ ಭಿನ್ನಾಭಿಪ್ರಾಯವಿದ್ದರೂ ಅವರೊಡನೆ ಇದ್ದ ಸ್ನೇಹಕ್ಕೆ ಈ ಅಭಿಪ್ರಾಯಭೇದ ತಡೆಯಾಗಲಿಲ್ಲ. ಮತ್ತು ತಮ್ಮ ಧ್ಯೇಯ ಮತ್ತು ಸ್ನೇಹ ಇವುಗಳ ನಡುವೆ ವಿರೋಧ ಬಂದಾಗ ತಮ್ಮ ಒಲವು ಎತ್ತ ಕಡೆ ಗಿರುತ್ತದೆ ಎಂಬುದರ ವಿಷಯದಲ್ಲೂ ಅವರು ಒಂದು ತೀರ್ಮಾನಕ್ಕೆ ಬಂದಿದ್ದರು. ಒಂದು ಪತ್ರದಲ್ಲಿ ಅವರು ಮಿರ್ಜಾರವರಿಗೆ ಇದನ್ನು ವಿಶದಪಡಿಸಿದ್ದಾರೆ:
'In the present circumstances of the country, politics is as often a force to divide as to unite; particularly when one of two friends happens to be an official in high authority and the other a non-official worker for the public, it is inevitable that their ways should lie apart, sometimes at least. In such cases I hold that what, according to one's right is due to the country is greater and more sacred than what is due to private friendship. Of course one's first effort in such a case should be to reconcile the two claims. But when that is found to be impossible, the larger must, alas! be allowed to supersede the smaller. What a painful wrench this must mean. Those who can look into my heart will know. Lucky is the man who is not faced with such a moral conflict— between his loyalty to personal friendship and his loyalty to the public cause, two of man's finest and purest sentiments ranged on opposite sides! Luckier is he who, when he has surrendered himself to the larger is not misunderstood by the friend and is only counted as possibly foolish but not knavish and ungrateful. May I regard such rare good fortune as mine. ?"

ತಮ್ಮ ಒಲವು ಧ್ಯೇಯದ ಕಡೆಗೇ, ದೇಶಸೇವೆಯ ಕಡೆಗೇ ಎಂಬುದನ್ನು ಂದೇಹಕ್ಕೆಡೆಯಿಲ್ಲದಂತೆ ಅವರು ತೋರಿಸಿದ್ದಾರೆ. ಸಾರ್ವಜನಿಕ ಜೀವನದಲ್ಲಿ ಈ ಪ್ರಾಮಾಣಿಕತೆಯೇ ಅವರಿಗೆ ಎಲ್ಲರ ವಿಶ್ವಾಸವನ್ನೂ ಗೌರವವನ್ನೂ ಸಂಪಾದಿಸಿಕೊಟ್ಟದ್ದು.

ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸುವ ಅವರ ರೀತಿಯೂ ಬೇರೆ ಪಕ್ಷಗಳಲ್ಲಿರುವ ಮಹನೀಯರ ಮೆಚ್ಚಿಕೆಗೆ ಪಾತ್ರವಾಯಿತು. ಉದಾಹರಣೆಗೆ ಸಿ. ಆರ್. ರೆಡ್ಡಿಯವರು ಒಂದು ಪತ್ರದಲ್ಲಿ "Please don't bother about our differences; Life would be too dreadfully monotonous without them. If differences could be expressed and argued with ability, point and politeness that characterises your writings, I for one feel that I could not have too much of them on my hands" — ಎಂದಿದ್ದಾರೆ. (ದಯವಿಟ್ಟು ನಮ್ಮ ಭಿನ್ನಾಭಿಪ್ರಾಯಗಳ ಬಗ್ಗೆ ಚಿಂತಿಸಬೇಡಿ. ಅವುಗಳಿಲ್ಲದಿದ್ದರೆ, ಒಂದೇ ರಾಗ ಬೇಸರ ತರುವಂತೆ, ಜೀವನ ಬೇಸರವಾದೀತು. ಸಾಮರ್ಥ್ಯ, ಮೊನಚು, ಮತ್ತು ವಿನಯ ಇವು ನಿಮ್ಮ ಬರವಣಿಗೆಯ ರೀತಿ. ಇಂಥ ಭಾಷೆಯಲ್ಲಿ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರೆ, ವಾದಿಸಿದರೆ ಅಂಥದ್ದು ಬೇಕಾದಷ್ಟು ಇರಲಿ ಎಂದು ನನಗನ್ನಿಸುತ್ತದೆ.)

ಇದೇ ಗೋಖಲೆಯವರ ರೀತಿ.

ಈ ರೀತಿ ಗುರು ಶ್ರೀನಿವಾಸ ಅಯ್ಯಂಗಾರ್ಯರ, ಹಾಗೆಯೇ ಬೊಂಬಾಯಿನ 'ಇಂಡಿಯನ್ ಸೋಷಿಯಲ್ ರಿಫಾರ್ಮರ್' ಪತ್ರಿಕೆಯ ಸಂಪಾದಕರಾದ ಕೆ. ನಟರಾಜನ್ ಅವರ, ಮದರಾಸಿನ ನ್ಯೂ ಇಂಡಿಯ ಪತ್ರಿಕೆಯ, ಪಿ.ಟಿ.ತೇಲಂಗ್ ಅವರ, ಮೆಚ್ಚಿಕೆಯನ್ನು ಪಡೆಯಿತು. ಬೊಂಬಾಯಿನ ಟೈಮ್ಸ್ ಆಫ್ ಇಂಡಿಯ, ಮರಾಠಾ ಪತ್ರಿಕೆಗಳು ಇವರು ದೇಶೀಯ ಸಂಸ್ಥಾನಗಳ ಸಮಸ್ಯೆಗೆ ಸೂಚಿಸಿದ ಪರಿಹಾರಗಳನ್ನು ಕೊಂಡಾಡಿದುವು. ಮೈಸೂರು ಸಂಸ್ಥಾನದ ಅನೇಕ ಊರುಗಳಲ್ಲಿ 'ಕರ್ಣಾಟಕ' ಪತ್ರಿಕೆಯ ಪ್ರಭಾವ ಪುಣ್ಯಾನುಕಾರಿಯಾಯಿತು. ಅವನ್ನು ಓದಿದ ಜನ, ಅದಕ್ಕಾಗಿ ಸುದ್ದಿ ಕಳುಹಿಸಿದ ಜನ, ಅದರಲ್ಲಿ ಬಂದ ವಿಚಾರಗಳನ್ನು ಕುರಿತು ಚರ್ಚಿಸಿದ ಜನ ಹೆಚ್ಚಿತು. ಅದೇ ಸಾರ್ವಜನಿಕ ಚಟುವಟಿಕೆಗಳಿಗೆ ಮೂಲವೂ ಆಯಿತು.

ಇದರೊಡನೆ ಅವರ ವ್ಯಾಸಂಗ ಅನವರತವಾಗಿ ನಡೆಯುತ್ತಿತ್ತು. ರಾಜ್ಯಶಾಸ್ತ್ರ ಅರ್ಥಶಾಸ್ತ್ರ ಮುಂತಾದ ಶಾಸ್ತ್ರಗಳ ಜೊತೆಗೆ ವೇದಾಂತ ವಿಚಾರದ ನಿಷ್ಕರ್ಷೆಯಾದ ಜ್ಞಾನ ಸಂಪಾದನೆಗಾಗಿ ಶಂಕರಮಠದಲ್ಲಿ ಶ್ರೀ ವಿರೂಪಾಕ್ಷ ಶಾಸ್ತ್ರಿಗಳವರಲ್ಲಿ ಸಾಂಗವಾಗಿ ಸೂತ್ರಭಾಷ್ಯ, ಕೆಲವು ಉಪನಿಷದ್ಭಾಷ್ಯಗಳ ಪಾಠವಾಯಿತು. ಛಪ್ಪಲ್ಲಿ ವಿಶ್ವೇಶ್ವರ ಶಾಸ್ತ್ರಿಗಳವರಲ್ಲಿ ಸಾಹಿತ್ಯಪಾಠವಾಯಿತು.

ಇವರ ಈ ಚಟುವಟಿಕೆಗಳೆಲ್ಲ ಅಂದಿನ ಅರಸರಾದ ಕೃಷ್ಣರಾಜ ಒಡೆಯರ ಗಮನಕ್ಕೆ ಬರಲು ಹೆಚ್ಚುಕಾಲ ಹಿಡಿಯಲಿಲ್ಲ. ಅಕ್ಟೋಬರ್ 1915ರಲ್ಲಿ ಅವರು ತಮ್ಮ ಮೆಚ್ಚಿಕೆಯ ಕುರುಹಾಗಿ ಡಿ ವಿ ಜಿ ಯವರಿಗೆ ರಾಮಾಯಣದ ಗ್ರಂಥ ಸಂಪುಟವನ್ನು ಅರಮನೆಯ ಕಂಟ್ರೋಲರಾಗಿದ್ದ ಬಲ್ಲಾಳಚರು ರಾಮಕೃಷ್ಣರಾಯರ ಮೂಲಕ ಕಳುಹಿಸಿಕೊಟ್ಟರು.

'ಕರ್ಣಾಟಕ' ಪತ್ರಿಕಾಲಯದಿಂದ ಹೊರಬಂದ ಕಿರುಹೊತ್ತಿಗೆಗಳು ಹಲವಾರು. ಅವುಗಳಲ್ಲಿ ಮುಖ್ಯವಾದವು ಇವು :

1. The problems of Indian Native States
2. Count Leo Tolstoy
3. Jagadguru Sachidananda Shiva Abhinava Narasimha Bharati
4. K. Seshadri Iyer
5. The Surplus Revenue of the Civil and Military Station of Bangalore
6. Sir Subramania Iyer
7. Speeches of Subramania Iyer

ಇವುಗಳಲ್ಲೆಲ್ಲ ಬಹುಮುಖ್ಯವಾದದ್ದು, 1915ರಲ್ಲಿ ಪ್ರಕಟವಾದ, ಮೈಸೂರಿನ ಕೈಗನ್ನಡಿಯೆಂಬ 'ಕರ್ಣಾಟಕ' ವಾರ್ಷಿಕ ಪುಸ್ತಕ, ಹಾಗೆಯೇ "All About Mysore" ಎಂಬ ಪುಸ್ತಕಗಳು. ಈ ಬಗೆಯ ಗ್ರಂಥಗಳು ಅಂದಿಗೆ ಹೊಸದು, ಕನ್ನಡದಲ್ಲಂತೂ ಆ ಬಗೆಯ ಗ್ರಂಥಗಳಲ್ಲಿ ಮೊದಲನೆಯದು. "ದೇಶದ ಪ್ರಕೃತ ಸ್ಥಿತಿಯನ್ನು ಸಾಧ್ಯವಾದಷ್ಟು ವಿಶದವಾಗಿ ತಿಳಿಸಬೇಕೆಂಬುದೇ ಈ ಪುಸ್ತಕದ ಉದ್ದೇಶ್ಯ" ಎಂದು ಹೇಳಿ ಡಿ ವಿ ಜಿ ಯವರು ಆ ಪುಸ್ತಕದಲ್ಲಿ ಮೈಸೂರು ದೇಶಕ್ಕೆ ಸಂಬಂಧಪಟ್ಟ, ಸಾರ್ವಜನಿಕ ಕಾರ್ಯಕ್ಕೆ ಬೇಕಾದ, ಎಲ್ಲ ವಿಷಯಗಳನ್ನೂ ಸಂಗ್ರಹಿಸಿಕೊಟ್ಟಿದ್ದಾರೆ. ಆಕಾರ, ಸಸ್ಯವರ್ಗ, ಪ್ರಾಣಿವರ್ಗ, ಲೋಹವರ್ಗ, ಜನಸಂಖ್ಯೆ, ಮತ, ಭಾಷೆಗಳು, ಚರಿತ್ರೆ, ಪ್ರಜೆಗಳ ಸಂಪತ್ತು, ಕೈಗಾರಿಕೆಗಳು, ಸರಕಾರ, ತಾಲ್ಲೂಕುಗಳ ವಿವರ, ಆಮದು-ರಫ್ತು, ಪುಸ್ತಕ ಪತ್ರಿಕೆಗಳು, ಆದಾಯ ವ್ಯಯ ಮುಂತಾದ ಅನೇಕ ಶೀರ್ಷಿಕೆಗಳಲ್ಲಿ ದೇಶಕ್ಕೆ ಸಂಬಂಧ ಪಟ್ಟ ಎಲ್ಲ ವಿವರಗಳೂ ಅಲ್ಲಿವೆ. ಅಂಥ ಇನ್ನೊಂದು ಗ್ರಂಥ ಕನ್ನಡದಲ್ಲಿ ಬಂದಿಲ್ಲವೆಂದೇ ಹೇಳಬೇಕು.

ಬೆಂಗಳೂರಿನಲ್ಲಿ ಸಮಾಜ ಸಂಸ್ಕೃತಿಗಳ ಅಭಿವೃದ್ಧಿಗಾಗಿ ಹುಟ್ಟಿದ ಸಂಸ್ಥೆಗಳಲ್ಲಿ ಪ್ರಾಚೀನವಾದದ್ದು ರಾನಡೆ ಸೊಸೈಟಿ. ಮಹಾದೇವ ಗೋವಿಂದ ರಾನಡೆಯವರ ಜ್ಞಾಪಕಾರ್ಥವಾಗಿಯೂ ಅವರು ಬೋಧಿಸಿದ ತತ್ತ್ವಗಳನ್ನು ಪ್ರಚುರಪಡಿಸುವುದಕ್ಕಾಗಿಯೂ ಹುಟ್ಟಿದ್ದು ಅದು. ಐದಾರು ವರ್ಷಗಳು ಕೆಲಸಮಾಡಿ ಬಹುಶಃ 1907ರ ಹೊತ್ತಿಗೆ ಅದು ಮಾಯವಾಯಿತು. ಅದರ ಸ್ಥಾನಕ್ಕೆ ಬಂದದ್ದು ಫ್ರೆಂಡ್ಸ್ ಯೂನಿಯನ್ ಎಂಬ ಸಂಸ್ಥೆ. ಅದನ್ನು ನಡಸುತ್ತಿದ್ದವರು ಶ್ರೀ ಎಲ್. ಸ್ವಾಮಿರಾಯರು, ಎಲ್. ರಾಮರಾಯರು ಮತ್ತು ಕೆ.ಟಿ. ಭಾಷ್ಯಂ ಮುಂತಾದವರು. ಸಾಮಾನ್ಯವಾಗಿ ಶನಿವಾರ ಭಾನುವಾರಗಳು ಅದರ ಆಶ್ರಯದಲ್ಲಿ ಷೇಕ್ಸ್‌ಪಿಯರ್ ಡೇ, ಕಾಳಿದಾಸ ಡೇ ಎಂಬ ಹೆಸರಿನ ಉಪನ್ಯಾಸಗಳನ್ನು ಏರ್ಪಡಿಸುತ್ತಿದ್ದರು. ಷೆಲ್ಲಿಡೇ ಎಂಬುದನ್ನು 10.8.1916ರಂದು ಆಚರಿಸಿದ ದಿನ ಪ್ರೊ॥ ಫ್ರಾಂಕ್. ಆರ್. ಸೆಲ್ ಮಹಾಶಯರು ಅಧ್ಯಕ್ಷರು. ಎಂ ಜಿ ವರದಾಚಾರ್ಯರೂ ಪ್ರೊ॥ ಮೆಕಾಲ್ಪೈನ್ ಅವರೂ ಡಿ ವಿ ಜಿ ಯವರೂ ಉಪನ್ಯಾಸಕರು. ಡಿ ವಿ ಜಿ ಯವರು 'ಅಡೊನೆಯ್' ಎಂಬ ಕಾವ್ಯವನ್ನು ಕುರಿತು ಮಾತನಾಡುತ್ತ ಅದರಲ್ಲಿರುವ ಪದ್ಯಗಳಿಗೂ ವೇದಾಂತ ಮತದ ತತ್ತ್ವಗಳಿಗೂ ಇರುವ ಸಾಮ್ಯವನ್ನು ಬಹು ಸೊಗಸಾಗಿ ವರ್ಣಿಸಿದ್ದಾರೆ. ಪ್ರೊ॥ ಮೆಕಾಲ್ಪೈನ್ ಇಂಡಿಯಕ್ಕೆ ಬಂದಿದ್ದರ ಹೊಸತು. ಆತನಿಗೆ ವರದಾಚಾರ್ಯರ ಮತ್ತು ಡಿ ವಿ ಜಿ ಯವರ ಮಾತನ್ನು ಕೇಳಿ ಆಶ್ಚರ್ಯವಾಯಿತಂತೆ—ಈ ದೇಶದ ಜನ ಇಷ್ಟು ಚೆನ್ನಾಗಿ ಇಂಗ್ಲಿಷ್ ಮಾತನಾಡುತ್ತಾರೆಯೆ ಎಂದು. ಆ ಸಭೆಗೆ ಅಧ್ಯಕ್ಷನಾಗಿದ್ದ ಸೆಲ್ ಅವರು ಆ ಕಾವ್ಯದಲ್ಲಿ ಆತ್ಮ ವಿಚಾರಕವಾದ ವಾಕ್ಯಗಳು ತಮಗೆ ಚೆನ್ನಾಗಿ ಅರ್ಥವಾಗಿರಲಿಲ್ಲವೆಂದೂ ಡಿ ವಿ ಜಿ ಯವರ ಉಪನ್ಯಾಸವನ್ನು ಕೇಳಿದ ಮೇಲೆ ಅದು ಕೊಂಚ ಅರ್ಥವಾದಂತೆ ತೋರಿತೆಂದೂ ಹೇಳಿದರು.

1916-17ರ ಹೊತ್ತಿನಲ್ಲಿ ಪ್ರಾರಂಭವಾದ "ನಾನ್-ಎಂಟಿಟೀಸ್" ಅನಾಮಧೇಯರು, ಎಂಬ ಸಂಸ್ಥೆಯಲ್ಲಿ ಡಿ ವಿ ಜಿ ಯವರು ಪಾಲುಗೊಂಡಿದ್ದರು. ಎಸ್.ಜಿ. ಶಾಸ್ತ್ರಿಗಳು, ಬಿ.ಕೆ. ನಾರಾಯಣರಾಯರು, ಬಿ. ಪುಟ್ಟಯ್ಯನವರು ಮುಂತಾದವರು ಸೇರಿದ್ದ ಈ ಸಂಸ್ಥೆಯ ಉದ್ದೇಶ ಸ್ವಲ್ಪ ಹಣವನ್ನು ಶೇಖರಿಸಿ ವಿದೇಶಕ್ಕೆ ಹೋಗಬೇಕೆಂದಿರುವ, ಆದರೆ ಉಪಪತ್ತಿಯಿಲ್ಲದಿರುವ ಜನಕ್ಕೆ ಸಹಾಯಮಾಡುವುದು, ಇತರ ದೇಶ ಸೇವೆಯ ಉದ್ದೇಶಗಳಿಗೂ ಸಹಾಯ ಮಾಡುವುದು. ಇದರ ಕಥೆಯನ್ನು ಡಾ॥ ಬಿ.ಪಿ. ರಾಧಾಕೃಷ್ಣ ಅವರು ಅವರ

ತಂದೆಯವರನ್ನು ಕುರಿತು ಬರೆದ ಗ್ರಂಥದಲ್ಲಿ ಬರೆದಿದ್ದಾರೆ. ಹಣವನ್ನು ಕೂಡಿಸುವುದಷ್ಟೇ ಆ ಗೋಷ್ಠಿಯ ಉದ್ದೇಶವಾಗಿರಲಿಲ್ಲ. ಆ ಸ್ನೇಹಿತರು ತಿಂಗಳಿಗೊಂದಾವರ್ತಿ ತಮ್ಮಲ್ಲಿ ಯಾರಾದರೊಬ್ಬರ ಮನೆಯಲ್ಲಿ ಭೋಜನಕ್ಕೆ ಸೇರುತ್ತಿದ್ದರು. ಅಲ್ಲಿ ಎಲ್ಲ ವಿಷಯಗಳೂ ಚರ್ಚೆಗೆ ಬರುತ್ತಿತ್ತು. ಬಂದಿದ್ದ ಸ್ನೇಹಿತರು ನಾನಾದೇಶಗಳ ಪರಿಚಯವಿದ್ದವರು ಮತ್ತು ನಾನಾ ಶಾಸ್ತ್ರಗಳಲ್ಲಿಯೂ ವೃತ್ತಿಗಳಲ್ಲಿಯೂ ಪರಿಶ್ರಮವಿದ್ದವರು. "ಹೀಗೆ ನಮ್ಮ ದೇಶಾಭ್ಯುದಯಕ್ಕೆ ಸಂಬಂಧಪಟ್ಟ ಪ್ರಶ್ನೆಗಳ ವಿಷಯದಲ್ಲಿ ಪರಿಜ್ಞಾನ ವಿನಿಮಯವೂ ಅಭಿಪ್ರಾಯ ವಿನಿಮಯವೂ ಆಗುತ್ತಿದ್ದದ್ದು ನನ್ನ ಪಾಲಿಗೆ ಒಂದು ದೊಡ್ಡ ಲಾಭವಾಗಿತ್ತು" ಎನ್ನುತ್ತಾರೆ ಡಿ ವಿ ಜಿ. ಹಾಗೆಯೇ "ನಡುನಡುವೆ ಪರಸ್ಪರ ಮರ್ಮೋದ್ಘಾಟನೆಗಳೂ ಪರಿಹಾಸ್ಯಗಳೂ ಇರುತ್ತಿದ್ದುವು. (ಅಂಥ ಒಂದು ಸಂದರ್ಭದಲ್ಲಿಯೇ ನನ್ನ ಶಿಷೆ ಕತ್ತರಿಸಲಾದದ್ದು)" ಎಂದು ಆ ಮಿತ್ರವೃಂದದ ಸ್ನೇಹ ಸಂತೋಷದ ಘಮಲನ್ನು ನೆನೆಸಿಕೊಳ್ಳುತ್ತಾರೆ ಡಿ ವಿ ಜಿ.

ಡಿ ವಿ ಜಿ ಯವರ ಆಸಕ್ತಿ ಕೇವಲ ಸಾರ್ವಜನಿಕ ವಿಚಾರಗಳಿಗೇ ಮೀಸಲಾಗಿರಲಿಲ್ಲ. ತಮ್ಮ ಸ್ನೇಹಿತರಾದ ಎಂ. ಜಿ. ವರದಾಚಾರ್ಯರ ಜೊತೆಯಲ್ಲಿ ನಾಟಕ ಶಿರೋಮಣಿ ಎ. ವಿ. ವರದಾಚಾರ್ಯರ ಪ್ರಹ್ಲಾದ ಚರಿತ್ರೆ, ಮನ್ಮಥ ವಿಜಯ ನಾಟಕಗಳನ್ನೂ ನೋಡಿದ್ದರು. ಹಾಗೆಯೇ ಬಳ್ಳಾರಿಯ ನಾಟಕ ಕಂಪೆನಿಯವರು ಆಡುತ್ತಿದ್ದ ತೆಲುಗು ನಾಟಕಗಳನ್ನೂ ನೋಡಿದ್ದರು. ಆ ಸಮಯದಲ್ಲಿಯೇ ಪ್ರಖ್ಯಾತ ನಟ ಟಿ. ರಾಘವಾಚಾರ್ಯರ ಪರಿಚಯ ಇವರಿಗಾದದ್ದು. ಕೋಲಾಚಲಂ ಕಂಪೆನಿಯ ಕಡೆ ಕಡೆಯ ನಾಟಕ ನಡೆಯುತ್ತಿದ್ದಾಗ, ರಾಘವಾಚಾರ್ಯರು ತಮ್ಮ ತಾಯಿಗೆ ಕಾಯಿಲೆಯೆಂದು ಜರೂರಾಗಿ ಹೋಗಬೇಕಾಯಿತಂತೆ. ಅತ ಹೊರಡುವುದಕ್ಕೆ ಮುಂಚೆ ಆತನನ್ನು ಕುರಿತು ಎರಡು ಮಾತು ಹೇಳಬೇಕೆಂದು ಕೋಲಾಚಲಂ ಶ್ರೀನಿವಾಸರಾಯರಿಂದ ಸೂಚನೆ ಬಂತು. ಆದರಂತೆ ಡಿ ವಿ ಜಿ ಮೆಚ್ಚಿಕೆಯ ಮಾತನ್ನಾಡಿದರು. ಇದು ರಾಘವಾಚಾರ್ಯರ ಮತ್ತು ಇವರ ಸ್ನೇಹಕ್ಕೆ ನಾಂದಿಯಾಯಿತು.

ಬೆಂಗಳೂರಿನಲ್ಲಿದ್ದ ಆಂಧ್ರ ವಿದ್ಯಾರ್ಥಿಗಳು "ಸೀಡೆಡ್ ಡಿಸ್ಟ್ರಿಕ್ಟ್ ಅಸೋಸಿಯೇಷನ್" (ಎಸ್. ಡಿ. ಎ.) ಎಂಬ ಸಂಸ್ಥೆಯನ್ನು ಸ್ಥಾಪಿಸಿಕೊಂಡು ಆಗಾಗ ನಾಟಕಗಳನ್ನು ಅಭಿನಯಿಸುತ್ತಿದ್ದರು. ಕಾಲಕ್ರಮದಲ್ಲಿ ಆ ಸಂಸ್ಥೆ ಕಣ್ಮರೆಯಾದಾಗ ಆ ಅಸೋಸಿಯೇಷನ್ನಿನ ಸ್ಥಾನವನ್ನು ತುಂಬಲು ಹುಟ್ಟಿದ್ದು "ಅಮೆಚ್ಯೂರ್ ಡ್ರಾಮಾಟಿಕ್ ಅಸೋಸಿಯೇಷನ್" (ಎ. ಡಿ. ಎ.). ಈ

ಸಂಘವು ಇಂಗ್ಲಿಷ್ ನಾಟಕಗಳನ್ನೂ ತೆಲುಗು ಕನ್ನಡ ನಾಟಕಗಳನ್ನೂ ಅಭಿನಯಿಸಿ ಜನರನ್ನು ಸಂತೋಷಪಡಿಸಿತು. ಇದಕ್ಕೆ ಸದಸ್ಯರಾಗಿದ್ದರು ಮತ್ತು ಇದರ ಕಾರ್ಯಕ್ರಮಗಳಲ್ಲಿ ಪಾಲುಗೊಳ್ಳುತ್ತಿದ್ದರು ಡಿ ವಿ ಜಿ.

ಗೋಖಲೆ ಲೀಗ್ ಸಂಸ್ಥೆಯೂ, ಎ. ಡಿ. ಎ. ಸಂಸ್ಥೆಯೂ ಸೇರಿ ಒಂದು ನಾಟಕವನ್ನು ಅಭಿನಯಿಸಿ ಅದರಿಂದ ಬಂದ ಹಣವನ್ನು ಜೆ. ಸಿ. ಬೋಸರ 'ಟೆಂಪಲ್ ಆಫ್ ಟ್ರೂತ್'ಗಾಗಿ ಕಳುಹಿಸಿ ಅವರಿಂದ ಮೆಚ್ಚಿಕೆಯ ಪತ್ರವನ್ನು ಪಡೆದವು.

ಹಿಂದೆ ಗಾಂಧಿಯವರ ದಕ್ಷಿಣ ಆಫ್ರಿಕ ನಿಧಿಗೆ ಹಣ ಸಂಗ್ರಹಿಸಿ ಕಳುಹಿಸಿದಂತೆ, ಆ್ಯನಿಬೆಸೆಂಟ್ ನಿಧಿಗೆ, ಸ್ವಾಮಿ ಶ್ರದ್ಧಾನಂದರು ಪ್ರಾರಂಭಿಸಿದ್ದ ಪಂಜಾಬ್ ರಿಲೀಫ್ ಫಂಡ್‌ಗೆ, ಕರ್ನಾಟಕ ಪತ್ರಿಕೆಯ ಮೂಲಕ ದ್ರವ್ಯ ಸಂಗ್ರಹ ಮಾಡಿ ಕಳುಹಿಸಿದ್ದಾರೆ. ಹಾಗೆಯೇ ಕುಷ್ಠ ರೋಗಿಗಳಿಗಾಗಿ ಹಣ ಸಂಗ್ರಹ ಮಾಡಿಕೊಟ್ಟಿದ್ದಾರೆ.

ಪ್ರಜಾಪ್ರತಿನಿಧಿ ಸಭೆ ವರ್ಷಕ್ಕೊಂದು ಬಾರಿ ಸೇರುತ್ತಿದ್ದರೂ ಅದರ ಕೆಲಸ ಕೇವಲ ಬೇಡಿಕೆಗಳನ್ನು ಹೇಳಿಕೊಳ್ಳುವುದಾಗಿತ್ತು. ಅಲ್ಲಿ ಸಂಘಟಿತವಾದ ಪ್ರಯತ್ನವೇನೂ ನಡೆಯುತ್ತಿರಲಿಲ್ಲ. ಅಂಥ ಸಂಘಟನೆಯನ್ನು ಮಾಡಬೇಕೆಂಬ ಆಸೆ, ಪ್ರಜಾತಂತ್ರ ಕಲ್ಪನೆಯ ಪ್ರಭಾವವನ್ನು ಮನಸ್ಸಿನಲ್ಲಿ ತುಂಬಿಕೊಂಡಿದ್ದ, ಆಗ ತಾನೆ ರಂಗಾಚಾರ್ಯರ ಜೀವನ ಚರಿತ್ರೆಯನ್ನು ಬರೆದಿದ್ದ ಡಿ ವಿ ಜಿ ಯವರ ಮನಸ್ಸಿನಲ್ಲಿ ಮೂಡಿತು. ಪ್ರಜಾಪ್ರತಿನಿಧಿ ಸಭೆಯ ಸದಸ್ಯರು ಪ್ರಜೆಯ ಮನಸ್ಸನ್ನು ತಿಳಿಯಲು ಮತ್ತು ಅದನ್ನು ಸರಕಾರದವರಿಗೆ ತಿಳಿಸಲು, ತಿಂಗಳಿಗೊಂದುಬಾರಿಯಾದರೂ ಸೇರಿ ಚರ್ಚೆ ನಡಸಿ ಅವಶ್ಯವಾದ ತೀರ್ಮಾನಕ್ಕೆ ಬರಬೇಕು; ಇದಕ್ಕೆ ಸಾಧಕವಾಗಿ ಒಂದು ಸಂಸ್ಥೆಯನ್ನು ಸ್ಥಾಪಿಸಿಕೊಳ್ಳಬೇಕು ಎಂದು ಪ್ರಜಾಪ್ರತಿನಿಧಿ ಸಭೆಯ ಹಾಸನದ ಎಚ್. ವಿ. ರಂಗಸ್ವಾಮಿಯವರನ್ನು ಡಿ ವಿ ಜಿ ಅಜೂಜುವಾರಿ ಮಾಡಿ, ಎಂ. ವೆಂಕಟಕೃಷ್ಣಯ್ಯನವರನ್ನೂ ಒಪ್ಪಿಸಿದರು. ಹೀಗೆ ಮೈಸೂರಿನಲ್ಲಿ ಪ್ರಾರಂಭವಾದದ್ದು "ಮೈಸೂರು ಸಾರ್ವಜನಿಕ ಸಭೆ". ಅದು ಎರಡು ಮೂರು ವರ್ಷ ನಾಮಮಾತ್ರವಾಗಿದ್ದು, ಸರಕಾರದ ಪುರಸ್ಕಾರ ದೊರೆಯದೆ ಹೋದುದರಿಂದ ಕಣ್ಮರೆಯಾಯಿತು.

1918ರ ಫೆಬ್ರವರಿಯಲ್ಲಿ ಡಿ ವಿ ಜಿ ಯವರ ಪ್ರೋತ್ಸಾಹದಿಂದ ಅವರ ಬೇಡಿಕೆಯನ್ನು ಮನ್ನಿಸಿ ಮೈಸೂರು ದೇಶದ ಅನೇಕ ಸ್ಥಳಗಳಲ್ಲಿ, ಶಿವಮೊಗ್ಗ, ಮೈಸೂರು, ನಂಜನಗೂಡು, ಶ್ರೀರಂಗಪಟ್ಟಣ ಮುಂತಾದ ಊರುಗಳಲ್ಲಿ

ಗೋಖಲೆ ದಿನ ಆಚರಿಸಲ್ಪಟ್ಟಿತು. ಆ ಸಭೆಗಳಲ್ಲಿ ಡಿ ವಿ ಜಿ ಯವರು ಬರೆದಿದ್ದ ಗೋಖಲೆ ಜೀವನ ಚರಿತ್ರೆ ಉಚಿತವಾಗಿ ಹಂಚಲ್ಪಟ್ಟಿತು.

ದೇಶೀಯ ವಿದ್ಯಾಭ್ಯಾಸ ಪದ್ಧತಿಯನ್ನು ಜಾರಿಗೆ ತರಬೇಕೆಂಬ ಉದ್ದೇಶದಿಂದ ವಿದ್ಯಾಭ್ಯಾಸವನ್ನು ಮಾತೃಭಾಷೆಯಲ್ಲಿ ಮಾಡಿಸಬೇಕೆಂದೂ, ಭಾರತ ದೇಶದ ಚರಿತ್ರೆಯ ಭಾಗವಾಗಿ ದೇಶಭಕ್ತಿ, ಸನಾತನ ಧರ್ಮ, ರಾಷ್ಟ್ರಕ ಧರ್ಮ ಇವುಗಳನ್ನೂ ಹೇಳಿಕೊಡಬೇಕೆಂದೂ 18-3-1918ರಲ್ಲಿ ಡಿ ವಿ ಜಿ ಒಂದು ಉಪನ್ಯಾಸ ಮಾಡಿದರು. ಥಿಯೋಸಾಫಿಕಲ್ ಸೊಸೈಟಿಯಲ್ಲಿಯೂ ಹೋಂ ರೂಲ್ ಲೀಗಿನಲ್ಲಿಯೂ ಅವರಿಗೆ ಸ್ನೇಹಿತರಿದ್ದುದರಿಂದ ಬೆಂಗಳೂರಿನಲ್ಲಿ ನ್ಯಾಷನಲ್ ಹೈಸ್ಕೂಲು ಪ್ರಾರಂಭವಾಗುವುದರಲ್ಲಿ ಅವರ ಪಾತ್ರವೂ ಮುಖ್ಯವಾಗಿತ್ತು. 1916-17ರಲ್ಲಿ ಪ್ರಜಾ ಮಿತ್ರ ಮಂಡಳಿ ಎಂಬ ಬ್ರಾಹ್ಮಣೇತರ ಪಕ್ಷ ಮೈಸೂರು ದೇಶದಲ್ಲಿ ಹುಟ್ಟಿಕೊಂಡಿತು. ಇದಕ್ಕೆ ಬೀಜ ಬಿತ್ತಿದ ಬಸವಯ್ಯನವರು ಡಿ ವಿ ಜಿ ಯವರೊಡನೆ ಮ್ಯುನಿಸಿಪಲ್ ಕೌನ್‌ಸಿಲ್‌ನಲ್ಲಿ ಸಹ ಸದಸ್ಯರಾಗಿದ್ದವರು. ಆ ಚಳವಳಿಯ ಇತರ ನಾಯಕರಾದ ಸುಬ್ಬಯ್ಯನವರು ನವಾಬ್ ಗುಲಾಂ ಅಹಮದ್ ಕಲಾಮಿ, ಜನಾಬ್ ಮಹಮದ್ ಅಬ್ಬಾಸ್ ಖಾನ್ ಅವರೆಲ್ಲ ಡಿ ವಿ ಜಿ ಯವರೊಡನೆ ಸ್ನೇಹದಿಂದಿದ್ದವರೇ. ಕಲಾಮಿಯವರೂ ಅಬ್ಬಾಸ್ ಖಾನ್ ಅವರೂ ಸೆಂಟ್ರಲ್ ಮಹಮಡನ್ ಅಸೋಸಿಯೇಷನ್ ಸ್ಥಾಪಿಸುವುದರಲ್ಲಿ ಇವರ ಸಹಾಯವನ್ನು ಕೋರಿದ್ದವರು.

ಪ್ರಜಾ ಮಿತ್ರ ಮಂಡಳಿಯ ಅಥವಾ ಪ್ರಜಾಪಕ್ಷದ ಮುಖ್ಯ ತತ್ತ್ವವನ್ನು ಡಿ ವಿ ಜಿ ಯವರು ಆಕ್ಷೇಪಿಸುತ್ತಿದ್ದವರಲ್ಲ. ಆ ತತ್ತ್ವದಲ್ಲಿ ಗುಣಾಂಶವುಂಟೆಂಬುದನ್ನು ಮನಸಾ ಒಪ್ಪಿಕೊಂಡಿದ್ದರು. ಹಿಂದುಳಿದವರನ್ನು ಮುಂದಕ್ಕೆ ತರಬೇಕೆಂಬುದು ಎಷ್ಟು ಮುಖ್ಯವಾದ ತತ್ತ್ವವೋ, ಮುಂದಕ್ಕೆ ಹೋಗಿರುವವರನ್ನು ಹಿಂದಕ್ಕೆ ಸೆಳೆಯಬಾರದೆಂಬುದೂ ಅಷ್ಟೇ ಮುಖ್ಯವಾದ ತತ್ತ್ವ. ಹಿಂದುಳಿದವರೂ ಮುಂದೆ ಹೋದವರೂ ನಡುವೆ ನಿಂತವರೂ ಎಲ್ಲರೂ ಸೇರಿರುವ ಮಹಾಸಮಾಜಕ್ಕೆ ಆಗಬೇಕಾಗಿರುವ ಸೇವೆ ಎಷ್ಟು ಗುಣಾಧಿಕ್ಯವುಳ್ಳದ್ದಾಗಿರುವುದು ಸಾಧ್ಯವೋ ಅದಕ್ಕಿಂತ ಗುಣದಲ್ಲಿ ಕಡಮೆಯಾಗದೆ ದೇಶ ಸಮಷ್ಟಿಗೆ ಸೇವೆ ದೊರೆಯುವಂತೆ ಮಾಡಬೇಕೆಂಬುದು ಎಲ್ಲಕ್ಕಿಂತ ಮೇಲಾದ ತತ್ತ್ವ — ಎಂಬುದು ಡಿ ವಿ ಜಿ ಯವರ ಅಭಿಪ್ರಾಯ.

ಪ್ರಜಾ ಮಿತ್ರ ಮಂಡಳಿಯು ಸ್ವಲ್ಪಕಾಲ ಕೆಲಸ ಮಾಡಿ ತನ್ನ ಸ್ವರೂಪ ಎಂಥಾದ್ದೆಂಬುದನ್ನು ಪ್ರಕಟಪಡಿಸಿಕೊಂಡ ಬಳಿಕ ಅದರಿಂದ ಜನಸಾಮಾನ್ಯದ

ಮೇಲೆ ಆದ ಪ್ರತಿಪ್ರಭಾವವನ್ನು ರೂಪಿಸಲು ಬೆಂಗಳೂರಿನಲ್ಲಿ ಹುಟ್ಟಿದ್ದು ಮೈಸೂರು ಮಹಾಜನ ಸಭೆ. ಇದರ ಮುಖ್ಯ ಕಾರ್ಯಕರ್ತರಲ್ಲಿ ಡಿ ವಿ ಜಿ ಯವರೂ ಒಬ್ಬರು. 1918–19ರಲ್ಲಿ ಪ್ರಾರಂಭವಾದ ಈ ಸಭೆ ಸಾರ್ವಜನಿಕ ವಿಷಯಗಳನ್ನು ಕುರಿತು ಸರಕಾರಕ್ಕೆ ನಿರ್ಣಯಗಳನ್ನು ಕಳುಹಿಸಿತು.

ಈ ಮಹಾಜನ ಸಭೆಯ ಮೂಲಕವಾಗಿ ನಡೆದ ಬಹು ದೊಡ್ಡ ಕಾರ್ಯವೆಂದರೆ 1919ನೆಯ ಡಿಸೆಂಬರಿನಲ್ಲಿ ಬೆಂಗಳೂರಿನಲ್ಲಿ ಸೇರಿದ ಮೈಸೂರು ಪೀಪಲ್ಸ್ ಕನ್‌ವೆನ್‌ಷನ್ (ಮೈಸೂರು ಪ್ರಜಾ ಜನ ಪರಿಷತ್ತು) ಎಂಬ ರಾಜಕೀಯ ಮಹಾ ಸಭೆ. ಇದಕ್ಕೆ ಡಿ ವಿ ಜಿ ಯವರು ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದರು. ಸಂಸ್ಥಾನದ ಎಲ್ಲ ಕಡೆಗಳಿಂದ ಸಾರ್ವಜನಿಕ ಪುರುಷರು ಯಾರು ಯಾರು ಇದ್ದರೋ ಅವರೆಲ್ಲ ಆ ಪರಿಷತ್ತಿಗೆ ಬಂದಿದ್ದರು. ಸರಕಾರದ ಮಂತ್ರಿಮಂಡಲಕ್ಕೆ ಪ್ರಜಾಪ್ರತಿನಿಧಿಗಳನ್ನು ಸೇರಿಸಿಕೊಳ್ಳಬೇಕು; ಪ್ರಜಾಜನದ ರಾಜಕೀಯ ಸ್ವಾತಂತ್ರ್ಯ ಪೌರ ಸ್ವಾತಂತ್ರ್ಯಗಳನ್ನು ವಿಸ್ತಾರಪಡಿಸಬೇಕು; ಇಂಡಿಯಾ ಸರಕಾರದಲ್ಲಿ ಮೈಸೂರಿಗೆ ನ್ಯಾಯವಾಗಿ ಸಲ್ಲಬೇಕಾದ ಅಧಿಕಾರ ಪ್ರಭಾವಗಳನ್ನು ದೊರಕಿಸುವಂತೆ ಭಾರತ ರಾಜ್ಯವ್ಯವಸ್ಥೆಯನ್ನು ಪರಿಷ್ಕಾರಗೊಳಿಸಬೇಕು —ಇವೇ ಮೊದಲಾದ ನಾಲ್ಕಾರು ನಿರ್ಣಯಗಳನ್ನು ಆ ಮಹಾ ಸಭೆ ಅಂಗೀಕರಿಸಿತು. ಮೈಸೂರು ದೇಶದಲ್ಲಿ ಪ್ರಜಾಸಮಷ್ಟಿಯ ರಾಜಕೀಯ ಮನೋಗತಕ್ಕೆ ಒಂದು ಸಂಘಟಿತ ರೂಪವನ್ನು ಕೊಡಲು ನಡೆದ ಸಮಾರಂಭಗಳಲ್ಲಿ ಈ ಪೀಪಲ್ಸ್ ಕನ್‌ವೆನ್‌ಷನ್ ಎಂಬುದೇ ಮೊಟ್ಟಮೊದಲನೆಯದು. ಇದರ ಯಶಸ್ಸು ಡಿ ವಿ ಜಿಯವರಿಗೇ ಹೆಚ್ಚಾಗಿ ಸಲ್ಲಬೇಕು.

1922ರ ಹೊತ್ತಿಗೆ ಬ್ಯಾನರ್ಜಿಯವರು ದಿವಾನರಾಗಿದ್ದರು. 15.4.22ರ ಹಿಂದೂ ಪತ್ರಿಕೆಯಲ್ಲಿ ಮೈಸೂರು ದೇಶದ ರಾಜಕೀಯ ಸ್ಥಿತಿಗತಿಗಳನ್ನು ವಿಮರ್ಶಿಸುತ್ತಾ ಡಿ ವಿ ಜಿಯವರು ಮೈಸೂರು ದಿವಾನರ ಇಂಗ್ಲೆಂಡು ಮತ್ತು ಸಿಮ್ಲಾ ಪ್ರವಾಸಗಳು ಅವರ ಮೈಸೂರು ಸಹೋದ್ಯೋಗಿಗಳಲ್ಲಿ ಅಸಮಾಧಾನವನ್ನುಂಟು ಮಾಡಿದೆಯೆಂದೂ ಅದರಿಂದ ಸಂಸ್ಥಾನಕ್ಕೆ ಯಾವ ವಿಧವಾದ ಒಳಿತೂ ಆಗಿಲ್ಲವೆಂದು ಟೀಕೆ ಮಾಡಿದ್ದರು. ಇದನ್ನು ಕಂಡ ಬ್ಯಾನರ್ಜಿಯವರು ಡಿ ವಿ ಜಿ ಯವರಿಗೆ ತಾವೇ ಒಂದು ಪತ್ರ ಬರೆದು ತಾವು ಇಂಗ್ಲೆಂಡಿಗೆ ಹೋದ ಕಾರಣವನ್ನೂ ಅಲ್ಲಿ ತಾವು ಮೈಸೂರು ದೇಶ ಕೊಡಬೇಕಾದ ಪೊಗದಿಯನ್ನು ಕಡಮೆ ಮಾಡುವ ವಿಚಾರವನ್ನು ಚರ್ಚಿಸಿದ್ದಾಗಿಯೂ, ಗಂಧದೆಣ್ಣೆಯ ಕಾರ್ಖಾನೆಯ ವಿಷಯಗಳನ್ನು ಚರ್ಚಿಸಿದುದಾಗಿಯೂ, ಈ ವಿಚಾರಗಳನ್ನು

ಸಾರ್ವಜನಿಕವಾಗಿ ತಿಳಿಸುವುದು ಹೇಗೆ ಸಾಧ್ಯವಿಲ್ಲ ಎಂಬುದನ್ನೂ ವಿವರಿಸಿದ್ದಾರೆ. ಇದನ್ನು ಕುರಿತು ಮುಂದೆ ಏನು ಮಾಡಬೇಕೆಂಬ ವಿಷಯವನ್ನು ಡಿ ವಿ ಜಿ ಯವರಿಗೇ ಬಿಟ್ಟಿದ್ದಾರೆ.

ಆ ಕಾಲದಲ್ಲಿ ಡಿ ವಿ ಜಿ ಯವರ ಟೀಕೆಗೆ ಇದ್ದ ಒಂದು ಮರ್ಯಾದೆ, ಅದನ್ನು ಸರಕಾರದವರು ನೋಡುತ್ತಿದ್ದ ರೀತಿ — ಅದಕ್ಕೆ ಇದು ಒಂದು ಉದಾಹರಣೆ.

1922ರಲ್ಲಿ ರಾಜಕೀಯ ಸುಧಾರಣೆಗಳ ಸಲಹೆಗಾಗಿ ಮೈಸೂರು ಸರಕಾರದವರು ಬ್ರಜೇಂದ್ರನಾಥ ಸೀಲ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿದರು. ಇದರಲ್ಲಿ ಡಿ ವಿ ಜಿ ಯವರು ಪ್ರತ್ಯಕ್ಷವಾಗಿ ಇರದಿದ್ದರೂ ಅದರ ಚರ್ಚೆಯಲ್ಲಿ ಇವರ ಪರೋಕ್ಷವಾದ ಭಾಗವಿತ್ತೆನ್ನಬಹುದು. ಆಗ ಮಿರ್ಜಾ ಸಾಹೇಬರಿಗೆ ಬರೆದ ಒಂದು ಟಿಪ್ಪಣಿಯಲ್ಲಿ ಅವರು ಹೀಗೆ ಹೇಳಿದ್ದಾರೆ:

"The problem hitherto in this country was — How to rouse the people? How to create a democracy? The problem will hereafter be — How to keep the people well informed and sober. How to impart self-discipline and judgement to democracy. The Leviathan is astir and there need be no misgivings as to its growing force and velocity. Our fear should rather be now about any rude or awkward movements by which he may damage good things or frighten good men and so mar his own good name." (October 1922)

ಕರ್ನಾಟಕ ಜನಜೀವನ ಮತ್ತು ಅರ್ಥಸಾಧಕ ಪತ್ರಿಕೆ

ಮೈಸೂರು ಸಂಸ್ಥಾನದ ಪ್ರಜೆಗಳಿಗೆ ಸಂಪದಭಿವೃದ್ಧಿಯ ಮಾರ್ಗದಲ್ಲಿ ತಿಳಿವಳಿಕೆಯನ್ನು ಕೊಡಲು 1915ರಲ್ಲಿ ಸರಕಾರದವರು ಅರ್ಥಸಾಧಕ ಪತ್ರಿಕೆ ಎಂಬ ಮಾಸಪತ್ರಿಕೆಯನ್ನು ಪ್ರಾರಂಭಿಸಿದ್ದರು. ಅವರ ಉದ್ದೇಶವು ಇನ್ನೂ ಚೆನ್ನಾಗಿ ನೆರವೇರಬೇಕೆಂದು ಅದನ್ನು ಎರಡು ವರ್ಷಗಳ ಮೇಲೆ ಮಾಸಪತ್ರಿಕೆಯಾಗಿ ಮಾರ್ಪಡಿಸಿದರು. ಆದರೆ ಆ ಪತ್ರಿಕೆಯು ಅನ್ಯ ಸಹಾಯವಿಲ್ಲದೆ ಸ್ವತಂತ್ರವಾಗಿ ಜೀವಿಸಿರಲಾಗಲಿಲ್ಲ. ಮತ್ತು ಒಂದೇ ವಿಷಯಕ್ಕೇ ಮೀಸಲಾದ ಒಂದು ಶಾಸ್ತ್ರೀಯ ಪತ್ರಿಕೆಯಂತೆ ಇದ್ದುದರಿಂದ ಅದಕ್ಕೆ ಸಿಕ್ಕಿದ ಪುರಸ್ಕಾರವೂ ಮಿತವಾಗಿಯೇ ಇತ್ತು.

ಸಂಪದಭಿವೃದ್ಧಿಯೆಂಬುದು ಜನಜೀವನವೆಂಬ ಮಹಾಕಾರ್ಯದಲ್ಲಿ ಒಂದಂಶ ಮಾತ್ರ. ಜನರ ಸಂಪತ್ಸಾಧನೆಯು ಅವರ ಬುದ್ಧಿಶಕ್ತಿ, ನೀತಿ ಚರ್ಯೆಗಳಂತೆ ಇರುವುದರಿಂದ ಅರ್ಥಸಾಧಕ ಪತ್ರಿಕೆಯ ಕಾರ್ಯಕ್ಷೇತ್ರ ಇನ್ನೂ ವಿಶಾಲವಾಗಬೇಕು. ಇತಿಹಾಸ, ಜೀವನ ಚರಿತ್ರೆ, ಪ್ರಜಾಧರ್ಮ, ವಿಜ್ಞಾನ, ಸಮಾಜ ಸುಧಾರಣೆ, ಸಾಹಿತ್ಯ — ಈ ವಿಷಯಗಳಿಂದ ವಾಚಕರ ಮನೋವೈಶಾಲ್ಯವನ್ನು ಹೆಚ್ಚಿಸಿ, ಅವರ ಜೀವಿತಾಶಯಗಳನ್ನು ಉನ್ನತಿಗೊಳಿಸುವ ಎಲ್ಲ ಅಂಶಗಳೂ ಈ ಪತ್ರಿಕೆಯಲ್ಲಿ ಸೇರಿರಬೇಕು. ಈ ಮಹೋದ್ದೇಶವನ್ನಿಟ್ಟುಕೊಂಡು ಡಿ ವಿ ಜಿ ಯವರು, ಈ ಪತ್ರಿಕೆಯನ್ನು ತಾವು ನಡಸುವುದಾಗಿ ಸರಕಾರದವರಲ್ಲಿ ಮನವಿ ಮಾಡಿಕೊಂಡರು.

ಸರಕಾರದವರು ಇದನ್ನು ಒಪ್ಪಿಕೊಂಡು ಡಿ ವಿ ಜಿ ಯವರಿಗೆ ಪತ್ರಿಕೆಯನ್ನು ವಹಿಸಿಕೊಟ್ಟರು. ಇದಕ್ಕಾಗಿ ಸರಕಾರದವರು ಡಿ ವಿ ಜಿ ಯವರಿಗೆ ವರ್ಷಕ್ಕೆ ಮೂರುಸಾವಿರದ ಐದುನೂರು ರೂಪಾಯಿಯಂತೆ ಮೂರು ವರ್ಷ ಕೊಡುವುದೆಂದೂ, ಅವರು ಅದರ ಹೆಸರನ್ನು "ಕರ್ನಾಟಕ ಜನಜೀವನ ಮತ್ತು ಅರ್ಥಸಾಧಕ ಪತ್ರಿಕೆ" ಎಂದು ಬದಲಾಯಿಸಿಕೊಳ್ಳಬಹುದೆಂದೂ ಪತ್ರಿಕೆಯ ಮಿಕ್ಕ ವಿಷಯಗಳು ಡಿ ವಿ ಜಿ ಯವರಿಗೇ ಸೇರಿದ್ದೆಂದೂ ಒಪ್ಪಂದವಾಯಿತು. ಸುಮಾರು 48 ಪುಟಗಳಿದ್ದ ಈ ಮಾಸ ಪತ್ರಿಕೆಯ ಬಿಡಿ ಪ್ರತಿಯ ಬೆ

ಸಾಲ್ಯಾಣೆ, ವಾರ್ಷಿಕ ಚಂದಾ ಎರಡೇ ರೂಪಾಯಿ. ಜನವರಿ 1923ರಲ್ಲಿ ಅದರ ಮೊದಲನೆಯ ಸಂಚಿಕೆ ಹೊರಬಂತು.

ಡಿ ವಿ ಜಿ ಯವರು ಈ ಪತ್ರಿಕೆಯನ್ನು ನಡಸಲು ಒಪ್ಪಿಕೊಂಡದ್ದಕ್ಕೆ "ಮೈಸೂರು ಪೇಟ್ರಿಯಟ್" "ಪ್ರಬುದ್ಧ ಕರ್ನಾಟಕ" ಮುಂತಾದ ಪತ್ರಿಕೆಗಳು ಸಂತೋಷವನ್ನು ವ್ಯಕ್ತಪಡಿಸಿದುವು. ಇನ್ನು ಕೆಲವು ಪತ್ರಿಕೆಗಳಿಗೆ ಈ ವ್ಯವಸ್ಥೆ ಸರಿಬೀಳಲಿಲ್ಲ.

ಈ ಪತ್ರಿಕೆಯನ್ನು ನಡಸುವುದರಲ್ಲಿ ಡಿ ವಿ ಜಿ ಯವರು ತಾವು ಇಟ್ಟು ಕೊಂಡಿದ್ದ ಉದ್ದೇಶಗಳನ್ನು ಬಹುಮಟ್ಟಿಗೆ ಪಾಲಿಸಿಕೊಂಡುಬಂದರು. ಈ ಕಾರಣದಿಂದ ಕನ್ನಡ ಸಾಹಿತ್ಯ ಚರಿತ್ರೆಯಲ್ಲೇ "ಕರ್ನಾಟಕ ಜನಜೀವನ ಮತ್ತು ಅರ್ಥಸಾಧಕ ಪತ್ರಿಕೆ"ಗೆ ಒಂದು ವಿಶಿಷ್ಟ ಸ್ಥಾನ ಸಲ್ಲಬೇಕು. ಈ ಪತ್ರಿಕೆಯಲ್ಲಿ ಸಂಪದಭಿವೃದ್ಧಿಯನ್ನು ಕುರಿತು ಮಾತ್ರವಲ್ಲದೆ ರಾಜ್ಯಶಾಸ್ತ್ರ, ವ್ಯವಸಾಯ, ಸಾಹಿತ್ಯ, ಜೀವನಚರಿತ್ರೆ ಮುಂತಾದ ಜನೋಪಯುಕ್ತವಾದ ವಿವಿಧ ಲೇಖನಗಳಿವೆ.

ಉದಾಹರಣೆಗೆ ಬಿ. ಎಂ. ಶ್ರೀ. ಅವರ ಇಂಗ್ಲಿಷ್ ಗೀತಗಳಲ್ಲಿ ಹದಿನಾರು ಇದರಲ್ಲಿ ಮೊದಲು ಪ್ರಕಟವಾಗಿವೆ. ಟಿ. ಎಸ್. ವೆಂಕಣ್ಣಯ್ಯನವರ 'ಊರ್ಮಿಳಾ ದೇವಿ', 'ಪ್ರಿಯಂವದೆ ಮತ್ತು ಅನಸೂಯೆ', 'ಕವಿರಾಜಮಾರ್ಗ' ಲೇಖನಗಳು ಇದರಲ್ಲಿ ಬಂದಿವೆ; ಎ. ಆರ್. ಕೃಷ್ಣಶಾಸ್ತ್ರಿಗಳ 'ಮೈಸೂರು ಶಾಸನಗಳು ಮತ್ತು ಅವುಗಳ ಉಪಯೋಗ' ಎಂಬ ಲೇಖನವಿದೆ. ಬಿ. ಪುಟ್ಟಯ್ಯ ನವರು 'ನಮ್ಮ ಕಸಬುಗಳೂ ನಮ್ಮ ಕೆಲಸಗಾರರೂ' ಎಂಬುದನ್ನು ಕುರಿತೂ, ವಾಜಪೇಯಂ ವೆಂಕಟಸುಬ್ಬಯ್ಯನರು 'ನಮ್ಮ ಪರಸ್ಪರ ಸಹಾಯ ಸಂಘ' ಗಳನ್ನು ಕುರಿತೂ, ವಿ.ಸೀ. ಅವರು ಹಣ ನಾಣ್ಯಗಳನ್ನು ಕುರಿತೂ ಬರೆದಿದ್ದಾರೆ. ಸಿ. ವಿ. ಅವರ ಖಾದಿ, ಚರಕದ ಮಹಿಮೆ ಕುರಿತ ಲೇಖನಗಳೂ ಇವೆ. ಇದಲ್ಲದೆ ಮೈಸೂರಿನ ಭೂವ್ಯವಸಾಯ, ಪಾದರಸವು ಧಾನ್ಯ ಕ್ರಿಮಿಗಳನ್ನು ಕೊಲ್ಲು ವುದು, ಶುಂಠಿ, ಹಸಿಮೇವಿನ ಗುಣಗಳು, ಹೊಸ ನಮೂನೆಯ ನೇಗಿಲು ಮುಂತಾದ ವ್ಯವಸಾಯ ಸಂಬಂಧವಾದ ಲೇಖನಗಳಿವೆ. ಪಂಚಮರ ಪ್ರಶ್ನೆ, ಭಾರತೀಯರು ಯೂರೋಪಿಯನ್ನರಿಂದ ಕಲಿಯಬೇಕಾದುದೇನು, ಪ್ರಜಾ ವೃದ್ಧಿ, ಮಕ್ಕಳನ್ನು ಹೆರುವುದಕ್ಕೆ ಮಿತಿಯೊಂದಿರಬೇಕೇ, ಮುಂತಾದ ಸಾಮಾ ಜಿಕ ಪ್ರಶ್ನೆಗಳನ್ನು ಕುರಿತ ಲೇಖನಗಳಿವೆ. ಎಂ. ಆರ್. ಶ್ರೀನಿವಾಸಮೂರ್ತಿ ಯವರ ವಿದ್ಯಾಭ್ಯಾಸ ಕ್ರಮವನ್ನು ಕುಂತ ಲೇಖನವಿದೆ. ಡಿ ವಿ ಜಿ ಯವರೇ

ರಾಜ್ಯಶಾಸ್ತ್ರವನ್ನು ಕುರಿತು, ಮೈಸೂರಿನ ರಾಜಕೀಯ ವ್ಯವಸ್ಥೆಯನ್ನು ಕುರಿತು, ಹಲವಾರು ಲೇಖನಗಳನ್ನು ಬರೆದಿದ್ದಾರೆ. ಅವರ ಜೋಗದ ಜಲಪಾತ, ಶಿವನಸಮುದ್ರ ಪದ್ಯಗಳು ಅದರಲ್ಲಿ ಬಂದಿವೆ. ರವೀಂದ್ರರ ಕಾಬೂಲಿವಾಲ, ನಂ. ವೆಂಕಟೇಶ ಅಯ್ಯಂಗಾರ್ಯರ ಮೀರಾಬಾಯಿಯ ಚರಿತ್ರೆ ಅಲ್ಲಿದೆ.

ಡಿ ವಿ ಜಿ ಯವರು ಆ ಪತ್ರಿಕೆಯಲ್ಲಿ ಬರೆದ ಕೆಲವು ಲೇಖನಗಳು ಅವರ ಅಂದಿನ ವಿಚಾರಧಾರೆಯನ್ನು ತೋರಿಸುತ್ತವೆ.

ಆಗ ಮೈಸೂರು ಸಂಸ್ಥಾನದಲ್ಲಿ ಬಂದಿದ್ದ ಹೊಸ ರಾಜಕೀಯ ವ್ಯವಸ್ಥೆಯನ್ನು ಕುರಿತು ಅವರು : "ಮುಖ್ಯವಾಗಿ ರಾಜ್ಯವ್ಯವಸ್ಥೆಯೆಂಬುದು ಎಲ್ಲೆಲ್ಲಿಯೂ ಪ್ರಜೆಗಳಲ್ಲಿರುವ ಶಕ್ತಿಯುಕ್ತಿಗಳಿಗನುಸಾರವಾಗಿ ಬೆಳೆದು ಬದಲಾಯಿಸತಕ್ಕದ್ದು. ಇದನ್ನು ಪ್ರಜೆಗಳಿಗಾಗಿ ಇತರರಾರೋ ತಯಾರು ಮಾಡಿಕೊಡಲಾಗುವುದಿಲ್ಲ. ಪ್ರಜೆಗಳೇ ಅದನ್ನು ಸ್ವಪ್ರಯತ್ನದಿಂದ ತಿದ್ದಿ ಅನುಕೂಲಪಡಿಸಿಕೊಳ್ಳಬೇಕು. ದೇಶಾಭಿಮಾನಿಗಳೂ ಧೈರ್ಯಶಾಲಿಗಳೂ ಆದ ಪ್ರಜಾಪ್ರಮುಖರು ಸಣ್ಣಸಣ್ಣ ಸಂಸ್ಕಾರ ಸುಧಾರಣೆಗಳನ್ನೇ ತಮ್ಮ ಬುದ್ಧಿವಂತಿಕೆಯಿಂದ ದೊಡ್ಡದು ಮಾಡಿಕೊಂಡು, ಇರತಕ್ಕ ಅವಕಾಶಗಳನ್ನೇ ಉಪಾಯದಿಂದ ಉಪಯೋಗಿಸಿಕೊಳ್ಳುವುದರ ಮೂಲಕ ಅಧಿಕಾರಿ ವರ್ಗವನ್ನು ತಕ್ಕ ಹದ್ದಿನಲ್ಲಿಟ್ಟು ಪ್ರಜಾಪಕ್ಷವನ್ನು ಸಾಧಿಸುವರು. ಬುದ್ಧಿವಂತಿಕೆಯಿಲ್ಲದ ಜನರಿಗೆ ಎಷ್ಟು ಹೆಚ್ಚಾದ ಸ್ವಾತಂತ್ರ್ಯಗಳನ್ನೂ ಅಧಿಕಾರಗಳನ್ನೂ ಕೊಟ್ಟರೂ ಅವರು ಅದನ್ನು ಉಪಯೋಗಿಸಲರಿಯದೆ ಎಂದಿನಂತೆ ದುರ್ಬಲರಾಗಿರುವರು.... ನಮ್ಮ ಪ್ರಜಾಭಿಪ್ರಾಯವನ್ನು ವ್ಯಕ್ತಪಡಿಸಲು ಸಂಘಗಳೂ ಪತ್ರಿಕೆಗಳೂ ಬೆಳೆಯಬೇಕು. ಈ ರೀತಿ ಅವ್ಯಭಿಚಾರಿಯಾದ ದೇಶಭಕ್ತಿಯೂ ಕಾರ್ಯಕಾರಿಯಾದ ಜ್ಞಾನವೂ ಜನದಲ್ಲಿ ಹಬ್ಬಿದಲ್ಲದೆ ರಾಜಕೀಯ ಸ್ವಾತಂತ್ರ್ಯವೆಂಬುದಕ್ಕೆ ಅವರಲ್ಲಿ ತಳಹದಿಯೇ ಇರಲಾರದು.

"ಮೈಸೂರು ದೇಶದಲ್ಲಿ ಈಗ ಮಹಾಜನ ಪ್ರಯತ್ನವು ಬಹು ಕಡಮೆಯಾಗಿದೆ. ಜಾತಿ ಕಲಹಗಳೂ ವೈಯಕ್ತಿಕ ಸ್ಪರ್ಧೆಗಳೂ ಪ್ರಬಲಿಸಿ ಪ್ರಜೋಜ್ಜೀವನಕ್ಕೆ ಅಡ್ಡವಾಗಿ ನಿಂತಿವೆ. ಇವುಗಳನ್ನು ಪರಿಹರಿಸಿ ಸಂಪದಭಿವೃದ್ಧಿಯೇ ಮೊದಲಾದ ದೇಶಾಭ್ಯುದಯ ಕಾರ್ಯಗಳಿಗೆ ಜನರಲ್ಲಿ ಉತ್ಸಾಹವನ್ನು ಹುಟ್ಟಿಸುವುದೇ ದೇಶವತ್ಸಲರಿಗೆ ಈಗ ಇರುವ ಮೊದಲನೆಯ ಕೆಲಸ. ಎಲ್ಲಕ್ಕೂ ಸರಕಾರವನ್ನೇ ನೆಚ್ಚಿಕೊಂಡಿರುವ ಅಭ್ಯಾಸವನ್ನು ಜನರಿಗೆ ತಪ್ಪಿಸಿ, ಅವರು ತಮ್ಮ ಸಾಮುದಾಯಿಕ ಪ್ರಯತ್ನದಿಂದಲೇ ಸಾಂಪತ್ತಿಕ ಸಾಮಾಜಿಕ ಕಾರ್ಯ

ಗಳೆಲ್ಲವನ್ನೂ ನಡೆಯಿಸಿಕೊಳ್ಳುವಂತೆ ಪ್ರೇರೇಪಿಸಬೇಕು. ದಿವಾನ್ ರಂಗಾಚಾರ್ಯರು ಇಟ್ಟುಕೊಂಡಿದ್ದ ಕೆಲಸ ಇದು. ನಮ್ಮನ್ನೂ ಅದೇ ಕೆಲಸವೇ ಈಗಿಗೂ ಎದುರು ನೋಡುತ್ತಿದೆ. ನಮ್ಮ ಜನರು ಎಂದಿಗೆ ಸಂಪದಭಿವೃದ್ಧಿಯ ಕಾರ್ಯಗಳಲ್ಲಿ ಸರ್ಕಾರಕ್ಕಿಂತ ಹೆಚ್ಚಿನ ಉತ್ಸಾಹ ತೋರಿ ಮಾರ್ಗದರ್ಶಕರಾದಾರು ? —ಇದೇ ಈಗ ದೇಶವತ್ಸಲರಿಗಿರಬೇಕಾದ ಕಳವಳ."

"ದೇಶಕ್ಷೇಮಕ್ಕೆ ಭೂವ್ಯವಸಾಯವು ವ್ಯಾಪಾರ ಕಾರ್ಖಾನೆಗಳಿಗಿಂತ ಹೆಚ್ಚು ಮುಖ್ಯವಾದುದೆಂಬುದನ್ನು ಹಣವುಳ್ಳವರು ಸದಾ ಜ್ಞಾಪಕದಲ್ಲಿಟ್ಟಿರಬೇಕು. ಮನುಷ್ಯನು ಧನವಿಲ್ಲದೆ ಹೋದ ಮಾತ್ರಕ್ಕೆ ಸಾಯುವುದಿಲ್ಲ. ಆದರೆ ಧಾನ್ಯವಿಲ್ಲದೆ ಹೋದರೆ ಒಂದೆರಡು ದಿನಗಳಲ್ಲಿಯೇ ಪ್ರಾಣಗಳನ್ನು ಬಿಡಬೇಕಾಗುವುದು. ಆದ ಕಾರಣ ವ್ಯವಸಾಯವು ದೇಶಕ್ಕೆ ಜೀವಾಧಾರವಾದ ಕಸುಬು. ಅದನ್ನು ವಿಸ್ತಾರಗೊಳಿಸುವುದಕ್ಕಾಗಿ ಮಾಡಿದ ವೆಚ್ಚವನ್ನು ವರ್ತಕ ರೀತಿಯಿಂದ, "ಲಾಭಕಾರಿಯೆ ಅಲ್ಲವೆ ?" ಎಂದು ಮಾತ್ರ ವಿಚಾರ ಮಾಡಿದರೆ ಸಾಲದು. ಅದನ್ನು ಧರ್ಮದೃಷ್ಟಿಯಿಂದಲೂ ನೋಡಿ ಅದೊಂದು ದೇಶಸೇವೆ ಎಂದು ಭಾವಿಸಬೇಕು."

"ಅಭಿವೃದ್ಧಿಯು ಇತರ ಎಲ್ಲ ಸಂಗತಿಗಳಿಗಿಂತ ಹೆಚ್ಚಾಗಿ ಒಂದು ಪ್ರಶ್ನೆಯನ್ನು ಪ್ರಕೃತೋಪಯುಕ್ತವನ್ನಾಗಿ ಮಾಡಿದೆ. ಆ ಪ್ರಶ್ನೆ ಯಾವುದೆಂದರೆ —ಮಾಂದ್ಯವನ್ನುಂಟುಮಾಡತಕ್ಕ ಅತಿಯಾದ ಶರೀರ ಶ್ರಮವನ್ನು ತಪ್ಪಿಸಿಕೊಂಡು, ದಾರಿದ್ರ್ಯ ದುಃಖವಿಲ್ಲದುದಾಗಿರುವ ಸರಸ ಜೀವನಕ್ಕೆ ನ್ಯಾಯವಾದ ಅವಕಾಶವನ್ನು ಲೋಕದಲ್ಲಿ ಎಲ್ಲರೂ ಪಡೆಯುವಂತಾಗುವುದು ನಿಜವಾಗಿ ಅಸಾಧ್ಯವೆ?—ಈ ಪ್ರಶ್ನೆಯು ಈ ಕಾಲದ ಜನರ ಶ್ರದ್ಧಾತಿಶಯದಿಂದ ಪ್ರಾಮುಖ್ಯತೆಗೆ ಬರುತ್ತಲಿದೆ."

"ಪೂರ್ವಿಕರಿಟ್ಟ ಆಸ್ತಿಯಿಂದಲೇ ಎಲ್ಲವೂ ಆಗುವುದೆಂದು ನಾವು ನಂಬಿ, ಆ ಆಸ್ತಿಯಲ್ಲಿ ಯಾವುದಿದೆ ಯಾವುದಿಲ್ಲವೆಂಬುದನ್ನು ವಿಚಾರ ಮಾಡದೆ, ಅದನ್ನೆಷ್ಟು ಮಾತ್ರವೂ ವೃದ್ಧಿಪಡಿಸದೆ, ನಾವು ಸವೆಯುತ್ತಿರುವೆವು. ಪಾಶ್ಚಾತ್ಯರು ತಮಗೆ ಬಂದ ಆಸ್ತಿಯನ್ನು ಸ್ವಸಾಮರ್ಥ್ಯದಿಂದ ವೃದ್ಧಿಪಡಿಸಿಕೊಂಡು ಮತ್ತಷ್ಟು ಆಸ್ತಿಯನ್ನು ಮುಂದಿನವರಿಗೆ ಗಳಿಸಿಡಲು ಯತ್ನ ಮಾಡುತ್ತಿರುವರು. ಆದುದರಿಂದ ದೇಶಾಭ್ಯುದಯವನ್ನು ಸಾಧಿಸುವುದಕ್ಕೆ ಸರಿಯಾದ ದಾರಿ ಯಾವುದೆಂಬುದನ್ನು ನಾವು ಅವರಿಂದ ಕಲಿಯಬೇಕಾಗಿದೆ."

ಈ ಅಭಿಪ್ರಾಯಗಳನ್ನು ಜನರಲ್ಲಿ ಪ್ರಸಾರ ಮಾಡಿ ಪ್ರಜಾಕರ್ತವ್ಯಗಳ

ನಿರ್ವಹಣೆಗೆ ಅವರನ್ನು ಸಿದ್ಧಪಡಿಸುವ ಪ್ರಯತ್ನದಲ್ಲಿ ತೊಡಗಿತ್ತು ಆ ಪತ್ರಿಕೆ.

ಡಿ ವಿ ಜಿ ಯವರು ರಾಜ್ಯಶಾಸ್ತ್ರವನ್ನು ಕುರಿತು ಬರೆದ ಲೇಖನಗಳಿಗೆ ದೇವರಾಜ ಬಹದ್ದೂರ್ ಪ್ರಶಸ್ತಿಯೂ ದೊರಕಿತು. ಆದರೆ....

ಮುಂದಿನ ಕಥೆಯನ್ನು ಶಾಸ್ತ್ರಿಯವರು ತಮ್ಮ 'ಭಾಸ' ಗ್ರಂಥದಲ್ಲಿ ಹೇಳಿದ್ದಾರೆ:

ಸರಕಾರದ ದೃಷ್ಟಿಯನ್ನು ತಕ್ಕಷ್ಟು ಈ ಪತ್ರಿಕೆ ಪ್ರತಿಬಿಂಬಿಸುತ್ತಿಲ್ಲ ಎಂದು ದಿವಾನರಿಗೆ ತೋರಿರಬೇಕು. ಕೌನ್ಸಿಲ್ಲಿನ ಸದಸ್ಯರಾಗಿದ್ದ ಕೆ. ಆರ್. ಶ್ರೀನಿವಾಸ ಅಯ್ಯಂಗಾರ್ಯರು ಡಿ ವಿ ಜಿ ಯವರಿಗೆ ಈ ಅರ್ಥದಲ್ಲಿ ಪತ್ರಗಳನ್ನು ಬರೆದಿದ್ದರೆಂದು ಕಾಣುತ್ತದೆ. ಈ ಅಭಿಪ್ರಾಯ ಭೇದ ಬೆಳೆದು, 'ನಾನು ಪತ್ರಿಕೆಯನ್ನು ನಡಸುತ್ತಿರುವ ರೀತಿ ಸರಕಾರಕ್ಕೆ ಅಸಮರ್ಪಕವಾಗಿ ಕಂಡರೆ ಈ ಏರ್ಪಾಟನ್ನು ಇಲ್ಲಿಗೆ ಮುಗಿಸಬಹುದು' ಎಂದು ಡಿ ವಿ ಜಿ ಸರಕಾರಕ್ಕೆ ಬರೆದರು.

ಸರಕಾರ ಇದನ್ನು ಒಪ್ಪುವ ವೇಳೆಗೆ ಹಿಂದಿನ ವರ್ಷದ (1923ರ) 12 ಸಂಚಿಕೆಗಳ ಮೂರು ಸಾವಿರದ ಐನೂರು ರೂಪಾಯಿ ಸಂದಾಯವಾಗಿ, 1924ರ ಎರಡು ಸಂಚಿಕೆಗಳನ್ನು ಅಚ್ಚು ಮಾಡಿಸುವ ಕೆಲಸ ನಡೆದಿತ್ತು. ಈ ಎರಡು ಸಂಚಿಕೆಗಳಿಗೆ ಸರಕಾರ ಪರಿಹಾರ ಕೊಡಬೇಕೆಂದು ಆಗ ಸರಕಾರದಲ್ಲಿ ಅಂಡರ್ ಸೆಕ್ರೆಟರಿಯಾಗಿದ್ದ ಶಾಸ್ತ್ರಿಯವರು ಸೂಚಿಸಿದರಂತೆ. ಅದರಂತೆ ಹಣ ಸಂದಾಯವಾಯಿತು. ಡಿ ವಿ ಜಿ ಯವರು ಈ ಹಣವನ್ನು ಕೇಳಿರಲಿಲ್ಲ.

ಹೀಗೆ ಡಿ ವಿ ಜಿ ಯವರ ಇನ್ನೊಂದು ಪ್ರಯತ್ನ ಕೊನೆಗೊಂಡಿತು.

ಮನೆಯ ಬೆಳಕು ಆರಿತು

ಡಿ ವಿ ಜಿ ಯವರ ಜೊತೆಯಲ್ಲಿ ಹುಟ್ಟಿದವರು, ಡಿ ವಿ ಜಿ ಯವರ ನಂತರ ಮೂರು ಹೆಣ್ಣುಮಕ್ಕಳು. ಆಮೇಲೆ ಶೇಷಗಿರಿರಾಯರು, ಅವರಿಗೆ ಒಬ್ಬ ತಂಗಿ, ಒಬ್ಬ ತಮ್ಮ ರಾಮರಾಯರು.

ಡಿ ವಿ ಜಿ ಯವರಿಗೆ ಮದುವೆಯಾದದ್ದು ಅವರು ಐದನೆಯ ಫಾರಂನಲ್ಲಿದ್ದಾಗ, 1904ರಲ್ಲಿ ಎಂದು ಹೇಳಿದ್ದಾಗಿದೆ. "ನನ್ನ ನಕ್ಷತ್ರಕ್ಕೆ ಹೊಂದಿಕೆಯಾದ ಮನೆ ಸರಿಯಂತೆ; ಆ ಕಡೆ ಹುಡುಗಿಯ ತಂದೆ ಹೋದ ವರ್ಷದೊಳಗಾಗಿ ಕನ್ಯಾದಾನ ಮಾಡತಕ್ಕದ್ದೆಂದು ವ್ರತ ಮಾಡಿಕೊಂಡಿದ್ದರಂತೆ. ಇಂಥ ಸದವಕಾಶವನ್ನು ಕಳೆದುಕೊಂಡರೆ ಬೇರೆ ತಂದೆಯಿಲ್ಲದ ಹುಡುಗಿಯನ್ನು ಹುಡುಕುವುದು ಪ್ರಯಾಸವೆಂದು ನನ್ನ ಹಿರಿಯರು ನಿಶ್ಚಯಿಸಿದರು" ಎಂದಿದ್ದಾರೆ ಡಿ ವಿ ಜಿ. ಮದುವೆಯಾದ ಮೇಲೂ ಹುಡುಗಿ–ಭಾಗೀರತಮ್ಮ–ತನ್ನ ಚಿಕ್ಕಪ್ಪ ಬಿ. ಎಸ್. ರಾಮಯ್ಯನವರ ಮನೆಯಲ್ಲೇ ಇದ್ದಳು.

ರಾಮಯ್ಯನವರ ಹೆಸರು ಬೆಂಗಳೂರಿನ ಸಾಂಸ್ಕೃತಿಕ ಚರಿತ್ರೆಯಲ್ಲಿ ಗಮನಿಸಬೇಕಾದ ಹೆಸರು. ಬೆಂಗಳೂರಿನಲ್ಲಿ ಸಂಗೀತ ಕಛೇರಿಗಳಾಗುತ್ತಿದ್ದ ಸ್ಥಳಗಳಲ್ಲಿ ಅವರ ಮನೆಯೂ ಒಂದು. ಗಾಯನ ಸಮಾಜದ ಹಿಂದಿನ ಗಾನ ವಿನೋದ ಸಭೆಗೆ ಕೋಶಾಧಿಕಾರಿಗಳಾಗಿದ್ದವರು ಅವರು. ಹೀಗೆ ಭಾಗೀರತಮ್ಮನವರಿಗೆ ಸಂಗೀತದ ರುಚಿಯಿತ್ತು. ಕೊಂಚ ಹಾಡುತ್ತಿದ್ದರು, ಯಜಮಾನರಂತೆ ಕವಿತಾ ರಚನೆಯ ಕೌಶಲವೂ ಇದ್ದಿತು.

ನೋಡಲು ಲಕ್ಷಣವಾಗಿದ್ದಾಕೆ. ಮೇಲಾಗಿ ಗುಣಸಂಪನ್ನೆ.

ಮದರಾಸಿನಿಂದ ಹಿಂತಿರುಗಿ ಬಂದ ಡಿ ವಿ ಜಿ ಯವರು 1909ರಲ್ಲಿ ಬೇರೆ ಸಂಸಾರವನ್ನು ಹೂಡಿದರು—ಯಾವುದೋ ಕೋಆಪರೇಟಿವ್ ಸೊಸೈಟಿಯಿಂದ ಸಾಲವನ್ನು ತೆಗೆದುಕೊಂಡು, ಮತ್ತು ಸೂರ್ಯೋದಯ ಪ್ರಕಾಶಿಕೆಯ ಕೆಲಸ ಮುಂದುವರಿಯುತ್ತದೆಂದು. ಆದರೆ ಸೂರ್ಯೋದಯ ಪ್ರಕಾಶಿಕೆ ಅಸ್ತಂಗತವಾದದ್ದು ಇವರ ಭಾರವನ್ನು ಹೆಚ್ಚಿಸಿತು.

ತಂದೆಯವರಿಗೆ ಪೆನ್‌ಷನ್ ಆದಮೇಲೆ ಮುಳಬಾಗಿಲಿನ ಸಂಸಾರವೂ

1910ರಲ್ಲಿ ಇವರನ್ನು ಬಂದು ಸೇರಿತು.

ನಿರ್ಧರವಾದ ಜೀವನಾನುಕೂಲವಿಲ್ಲದೆ ಸಂಸಾರ ಹೂಡಿದ ಮೊದಲ ದಿನಗಳಲ್ಲಿ ಅವರು ಪಟ್ಟ ಕಷ್ಟ ದಾರುಣವಾದದ್ದು. ಒಂದು ವರಮಹಾಲಕ್ಷ್ಮೀ ಹಬ್ಬದ ದಿನ ಮನೆಯಲ್ಲಿ ಒಂದು ಕಾಸಿಲ್ಲ. ಅವರ ತೀರ್ಥರೂಪರು ತಮ್ಮ ಕುಮಾರನನ್ನು ನಂಬಿ ಬೆಂಗಳೂರಿಗೆ ಬಂದದ್ದು ತಪ್ಪಾಯಿತು ಎಂದು ಕೂಗಾಡುತ್ತಿರುವಾಗ ಹಿಂದೆ ಎಂದೋ "ಇಂಡಿಯನ್ ರಿವ್ಯೂ" ಪತ್ರಿಕೆಗೆ ಕಳುಹಿಸಿದ್ದ ಲೇಖನವೊಂದಕ್ಕೆ ಸಂಭಾವನೆಯಾಗಿ ಮೂವತ್ತು ರೂಪಾಯಿ ಮನಿ ಆರ್ಡರ್ ಬಂತಂತೆ. ಅಂದು ಬಂದ ಮೂವತ್ತು ರೂಪಾಯಿಗಳು ಅವರಿಗೆ ಎಷ್ಟೋ ಲಕ್ಷ ರೂಪಾಯಿಗಳು ಬಂದಂತೆ ಆಯಿತಂತೆ. 'ನಿನಗೆ ಹಸಿವು ಎಂದರೇನು ಗೊತ್ತೇ' ಎಂದು ಈ ಲೇಖಕನನ್ನು ಕೇಳಿ, ಹಸಿವಾಗುತ್ತಿರುವಾಗ ತಿನ್ನಲು ಏನೂ ಇಲ್ಲದೆ ಹೋಗಿ, ಕೈಯಲ್ಲಿ ಕಾಸೂ ಇಲ್ಲದಿದ್ದಾಗ ಆಗುವ ಪರಿಸ್ಥಿತಿಯನ್ನು ತಾವು ಪಟ್ಟಿರುವುದಾಗಿ ಅವರು ಹೇಳುತ್ತಿದ್ದರು.

ಮೊದಲು ಅವರು ಇದ್ದದ್ದು ಚಾಮರಾಜಪೇಟೆ ಐದನೆಯ ಕ್ರಾಸಿನಲ್ಲಿ. ಆಮೇಲೆ ನಾಲ್ಕನೆಯ ರಸ್ತೆಯಲ್ಲಿ. ಅನಂತರ ಅವರು ಅನೇಕ ವರ್ಷಗಳ ಕಾಲ ಇದ್ದದ್ದು ಶಂಕರಪುರದ ಐದನೆಯ ಕ್ರಾಸಿನಲ್ಲಿ.

26-2-1917 ರಲ್ಲಿ ವೆಂಕಟರಮಣಯ್ಯನವರು ತಮ್ಮ ಎರಡನೆಯ ಮಗ ಶೇಷಗಿರಯ್ಯನಿಗೆ ಬ್ರಹ್ಮೋಪದೇಶವನ್ನು ಮಾಡಿದರು. ಹಾಗೆಯೇ 31-5-1922 ರಲ್ಲಿ ಅವರು ಶೇಷಗಿರಯ್ಯನಿಗೆ ಬೆಂಗಳೂರು ದಂಡಿನಲ್ಲಿರುವ ಜಗದೇಕಪುರದ ಅನಂತಯ್ಯನವರ ಮಗಳು ಕಮಲಮ್ಮನನ್ನು ಕೊಟ್ಟು ಬೆಂಗಳೂರು ದಂಡಿನಲ್ಲಿ ಮದುವೆ ಮಾಡಿದರು. ಅಷ್ಟರಲ್ಲಿಯೇ ತಮ್ಮ ಮಗಳು ಸಾವಿತ್ರಮ್ಮನಿಗೆ ಮದುವೆಯಾಗಿತ್ತು. ಲಕ್ಷ್ಮೀದೇವಮ್ಮ ಮನೆ ತಪ್ಪಿ ಈ ಸಂಸಾರಕ್ಕೆ ಸೇರಿಯಾಗಿತ್ತು.

ತಾಯಿಯಿಲ್ಲದ ಭಾಗೀರತಮ್ಮನವರಿಗೆ ಅವರ ಅಕ್ಕನ ಮನೆಯೇ ತವರು ಮನೆಯಾಯಿತು. ಅಕ್ಕನ ಮಗಳು ಕುಟ್ಟಮ್ಮ ಆಸರೆಯಾದಳು. ಆದ್ದರಿಂದ ಆಗಾಗ ಕಡೂರಿನಲ್ಲಿದ್ದ ಅಕ್ಕನ ಮನೆಗೆ ಆಕೆ ಹೋಗಿರುತ್ತಿದ್ದರು, ಬೆಂಗಳೂರಿಗೆ ಅವರು ಗುಟ್ಟಹಳ್ಳಿಗೆ ಬಂದಮೇಲೆ ಅಲ್ಲಿಗೆ.

ಡಿ ವಿ ಜಿ ಯವರು ಬರೆದಿರುವ ಈ ವಾಕ್ಯಗಳು ಅವರ ಅಂತರಂಗವನ್ನು ತೋರಿಸುತ್ತದೆ :

"The year 1922 was on the whole not a lucky year for

me. It was filled with illness, care, difficulty, disappointments and the loss of a dear child (Saraswati on 28-1-1922). It left me and Sami ill and it is only in January 1923 we have been feeling ourselves as on the way to health and strength. It is dreadful even to think of the worries, I have passed through. But one thing: there were some happy turns of circumstances also. But for them I do not see how I could have pulled through. Annaiya's marriage, Savitri's nuptials and two cases of child birth, - these meant crushing heavy expense and worry, and God the merciful sent succour and so rendered the otherwise bad year unaccountably good. Life is is verily a mystery".

ತಮ್ಮ ಅಧ್ಯಯನಕ್ಕಾಗಿ ಸೂರಪ್ಪನವರ ಮನೆಯಲ್ಲಿ, ಕಾಗದದ ಉಗ್ರಾಣದಲ್ಲಿ, ಒಂದು ಕೊಠಡಿಯನ್ನು ಬಾಡಿಗೆಗೆ ತೆಗೆದುಕೊಂಡು ತಮ್ಮ ಪುಸ್ತಕ ಭಂಡಾರವನ್ನು ಅಲ್ಲಿಗೆ 1923 ರ ಮೊದಲಿನಲ್ಲಿ ಸಾಗಿಸಿದರು.

ಬಡತನದಲ್ಲಿದ್ದರೂ ಸಂತೋಷವಾಗಿದ್ದ ಸಂಸಾರ ಇವರದು. ಭಾಗೀರತಮ್ಮನವರೂ ಸಾರ್ವಜನಿಕ ಜೀವನದಲ್ಲೇ ತನ್ನ ಜೀವನವನ್ನು ಕಳೆಯುತ್ತಿದ್ದ ಗಂಡನು ತನ್ನಮೇಲೆ ಎಷ್ಟು ಪ್ರೀತಿಯಿಟ್ಟಿದ್ದಾರೆ ಎಂಬುದನ್ನು ಅರಿತು ತಾನು ಅವರಿಗೆ ಹೊಂದಿಕೊಂಡಿರಬೇಕೆಂಬ ಹಂಬಲವಿದ್ದವರು. ದಿನದಲ್ಲಿ ಅರ್ಧ ಘಂಟೆಯಾದರೂ ಜೊತೆಗಿರಬೇಕೆಂದು ಇಬ್ಬರ ಆಸೆಯಾದರೂ ಅದಕ್ಕೆ ಎಷ್ಟೋ ಅಡ್ಡಿಗಳು. ಆಕೆ ಗಾಂಧಿಯವರ ದಕ್ಷಿಣ ಆಫ್ರಿಕದ ಕತೆಯನ್ನು ಬರೆದಿಟ್ಟುಕೊಂಡಿದ್ದರು. ಹಬ್ಬಹರಿದಿನಕ್ಕೆ ಉಪಯೋಗವಾದ ಹಾಡುಗಳನ್ನು ಬರೆದಿಟ್ಟುಕೊಂಡಿದ್ದರು. ಪದ್ಯಗಳನ್ನು ಬರೆಯುವ ಅಭ್ಯಾಸವೂ ಇತ್ತು. ಅವರಿಗೆ ಉಳಿದದ್ದು ಮೂರು ಮಕ್ಕಳು—ಲಕ್ಷ್ಮೀನಾರಾಯಣ ಸ್ವಾಮಿ, ಮೀನಾಕ್ಷಿ, ಮತ್ತು ಇಂದಿರಮ್ಮ.

ಇಂಥ ಸಂಸಾರಕ್ಕೆ 1924ರಲ್ಲಿ ದೊಡ್ಡ ಸಿಡಿಲೆರಗಿತು. ಇವನ್ನು ವಿವರಿಸುವುದಕ್ಕೆ ಬದಲು ಡಿ ವಿ ಜಿ ಯವರು ಗುರುತುಮಾಡಿರುವ ಟಿಪ್ಪಣಿಯನ್ನು ಇಲ್ಲಿ ಉಲ್ಲೇಖಿಸಬಹುದು :

11.2.1924 Spent half an hour in moon light talking. The last happy night with wife.

12.2.1924 ರಥಸಪ್ತಮಿ Tuesday Night; Birth of the last child--a boy.

22.2.1924 Friday ಮಂಗಳ ಸ್ನಾನ

28.2.1924 The ghastly event. Fire accident at about 6-30 p.m. when I was not at home. The greatest calamity of my life, wife removed to Victoria Hospital at 10-30 p. m.

(ಬಾಣಂತಿಯಾದ ಭಾಗೀರಥಮ್ಮನವರು ನೀರು ಹಾಕಿಕೊಂಡ ಮೇಲೆ ತಲೆ ಕಾಯಿಸಿಕೊಳ್ಳುತ್ತಿರುವಾಗ ಹೇಗೋ ಬೆಂಕಿ ತಗುಲಿತಂತೆ).

Victoria Hospital from February 29th to March 9th evening when wife passed away.

9.2.1924 About 4-30 a. m. or so dreamt of happy time with wife. But at 6-30 p.m. she breathed her last after deep agony.

"ನನ್ನ ಮನೆಯ ದೀಪ ಆರಿಹೋದಾಗ ಪಕ್ಕದಲ್ಲಿ ನಿಂತಿದ್ದವರು ವೆಂಕಣ್ಣಯ್ಯ. ಅಂದಿಗೆ ಹದಿನೈದು ದಿವಸದ ಹಿಂದಿನಿಂದ ಅವರು ಕಾಲೇಜು ಹೊತ್ತು ಹೊರತು ಯಾವಾಗಲೂ ಎಡೆಬಿಡದೆ ನನ್ನ ಪಕ್ಕದಲ್ಲಿರುತ್ತಿದ್ದರು. ಅಂದು ರಾತ್ರಿ ನನ್ನ ಪರವಾಗಿ ಸ್ಮಶಾನಕ್ಕೆ ಹೋಗಿದ್ದವರು (೧) ನನ್ನ ತಂದೆಯ ಸ್ನೇಹಿತರೂ ನಮ್ಮ ಪುರೋಹಿತರೂ ಆದ ರಾಮಶಾಸ್ತ್ರಿಗಳು (೨) ಬೆಳ್ಳಾವೆ ವೆಂಕಟನಾರಾಣಪ್ಪ (೩) ವೆಂಕಣ್ಣಯ್ಯ ಮತ್ತು (೪) ಅಂಗಡಿ ಕೃಷ್ಣಪ್ಪ. ನನ್ನ ಬಂಧುಗಳು ಯಾರೂ ಅಲ್ಲಿಗೆ ಹೋಗಲು ಅನುಕೂಲಿಸಲಿಲ್ಲ. ಈ ನಾಲ್ವರೂ ಹೋಗಿ ಅಲ್ಲಿ ಆಗಬೇಕಾದದ್ದನ್ನು ಮಾಡಿಸಿ ಹಿಂತಿರುಗುವ ವೇಳೆಗೆ ರಾತ್ರಿ ಹನ್ನೆರಡು ಘಂಟೆಯು ಮೇಲಾಯಿತು. ರಾಮಶಾಸ್ತ್ರಿಗಳು ಹೇಳಿದರು :

'ಈಕೆ ಹುಟ್ಟಿದ ದಿವಸದಿಂದ ಸಣ್ಣಮಗುವಾಗಿದ್ದವರೆಗೂ ಈಕೆಯನ್ನು ಕೈಯಿಂದ ಎತ್ತಿ ಆಡಿಸಿ ನಗಿಸಿ ಸಂತೋಷಪಟ್ಟೆ. ಆಮೇಲೆ ನಾನೇ ಪುರೋಹಿತನಾಗಿ ಮದುವೆ ಮಾಡಿಸಿ ಸಂತೋಷಪಟ್ಟೆ. ಆಮೇಲೆ ಆಕೆ ಹೆತ್ತಾಗ ಜಾತಕರ್ಮಾದಿಗಳನ್ನು ಮಾಡಿಸಿ ಸಂತೋಷಪಟ್ಟೆ. ಈಗ ಅದೇ ಕೈಯಿಂದ ಕಥೆಯನ್ನು ಮುಗಿಸಿಯೂ ಆಯಿತು.' ಹೀಗೆ ಗೋಳಿಟ್ಟರು. ಅಲ್ಲಿದ್ದ ಒಬ್ಬರು "ಲೋಕದಲ್ಲಿ ಇಂಥಾದ್ದು ಅಪರೂಪವಲ್ಲ. ಎಷ್ಟೋ

ನಡೆದಿದೆ” ಎಂದರು.

ವೆಂಕಟನಾರಾಣಪ್ಪನವರಿಗೆ ದೈವದ ಮೇಲೆ ಮುನಿಸು. ಅವರು ಮುನಿದು ಕೊಂಡೇ “ಇದು ಯಾಕೆ ಹೀಗಾಗಬೇಕು” ಎಂದು ಪ್ರಲಾಪಿಸಿದರು.

ವೆಂಕಣ್ಣಯ್ಯನವರ ಬಾಯಿಂದ ಒಂದು ಮಾತೂ ಹೊರಡಲಿಲ್ಲ. ಆತ ಸ್ತಬ್ಧರಾಗಿ ಕುಳಿತಿದ್ದರು.”

ಡಿ ವಿ ಜಿ ಯವರಿಗಾದರೋ ಹೃದಯವೇ ಶ್ಮಶಾನವಾಯಿತು.

ನಡೆವ ಮಸಾಣಂ ನೋಡಾ।
ನಡಗಿಹುವೆನ್ನೆದೆಯೊಳಿನಿತೊ ಸಂಕಲ್ಪಶವಂ।
ಸುಡುತಿಹುದಿದೊ ಚಿಂತಾಚಿತಿ।
ಗುಡುಗುಡಿಸುತಲಲೆವುಪತ್ತ್ರಲಾಶಾಪ್ರೇತಂ॥

ಈ ದುಃಖದಿಂದ ಡಿ ವಿ ಜಿ ಯವರು ಚೇತರಿಸಿಕೊಳ್ಳಲೇ ಇಲ್ಲ.

ತೇನಾಷ್ಟೌ ಪರಿಗಮಿತಾಃ ಸಮಾಃ ಕಥಂಚಿದ್ಬಾಲತ್ವಾದವಿತಥ
ಸೂನೃತೇನ ಸೂನೋಃ।
ಸಾದೃಶ್ಯಪ್ರತಿಕೃತಿದರ್ಶನೈಃ ಪ್ರಿಯಾಯಾಃ
ಸ್ವಪ್ನೇಷು ಕ್ಷಣಿಕ ಸಮಾಗಮೋತ್ಸವೈಶ್ಚ॥
(ರಘುವಂಶ 8-92)

ಅಜನ ಸ್ಥಿತಿಯಂತೆ ಆಗಲಿಕೆ ಅವರನ್ನು ಸುಟ್ಟಿತು. ಆಕೆ ಉಪಯೋಗಿ ಸುತ್ತಿದ್ದ ವಸ್ತುಗಳಲ್ಲಿ ಸಮಾಧಾನವನ್ನು ಪಡೆಯಲು ಯತ್ನಿಸಿದರು.

ಆ ಸಮಯದಲ್ಲಿ ಅವರು ಬರೆದ ಅನೇಕ ಕವನಗಳು “ಕೇತಕೀವನ” ಎಂಬ ಕವನಸಂಗ್ರಹದಲ್ಲಿ ಬಂದಿವೆ: ತಾಜ್‌ಮಹಲ್, ಒಲವೆಂದರೆ ಮುಂತಾ ದುವು. 1924ರ ಏಪ್ರಿಲ್ ತಿಂಗಳಿನಲ್ಲಿ ಬೆಂಗಳೂರಿನ ಕರ್ನಾಟಕ ಸಂಘ ಪ್ರಕಟಿಸಿದ ‘ನಿವೇದನ’ ಎಂಬ ಕವನ ಸಂಗ್ರಹದ ‘ನಿವೇದನ’ ಪದ್ಯ ಅವರ ಮನಸ್ಸಿನ ಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ.

ಎನ್ನ ಮನೆಯೊಳೆಸೆದ ಬೆಳಕೆ
ಎನ್ನ ಬದುಕಿನೊಂದು ಸಿರಿಯೆ
ನಿನ್ನನಿನಿಸು ಹರುಷಗೊಳಿಸೆ
ಬರೆದ ಬರಹವ।
ಇನ್ನದೆಂತು ನೋಡಿ ನಗುತ
ಲೊರೆವೆ ಸರಸವ॥

ಕಿರಿಯ ಮಕ್ಕಳಳುವ ದನಿಗೆ
ಪಿರಿಯರಿಡುವ ಕಣ್ಣಪನಿಗೆ
ಕರಗದೆದೆಯ ಬಿದಿಯು ಬಣಗು
ಕವಿತೆಗೊಲಿವನೇಂ ।
ಮರುಳು ನುಡಿಯನಿದನು ನಿನ್ನ
ಕಿವಿಯೊಳುಲಿವನೇಂ

ಇರಲಿ ;— ಜಗದಿ ಜನರು ಕಣ್ಗೆ
ದೊರೆಯದೊಂದ ನೆನೆದು ಕುಸುಮ
ವಿರಿಸಿ ಪೂಜೆ ಗೈದೆವೆಂದು
ನಲವ ತಾಳ್ವವೊಲ್ ।
ಕೊರಗಿ ನಿನ್ನ ನೆನಪಿಗಿದನು
ಸಲಿಪೆನಳ್ತಿಯೊಳ್

ನೆನಪು ನಿನ್ನ ಬಾಳ್ಕೆಯಮಲ
ಗುಣದ ಸೊಬಗ ಪಡೆಯಲಾಗ
ಮಣಿಯು ಮಿಸುನಿಯೊಡನೆ ಕೂಡಿ
ಮಿರುಗುವಂದವು ।
ವನದಿ ಸುರಭಿ ಕಲರವಂಗ
ಳಿರುವ ಚೆಂದವು

ದೈವಕೃತಿಯ ಸೊಬಗ ಸರಸ
ಭಾವತತಿಯ ಸೊಬಗ ಸುಜನ
ಜೀವ ಕಥೆಯ ಸೊಬಗ ಬರಿಯ
ಕನಸದೆಂಬರೇಂ ।
ಜೀವ ಮನದ ಸೊಬಗಿನೊಂದು
ನೆನಪೆ ತಣಿಸದೇಂ

ಆ ಜೀವಕ್ಕೆ ತಣಿವು ಬರಲೇ ಇಲ್ಲ.

"ಹೃದಯವನ್ನು ಶ್ಮಶಾನ ಮಾಡಿ ರಾಗ ದ್ವೇಷಗಳ ಮೂಲವನ್ನು ಸುಟ್ಟು ಬೂದಿಮಾಡುವುದೆ? ಅಥವಾ ಸುಟ್ಟುಹೋದದ್ದನ್ನು ಕಿತ್ತು ಕಳೆದು

ಅಲ್ಲಿ ಬೇರೆ ಸಸಿಗಳನ್ನು ನೆಡುವುದೆ? ವಿರಕ್ತಿಯೇ, ಸರಸತೆಯೆ? ಯಾವುದು ಸರಿಯಾದ ದಾರಿ?” ಈ ಪ್ರಶ್ನೆ ಅವರನ್ನು ಕಾಡಿತು.

ಡಿ ವಿ ಜಿ ಯವರ ತಾಯಿ ಅವರು ಇನ್ನೊಂದು ಮದುವೆ ಮಾಡಿಕೊಳ್ಳಬಹುದೆಂಬ ಸಲಹೆ ಮಾಡಿದರಂತೆ. ಅದಕ್ಕೆ ಡಿ ವಿ ಜಿ: “ಗಂಡನನ್ನು ಕಳೆದುಕೊಂಡು ತಂಗಿಯೊಬ್ಬಳು ಮನೆಯಲ್ಲಿದ್ದಾಳೆ. ಅವಳಿಗೆ ಎರಡನೆಯ ಮದುವೆ ಮಾಡೋಣ ಎಂದು ನಿಮಗೆ ತೋಚಲಿಲ್ಲ. ದಿಕ್ಕಿಲ್ಲದ ಮಗಳ ವಿಷಯಕ್ಕೆ ಇಲ್ಲದ ಕನಿಕರ ಮಗನ ವಿಷಯಕ್ಕೆ ಏನು ಬಂತು? ಹೆಣ್ಣು ಒಂಟಿಯಾಗಿ ಬಾಳಬಹುದಂತೆ, ಗಂಡು ಒಂಟಿಯಾಗಿ ಬಾಳಲಾಗದೆ?” ಎಂದು ಹೇಳಿ ಮಾತನ್ನು ನಿಲ್ಲಿಸಿದರು.

ಆ ಸಮಯದಲ್ಲಿ ಡಿ ವಿ ಜಿ ಯವರಿಗೆ ಸಮಾಧಾನ ಹೇಳಿ ಬಂದ ಪತ್ರಗಳು ಹಲವಾರು. ಅದರಲ್ಲಿ ಒಂದು ವಿ.ಎಸ್. ಶ್ರೀನಿವಾಸಶಾಸ್ತ್ರಿಗಳಿಂದ ಬಂದದ್ದು:

"Some griefs never lose their edge. Widowhood at your age with duties requiring mortgage of the whole future must be a heavy burden to any. Rather given to brooding myself I have no right to warn you against the habit. Perhaps if you request some friends not to mind thoughtless repulses but keep coming and engaging your interests on matters of public concern you will be protected from chronic melancholy. Work and even duty are apt to look like treason to the departed. But in truth refusal to be comforted is a form of self-indulgence to be guarded against, because it is directed towards a beloved memory.

Remember me always with love and be sure of mine".

ಈ ಸಾಂತ್ವನ ಅವರ ಮನಮುಟ್ಟಿರಬೇಕು. ಅವರ ಜೀವದ ಒಳಗಡೆ ಆ ಪ್ರಿಯ ಜೀವನದ ನೆನಪು ಅಳಿಸಿ ಹೋಗದಿದ್ದರೂ, ಅವರು ಇನ್ನೂ ಹೆಚ್ಚು ಕೆಲಸಗಳನ್ನು ಕೈಗೊಂಡರು.

ಆ ದಿನಗಳಲ್ಲಿ ಅವರಿಗೆ ಸಮಾಧಾನವನ್ನು ಕೊಟ್ಟವರು ಅವರ ತಮ್ಮ ಶೇಷಗಿರಿರಾಯರು ಮತ್ತು ಅವರ ಮಡದಿ ಕಮಲಮ್ಮನವರು. ಮಕ್ಕಳನ್ನು ನೋಡಿಕೊಂಡವರು ತಂಗಿ ಲಕ್ಷ್ಮೀದೇವಮ್ಮ ಮತ್ತು ಷಡ್ಡಕಂದಿರ ಮಗಳು

ಕುಟ್ಟ್ಯಮ್ಮ. ಈ ಉಪಕಾರವನ್ನು ಜ್ಞಾಪಿಸಿಕೊಂಡೇ ಡಿ ವಿ ಜಿ ಯವರು ತಮ್ಮ "ಶ್ರೀಮದ್ಭಗವದ್ಗೀತಾ ತಾತ್ಪರ್ಯ ಅಥವಾ ಜೀವನಧರ್ಮಯೋಗ" ಗ್ರಂಥವನ್ನು ಲಕ್ಷ್ಮೀದೇವಮ್ಮ ಮತ್ತು ಕುಟ್ಟ್ಯಮ್ಮನವರಿಗೆ ಕೃತಜ್ಞತೆಯಿಂದ ಅರ್ಪಿಸಿರುವುದು.

ಕೆಳೆಯಾಸರೆ

ಬಿದಿಯೇಂ ಗೆಯ್ದೊಡೆಯುಂ ನಾ ।
ನದಿರದೆ ನಿಲಲಾಯ್ತು ನಿಮ್ಮ ಕೆಳೆಯಾಸರೆಯಿಂ ॥
ಬದುಕನವನೊಡೆದೊಡೇನೆ ।
ನ್ನೆದೆಯಿನವಂ ಕೀಳಲಳವೆ ನಿಮ್ದೆಸೆನೆಳಲಂ ॥

ವಿಧಿ ಡಿ ವಿ ಜಿ ಯವರ ಬಾಳನ್ನು ಒಡೆಯಲು ಪ್ರಯತ್ನಿಸಿದರೂ ಆ ಪ್ರಯತ್ನವನ್ನು ಆಗಮಾಡಿಸದೆ ಅವರ ಜೀವನ ಸಾರ್ಥಕವಾಗುವಂತೆ ಅವರಿಗೆ ಒತ್ತಾಸೆಯಾಗಿ ನಿಂತವರು ಅವರ ಸ್ನೇಹಿತರು. ಡಿ ವಿ ಜಿ ಯವರ ಜೀವನದಲ್ಲಿ ಸ್ನೇಹಕ್ಕೆ ಬಹು ಮುಖ್ಯವಾದ ಸ್ಥಾನವಿದೆ. ಅಧಿಕಾರದಲ್ಲಿಲ್ಲದ, ಐಶ್ವರ್ಯವಂತನಲ್ಲದ ಇವರನ್ನು ಅರಸಿಬಂದವರು ಹಲವರು; ಇವರು ಅರಸಿ ಹೋದಾಗ ಇವರ ಸ್ನೇಹವನ್ನು ಒಪ್ಪಿಕೊಂಡವರು ಇನ್ನೂ ಅನೇಕರು. ಎಲ್ಲವೂ ಅವ್ಯಾಜ ಸ್ನೇಹಕ್ಕೆ ಉದಾಹರಣೆಗಳೇ.

ಯಾವ ವಿದ್ಯಾರಣ್ಯ ಸ್ವಾಮಿಗಳನ್ನು ಡಿ ವಿ ಜಿ ಯವರು ಗುರುಗಳೆಂದು ಅಂಗೀಕರಿಸಿದ್ದರೋ, ಆ ಮಹಾಪುರುಷರ ಮುಖ್ಯ ಗುರುಗಳಾಗಿದ್ದ ವಿದ್ಯಾತೀರ್ಥರನ್ನು ಪರಂಜ್ಯೋತಿ ಸ್ವರೂಪರೆಂದು ಸ್ತುತಿಸುವುದಲ್ಲದೆ, ಅವರೊಡನೆ ಬೆಳೆದ ಸ್ನೇಹಕ್ಕೆ ಎಂದೂ ಚ್ಯುತಿಯುಂಟಾಗದೆಂಬ ಭಾವಗರ್ಭಿತವಾದ ಮಾತನ್ನು 1346ನೇ ವರ್ಷದ ಶಾಸನವೊಂದರ ಪೀಠಿಕಾಪದ್ಯವು ತಿಳಿಸುತ್ತದೆ:

ವಿದ್ಯಾ ತೀರ್ಥಾಯ ಗುರವೇ ಪರಸ್ಮೈ ತೇಜಸೇ ನಮಃ ।
ಯಸ್ಯ ನಾಂಗೀಕೃತಃ ಸ್ನೇಹ ದಶಾಹಾನಿಃ ಕದಾಜನ ॥

—ಈ ಆದರ್ಶವನ್ನು ಪಾಲಿಸಿಕೊಂಡು ಬಂದವರು ಡಿ ವಿ ಜಿ.

ಅವರ ಪರಿಚಯಸ್ಥರು ಸಮಾಜದ ಎಲ್ಲ ವರ್ಗಗಳಲ್ಲೂ ಇದ್ದರು. ಅವರ ಒಂದು ಚಿತ್ರ 'ಜ್ಞಾಪಕಚಿತ್ರಶಾಲೆ'ಯ ಎಂಟು ಸಂಪುಟಗಳಲ್ಲಿ ಸಿಗುತ್ತದೆ.

ಡಿ ವಿ ಜಿ ಯವರ ಜೀವನದಲ್ಲಿ ಅವರ ಗ್ರಂಥಾವಲೋಕನ, ಸಾರ್ವಜನಿಕ ಜೀವನ ಹೇಗೆ ಅವರ ಜೀವದ ಮೇಲೆ ಪ್ರಭಾವ ಬೀರಿತೋ ಅದರಷ್ಟೇ ಅಥವಾ ಅದಕ್ಕಿಂತ ಸ್ವಲ್ಪ ಹೆಚ್ಚಾಗಿ ಅವರ ಸ್ನೇಹಿತರಿಂದ ಆದ ಪ್ರಭಾವ. ಅವರ ಸ್ನೇಹ

ವಲಯುಗಳು ಅನೇಕ. ವೈದಿಕರ ಸ್ನೇಹವಲಯ, ಸಾಹಿತ್ಯಪರಿಷತ್ತು, ಕರ್ನಾಟಕ ಸಂಘ ಇವುಗಳಲ್ಲಿದ್ದ ಸ್ನೇಹಿತರು, ಸರಕಾರಕ್ಕೆ ಸಂಬಂಧಪಟ್ಟವರು, ವೃತ್ತಪತ್ರಿಕೆಗೆ ಸಂಬಂಧಪಟ್ಟವರು, ಕಲಾವಿದರು ಮತ್ತು ಮೈಸೂರು ದೇಶದವರು ಮತ್ತು ಆಚಿನವರು. ಇಲ್ಲಿ ಕೇವಲ ಅವರ ಪರಿಚಯಸ್ಥರನ್ನು ಕುರಿತಲ್ಲ ಹೇಳುತ್ತಿರುವುದು; ಅವರಿಗೆ ತೀರ ಹತ್ತಿರವಾಗಿದ್ದ, ಅವರ ಅಂತರಂಗವನ್ನು ರೂಪಿಸಿದ ಸ್ನೇಹಿತರನ್ನು ಕುರಿತು. ಅವರೆಲ್ಲರನ್ನೂ ಕುರಿತು ಡಿ ವಿ ಜಿ ಯುವರು ಜ್ಞಾಪಕಚಿತ್ರಶಾಲಿಯಲ್ಲಿ ಬರೆದಿಲ್ಲ. ಮೋಕ್ಷಗುಂಡಂ ಕೃಷ್ಣಮೂರ್ತಿ, ವಾಜಪೇಯಂ ವೆಂಕಟಸುಬ್ಬಯ್ಯ, ಬೇಲೂರು ಶ್ರೀನಿವಾಸ ಅಯ್ಯಂಗಾರ್, ಎಸ್.ಜಿ. ಶಾಸ್ತ್ರಿ, ಬಿ.ಕೆ. ನಾರಾಯಣ ರಾವ್, ಬಂಧುಗಳಾದ ಸುಬ್ಬರಾಯರು ಇವರುಗಳ ಹೆಸರು ಅಲ್ಲಲ್ಲಿ ಬಂದರೂ ಅವರುಗಳನ್ನು ಕುರಿತು ಅವರು ಬರೆದೇ ಇಲ್ಲ. ಅವರ ಮೇಲೆ ಪ್ರಭಾವ ಬೀರಿದ, ಅವರ ಜೀವದ ಅಂತರ್ದ್ರವ್ಯರಾದ ಸ್ನೇಹಿತರನ್ನು ಕುರಿತು ಹೇಳದಿದ್ದರೆ ಡಿ ವಿ ಜಿ ಯುವರನ್ನು ಕುರಿತ ಬರವಣಿಗೆ ಸಂಪೂರ್ಣವಾಗಲಾರದು.

ಅದರಲ್ಲಿ ಇವರು ಪ್ರತ್ಯಕ್ಷವಾಗಿ ಕಾಣದಿದ್ದರೂ ಇವರ ಅಂತರಂಗದ ಬೆಳವಣಿಗೆಗೆ ಕಾರಣವಾಗಿದ್ದ ಮಾರ್ಲೆ ಮಹಾಶಯನನ್ನು ಕುರಿತು ಮೊದಲು ಹೇಳಬೇಕು.

ಸೆಪ್ಟೆಂಬರ್ 1923ರಲ್ಲಿ ಆತನು ಕಾಲವಶನಾದಾಗ ಅವರು ಮಿರ್ಜಾ ಸಾಹೇಬರಿಗೆ ಬರೆದ ಕಾಗದ ಇದು :

"I should have stopped here. But the news of Lord Morley's death has just been communicated to me and I must tell you, in order to relieve my heart, what a great personal sorrow it is to me. He was really my Guru. I owe him more than to any other great man, Indian or foreign. For years now, there has never been a day on which I did not read some page of his, or at least recall to mind some pregnant phrase or remark of his. He was the last great representative of a great age. Do you know, he wrote a most powerful article protesting against the annexation of Mysore before 1880 in the "Fortnightly Review"? I have often wished I had the money to reprint it in a neat style and send a copy to him as a tribute and a souvenir with the signatures of a

hundred prominent citizens of Mysore. Poverty stood in the way and in the meantime the great friend and teacher has gone and no more can I have the pleasure of doing anything that will please him here before my eyes".

ಈ ಪತ್ರ ಮಾರ್ಲೆಯವರನ್ನು ಡಿ ವಿ ಜಿ ಯವರು ಯಾವ ಪೂಜ್ಯ ಸ್ಥಾನ ದಲ್ಲಿರಿಸಿದ್ದರು ಎಂದು ತೋರಿಸುತ್ತದೆ.

ಅವರು ಕಂಡಿದ್ದ ಮತ್ತು ಗುರು ಸ್ಥಾನದಲ್ಲಿರಿಸಿಕೊಂಡಿದ್ದ ಮತ್ತೊಬ್ಬ ಮಹನೀಯರು ಶೃಂಗೇರಿಯ ಶ್ರೀ ಸಚ್ಚಿದಾನಂದ ಶಿವಾಭಿನವನೃಸಿಂಹ ಭಾರತೀ ಸ್ವಾಮಿಗಳವರು. ಅವರು 1907 ರಲ್ಲಿ ಕಾಲಟಿಗೆ ಹೋಗುವ ಮಾರ್ಗದಲ್ಲಿ ಬೆಂಗಳೂರಿಗೆ ಬಂದಿದ್ದಾಗ ಡಿ ವಿ ಜಿ ಯವರು ಕೆಲವು ಸಂಸ್ಕೃತ ಶ್ಲೋಕ ಗಳನ್ನು ರಚಿಸಿದ್ದರು. ಅವರ ವಿದ್ವತ್ತು, ತಪಸ್ಸು, ಜೀವ ಕಾರುಣ್ಯವೂ ಡಿ ವಿ ಜಿ ಯವರ ಮನಸೆಳೆದವು. ಅವರನ್ನು ಕುರಿತು ಕರ್ನಾಟಕ ಪ್ರಕಟ ನಾಲಯ ಒಂದು ಪುಟ್ಟ ಪುಸ್ತಕವನ್ನು ಪ್ರಕಟಿಸಿದೆ. ಅವರನ್ನು ಕುರಿತು ಡಿ ವಿ ಜಿ ಯವರು ಮಾಡಿರುವ ಒಂದು ಉಪನ್ಯಾಸ ಈಚೆಗೆ ಪ್ರಕಟವಾಗಿರುವ "ಧೀಮಂತ"ದಲ್ಲಿ ಬಂದಿದೆ. ಆ ಬ್ರಹ್ಮವೇತ್ತರ ನೆನಪು ಡಿ ವಿ ಜಿ ಯವರ ಅಂತರಂಗವನ್ನು ಶ್ರೀಮಂತವನ್ನಾಗಿ ಮಾಡಿತ್ತು.

ಹಾಗೆಯೇ ಅವರು ಪೂಜ್ಯಭಾವದಿಂದ ಕಾಣುತ್ತಿದ್ದ ಹಾನಗಲ್ ವಿರೂ ಪಾಕ್ಷಶಾಸ್ತ್ರಿಗಳನ್ನೂ ಪ್ರೊಫೆಸರ್ ಹಿರಿಯಣ್ಣನವರನ್ನೂ ಇಲ್ಲಿ ನೆನೆಸಿಕೊಳ್ಳ ಬೇಕು. ಶಾಸ್ತ್ರಿಗಳವರ ವಿದ್ವತ್ತು, ಮಾನವೀಯತೆ, ಪ್ರಾಮಾಣಿಕತೆ ಡಿ ವಿ ಜಿ ಯವರ ಮೆಚ್ಚಿಕೆಗೆ ಪಾತ್ರವಾಯಿತು. "ಹಿರಿಯಣ್ಣನವರ ಗುಣವಿಶೇಷವನ್ನು ತಿಳಿಸುವುದಕ್ಕಾಗಿ ಮೂರು ಪದಗಳನ್ನು ಆರಿಸಿಟ್ಟುಕೊಂಡಿದ್ದೇನೆ—(೧) ಅವರು ಪ್ರಾಮಾಣಿಕರು, (೨) ಅವರು ಪರಿಶುದ್ಧರು, (೩) ಅವರು ಉಪಶಾಂತರು.... ಅವರು ಸತ್ಯದ ವಿನಾ ಯಾವ ವಿಧವಾದ ಆಕಾಂಕ್ಷೆಯನ್ನೂ ಮನಸ್ಸಿನಲ್ಲಿಟ್ಟು ಕೊಂಡುನಡೆದವರಲ್ಲ. ಅವರು ಸತ್ಯ ನುಡಿಯುವುದರಲ್ಲಿ ನಿಷ್ಠುರ ಮಾಡಿದವ ರಲ್ಲ. ಯಾವ ಸಮಯದಲ್ಲಿಯೂ ಗಂಟಲನ್ನು ದೊಡ್ಡದು ಮಾಡಿದವರಲ್ಲ." ಎಂದಿದ್ದಾರೆ ಡಿ ವಿ ಜಿ.

ಅವರ ಸ್ನೇಹಿತರಲ್ಲಿ ತುಂಬ ಹಳಬರು, ಮತ್ತು ಬಹಳ ಹಿಂದೆಯೇ ಕಣ್ಮರೆಯಾದವರು ಎಂ. ಜಿ. ವರದಾಚಾರ್ಯರು. ಅವರು "ನಮ್ಮನ್ನು ಬಿಟ್ಟು ಹೋಗಿ (1918–19) ಇಂದಿಗೆ 34 ವರ್ಷಗಳಾಗಿವೆ. ಅವರೂ ಅವರ ಹೆಸರು

ಜ್ಞಾಪಕಕ್ಕೆ ಬಂದೊಡನೆ ಗಂಟಲು ಕಟ್ಟುತ್ತದೆ; ಉಸಿರು ಭಾರವಾಗುತ್ತದೆ, ಕಣ್ಣಿನಲ್ಲಿ ಹನಿಗೂಡುತ್ತದೆ. ಅಂಥ ರಸಪ್ರೂರ್ಣ ವ್ಯಕ್ತಿ ಆತ" ಎಂದು ಡಿ ವಿ ಜಿ ಹೇಳುತ್ತಾರೆ.

ಆತನ ವಾಗ್ಮಿತೆ, ಸಾಹಿತ್ಯ ರಸಿಕತೆ, ಸಾರ್ವಜನಿಕ ವಿಚಾರಾಸಕ್ತಿ, ಹಾಸ್ಯ, ಭೂತದಯೆ, ಜೀವ ಕಾರುಣ್ಯ, ಜೀವನದಲ್ಲಿ ಉತ್ಸಾಹ, ಅದಕ್ಕೆ ತಳಹದಿಯಾಗಿದ್ದ ವಿವೇಕಾನಂದರನ್ನು ಕುರಿತ ಭಕ್ತಿ, ಸಂಗೀತ ನಾಟಕಗಳಲ್ಲಿ ಆಸಕ್ತಿ —ಇವೆಲ್ಲ ಡಿ ವಿ ಜಿ ಯವರಿಗೆ ಪ್ರಿಯವಾಯಿತು. "ದುಃಖವು ಪ್ರೀತಿಗೆ ವಿಧಿಯು ಕೊಡುವ ಪ್ರತಿಧ್ವನಿ. ಅಂಥ ಪ್ರೀತಿಯನ್ನು ಸಂಪಾದಿಸಿಕೊಳ್ಳ ಬಲ್ಲುದಾಗಿದ್ದದ್ದು ಅವರ ಜೀವನ. ದುಃಖದ ಗರ್ಭದೊಳಗೆ ಅಡಗಿರುವ ಆ ಜೀವನ ಸ್ಮೃತಿ ನಮಗೆ ಪ್ರಿಯವೂ ಪವಿತ್ರವೂ ಆಗುತ್ತದೆ" ಎಂದು ನೆನೆಸಿಕೊಳ್ಳುತ್ತಾರೆ ಡಿ ವಿ ಜಿ.

ಆತ ಕಣ್ಮರೆಯಾದಾಗ 'ಕರ್ಣಾಟಕ' ಪತ್ರಿಕೆಯಲ್ಲಿ ಬರೆದ ಸಂಪಾದಕೀಯ ಲೇಖನದಲ್ಲಿ ಡಿ ವಿ ಜಿ ಯವರು, His whole outlook and talk was so suffused with a fine idealism, with a keen sense of all that is beautiful in art and literature and all that is grand and lovely in nature—ಎಂದು ಕೊಂಡಾಡಿದ್ದಾರೆ.

ಡಿ ವಿ ಜಿ ಯವರ ಜೀವನವನ್ನು ರೂಪಿಸುವುದರಲ್ಲಿ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ಪ್ರಭಾವ ತುಂಬ ಹೆಚ್ಚಾದದ್ದು. ಸಾರ್ವಜನಿಕ ಜೀವನಕ್ಕೆ ಕಾಲಿಟ್ಟ ತರುಣದಲ್ಲಿ ಡಿ ವಿ ಜಿ ಯವರಿಗೆ ವಿಶ್ವೇಶ್ವರಯ್ಯನವರ ಪರಿಚಯ ಹೇಗೆ ಆಯಿತೆಂಬುದನ್ನು ನೋಡಿದ್ದೇವೆ. ಅವರ ಆಡಳಿತ ಒಂದು ಹೊಸ ಬಗೆಯದಾಗಿದ್ದಿತು. ಅದರ ಅನೇಕ ವಿವರಗಳನ್ನು ಕಾಣುವ, ಅವರ ಆಡಳಿತದಲ್ಲಿ ಪಾಲುಗೊಳ್ಳುವ, ಅದನ್ನು ವಿಮರ್ಶಿಸುವ ಅವಕಾಶ ಡಿ ವಿ ಜಿ ಯವರಿಗೆ ಸಿಕ್ಕಿತು. ಇವರು ಮಾಡಿದ ವಿಮರ್ಶೆ ಎಷ್ಟೋಸಲ ವಿಶ್ವೇಶ್ವರಯ್ಯನವರ ಅಸಮಾಧಾನಕ್ಕೆ ಕಾರಣವಾದರೂ, ಅವರು ಈ ತರುಣ ಪತ್ರಕರ್ತನ ಸ್ವಾತಂತ್ರ್ಯಕ್ಕೆ ಭಂಗತರಲಿಲ್ಲ. ಅದೂ ಅಲ್ಲದೆ ಆತನೊಡನೆ ಎಲ್ಲ ವಿಷಯಗಳನ್ನೂ ಚರ್ಚಿಸುತ್ತಿದ್ದರು. ಅವರನ್ನು ಡಿ ವಿ ಜಿ ಹೇಗೆ ಕಂಡರು ?

"ವಿಶ್ವೇಶ್ವರಯ್ಯನವರ ವಿಷಯದಲ್ಲಿ ನನಗಿರುವ ಭಾವನೆಯನ್ನು ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಅವರು ಮಹರ್ಷಿಕಲ್ಪರು, ಪರಮಪರಿಶುದ್ಧರು, ಸತ್ತ್ವೋನ್ನತರು, ನಿಃಸ್ವಾರ್ಥವಾದ ಜನಪ್ರೀತಿಯ ಮೂರ್ತಸ್ವರೂಪರು"

"ವಿದ್ಯೆ, ವಿಜ್ಞಾನ, ನೀತಿ, ಕಾರ್ಯವಂತಿಕೆ—ಇವು ವಿಶ್ವೇಶ್ವರಯ್ಯನವರ ದೃಷ್ಟಿಯಲ್ಲಿ ಅತ್ಯಂತ ಮುಖ್ಯಗುಣಗಳಾದುವು. ದೇಶದಲ್ಲಿ ಯಾವ ಪ್ರಯತ್ನ ವನ್ನಾರಂಭಿಸಿದರೂ ಯಾವ ಪಾಂಡಿತ್ಯವನ್ನು ಬೆಳೆಸಿದರೂ ಅದಕ್ಕೆ ಬೆಲೆ ಗೊತ್ತುಮಾಡುವುದು ಆಯಾ ಪ್ರಯತ್ನದ ಸದ್ಯಃಪ್ರಪಂಚ ಪ್ರಯುಕ್ತತೆ. ನಮ್ಮ ದೇಶ ವಿದೇಶಗಳ ಶಕ್ತಿಗಳು ಹೆಜ್ಜೆ ಹೆಜ್ಜೆಗೂ ಕೇಂದ್ರೀಕೃತವಾಗಿ ಕೆಲಸ ಮಾಡುತ್ತಿರುವ ಇಂದಿನ ಪ್ರಪಂಚದಲ್ಲಿ ಯಾವುದು ಉಪಯುಕ್ತ? ಯಾವುದು ಜೀವನದ ಮಟ್ಟವನ್ನು ಮೇಲಕ್ಕೆತ್ತಬಲ್ಲದು? ಇದೇ ಅವರ ಸಂತತವಾದ ಯೋಚನೆ."

"ವಿಶ್ವೇಶ್ವರಯ್ಯನವರು ಎಷ್ಟೋಸಲ ನನ್ನನ್ನು 'ನೀನು ಓದುವ ಅಭ್ಯಾಸ ವನ್ನು ಇಟ್ಟುಕೊಂಡಿದ್ದೀಯಾ? ಈಗ ನೀನು ಏನು ಓದುತ್ತಿದ್ದೀ?' ಎಂದು ಕೇಳುತ್ತಿದ್ದರು. 'ಪ್ರತಿದಿನವೂ ಮನುಷ್ಯನು ಬೆಳಗ್ಗೆಯೋ ಸಂಜೆಯೋ ಒಂದರ್ಧ ಘಂಟೆಯು ಹೊತ್ತಾದರೂ ಜೀವೋತ್ಕರ್ಷಕ್ಕೆ ಸ್ಫೂರ್ತಿಕೊಡುವ (inspiring) ಸದ್ಗ್ರಂಥವನ್ನು ಓದಬೇಕು. ಸದ್ಗ್ರಂಥದ ಅವಲೋಕನದ ಅಭ್ಯಾಸವಿಲ್ಲದಿದ್ದರೆ ಬಾಳು ಗುರಿತಪ್ಪೀತು' ಎಂದು ಎಚ್ಚರಿಸುತ್ತಿದ್ದರು".

ತಮ್ಮ ಪ್ರೀತಿಪಾತ್ರನಾದ ಹುಡುಗನೊಬ್ಬನನ್ನು ನಡಸಿಕೊಂಡಂತೆ ಅವರು ಡಿ ವಿ ಜಿ ಯವರನ್ನು ನಡಸಿಕೊಂಡರು. ಇವರ ಬಡತನವನ್ನು ಕಂಡು ಇವರಿಗೆ ಯಾವುದಾದರೊಂದು ಚಾಕರಿಯನ್ನೂ ಹುಡುಕುವ ಪ್ರಯತ್ನ ಮಾಡಿದರು. ಇವರು ಒಲ್ಲೆ ಎಂದರು. ಇವರಿಂದ ಕೆಲಸ ಮಾಡಿಸಿಕೊಂಡಾಗ ಅದಕ್ಕೆ ಸಂಭಾವನೆ ಕೊಟ್ಟರು. ಅವರು ಕೊಟ್ಟ ಚೆಕ್ಕುಗಳನ್ನು ಇವರು ಬ್ಯಾಂಕಿಗೆ ಕಳುಹಿಸದೆ ಹಾಗೆಯೇ ಇರಿಸಿಕೊಂಡರು.

ಅವರ ದೊಡ್ಡಮನುಷ್ಯತನವನ್ನು ಕಂಡು "ಅದ್ಭುತರಸ"ವನ್ನು ಅನು ಭವಿಸಿದ್ದಾರೆ ಡಿ ವಿ ಜಿ ಯವರು, ಮತ್ತು ಅವರನ್ನು ತಪಸ್ವಿಗಳೆಂದು ಕರೆದಿದ್ದಾರೆ. ಅಂಥ ತಪಸ್ವಿಗಳಿಂದ, 'ಮನಸುಮು'ದ ಆದರ್ಶವನ್ನಿಟ್ಟುಕೊಂಡಿದ್ದ ಡಿ ವಿ ಜಿ ಯವರು ಹೇಗೆ ತಾನೆ ಪ್ರಭಾವಿತರಾಗದೆ ಇರುವುದು ಸಾಧ್ಯ?

ಡಿ ವಿ ಜಿ ಯವರ ಮೇಲೆ ಅತ್ಯಂತ ಪ್ರಭಾವ ಬೀರಿದ ಇನ್ನೊಬ್ಬರು ವಿ. ಎಸ್. ಶ್ರೀನಿವಾಸ ಶಾಸ್ತ್ರಿಗಳು.

ಶಾಸ್ತ್ರಿಗಳ ಪರಿಚಯದ ಪ್ರಾರಂಭವನ್ನು ಕುರಿತು ಹಿಂದೆ ಹೇಳಿದ್ದಾಗಿದೆ. ವಿಶ್ವೇಶ್ವರಯ್ಯನವರ ಪ್ರೋತ್ಸಾಹದಿಂದ ಪ್ರಾರಂಭವಾಗಿದ್ದ "ಸಿವಿಲ್ ಅಂಡ್ ಸೋಷಲ್ ಪ್ರೋಗ್ರೆಸ್ ಅಸೋಸಿಯೇಷನ್" ಎಂಬ ಸಂಸ್ಥೆಯ ಆರಂಭ

ಭಾಷಣದಲ್ಲಿ ಅವರು ಶ್ರೀಮದ್ರಾಮಾಯಣದ ಕೆಲವು ಶ್ಲೋಕಗಳನ್ನು ಉದಾಹರಿಸಿ, ಇಂಗ್ಲಿಷಿನಲ್ಲಿ ಅನುವಾದಿಸಿ, ವಿವರಿಸಿದರು. ಆ ಭಾಷಣವೇ ಡಿ ವಿ ಜಿಯವರ ಮನಸ್ಸನ್ನು ಗೆದ್ದದ್ದು. ಹೀಗೆ ಪ್ರಾರಂಭವಾದ ಸ್ನೇಹ ಎಷ್ಟರ ಮಟ್ಟಿಗೆ ಬೆಳೆಯಿತೆಂದರೆ 1923ರಲ್ಲಿ ಶಾಸ್ತ್ರಿಗಳು ತಮ್ಮ ಆರೋಗ್ಯ ಉತ್ತಮ ಗೊಳ್ಳುವುದಕ್ಕಾಗಿ ಬೆಂಗಳೂರಿನಲ್ಲಿ ಇರಬೇಕಾದದ್ದೆಂದು ಸ್ನೇಹಿತರು ಸೂಚಿಸಲು, ಡಿ ವಿ ಜಿ ಯವರು ಸಂತತವಾಗಿ ಅವರೊಡನೆ ಇರುವುದಾದರೆ ಮಾತ್ರ ತಾವು ಬೆಂಗಳೂರಿನಲ್ಲಿ ಇರಲು ಒಪ್ಪಿಕೊಳ್ಳುವುದಾಗಿ ಶಾಸ್ತ್ರಿಗಳು ಹೇಳಿದರು. ಹೀಗೆ ಸ್ನೇಹ ಇನ್ನೂ ಬೆಳೆಯಲು ಅವಕಾಶವಾಯಿತು. ಸಾಹಿತ್ಯ ದಲ್ಲಿ, ಅದರಲ್ಲೂ ಶ್ರೀಮದ್ರಾಮಾಯಣದಲ್ಲಿ, ಇಬ್ಬರಿಗೂ ಇದ್ದ ಒಲವು, ರಾಜ ಕೀಯದ ವಿಷಯದಲ್ಲಿದ್ದ ಸಮಾನ ಮನೋಧರ್ಮ, ಎಲ್ಲಕ್ಕಿಂತ ಹೆಚ್ಚಾಗಿ ಪರಸ್ಪರ ಗೌರವ ಆ ಸ್ನೇಹಕ್ಕೆ ಪೋಷಕವಾಯಿತು. ಆ ಸಮಯದಲ್ಲಿ ಮಹಾ ರಾಜರ ಸೂಚನೆಯ ಮೇರೆಗೆ ಶಾಸ್ತ್ರಿಗಳು ಸ್ನೇಹಿತರೊಡನೆ ಮೈಸೂರಿನಲ್ಲಿ ಮಹಾರಾಜರ ಅತಿಥಿಗಳಾಗಿದ್ದರು. ವೀಣೆ ಶೇಷಣ್ಣನವರ ಸಂಗೀತ, ಅರಮನೆಯ ಊಟ, ಸ್ನೇಹಿತರೊಡನೆ ಸಲ್ಲಾಪ; ಇದರ ಪರಿಣಾಮವಾಗಿ ಅವರು ರಚಿಸಿದ ಶ್ಲೋಕ ಇದು : (ಈ ಶ್ಲೋಕ ರಚಿತವಾದ ಸಂದರ್ಭವನ್ನು ಅವರು "ಹಲವರು ಸಾರ್ವಜನಿಕರು" ಗ್ರಂಥದಲ್ಲಿ ಹೃದಯಂಗಮವಾಗಿ ವಿವರಿಸಿದ್ದಾರೆ)

ಆಪಾದಮೌಳಿಪರ್ಯಂತಂ ರಾಜಸೇವಕ ಸೇವಿತಃ ।
ಗುಂಡೋ ವಿರಾಜತೇ ಹೃದ್ಯ ಶ್ರೀನಿವಾಸಕೃಪಾಬಲಾತ್ ॥

(ಶ್ರೀನಿವಾಸ ಶಾಸ್ತ್ರಿಗಳ ಕೃಪೆಯ ಬಲದಿಂದ ಕಾಲು ಮೊದಲು ತಲೆಯ ವರೆಗೂ ರಾಜಸೇವಕನಿಂದ ಸೇವಿಸಲ್ಪಟ್ಟವನು ಈ ಗುಂಡ.)

ಅದೇ ಸಂದರ್ಭದಲ್ಲಿಯೇ ಅವರು ಮೈಸೂರು ದೇಶದ ಅನೇಕ ರಮಣೀಯ ಪ್ರದೇಶಗಳಿಗೆ ಶಾಸ್ತ್ರಿಗಳವರೊಡನೆ ಹೋಗಿದ್ದದ್ದು.

1926ರಲ್ಲಿ ಶಾಸ್ತ್ರಿಗಳು ಕೊಚ್ಚಿನ್‌ನಲ್ಲಿ ಮಹಾರಾಜಾ ಕಾಲೇಜಿನಲ್ಲಿ ದೇಶೀಯ ಸಂಸ್ಥಾನಗಳನ್ನು ಕುರಿತು ಮಾತನಾಡಲು ಹೋಗಿದ್ದಾಗ ಡಿ ವಿ ಜಿ ಯವರೂ ಜೊತೆಗಿದ್ದರು. ಉಪನ್ಯಾಸಗಳ ವಿಷಯವನ್ನು ನಿಷ್ಕರ್ಷಿಸುವುದರಲ್ಲಿ ಡಿ ವಿ ಜಿ ಯವರ ಪಾತ್ರ ಹಿರಿದು.

ಶಾಸ್ತ್ರಿಗಳು ಗೋಪಾಲಕೃಷ್ಣ ಗೋಖಲೆಯವರ ಜೀವನ ಚರಿತ್ರೆಯನ್ನು ಬರೆಯಬೇಕೆಂದು ಸಂಕಲ್ಪಿಸಿಕೊಂಡಾಗ ಡಿ ವಿ ಜಿ ಯವರು ಅದಕ್ಕೆ ಬೇಕಾದ ಟಿಪ್ಪಣಿಯನ್ನು ಬರೆಯಲು ಒಪ್ಪಿಕೊಂಡಿದ್ದರು

ಡಿ ವಿ ಜಿ ಯವರ ರಾಜಕೀಯ, ದೇಶೀಯ ಸಂಸ್ಥಾನಗಳ ಸಮಸ್ಯೆಗಳಿಗೇ ನಿರಾಸಲಾಗಿದ್ದುದರಿಂದ, ಗೋಖಲೆಯವರು ದೇಶೀಯ ಸಂಸ್ಥಾನಗಳ ರಾಜಕೀಯಕ್ಕೆ ಭಾರತ ಸೇವಕ ಸಂಘದ ಸದಸ್ಯರು ಬಾಯಿ ಹಾಕತಕ್ಕದಲ್ಲವೆಂದು ನಿಷ್ಕರ್ಷೆ ಮಾಡಿಕೊಂಡಿದ್ದರಿಂದ, ಇವರಿಬ್ಬರ ರಾಜಕೀಯ ಸಂಬಂಧ ಹೆಚ್ಚು ಪರಿಣಾಮಕಾರಿಯಾಗಲಿಲ್ಲವೆಂದು ಹೇಳಬೇಕು. ಅವರನ್ನು ಕುರಿತು ಡಿ ವಿ ಜಿ ಯವರು "ಶ್ರೀನಿವಾಸ ಶಾಸ್ತ್ರಿಗಳವರಲ್ಲಿ ನನಗೆ ವೈಯಕ್ತಿಕವಾಗಿ ಇಷ್ಟ ಆಕರ್ಷಣೆ ಅವರ ಮಾನವೀಯತೆ — ತಪ್ಪು ಮಾಡಿದರೆ ಅದನ್ನು ತಿದ್ದುವ ನಯ ಒಂದುಂಟು. ಆ ನಯವನ್ನು ಕಂಡುಕೊಂಡು ನಯಮಾರ್ಗದಲ್ಲಿ ನಡೆಯುವುದು ಮಾನವ ಸಹಾನುಭೂತಿ" ಎಂದಿದ್ದಾರೆ.

"ಒಂದಾನೊಂದು ಸನ್ನಿವೇಶದಲ್ಲಿ ಮಾನವ ಗುಣಕ್ಕೆ ಸಂಬಂಧಪಟ್ಟದ್ದಾಗಿ ಜೀವಕ್ಕೆ ಉತ್ಕರ್ಷವಾಗಿರುವ ಸೂಕ್ಷ್ಮವನ್ನು ಯಾರು ಗ್ರಹಿಸಿ ಸ್ವಾನುಭವಕ್ಕೆ ತಂದುಕೊಳ್ಳುತ್ತಾರೋ ಅವರೇ ಸಹೃದಯರು ಅಥವಾ ಹೃದಯವಂತರು." ಅಂಥ ರಸಸೂಕ್ಷ್ಮಗ್ರಾಹಿ, ಸಹೃದಯರು ಶಾಸ್ತ್ರಿಗಳು ಎನ್ನುತ್ತಾರೆ ಡಿ ವಿ ಜಿ.

ಅರಮನೆಯ ಆತಿಥ್ಯವನ್ನು ಯಾವ ಮನೋಭಾವದಿಂದ ಸ್ವೀಕರಿಸತಕ್ಕದ್ದೋ ಅದೇ ಮನೋಭಾವದಿಂದಲೇ ಬಡವರ ಮನೆಯ ಆತಿಥ್ಯವನ್ನೂ ಸ್ವೀಕರಿಸತಕ್ಕದ್ದು ಎಂದು ಹೇಳಿಕೊಟ್ಟವರು ಅವರು. ಹಾಗೆಯೇ ವೈದಿಕರನ್ನು ಹೇಗೆ ಮರ್ಯಾದೆಯಿಂದ ನಡಸಿಕೊಳ್ಳತಕ್ಕದ್ದು ಎಂದು ತೋರಿಸಿದವರೂ ಅವರೇ.

"ನಮ್ಮನಮ್ಮಗೆ ರಾಜನಾದವನು ನಮ್ಮ ನಮ್ಮ ಅಂತಸ್ಸಾಕ್ಷಿ. ಆ ಸ್ವಾಮಿಗೆ ದ್ರೋಹ ಮಾಡದೆ ಇರಬೇಕು. ಅದರಿಂದ ನಮಗೇನಾದರೂ ಹಾನಿ ಬಂದರೆ ಅದನ್ನು ಅನುಭವಿಸಬೇಕು. ಆದರೆ ನೀನು ಯಾವ ಸ್ನೇಹಿತರನ್ನೂ ತೊರೆಯಬಾರದು. ರಾಜಕೀಯವಲ್ಲದೆ ಜೀವನ ಕ್ಷೇತ್ರಗಳೆಷ್ಟೋ ಇವೆ. ಸ್ನೇಹವು ಸಮಾಜ ಕ್ಷೇತ್ರಗಳಲ್ಲಿ ಕಂಪನ್ನೂ ನೆಮ್ಮದಿಯನ್ನೂ ಉಂಟುಮಾಡಬೇಕಾದದ್ದು. ಆದದ್ದರಿಂದ ವೈಯಕ್ತಿಕ ಸಂಬಂಧಗಳಲ್ಲಿ ಹಳೆಯ ಸ್ನೇಹವನ್ನು ಮರೆಯಬಾರದು. ಅದನ್ನು ಮತ್ತಷ್ಟು ಪೋಷಿಸಿ ಬಲಪಡಿಸಬೇಕು" ಎಂಬ ಅವರ ಉಪದೇಶ ಡಿ ವಿ ಜಿ ಯವರ ಮನಸ್ಸಿನಲ್ಲಿ ಊರಿಹೋಯಿತು.

"ಶಾಸ್ತ್ರಿಗಳ ಜೀವನಪ್ರಭಾವ ಒಂದು ಹೂವಿನ ಸೌರಭದಂತೆ. ಹೂವು ಕಷ್ಟದ ಕೃಷಿಯ ಫಲ. "ತೋಟಗಾರನ ಕಷ್ಟಕ್ಕೆ ಪ್ರತಿಫಲವೇನು ?" ಎಂದರೆ "ಹೂವಿನ ಅಂಗಡಿಯಲ್ಲಿ ಬರುವ ಬೆಲೆ" ಎಂದು ಹೇಳಬಹುದು. ಆದರೆ

ಉದ್ಯಾನವನದಲ್ಲಿ ಘಮಘಮಿಸುವ ತುಂಬಿದ ಹೂವು ಮಾಡಿದ ಸಾಧನೆ ಏನು? ವಾತಾವರಣವನ್ನು ರಮಣೀಯವಾಗಿಸಿದ್ದು. ದೀಪ ಸಾಧಿಸುವ ಸಾಧನೆ ಎಂಥಾದ್ದು? ಅದು ಬೆಳಕನ್ನು ಹರಡುತ್ತದೆ. ಆ ಬೆಳಕು ಎಲ್ಲರಿಗೂ ಆಗುತ್ತದೆ."

"ಶ್ರೀನಿವಾಸ ಶಾಸ್ತ್ರಿಗಳಂಥ ವಿದ್ವದ್ರಸಿಕರು ಸಾಧಿಸಬಹುದಾದದ್ದು ಅಷ್ಟು ಮಾತ್ರವೇ. ಅವರ ವಾಕ್ಯದಿಂದಲೂ ಸೌಜನ್ಯದಿಂದಲೂ ಅವರು ತಮ್ಮ ವಾತಾವರಣದಲ್ಲಿ ಒಂದು ಪರಿಮಳವನ್ನು ತುಂಬುತ್ತಾರೆ. ಪರಿಮಳ ಇರುವುದು ಕೊಂಚ ಹೊತ್ತು ಮಾತ್ರ. ಆದರೆ ಆ ಕೊಂಚ ಹೊತ್ತು ಜನಕ್ಕೆ ನಿರ್ಮಲಕಾರಿಯಾಗಿ ಉಲ್ಲಾಸಕಾರಿಯಾಗಿರುತ್ತದೆ. ಒಳ್ಳೆಯ ದೀಪಸ್ತಂಭ ಏನುಮಾಡುತ್ತದೆ? ಬೆಳಕನ್ನು ಸುತ್ತ ಹರಡಿ ಮನಸ್ಸನ್ನು ಪ್ರಸನ್ನವಾಗಿಸುತ್ತದೆ. ಕೊಳೆ ಕಶ್ಮಲಗಳು ಕಣ್ಣಿಗೆ ಕಾಣಿಸುವಂತೆ ಮಾಡಿ ನೈರ್ಮಲ್ಯವನ್ನು ಹರಡುತ್ತದೆ."

ಶ್ರೀನಿವಾಸ ಶಾಸ್ತ್ರಿಗಳಿಂದ ದೇಶಕ್ಕೆ ಆದ ಉಪಕಾರ ಅಂಥಾದ್ದು. ಡಿ ವಿ ಜಿ ಯವರ ಒಲವನ್ನು ಸಂಪಾದಿಸಿದ್ದು ಶ್ರೀನಿವಾಸ ಶಾಸ್ತ್ರಿಗಳ ಈ ಗುಣ.

"ಮನುಷ್ಯಜೀವನದಲ್ಲಿ ಎಷ್ಟೋ ಸ್ನೇಹಗಳು ಷರಟು ಕೋಟುಗಳಂತೆ ಹೊರವಸ್ತುಗಳಾಗಿ ನಮ್ಮ ಮೈಗೆ ಅಂಟಿಕೊಂಡಿರುತ್ತವೆ. ಒಂದೋ ಎರಡೋ ಸ್ನೇಹಗಳು ಮಾತ್ರ ಮೈಯ ಚರ್ಮವಾಗಿ, ಮಾಂಸ ಮೂಳೆಗಳಾಗಿ ಜೀವನದ ಆಶ್ರಯ ವಸ್ತುಗಳಾಗುತ್ತವೆ. ವೆಂಕಣ್ಣಯ್ಯ ಹಾಗೆ ನನ್ನ ಜೀವನದ ಅಂತರ್ದ್ರವ್ಯವಾದವರು; ಹೊರಗಣ ಪದಾರ್ಥವಲ್ಲ".

"ವೆಂಕಣ್ಣಯ್ಯ ದೈವಾಧೀನರಾಗಿ ಇಂದಿಗೆ ಮೂವತ್ತು ವರ್ಷಗಳಾಗಿವೆ. ಆದರೂ ನನಗೆ ಆ ದುಃಖ ಈಗಲೂ ಹೊಸದಾಗಿಯೇ ಇದೆ. ನಾನು ವಿಯೋಗ ದುಃಖಕ್ಕೆ ಒಳಗಾಗಿರುವುದು ಅಪರೂಪವೇನಲ್ಲ. ಆದರೆ ವೆಂಕಣ್ಣಯ್ಯನ ಸ್ಮೃತಿಯಿಂದ ಆಗಿರುವ ಗಾಯ ಎಂದಿಗೂ ಮಾಯಲಾರದ್ದೆಂದು ಅನ್ನಿಸುತ್ತದೆ. ಈ ವಿಶೇಷ ದುಃಖಕ್ಕೆ ಕಾರಣ ಏನಿರಬಹುದು?"

"ಪ್ರೀತಿಗೂ ದುಃಖಕ್ಕೂ ಕಾರಣಗಳನ್ನು ಹೇಳುವೆನೆಂದು ಹೊರಟರೆ ಅದು ಹೃದಯಕ್ಕೆ ಅನ್ಯಾಯ ಮಾಡಿದಂತಾದೀತು, ಪ್ರೀತಿ ಅಳತೆಗೆ ಸಿಕ್ಕುವ ವಸ್ತುವಲ್ಲ. ಕಾರಣ ಹೇಳಿದರೆ ಒಂದು ಮಿತಿಯನ್ನು ಗೊತ್ತುಮಾಡಿದಂತಾಗುತ್ತದೆ. ಆ ಕಾರಣವಿಲ್ಲದಿದ್ದರೆ ಆ ಕಾರ್ಯವಾಗಲಾರದೆಂದು ಸೂಚಿಸಿ ಪ್ರೀತಿಗೆ ಉಪಾಧಿಗಳನ್ನು ಕಲ್ಪಿಸಿದಂತೆ ಆಗುತ್ತದೆ. ಪ್ರೀತಿ ಅಂಥ ಪರಿಮಿತವಾದ ವಸ್ತುವಲ್ಲ.

ವ್ಯತಿಷಜತಿ ಪದಾರ್ಥಾನ್ ಆಂತರಃ ಕೋಽಪಿ ಹೇತುಃ ।
ನ ಖಲು ಬಹಿರುಪಾಧೀನ್ ಪ್ರೀತಯಃ ಸಂಶ್ರಯಂತೇ ॥"

ವೆಂಕಣ್ಣಯ್ಯನವರನ್ನು ಕುರಿತ ಡಿ ವಿ ಜಿ ಯವರ ಈ ಮಾತುಗಳು ವೆಂಕಣ್ಣಯ್ಯನವರನ್ನು ಕುರಿತು ಅವರಿಗಿದ್ದ ಗಾಢವಾದ ಪ್ರೀತಿಯನ್ನು ತೋರಿಸುತ್ತದೆ. ವೆಂಕಣ್ಣಯ್ಯ ಎಂಬ ಹೆಸರನ್ನು ಹೇಳಿದಾಗಲೆಲ್ಲ ಅವರ ಕಣ್ಣಲ್ಲಿ ನೀರು ತುಂಬಿ ಬರುತ್ತಿತ್ತು, ಸ್ವರ ಗದ್ಗದವಾಗುತ್ತಿತ್ತು.

ಎ. ಆರ್. ಕೃಷ್ಣಶಾಸ್ತ್ರಿಗಳು, ವೆಂಕಣ್ಣಯ್ಯ ಇಬ್ಬರೂ ಸೇರಿಯೇ ಇವರ ಬಳಿಗೆ ಮೊದಲ ಸಾರಿ ಬಂದದ್ದು. ಆದರೆ ವೆಂಕಣ್ಣಯ್ಯ ಕೃಷ್ಣಶಾಸ್ತ್ರಿಗಳಿಗಿಂತ ಹೆಚ್ಚು ಹತ್ತಿರವಾದರು.

ಅವರು ಶಂಕರಪುರದಲ್ಲಿ ಇವರ ಮನೆಯ ಹತ್ತಿರ ವಾಸವಾಗಿದ್ದರು. ಅವರ ಮನೆಯವರು ಊರಿನಲ್ಲಿ ಇಲ್ಲದಿದ್ದಾಗ ಡಿ ವಿ ಜಿ ಯವರ ಮನೆಯಲ್ಲಿ ಒಬ್ಬರಾಗಿದ್ದು ಅವರ ತಂದೆ ತಾಯಿಯರ ಪ್ರೀತಿಗೆ ಪಾತ್ರರಾಗಿದ್ದರು.

ಕೆಲವು ಕಾಲ ಮನೆಯಿಂದ ಕೆಲಸಕ್ಕೆ ಹೋಗುವಾಗಲೂ ಹಿಂತಿರುಗುವಾಗಲೂ ಜೊತೆ ಜೊತೆಯಾಗಿ ಕಾಲುನಡಿಗೆಯಲ್ಲೇ ಬರುತ್ತ ಅವರು "ಚರ್ಚಿಸದೆ ಬಿಟ್ಟ ವಿಷಯ ಸೂರ್ಯಮಂಡಲದ ಕೆಳಗಡೆ ಯಾವುದೂ ಇರಲಾರದು".

"ಸಾಮಾನ್ಯವಾಗಿ ಸಾಹಿತ್ಯದಲ್ಲಿ, ವಿಶೇಷವಾಗಿ ಕನ್ನಡ ಸಾಹಿತ್ಯದಲ್ಲಿ, ನಾನು ಕಂಡಿರುವ ಸಂತೋಷದ ಭಾಗ್ಯಕ್ಕಾಗಿ ನಾನು ವೆಂಕಣ್ಣಯ್ಯನಿಗೆ ಋಣಿಯಾಗಿದ್ದೇನೆ. ಆತನ ರಸಪರಿಪಾಕದ ತಾರತಮ್ಯವಿವೇಕ ಬಹು ಸೂಕ್ಷ್ಮವಾದದ್ದು. ಆತನ ಓದುಗಾರಿಕೆಯದೇ ಒಂದು ಸೊಗಸು. ಅದಕ್ಕಿಂತ ಮೇಲಾದದ್ದು ರಸಾಭಿಜ್ಞತೆ."

"ಬಸವನಗುಡಿಯ ನರಹರಿರಾಯರ ಗುಡ್ಡದ ಪೂರ್ವಭಾಗದ ಇಳಿಜಾರಿನಲ್ಲಿ ವೆಂಕಣ್ಣಯ್ಯ, ಶ್ರೀನಿವಾಸಮೂರ್ತಿ, ನಾನು — ಒಂದೊಂದು ವೇಳೆ ಕೃಷ್ಣಶಾಸ್ತ್ರಿ — ಸೇರಿ ಗದುಗಿನ ಭಾರತದ ಅನೇಕ ಪ್ರಕರಣಗಳನ್ನು ಓದಿದೆವು."

"ವೆಂಕಣ್ಣಯ್ಯನಿಗೆ ಪ್ರಾಚೀನ ಪ್ರಮಾಣದಲ್ಲಿ ಆಶ್ರಯ. ಸದ್ಯಃ ಪ್ರಯೋಗದಲ್ಲಿ ತಾತ್ಪರ್ಯ. ಹೇಗೆ ಪ್ರಾಚೀನ – ನವೀನಗಳೆರಡೂ ಸಮನ್ವಯವಾಗುವಂತೆ ಮಾಡಬೇಕೆಂಬುದು ವೆಂಕಣ್ಣಯ್ಯನ ಸ್ವಜ ಧೋರಣೆ."

— ಹೀಗೆ ವೆಂಕಣ್ಣಯ್ಯನವರ ಗುಣಾತಿಶಯಗಳನ್ನು ಬಹುವಾಗಿ ಮೆಚ್ಚಿಕೊಂಡಿದ್ದರು ಡಿ ವಿ ಜಿ. ಡಿ ವಿ ಜಿ ಯವರ ಮನೆಯ ದೀಪ ಆರಿಹೋದಾಗ ಜೊತೆಗಿದ್ದು ಸಹಾಯ ಮಾಡಿದವರು ವೆಂಕಣ್ಣಯ್ಯ. ಡಿ ವಿ ಜಿ ಯವರು

ವಿದ್ಯಾರಣ್ಯರನ್ನು ಕುರಿತು ಬರೆದ ತರುಣದಲ್ಲಿ ಇನ್ನೊಬ್ಬರು ವಿದ್ಯಾರಣ್ಯರನ್ನು ಕುರಿತು ಬರೆದಾಗ ಆ ಗ್ರಂಥ ಡಿ ವಿ ಜಿ ಯವರ ಗ್ರಂಥದ "ಕಾಪಿ" ಎಂದು ಆರ್ಭಟಿಸಿದರು ವೆಂಕಣ್ಣಯ್ಯ. ಕರ್ನಾಟಕ ಸಂಘದಲ್ಲಿ, ಸಾಹಿತ್ಯ ಪರಿಷತ್ತಿನಲ್ಲಿ ಜೊತೆಯಾಗಿ ಕೆಲಸಮಾಡಿದರು. ಹೀಗೆ ಡಿ ವಿ ಜಿ ಯವರ ಅಂತರಂಗ ಜೀವನಕ್ಕೆ ಪೋಷಕರಾಗಿದ್ದವರು ವೆಂಕಣ್ಣಯ್ಯನವರು.

"ನಮ್ಮ ದಿನಕ್ಕೆ ಬೇಕಾಗಿರುವಂಥ ಇಂದಿನ ಜನಜೀವನಕ್ಕೆ ಉಪಕಾರಿಯಾಗುವಂಥ ಸಾಹಿತ್ಯ ಕನ್ನಡದಲ್ಲಿ ಇನ್ನೂ ಆಗಬೇಕಾಗಿದೆ. ಇಂಗ್ಲಿಷ್ ಮೊದಲಾದ ಪ್ರಪಂಚ ಸಾಹಿತ್ಯಗಳೊಡನೆ ಸರಿತೂಗಬಲ್ಲಂಥ ಸಾಹಿತ್ಯ ಹುಟ್ಟಬೇಕಾಗಿದೆ. ಈ ನವೀನ ನಿರ್ಮಿತಿಗೆ ದಾರಿಯನ್ನು ಹುಡುಕುವುದರಲ್ಲಿ ಸಹಾಯ ಕೊಡಬಲ್ಲ ಶಕ್ತಿಯೂ ಉತ್ಸಾಹವೂ ವೆಂಕಣ್ಣಯ್ಯನಿಗಿದ್ದಷ್ಟು ಹೆಚ್ಚಾಗಿ ಇತರ ಯಾರಲ್ಲಿಯೂ ನಾನು ಕಂಡಿಲ್ಲ. ವೆಂಕಣ್ಣಯ್ಯನಿಗಿಂತ ಪಂಡಿತರಾದವರೂ ಪ್ರತಿಭಾವಂತರಾದವರೂ ಇಲ್ಲವೆಂದು ನಾನು ಹೇಳುತ್ತಿಲ್ಲ. ಆದರೆ ನಮ್ಮ ಉದ್ದೇಶಕ್ಕೆ ಬೇಕಾದದ್ದು ಪಾಂಡಿತ್ಯ ಮಾತ್ರವಲ್ಲ; ಪ್ರತಿಭೆ ಮಾತ್ರವಲ್ಲ. ಅದು ಒಂದು ವಿಶೇಷ ರೀತಿಯ ಮನೋಭಾವ. ಆ ಮನೋಭಾವದಲ್ಲಿ ಪ್ರಾಚೀನವನ್ನು ಬಿಡದ ಆಧುನಿಕತೆ ಮುಖ್ಯಾಂಶ. ಇದಕ್ಕಿಂತ ಹೆಚ್ಚಿನ ಮಾತುಗಳಿಂದ ಅದನ್ನು ವಿವರಿಸಲಾಗದು. ಈಗ ಹೊಸದಾಗಿ ಬೆಳೆಯುವುದು ಹಿಂದಿನಿಂದ ಬೆಳೆದುಕೊಂಡು ಬಂದಿರುವುದರ ಸ್ವಾಭಾವಿಕ ವಿಕಾಸವಾಗಬೇಕು. ಮರ ಪುರಾತನ, ಚಿಗುರು ನೂತನ. ಇಂಥ ಬೆಳವಣಿಗೆಯ ರೀತಿ ವೆಂಕಣ್ಣಯ್ಯನಿಗೆ ಇಷ್ಟವಾದದ್ದು.... ಪುರಾತನವಾದದ್ದರ ಮೇಲೆ ನಾವು ದುಡುಕಿ ಕೈ ಹಾಕತಕ್ಕದ್ದಲ್ಲ. ಜಾಗರೂಕತೆಯಿಂದಲೂ ಅಂತರರ್ಥಗ್ರಹಣ ಪೂರ್ವಕವಾಗಿಯೂ ಮಾಡಬೇಕಾದ ಕೆಲಸ ಇದು. ಪೂರ್ವಿಕರ ತಾತ್ಪರ್ಯವೇನೆಂಬುದನ್ನು ಬುಡಮುಟ್ಟ ತಿಳಿದುಕೊಂಡ ಹೊರತು ಪೂರ್ವಿಕರ ಸಂಸ್ಥೆಗಳಿಗೆ ನಾವು ಕೈಹಾಕುವುದು ನಮ್ಮ ಸಮಾಜಕ್ಕೂ ನಮ್ಮ ಧರ್ಮಕ್ಕೂ ಅಪಾಯಕರ ಎಂದು ವೆಂಕಣ್ಣಯ್ಯ ನಂಬಿದ್ದರು. ನವೀಕರಣವಾಗಬೇಕು; ಆದರೆ ವಿಚಾರಪೂರ್ವಕವಾಗಿ ಆಗಬೇಕು. ಇದು ಅವರ ಮನೋಗತ. ಹೀಗೆ ಸಮಾಜ–ಸಾಹಿತ್ಯ ಕ್ಷೇತ್ರಗಳೆರಡರಲ್ಲಿಯೂ ವೆಂಕಣ್ಣಯ್ಯನಂಥ ವಿಚಾರದಕ್ಷನಿಂದ, ಅಂಥ ನಿಷ್ಪಕ್ಷಪಾತಿಯಾದ ಉದಾರಿಯ ವಿಚಾರಶೀಲತೆಯಿಂದ ಆಗಬೇಕಾದ ಉಪಕಾರ ತುಂಬ ಮುಖ್ಯವಾದದ್ದು. ಅಂಥದ್ದಕ್ಕಾಗಿ ನಮ್ಮ ದೇಶ ಕಾದುಕೊಂಡಿದೆ" ಎಂದು ವೆಂಕಣ್ಣಯ್ಯನವರ ವಿಚಾರ ಶೀಲತೆಯನ್ನು ಮೆಚ್ಚಿಕೊಂಡಿದ್ದಾರೆ ಡಿ ವಿ ಜಿ.

ಮೈಸೂರು ಸಂಸ್ಥಾನದಲ್ಲಿ ದಿವಾನರಾಗಿದ್ದವರಲ್ಲಿ ಐದನೆಯ ದಿವಾನ ರಾವ ವಿ. ಪಿ. ಮಾಧವರಾಯರಿಂದ (30-6-1906) ಸರ್ ಎಂ. ಎನ್. ಕೃಷ್ಣ ರಾಯರವರೆಗೂ ಪ್ರತಿಯೊಬ್ಬರನ್ನೂ ಡಿ ವಿ ಜಿ ಯವರು ವ್ಯಕ್ತಿಶಃ ದೂರ ದಿಂದಲೋ ಹತ್ತಿರದಿಂದಲೋ ಕಂಡವರು, ಕೆಲವರ ಗೌರವ ವಿಶ್ವಾಸಗಳನ್ನು ಗಳಿಸಿಕೊಂಡವರು. ಆದರೆ ವಿಶ್ವೇಶ್ವರಯ್ಯನವರು ಆಡಳಿತ ಸೂತ್ರಗಳಲ್ಲಿ ಡಿ ವಿ ಜಿ ಯವರಿಗೆ ಕೊಟ್ಟ ತರಬೇತಿ ಸಫಲವಾದದ್ದು ಮಿರ್ಜಾ ಎಂ ಇಸ್ಮೈಯಿಲ್ ಸಾಹೇಬರು ದಿವಾನರಾದಾಗ.

"ಮೈಸೂರು ಸಂಸ್ಥಾನದ ದಿವಾನರಾಗಿ 15 ವರ್ಷಗಳ ಕಾಲ ಅಧಿಕಾರ ನಡಸಿದ ಸರ್ ಮಿರ್ಜಾರವರು 1941 ಮೇ ತಿಂಗಳಲ್ಲಿ ರಾಜೀನಾಮೆ ಇತ್ತರು. ಸರ್ ಮಿರ್ಜಾರವರು ನಿವೃತ್ತರಾದಾಗ ಸಂಸ್ಥಾನಕ್ಕೆ ಅವರು ಸಲ್ಲಿಸಿದ ಸೇವೆಯ ಬಗ್ಗೆ ಒಂದು ಪ್ರಶಂಸೆಯ ಮಾತನ್ನೂ ಯಾರೂ ಆಡಲಿಲ್ಲ. ಹಾಗೆಂದ ಮಾತ್ರಕ್ಕೆ ಮಿರ್ಜಾರವರು ಮೈಸೂರಿನ ಪ್ರಗತಿಗೆ ಏನೂ ಕೆಲಸ ಮಾಡಿರಲಿಲ್ಲ ಎಂದಲ್ಲ. ಆದರೆ ಒಟ್ಟಿನಲ್ಲಿ ಸರ್ ಮಿರ್ಜಾರವರು ತಮ್ಮ ದಬ್ಬಾಳಿಕೆಯ ನೀತಿ ಯಿಂದ ಪ್ರಜಾನುರಾಗವನ್ನು ಕಳೆದುಕೊಂಡಿದ್ದರು" ಎಂದು 'ಹೋರಾಟದ ದಿಟ್ಟ ಹೆಜ್ಜೆಗಳು' ಎಂಬ ಗ್ರಂಥದಲ್ಲಿ ಬರೆದಿದ್ದಾರೆ ಹೆಚ್. ಎಸ್. ದೊರೆಸ್ವಾಮಿಯವರು. ಅಲ್ಲಿ ಅವರು, ಮಿರ್ಜಾರವರು ಸ್ವಾತಂತ್ರ್ಯ ಚಳುವಳಿಯ ವಿಷಯದಲ್ಲಿ ಇಟ್ಟು ಕೊಂಡಿದ್ದ ಅಭಿಪ್ರಾಯವನ್ನೂ ಅವರ ದಬ್ಬಾಳಿಕೆಯ ಆಡಳಿತವನ್ನೂ ವಿವರಿಸಿ ದ್ದಾರೆ. ಪ್ರಜಾಸರಕಾರಕ್ಕಾಗಿಯೇ ತಮ್ಮ ಜೀವಮಾನವೆಲ್ಲ ಶ್ರಮಿಸಿದ ಡಿ ವಿ ಜಿ ಯವರಿಗೂ ನಿರಂಕುಶಾಧಿಕಾರದ ಸಾಕಾರಮೂರ್ತಿಯಾದ ಮಿರ್ಜಾರವರಿಗೂ ಎತ್ತಣ ಸ್ನೇಹ? ಇದೊಂದು ಸೋಜಿಗದ ಸಂಗತಿ.

ಡಿ ವಿ ಜಿ ಯವರು ಯಾವುದೋ ಒಂದು ಲಾಭಕ್ಕಾಗಿ ಅಧಿಕಾರಿಗಳನ್ನು ಅನುಸರಿಸುತ್ತಿದ್ದವರಲ್ಲ. ಮಿರ್ಜಾರವರಿಗೇ ತಮ್ಮ ನಿಲುವನ್ನು ಹೇಗೆ ಸ್ಪಷ್ಟ ಪಡಿಸಿದರು ಎಂಬುದನ್ನೂ ಹಿಂದೆಯೇ ನೋಡಿದ್ದೇವೆ. ಹೀಗಿದ್ದರೂ ಅವರಲ್ಲಿ ಬೆಳೆದ ಮೈತ್ರಿ ಅಸ್ವಾದೃಶವಾದದ್ದು. ಇದು ವಿವರಿಸಲು ಸಾಧ್ಯವಿಲ್ಲದ ಒಂದು ಸ್ನೇಹ. ಡಿ ವಿ ಜಿ ಯವರು ನಂಬಿದ್ದ "ಜನನಾಂತರ ಸೌಹೃದಾನಿ" ಎಂಬ ಕವಿವಾಕ್ಯಕ್ಕೆ ಉದಾಹರಣೆ. 'ಕರ್ನಾಟಕ' ಪತ್ರಿಕೆಯನ್ನು ಡಿ ವಿ ಜಿ ನಡಸು ತ್ತಿದ್ದಾಗ 1915 ರ ಸುಮಾರಿನಲ್ಲಿ ಅಷ್ಟು ಚೆನ್ನಾಗಿ ಬರೆಯುವ ವ್ಯಕ್ತಿಯನ್ನು ನೋಡಬೇಕೆಂಬ ಅಪೇಕ್ಷೆಯಿಂದ ಆಗ ಮಹಾರಾಜರ ಆಪ್ತ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದ ಮಿರ್ಜಾ ಅವರು ವಿಶ್ವೇಶ್ವರಯ್ಯನವರ ಮೂಲಕ ಹೇಳಿ ಕಳುಹಿಸಿ

ದರಂತೆ. ಅವರಲ್ಲಿ ತಮಗೇನೂ ಕೆಲಸವಿಲ್ಲವೆಂದು ಇವರು ಕ್ಷಮೆ ಬೇಡಿದರಂತೆ. ಕೊಂಚ ಕಾಲದ ಮೇಲೆ ಆಹ್ವಾನ ಮಿರ್ಜಾರವರ ಗುರುವಾಗಿದ್ದ ಬೆಳ್ಳಾವೆ ವೆಂಕಟನಾರಣಪ್ಪನವರ ಮೂಲಕ ಬಂದಾಗ ಇವರು ಅದಕ್ಕೆ ಒಪ್ಪಿ ಕೊಳ್ಳಲೇಬೇಕಾಯಿತು. ಮಿರ್ಜಾ ಅವರ ಮನೆಗೇ ಹೋಗಿ ಅವರನ್ನು ಕಂಡರು. "ಅಲ್ಲಿ ನಡೆದ ಭೇಟಿಯಿಂದ ನನಗೆ ತುಂಬ ಸಂತೋಷವಾಯಿತು. ಅವರ ಮಾತಿನ ಸರಳರೀತಿ, ಅದರಲ್ಲಿ ತುಂಬಿದ್ದ ಸ್ನೇಹ, ಎಷ್ಟೋ ಕಾಲದಿಂದ ಬೆಳೆದಿದ್ದದ್ದೇನೋ ಎನ್ನಿಸುವಂಥ ಸಲಿಗೆ, ಕೊಂಚ ಕೊಂಚ ಲಘುಹಾಸ್ಯ— ಇವೆಲ್ಲ ನನಗೆ ಸಂತೋಷವುಂಟುಮಾಡಿತು....ಇದಾದ ಮೇಲೆ ಮಿರ್ಜಾರವರು ನನಗೂ, ನಾನು ಅವರಿಗೂ ಹದಿನೈದಿಪ್ಪತ್ತು ದಿವಸಕ್ಕೊಮ್ಮೆ ಕಾಗದ ಬರೆ ಯುವುದು ರೂಢಿಗೆ ಬಂತು. ಆ ಕಾಗದಗಳಲ್ಲಿ ಸಾಹಿತ್ಯ, ದೇಶಚರಿತ್ರೆ, ಮತಾಚಾರ, ಚಿತ್ರಕಲೆ ಮೊದಲಾದ ವಿಷಯಗಳು ಲಘು ಲಘುವಾಗಿ ಪ್ರಸ್ತಾ ಪಕ್ಕೆ ಬರುತ್ತಿತ್ತು. ನಾನು ಮೈಸೂರಿಗೆ ಹೋದಾಗ ಕೆಲವು ವೇಳೆ ಮಿರ್ಜಾ ರವರ ಮನೆಗೆ ಹೋಗಿ ಅವರನ್ನು ಕಾಣುತ್ತಿದ್ದೆ. ಹೀಗೆ ಬೆಳೆಯಿತು ನಮ್ಮ ಮೈತ್ರಿ" ಎನ್ನುತ್ತಾರೆ ಅವರು.

ಜಂಭ ಹೇಳಿಕೊಳ್ಳುವವರಾದರೆ ಇನ್ನೂ ಹೇಳಬಹುದಿತ್ತೇನೋ. ಆದರೆ ಇನ್ನೊಬ್ಬರ ವಿಷಯವನ್ನು ಕುರಿತು, ಅವರಿಗೆ ಸಂಬಂಧಪಟ್ಟ ವಿಷಯವನ್ನು ಕುರಿತು ಪ್ರಸ್ತಾವಿಸಬಾರದೆಂಬ ನಿಯಮವನ್ನು ಡಿ ವಿ ಜಿ ವಿಶ್ವೇಶ್ವರಯ್ಯನವರಿಂದ ಕಲಿತಿದ್ದರು. ಆದ್ದರಿಂದ ಮಿರ್ಜಾಸಾಹೇಬರನ್ನು ಕುರಿತು ಬರೆಯುವಾಗ ತಮಗೆ ತಿಳಿದಿದ್ದದ್ದೆಲ್ಲವನ್ನೂ ಅವರು ಬರೆಯುವ ಗೋಜಿಗೆ ಹೋಗಿಲ್ಲ.

ಆದರೆ ಮಿರ್ಜಾಸಾಹೇಬರ ಅವಗಾಹನೆಗೆ ಬಂದ ಮೈಸೂರು ಸಂಸ್ಥಾನದ ಸರಕಾರದ ಯಾವ ವಿಚಾರವೂ, ಡಿ ವಿ ಜಿ ಯವರೊಡನೆ ಸಮಾಲೋಚನೆ ಯಾಗದೆ ತೀರ್ಮಾನವಾಗಿಲ್ಲ ಎಂದರೆ ಅತಿಶಯೋಕ್ತಿಯಲ್ಲ. ಇಲ್ಲಿ ಇಬ್ಬರ ನಿಲುವೂ ಸ್ಪಷ್ಟ: ಡಿ ವಿ ಜಿ ಯವರದು ಜವಾಬ್ದಾರಿ ಸರಕಾರಕ್ಕೆ, ಮಿರ್ಜಾ ರವರದು ನಿರಂಕುಶ ಪ್ರಭುತ್ವಕ್ಕೆ. ಈ ಚೌಕಟ್ಟಿನಲ್ಲಿ ಅವರಿಬ್ಬರಲ್ಲಿ ಚರ್ಚೆ, ಅನುಮೋದನೆ, ಭಿನ್ನಾಭಿಪ್ರಾಯ ಎಲ್ಲ ಆಗುತ್ತಿತ್ತು. ಸಾರ್ವಜನಿಕವಾಗಿ ಭಿನ್ನಾಭಿಪ್ರಾಯಗಳು ಬಂದದ್ದನ್ನು ಮುಂದೆ ನೋಡುತ್ತೇವೆ. ಆದರೆ ಇಷ್ಟೆಲ್ಲ ಆದರೂ ಆ ಮೈತ್ರಿಗೆ ಕುಂದು ಬರಲಿಲ್ಲವೆಂಬುದು ಆಶ್ಚರ್ಯಕರವಾದ ಸಂಗತಿ.

ಮಿರ್ಜಾರವರು ಡಿ ವಿ ಜಿ ಯವರಿಗೆ ಹೇಳದಿದ್ದ ಸಂಗತಿಯಿಲ್ಲ ಅವರೊಡನೆ ಚರ್ಚಿಸದ ವಿಷಯವಿರಲಿಲ್ಲ. ಆಗಾಗ ಮೈಸೂರಿನಲ್ಲೋ ದಿವಾನರಾದ

ಮೇಲೆ ಬೆಂಗಳೂರಿನ ಕಾರ್ಲ್‌ಟನ್ ಹೌಸಿನಲ್ಲೋ ಅವರು ಸಂಧಿಸುತ್ತಿದ್ದರು. ಮಿರ್ಜಾರವರ ಮಕ್ಕಳೂ ಡಿ ವಿ ಜಿ ಯವರಲ್ಲಿ ಅದೇ ವಿಧವಾದ ಗೌರವವನ್ನು ತೋರಿಸುತ್ತಿದ್ದರು. ಮಿರ್ಜಾರವರೂ ಡಿ ವಿ ಜಿ ಯವರ ಕುಟುಂಬದಲ್ಲಿ ಅದೇ ಪ್ರೀತಿ ವಾತ್ಸಲ್ಯಗಳನ್ನಿಟ್ಟಿದ್ದರು. ಜೂನ್ 1922 ರಲ್ಲಿ ಮಹಾರಾಜರು ತಮ್ಮ ವಿಶ್ವಾಸ ಸೂಚಕವಾಗಿ ಡಿ ವಿ ಜಿ ಯವರಿಗೆ ಐದು ನೂರು ರೂಪಾಯಿಗಳನ್ನು ಸಂಭಾವನೆಯನ್ನಾಗಿ ಕೊಟ್ಟರು, ಅದನ್ನು ಡಿ ವಿ ಜಿ ಸಂತೋಷದಿಂದ ಸ್ವೀಕರಿಸಿದರು. ಆದರೆ ಜೂನ್ 1926ರಲ್ಲಿ ಮಿರ್ಜಾರವರು 400 ರೂಪಾಯಿಗಳ ನೋಟುಗಳನ್ನು ಕಳುಹಿಸಿದಾಗ ಅದನ್ನು ತಾನು ತೆಗೆದುಕೊಳ್ಳತಕ್ಕದ್ದಲ್ಲವೆಂದು ನಿರ್ದಾಕ್ಷಿಣ್ಯವಾಗಿ ಹಿಂತಿರುಗಿಸಿ ಬಿಟ್ಟರು. ಹಾಗೆಯೇ ಅವರು ಕೊಟ್ಟ ಅನೇಕ ಚೆಕ್ಕುಗಳನ್ನು ಬ್ಯಾಂಕಿಗೆ ಕಳುಹಿಸಲೇ ಇಲ್ಲ.

ಅವರಲ್ಲಿ ಡಿ ವಿ ಜಿ ಮೆಚ್ಚಿಕೊಂಡಿದ್ದ ಕೆಲವು ಗುಣಗಳನ್ನು ಇಲ್ಲಿ ಹೇಳಿದರೆ ಅಪ್ರಸ್ತುತವಾಗಲಾರದು.

"ಮಿರ್ಜಾರವರು ದಿವಾನ್ ಪದವಿಯಿಂದ ನಡಸಿದ ಕಾರ್ಯಗಳ ವಿಚಾರಕ್ಕೆ ಹೋಗುವ ಮುನ್ನ ಅವರು ಇಟ್ಟುಕೊಂಡಿದ್ದ ಒಂದು ಮೂಲ ಸೂತ್ರವನ್ನು ಉದಾಹರಿಸುವುದು ಸರಿಯಾದ ಪೀಠಿಕೆ. ಮಿರ್ಜಾರವರು ಒಬ್ಬ ಪಾರಸಿ ಕವಿಯ ಒಂದು ವಾಕ್ಯವನ್ನು ಪದೇ ಪದೇ ಸ್ಮರಣೆಗೆ ತಂದುಕೊಳ್ಳುತ್ತಿದ್ದರು. ಆ ವಾಕ್ಯ ಹೀಗಿದೆ:

ನಿನ್ನ ಜನ ನಗುತಿರಲು, ನೀನಳುತ ಬಂದೆ ।
ನಿನ್ನ ಜನವಳುತಿರಲು, ನೀಂ ನಗುತ ಪೋಗು ।

ಇದರ ತಾತ್ಪರ್ಯ ಸ್ಪಷ್ಟವಾಗಿಯೇ ಇದೆ. 'ಹಾಗಾಗುವಂತೆ ಮಾಡುವುದು ನಿನ್ನ ಒಳ್ಳೆಯತನ'. ಒಳ್ಳೆಯದನ್ನು ಮಾಡಬೇಕು, ಒಳ್ಳೆಯವನಾಗಿರಬೇಕು— ಇದು ಮಿರ್ಜಾರವರು ಮನಸ್ಸಿನಿಂದ ನಂಬಿದ್ದ ತತ್ತ್ವ."

"ಮಿರ್ಜಾರವರ ಕಾಲದಲ್ಲಿ ಗಲಭೆಗಳು ಏಳದಿದ್ದರೆ ರಾಜ್ಯ ಪ್ರಗತಿ ದ್ವಿಗುಣವಾಗಿ ನಡೆಯುತ್ತಿತ್ತೆಂದು ನಾವು ಧಾರಾಳವಾಗಿ ನಂಬಬಹುದು."

"ಒಟ್ಟಿನಲ್ಲಿ ರಾಜ್ಯದ ಸೇವಕರಲ್ಲಿ ದಿನಂಪ್ರತಿ, ಅಹಶ್ಚ ರಾತ್ರಿಶ್ಚ ರಾಜ್ಯಕ್ಕಾಗಿ ದುಡಿದವರಲ್ಲಿ ದಿವಾನರೇ ಮೊದಲಿಗರು. ಅವರು ಜನವನ್ನು ನೋಡುವುದರಲ್ಲಿಯೂ ಅಹವಾಲು ಕೇಳುವುದರಲ್ಲಿಯೂ ಬೇಸರವಿಲ್ಲದವರು."

ರಾಜ್ಯಶಾಸ್ತ್ರದಲ್ಲಿ ಮಿರ್ಜಾರವರು ತಾವು ಮಹಾಪಂಡಿತರೆಂದು ತಿಳಿದುಕೊಂಡಿರಲಿಲ್ಲ. ಅವರಿಗೆ ಬೇಕಾಗಿದ್ದದ್ದು ಶಾಸ್ತ್ರವಲ್ಲ. ಕೇವಲ ತತ್ತ್ವ

(ಥಿಯೋರಿ) ಅಲ್ಲ. ಅವರಿಗೆ ಬೇಕಾಗಿದ್ದದ್ದು ಸಾಮಾನ್ಯ ಜನದ ನೆಮ್ಮದಿ. ಪುಸ್ತಕದ ವಿಚಾರವನ್ನು ಇತರರಿಗೆ ಬಿಟ್ಟಿದ್ದರು.

"ಮಿರ್ಜಾರವರು ಬ್ರಿಟಿಷ್ ಸರಕಾರಕ್ಕೆ ತಿಳಿವಳಿಕೆ ಕೊಡುವುದರಲ್ಲಿ ಧೈರ್ಯಶಾಲಿಗಳು. ಅವರು ತಮ್ಮ ಪ್ರಜಾಪ್ರತಿನಿಧಿ ಸಭೆಯ ಭಾಷಣಗಳಲ್ಲಿಯೂ ಲೆಜಿಸ್ಲೆಟಿವ್ ಸಭೆಯ ಭಾಷಣಗಳಲ್ಲಿಯೂ ಆಯಾ ಸಂದರ್ಭದಲ್ಲಿ ಸನ್ನಿಹಿತ ವಾಗಿದ್ದ ಇಂಡಿಯ ರಾಜಕೀಯ ವಿಷಯಗಳನ್ನು ಸ್ಪಷ್ಟವಾಗಿ ಪ್ರಸ್ತಾವಿಸಿ ಸಲಹೆ ನೀಡುತ್ತಿದ್ದರು. ಅವರು ಒಂದು ಕಡೆ ಮಹಾತ್ಮಗಾಂಧಿ, ಪಂಡಿತ್ ನೆಹರು, ಮುಂತಾದವರನ್ನೂ ಇನ್ನೊಂದು ಕಡೆ ವೈಸ್‌ರಾಯ್ ಅರ್ವಿನ್, ಲಾರ್ಡ್ ವೆಲಿಂಗ್‌ಡನ್, ಲಾರ್ಡ್‌ವೇವೆಲ್ ಮುಂತಾದವರನ್ನು, ಇಬ್ಬರನ್ನೂ ಗಣನೆಗೆ ತೆಗೆದುಕೊಂಡು ಅವರಿಬ್ಬರೂ ಸಹಕರಿಸುವ ಮಾರ್ಗ ಉಂಟೆಂದು ತೋರಿಸಿ ಹಿತವಚನಗಳನ್ನಾಡುತ್ತಿದ್ದರು. ಹಾಗೆ ಬ್ರಿಟಿಷ್ ಸರಕಾರಕ್ಕೆ ಎಚ್ಚರಿಕೆ ಕೊಡುವುದಕ್ಕಾಗಲಿ ಕಾಂಗ್ರೆಸಿಗೆ ಬೆಂಬಲ ಕೊಡುವುದಕ್ಕಾಗಲಿ ಮುಂದೆ ಬಂದ ದೇಶೀಯ ಸಂಸ್ಥಾನದ ದಿವಾನರು ಬೇರೆ ಒಬ್ಬರೂ ಇರಲಿಲ್ಲ."

ಇವೆಲ್ಲ ಗುಣಗಳೂ ಡಿ ವಿ ಜಿ ಯವರಿಗೆ ಮೆಚ್ಚಿಕೆಯಾದವೇ.

ಡಿ ವಿ ಜಿ ಕಾಹಿಲೆ ಮಲಗಿದಾಗ, ಟೈಫಾಯ್ಡ್ ಆಗಿ ಆಸ್ಪತ್ರೆಯಲ್ಲಿದ್ದಾಗ ಇವರ ಯೋಗಕ್ಷೇಮಕ್ಕಾಗಿ ಕಳವಳಪಟ್ಟವರು, ದಿನ ಬಂದು ನೋಡಿಕೊಂಡು ಹೋಗುತ್ತಿದ್ದವರು ಮಿರ್ಜಾ.

ಡಿ ವಿ ಜಿ ಯವರಿಗೆ ಮಿರ್ಜಾರವರೊಡನೆ ಸ್ನೇಹ ಆಡಳಿತ ವಿಚಾರದ ಒಂದು ಸಂಸ್ಕಾರವಾಯಿತು. ಚಿಕ್ಕವರ ದೊಡ್ಡತನ, ದೊಡ್ಡವರ ಚಿಕ್ಕತನ, ರಾಜಕೀಯ ಇಕ್ಕಟ್ಟುಗಳು, ಕೃತ್ರಿಮ ಪ್ರಜಾಭಿಮಾನಿಗಳ ದಾಂಧಲೆ, ಮುಂತಾದ ಎಷ್ಟೋ ವಿಷಯಗಳು, ಸಾಮಾನ್ಯ ಪ್ರಜೆಗೆ ತಿಳಿಯಬರದವು, ಅವರ ಗಮನಕ್ಕೆ ಬಂದವು. ಇದನ್ನು ಹೇಳಿದಾಗ ಇವನ್ನು ತಿಳಿದುಕೊಳ್ಳಲು ಮಿರ್ಜಾರವರ ಸ್ನೇಹವನ್ನು ಬೆಳಸಿಕೊಂಡರು ಎಂಬ ಧ್ವನಿಯೇನಿಲ್ಲ. ಇದು ಈ ಸ್ನೇಹದಲ್ಲಿ ಅನಿವಾರ್ಯ ವಾದ ಒಂದು ಪರಿಣಾಮ.

ರಾಜಕೀಯದಲ್ಲಿ ಒಂದೇ ಅಭಿಪ್ರಾಯ ಹೊಂದದಿದ್ದರೂ ವೈಯಕ್ತಿಕ ಸ್ನೇಹ ವಿಶ್ವಾಸಗಳನ್ನು ಉಳಿಸಿಕೊಂಡು ಬೆಳೆಸಿಕೊಂಡು ಹೋಗುವುದು ಇಂದಿನ ವಾತಾವರಣದಲ್ಲಿ ಅಸಹಜವಾಗಿ ಕಂಡೀತು. ಆದರೆ ಡಿ ವಿ ಜಿ ಮಿರ್ಜಾರವರ ಸ್ನೇಹ ವಿಶ್ವಾಸಗಳು ಅಸಾಧಾರಣವಾದವೇ. ಆ ಸ್ನೇಹದಿಂದ ರಾಜಕೀಯಕ್ಕೆ ಆದ ಪರಿಣಾಮವೇನು? ಡಿ ವಿ ಜಿ ಯವರ ಪ್ರಭಾವ ಮಿರ್ಜಾರವರ ಮೇಲೆ

ಎಷ್ಟಾಯಿತು ?—ಮುಂತಾದ ವಿಷಯಗಳು ಕಾಲಗರ್ಭದಲ್ಲಿ ಅಡಗಿಹೋಗಿರುವ ರಹಸ್ಯಗಳು. ನಮ್ಮ ದೇಶದ ರಾಜಕೀಯ ಮನೋಧರ್ಮ ಸಹನೆಯನ್ನು ಕಲಿತುಕೊಂಡ ದಿನ ಇಂಥ ಹತ್ತಾರು ಸಂಬಂಧಗಳ ಕಥೆ ಮನೋಜ್ಞವಾದೀತು.

ವೃತ್ತಪತ್ರಿಕಾ ಸ್ವಾತಂತ್ರ್ಯ

ಮನೆಯಲ್ಲಾದ ದುಃಖಪ್ರಸಂಗದಿಂದ ಡಿ ವಿ ಜಿ ಯವರು ಸಾರ್ವಜನಿಕ ಜೀವನದಿಂದ ವಿಮುಖರಾಗಲಿಲ್ಲ. ಅವರು ಸಾರ್ವಜನಿಕ ಜೀವನದಲ್ಲಿ ಇನ್ನೂ ಹೆಚ್ಚಾಗಿ ಭಾಗವಹಿಸತೊಡಗಿದರು.

ಅದರಲ್ಲಿ ಮೊದಲನೆಯದು ಅವರ ಮೊದಲ ಒಲವಾದ ವೃತ್ತ ಪತ್ರಿಕಾ ಜೀವನ. 1921 ರಲ್ಲಿ ಮರೆಯಾಗಿದ್ದ "ಕರ್ನಾಟಕ ಅಂಡ್ ದಿ ರೆವ್ಯೂ ಆಫ್ ರೆವ್ಯೂಸ್" 1925 ರ ಜುಲೈಯಲ್ಲಿ ಪುನಃ ಅವತರಿಸಿತು. ಇದಕ್ಕೆ ಅಭಿನಂದನೆಯನ್ನು ಹೇಳುತ್ತ ವಿ.ಎಸ್. ಶ್ರೀನಿವಾಸಶಾಸ್ತ್ರಿಗಳವರು :

"Mr. D. V. Gundappa, whose friendship is among the blessings I enjoyed in Bangalore, is well qualified for the task of journalism. He loves his native Mysore, its skies, the charms of its scenery, its history rich in romance and adventure, its present Ruling House unsurpassed among Indian States for devotion to duty and respect for law and constitutional restraint, with a passion which resembles the emotion of piety. Gifted with the faculty of poetry in his own language, he often indulges in a vision of Karnataka, embracing in one polity the various peoples owning the common speech and culture of Kannada. Perhaps his conception of Indian States in a politically stable and independent India is no clearer than that of other students of Indian affairs ; but he will not contemplate with equanimity a map of Bharatavarsha from which the boundaries of the territories ruled by Princes and Chiefs had been eliminated. To the grave deficiencies of these and the delicacy and complexity of the problems that they raise, he is keenly alive. It must be, therefore, with a heart weighed down with responsibility that he undertakes the function of awakening the patriotism of the

Chiefs and their subjects and exhorting them to fit themselves for an appropriate place in democratic India. The efficient and fearless discharge of his duty will involve him in harassments, animosities and trials. He must sometimes displease the Paramount Power and more often the Princes and Chiefs. It is hoped these latter and their friends will remember that at the present moment there is not a single newspaper published in English in the Indian States with pretensions to independence or dignity, and that the active encouragement of a free press and its accessories is one of the most genuine proofs that they can afford of a desire for the welfare and continued progress of their subjects" ಎಂದರು.

1927 ರ ಕೊನೆಯವರೆಗೂ ನಡೆದ ಆ ಪತ್ರಿಕೆ ದೇಶೀಯ ಸಂಸ್ಥಾನಗಳ ಆಡಳಿತವನ್ನು ವಿಮರ್ಶೆ ಮಾಡುವ, ಜವಾಬ್ದಾರಿ ಸರಕಾರಕ್ಕಾಗಿ ವಾದಿಸುವ ಪತ್ರಿಕೆಯಾಗಿತ್ತು. ಇದಲ್ಲದೆ ಸಿ. ಆರ್. ದಾಸ್, ಎಂ. ವೆಂಕಟಕೃಷ್ಣಯ್ಯ, ವಿದ್ಯಾರಣ್ಯ, ವೀಣೆ ಶೇಷಣ್ಣ ಮುಂತಾದವರನ್ನು ಕುರಿತೂ, ಕೃಷ್ಣರಾಜ ಒಡೆಯರ ಆಳ್ವಿಕೆಯ ರಜತಮಹೋತ್ಸವವನ್ನು ಕುರಿತೂ ಕರ್ನಾಟಕ ಏಕೀಕರಣವನ್ನು ಕುರಿತೂ ಲೇಖನಗಳು ಬಂದುವು. ವೆಂಕಟೇಶ ಅಯ್ಯಂಗಾರ್ಯರು, ಸ್ವತಃ ಡಿ ವಿ ಜಿ ಯವರೇ ಬರೆದಿರುವ ಪುಸ್ತಕ ವಿಮರ್ಶೆಗಳು ಅಲ್ಲಿವೆ. ಈ ಪತ್ರಿಕೆಯ ವಿಶಿಷ್ಟತೆಯೆಂದರೆ ಇತರ ಪತ್ರಿಕೆಗಳಲ್ಲಿ ಬಂದಿರುವ ಸ್ವಾರಸ್ಯವಾದ, ಮುಖ್ಯವಾದ ಲೇಖನಗಳ ಸೂಚಿ ಮತ್ತು ಆ ಪತ್ರಿಕೆಯಲ್ಲೇ ಬಂದ ಲೇಖನಗಳ, ಲೇಖಕರ ಆಕಾರಾದಿ. ಹೀಗೆ ಈ ಪತ್ರಿಕೆ ಬಹು ಉಪಯುಕ್ತವಾದ, ಸಮಕಾಲೀನ ವಿಚಾರಗಳನ್ನು ಕುರಿತು ಚರ್ಚಿಸುವ ಪತ್ರಿಕೆಯಾಗಿತ್ತು.

ಇದಕ್ಕೆ ಚಂದಾದಾರರನ್ನು ಸೇರಿಸುವುದರಲ್ಲಿ ಮಿರ್ಜಾ ಸಾಹೇಬರೇ ಮೊದಲಾಗಿ ಅನೇಕ ಸ್ನೇಹಿತರು ಸಹಾಯಮಾಡಿದರೂ ಅದನ್ನು ಡಿ ವಿ ಜಿ ಯವರು ಮುಂದುವರಿಸಿಕೊಂಡು ಹೋಗಲಾಗಲಿಲ್ಲ.

ವೃತ್ತಪತ್ರಿಕಾ ಸ್ವಾತಂತ್ರ್ಯ ಪ್ರಜಾ ಜನ ಸ್ವಾತಂತ್ರ್ಯದ ಒಂದು ಅಂಗವೆಂದು ನಂಬಿದ್ದವರು ಡಿ ವಿ ಜಿ :

"ಸರಕಾರದ ಆಡಳಿತಗಳನ್ನು ವಿಮರ್ಶಿಸಿ ತಿದ್ದುಪಾಟುಗಳನ್ನು ಸೂಚಿಸುವುದು ಪತ್ರಿಕೆಗಳ ಅತಿ ಮುಖ್ಯ ಕರ್ತವ್ಯ.

"ವೃತ್ತಪತ್ರಿಕೆಗಳ ಉದ್ದೇಶಗಳು ಮುಖ್ಯವಾಗಿ ಮೂರು ಬಗೆಯವೆಂದು ಹೇಳಬಹುದು.

೧) ಜನಕ್ಕೆ ಇಷ್ಟವೆನಿಸುವ ಅಥವಾ ಅವರ ಹಿತಕ್ಕೆ ಬೇಕಾದ ಲೋಕ ವಾರ್ತೆಗಳನ್ನು ಸಂಗ್ರಹಿಸಿ ಪ್ರಸರಿಸುವುದು.

೨) ಸಾರ್ವಜನಿಕ ಪ್ರಶ್ನೆಗಳ ಚರ್ಚೆಗೂ, ಸರಕಾರದ ಕಾರ್ಯಕ್ರಮ ನೀತಿನಿಯಮಗಳ ವಿಮರ್ಶನೆಗೂ ಜನಾಭಿಪ್ರಾಯ ಶೇಖರಣೆಗೂ ವಾಹನ ವಾಗಿರುವುದು.

೩) ಜನಕ್ಕೆ ಉಪಯುಕ್ತವಾದ ವಿವಿಧ ಜ್ಞಾನವನ್ನೂ ಮನೋರಂಜಕವಾದ ಬಗೆಬಗೆಯ ಸಾಹಿತ್ಯವನ್ನೂ ಪ್ರಚುರಪಡಿಸುವುದು."

"ಎದುವರೆಗೂ ರಾಜ್ಯತಂತ್ರಪಾಲನೆಯಲ್ಲಿ ಪ್ರಜಾವರ್ಗಕ್ಕೆ ನಿಜವಾದ ಅಧಿಕಾರಶಕ್ತಿಯೂ ತತ್ಸಂಬಂಧವಾದ ಉತ್ತರಭಾರವೂ ಇರುವುದಿಲ್ಲವೋ ಅದುವರೆಗೂ ಪತ್ರಿಕೆಗಳ ಪ್ರಧಾನ ಕರ್ತವ್ಯವು ಅಧಿಕಾರಿ ವರ್ಗಕ್ಕೆ ಪ್ರತಿಭಟನೆಯಾಗಿಯೇ ಇರಬೇಕಾಗುತ್ತದೆ".

ಹೀಗೆ ತಾವು ಆರಿಸಿಕೊಂಡ ವೃತ್ತಿಯ ಆದರ್ಶವನ್ನು ಪಾಲಿಸಿಕೊಂಡು, ಆ ಆದರ್ಶಪಾಲನೆಗೆ ಬೇಕಾದ ಸ್ವಾತಂತ್ರ್ಯಕ್ಕಾಗಿ ವೈಯಕ್ತಿಕವಾಗಿ ಹೋರಾಡಿದರು. ಸಂಘಟನೆಯಿಂದ ಉಪಯೋಗವಿದೆ ಎಂದು ತಿಳಿದಾಗ ಅಂಥ ಸಂಘಸಂಸ್ಥೆಗಳನ್ನು ಪ್ರೋತ್ಸಾಹಿಸಿ, ಸ್ಥಾಪಿಸಿ ಅವುಗಳ ಕೆಲಸಗಳಲ್ಲಿ ಪಾಲುಗೊಂಡರು.

ಮದರಾಸಿನಿಂದ ಪ್ರಕಟವಾಗುತ್ತಿದ್ದ 'ದಿ ಗಾರ್ಡಿಯನ್' ಎಂಬ ಪತ್ರಿಕೆಗೆ ಮೈಸೂರು ಸರಕಾರ ವಿಶೇಷವಾದ ಸಹಾಯವನ್ನಿತ್ತಿತ್ತು—ಅದರ ನೂರಾರು ಪ್ರತಿಗಳನ್ನು ಕೊಳ್ಳುವುದರಲ್ಲಿ, ಜಾಹಿರಾತುಗಳನ್ನು ಕೊಡುವುದರಲ್ಲಿ. ಯಾವುದೋ ಒಂದು ಕಾರಣಕ್ಕಾಗಿ ಇದ್ದಕ್ಕಿದ್ದಂತೆ 1925ರಲ್ಲಿ ಈ ಸಹಾಯವನ್ನು ನಿಲ್ಲಿಸಿತು. 'ಗಾರ್ಡಿಯನ್' ಪತ್ರಿಕೆಯ ಅಭಿಪ್ರಾಯಗಳು ಡಿ ವಿ ಜಿಯವರಿಗೆ ಒಪ್ಪಿತವಾಗಿದ್ದುವಲ್ಲ. ಆದರೂ ವೃತ್ತಪತ್ರಿಕಾ ಸ್ವಾತಂತ್ರ್ಯಕ್ಕೆ ಧಕ್ಕೆ ಬಂದುದನ್ನು ಕಂಡು, ಆ ಪತ್ರಿಕೆಯ ಸಂಪಾದಕರಾದ ಕೆ. ವಿ. ಥಾಮಸ್ ಅವರಿಗೆ ಒಂದು ಪತ್ರ ಬರೆದರು :

"When once the government has decided to help a Paper in order only that it may serve the public, as was the understanding in the case of "The Guardian", the public ought to be the sole judges as to the deserts of the paper....

In the present instance government has simply usurped the function of the public.... In Mysore the government has always thought for the public and decided what stuff is or is not good for the public.... This recurrence of gubernatorial arbitrariness in regard to the press is bound to remind the watchful public outside the State that Mysore — enlightened and progressive though she be — is after all like any other native state in the crucial matters which affect the freedom of citizenship and its auxiliaries." ಈ ಒಕ್ಕಣೆಯಿದ್ದ ಆ ಪತ್ರ ಗಾರ್ಡಿಯನ್ ಪತ್ರಿಕೆಯ 23-12-1925 ರ ಸಂಚಿಕೆಯಲ್ಲಿ ಪ್ರಕಟ ವಾಯಿತು.

ಮೈಸೂರು ವೃತ್ತಪತ್ರಿಕಾ ಕಾನೂನು ಡಿ ವಿ ಜಿ ಯವರ 'ಭಾರತಿ'ಯನ್ನು ಕೊಂದಿತ್ತು. ಮುಂದೆ ಸ್ವಾತಂತ್ರ್ಯ ಹೋರಾಟದ ಹುರುಪು ಹೆಚ್ಚಿದಂತೆ ಅದರ ಹಾವಳಿಯೂ ಹೆಚ್ಚಿತು.

ಡಿ ವಿ ಜಿ ಯವರು ಶಾಸನ ಸಭೆಯ ಸದಸ್ಯರಾದಾಗ ವಾಕ್ ಸ್ವಾತಂತ್ರ್ಯ ಕ್ಕಾಗಿ ಹೋರಾಡಿದರು. ಆಗ ಈ ವೃತ್ತಪತ್ರಿಕಾ ಕಾನೂನನ್ನು ರದ್ದು ಪಡಿಸ ಬೇಕೆಂಬ ಒಂದು ಗೊತ್ತುವಳಿಯನ್ನು ನ್ಯಾಯ ವಿಧಾಯಕ ಸಭೆಯ ಮುಂದೆ ತಂದರು — ಮಾರ್ಚಿ 1928 ರಲ್ಲಿ. ಖಾನ್ ಬಹದೂರ್ ಅಬ್ಬಾಸ್ ಖಾನ್, ಡಿ.ಹೆಚ್. ಚಂದ್ರಶೇಖರಯ್ಯನವರು ಅಂಥದೇ ಗೊತ್ತುವಳಿಗಳನ್ನು ಸೂಚಿಸಿ ದ್ದರು. ಆ ಸಮಯದಲ್ಲಿ ಡಿ ವಿ ಜಿ ಯವರ ಭಾಷಣವನ್ನು 'ನವಜೀವನ'ವೆಂಬ ಪತ್ರಿಕೆ ತನ್ನ 28-3-1927 ರ ಸಂಚಿಕೆಯಲ್ಲಿ ಹೀಗೆ ವಿವರಿಸಿತು: "ನಮ್ಮ ರಾಜ್ಯವು ಶ್ರೀಮನ್ಮಹಾರಾಜರವರ ಪೂರ್ವಜರಿಗೆ ಕೊಡಲ್ಪಡುವುದಕ್ಕೆ ವರ್ತ ಮಾನ ಪತ್ರಿಕೆಗಳ ಸಂಪಾದಕರು ಮಾಡಿದ ಅಸಾಧಾರಣ ಪ್ರಯತ್ನಗಳನ್ನು ಅವರು ವಿವರಿಸಿದರು. ದಿವಾನ್ ರಂಗಾಚಾರ್ಲು ಅವರು ವರ್ತಮಾನ ಪತ್ರಿಕೆ ಗಳಿಗೆ ಹೇಗೆ ಪ್ರೋತ್ಸಾಹಕರಾಗಿದ್ದರು, ಸರ್. ಕೆ. ಶೇಷಾದ್ರಿ ಅಯ್ಯರ್ ಅವರು 'ದೇಶಾಭಿಮಾನಿ' ಪತ್ರಿಕೆಯನ್ನು ಹೇಗೆ ಸಾಯಿಸಿದರು, ಸರ್ ಪಿ. ಎನ್. ಕೃಷ್ಣ ಮೂರ್ತಿಯವರು ವರ್ತಮಾನ ಪತ್ರಿಕೆಗಳ ಪ್ರತಿನಿಧಿಗಳಿಗೂ 'ಮೈಸೂರು ಸ್ಟ್ಯಾಂಡರ್ಡ್' ಮತ್ತು 'ನಡೆಗನ್ನಡಿ' ಇವುಗಳಿಗೆ ಕೊಟ್ಟ ಕಿರುಕುಳ, ಇವನ್ನು ವಿವರಿಸಿದರು. ವಿ. ಪಿ. ಮಾಧವರಾಯರು ಬ್ರಿಟಿಷ್ ಇಂಡಿಯದಲ್ಲಿ ಅವಲಂಬಿಸಿದ್ದ ರಾಜಕೀಯ ಪರಿಸ್ಥಿತಿಯನ್ನು ನೆನ ಮಾಡಿಕೊಂಡು ಇಲ್ಲಿ ಮೇಲ್ಕಂಡ ಕಾನೂನನ್ನು

ಜಾರಿಗೆ ತಂದು ಅವರೇ ಈ ಕೆಲ ವರ್ಷಗಳ ಹಿಂದೆ ಲಂಡನ್ನಿನಲ್ಲಿ ಪಾರ್ಲಿಮೆಂಟರಿ ಕಮಿಟಿಯ ಮುಂದೆ ಸಾಕ್ಷಿ ಕೊಟ್ಟಾಗ ಈ ಕಾನೂನಿಗಾಗಿ ಪಶ್ಚಾತ್ತಾಪ ಪಟ್ಟಿ ರುತ್ತಾರೆ. ಇವರು ಇಂಥಾ ಕಾನೂನನ್ನು ಜಾರಿಗೆ ತರುವುದಕ್ಕಿಂತ ದಿವಾನರ ಕೆಲಸಕ್ಕೆ ರಾಜೀನಾಮೆ ಕೊಟ್ಟಿದ್ದರೆ ಉತ್ತಮವಾಗಿತ್ತು. ಸರ್ ಎಂ.ವಿಶ್ವೇಶ್ವರಯ್ಯ ನವರು ದಿವಾನ್ ಬ್ಯಾನರ್ಜಿಯವರು ಹೇಗೆ ವರ್ತಮಾನ ಪತ್ರಿಕೆಗಳಿಗೆ ಸಹಾಯ ಮಾಡುತ್ತಿದ್ದರು ಎಂಬುದನ್ನು ಹೃದಯಂಗಮವಾಗಿ ವಿವರಿಸಿದರು. ಕೊನೆಯಲ್ಲಿ ಡಿ. ವಿ. ಗುಂಡಪ್ಪನವರು, ವಿವೇಕಿಗಳಾದ ರಾಜನೀತಿಜ್ಞರು ವರ್ತಮಾನ ಪತ್ರಿಕೆ ಗಳ ಕಾನೂನನ್ನು ರದ್ದು ಮಾಡಿದರೆ ಜನರ ಮತ್ತು ದೇಶದ ಉದ್ಧಾರವಾಗುವು ದೆಂದರು. ಸರಕಾರದವರು ಈ ನಿರ್ಣಯವನ್ನು ಅಂಗೀಕರಿಸದೇ ಇದ್ದರೆ ಅವರ ಪಶುಶಕ್ತಿಯಿಂದ ಅವರಿಗೆ ಜಯವಾಗುವುದೇ ಹೊರತು ಅವರ ನೈತಿಕ ಶಕ್ತಿ ಯಿಂದಲ್ಲವೆಂದರು. ಗುಂಡಪ್ಪನವರ ಭಾಷಣವನ್ನು ಸಭಿಕರು ಸ್ತಂಭೀಭೂತರಾಗಿ ಕೇಳಿದರು." ಆದರೆ ದಿವಾನ್ ಸಾಹೇಬರು ಈ ಭಾಷಣವನ್ನು ಹಠಾತ್ತಾಗಿ ನಿಲ್ಲಿಸಿಬಿಟ್ಟರಂತೆ.

6ನೇ ಜನವರಿ 1929 ರಲ್ಲಿ ವಿಶ್ವಕರ್ನಾಟಕ ಪತ್ರಿಕೆ ಈ ವರದಿಯನ್ನು ಪ್ರಕಟಿಸಿತು.

"ಶಾಂತಿ ಸಮಾಧಾನದ ಮುದ್ರೆವಹಿಸಿ ಮೈಸೂರಿನಲ್ಲಿ ಸಾಧ್ವಿ, ಸಂಪದ ಭ್ಯುದಯ, ಮೈಸೂರು ಪೇಟ್ರಿಯಟ್ ಎಂಬ ಮೂರು ಪತ್ರಿಕೆಗಳನ್ನು ನಿಲ್ಲಿಸಿ ಬಿಟ್ಟರು.... ಈ ಮೂರು ಪತ್ರಿಕೆಗಳೂ ಮೈಸೂರು ವೃತ್ತಪತ್ರಿಕೆಗಳ ಕಾನೂನೆಂಬ ಅಸುರನ ಬಾಯಿಗೆ ಬಿದ್ದು ಮೃತಿ ಹೊಂದಿದುವು. ಶ್ರೀ ವೆಂಕಟ ಕೃಷ್ಣಯ್ಯನವರಿಗೆ 85 ನೆಯ ವಯಸ್ಸಿನಲ್ಲಿ ನಿರುದ್ಯೋಗ ವ್ಯಾಧಿ ಗಂಟುಬಿತ್ತಲ್ಲ ಎಂಬುದೊಂದೇ ಕೆಲವರ ಚಿಂತೆ".

ಅದೇ ಪತ್ರಿಕೆ ತನ್ನ 24-3-1929 ರ ಸಂಚಿಕೆಯಲ್ಲಿ ಇದನ್ನು ಪ್ರಕಟಿಸಿತು :

"20-3-1929 ಸಾಯಂಕಾಲ ವಿಶ್ವಕರ್ನಾಟಕ ಕಾರ್ಯಾಲಯದಲ್ಲಿ ಬೆಂಗಳೂರು ವೃತ್ತಪತ್ರಿಕಾ ವೃತ್ತಿಗಾರರ ಸಂಘದ ಸಭೆ ಸೇರಿತ್ತು. ಡಿ. ವಿ. ಗುಂಡಪ್ಪನವರು ಅಧ್ಯಕ್ಷರಾಗಿ ಕಾರ್ಯಕ್ರಮ ನಡಸಿದರು. ಮೈಸೂರಿನ ಪ್ರಕೃತ ಪರಿಸ್ಥಿತಿ, ಪತ್ರಿಕಾ ಕರ್ತರ ಮತ್ತು ಸರಕಾರದ ಸಂಬಂಧ ಈ ವಿಚಾರ ವಿಪುಲ ಚರ್ಚೆಯಾಗಿ ಕಡೆಗೆ ಸರ್ವಾನುಮತದಿಂದ ಗೊತ್ತುವಳಿಗಳು ಅಂಗೀ ಕೃತವಾದುವು".

ಅಧ್ಯಕ್ಷರು ಸೂಚಿಸಿದ ಗೊತ್ತುವಳಿ: "ನಿಪುಣ ಪತ್ರಿಕಾ ಲೇಖಕರೂ ಸಂಸ್ಥಾನದ ವೃತ್ತಪತ್ರಿಕಾ ವೃತ್ತಿ ಪಿತಾಮಹರೂ ಆದ ಶ್ರೀ ವೆಂಕಟಕೃಷ್ಣಯ್ಯನವರಿಗೆ ಪತ್ರಿಕೆಗಳನ್ನು ಸಂಪಾದಿಸಿ ಪ್ರಕಟಿಸಲು ಕೊಟ್ಟಿದ್ದ ರಹದಾರಿಯನ್ನು ಸರಕಾರದವರು ಕಿತ್ತುಕೊಂಡ ಶಾಸನಸಮ್ಮತವಲ್ಲದ ವರ್ತನವನ್ನು ಈ ಸಭೆಯು ಖಂಡಿಸುತ್ತದೆ. ಅರ್ಧ ಶತಮಾನಗಳಿಂದಲೂ ಈ ಪತ್ರಿಕೆಗಳು ಸಾರ್ವಜನಿಕ ಜೀವನಕ್ಕೂ ಸಂಸ್ಥಾನದ ಆಡಳಿತಕ್ಕೂ ಒಂದು ಸುವ್ಯವಸ್ಥಿತ ರೂಪಗೊಡಲು ಅನುಕೂಲವಾಗಿದ್ದವು".

1927 ರ ಮಾರ್ಚಿ ತಿಂಗಳಲ್ಲಿ ಅವರು ಲಂಡನ್ನಿನ "ಇನ್ಸ್ಟಿಟ್ಯೂಟ್ ಆಫ್ ಜರ್ನಲಿಸ್ಟ್ಸ" ಸಂಸ್ಥೆಗೆ ಸದಸ್ಯರಾಗಿ ಸೇರಿದರು. ಜುಲೈ ತಿಂಗಳಿನಲ್ಲಿ ಆ ಸಂಸ್ಥೆಯ ಕಾರ್ಯದರ್ಶಿಯವರಿಗೆ ಒಂದು ಪತ್ರ ಬರೆದು, ಮೈಸೂರು ವೃತ್ತಪತ್ರಿಕಾ ಕಾನೂನನ್ನು ರದ್ದುಪಡಿಸುವುದನ್ನು ಕುರಿತು ನ್ಯಾಯ ವಿಧಾಯಕ ಸಭೆಯಲ್ಲಿ ತಾವು ಒಂದು ಗೊತ್ತುವಳಿಯನ್ನು ತರಲು ಉದ್ದೇಶಿಸಿರುವುದಾಗಿಯೂ, ಅದರ ವಿಚಾರವಾಗಿ ಈ ಸಂಸ್ಥೆ ತಮಗೆ ಒತ್ತಾಸೆಯನ್ನು ಸೂಚಿಸಿದರೆ ತಮ್ಮ ವಾದ ಬಲಪಡುವುದೆಂದೂ ಸೂಚಿಸಿದರು. ಆದರೆ ಆ ಸಂಸ್ಥೆ ಅಂಥ ಸಹಾಯ ನೀಡಲು ಸಿದ್ಧವಾಗಿರಲಿಲ್ಲ.

ಮುಂದೆ ಅವರು ಭಾಗವಹಿಸಿದ ವೃತ್ತಪತ್ರಿಕಾ ಸಂಘಟನೆಗಳನ್ನು ಕುರಿತು ಈಗ ನೋಡೋಣ.

2-10-1925 ರಲ್ಲಿ ಎಂ. ವೆಂಕಟಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯೊಂದರಲ್ಲಿ ಅಖಿಲ ಕರ್ನಾಟಕ ಸಂಪಾದಕರ ಸಂಘವೊಂದನ್ನು ಕೂಡಿಸಬೇಕೆಂಬ ನಿರ್ಣಯ ಮಾಡಲಾಯಿತು. ಅದರ ಕಾರ್ಯ ನಿರ್ವಾಹಕ ಸಭೆಯಲ್ಲಿ ವೆಂಕಟಕೃಷ್ಣಯ್ಯನವರು ಅಧ್ಯಕ್ಷರಾಗಿದ್ದರು; ಡಿ ವಿ ಜಿ, ರಂಗಯ್ಯಂಗಾರ್ಯರು, ಆಲೂರು ವೆಂಕಟರಾಯರು, ಮುದವೀಡು ಕೃಷ್ಣ ರಾಯರು, ಉಪಾಧ್ಯಕ್ಷರಾಗಿದ್ದರು. ದಿವಾಕರ ರಂಗರಾಯರು, ಟಿ.ಟಿ. ಶರ್ಮ ಅವರು, ಮತ್ತು ಪಿ.ಆರ್. ರಾಮಯ್ಯನವರು ಕಾರ್ಯದರ್ಶಿಗಳಾದರು. ಆದರೆ ಇದರ ಕೆಲಸ ಮುಂದುವರಿಯಲಿಲ್ಲವೆಂದು ಕಾಣುತ್ತದೆ.

ಡಾ। ಎನ್. ಎಸ್ ಹರ್ಡೀಕರ್ ಅವರ ಹಿಂದೂಸ್ತಾನೀ ಸೇವಾದಳದ ಆಶ್ರಯದಲ್ಲಿ ಬಾಗಲಕೋಟೆಯಲ್ಲಿ ವ್ಯಾಯಾಮ ವಿದ್ಯಾಪೀಠವೆಂಬ ಸಂಸ್ಥೆಯು ಸ್ಥಾಪಿತವಾಯಿತು. ಅದರ ಉದ್ದೇಶ ಕರ್ನಾಟಕದಲ್ಲಿ ಬೇಕಾಗುವ ಶಿಕ್ಷಕರಿಗೆ ವ್ಯಾಯಾಮ ಶಿಕ್ಷಣವನ್ನು ಕೊಡುವುದು. ಅದಕ್ಕಾಗಿ ಎಂಟು ಸಾವಿರ

ರೂಪಾಯಿನ ವೆಚ್ಚದಲ್ಲಿ ಒಂದು ಕಟ್ಟಡವನ್ನು ಕಟ್ಟಿ ಲೋಕಮಾನ್ಯ ತಿಲಕರ ಪುಣ್ಯ ತಿಥಿಯ ದಿವಸ ಅಂದರೆ 1-8-1928 ರಂದು ಅದರ ಪ್ರವೇಶ ಸಮಾರಂಭವನ್ನು ಮಾಡಲು ಅವರು ನಿಶ್ಚಯಿಸಿದರು. ಈ ಸಂದರ್ಭವನ್ನು ಉಪಯೋಗಿಸಿಕೊಂಡು, ಕರ್ನಾಟಕಸ್ಥರಲ್ಲಿ ಸಾರ್ವಜನಿಕ ಕೆಲಸಗಳ ವಿಷಯವಾಗಿ ಜಾಗ್ರತೆಯನ್ನುಂಟುಮಾಡುವುದಕ್ಕಾಗಿ ಕೆಲವು ಪರಿಷತ್ತುಗಳನ್ನೂ ಪ್ರದರ್ಶನಗಳನ್ನೂ ಏರ್ಪಡಿಸಬೇಕೆಂದು ಅಲ್ಲಿನ ಕಾರ್ಯಕರ್ತರು ನಿಶ್ಚಯಿಸಿಕೊಂಡರು. ಹಾಗೆ ಹಿಂದೀ ಸೇವಾದಲದ ಕರ್ನಾಟಕ ಶಾಖೆಯ ಸ್ವಯಂಸೇವಕರ ಪರಿಷತ್ತು, ಕರ್ನಾಟಕ ಪತ್ರಿಕಾ ಕರ್ತೃಗಳ ಒಂದನೆಯ ಪರಿಷತ್ತು, ರೈತರ ಪರಿಷತ್ತು, ವ್ಯಾಪಾರಸ್ಥರ ಪರಿಷತ್ತು ಇವುಗಳ ಸಭೆಗಳನ್ನೂ ಮತ್ತು ಅನೇಕ ಪ್ರದರ್ಶನಗಳನ್ನೂ ಏರ್ಪಾಟುಮಾಡಲಾಗಿತ್ತು. ಇದರಲ್ಲಿ ಆಸಕ್ತಿ ವಹಿಸಿದವರಲ್ಲಿ ಹರ್ಡೀಕರರಲ್ಲದೆ ಶ್ರೀನಿವಾಸ ರಾಜೇರಾವ್ ಮಂಗಳವೇಢೆ, ಹಣಮಂತಾಚಾರ್ಯ ಪುರೋಹಿತ ಮುಂತಾದವರಿದ್ದರು.

ಅಖಂಡ ಕರ್ನಾಟಕದಲ್ಲಿರುವ ವೃತ್ತಪತ್ರಿಕಾ ಕರ್ತೃಗಳ ಸಂಘವೊಂದನ್ನು ಸ್ಥಾಪಿಸುವ ವಿಚಾರ ಅನೇಕರ ಮನಸ್ಸಿನಲ್ಲಿದ್ದು, ಪ್ರಯತ್ನಗಳೂ ನಡೆದಿದ್ದುವು. ಆದರೆ ಅದು ಬಾಗಲಕೋಟೆಯಲ್ಲಿ ಸಫಲವಾಯಿತು. ಈ ಪರಿಷತ್ತಿಗೆ ಮೈಸೂರಿನ ಎಂ. ವೆಂಕಟಕೃಷ್ಣಯ್ಯನವರನ್ನು ಅಧ್ಯಕ್ಷರಾಗಿರಲು ಕೇಳಿಕೊಳ್ಳಲಾಗಿತ್ತು. ಆದರೆ ಅವರು ವಯಸ್ಸಿನ ಕಾರಣದಿಂದಲೂ ಅನಾರೋಗ್ಯದ ಕಾರಣದಿಂದಲೂ ತಾವು ಆ ಕೆಲಸವನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲವೆಂದು ಪರಿಷತ್ತಿನ ಕಾರ್ಯಕರ್ತರಿಗೆ ತಿಳಿಸಿದ್ದಲ್ಲದೆ, ಡಿ ವಿ ಜಿ ಯವರಿಗೆ ಒಂದು ಪತ್ರ ಬರೆದು ಆ ಜವಾಬ್ದಾರಿಯನ್ನು ಡಿ ವಿ ಜಿ ಯವರು ಒಪ್ಪಿಕೊಳ್ಳಬೇಕೆಂದು ಒತ್ತಾಯ ಮಾಡಿದರು. ಬಾಗಲಕೋಟೆಯಿಂದಲೂ ಇದಕ್ಕಾಗಿ ಆಹ್ವಾನ ಬಂತು. ಹೀಗೆ ಬಾಗಲಕೋಟೆಯಲ್ಲಿ ನಡೆದ ಅಖಿಲ ಕರ್ನಾಟಕ ಪತ್ರಕಾರರ ಪರಿಷತ್ತಿಗೆ ಡಿ ವಿ ಜಿ ಯವರು ಅಧ್ಯಕ್ಷರಾದರು. ಪರಿಷತ್ತಿನ ಸಭೆ ನಡೆದದ್ದು 31-7-1928 ರಲ್ಲಿ.

ನಮ್ಮ ದೇಶದ ವೃತ್ತಪತ್ರಿಕೆಯ ಚರಿತ್ರೆಯಲ್ಲಿ ಈ ಸಭೆ ಒಂದು ಮುಖ್ಯವಾದ ಘಟನೆ. ಅಂದು ಡಿ ವಿ ಜಿ ಯವರು ಮಾಡಿದ ಉಪನ್ಯಾಸವೂ ಅಷ್ಟೇ ಮುಖ್ಯವಾದದ್ದು. ಅಂದು ಅವರು ಟಿಪ್ಪಣಿಗಳ ಆಧಾರದ ಮೇಲೆ ಮಾಡಿದ ಬಾಯಿ ಮಾತಿನ ಉಪನ್ಯಾಸ ಕೆಲವು ಹೊಸ ಪ್ರಕರಣಗಳೊಂದಿಗೆ ಪರಿಷ್ಕಾರ ಪಡಿಸಲ್ಪಟ್ಟು ಅಚ್ಚಾದದ್ದು ಡಿಸೆಂಬರ್ 1928 ರಲ್ಲಿ. ಇನ್ನೂ ಕೆಲವು ವಿಷಯ

ಗಳನ್ನು ಸೇರಿಸಿ ಅದೇ ಗ್ರಂಥ 1954 ರಲ್ಲಿ, 1968 ರಲ್ಲಿ ಪ್ರಕಟವಾಯಿತು, "ವೃತ್ತಪತ್ರಿಕೆ" ಎಂಬ ಗ್ರಂಥ ರೂಪದಲ್ಲಿ.

ತಮ್ಮ ಉಪನ್ಯಾಸದಲ್ಲಿ ಡಿ ವಿ ಜಿ ಯವರು ಕರ್ನಾಟಕದಲ್ಲಿ ವೃತ್ತಪತ್ರಿಕೆಗಳ ಪೂರ್ವ ಚರಿತ್ರೆಯನ್ನು ಹೇಳಿ, ಪತ್ರಿಕೆಗಳ ಪ್ರಭಾವ ಎಂಥಾದ್ದು, ಪತ್ರಿಕೆ ಪ್ರಜೆಯ ಕಣ್ಣು, ಕಿವಿ, ಬಾಯಿ ಎಂದು ಏಕೆ ಪರಿಗಣಿಸಲ್ಪಡಬೇಕು ಎಂದು ವಿವರಿಸಿ, ಪತ್ರಿಕೆಯನ್ನು ಪ್ರಜಾರಾಜ್ಯದ ಒಂದು ಅಂಗವೆಂದು ಭಾವಿಸಬೇಕು ; ರಾಜನಿಗೆ ಮಂತ್ರಿಗಳು ಹೇಗೋ ಪ್ರಜೆಗಳಿಗೆ ಪತ್ರಿಕೆಗಳು ಹಾಗೆ, ಮತ್ತು ಪತ್ರಿಕೆಗಳು ಚರ್ಚೆಯನ್ನು ಪ್ರಚೋದಿಸಿ ಪ್ರಜಾಪ್ರಭುತ್ವದ ಮುಖ್ಯವಾದ ಕೆಲಸವನ್ನು ಆಗಮಾಡಿಸುತ್ತದೆ, ಎಂದು ವಿಸ್ತಾರವಾಗಿ ಪತ್ರಿಕೆಗಳ ಮಹತ್ವವನ್ನು ವಿವರಿಸಿದ್ದಾರೆ. ನಮ್ಮ ದೇಶದಲ್ಲಿ ಸ್ವತಂತ್ರ ವಿವೇಚನೆಯ ಅಭ್ಯಾಸವು ಕಡಮೆಯಾದದ್ದರಿಂದ ಪತ್ರಿಕಾಕರ್ತರು ತಮ್ಮ ಲೇಖನಗಳನ್ನು ಚರ್ಚಾ ಪ್ರಧಾನಗಳನ್ನಾಗಿ ಮಾಡಿ, ವಿಷಯ ಶೋಧನ ಮಾರ್ಗದಲ್ಲಿ ವಾಚಕರನ್ನೂ ನಡೆಯಿಸಿದರೆ, ನಮ್ಮ ಜನರಿಗೆ ಸ್ವಬುದ್ಧಿ ವಿಕಾಸದ ಮೂಲಕವೂ ಪ್ರೌಢ್ಯ ಸಾಧನದ ಮೂಲಕವೂ ಆಗುವ ಉಪಕಾರ ಅಷ್ಟಿಷ್ಟಲ್ಲ. ಪ್ರಜಾರಾಜ್ಯವೆಂಬುದು ಶತ್ರುಗಳಿಲ್ಲದ ರಾಜ್ಯವೇನೂ ಅಲ್ಲ. ಬಾಹ್ಯ ಶತ್ರುಗಳ ಮಾತು ಹಾಗಿರಲಿ, ಅದಕ್ಕೆ ಅಂತಶ್ಶತ್ರುಗಳೂ ಪ್ರಬಲರಾದವರಿರುವರು. ಅದರಲ್ಲಿ ಮುಖ್ಯರಾದವರು ಡೊಂಬಿ ಆರ್ಭಟದ ಲೇಖಕರು ಮತ್ತು ಭಾಷಕರು. ಯದ್ವಾತದ್ವಾ ಮಾತನಾಡಿ ಅಥವಾ ಬರೆದು ಜನರ ವಿವೇಚನ ಶಕ್ತಿಗೆ ಮೂರ್ಛೆ ತಂದು ಅವರ ಮನಸ್ಸನ್ನು ರೋಷಾವೇಶ ಹಠಗಳಲ್ಲಿ ನಿಲ್ಲಿಸುವವರು ಪ್ರಜಾಧಿಪತ್ಯಕ್ಕೆ ಕಂಟಕರಾಗಿರುವರು. ಅವರಿಂದ ಪ್ರಜೆಗಳನ್ನು ಕಾಪಾಡುವ ಜವಾಬ್ದಾರಿಯು ಪತ್ರಿಕೆಗಳದೇ. ಪತ್ರಿಕೆ ಪತ್ರವ್ಯವಹಾರಕ್ಕೆ, ಸ್ಥಳೀಯ ವಾರ್ತೆಗಳಿಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಡಬೇಕೆಂದು ಹೇಳಿ, ಪತ್ರಿಕೆಗಳು ವಿಜ್ಞಾನ ಶಾಸ್ತ್ರ, ಸಾಹಿತ್ಯ ಮುಂತಾದುವಕ್ಕೂ ಎಡೆಕೊಡಬೇಕೆಂದು ಸಲಹೆಯಿತ್ತಿದ್ದಾರೆ. ಪತ್ರಿಕೋದ್ಯೋಗವು ಒಂದುಕಡೆ ಕಸಬು, ವ್ಯಾಪಾರ, ಇನ್ನೊಂದು ಕಡೆ ಧರ್ಮದೀಕ್ಷೆ. ಬುದ್ಧಿಶ್ರಮ. ಪ್ರಜಾಸೇವೆಗೆ ಹೊರಡುವವರು ಮಾತ್ರವೇ ಕೇವಲ ವಿರಕ್ತರಾಗಿ ಪಾರಮಾರ್ಥಿಕ ಬುದ್ಧಿಯಿಂದ ನಡೆಯಬೇಕೆಂಬ ನಿರೀಕ್ಷಣೆ ನಮ್ಮ ದೇಶದಲ್ಲಿ ಅತಿಯಾಗಿದೆ. ಪ್ರತಿಯೊಂದು ಕೆಲಸಕ್ಕೂ ತಕ್ಕ ಕೂಲಿ ಸಲ್ಲುವುದು ನ್ಯಾಯ. ಆದ್ದರಿಂದ ಪತ್ರಿಕೋದ್ಯೋಗವು ಮಾನಸಹಿತವಾದ ಜೀವನವನ್ನು ದೊರಕಿಸಿಕೊಡುವ ಹಾಗಾಗಬೇಕು. ಇನ್ನೊಂದುಕಡೆ ಪತ್ರ

ಕರ್ತನು ತನ್ನ ಕೆಲಸಕ್ಕಾಗಿ ತಾನು ಸಿದ್ಧವಾಗಬೇಕು. ಅವನು ಪುಸ್ತಕದಿಂದ ತಿಳಿದುಕೊಂಡದ್ದನ್ನು ಲೋಕಾನುಭವದ ಒರೆಗಲ್ಲಿನ ಮೇಲೆ ಉಜ್ಜಿ ಪರೀಕ್ಷಿಸ ಬೇಕು. ಎಲ್ಲಕ್ಕಿಂತ ಮೇಲಾಗಿ ಅವನಿಗೆ ಒಂದು ಜೀವಿತ ಸಿದ್ಧಾಂತವಿರಬೇಕು.

ಹೀಗೆ ಪತ್ರಿಕೋದ್ಯೋಗಿಗೆ ಸಂಬಂಧಪಟ್ಟ ಎಲ್ಲ ವಿಷಯಗಳನ್ನೂ ಹೇಳಿರುವ 'ವೃತ್ತಪತ್ರಿಕೆ' ಗ್ರಂಥವನ್ನು ಪತ್ರಕರ್ತೋದ್ಯೋಗದ ಒಂದು ಸಮಗ್ರ ಕೈಪಿಡಿ ಎಂದು ಹೇಳಬಹುದು.

ಬಾಗಲಕೋಟೆಯಲ್ಲಿ ನಡೆದ ಪರಿಷತ್ತಿನ ಕಾರ್ಯಕಲಾಪಗಳ ಫಲವಾಗಿ ಡಿ ವಿ ಜಿ ಯವರ ಅಧ್ಯಕ್ಷತೆಯಲ್ಲಿ ಕರ್ಣಾಟಕ ಪತ್ರಿಕೋದ್ಯೋಗಿಗಳ ಸಂಘ ವೊಂದು ಸ್ಥಾಪಿತವಾಯಿತು. 'ಕರ್ಣಾಟಕ ವೈಭವ' ಪತ್ರಿಕೆಯ ಸಂಪಾದಕ ರಾಗಿದ್ದ ಹೆಚ್. ಆರ್. ಮೊಹರೆಯವರು ಕಾರ್ಯದರ್ಶಿಯಾದರು. ಆಲೂರು ವೆಂಕಟರಾಯರು, ಮುದವೀಡುಕರ್ ಕೃಷ್ಣರಾಯರು, ಶಿವರಾಮ ಕಾರಂತರು, ವಿ. ಬಿ. ಪುರಾಣಿಕ, ರಾವಸಾಹೇಬ ಹಳಕಟ್ಟಿ, ತಿರುಮಲೆ ತಾತಾಚಾರ್ಯ ಶರ್ಮ, ಶ್ರೀನಿವಾಸರಾವ್ ಮಂಗಳವೇಢೆ ಮುಂತಾದವರು ಸದಸ್ಯರಾದರು.

1932ನೆಯ ಇಸವಿ ಜನವರಿ ಮೊದಲನೆಯ ತಾರೀಖು ಪ್ರಾತಃಕಾಲ ಕೆಲವು ಮಿತ್ರರು ಆಕಸ್ಮಾತ್ತಾಗಿ ಲಾಲ್‌ಬಾಗಿನ ಗಾಜಿನಮನೆಯ ಬಳಿ ಸಂಧಿಸಿದರು. ಒಂದು ಪತ್ರಕರ್ತರ ಸಂಘವನ್ನು ಏಕೆ ಸ್ಥಾಪಿಸಬಾರದು ಎಂದು ಅವರು ಯೋಚಿಸಿ ಸಂಘವನ್ನು ಸ್ಥಾಪಿಸುವ ನಿರ್ಣಯವನ್ನು ಅಲ್ಲೀ ಕೈಗೊಂಡರು. ಅವತ್ತೂ, ತದನಂತರ ಎರಡು ವರ್ಷ ಕಾಲವೂ ಸಂಘದ ಅಧ್ಯಕ್ಷತೆಯನ್ನು ವಹಿಸಿ ಅದಕ್ಕೊಂದು ಗೊತ್ತುಗುರಿಯನ್ನು ತೋರಿಸಿಕೊಟ್ಟ ವರು ಡಿ ವಿ ಜಿ ಯವರು. ಆ ಸಂಘದ ಪ್ರಾರಂಭೋತ್ಸವವು 1932ರ ಜೂನ್ 3 ರಂದು ಯುವರಾಜರಾಗಿದ್ದ ಶ್ರೀ ಕಂಠೀರವ ನರಸರಾಜ ಒಡೆಯರಿಂದ ನಡೆ ಯಿತು. ಮದರಾಸಿನ ಹಿಂದೂ ಪತ್ರಿಕೆಯ ಸಂಪಾದಕರಾಗಿದ್ದ ರಂಗಸ್ವಾಮಿ ಅಯ್ಯಂಗಾರ್ಯರು ಅಧ್ಯಕ್ಷತೆ ವಹಿಸಿದ್ದರು. ಮಹಾರಾಜರು ಆ ಸಂಘಕ್ಕೆ ಪ್ರಾರಂಭದಲ್ಲಿ 500 ರೂಪಾಯಿಗಳನ್ನು, ತರುವಾಯ 1000 ರೂಪಾಯಿ ಗಳನ್ನು ಒಂದು ಸಹಾಯ ನಿಧಿಯನ್ನು ಪ್ರಾರಂಭಿಸುವುದಕ್ಕಾಗಿ ಕೊಟ್ಟರು.

1932–33, 1933–34ರಲ್ಲಿ ಡಿ ವಿ ಜಿ ಯವರು ಮೈಸೂರು ರಾಜ್ಯದ ಪತ್ರಿಕೋದ್ಯೋಗಿಗಳ ಸಂಘದ ಅಧ್ಯಕ್ಷರಾಗಿದ್ದಾಗ ಮೊದಲನೆಯ ವರ್ಷ ಕೆ. ಎಸ್. ರಾಮಸ್ವಾಮಿಯವರು ಕಾರ್ಯದರ್ಶಿಯಾಗಿಯೂ, ಖಜಾಂಚಿ ಯಾಗಿಯೂ ಇದ್ದರು. ಮರು ವರ್ಷ ವಿ. ಭಾಸ್ಕರನ್ ಕಾರ್ಯದರ್ಶಿ

ಯಾದರು. ಎಸ್. ಆರ್. ಎಸ್. ರಾಘವನ್ ಖಜಾಂಚಿಯಾಗಿದ್ದರು.

ಸಂಘವು ಎಂ. ವೆಂಕಟಕೃಷ್ಣಯ್ಯನವರನ್ನು, ಸಿ. ಹಯವದನರಾಯರನ್ನು ಅಭಿನಂದಿಸುವ ಸಭೆಗಳನ್ನು ನಡೆಸಿದೆ. ಸಿ. ವಿ. ರಾಮನ್ ಅವರು ಸಂಘಕ್ಕೆ ಭೇಟಿ ಕೊಟ್ಟು ವಿಶ್ವಾಸ ತೋರಿದ್ದಾರೆ. ಈ ಎಲ್ಲ ಸಮಾರಂಭಗಳಲ್ಲಿಯೂ ಡಿ ವಿ ಜಿ ಯವರ ಪಾತ್ರ ಮುಖ್ಯವಾಗಿತ್ತು.

1.12.1940ರಲ್ಲಿ ಮೈಸೂರು ಪತ್ರಿಕೋದ್ಯೋಗಿಗಳ ಮೊದಲನೆಯ ಸಮ್ಮೇಳನ ಬೆಂಗಳೂರಿನಲ್ಲಿ ಡಿ ವಿ ಜಿ ಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಮೈಸೂರು ದೇಶದಲ್ಲಿ ವೃತ್ತಪತ್ರಿಕೆಗಳ ಚರಿತ್ರೆಯನ್ನೂ ವೃತ್ತಪತ್ರಿಕೆಗಳಿಗೆ ಒದಗಿದ್ದ ಪ್ರತಿಬಂಧಕಗಳನ್ನೂ ಅವರು ಅಂದು ಮಾಡಿದ ಉಪನ್ಯಾಸದಲ್ಲಿ ವಿವರಿಸಿದ್ದಾರೆ. 1908ರ ವೃತ್ತಪತ್ರಿಕಾ ನಿರ್ಬಂಧದ ಕಾನೂನನ್ನು ವಿರೋಧಿಸಿ ಕೆ. ಶಂಕರನಾರಾಯಣರಾಯರು, ಎಸ್. ಆರ್. ಬಾಲಕೃಷ್ಣರಾಯರು ಮುಂತಾದವರು ವೃತ್ತಪತ್ರಿಕೆಗಳ ಸ್ವಾತಂತ್ರ್ಯಕ್ಕಾಗಿ ಹೋರಾಡಿದರು. ಆದರೆ 1938ರಲ್ಲಿ ಪ್ರಜಾಪ್ರತಿನಿಧಿ ಸಭೆಯಲ್ಲಿ 56 ಜನ ಸದಸ್ಯರು ಆ ಕೆಟ್ಟ ಕಾನೂನು ಇನ್ನೊಂದು ಅವತಾರದಲ್ಲಿ ಬರುವುದನ್ನು ಅನುಮೋದಿಸಿದಾಗ, ವೃತ್ತಪತ್ರಿಕೆಗಳ ಸ್ವಾತಂತ್ರ್ಯಕ್ಕೆ ಅಸಹನೆಯನ್ನು ತೋರಿಸುವ ಜನರಿದ್ದಾರೆ ಎಂಬುದನ್ನು ಕಂಡಾಗ, ಪತ್ರಕರ್ತರು ಈ ಸ್ವಾತಂತ್ರ್ಯ ಎಷ್ಟು ಮುಖ್ಯ ಎಂಬುದನ್ನು ಕುರಿತು ಪ್ರಜಾಜನಕ್ಕೆ ತಿಳಿವಳಿಕೆ ಕೊಡುವುದು ಅಗತ್ಯ ಎಂದು ಸೂಚಿಸಿದ್ದಾರೆ. ಪತ್ರಿಕಾಕರ್ತನ ಸ್ವಾತಂತ್ರ್ಯ ನಿಜವಾಗಿ ಪ್ರಜಾಜನರಿಗೆ ಸೇರಿದ ಅಧಿಕಾರವೇ ಹೊರತು ಅದು ಅವರೊಬ್ಬರಿಗೆ ಮಾತ್ರ ಸೇರಿದ ಹಕ್ಕೇನೂ ಅಲ್ಲ. ಪತ್ರಿಕೆಗಳಿಗೆ ಎರಡು ಬಗೆಯ ನಿರ್ಬಂಧಗಳು ಸ್ವಭಾವಸಿದ್ಧವಾಗಿಯೇ ಯಾವಾಗಲೂ ಇರುತ್ತವೆ. ಮೊದಲನೆಯದು ವಾಚಕ ಮಹಾಶಯರ ವಿಚಾರಶೀಲತೆ. ಎರಡನೆಯದು ಪತ್ರಿಕೆಗಳಲ್ಲಿ ಇರತಕ್ಕ ಪರಸ್ಪರ ಸ್ಪರ್ಧೆ. ಚರ್ಚೆ ನಡಸುವುದು ವೃತ್ತಪತ್ರಿಕೆಗಳ ಧರ್ಮ. ಆದ್ದರಿಂದ ಆ ಸ್ವಾತಂತ್ರ್ಯಕ್ಕೆ ತಡೆಯುಂಟಾಗಬಾರದು. ವೃತ್ತಪತ್ರಿಕೆಗಳು ತಪ್ಪು ಮಾಡಿದರೆ ಕೋರ್ಟಿನಲ್ಲಿ ಬಹಿರಂಗವಾಗಿ ವಿಚಾರ ನಡೆದು ಶಾಸನಾನುಸಾರದ ತೀರ್ಮಾನವಾಗಬೇಕು. ವೃತ್ತಪತ್ರಿಕೆಯ ವಿಷಯದಲ್ಲಿ ಇಷ್ಟುಮಾತ್ರ ನಿರ್ಬಂಧವಿರಬೇಕೇ ಹೊರತು ಹೆಚ್ಚಿನದಿರಬಾರದು. ಈ ದೃಷ್ಟಿಯಿಂದ ನೋಡಿದರೆ 1940ರ ವೃತ್ತಪತ್ರಿಕಾ ಕಾನೂನು ಪ್ರಜಾಸ್ವಾತಂತ್ರ್ಯಕ್ಕೆ ಹಾನಿಕರವಾದದ್ದೆಂದೇ ಹೇಳಬೇಕು. ಈ ಉಪನ್ಯಾಸದಲ್ಲಿ ಅವರು ಹೇಳಿದ ಇನ್ನೊಂದು ಅಂಶ ಗಮನಾರ್ಹವಾದದ್ದು. ಪತ್ರಕರ್ತರಿಗಾಗಿ

ಒಂದು ಭವಿಷ್ಯನಿಧಿ (ಪ್ರಾವಿಡೆಂಟ್ ಫಂಡ್) ಮತ್ತು ಒಂದು ಕಷ್ಟಕಾಲಕ್ಕೆ ನೆರವು ನಿಧಿ (ಡಿಸ್ಟ್ರೆಸ್ ರಿಲೀಫ್ ಫಂಡ್) ಇವುಗಳ ಸ್ಥಾಪನೆಯು ಅಗತ್ಯ.

ಮೈಸೂರು ಸಂಸ್ಥಾನದ ಪತ್ರಿಕೋದ್ಯೋಗಿಗಳ ಎರಡನೆಯ ಅಧಿವೇಶನ ತಿರುಮಲೆ ತಾತಾಚಾರ್ಯ ಶರ್ಮ ಅವರ ಅಧ್ಯಕ್ಷತೆಯಲ್ಲಿ ಸೆಪ್ಟೆಂಬರ್ 1943ರಲ್ಲಿ ಬೆಂಗಳೂರಿನಲ್ಲಿ ನಡೆಯಿತು. ಅದರಲ್ಲಿ ಭಾಗವಹಿಸಿದ್ದ ಡಿ ವಿ ಜಿ ಯವರು ಪತ್ರಿಕೋದ್ಯೋಗಿಗಳು ಪಡೆಯಬೇಕಾಗಿರುವ ಶಿಕ್ಷಣದ ಆವಶ್ಯಕತೆ ಯನ್ನು ವಿವರಿಸಿದರು.

16-5-1949 ರಲ್ಲಿ ಅಖಿಲ ಭಾರತ ಸಂಪಾದಕರ ಸಮ್ಮೇಳನ ಬೆಂಗಳೂರಿನಲ್ಲಿ ನಡೆಯಿತು. ಆಗ ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದವರು ಡಿ ವಿ ಜಿ. ಭಾರತದ ಗವರ್ನರ್ ಜನರಲ್ ಆಗಿದ್ದ ಸಿ. ರಾಜಗೋಪಾಲಾ ಚಾರ್ಯರು ಸಮ್ಮೇಳನವನ್ನು ಉದ್ಘಾಟಿಸಿದರು. ಸಿ. ಆರ್. ಶ್ರೀನಿವಾಸನ್ ಅವರು ಅಧ್ಯಕ್ಷರು. ಆ ಸಮಯದಲ್ಲಿ ಮಾತನಾಡುತ್ತ ಪತ್ರಕರ್ತರ ನಡವಳಿಕೆ ಯನ್ನು ನಿಯಮಿಸಲು ಒಂದು ನಿಯಮಾವಳಿ ಅಗತ್ಯವೆಂದು ಡಿ ವಿ ಜಿ ಯವರು ಹೇಳಿದರು. ಹಾಗೆಯೇ ಭಾರತವೆಲ್ಲಕ್ಕೂ ಸೇರಿದಂತೆ ಆ ನಿಯಮಗಳ ಉಲ್ಲಂಘನೆ ಯನ್ನು ನಿರ್ಧರಿಸಲು ಮತ್ತು ದಂಡನೆಯನ್ನು ವಿಧಿಸಲು ಸಂಪಾದಕರ ಸಮ್ಮೇಳನ ನಿಯಮಿಸಿದ ಒಂದು ಪತ್ರಕರ್ತರ ನ್ಯಾಯಾಲಯವೂ ಅಗತ್ಯ ವೆಂದರು. ಸರಕಾರವು ಪತ್ರಿಕೆಗಳ ಮೇಲೆ ಯಾವ ವಿಧವಾಗಿಯಾದರೂ ಕ್ರಮ ಮಾಡಬೇಕೆಂದುಕೊಂಡಾಗ, ಸರಕಾರವು, ಶಾಸನ ಸಭೆಯ ಅಧ್ಯಕ್ಷರು, ಸರಕಾರದ ಪ್ರತಿನಿಧಿ, ಸಂಪಾದಕ ಸಮ್ಮೇಳನದ ಪ್ರತಿನಿಧಿ, ಮತ್ತು ಇತರ ಇಬ್ಬರು ಸಾರ್ವಜನಿಕ ಮುಖಂಡರು—ಇವರನ್ನೊಳಗೊಂಡ ಸಮಿತಿಯ ಸಲಹೆ ಯನ್ನು ಪಡೆಯಬೇಕು. ಸ್ವಾತಂತ್ರ್ಯಕ್ಕಾಗಿ ಹೋರಾಟ ಬ್ರಿಟಿಷರು ಭಾರತ ದಿಂದ ತೊಲಗಿದಂದೇ ಮುಗಿಯಲಿಲ್ಲ ಎಂದು ಈ ಸಮಯದಲ್ಲಿ ಅವರು ಹೇಳಿರುವ ಮಾತುಗಳು ಮನನೀಯವಾದವು :

"The struggle for freedom is one that cannot be presumed to have come to an end with the ending of the war or the ending of foregin rule. So long as there is need for authority to regulate and protect life in human society, there will have to be some to exercise authority and others to suffer its incidence: and conflict between the two will so long be natural in some form or other. That calls for the vigilance

of the critic of the ways of authority; and the critic's efficiency must depend upon the extent of liberty made available to him by society. Thus liberty and authority are always engaged in a duel; and if society is not to suffer between them, it should be earnest about appointing and authorising a proper umpire".

ಆ ಸಮಯದಲ್ಲಿಯೇ ವೃತ್ತಪತ್ರಿಕೋದ್ಯೋಗದ ತರಬೇತಿಗಾಗಿ ಒಂದು ಸ್ಕೂಲು ಅಗತ್ಯವೆಂದು ಹೇಳಿದರು. ಆ ವೇಳೆಗಾಗಲೇ ಅವರು ಸ್ಥಾಪಿಸಿದ್ದ ಗೋಖಲೆ ಸಂಸ್ಥೆ ಇದರ ಬಗ್ಗೆ ಕೆಲವು ಸಲಹೆಗಳನ್ನು ಮಾಡಿದೆಯೆಂದೂ, ವೃತ್ತಪತ್ರಿಕೆಗಳ ಕಾರ್ಯಾಲಯಗಳ ಪ್ರತಿಕ್ರಿಯೆಗಾಗಿ ನಿರೀಕ್ಷಿಸುತ್ತಿದೆಯೆಂದೂ ಸೂಚಿಸಿದರು.

ಮೈಸೂರು ರಾಜ್ಯದ ಪತ್ರಿಕೋದ್ಯೋಗಿಗಳ ಸಂಘದ ರಜತ ಮಹೋತ್ಸವವು 29-5-1959 ರಲ್ಲಿ ನಡೆಯಿತು. ಆ ಸಮಾರಂಭದಲ್ಲಿ ಭಾಗವಹಿಸಿ ಡಿ ವಿ ಜಿ ಯವರು ಸಿ. ಹಯವದನರಾಯರ ಭಾವಚಿತ್ರವೊಂದನ್ನು ಅನಾವರಣ ಮಾಡಿದರು.

1927 ರಿಂದಾಚೆಗೆ ವೃತ್ತಪತ್ರಿಕೋದ್ಯೋಗದಲ್ಲಿ ಸಕ್ರಿಯವಾಗಿ ಪಾಲುಗೊಳ್ಳದಿದ್ದರೂ ಅವರು ಪತ್ರಿಕೋದ್ಯೋಗಿಗಳ ಗೌರವವನ್ನೂ ವಿಶ್ವಾಸವನ್ನೂ ಉಳಿಸಿಕೊಂಡು ಬಂದದ್ದೇ ಅಲ್ಲದೆ ಕಿರಿಯ ಪತ್ರಿಕೋದ್ಯೋಗಿಗಳಿಗೆ ಮಾರ್ಗದರ್ಶನ ನೀಡುತ್ತಿದ್ದರು.

ವೃತ್ತಪತ್ರಿಕಾ ಸ್ವಾತಂತ್ರ್ಯವನ್ನು ಕುರಿತು ಬಹು ದೀರ್ಘವಾಗಿ ಆಲೋಚಿಸಿ ವೃತ್ತಪತ್ರಿಕೆ ಮತ್ತು ಶಾಸನ ಸಂಸ್ಥೆಗಳ ಸಂಬಂಧವನ್ನು ಕುರಿತು ಅವರು ನಿಖರವಾದ ಈ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ:

"ಪತ್ರಿಕೆಗಳ ಮೇಲೆ ಅಧಿಕಾರ ಎರಡು ಕಡೆಗಳಲ್ಲಿ ಹಂಚಿರುತ್ತದೆ. ಅದು ಒಂದು ಕಡೆ ಕಾನೂನು ಪ್ರಕಾರದ ಕೋರ್ಟು, ಇನ್ನೊಂದು ಕಡೆ 'ಕೈತೂಕ ಬಾಯಿ ಬಣ್ಣ' ಎಂಬಂತೆ ನಡೆಯುವ ಲೋಕಾಭಿಪ್ರಾಯ. ಈ ಎರಡರ ನಡುವೆ ಮತ್ತಾರಿಗೂ ವೃತ್ತಪತ್ರಿಕೆಗಳನ್ನು ದಂಡಿಸುವ ಅಧಿಕಾರವಿರತಕ್ಕದ್ದಲ್ಲ."

"ರಾಷ್ಟ್ರದ ಪ್ರಜೆಗೆ ಸ್ವಂತಯೋಗಕ್ಷೇಮ ವಿಷಯದಲ್ಲಿರುವ ಕರ್ತವ್ಯವು ಬರಿಯ ಪ್ರತಿನಿಧಿವರಣದಿಂದ ಮುಗಿಯುವುದಿಲ್ಲ. ಆ ಪ್ರತಿನಿಧಿಯ ಕಾರ್ಯನಿರ್ವಾಹವನ್ನು ಪದೇ ಪದೇ ಪರಿಶೀಲಿಸುವುದೂ ರಾಷ್ಟ್ರಕನ ಕರ್ತವ್ಯವಾಗಿರು

ತ್ತದೆ. ಈ ಪರಿಶೀಲನ ಕರ್ತವ್ಯಕ್ಕೆ ಸಾಧಕವಾದದ್ದು ವೃತ್ತಪತ್ರಿಕೆ.

"ನಮ್ಮ ದೇಶದ ಶಾಸಕ ಸದಸ್ಯರು ತಮ್ಮ ಮೇಲೆ ಬರುವ ಟೀಕೆಗಳ ವಿಷಯದಲ್ಲಿ ಅತಿಯಾದ [ಸೆನ್ಸಿಟಿವ್] ತೀವ್ರ ವೇದಿತೆಯನ್ನು ತೋರಿಸುತ್ತಿದ್ದಾರೆ. ಅವರಿಗೆ ತೀವ್ರ ವೇದಿತೆ ಇರುವುದೇನೋ ಒಳ್ಳೆಯದೇ; ಆದರೆ ಮಿತವಾಗಿದ್ದಾಗ ಮಾತ್ರ ಅದು ಒಳ್ಳೆಯದು. ಅತಿಯಾದರೆ ಅದೇ ಒಂದು ರೋಗವಾದೀತು. ಶಾಸಕ ಸಭಿಕರು ತಮ್ಮ ವಿಶೇಷ ಗೌರವದ ಮೇಲಣ ಆತುರದಲ್ಲಿ ತಮ್ಮ ವಿಶೇಷ ಜವಾಬ್ದಾರಿಯನ್ನು ಮರೆಯಬಾರದು. ಶಾಸಕ ಸದಸ್ಯರಿಗೂ ಜವಾಬ್ದಾರಿಯುಂಟು. ಆ ಜವಾಬ್ದಾರಿಯನ್ನು ಅವರ ನೆನಪಿಗೆ ತಂದು ಕೊಡುವ ಸಾಧನವು ವೃತ್ತಪತ್ರಿಕೆಯಲ್ಲದಿದ್ದರೆ ಮತ್ತಾವುದು? ಹೀಗೆ ವಿಚಾರಮಾಡಿ ನೋಡಿದಲ್ಲಿ ನಮ್ಮ ದೇಶದಲ್ಲಿ ಈಗ ಪ್ರಜಾ ಸ್ವಾತಂತ್ರ್ಯಕ್ಕೆ ಒದಗಿಕೊಳ್ಳಬಹುದಾದ ಅಪಾಯಕಾರಕರಲ್ಲಿ ಪ್ರಜಾಪ್ರತಿನಿಧಿಯೇ ಒಬ್ಬನು ಎಂದು ತೋರಿಬರುತ್ತದೆ. ಪ್ರಜೆಗೂ ಅವನ ಸ್ವಾತಂತ್ರ್ಯಕ್ಕೂ ನಡುವೆ ಶಾಸಕ ಸದಸ್ಯನು ತಲೆಹಾಕಿಕೊಂಡು ಬರುತ್ತಾನೆ. ಇದನ್ನು ಪ್ರಜೆ ಗಮನಿಸಬೇಕು. ಮತ್ತು ಅಂಥ ಪ್ರತಿನಿಧಿಯ ನಡವಳಿಕೆಯನ್ನು ಮುಂದಿನ ಚುನಾವಣೆಯ ಕಾಲದಲ್ಲಿ ಜ್ಞಾಪಕಕ್ಕೆ ತಂದುಕೊಳ್ಳಬೇಕು.

"ಶಾಸನ ಸಭೆಯ ಮುಖ್ಯ ಕರ್ತವ್ಯ ಸತ್ಯಭಾಷಣ ಮತ್ತು ಸತ್ಯ ಶೋಧನ. ಈ ಉದ್ದೇಶಕ್ಕೆ ಎಷ್ಟುಮಟ್ಟಿನ ವಿಶೇಷಾಧಿಕಾರಗಳೂ ವಿಶೇಷ ವಿನಾಯತಿಗಳೂ ಆವಶ್ಯಕವೋ ಅಷ್ಟು ಮಾತ್ರಕ್ಕೆ ಮೂಲಶಾಸನವು ಅವಕಾಶ ಕೊಡಬೇಕು. ಅದಕ್ಕಿಂತ ಹೆಚ್ಚಿನ ವಿಶೇಷ ಗೌರವಗಳು ಶಾಸನ ಸಭೆಗೂ ಶಾಸಕರಿಗೂ ಸಲ್ಲಲಾರವು. ಸಭೆಯ ಮುಖ್ಯೋದ್ದೇಶ ಪ್ರಜಾ ಜನದ ಪ್ರಯೋಜನ. ಆದದ್ದರಿಂದ ಶಾಸನ ಸಭೆಯ ಕರ್ತವ್ಯಗಳು ಹೇಗೆ ನಡೆಯುತ್ತಿವೆಯೆಂದು ಮೇಲ್ವಿಚಾರಣೆ ನಡಸುವ ಹಕ್ಕು— ಆ ಸ್ವಾತಂತ್ರ್ಯ, ಆ ಅಧಿಕಾರ, ಆ ಗೌರವ ರಾಷ್ಟ್ರಕ ಪ್ರಜೆಗೆ ಸರ್ವಕಾಲ ಸರ್ವಾವಸ್ಥೆಗಳಲ್ಲಿಯೂ ಇದ್ದೇ ಇರುತ್ತದೆ. ಈ ಸರ್ವಮೂಲವಾದ ಪ್ರಜಾನ್ಯಾಯಾರ್ಹಕ್ಕೆ (Public Right) ಮತ್ತು ಹಾಗೆಯೇ ಪ್ರಜಾಪ್ರತಿನಿಧಿಯಾದ ವೃತ್ತಪತ್ರಿಕೆಯ ನ್ಯಾಯಾರ್ಹಕ್ಕೆ ಊನ ತರದೆ ಇರಬೇಕಾದದ್ದು ಶಾಸನ ಸಭೆಯ ಮತ್ತು ಶಾಸಕ ಸದಸ್ಯನ ವಿಶೇಷ ಗೌರವ. ಸಭೆಯು ಪ್ರಜೆಯನ್ನು ಮೀರಿದ್ದಲ್ಲ."

ಇಂದಿನ ಪರಿಸ್ಥಿತಿಯನ್ನು ಕುರಿತು ಅವರು: "ಇಂಡಿಯಾ ದೇಶದಲ್ಲಿ ಪತ್ರಿಕೆಗಳಿಗೆ ಇನ್ನೂ ಅಷ್ಟು ನಿರ್ಭಯ ಸ್ಥಿತಿ ಬಂದಿಲ್ಲ. ಸ್ವರಾಜ್ಯ ಸಮಾರಂಭ

ವಾದ ಮೇಲಂತೂ ಅನೇಕ ಹೊಸ ನಿರ್ಬಂಧಗಳು ಕಲ್ಪಿತವಾಗಿದ್ದು, ಈಚೀಚೆಗೆ ಆ ನಿರ್ಬಂಧಗಳು ಅಷ್ಟಿಷ್ಟು ತೊಲಗಿವೆ. ಆದರೂ ಸರಕಾರದ ಮನಸ್ಸು ಇನ್ನೂ ಶಂಕೆ ಅಸಹನೆಗಳಿಂದ ಕೂಡಿದ್ದಾಗಿಯೇ ಇದೆ. ಎಂಥಾ ಸಂದರ್ಭದಲ್ಲಿ, ಯಾವ ಹೊಸ ನೆವದಿಂದ, ಎಂಥಾ ಹೊಸ ಅಪಾಯ ಬಂದೀತೋ ಎಂಬ ಭಯ ಪತ್ರಿಕೆಗಳಿಗೆ ಸಂಪೂರ್ಣವಾಗಿ ಹೋಗಿಲ್ಲ", ಎಂದಿದ್ದಾರೆ.

"ವಾಂಛೆಯು ಗೆಲ್ಲುವುದೇ ಸುಖವುಲ್ಲೈ"

ಡಿ ವಿ ಜಿ ಯವರು ಇಷ್ಟೆಲ್ಲ ಕಾರ್ಯಕ್ಷೇತ್ರಗಳಲ್ಲಿ ಪಾಲುಗೊಂಡಿದ್ದರೂ ಮನಸ್ಸನ್ನು "ವನಸುಮ"ದ ಆದರ್ಶದಲ್ಲಿ ನಿಲ್ಲಿಸಿದ್ದರು ಎಂಬುದಕ್ಕೆ ಉದಾಹರಣೆಯಾಗಿ ಅವರು ತಮ್ಮ "ಆತ್ಮ ಗುರು"ಗಳಾದ ನರಸಿಂಹಮೂರ್ತಿಯವರಿಗೆ 22–3–1923ರಲ್ಲಿ ಬರೆದ ಈ ಪತ್ರವನ್ನು ನೋಡಬಹುದು. ಅದರಲ್ಲಿ ಅವರು "You ask whether I am conscious of any mission. What a question to ask! You know nothing of me if you do not know that I have always viewed life as a supreme "Leela" – sport if you please. As such, how could I fall into the error of making a missionary of myself? It is only people wanting in modesty that conceive great ideas of themselves and their so called mission here. So you need have no fear whatever of my ever turning that most insufferable of all bores, a man with a mission" ಎಂದು ಬರೆಯುತ್ತಾರೆ.

ಹಾಗೆಂದ ಮಾತ್ರಕ್ಕೆ ತಮ್ಮ ಕೆಲಸವನ್ನು ಬೇಕೋಬಿಟ್ಟಿಯಾಗಿ ಮಾಡುತ್ತಿದ್ದರೆಂದಲ್ಲ. ಅವರು 9–5–1923ರಲ್ಲ ಮದರಾಸಿನ ಡಾ॥ ಗೋರೂರು ಶ್ರೀನಿವಾಸಮೂರ್ತಿಗಳಿಗೆ ಬರೆದ ಪತ್ರದಲ್ಲಿ, "There are a good many in our day who are ready to serve the country with their speech. But I am looking for those who would serve her by their thought, that is by applying their minds incessantly to the sifting of opinion and argument without fear or bias. "Search with many sighs" — this, I have read, was the motto of Pascal and great is the need today for man with a similar passion for intellectual penance - making, so to say. *Jnanam – Tapah* say the Upanishads." ಎಂದು ತಮ್ಮ ಆದರ್ಶವನ್ನು ವಿವರಿಸಿದ್ದಾರೆ.

ಮಾರ್ಚಿ 1923 ರಲ್ಲಿ ಮೈಸೂರು ಸಂಸ್ಥಾನದಲ್ಲಿ ಒಂದು ಲಾ ಕಾಲೇಜಿನ

ಆವಶ್ಯಕತೆಯನ್ನು ಕುರಿತು ಬರೆದರು. ಅದನ್ನು ಕಂಡ ಮಿರ್ಜಾ ಸಾಹೇಬರು 28-3-1923ರಂದು "I saw your articles in The Hindu on the subject of the proposed Law College and have since discussed the question in all its bearings with Dr. Seal. I am not prepared to say more on the subject as that would mean an expenditure of more time and energy than perhaps that subject warrants" ಎಂದು ಬರೆದರು. ಏಪ್ರಿಲ್ 1923ರಲ್ಲಿ ಅವರು ಸ್ಥಳೀಯ ಸಂಸ್ಥೆಗಳನ್ನು ಕುರಿತು ಒಂದು ಕಾರ್ಯಕ್ರಮ ದಲ್ಲಿ ಪಾಲುಗೊಂಡರು. ಅದನ್ನು ಕುರಿತು "I have listened to much and learnt much more" ಎಂದಿದ್ದಾರೆ.

ಈ ಸಂದರ್ಭದಲ್ಲಿ ಡಿ ವಿ ಜಿ ಯವರ ಗೃಹಕೃತ್ಯವನ್ನು ಕುರಿತ ಒಂದು ದೃಶ್ಯ ಅವರು ಸಾರ್ವಜನಿಕ ಕರ್ತವ್ಯಗಳನ್ನು ನಡಸುವುದರಲ್ಲಿ ಹೇಗೆ ತಮ್ಮ ಸ್ವಂತ ಸಂಕಟಗಳು ಅಡ್ಡಿ ಬರದಂತೆ ನಡೆದುಕೊಂಡರು ಎಂಬುದನ್ನು ತೋರಿಸುತ್ತದೆ. 25-6-1924ರಲ್ಲಿ ಮಿರ್ಜಾ ಅವರು: "His Highness has been pleased to order a present of Rs. 2000/- being paid to you. I am enclosing a cheque for the amount herewith" ಎಂದು ಬರೆದ ಪತ್ರಕ್ಕೆ ಉತ್ತರವಾಗಿ ಡಿ ವಿ ಜಿ "This kindness has simply overwhelmed me and I am made speechless by the magnificence of His Highness's generosity. You could perhaps form some idea of the depth of gratitude in me if I give you just a glimpse of the sorry plight from which you have now rescued me. It had come to my deciding to advertise for a buyer for my books – the dearest of my few poor belongings. I have the latest India paper edition of Encyclopaedia Britannica, The Historian's History and a goodly collection of volumes on literature, philosophy, politics, biography etc. as also some Sanskrit and Kannada books. With these most necessary implements of my trade and best beloved luxuries of my life, I thought I would have to part in order to pay off my debts. I know that the return they could bring is not much. But

that decision is an indication of the degree of my trouble. When such was the distress from which His Highness's munificence has saved me, can "Thank You" be an adequate utterance to express my soul?.... I am aware that I should regard these tokens of his supreme kindness as encouragements and inducements for me to strive better and harder in the service of the country. I know that my best gratitude would in his eyes be to continue doing what little I could towards the spread of higher enlightenment and noble idealism among our men" ಎಂದು ಬರೆದಿದ್ದಾರೆ.

ಇದರ ಮಧ್ಯೆ ಸಾರ್ವಜನಿಕ ಪ್ರಶ್ನೆಗಳ ಪರಿಶೀಲನೆ ನಡೆಯುತ್ತಲೇ ಇತ್ತು.

1925 ರ ಪ್ರಾರಂಭದ ದಿನಗಳಲ್ಲಿ ಸರಕಾರದ ಎಕ್ಸಿಕ್ಯೂಟಿವ್ ಕೌನ್ಸಿಲಿ (ಮಂತ್ರಿ ಮಂಡಳದಲ್ಲಿ) ನಲ್ಲಿ, ವಿಶ್ವ ವಿದ್ಯಾನಿಲಯದ ಕುಲಪತಿಗಳಿಗೂ ಒಂದು ಸ್ಥಾನವನ್ನು ಕೊಡುವ ಯೋಜನೆ ಮಾಡಿದರು. ಆಗ ಕುಲಪತಿಯಾಗಿದ್ದವರು ಬ್ರಜೇಂದ್ರನಾಥ ಸೀಲರು, ದಿವಾನರು ಬ್ಯಾನರ್ಜಿಯವರು. ಈ ಸಲಹೆಯನ್ನು ಡಿ ವಿ ಜಿ ಯವರು ಬಹುವಾಗಿ ಖಂಡಿಸಿ ಫೆಬ್ರವರಿ 1925 ರಲ್ಲಿ ಪತ್ರಿಕೆಗಳಲ್ಲಿ ಬರೆದಿದ್ದರು. ಅದನ್ನು ಕಂಡ ಶ್ರೀನಿವಾಸ ಶಾಸ್ತ್ರಿಗಳು ಡಿ ವಿ ಜಿ ಯವರ ಸಾಮರ್ಥ್ಯವನ್ನು ಕೊಂಡಾಡಿದರಂತೆ.

ಡಿ ವಿ ಜಿ ಯವರು "ಪರಶುರಾಮ" ಎಂಬ ನಾಟಕವನ್ನು 1925 ರಲ್ಲಿ ಬರೆದಿಟ್ಟಿದ್ದರು. ಅದು ಪ್ರಕಟವಾದದ್ದು 1974 ರಲ್ಲಿ. ಅದರಲ್ಲಿ ಬರುವ ಒಂದೆರಡು ಪದ್ಯಗಳು ಅವರ ಅಂದಿನ ಮನಸ್ಸಿನ ಸ್ಥಿತಿಯನ್ನೂ ಅವರು ಅಂದು ನಡೆದುಕೊಂಡ ರೀತಿಯನ್ನೂ ಸೂಚಿಸುವುದರಿಂದ ಆ ಪದ್ಯಗಳನ್ನು ಇಲ್ಲಿ ನೋಡಬಹುದು.

ತಂದೆಯ ಮಾತಿನಂತೆ ನಡೆದ ಪರಶುರಾಮನಿಗೆ, ಜಮದಗ್ನಿಯು ಉಪದೇಶ ಮಾಡುವ ಸಂದರ್ಭದಲ್ಲಿ ಇದು ಬರುತ್ತದೆ.

"ತೀರ್ಥಯಾತ್ರೆಯಿಂದಲೂ ಸಾಧು ಸಹವಾಸದಿಂದಲೂ ಮನಸ್ಸಿಗೆ ಶಾಂತಿಯನ್ನು ತಂದುಕೊಳ್ಳಬೇಕು."

ಧರಣೀಮಾತೆಯ ನೀಂ ಪ್ರದಕ್ಷಿಣೆಯಿನಾರಾಧಿಪ್ಪುದಾ ದೇನಿಯಾ ।
ಪರಿಧಾನಾಕೃತಿ ಗಾತ್ರ ಚಿತ್ರ ಮಹಿಮಾ ಸಂಪರ್ಶನೋಲ್ಲಾಸದಿಂ ॥

ದುರಿತೋದ್ವೇಗವ ನೂಂಕಿ ಕಂಡು ಮನದೊಳ್ ಮಾನುಷ್ಯದಲ್ಪಾರ್ಹಮಂ ।
ಪರಿಪೂತಾತ್ಮತೆಯಾಂತು ಸಂಚರಿಪುದೈ ನಿರ್ವೈರದಿಂ ಭಾರ್ಗವಾ ॥
ಗಿರಿಶೃಂಗಗಳನೇರು ಪುಣ್ಯ ತಟನೀ ತೀರ್ಥಂಗಳಂ ಸಾರು ಸಾ- ।
ದರಮಂತ್ತಲ್ ಬಗೆಗೊಂಡ ಮೌನಿ ಜನದಾವಾಸಂಗಳಂ ಸೇರು ಕಂ- ॥
ದರ ರಮ್ಯಾಂಗಣ ಕಾಂತಿಯಂ ಪುಗು ಮಹಾಕಾಂತಾರ ಸಂಸರ್ಗದಿಂ ।
ತೊರೆ ನಿರ್ವೇದವ ವಿಶ್ವಚಿತ್ರ ಚಕಿತಾಂತರ್ವೃತ್ತಿಯಿಂ ಭಾರ್ಗವಾ ॥
ನವದೇಶಂ ನವಸನ್ನಿವೇಶಮದರೊಳ್ ನಾನಾ ಜನೋತ್ಸಾಹನಂ ।
ನವಶಾಸ್ತ್ರಂ ನವಭಾಷೆ ನೂತನ ಸಮಾಜಾಚಾರ ಶೀಲಂಗಳುಂ ॥
ನವಚಾರಿತ್ರ ನವಾನುಭೂತ ಸುಖದುಃಖಂಗಳ್ ನವಾಭ್ಯಾಸಗಳ್ ।
ನವ ಸಂಪರ್ಕಗಳಿಂತು ಸೇರೆ ನರನುಂ ನಾವೀನ್ಯಮಂ ತಾಳನೇ ॥

ಈ ನಾಟಕ ಬರೆದ ಸುಮಾರಿನಲ್ಲಿಯೇ ಡಿ ವಿ ಜಿ ಯವರು (ಹಿಂದೆಯೇ ಹೇಳಿರುವಂತೆ) ದೇಶೀಯ ಸಂಸ್ಥಾನಗಳ ವಿಷಯದಲ್ಲಿ ಹೆಚ್ಚಿನ ತಿಳಿವಳಿಕೆ ಸಂಪಾದಿಸಿಕೊಳ್ಳುವುದಕ್ಕಾಗಿ ದೆಹಲಿಯ ಪ್ರವಾಸ ಕೈಗೊಂಡರು. ಆಗ ಅವರು ಎಂ. ಹಿರಿಯಣ್ಣನವರ, ಎಂ. ಎನ್. ಕೃಷ್ಣರಾಯರ ತಮ್ಮಂದಿರಾದ ಎನ್. ಸೀತಾರಾಮಯ್ಯನವರ ಅತಿಥಿಯಾಗಿದ್ದರು—ಎರಡು ಎರಡೂವರೆ ತಿಂಗಳು. ಆ ದಿನಗಳನ್ನು ಕುರಿತು ಡಿ ವಿ ಜಿ ಯವರು "ಸೀತಾರಾಮಯ್ಯನವರೂ ನಾನೂ ತುಂಬ ಸಂತೋಷಪಟ್ಟ ದಿನಗಳು ಅವು. ಇಬ್ಬರೂ ಜೊತೆ ಜೊತೆಯಲ್ಲಿ ತಿರುಗಾಡುತ್ತಿದ್ದೆವು. ಕಾಳಿದಾಸನ ಮೇಘಸಂದೇಶ ಪುಸ್ತಕವನ್ನು ಕೈಯಲ್ಲಿ ಹಿಡಿದು ಉಜ್ಜಯಿನಿಗೆ ಹೋಗಿ ಮಹಾಕಾಲ ದೇವಾಲಯವನ್ನೂ ಶಿಪ್ರಾನದಿಯ ಸನ್ನಿವೇಶವನ್ನೂ ನೋಡಿದೆವು. ಇಬ್ಬರೂ ಕುರುಕ್ಷೇತ್ರಕ್ಕೆ ಹೋಗಿ ಪಾಂಡವರ ಕೊಳದಲ್ಲಿ ಸ್ನಾನ ಮಾಡಿದೆವು. ಗೀತಾ ಮಂದಿರಕ್ಕೆ ಹೋದೆವು. ಸ್ಥಾಣೇಶ್ವರಕ್ಕೆ ಹೋಗಿ ಈಶ್ವರ ದರ್ಶನ ಮಾಡಿದೆವು. ಆ ಬಳಿಕ ದುರ್ಗಾ ಸನ್ನಿಧಿಗೂ ಹೋಗಿದ್ದೆವು. ದಾರಿಯಲ್ಲಿ ಎಷ್ಟೋ ಕಾವ್ಯ ಸಂದರ್ಭಗಳ ಸ್ಮರಣೆ ಮಾಡಿ ಪದ್ಯಗಳನ್ನು ಹೇಳಿಕೊಂಡು ವ್ಯಾಖ್ಯಾನ ಮಾಡಿ ಸಂತೋಷಪಟ್ಟೆವು."

ಮರೆವೀಗಲೊಳಿತು ನಿನಗೈ ।
ಮರೆ ನಿನ್ನಳಲುಗಳ ಪರದ ಚಿಂತನೆಯಿಂದಂ ॥
ಪರಿಶುದ್ಧಾತ್ಮರ ದರ್ಶನ ।
ಪರಿಸೇವನ ತೀರ್ಥದಿಂದೆ ಪರಿವುದು ದುರಿತಂ ॥

ಸೇವಿಪ್ಪುದು ನೀಂ ಪ್ರಕೃತಿಯ ।
ದೇವಿಯುವಳ್ ಮಾತೆಯುಖಿಲ ದೇವರ್ಕಳ್ಗಂ ॥
ಜೀವಕೆ ನವ ಶುಚಿ ದೀಪ್ತಿಯು-।
ನೀವಳವಳ್ ಭಾವಕರ್ಗೆ ಸರ್ವಂಸಹೆಯ್ಕೆ ॥

ಮನೆಯ ದೀಪ ಆರಿ ಹೋದ ಸಂಕಟ, ಗೃಹಕೃತ್ಯದ ತೊಂದರೆ ಇವುಗಳಿಗೆ ಸಮಾಧಾನವನ್ನು ಈ ಪ್ರವಾಸದಿಂದ ಕಂಡರು. ತಾವು ಹೆಚ್ಚಿನ ಮಾಹಿತಿಗಾಗಿ ಹೋಗಿದ್ದ ಕೆಲಸವಂತೂ ನಡೆದೇ ಇತ್ತು.

ವಿದ್ಯಾರ್ಥಿಗಳ ಮಾತಾಪಿತೃಗಳು ಮತ್ತು ಇತರ ಸಾರ್ವಜನಿಕರನ್ನೊಳಗೊಂಡ ಸಭೆಯೊಂದು 10.5.1925ರಲ್ಲಿ ಸೇರಿತು. ಆ ಸಭೆಯಲ್ಲಿ ವಿದ್ಯಾಭ್ಯಾಸವನ್ನು ಕುರಿತು ಚರ್ಚೆ ನಡೆದಾಗ ಡಿ ವಿ ಜಿ ಯವರು ಕಾಲೇಜುಗಳಲ್ಲಿ ಅರ್ಥಶಾಸ್ತ್ರ (Economics) ಮತ್ತು ಸಾರ್ವಜನಿಕ ಆಡಳಿತ (Public Administration) ಈ ವಿಚಾರಗಳನ್ನು ಹೇಳಿಕೊಡುವ ವ್ಯವಸ್ಥೆಯಾಗಬೇಕು; ಮುಂದೆ ಸರಕಾರದಲ್ಲಿ ನೌಕರಿ ಮಾಡುವವರಿಗೆ, ಖಾಸಗಿಯಾಗಿ ಕೆಲಸ ಮಾಡುವವರಿಗೆ ಇದರಿಂದ ತುಂಬ ಉಪಯೋಗವುಂಟು ಎಂದು ಸಲಹೆ ಮಾಡಿದರು.

ಮೈಸೂರು ವಿಶ್ವವಿದ್ಯಾನಿಲಯದ ಪುನರ್ವ್ಯವಸ್ಥೆಯಾಗಬೇಕೆಂಬ ಉಪಸಮಿತಿಯ ವರದಿಯೊಂದು ವಿಶ್ವವಿದ್ಯಾನಿಲಯದ ಪರಿಶೀಲನೆಯಲ್ಲಿತ್ತು. ಆ ವರದಿ ಸಾರ್ವಜನಿಕರ ವಿಮರ್ಶೆಗಾಗಿಯೂ ಪ್ರಕಟಿಸಬೇಕೆಂದು, 27.8.1925 ರಲ್ಲಿ ಕೆ.ಪಿ. ಪುಟ್ಟಣ್ಣಶೆಟ್ಟರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಒತ್ತಾಯಿಸಲಾಯಿತು. ಆ ಸಭೆಯಲ್ಲಿ ಪಾಲುಗೊಂಡಿದ್ದ ಡಿ ವಿ ಜಿ ಯವರು ವಿದ್ಯಾಭ್ಯಾಸ ಪದ್ಧತಿಯಲ್ಲಿ ತುಂಬ ಬದಲಾವಣೆಗಳು ಆಗಾಗ ಆಗಬಾರದೆಂದು ಸೂಚಿಸಿದರು.

ಸೆಪ್ಟೆಂಬರ್ 1925ರಲ್ಲಿ "ಬಹು ಕಾಲದಿಂದ ಮೈಸೂರಿನ ಸ್ಥಿತಿಗತಿಗಳನ್ನು ಸ್ವತಃ ಪರಿಶೀಲಿಸಿ ಬಲ್ಲವರಾದ 'ಕರ್ಣಾಟಕ'ದ ಸಂಪಾದಕರಾದ ಡಿ ವಿ ಜಿ ಯವರೂ ಸಹ ಕರ್ಣಾಟಕ ವಿಶ್ವವಿದ್ಯಾಲಯದ ಸ್ಥಾಪನೆಯನ್ನು ಅನುಮೋದಿಸುತ್ತಾರೆ" ಎಂದು 'ವಿಶ್ವಕರ್ಣಾಟಕ' ಪತ್ರಿಕೆ ವರದಿ ಮಾಡಿತು.

ಡಿ ವಿ ಜಿ ಯವರ ಆರ್ಥಿಕ ಪರಿಸ್ಥಿತಿಯನ್ನು ಕಂಡ ವಿಶ್ವೇಶ್ವರಯ್ಯನವರು ಅವರಿಗೆ ಯಾವುದಾದರೂ ಒಂದು ಚಾಕರಿ ಸಂಪಾದಿಸಿಕೊಡಬೇಕೆಂದು, ಬೊಂಬಾಯಿನ "ಸೋಷಿಯಲ್ ರಿಫಾರ್ಮರ್" ಪತ್ರಿಕೆಯ ಸಂಪಾದಕರಾದ ಕೆ. ನಟರಾಜನ್ ಅವರೊಡನೆ ಸಮಾಲೋಚನೆ ನಡಸುತ್ತಲೇ ಇದ್ದರು. ಎಷ್ಟೇ ಕಷ್ಟ ಬಂದರೂ ಡಿ ವಿ ಜಿ ಬೆಂಗಳೂರನ್ನು ಬಿಟ್ಟು ಹೋಗಲೋ ಇನ್ನೊಬ್ಬರ

ಹಂಗಿನಲ್ಲಿ ಕೆಲಸ ಮಾಡಲೋ ಇಷ್ಟ ಪಡಲೇ ಇಲ್ಲ.

ಇವರಿಗೆ ಟ್ರಾನ್ಸ್‌ಲೇಟರ್ ಕೆಲಸ ಕೊಡುವರೆಂಬ ಸುದ್ದಿ ಪತ್ರಿಕೆಗಳಲ್ಲಿ ಪ್ರಕಟವಾದಾಗ ಇವರು ಅದು ನಿರಾಧಾರವಾದುದೆಂದು ಹೇಳಿಕೆಯಿತ್ತರು.

ಮೇ 1926ರಲ್ಲಿ ಸರಕಾರದವರು ಇವರಿಗೆ 500 ರೂಪಾಯಿ ತಲಬಿನ ಮೇಲಿ ಒಂದು ಹುದ್ದೆಯನ್ನು ಕೊಡುವ ಸೂಚನೆ ಮಾಡಿದರು. ಇದನ್ನು ಕುರಿತು ಶ್ರೀನಿವಾಸಶಾಸ್ತ್ರಿಗಳವರಿಗೆ 10.5.1926 ರಲ್ಲಿ “As for my decision, it was as good as made within an hour or so. And it is ‘against’. I was in two minds just for a couple of hours or so; and I now wonder and regret that I should have found myself in that position even for so long. I soon recovered what I may call my first principles; and they decided that I must remain myself and that I must not allow myself to be tempted to become somebody else.

“The matter is to me one of conscience. Some fifteen years ago I resolved that I should lead a particular kind of life devoted to certain objects; and in spite of all that has since happened my yearning for that kind of life and my devotion to those objects are persisting still undiminished. How can I deviate from that course? That I dallied with temptation for so long as two hours before putting it away serves the very salutery purpose of reminding me how far I still am from having absorbed the spirit of true renunciation and sacrifice. How very blessed are they in whom renunciation works spontaneously and without any effort as though it were part of their very nature and enables them to reject without a moment’s thought all that may be inconsistent with their ideals. I pray you, teach me a little of its secret” ಎಂದಿದ್ದಾರೆ.

ವನಸುಮದೊಲೆನ್ನ ಜೀ-
ವನವು ವಿಕಸಿಸುವಂತೆ
ಮನವನನುಗೊಳಿಸು ಗುರುವೇ — ಹೇ ದೇವ.

— ಇದೇ ಅವರ ಪ್ರಾರ್ಥನೆ.

ಬೆಂಗಳೂರಿನ ವೈ ಎಂ ಸಿ ಎ ಯ ಆಶ್ರಯದಲ್ಲಿ ಡಿ ವಿ ಜಿ ಯವರು 28–3–1927 ರಂದು ನಮ್ಮ ಸಮಾಜದಲ್ಲಿ ಆಗಬೇಕಾದ ಬದಲಾವಣೆಗಳನ್ನು ಕುರಿತು ಒಂದು ಉಪನ್ಯಾಸ ಮಾಡಿದರು. ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ ದಿಂದ ನಮ್ಮಲ್ಲಾದ ಬದಲಾಣೆಗಳನ್ನು ವಿವರಿಸುತ್ತ ಹಳೆಯ ಕಂದಾಚಾರಕ್ಕೆ ಮರೆಹೊಗುವುದು ದೇಶಭಕ್ತಿಯ ಕುರುಹೆಂದು ಕೆಲವರು ತಿಳಿದಿರುವುದು ದೇಶ ಮುಂದುವರಿಯುವುದಕ್ಕೆ ಅಡ್ಡಿಯಾಗುತ್ತದೆ. ಭಾರತದ ಸಮಾಜ, ಶಾಸ್ತ್ರಗಳ ಆಧಾರದಮೇಲೆ ನಿಂತಿದ್ದರೂ ಅದು ವಿಮರ್ಶೆಯನ್ನೋ ಪರೀಕ್ಷೆಯನ್ನೋ ಬೇಡ ವೆನ್ನುವುದಿಲ್ಲ. ಆದ್ದರಿಂದ ಶಾಸ್ತ್ರವಿಹಿತವೆಂದು ಬಂದಿರುವ ಅನೇಕ ಅಂಶಗಳನ್ನು ಬುದ್ಧಿಯ ಪರೀಕ್ಷೆಗೆ ಒಳಪಡಿಸಬೇಕು. ಶಾಸ್ತ್ರವನ್ನು ಬಲ್ಲವರೂ ಸಮಕಾಲೀನ ಪಾಶ್ಚಾತ್ಯ ತತ್ತ್ವಜ್ಞಾನವುಳ್ಳವರೂ ಈ ವಿಧವಾದ ವಿಮರ್ಶೆಯನ್ನು ಮಾಡಬಲ್ಲರು. ಈ ಪರೀಕ್ಷೆ ಆಗಾಗ ನಡೆಯಬೇಕು. ಅದಕ್ಕಾಗಿ ಯಾವುದಾ ದರೂ ಒಂದು ಸಂಸ್ಥೆಯ ಅಗತ್ಯವಿದೆ. ಅದಕ್ಕಿಂತ ಮುಖ್ಯವಾಗಿ ಈ ಕೆಲಸ ವನ್ನು ಆಗಮಾಡಿಸುವ ಸಾಮರ್ಥ್ಯವುಳ್ಳ ಜನ ಬೇಕು — ಎಂದು ಹೇಳಿದರು.

1923 ರಿಂದ 27ರ ವರೆಗಿನ ಕಾಲ ಡಿ ವಿ ಜಿ ಯವರು ಧರ್ಮಸಂಕಟ ಗಳನ್ನು ಎದುರಿಸಿದ ಕಾಲ. ಅವರ ಆದರ್ಶ ಪಾಲನೆ ಪರೀಕ್ಷೆಗೆ ಬಂದ ಕಾಲ. ಆಗ ಬರೆದ ಇನ್ನೊಂದು ಪತ್ರ ಅವರ ಮನಸ್ಸಿನ ತುಮುಲವನ್ನು ಪ್ರತಿಬಿಂಬಿಸುತ್ತದೆ. ಅವರಿಗೆ ಮಿರ್ಜಾ ಅವರು ಭಗವದ್ಗೀತೆಯ ಒಂದು ಗ್ರಂಥವನ್ನು ಕಳುಹಿಸಿದು ದಕ್ಕೆ ಉತ್ತರವಾಗಿ ಡಿ ವಿ ಜಿ ಹೀಗೆ ಬರೆದಿದ್ದಾರೆ:

"What a kind and what a noble gift.

"But alas! the gift is one that cannot but provoke a confession. Once upon a time I could flatter myself on my familiarity with the Bhagavad Gita. But now I dread to touch it. The succeeding years since then have discovered for me what mountain heaps of desire, discontent, ambition, anger, love and hate are lying hidden in my nature. How could I avoid twinges of conscience now when an unsuspecting friend thinks me worthy of the great book. Pandit Seshachar's annotation, however clear and careful, cannot carry my soul an inch nearer to salvation. If Dr. Forster the

chemist can invent some method of turning the Gita into a sweet sherbet there would be some hope for such as me. For my difficulty is not about understanding the word, but about absorbing the morality. And now even these great books prove unavailing in a really trying situation. When moral doubt comes, when right is seen to rise in opposition to right, the Gita leaves you to face the pathetic puzzle all unaided and alone. There must perhaps be as many philosophies in the world as there are souls and situations."

ಒರ್ವನೇ ನಿಲುವೆ ನೀನುತ್ಕಟಕ್ಷಣಗಳಲಿ ।
ಧರ್ಮಸಂಕಟಗಳಲಿ, ಜೀವಸಮರದಲಿ ॥
ನಿರ್ವಾಣದೀಕ್ಷೆಯಲಿ, ನಿರ್ಯಾಣಘಟ್ಟದಲಿ ।
ನಿರ್ಮಿತ್ರನಿರಲು ಕಲಿ—ಮಂಕುತಿಮ್ಮ ॥

ಧರ್ಮಸಂಕಟದಿ ಮನ ತಲ್ಲಣಿಸುತಿರುವಂದು ।
ನಿರ್ಮಥಿಸು ನಿನ್ನಾತ್ಮವನೆ ಮಮತೆ ಬಿಟ್ಟು ॥
ನಿರ್ಮಮದ ಸದ್ವಿವೇಕದ ದೀಪಕಿಂತ ನೀಂ ।
ನೆಮ್ಮಲಿನ್ನೇನಿಹುದೋ ?—ಮಂಕುತಿಮ್ಮ ॥

"ಸಣ್ಣಪುಟ್ಟ ಮಮತೆಗಳಿಗೂ ಸ್ವಾರ್ಥಲಾಭದ ಆಶೆಗೂ ಅವಕಾಶ ಕೊಡದಿರುವ ಯಾವುದಾದರೊಂದು ಸಾರ್ವಜನಿಕ ಕಾರ್ಯದಲ್ಲಿ ನಾವು ಸೇರಿಕೊಂಡು ಭಾಗವಹಿಸುವ ಅಭ್ಯಾಸಮಾಡಿಕೊಳ್ಳಬೇಕು. ಹೀಗೆ ನಮ್ಮ ಸಣ್ಣತನವನ್ನು ಸವೆಯಿಸಿ ಆತ್ಮವಿಸ್ತಾರಮಾಡಿಕೊಳ್ಳಬೇಕು".

ಈ ಮನೋಸಿದ್ಧತೆ ಅವರ ಮುಂದಿನ ಜೀವನಕ್ಕೆ ಪೀಠಿಕೆಯಾಯಿತು.

ನ್ಯಾಯವಿಧಾಯಕ ಸಭೆಯಲ್ಲಿ

ಎ. ಆರ್. ಬ್ಯಾನರ್ಜಿಯವರ ದಿವಾನಗಿರಿ ಕೊನೆಗೊಂಡದ್ದು 30-4-1926ರಂದು. ಮಾರನೆಯ ದಿನದಿಂದ ಮಿರ್ಜಾ ಎಂ. ಇಸ್ಮಾಯಿಲ್ ಅವರ ದಿವಾನಗಿರಿ ಪ್ರಾರಂಭ. ಮೈಸೂರು ಸಂಸ್ಥಾನದ ಚರಿತ್ರೆಯಲ್ಲಿ ಅದೊಂದು ಮುಖ್ಯವಾದ ಕಾಲ. ಬ್ರಿಟಿಷ್ ಇಂಡಿಯದಲ್ಲಿ ಕಾಂಗ್ರೆಸ್ ಬೆಳೆಯುತ್ತಿದ್ದ ಕಾಲ. ಭಾರತ ದೇಶದ ಇತರೆಡೆಗಳಲ್ಲಿ ಪ್ರಬಲವಾಗಿದ್ದ ಕಾಂಗ್ರೆಸ್ ಸಂಸ್ಥೆ ಮೈಸೂರು ಸಂಸ್ಥಾನದಲ್ಲಿ ಆಗ ಇನ್ನೂ ಕಾಲಿಟ್ಟಿರಲಿಲ್ಲ. ಆಗ ಇದ್ದದ್ದು ಬ್ರಾಹ್ಮಣೇತರ ಪಕ್ಷವೊಂದೇ.

ಅಷ್ಟು ದಿನಗಳವರೆಗೂ ರಾಜ್ಯಾಂಗದ ಹೊರಗಿದ್ದು ದೇಶದ ವಿದ್ಯಮಾನಗಳನ್ನು ಕುರಿತು ವರದಿಮಾಡಿ, ಅವುಗಳನ್ನು ಕುರಿತು ಟೀಕಿಸಿ, ಸಾರ್ವಜನಿಕ ಚಟುವಟಿಕೆಗಳನ್ನು ಪ್ರಚೋದಿಸಿ, ಜವಾಬ್ದಾರಿ ಸರಕಾರ ಪದ್ಧತಿಯೇ ದೇಶದ ಏಳಿಗೆಗೆ ಬೇಕಾದದ್ದೆಂದು ಹೇಳುತ್ತಿದ್ದ ಡಿ ವಿ ಜಿ ಯವರು ರಾಜಕೀಯದ ಸುಳಿಯೊಳಗೆ ಎಳೆಯಲ್ಪಟ್ಟದ್ದು ಈ ಕಾಲದಲ್ಲಿಯೇ.

ಹಿಂದೆ ತರುಣ ಡಿ ವಿ ಜಿ ಯವರನ್ನು ವಿಶ್ವೇಶ್ವರಯ್ಯನವರು ಮುನಿಸಿಪಾಲಿಟಿಯ ಸದಸ್ಯರನ್ನಾಗಿ ನೇಮಿಸಿದಂತೆ, ಇವರ ರಾಜ್ಯಶಾಸ್ತ್ರ ಪಾಂಡಿತ್ಯವನ್ನು ಕಂಡ, ಇವರ ಸಾರ್ವಜನಿಕ ಸೇವೆಯನ್ನು ಕಂಡ, ಇವರ ನಿಷ್ಪಕ್ಷಪಾತವಾದ ದೃಷ್ಟಿಕೋನವನ್ನು ಕಂಡ, ಮಿರ್ಜಾ ಸಾಹೇಬರ ಸರಕಾರ, ಇವರನ್ನು 27-5-1927ರಲ್ಲಿ ನ್ಯಾಯ ವಿಧಾಯಕ ಸಭೆಗೆ ಸದಸ್ಯರನ್ನಾಗಿ ನೇಮಿಸಿತು. ಇದನ್ನು ಆ ಕಾಲದ ಅನೇಕ ಪತ್ರಿಕೆಗಳು ಸ್ವಾಗತಿಸಿದುವು; ಸಾರ್ವಜನಿಕ ಮುಖಂಡರು ಸಂತೋಷವನ್ನು ವ್ಯಕ್ತಪಡಿಸಿದರು.

ಜೂನ್ 7ನೆಯ ತಾರೀಖಿನ 'ದಿ ಮೈಸೂರ್ ಪೇಟ್ರಿಯಟ್' ಪತ್ರಿಕೆ ಶಿವಮೊಗ್ಗದ ಬಾತ್ಮಿದಾರರು ಕಳುಹಿಸಿದ ಈ ವರದಿಯನ್ನು ಪ್ರಕಟಿಸಿದೆ.

"A scholar in Kannada, keen student of Politics, economy, pioneer in the field of "The Indian India", accomplished writer and speaker, journalist, publisher of no mean calibre Mr. D. V. Gundappa long ago earned his title to a

place in the Councils of the State. His present nomination to the Legislative Council adds lustre to the journalistic world in Mysore and redounds to the credit of the new regime in that it has broken new ground and shown both courage and fresh outlook. Such nominations are on a par with the nominations in British India of tried and able publicists like Mr. V. S. Srinivasa Sastriar."

ಜೂನ್ 9ನೆಯ ತಾರೀಖು ಹಲವರು ಸ್ನೇಹಿತರು ಬೆಂಗಳೂರಿನ ಮಾಡರ್ನ್ ಹಿಂದೂ ಹೋಟಲಿನಲ್ಲಿ ಒಂದು ಸಂತೋಷಕೂಟವನ್ನು ಏರ್ಪಡಿಸಿ ಡಿ ವಿ ಜಿ ಯವರನ್ನು ಅಭಿನಂದಿಸಿದರು. ಅದರಲ್ಲಿ ಕೆ. ಶ್ರೀನಿವಾಸ ಅಯ್ಯಂಗಾರ್ಯರು, ಎಂ. ರಾಮಚಂದ್ರರಾಯರು, ಕೆ. ಶಂಕರನಾರಾಯಣರಾಯರು, ರಾವ್‌ಸಾಹೇಬ್ ತಂಗವೇಲು ಮೊದಲಿಯಾರ್, ಡಾ|| ಅಬ್ಬಾಯಿ ನಾಯುಡು, ಎಸ್. ಜಿ. ಶಾಸ್ತ್ರಿ, ಡಾ|| ಕುನ್ನಿಕಣ್ಣನ್, ಬಿ. ವಿ. ರಾಮ ಅಯ್ಯಂಗಾರ್, ಬಿ. ಕೆ. ಗರುಡಾಚಾರ್, ಬೇಲೂರು ಶ್ರೀನಿವಾಸ ಅಯ್ಯಂಗಾರ್, ಪಾಂಡಿ ಸುಬ್ಬರಾಮಶೆಟ್ಟಿ, ನಾಗೇಶ್ವರ ಅಯ್ಯರ್, ಕೆ. ಟಿ. ಭಾಷ್ಯಂ, ಮೋಕ್ಷಗುಂಡಂ ಕೃಷ್ಣಮೂರ್ತಿ ಮುಂತಾದವರು ಪಾಲ್ಗೊಂಡಿದ್ದರು.

ಡಿ ವಿ ಜಿ ಯವರು ನ್ಯಾಯವಿಧಾಯಕ ಸಭೆಗೆ ನೇಮಕವಾದದ್ದನ್ನು ಕುರಿತು The Wealth of Mysore ಎಂಬ ಪತ್ರಿಕೆ 11–6–1927ರಲ್ಲಿ ಹೀಗೆ ಬರೆಯಿತು:

It is superfluous for us to narrate on this occasion the public services rendered by Mr. Gundappa to the State and its public, both in the press and on public platform. By his disinterested labours he has secured a unique position for himself in the body-politic of Mysore. He has always remained a bold and fearless critic of men and things. People might not agree with some of his views but all the same their admiration for his intellect and independence are spontaneous. Under a better atmosphere and more auspicious circumstances Mr. Gundappa would have been a greater man today."

ಹೀಗೆ ಪ್ರಾರಂಭವಾದ ಶಾಸನ ಸಭೆಯ ಜೀವನ 14 ವರ್ಷಗಳ ಕಾಲ

ನಡೆಯಿತು.

ಇಷ್ಟರಲ್ಲಿ 2ನೆಯ ಜೂನ್, ಡಿ ವಿ ಜಿ ಯವರಿಗೆ ಅರಮನೆಯಿಂದ ಆಹ್ವಾನ ಬಂದಿತ್ತು. "Invitation from the palace. What to do?" ಎಂಬ ಪ್ರಶ್ನೆ ಎದುರಾಯಿತು. 20-6-27ರಲ್ಲಿ ಮಗಳು ತಂಗ ತಂದೆಯವರಿಗೆ ಬರೆದ ಪತ್ರದಲ್ಲಿ "ನೀವು ಅರಮನೆಗೆ ಹೋಗಿದ್ದಿರೆಂದು ಕೇಳಿ ಬಹಳ ಸಂತೋಷ ವಾಯಿತು. ದರ್ಬಾರ್ ಡ್ರೆಸ್ಸಿನಲ್ಲಿ ನೀವು ಇರುವಾಗ ನಿಮ್ಮನ್ನು ನೋಡಬೇಕು ಎನ್ನಿಸಿತು" ಎಂದು ಬರೆದಿದ್ದಾರೆ. ಡಿವಿ ಜಿ ಯವರು ತಾವು ಮಹಾರಾಜರನ್ನು ಕಂಡ ವಿಷಯವನ್ನು ಕುರಿತು ಯಾವಾಗಲೂ ಮಾತನಾಡಲಿಲ್ಲ; ಅದನ್ನು ಕುರಿತು ಬರೆಯಲೂ ಇಲ್ಲ.

ಅವರು ಪುನಃ 1933ರಲ್ಲಿ, 1937ರಲ್ಲಿ, ಮೈಸೂರು ವಿಶ್ವವಿದ್ಯಾನಿಲಯ ಚುನಾವಣಾ ಕ್ಷೇತ್ರದಿಂದ ಚುನಾಯಿಸಿ ಬಂದರು. 1937ರಲ್ಲಿ ಅವರು ಚುನಾವಣೆಗೆ ನಿಲ್ಲಬೇಕೆಂದು ಯೋಚಿಸುತ್ತಿದ್ದಾಗ, ಮೈಸೂರಿನ ಎ. ವೆಂಕಟೇಶಯ್ಯನವರೂ ಕಾಂಗ್ರೆಸ್ ಪಕ್ಷದ ಪರವಾಗಿ ಚುನಾವಣೆಗೆ ನಿಲ್ಲುತ್ತಾರೆಂಬ ಸುದ್ದಿ ಪತ್ರಿಕೆಗಳಲ್ಲಿ ಬಂತು. ಕಾಂಗ್ರೆಸ್ ಪಕ್ಷ ತನ್ನ ಕಾರ್ಯಕ್ಷೇತ್ರವನ್ನು ವಿಶ್ವವಿದ್ಯಾನಿಲಯಕ್ಕೂ ವಿಸ್ತರಿಸುವುದಿಲ್ಲವೆಂಬ ಊಹೆಯಿಂದ ತಾವು ಚುನಾವಣೆಗೆ ನಿಲ್ಲಲು ನಿರ್ಧರಿಸಿರುವುದಾಗಿಯೂ, ಕಾಂಗ್ರೆಸ್ ಸಂಸ್ಥೆಯು ಆ ಕಾಲದಲ್ಲಿ ಇಟ್ಟುಕೊಂಡಿದ್ದ ಗುರಿ ಮತ್ತು ಕಾರ್ಯಮಾರ್ಗಗಳಲ್ಲಿ ತಮಗೆ ಸಹಾನುಭೂತಿ ಮತ್ತು ಏಕಮನಸ್ಕತೆ ಇರುವುದರಿಂದ, ಸ್ಪರ್ಧೆಗೆ ಅವಕಾಶವಿಲ್ಲದಂತೆ ಮಾಡಬೇಕೆಂದೂ ಸ್ನೇಹಿತರಾಗಿದ್ದ, ಕಾಂಗ್ರೆಸ್ ಸಂಸ್ಥೆಯ ಅಧ್ಯಕರಾಗಿದ್ದ ಸಂಪಿಗೆ ವೆಂಕಟಪತಯ್ಯನವರೊಡನೆ ಚರ್ಚಿಸಿ, ಕಾಂಗ್ರೆಸ್ ಸಂಸ್ಥೆ ಸ್ಪರ್ಧೆಗೆ ಬರುವುದಿಲ್ಲವೆಂದು ತೀರ್ಮಾನ ಕೈಗೊಳ್ಳಲಾಗಿ ಡಿ ವಿ ಜಿ ಯವರು ಚುನಾಯಿತರಾದರು.

ನ್ಯಾಯ ವಿಧಾಯಕ ಸಭೆಗೆ ಸದಸ್ಯರಾಗುವುದಕ್ಕೆ ಮೊದಲೇ ಅವರು ಅಲ್ಲಿನ ಸದಸ್ಯರು ಎಷ್ಟು ಸಾಧ್ಯವೋ ಅಷ್ಟರಮಟ್ಟಿಗೆ ಏಕಮನಸ್ಸಿನಿಂದ ಕೆಲಸ ಮಾಡಿದರೆ ಪರಿಣಾಮಕಾರಿಯಾಗಬಹುದು ಎಂಬ ಉದ್ದೇಶದಿಂದ ಅಂಥ ಸದಸ್ಯರ ಸಂಘಟನೆಯೊಂದಕ್ಕೆ ಪ್ರಯತ್ನಪಟ್ಟರು.

ಮೈಸೂರು ನ್ಯಾಯವಿಧಾಯಕ ಸಭೆಯ ರಾಷ್ಟ್ರೀಯ ಪಕ್ಷ (National Party of the Mysore Legislative Council) ಎಂಬ ಪಕ್ಷವೊಂದು 11-12-1924ರಲ್ಲಿ ಸ್ಥಾಪಿತವಾಯಿತು. "ಮೈಸೂರು ಮೈಸೂರಿನವರಿಗೇ" ಎಂಬ ಉದ್ದೇಶವನ್ನು ಹೊಂದಿದ್ದ ಈ ಪಕ್ಷ ಜನಾಭಿಪ್ರಾಯವನ್ನು ಸಂಘಟಿಸಲು

ಎಲ್ಲ ಪ್ರಶ್ನೆಗಳನ್ನು ನಿಷ್ಪಕ್ಷಪಾತ ದೃಷ್ಟಿಯಿಂದ, ಕೋಮುವಾರು ದೃಷ್ಟಿಗೆ ಎಡೆಗೊಡದೆ, ಪ್ರತಿಪಾದಿಸಲು, ಸ್ಥಾಪಿತವಾಯಿತು. ಮೈಸೂರಿನ ವೆಂಕಟ ಕೃಷ್ಣಯ್ಯನವರು, ಶ್ರೀರಂಗಪಟ್ಟಣದ ಬಿ. ನರಸಿಂಗರಾಯರು, ಹೊಸಕೊಪ್ಪ ಕೃಷ್ಣರಾಯರು, ತುಮಕೂರಿನ ಹೆಚ್. ವೆಂಕಟರಾಮಯ್ಯನವರು ಕೋಲಾರದ ವೆಂಕಟೇಶಯ್ಯನವರು ಮುಂತಾದವರು ಇದರ ಪ್ರಾರಂಭ ಸದಸ್ಯರು. ನ್ಯಾಯ ವಿಧಾಯಕ ಸಭೆಯ ಸದಸ್ಯರಿಗೇ ಮೀಸಲಾಗಿದ್ದ ಈ ಸಂಘವು ಡಿ ವಿ ಜಿ ಯವ ರನ್ನು ಗೌರವ ಸದಸ್ಯರನ್ನಾಗಿರಲು ಆಹ್ವಾನಿಸಿ, ಅವರನ್ನು ಗೌರವ ಕಾರ್ಯ ದರ್ಶಿಯನ್ನಾಗಿಯೂ ನೇಮಿಸಿತು. ಬಿ. ಕೆ. ಗರುಡಾಚಾರ್ಯರೂ ಬಿ. ಅಬ್ದುಲ್ ರಹಮಾನ್ ಸಾಹೇಬರೂ ಆಮೇಲೆ ಈ ಸಂಘಕ್ಕೆ ಸೇರಿದರು.

ನ್ಯಾಯವಿಧಾಯಕ ಸಭೆಯ ಸದಸ್ಯರಾದ ನಂತರ ಅವರು ವಾಕ್ ಸ್ವಾತಂತ್ರ್ಯಕ್ಕಾಗಿ ಹೊಡೆದಾಡಬೇಕಾದ ಒಂದೆರಡು ಪ್ರಸಂಗಗಳನ್ನು ಇಲ್ಲಿ ಹೇಳಬಹುದು :

ನ್ಯಾಯವಿಧಾಯಕ ಸಭೆಯಲ್ಲಿ ಅಧಿಕಾರ ವರ್ಗ, ಚುನಾಯಿತರಾದ ಸದಸ್ಯರ ವರ್ಗವೊಂದಿದ್ದರೆ, ವಿಶೇಷವಾದ ವಿದ್ಯೆ, ಸಂಪತ್ತು, ಲೋಕಾನುಭವ ಮೊದಲಾದ ಕಾರಣಗಳಿಗಾಗಿ ನಿಯಮಿತರಾದ ಸದಸ್ಯರಿದ್ದರು—ಡಿ ವಿ ಜಿ ಯವರಿದ್ದಂತೆ. ಸಭೆಯ ಕಲಾಪಗಳಿಗೆ ಅಧ್ಯಕ್ಷತೆ ವಹಿಸುತ್ತಿದ್ದ ಮಂತ್ರಿ ಗಳಾದ ಮ್ಯಾಥನ್ ಸಾಹೇಬರು ನಿಯಮಿತರಾದ ಸದಸ್ಯರು ಯಾವ ವಿಭಾಗ ವನ್ನು–ಅಂದರೆ ವ್ಯಾಪಾರ, ಪರಿಶಿಷ್ಟ ವರ್ಗ, ವಿದ್ಯಾಭ್ಯಾಸ–ಪ್ರತಿನಿಧಿಸುತ್ತಾರೋ ಅದಕ್ಕೆ ಸಂಬಂಧಪಟ್ಟ ವಿಷಯಗಳನ್ನು ಕುರಿತು ಮಾತ್ರ ಪ್ರಶ್ನೆಗಳನ್ನು ಕೇಳ ಬಹುದು, ಗೊತ್ತುವಳಿಗಳನ್ನು ಕಳುಹಿಸಬಹುದು ಎಂಬ ಅಭಿಪ್ರಾಯವನ್ನು ಹೊಂದಿದ್ದರು. ಇದನ್ನು ಪ್ರತಿಭಟಿಸಿ ಡಿ ವಿ ಜಿ ಯವರು ಈ ವಿಶೇಷ ವರ್ಗದ ಸದಸ್ಯರೂ ಎಲ್ಲ ವಿಷಯಗಳನ್ನೂ ಕುರಿತು ಸಭೆಯಲ್ಲಿ ಕಲಾಪಗಳಲ್ಲಿ ಭಾಗ ವಹಿಸಬಹುದೆಂದು ವಾದಿಸಿದರು. ನ್ಯಾಯವಿಧಾಯಕ ಸಭೆಯಲ್ಲಿ 28.6.1929 ರಂದು ಮೂರನೆಯ ಮಂತ್ರಿಗಳಾದ ಕೆ. ಮ್ಯಾಥೆನ್ ಅವರು "I should have expected a gentleman who, as reminded by Mr. Abdul Rahman, has been nominated by government, at least to know the rules on the subject before condemning the actions of the President" ಎಂದಾಗ, ಅದಕ್ಕೆ ಉತ್ತರವಾಗಿ ಡಿ ವಿ ಜಿ : "I must very strongly protest against the implied censure. I think that Government

nominated me not to represent the Government but to represent the public and I represent the pub-lic according to my light. I interpret the Rules according to my understanding and not according to Government's understanding" ಎಂದು ಹೇಳಿ ಅವರ ಬಾಯಿ ಮುಚ್ಚಿಸಬೇಕಾಯಿತು.

ನ್ಯಾಯ-ವಿಧಾಯಕ ಸಭೆಯ ಹಕ್ಕುಗಳಿಗೆ ಚ್ಯುತಿ ಬಂದಿತೆಂಬ ಒಂದು ಪ್ರಕರಣ, ಡಿ ವಿ ಜಿ ಯವರಿಗೆ ಸಂಬಂಧಪಟ್ಟದ್ದು, 1934 ರಲ್ಲಿ ನಡೆಯಿತು.

ಆಗ ಸೇರಬೇಕಾಗಿದ್ದ ಸಭೆಯ ಅಧಿವೇಶನದ ಮುಂದಿಡಲು ಡಿ ವಿ ಜಿ ಎರಡು ಗೊತ್ತುವಳಿಗಳನ್ನು ಕಳುಹಿಸಿದ್ದರು: 1. ರಾಜಕೀಯ ಸುಧಾರಣೆಗಳನ್ನು ಸೂಚಿಸಲು ಒಂದು ಸಮಿತಿ. 2. ಸಂಯುಕ್ತ ಭಾರತ ರಾಷ್ಟ್ರದೊಡನೆ ವಿಲೀನವಾಗುವಾಗ ಬರುವ ಸಮಸ್ಯೆಗಳನ್ನು ಕುರಿತು ಚರ್ಚಿಸಲು ಸಮಿತಿ — ಇವುಗಳ ರಚನೆಯಾಗಬೇಕೆಂದು. ಸಭೆಯ ಅಧ್ಯಕ್ಷರಾದ ದಿವಾನರು ಈ ಗೊತ್ತುವಳಿಗಳನ್ನು ಸಭೆಯ ಮುಂದಿಡಲು ನಿರಾಕರಿಸಿದರು. ಆಗ ಡಿ ವಿ ಜಿ ಈ ಗೊತ್ತುವಳಿಗಳನ್ನು ಕುರಿತು ಮತ್ತು ಇದಕ್ಕೆ ಸಂಬಂಧಪಟ್ಟ ಪ್ರಶ್ನೆಗಳನ್ನು ಚರ್ಚಿಸಿ 23-6-1934 ರ ಹಿಂದೂ ಪತ್ರಿಕೆಯಲ್ಲಿ ಒಂದು ಲೇಖನವನ್ನು ಬರೆದರು. ಇದನ್ನು ಕಂಡ ಸಭಾಧ್ಯಕ್ಷರು ಆ ಅಧಿವೇಶನದ ಕೊನೆಯ ದಿನ, ಡಿ ವಿ ಜಿ ಯವರು ತಾವು ನಿರಾಕರಿಸಿದ ಗೊತ್ತುವಳಿಯನ್ನು ಹೀಗೆ ಪತ್ರಿಕೆಗಳಲ್ಲಿ ಪ್ರಕಟಿಸಿದ್ದು ಸಭೆಯ ಹಕ್ಕುಬಾಧ್ಯತೆಗಳಿಗೆ ಚ್ಯುತಿತಂದಿತೆಂದು ಹೇಳಿದರು. ಅದಕ್ಕೆ ಜವಾಬು ಕೊಡಲು ಡಿ ವಿ ಜಿ ಯವರಿಗೆ ಅವಕಾಶ ಕೊಡಲೂ ಇಲ್ಲ. ನಿರಾಕರಿಸಲ್ಪಟ್ಟ ಗೊತ್ತುವಳಿಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಿದ್ದು ಯಾವ ಹಕ್ಕಿಗೂ ಚ್ಯುತಿ ತರಲಿಲ್ಲವೆಂದು, ಡಿ ವಿ ಜಿ ಯವರ ನಿಲುವನ್ನು ಸಮರ್ಥಿಸಿ, ಹಿಂದೂ ಪತ್ರಿಕೆ ಸಂಪಾದಕೀಯವಾಗಿ ಡಿ ವಿ ಜಿ ಯವರಿಗೆ ಬೆಂಬಲ ನೀಡಿತು. ಆಗ ಮದರಾಸಿನಲ್ಲಿ ಪ್ರಕಟವಾಗುತ್ತಿದ್ದ "ಪ್ರಜಾಮತ" ಪತ್ರಿಕೆಯ ಪ್ರಾರ್ಥನೆಯಂತೆ, ಡಿ ವಿ ಜಿ ಯವರು ಮೈಸೂರು ಶಾಸನ ಸಭಾ ಮರ್ಯಾದೆಯನ್ನು ಕುರಿತು ಮಿರ್ಜಾರವರು ಮಾಡಿದ ಟೀಕೆಗೆ ಒಂದು ಉತ್ತರವನ್ನು ಕೊಟ್ಟಿದ್ದಾರೆ (13-7-1934). ಅದು "ಪ್ರಜಾಮತ"ದ 'ಸ್ಪೆಷಲ್ ಸಪ್ಲಿಮೆಂಟಾ'ಗಿ ಬಂದಿದೆ. ಸಭಾ ಮರ್ಯಾದೆಯನ್ನು ಕುರಿತು, ಸಭಾಧ್ಯಕ್ಷರನ್ನು ಕುರಿತು ಅವರು ಅಂದು ಹೇಳಿದ ಮಾತುಗಳು ಇಂದಿಗೂ ಜ್ಞಾಪಕದಲ್ಲಿಟ್ಟುಕೊಳ್ಳಬೇಕಾದವುಗಳು. ಶಾಸನ ಸಭೆಗಳ ಕಾರ್ಯವಿಧಾನವನ್ನು ಕುರಿತು ಅವರು

ಎಷ್ಟು ಆಳವಾಗಿ ವಿಪುಲವಾಗಿ ಓದಿದ್ದರು ಎಂಬುದು ಆ ಲೇಖನದಿಂದ ತಿಳಿದು ಬರುತ್ತದೆ. ಆ ಲೇಖನದ ಒಂದೆರಡು ವಾಕ್ಯಗಳನ್ನು ಇಲ್ಲಿ ಉದಾಹರಿಸಬಹುದು.

The Mysore Legislative Council has not "constantly" declared any act or forbearance as regards matter disallowed by its President to be a privilege.

It is however, very reassuring to see the analogy of the British Parliament commended and the authority of Parliamentary practice invoked after the requiem on Parliamentary democracy heard from the lips of Sir Mirza Ismail just two weeks ago. If he would establish Parliamentary institutions and traditions in this country, why — we have no quarrel at all. That he is not doing it is our one grievance now. That he is actively discouraging it is our one chagrin today in an otherwise forward-looking Mysore.

In writing my article in 'The Hindu', my purpose was to show the limitations of the existing Constitution in Mysore, in other words to let the public see how under the existing Constitution it is impossible for a non-official to bring certain vital matters within the cognisance of the Legislature. Sir Mirza desires not only that we should remain gagged on the floor of the House, but that we should remain gagged even outside as to what we suffer inside. He does not admit that the general public of the country is a higher tribunal than the Legislature which it creates. My position is different. I think that the public of the country which elects the legislature is a higher authority than the Legislature; and that if the representatives of the public are under any disabilities or handicaps they have not only the right, but also the duty of reporting their difficult position to the people who elects them.

ಮದರಾಸಿನ "ಜಸ್ಟಿಸ್" ಪತ್ರಿಕೆ ಸಂಪಾದಕೀಯ ಲೇಖನದಲ್ಲಿ ಮಿರ್ಜಾ ರವರನ್ನು ಸಮರ್ಥಿಸಿ ಲೇಖನ ಬರೆಯಿತು.

ಈ ಪ್ರಕರಣದಂಥಾದ್ದೇ ಪುನಃ 1941ರಲ್ಲಿ ನಡೆಯಿತು. ಆಗ ದಿವಾನ್-

ಅಧ್ಯಕ್ಷರ ಟೀಕೆಗೆ ಒಳಗಾದವರು ಕೆ. ಚೆಂಗಲರಾಯ ರೆಡ್ಡಿಯವರು. ಆಗ ಕಾಂಗ್ರೆಸ್‌ನ ಕಾರ್ಯದರ್ಶಿಯವರಾಗಿದ್ದ ಕೆ. ಪಟ್ಟಾಭಿರಾಮನ್ ಅವರು ಡಿ ವಿ ಜಿಯವರ ಮಾರ್ಗದರ್ಶನವನ್ನು ಕೋರಿದಾಗ ಡಿ ವಿ ಜಿ ಯವರು ಅವರಿಗೆ ಒಂದು ಪತ್ರ ಬರೆದು, 1934ರ ಕಥೆಯನ್ನು ಜ್ಞಾಪಿಸಿಕೊಂಡು ಹೀಗೆ ಬರೆದರು (27.11.1941):

"But I would state the view I held, for what it may be worth, in the following form:

1. The member of a house of legislature, whose President is not amenable to its control and where rules of business are not of its own making, is free, when he is dissatisfied with any ruling or decision of the President, to lay a complaint before the public. The member's ultimate responsibility is to the public.

2. Even when the President is an elected one, if the subject matter of the member's complaint is the President's conduct, the question of the member's propriety or impropriety is one fit to be considered by the whole house and not by the President alone.

3. Privilege cannot be a matter of arbitrary adoption. It must have an intelligible basis. The privileges of the British Parliament are a matter of historic growth and are a necessity for its free and efficient functioning. So the test to be applied is the need as viewed in relation to functioning; and the entire field of function should be kept in view. If you prefer to have parliamentary forms in your country, you must take the essential points of the whole ideology, and not merely one convenient bit here and another convenient bit there, ignoring or rejecting the rest. The whole house, keeping in view its experience and also examples elsewhere must define what privileges are necessary to its functioning and define also the machinery and method whereby questions may be decided.

ಹಿಂದಿನ ಕಥೆಯ ಮುಕ್ತಾಯವನ್ನು ಕುರಿತು ಹೀಗೆ ಬರೆದರು:

I should add that after my statement of July 1934 was published in the papers ('The Hindu' making an independent comment), there was no reference made to this action of mine (or of 'The Hindu') by the President of the Mysore Legislative Council although I attended many meetings of that body subsequently as a member. If I was guilty of a second breach of privilege, it was apparantly condoned. Or may I flatter myself that my article succeeded in persuading the then President to appreciate my point of view and tacitly revise his previous ruling?

Holding the above views, I do not see how Mr. Changalaraya Reddy can be found fault with. He has performed a public duty.

ಅವರ ಶಾಸಕ ಜೀವನದ ಇನ್ನೊಂದು ಪ್ರಕರಣವೂ ಬೋಧಪ್ರದವಾದದ್ದೇ. 28.11.1937ರಲ್ಲಿ ಮೈಸೂರು ಕಾಂಗ್ರೆಸ್ ಬೋರ್ಡಿನ ಕಾರ್ಯದರ್ಶಿಯವರು ಡಿ ವಿ ಜಿ ಯವರಿಗೆ ಒಂದು ಪತ್ರ ಬರೆದು, ಡಿ ವಿ ಜಿ ಯವರು ಸುಮಾರು 28.10.37 ರ ಸಮಯದಲ್ಲಿ ಕೆಲವು ಜನ ಪ್ರಕಟಿಸಿದ ಹೇಳಿಕೆಯೊಂದಕ್ಕೆ ಸಹಿ ಹಾಕಿರುವುದು ಆಕ್ಷೇಪಣೀಯವೆಂದೂ, ತಾನು ಕಾಂಗ್ರೆಸಿನೊಂದಿಗೆ ಇರುವೆನೆಂದು ಮಾಡಿದ ಪ್ರತಿಜ್ಞೆಗೆ ವಿರೋಧವಾಗಿರುವುದೆಂದೂ, ಆದ್ದರಿಂದ ಅವರ ಈ ನಡವಳಿಕೆಗಾಗಿ ವಿವರಣೆ ನೀಡಬೇಕೆಂದೂ, ಮತ್ತು ಬೋರ್ಡಿನವರ ತೀರ್ಮಾನದ ಪ್ರಕಾರ ಅವರು ಶಾಸನ ಸಭೆಯ ಸದಸ್ಯತ್ವಕ್ಕೆ ರಾಜೀನಾಮೆ ಕೊಡಬೇಕೆಂದೂ ಕೋರಿದರು.

ಡಿ ವಿ ಜಿ ಯವರು ತಮ್ಮ 1.12.1937 ರ ಉತ್ತರದಲ್ಲಿ ತಾವು ಎಲ್ಲ ವಿಷಯಗಳಲ್ಲೂ ಕಾಂಗ್ರೆಸ್ಸನ್ನೇ ಅನುಸರಿಸುವುದಾಗಿ ಯಾವ ವಾಗ್ದಾನವನ್ನೂ ಮಾಡಲಿಲ್ಲವೆಂದೂ, ಶ್ರೀಮನ್ಮಹಾರಾಜರ ಆಶ್ರಯದಲ್ಲಿ ಜವಾಬ್ದಾರಿ ಸರಕಾರದ ಸಾಧನೆಗೆ ತಾವು ಮೈಸೂರಿನಲ್ಲಿ ಕಾಂಗ್ರೆಸ್ ತನ್ನ ಚಟುವಟಿಕೆಗಳನ್ನು ಪ್ರಾರಂಭಿಸುವುದಕ್ಕೆ ಎಷ್ಟೋ ವರ್ಷಗಳಿಗೆ ಹಿಂದಿನಿಂದಲೂ ಹೋರಾಡುತ್ತಿರುವುದಾಗಿಯೂ, ಅದೇ ಗುರಿಯನ್ನು ಕಾಂಗ್ರೆಸ್ಸೂ ಹೊಂದಿದ್ದರಿಂದ ಅದನ್ನು ತಾವು ಒಪ್ಪಿಕೊಂಡದ್ದಾಗಿಯೂ, ಮತ್ತಿತರ ವಿಷಯಗಳಲ್ಲಿ ತಾವು ಸ್ವತಂತ್ರರೆಂದೂ ಬರೆದರು. "May I say it is the Congress Board that has since changed? It seems to me that the Board of today is

not, except in a technical sense, the same as the Board that was working seven months ago. I could not then detect in it any indications of the methodology now in vogue. While I subscribe to the Congress Board's old objective of responsible government I cannot accept its recent methods of work and would adhere to the old peaceful, lawful and constitutional methods contemplated in its own pledge". ಪಾರ್ಟಿಗಳ ಹಿಡಿತ ಎಂಥಾದ್ದು ಎಂಬುದರ ಮೊದಲ ಅನುಭವ ಡಿ ವಿ ಜಿ ಯವರಿಗೆ ಆದದ್ದು ಆಗ.

ಡಿ ವಿ ಜಿ ಯವರೊಡನೆ ನ್ಯಾಯವಿಧಾಯಕ ಸಭೆಯ ಸದಸ್ಯರಾಗಿದ್ದವರು ಅವರನ್ನು ಕುರಿತು ಹೇಳಿರುವ ಮಾತುಗಳನ್ನು ನೋಡಿದರೆ ಅವರ ಕಾರ್ಯ ನೀತಿಯ ಬಗೆಗೆ ನಮಗೆ ತಿಳಿಯುತ್ತದೆ.

"ಶಾಸನ ಸಭೆಗೆ ನಾನು ಪ್ರವೇಶಮಾಡಿದ್ದು 1937 ನೆಯ ವರ್ಷದ ಜೂನ್ ತಿಂಗಳಲ್ಲಿ. ಹೊಸದಾಗಿ ಸದಸ್ಯರಾದವರು ರಾಜಭಕ್ತಿಯ ಪ್ರಮಾಣ ವಚನವನ್ನು ಸ್ವೀಕರಿಸುವ ಸಮಯದಲ್ಲಿ ಇಂಗ್ಲಿಷ್ ನಮೂನೆಗೆ ಸಹಿ ಮಾಡಿ ಪ್ರಮಾಣ ಮಾಡುತ್ತಿದ್ದುದನ್ನು ಕಂಡ ನಾನು, ಕನ್ನಡದ ನಮೂನೆ ಇರುವಾಗ ಕೂಡ ಇಂಗ್ಲೀಷ್ ನಮೂನೆಯ ಗೋಜೇಕೆ ಎಂದು ಕನ್ನಡದಲ್ಲೇ ರಾಜ ಭಕ್ತಿಯ ಪ್ರಮಾಣ ಸ್ವೀಕರಿಸಿದೆ. ಹೀಗೆ ಮಾಡಲು ನನಗೆ ಶ್ರೀ ಡಿ ವಿ ಜಿ ಯವರಿಂದ ಬೆಂಬಲ ದೊರೆಯಿತು. ಅಲ್ಲಿಂದಾಚೆಗೆ ಸ್ವಲ್ಪ ಧೈರ್ಯ ತಂದು ಕೊಂಡು ಅವರ ಮತ್ತು ಇತರ ಮಿತ್ರರ ಸಹಕಾರದಿಂದ ಅನೇಕರು ಕನ್ನಡವಲ್ಲಿ ಮಾತನಾಡಲಾರಂಭಿಸಿದೆವು" ಎಂದು ಶ್ರೀ ಬಿ. ಆರ್. ಪುಟ್ಟನಂಜಪ್ಪನವರು ಜ್ಞಾಪಿಸಿಕೊಳ್ಳುತ್ತಾರೆ. (ಕನ್ನಡ ನುಡಿ–20.9.1940)

ಜನಾಬ್ ಜೆ. ಮಹಮದ್ ಇಮಾಂ ಅವರು : "ಚುನಾಯಿಸಲ್ಪಟ್ಟ ಸದಸ್ಯರು ಮೇಧಾವಿಗಳೂ ವಾಚಾಳಿಗಳೂ ಆಗಿರುತ್ತಿದ್ದರು. ಅವರ ಭಾಷಣ ಮತ್ತು ಟೀಕೆಗಳು ಉನ್ನತ ಮಟ್ಟದಲ್ಲಿಯೂ ರಚನಾತ್ಮಕವಾಗಿಯೂ ಇರು ತ್ತಿದ್ದವು. ಅನಾವಶ್ಯಕವಾದ ಟೀಕೆಗಳು ಬಹು ಅಪರೂಪ. ಶ್ರೀಗಳಾದ ಖಾನ್ ಬಹದ್ದೂರು ಅಬ್ಬಾಸ್ ಖಾನ್, ಡಿ.ವಿ. ಗುಂಡಪ್ಪ, ಡಿ.ಹೆಚ್. ಚಂದ್ರಶೇಖರಯ್ಯ, ರಾವ್ ಸಾಹೇಬ್ ಚನ್ನಯ್ಯ, ನರಸಿಂಗರಾವ್, ಹೊಸಕೊಪ್ಪ ಕೃಷ್ಣರಾವ್, ಡಿ.ಎಸ್.ಮಲ್ಲಪ್ಪ, ಪರಮಶಿವಯ್ಯ, ಯಂ. ರಾಮಚಂದ್ರರಾವ್, ಸರ್ ಪುಟ್ಟಣ್ಣ ಶೆಟ್ಟರು, ಹಾಸನದ ವೆಂಕಟೇಶಯ್ಯ, ಎಸ್.ಎಲ್. ಮನ್ನಾಜಿ ರಾವ್, ಇವರ ಭಾಷಣಗಳ ಶೈಲಿ, ವಾಕ್ ಚಾತುರ್ಯ, ರಚನಾತ್ಮಕ ಟೀಕೆಗಳು, ಆದರ್ಶ

ನೀಯುವಾಗಿವೆ. ಈ ಮಟ್ಟದ ಭಾಷಣಗಳು ಈಗಿನ ಶಾಸನ ಸಭೆಗಳಲ್ಲಿ ಕೇಳು ವುದು ಬಹಳ ವಿರಳವೆ." (ಮೈಸೂರು : ಆಗ ಮತ್ತು ಈಗ)

ಮಾರ್ಲೆ, ಗ್ಲಾಡ್‌ಸ್ಟನ್ ಮಹಾಪುರುಷನನ್ನು ಕುರಿತು : "Mr. Gladstone had given proof that he knew how to embody sentiment in acts of Parliament and he associated it with the broadest ideas of citizenship and policy. These speeches were not a manifesto or a programme ; they were a survey of the princlples of the statesmanship that befitted the period" ಎಂದಿದ್ದಾನೆ.

ಡಿ ವಿ ಜಿ ಯವರು ನ್ಯಾಯವಿಧಾಯಕ ಸಭೆಯಲ್ಲಿ ಮಾಡಿದ ಭಾಷಣಗಳ ವಿಷಯದಲ್ಲಿಯೂ ಈ ಮಾತುಗಳನ್ನೇ ಹೇಳಬಹುದು. ಯಾವ ವಿಷಯವನ್ನು ಕುರಿತು ಮಾತನಾಡಲಿ, ಆ ಸಂಗತಿಯನ್ನು ಎಲ್ಲ ದೃಷ್ಟಿಕೋನಗಳಿಂದಲೂ ನೋಡಿ, ಅದರ ಅನುಕೂಲ ಅನಾನುಕೂಲಗಳನ್ನು ವಿವರಿಸಿ, ಅದರಿಂದ ದೇಶದ ಜನದ ಮೇಲಾಗುವ ಪರಿಣಾಮವನ್ನು ಎತ್ತಿತೋರಿಸುವುದು ಅವರ ಮಾರ್ಗ ವಾಗಿತ್ತು. ದೇಶಹಿತವೆಂಬುದನ್ನು ಒಂದು ನಿಯತ ಸ್ವರೂಪದಲ್ಲಿ ತೋರಿಸಿದ ಹಿರಿಮೆ ಅವರದು. ಅವರು ಅನುಸರಿಸುತ್ತಿದ್ದ ಮಾರ್ಗ "ರಿಆಕ್ಷನರಿ", ಪ್ರಗತಿ ವಿರೋಧವಾದದ್ದು, ಎಂದು ಮೇಲ್ನೋಟಕ್ಕೆ ಅನ್ನಿಸುವಂತಿದ್ದರೂ, ಅವರ ನಿಲುವು ಜನದ ಮನೋಗತವನ್ನು ತಿಳಿದದ್ದು ಎಂಬುದರಲ್ಲಿ ಸಂದೇಹವಿಲ್ಲ. ಮತ್ತು ಅವರು ಶಾಸನದಿಂದಲೇ ಎಲ್ಲವೂ ಸಾಧ್ಯವಾಗಿಬಿಡುತ್ತದೆ ಎಂಬ ಭ್ರಾಂತಿ ಯಿದ್ದವರಲ್ಲ. ಜನರಲ್ಲಿ ವಿದ್ಯಾಭ್ಯಾಸ ಹೆಚ್ಚಿದಂತೆ, ವಿವೇಕ ಬೆಳೆದಂತೆ ಅನೇಕ ಸುಧಾರಣೆಗಳು ಅರ್ಥಪೂರ್ಣವಾಗುತ್ತವೆ ಎಂಬುದೇ ಅವರ ಅಭಿಪ್ರಾಯ. ಅತಿ ಪ್ರಶ್ನೆಗಳು ಅವರಿಗೆ ವರ್ಜ್ಯವಾಗಿದ್ದುವು.

ಡಿ ವಿ ಜಿ ಯವರ ಎಲ್ಲ ಭಾಷಣಗಳ ಪಲ್ಲವಿಯೂ ಒಂದೇ ಆಗಿತ್ತು : ಜವಾಬ್ದಾರಿ ಸರಕಾರದ ಸ್ಥಾಪನೆ.

25.6.1929ರಲ್ಲಿ ಮಾತನಾಡುತ್ತ ದೇಶದ ಎಲ್ಲೆಡೆಯಲ್ಲಿಯೂ ಒಂದು ಹೊಸದೃಷ್ಟಿ ಒಂದು ಹೊಸಮನೋಭಾವ ಬರುತ್ತಲಿದೆ ಎಂದು ಹೇಳಿ : "These are matters which a statesmanly Government has to take account of and prepare the country for the changes that are to come. I therefore entreat the Government to prepare themselves and also to prepare us for the constitutional

changes that are desired—constitutional changes tending in to direction of Responsible Government" ಎಂದು ಸರಕಾರದ ಜವಾಬ್ದಾರಿಯತ್ತ ಗಮನ ಸೆಳೆದರು.

ಮೈಸೂರಿನಲ್ಲಿ ರಾಜಕೀಯ ಸುಧಾರಣೆಗಳನ್ನು ಶಿಫಾರಸು ಮಾಡಲು ಒಂದು ಸಮಿತಿಯನ್ನು ನೇಮಿಸಬೇಕೆಂದು ಡಿ. ಎಸ್. ಮಲ್ಲಪ್ಪನವರು ಒಂದು ಗೊತ್ತುವಳಿಯನ್ನು 18-12-1928 ರಂದು ಸಭೆಯ ಮುಂದೆ ತಂದರು. ಅದಕ್ಕೆ ತಮ್ಮ ಸಮ್ಮತಿಯನ್ನು ಸೂಚಿಸುತ್ತ ಡಿ ವಿ ಜಿ, "I shall not go into the details of the philosophy of democracy. At this hour of the day it is playing king Canute to say that we in Mysore are not going to have Responsible Government. The waves of democratic ideals in British India have been beating even upon the borders of our State. Another argument in support of this claim for another step in advance towards constitutional Government is my very fervent hope that further political progress will act as solvent for all our communal misunderstanding and dissention" ಎಂದರು.

ಮರುದಿನ ಈ ಪ್ರಶ್ನೆಯನ್ನೇ ಕುರಿತು ನಡೆದ ಚರ್ಚೆಯಲ್ಲಿ ಕೆಲವು ಸದಸ್ಯರು ಪ್ರಜಾಪ್ರಭುತ್ವದ ನ್ಯೂನತೆಗಳನ್ನು ಪ್ರಸ್ತಾಪಿಸಿ ಅದು ಪಾಶ್ಚಾತ್ಯ ದೇಶಗಳಲ್ಲಿಯೂ ಸಫಲವಾಗಿಲ್ಲ, ಜನಕ್ಕೆ ನೆಮ್ಮದಿಯನ್ನೂ ತಂದಿಲ್ಲ ಎಂಬ ಮಾತನ್ನಾಡಿದರು. ಅದನ್ನು ಕುರಿತು ಡಿ ವಿ ಜಿ "I wholly accept that soft impeachment of democracy. I don't think anyone here is out to prove that democracy is some substitute for the kind of paradise of which all of us read in the scriptures. Democracy has its imperfections. But all the same it is admitted everywhere that democracy even though handled by the incompetent is, on the whole better than Government by a group or a clique—Let alone Government by one person..... Responsible Government, we all acknowledge, can be attained in its possible perfection,—conceivable perfection—only by successive stages, by several processes of education of the people. We therefore are not, in this Resolution, asking for one sudden forward lift to the acme of Responsible Government.

To use the words of Cardinal Newman "I do not to ask to see the distant scene. One step is enough for me. It is in that spirit that we are now asking, not for the introduction of reforms, but merely for the appointment of a committee" ಎಂದಿದ್ದಾರೆ.

ಈ ಗೊತ್ತುವಳಿಯನ್ನು 22 ಸದಸ್ಯರು ಅನುಮೋದಿಸಿದರು. 23 ಸರಕಾರದ ಸದಸ್ಯರು ವಿರೋಧಿಸಿದರು.

ಸಮಾಜ ಸುಧಾರಣೆಯ ವಿಷಯ ಬಂದಾಗ, ಮತ ತತ್ತ್ವಗಳ ವಿಷಯ ಬಂದಾಗ ಅವರು ಯಾವಾಗಲೂ ಎಚ್ಚರಿಕೆಯ ಮಾತನ್ನೇ ಹೇಳುತ್ತಿದ್ದರು.

ಉದಾಹರಣೆಗೆ ವೇದ ಪಾಠವನ್ನು ಬ್ರಾಹ್ಮಣೇತರ ವಿದ್ಯಾರ್ಥಿಗಳಿಗೆ ಹೇಳಿಕೊಡುವ ವಿಷಯದಲ್ಲಿ "I may once fora ll sayth at I personally-consider the request not only a reasonable one but also a patriotic one" ಎಂದು ಆ ಸೂಚನೆಗೆ ಸಮ್ಮತಿಸಿ, ಆ ಪ್ರಶ್ನೆಯ ಇನ್ನೊಂದು ಮುಖ ವನ್ನು ನಾವು ಗಮನದಲ್ಲಿರಿಸಿಕೊಳ್ಳಬೇಕೆಂದರು (28-6-1929). ವೇದ ಉಪಾಧ್ಯಾಯರ ಅಭಿಪ್ರಾಯವೂ ಒಂದುಂಟು. ಯಾವ ಕ್ರಮದಲ್ಲಿ ವೇದಪಾಠ ವಾಗಬೇಕು, ಯಾರಿಗೆ ಮತ್ತು ಯಾರಿಂದ ಇವೆಲ್ಲವನ್ನೂ ವೇದಗಳು ನಿರ್ಧರ ಪಡಿಸಿವೆ. ಅದನ್ನು ಗಮನದಲ್ಲಿರಿಸಿಕೊಂಡು ಮುಂದಿನ ಕ್ರಮ ಕೈಗೊಳ್ಳಬೇಕು. ಇದನ್ನು ಗಮನದಲ್ಲಿರಿಸಿಕೊಂಡಿದ್ದರೆ ಸಂತೋಷ ಎಂದು ತಮ್ಮ ಅಭಿಪ್ರಾಯ ವನ್ನು ವಿವರಿಸಿದ್ದಾರೆ.

2-7-1935 ರಂದು ಬಾಲ ವಿವಾಹ ನಿರೋಧ ಕಾನೂನೊಂದನ್ನು ತರಬೇಕೆಂದು ಜಿ. ಚನ್ನಪ್ಪನವರು ಗೊತ್ತುವಳಿಯೊಂದನ್ನು ಸಭೆಯ ಮುಂದೆ ತಂದರು. ಬಾಲ ವಿವಾಹದ ಆಚರಣೆಯನ್ನು ತಾವು ವಿರೋಧಿಸುವುದಾಗಿಯೂ ಅದರಂತೆಯೇ ತಾವು ಜೀವನದಲ್ಲಿಯೂ ನಡೆದುಕೊಳ್ಳುತ್ತಿದ್ದರೂ ಆ ಗೊತ್ತು ವಳಿಗೆ ತಾವು ಬೆಂಬಲ ನೀಡುವುದಿಲ್ಲವೆಂದು ಅವರು ಹೇಳಿದರು. ಸರಿಯಾಗಿಯೋ ತಪ್ಪಾಗಿಯೋ ನಮ್ಮ ಜನ ಕೆಲವು ವಿಚಾರಗಳನ್ನು ಶಾಸ್ತ್ರ ಸಮ್ಮತವೆಂದು ನಂಬಿಕೊಂಡಿದ್ದಾರೆ. ಅಂಥ ನಂಬಿಕೆಗಳ ಮೇಲೆ ನಾವು ಕೈಮಾಡಲಾಗದು. ಪಾಶ್ಚಾತ್ಯ ದೇಶಗಳಲ್ಲಿಯೂ ಈ ಪದ್ಧತಿಯು ವೈಜ್ಞಾನಿಕ ಬೆಳವಣಿಗೆಯ ಪರಿಣಾಮವಾಗಿ ತಪ್ಪಿಹೋದದ್ದು ಈಚೆಗೇ. ಹಾಗೆ ವಿಜ್ಞಾನದ ಮುನ್ನಡೆ ಯಿಂದ ನಮ್ಮ ಜನದ ತಿಳುವಳಿಕೆಯಿಂದ ಇಂಥ ಪದ್ಧತಿಗಳು ತೊಲಗಬೇಕು.

ಆದರೆ "There are, I do not deny, certain cases in which even this sacred precinct of religion may be invaded by legislation. Where a particular practice is inhuman according to the verdict of a civilized man, or where a particular practice is against civilization itself, and where there is no other way of correcting of rectifying that practice, interference is justified. The case of **Sati** is an instance in point. It was an inhuman practice though a religious practice. And in the name of ɔivilization the legislature did interfere and I do not think there was any very large proestt or disagreement." ಎಂದಿದ್ದಾರೆ ಮತ್ತು "If you are going to exempt from the operation of the measure Mussalmans because their conscience is against it and Brahmins because their conscience is against it whom is it going to benefit I ask?" ಎಂದು ಶಂಕೆಯನ್ನು ವ್ಯಕ್ತಪಡಿಸಿದ್ದಾರೆ.

ಅವರು ಮಠಗಳ ಲೆಕ್ಕಪತ್ರಗಳನ್ನು ವರ್ಷಕ್ಕೊಂದು ಬಾರಿಯಾದರೂ ತನಿಖೆಗೆ ಒಳಪಡಿಸಿ ಅದನ್ನು ಸಾರ್ವಜನಿಕರ ತಿಳಿವಳಿಕೆಗಾಗಿ ಪ್ರಕಟಿಸಬೇಕೆಂದು ಅನೇಕ ಬಾರಿ ಒತ್ತಾಯ ಪಡಿಸಿದ್ದಾರೆ.

ಮತಾಂತರಗಳಿಂದ ದ್ವೇಷಗಳು ಗಲಭೆಗಳು ಶಂಕೆಗಳು ಜನರಲ್ಲಿ ಹರಡುತ್ತಿದ್ದ ಕಾಲ ಅದು. ಈ ಸಮಸ್ಯೆಗೆ ಸ್ವಲ್ಪ ಪರಿಹಾರವನ್ನು ತರಲು ಡಿ ವಿ ಜಿ ಮತಾಂತರಗಳನ್ನು ರಿಜಿಸ್ಟರ್ ಮಾಡುವ ವಿಧಾನವೊಂದನ್ನು ಕಾನೂನು ನಿಗದಿಪಡಿಸಬೇಕೆಂದು ಗೊತ್ತುವಳಿಯೊಂದನ್ನು ತಂದಿದ್ದರು. ಅದರ ಪ್ರಕಾರ ಮತಾಂತರವಾಗಬೇಕಾದ ದಿನಕ್ಕೆ 15 ದಿನಗಳ ಮೊದಲೇ ಇದಕ್ಕಾಗಿ ನಿಯಮಿಸಲ್ಪಟ್ಟ ಅಧಿಕಾರಿಯ ಮುಂದೆ ಮತಾಂತರ ಹೊಂದುವ ಅಭಿಲಾಷೆಯನ್ನು ಘೋಷಿಸಿಕೊಳ್ಳಬೇಕು. ಹಾಗೆಯೇ ಮತಾಂತರವಾದ 7 ದಿನಗಳ ನಂತರ ಮತಾಂತರವಾದ ಘಟನೆಯನ್ನು ಘೋಷಿಸಿಕೊಳ್ಳಬೇಕು. ಹೀಗೆ ಈ ವಿಷಯ ಸಾರ್ವಜನಿಕವಾಗಿ ನಡೆದರೆ ಸಂದೇಹಗಳಿಗೆ ಎಡೆಯಿರದು ಎಂಬುದೇ ಅವರ ಇಂಗಿತವಾಗಿತ್ತು.

ಈ ಗೊತ್ತುವಳಿ ನ್ಯಾಯವಿಧಾಯಕ ಸಭೆಯ ಒಳಗೂ ದೇಶದ ಇತರ ಕಡೆಗಳಲ್ಲಿಯೂ ಬಿರುಗಾಳಿಯನ್ನೇ ಎಬ್ಬಿಸಿತು.

ಮತಾಂತರವು ಅಂತರಂಗದ ಬದಲಾವಣೆಯ ಕಾರಣದಿಂದ ಆಗುವು

ದೆಂಬ ನಂಬಿಕೆಯಿಲ್ಲ. ಇತರ ಆರ್ಥಿಕ ಸಾಮಾಜಿಕ ಒತ್ತಡಗಳಿಂದ ಆಗುವು ದೆಂಬ ಸಂದೇಹವಿದೆ. ಆ ಕಾರಣದಿಂದ ಈ ಮಸೂದೆ ಅಗತ್ಯ ಎಂದು ಡಿ ವಿ ಜಿ ಯವರ ವಾದ.

ಸರಕಾರವು ಮತ ಸಂಬಂಧವಾದ ವಿಷಯದಲ್ಲಿ ಪ್ರವೇಶ ಮಾಡುವುದಿಲ್ಲ ವೆಂದೂ ಡಿ ವಿ ಜಿ ಯವರ ಶಂಕೆಗೆ ಯಾವ ಆಧಾರವು ಇಲ್ಲವೆಂದೂ ಸರಕಾರದ ಪ್ರತಿನಿಧಿ ಹೇಳಿದರು. 15 ಸದಸ್ಯರು ಇದಕ್ಕೆ ಒಪ್ಪಿಗೆ ಸೂಚಿಸಿದರು, 23 ಸದಸ್ಯರು ವಿರೋಧಿಸಿದರು.

ಈ ಗೊತ್ತುವಳಿಯನ್ನು ಕುರಿತು ಮದರಾಸಿನ "ದಿ ಮೈಲ್" ಮತ್ತು "ದಿ ಗಾರ್ಡಿಯನ್" ಪತ್ರಿಕೆಗಳೂ, ಮೈಸೂರಿನ "ವೃತ್ತಾಂತ ಪತ್ರಿಕೆ"ಯೂ ಟೀಕಿಸಿ ವಿರೋಧಿಸಿ ಸಂಪಾದಕೀಯ ಲೇಖನಗಳನ್ನೇ ಬರೆದುವು.

ಇಂದಿಗೂ ಮತಾಂತರ ಪ್ರಶ್ನೆಯು ದೇಶದ ಮುಂದೆ ಆಗಾಗ ಬರುತ್ತಲೇ ಇದೆ. ಡಿ ವಿ ಜಿ ಜೀವಿಸಿರುವವರೆಗೂ ತಮ್ಮ ಸೂಚನೆಯನ್ನು ಹೇಳುತ್ತಲೇ ಬಂದಿದ್ದರೂ ಅದಕ್ಕೆ ಸಿಕ್ಕಬೇಕಾದ ಪ್ರಾಮುಖ್ಯತೆ ಸಿಕ್ಕದೆ ಇರುವುದು ಶೋಚನೀಯ.

ಹರಿಜನರ ದೇವಾಲಯ ಪ್ರವೇಶವನ್ನು ಕುರಿತು ಗೊತ್ತುವಳಿಯೊಂದು ಸಭೆಯ ಮುಂದೆ ಬಂದಾಗ (26.1.1937) ಅವರು ತಿರುವಾಂಕೂರಿನಲ್ಲಿ ಇವನ್ನು ಕುರಿತ ಮಸೂದೆಗೆ ಬೆಂಬಲವೂ ವಿರೋಧವೂ ಇರುವುದನ್ನು ಹೇಳಿ "Therefore I appeal to the Government that in this matter they have got to take note of the spirit of the times and make what reasonable move they could towards meeting the wishes of the reformers": ಅದಕ್ಕೆ ಇರುವ ವಿರೋಧವನ್ನು ಸೂಚಿಸಿ "The duty of the Government and everybody else is to find a way of reconciliation between these two opposite schools and I think such a reconciliation is possible and it may be made possible if government will take a sympathetic view of the matter" ಎಂದಿದ್ದಾರೆ.

ಕೋಲಾರದ ಚಿನ್ನದ ಗಣಿಯನ್ನು ಕುರಿತು ಮಾತನಾಡುತ್ತಾ (25.6.1935) ಅವರು, ಸರಕಾರದವರು ಆ ಕಂಪೆನಿಯವರೊಡನೆ ಮಾಡಿಕೊಂಡ ಒಪ್ಪಂದದಲ್ಲಿ ಮೂರು ಕೊರತೆಗಳಿವೆಯೆಂದು ಹೇಳಿದರು : (1) ಆ ಕಂಪೆನಿ ಯಲ್ಲಿ ಎಷ್ಟರಮಟ್ಟಿಗೆ ಸಾಧ್ಯವೋ ಅಷ್ಟು ಷೇರುಗಳನ್ನು ಸರಕಾರ ತೆಗೆದು

ಕೊಳ್ಳುವ ಅವಕಾಶವನ್ನು ಮಾಡಿಕೊಳ್ಳಬೇಕಾಗಿತ್ತು. (2) ಗಣಿಗಳಲ್ಲಿ ಕೆಲಸ ಗಾರರ ಹಿತಕ್ಕೆ ಆಗಬೇಕಾದ ಕಾರ್ಯಗಳನ್ನು ಮಾಡಲು ಸರಕಾರ ಅಧಿಕಾರ ವನ್ನು ಉಳಿಸಿಕೊಳ್ಳಬೇಕಾಗಿತ್ತು, ಮತ್ತು (3) ಮೈಸೂರಿನ ಜನಕ್ಕೆ ಗಣಿಯ ಕೆಲಸದಲ್ಲಿ ತರಬೇತಿ ಕೊಟ್ಟು ಅವರನ್ನು ಅಲ್ಲಿಯ ದೊಡ್ಡ ಹುದ್ದೆಗಳಿಗೆ ನಿಯ ಮಿಸಲು ಅರ್ಹರನ್ನಾಗಿ ಮಾಡುವಂತೆ ಕಂಪೆನಿಯವರನ್ನು ಒತ್ತಾಯಿಸ ಬೇಕಾಗಿತ್ತು.

ಶಾಸನ ಸಭೆಯ ಕಛೇರಿಯಲ್ಲಿ ಹೆಚ್ಚು ಕನ್ನಡ ಷಾರ್ಟ್‌ಹ್ಯಾಂಡ್ ವರದಿ ಗಾರರನ್ನು ನೇಮಕಮಾಡಬೇಕೆಂದೂ, ಅವರಿಗೆ ಸಂಬಳಗಳನ್ನು ಹೆಚ್ಚಿಸ ಬೇಕೆಂದೂ ಕೇಳಿದ್ದಾರೆ (27.6.1935).

ಸಾರ್ವಜನಿಕ ಸಭೆಗಳನ್ನು ಸರಕಾರ ಅಡ್ಡಿಪಡಿಸುವ ಬಗ್ಗೆ ತಮ್ಮ ವಿರೋಧವನ್ನು ಅವರು ಆಗಾಗ್ಗೆ ವ್ಯಕ್ತಪಡಿಸುತ್ತಿದ್ದರು.

ಮಿರ್ಜಾಸಾಹೇಬರು ದಿವಾನರಾದ ಕೊಂಚ ದಿನದಲ್ಲೇ ಬಿನ್ನಿಮಿಲ್ಲಿನಲ್ಲಿ ಮುಷ್ಕರ ನಡೆಯಿತು. ಪೋಲೀಸರು ಗುಂಡು ಹಾರಿಸಬೇಕಾಯಿತು. ಅಲ್ಲಿಂದ ಸ್ವಲ್ಪ ತಿಂಗಳುಗಳ ಮೇಲೆ ಮಹಾರಾಜ ಮಿಲ್ಲಿನಲ್ಲಿ ಮುಷ್ಕರ. ಇದನ್ನು ಕುರಿತು ಡಿ ವಿ ಜಿ "They have not ended. I think the labourers do deserve what other citizens of His Highness's State deserve, viz humane and prompt treatment at the hands of government and if the government find that the existing laws do not arm them with sufficient powers, I think they are competent under the emergency clause, to clothe themselves with such powers. Government have not done it. On the other hand, the complaint is bitter and loud that the police have been taking sides with the capitalists and doing all that they can to cripple the labour movement and to bring it on its **knees**. I should think that this is very unjust.... I am only asking for an equitable adjustment between capital and labour" ಎಂದು ಹೇಳಿದರು.

ಅವರು (Goods Marketing Corporation) ಸಾಮಾನುಗಳನ್ನು ಮಾರುವ ನಿಗಮವೊಂದನ್ನೂ ವ್ಯಾಪಾರಸ್ಥರಿಗೆ ಬಂಡವಾಳ ಒದಗಿಸುವ ಸಂಸ್ಥೆ (Business Credit corporation) ಯೊಂದನ್ನೂ ಸರಕಾರ ಸ್ಥಾಪಿಸಬೇಕು ; ಈಗಿರುವ ವ್ಯಾಪಾರ ಸಂಸ್ಥೆಗಳ ಪರಿಸ್ಥಿತಿಯನ್ನು ಪರಿಶೀಲಿಸಲು ಒಂದು

ಸಮಿತಿಯನ್ನು ರಚಿಸಬೇಕು ;

ಡಿಸ್ಟ್ರಿಕ್ಟ್ ಬೋರ್ಡ್, ಮುನಿಸಿಪಾಲಿಟಿ ಇವುಗಳ ಸಭೆಗಳ ಕಾರ್ಯ ಕಲಾಪಗಳು, ಮುನ್ಸೀಫ್ ಮತ್ತು ಮ್ಯಾಜಿಸ್ಟ್ರೇಟ್ ಕೋರ್ಟುಗಳಲ್ಲಿ ಕಾರ್ಯ ಕಲಾಪಗಳು ಕನ್ನಡದಲ್ಲೇ ನಡೆಯಬೇಕು ;

ಮೈಸೂರು ವಿಶ್ವವಿದ್ಯಾಲಯಕ್ಕೆ ವರ್ಷಕ್ಕೆ 11 ಲಕ್ಷ ರೂಪಾಯಿಗಳಿಗೆ ಕಡಿಮೆ ಇಲ್ಲದಂತೆ ಗ್ರಾಂಟ್ ಕೊಡಬೇಕು ;

—ಈ ವಿಷಯಗಳನ್ನು ಕುರಿತು ಗೊತ್ತುವಳಿಗಳನ್ನು 1934ರಲ್ಲಿ ಅವರು ಸೂಚಿಸಿದ್ದರು.

ಹೀಗೆ ಜನಹಿತಕ್ಕೆ ರಾಜ್ಯದ ಬೆಳವಣಿಗೆಗೆ ಸಂಬಂಧ ಪಟ್ಟ ಎಲ್ಲ ವಿಷಯಗಳನ್ನು ಕುರಿತ ಚರ್ಚೆಗಳಲ್ಲೂ ಅವರು ಭಾಗವಹಿಸುತ್ತಿದ್ದರು. ಅವರ ದೃಷ್ಟಿಯಿದ್ದದ್ದು ವ್ಯಕ್ತಿ ಸ್ವಾತಂತ್ರ್ಯದ ಮೇಲೆ, ಸಮಾಜದ ಸುಸ್ಥಿತಿಯ ಮೇಲೆ. ಸರಕಾರದ ಖರ್ಚು ಹೆಚ್ಚಾಗಿ ಜನದ ಮೇಲೆ ತೆರಿಗೆಯ ಭಾರ ಹೆಚ್ಚಬಾರದು, ಸರಕಾರದ ಎಲ್ಲ ನಡವಳಿಕೆಗಳೂ ಮಹಾಜನದ ಪರೀಕ್ಷೆಗೆ ಒಳಪಡಬೇಕು ಎಂಬುದೇ ಅವರು ಸರಕಾರಕ್ಕೆ ಹೇಳುತ್ತಿದ್ದ ಮಾತು.

ಅವರು ಸಭೆಯಲ್ಲಿ ಹೇಳುತ್ತಿದ್ದ ಮಾತು, ಮಂಡಿಸುತ್ತಿದ್ದ ವಾದ ಎಷ್ಟು ಸಮಗ್ರವಾಗಿರುತ್ತಿತ್ತೆಂದರೆ ಅದು ಮುಂದಿನ ಚರ್ಚೆಗೆ ಅನುಮಾಡಿ ಕೊಡುತ್ತಿತ್ತು.

ಜೂನ್ 28, 1929 ರಂದು ಆಡಳಿತವನ್ನು ಕುರಿತು ಸಭೆಯಲ್ಲಿ ಸ್ವಲ್ಪ ಬಿಸಿಯಾದ ಚರ್ಚೆಯೇ ನಡೆಯಿತು. ಡಿ ವಿ ಜಿ ಯವರು "Repression will not crush the uprising spirit of the people. Bonds of steel cannot bind the genius and spirit of a nation growing self-conscious. Mere official correctitude, mere conventional forms and proprieties or mere show of authority and force characteristic of the type of public servants whom Morley calls Tehinovniks, will not suffice for these times. You have got to be more fair-minded and take a vision of things that are bound to come. If Government will recognise this, will bring a certain amount of sympathy to the new movements, will try to get under the skins of even the so called agitators and fermenters of trouble, they will find that all there is not

wickedness, that the intention is good and that the motive is pure" ಎಂದರು.

ಈ ಮಾತುಗಳನ್ನು ಕೇಳಿಯೋ ಏನೋ ಎಂ. ವೆಂಕಟಕೃಷ್ಣಯ್ಯನವರು ಡಿ ವಿ ಜಿ ಯವರಿಗೆ 4-7-1929ರಲ್ಲಿ ಈ ಪತ್ರ ಬರೆದರು :

My dear Mr. Gundappa,

You have justified your existence. You have done your duty. If the history of Mysore is written you will occupy a respectable place in it. The sacrifice you have been making in the interest of public welfare and the invincible determination that you showed to throw a flood of lime light on the criminal caprices of irresponsible officials entitle you to a prominent place in the galaxy of real patriots. May God bless you with long life, robust health and a career of great usefulness to the cause of justice and fairplay in this unhappy land, a land which appears to me to have been forsaken by both god and man.

Yours affectionately,
M. Venkatakrishnayya

ಎಲ್ಲ ಒಳ್ಳೆಯ ಮಾತೇ ಬರಲಿಲ್ಲ. "ಚಾಣಕ್ಯ" ಎಂಬೊಬ್ಬರು, "The net gain of the show in the last Legislative Council was cheap advertisement of Mr. D. V. Gundappa, the nominated member of the Legislative Council and a friend of the local Swarajya correspondent who is trying hard for the last ten months to instal Mr. Gundappa and Mr. Hosakoppa Krishna Rao to the 'Gadi' of public leadership in Mysore" ಎಂದು 3-7-1929 ರಲ್ಲಿ ಬರೆದರು.

"In public life a man of elevated mind does not make his own self tell upon others simply and entirely. He must act with other men; he cannot select his objects or pursue them by means unadultrated by the methods and practices of minds less elevated than his own. He can only do what he feels to be the second best. He labours at a venture, prosecuting measures so large or so complicated that their

ultimate issue is uncertain" ಎಂಬ ಕಾರ್ಡಿನಲ್ ನ್ಯೂಮನ್ ಮಹಾಶಯನ ಮಾತುಗಳು ಡಿ ವಿ ಜಿ ಯವರ ನ್ಯಾಯವಿಧಾಯಕ ಸಭೆಯ ಜೀವನಕ್ಕೂ ಅನ್ವಯಿಸತಕ್ಕವಾಗಿವೆ.

ಸಾರ್ವಜನಿಕ ಜೀವನದಲ್ಲಿ ಶ್ರೇಷ್ಠತಮವಾದದ್ದನ್ನು ಸಾಧಿಸುವುದು ಸಾಧ್ಯವಲ್ಲ. ಬಹಳ ಕಷ್ಟಪಟ್ಟು ಶ್ರೇಷ್ಠತರವಾದದ್ದನ್ನು ಮಾತ್ರ ಸಾಧಿಸಬಹುದೇನೋ. ಈ ವಿಚಾರ ಅವರಿಗೆ ಮುಂದಟ್ಟಾಯಿತು. ಅವರಿಗೆ The second best ಎಂಬ ಮಾತು ಸೂತ್ರವಾಕ್ಯವಾಯಿತು. ಇದನ್ನೇ ಅವರು ತಮ್ಮ 'ರಾಜ್ಯಶಾಸ್ತ್ರ' ಗ್ರಂಥದಲ್ಲಿ ಹೀಗೆಂದು ವಿವರಿಸಿದ್ದಾರೆ: "ಸ್ವಪಕ್ಷದ ಅಭೀಷ್ಟವನ್ನೇ ಸಂಪೂರ್ಣವಾಗಿ ಸಾಧಿಸಿಕೊಳ್ಳುವೆನೆಂದು ಹೊರಡುವವನು ರಾಜಕೀಯದ ಸ್ವಭಾವವನ್ನು ಅರಿಯದವನು. ಅದರ ಕಷ್ಟಗಳೂ ಅಪಾಯಗಳೂ ಅವನಿಗೆ ತಿಳಿದಿಲ್ಲ. ಅವು ಒಳಗೆ ಅವಿತುಕೊಂಡಿರುತ್ತವೆ. ರಾಜಕೀಯ ಕುಶಲಿಯಾದವನೋ ಯಾವಾಗಲೂ ಅತ್ಯಂತ ಶ್ರೇಷ್ಠವಾದದ್ದಕ್ಕಾಗಿ ಪ್ರಯತ್ನಪಡುತ್ತಲೂ ಅದು ಕೈಗೂಡದಿದ್ದರೂ ಅದಕ್ಕಿಂತ ಎರಡನೆಯ ಮೆಟ್ಟಿಲಿನದಾದರೂ ಕೈಗೆ ದೊರೆತರೆ ಅಷ್ಟರಿಂದಲೇ ತೃಪ್ತಿಪಟ್ಟುಕೊಳ್ಳುತ್ತಲೂ ಇರುತ್ತಾನೆ. ರಾಜಕೀಯ ಅನುಭವವುಳ್ಳ ಮಾರ್ಲೆ ಪ್ರಾಜ್ಞನು "ರಾಜಕೀಯವೆಂಬುದು ಉದ್ದಕ್ಕೂ ದ್ವಿತೀಯ ವರ್ಗದ ವಿಜಯಗಳ ಸರಣಿ" (A long series of the second best) ಎಂದು ಹೇಳಿದ್ದಾನೆ. 'ಕಾಂಪ್ರೊಮೈಸ್' ಕೊಟ್ಟು ತೆಗೆದುಕೊಳ್ಳುವ ನೀತಿ, ರಾಜಿ, ಅಂಶ ಪ್ರತ್ಯಂಶ ವಿನಿಮಯ–ಇದೇ ಸಮನ್ವಯ ನೀತಿಯ ಒಳತಿರುಳು." ಇದೇ ಗೋಖಲೆಯವರ ದಾರಿ, ಇದೇ ಡಿ ವಿ ಜಿ ಅನುಸರಿಸಿದ ದಾರಿಯೂ ಸಹ.

ಜವಾಬ್ದಾರಿ ಸರಕಾರದ ಆಂದೋಳನಕ್ಕೆ ಗಣಪತಿಯ ಬೆಂಬಲ

ಮಿರ್ಜಾರವರು ದಿವಾನ್ ಪದವಿಯನ್ನು ಹತ್ತಿದ ವರ್ಷವೇ ಗದ್ದಲಕ್ಕೆ ಅಂಕುರಾರ್ಪಣವಾಯಿತು. ಆ ವರ್ಷ ಬೆಂಗಳೂರಿನ ಬಿನ್ನಿಮಿಲ್ ಕೆಲಸಗಾರರು ಮುಷ್ಕರದ ದೊಂಬಿ ನಡಸಿದರು. ಆ ದೊಂಬಿಯನ್ನು ಚದರಿಸುವುದಕ್ಕಾಗಿ ಪೋಲೀಸಿನವರು ತಮ್ಮ ಪ್ರಯತ್ನಗಳನ್ನು ಮಾಡಿ ಬೇರೆ ಉಪಾಯ ಕಾಣದೆ ಗುಂಡು ಹಾರಿಸಬೇಕಾಯಿತು. ಮುಂದೆ ಮಹಾರಾಜಾ ಮಿಲ್ಲಿನಲ್ಲಿ ಇಂಥ ಪ್ರಸಂಗ ನಡೆಯಿತು.

ದೇಶದಲ್ಲಿ ಹೊಸ ಮನೋಭಾವ, ಹೊಸ ದೃಷ್ಟಿ, ಹೊಸ ಆಸೆ ಆಕಾಂಕ್ಷೆಗಳು ಹುಟ್ಟುತ್ತಿದ್ದ ಕಾಲ. ಬ್ರಿಟಿಷ್ ಇಂಡಿಯದಲ್ಲಿ ನಡೆಯುತ್ತಿದ್ದ ಆಂದೋಳನ ಇಲ್ಲಿ ಪ್ರಭಾವ ಬೀರದೆ ಇರಲಿಲ್ಲ. ಅದು ಅನೇಕ ವಿಧಗಳಲ್ಲಿ ವ್ಯಕ್ತಗೊಂಡಿತ್ತು.

ಸೆಪ್ಟೆಂಬರ್ 1927 ರಲ್ಲಿ ಬೆಂಗಳೂರು ನಗರ ಸಭೆಯ 17 ಮಂದಿ ಸದಸ್ಯರು, ನಗರ ಸಭೆಯ ಅಧ್ಯಕ್ಷರ ದಬ್ಬಾಳಿಕೆಯನ್ನು ಸಹಿಸಲಾರದೆ, ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟಿದ್ದರು. ಅವರು ಸಭೆಯನ್ನು ನಡಸುತ್ತಿದ್ದ ರೀತಿ, ಅಧಿಕಾರಿಗಳನ್ನು ನಡಸಿಕೊಳ್ಳುತ್ತಿದ್ದ ರೀತಿ ಎಲ್ಲ ನಿರಂಕುಶಾಧಿಕಾರವನ್ನು ಸೂಚಿಸುತ್ತಿತ್ತು. ಇವೆಲ್ಲವನ್ನೂ ಚರ್ಜಿಸಲು ಸೆಪ್ಟೆಂಬರ್ 17 ರಂದು ಗುಬ್ಬಿ ಥಿಯೇಟರಿನಲ್ಲಿ ಡಿ ವಿ ಜಿ ಯವರ ಅಧ್ಯಕ್ಷತೆಯಲ್ಲಿ ಭಾರಿ ಸಭೆಯೊಂದು ನಡೆಯಿತು. ಬೇಲೂರು ಶ್ರೀನಿವಾಸ ಅಯ್ಯಂಗಾರ್, ಪಾಮುಡಿ ಸುಬ್ಬರಾಮ ಶೆಟ್ಟಿ, ಎಂ.ಪಿ. ಸೋಮಶೇಖರ ರಾವ್, ಅಬ್ದುಲ್ ರಹಮಾನ್, ನರಸಿಂಗ ರಾವ್ ಮುಂತಾದ ಪ್ರಮುಖರೂ, ರಾಜೀನಾಮೆ ಕೊಟ್ಟ ಸದಸ್ಯರೂ ಮಾತನಾಡಿದರು. ಸಭೆಯ ಕೊನೆಯಲ್ಲಿ ಮಾತನಾಡಿದ ಡಿ ವಿ ಜಿ ಯವರು ನಗರ ಸಭೆಯ ಸದಸ್ಯರು ಮಾಡುತ್ತಿರುವ ಕೆಲಸವೇನು ಎಂದು ಪ್ರಶ್ನೆಗಳನ್ನು ಕೇಳಿದರು. ಬೆಂಗಳೂರು ಜನತೆ ಏನು ಮಾಡುತ್ತಿದೆ? ಎಷ್ಟು ರೇಟ್ ಪೇಯರ್ ಅಸೋಸಿಯೇಷನ್‌ಗಳು ಇವೆ, ಅವು ಏನು ಮಾಡುತ್ತಿವೆ ಎಂದು ಪ್ರಶ್ನಿಸಿದರು. ನಗರ ಸಭೆಯ ಅಧ್ಯಕ್ಷರು ನಗರ ಸಭೆಯನ್ನು ಪ್ರತಿನಿಧಿಸಬೇಕೇ ಹೊರತು ಸರಕಾರವನ್ನಲ್ಲ.

ನಗರ ಸಭೆ ಸರಕಾರದ ಒಂದು ಇಲಾಖೆಯಲ್ಲ. ಅಧ್ಯಕ್ಷರು ಜನಾಭಿಪ್ರಾಯಕ್ಕೂ ನಗರ ಸಭೆಯ ಅಭಿಪ್ರಾಯಕ್ಕೂ ಮನ್ನಣೆ ಕೊಡಬೇಕೆಂದು ಸೂಚಿಸಿ ನಗರ ಸಭೆಯನ್ನು ನಡಸುವುದರಲ್ಲಿ ಪ್ರಜಾಜನದ ಜವಾಬ್ದಾರಿಯತ್ತ ಗಮನ ಸೆಳೆದರು.

ಮುಂದೆ ಈ ನಗರ ಸಭಾಧ್ಯಕ್ಷರೇ ಬೆಂಗಳೂರು ಸುಲ್ತಾನ್ ಪೇಟೆಯ ಪ್ರಕರಣದ ಕೇಂದ್ರವಾದರು.

"ಮಿರ್ಜಾರವರ ಕಾಲದಲ್ಲಿ ಎದ್ದ ಎರಡನೆಯ ಗಲಭೆ ಆರ್ಕಾಟ್ ಶ್ರೀನಿವಾಸಾಚಾರ್ಯರ ರಸ್ತೆಯಲ್ಲಿ ನಡೆದ ದುರ್ಘಟನೆಯ ಸಂಬಂಧದ್ದು. ಆ ರಸ್ತೆಯಲ್ಲಿ ಮುನಿಸಿಪಾಲಿಟಿಗೆ ಸೇರಿದ ಹಳೆಯ ಕಟ್ಟಡ ಒಂದಿತ್ತು. ಅದರಲ್ಲಿ ಕೆಲವು ಕಾಲ ಸುಂಕದ ಕಛೇರಿ (ಆಕ್ಟ್ರಾಯ್ ಡಿಪೋ) ಕೆಲಸ ಮಾಡುತ್ತಿತ್ತು. ಆಮೇಲೆ ಅಲ್ಲಿಗೆ ಸುಲ್ತಾನ್ ಪೇಟೆಯಲ್ಲಿ ಇದ್ದ ಎಸ್. ಆರ್. ನಂಜುಂಡಯ್ಯನವರ ಸ್ಕೂಲು ಭಾಗಶಃ ಬಂದಿತು. ಆ ಕಟ್ಟಡದ ಎದುರಿಗೆ ಪ್ರಸಿದ್ಧರಾದ ಮಹಮದ್ ಅಬ್ಬಾಸ್ ಖಾನ್ ಸಾಹೇಬರ ಮನೆ. ಸ್ಕೂಲ್ ಕಟ್ಟಡದ ಆವರಣದಲ್ಲಿ ಒಂದು ಗಣಪತಿಯ ಶಿಲಾವಿಗ್ರಹ ಬಹುಕಾಲದಿಂದ ಇತ್ತು. ಅದು ಹೇಗೋ ಯಾವ ಕಾರಣದಿಂದಲೋ ಸ್ಥಾನಾಂತರ ಹೊಂದಿ ಒಂದು ಕೋಣೆಯನ್ನು ಸೇರಿತು. ಇದು ಹೀಗಾದದ್ದನ್ನು "ವೀರಕೇಸರಿ" ಮೊದಲಾದ ಪತ್ರಿಕೆಗಳು ವ್ಯಾಜಾಂತರದಿಂದ ಪ್ರಕಟಿಸಿದವು. ಗಣೇಶನು ಕತ್ತಲೆಯ ಮನೆಯಲ್ಲಿ ತನ್ನಷ್ಟಕ್ಕೆ ತಾನು ಪ್ರಲಾಪ ಮಾಡಿಕೊಂಡನಂತೆ, ಹೀಗೆ: "ಅಯ್ಯೋ, ನನಗೆ ಈ ಗತಿ ಬರಬಹುದೆ! ವಿದ್ಯಾಧಿಪತಿಯೆನಿಸಿಕೊಂಡ ನಾನು ಪೂಜೆ ನೈವೇದ್ಯಗಳೊಂದೂ ಇಲ್ಲದೆ ಈ ಕತ್ತಲೆಯಲ್ಲಿ ಮಲಗುತ್ತಿರುವಂತೆ ಆಗುತ್ತಿದೆಯಲ್ಲ!...."

ಇದನ್ನು ಕುರಿತು "ವಿಶ್ವಕರ್ಣಾಟಕ" ಪತ್ರಿಕೆಯ ಸಂಪಾದಕರು ಸರಕಾರಕ್ಕೆ ಪತ್ರ ಬರೆದರು, ಉತ್ತರವಿಲ್ಲ.

ಹುಡುಗರು ಸತ್ಯಾಗ್ರಹ ನಡಸಿದರು. ಮೊದಲು ಸರಕಾರ ಇದನ್ನು ಗಮನಿಸಲಿಲ್ಲ. ಅನಂತರ ದೊಡ್ಡವರೂ ಸೇರಿದರು. "ಫಲಿತಾಂಶವಾಗಿ ಗಣಪತಿಯ ವಿಗ್ರಹವನ್ನು ಮತ್ತೆ ಬೆಳಕಿಗೆ ತಂದು ಹಿಂದಿನ ಸ್ಥಳದಲ್ಲಿ ಇರಿಸಿ ಪೂಜೆ ಪುರಸ್ಕಾರ ನಡೆಸಿದ್ದಾಯಿತು. ಈ ಪೂಜೆ ನಡೆದ ಜಾಗ ಅಬ್ಬಾಸ್ ಖಾನರ ಮನೆಯ ಹೆಬ್ಬಾಗಿಲಿಗೆ ನೇರ ಎದುರಿಗೆ. ಈ ಕಾರಣದಿಂದ ಮುಸಲ್ಮಾನ್ ಜನಕ್ಕೆ ಅಸಮಾಧಾನವುಂಟಾಯಿತೆಂದು ಕೆಲವರ ಹೇಳಿಕೆ. ಕಾರಣ ಹೇಗೋ. ದೊಂಬಿ ನಡೆದದ್ದಂತೂ ನಿಜ: ಬಹು ದೊಡ್ಡ ದೊಂಬಿ. ಬಡಿ

ದಾಟವೂ ನಡೆಯಿತು. ಯಾರೋ ಗುಂಡು ಹಾರಿಸಿದರೆಂದೂ ಪ್ರಾಣನಷ್ಟ ವಾಯಿತೆಂದೂ ಜನ ಆಡಿಕೊಂಡರು."

"ಈ ಘಟನೆ ನಡೆದ ದಿವಸ ನಾನು ಬೆಂಗಳೂರಿನಲ್ಲಿರಲಿಲ್ಲ. ಬಾಗಲ ಕೋಟೆಗೆ ವೃತ್ತಪತ್ರಿಕಾಕರ್ತರ ಸಮ್ಮೇಳನಕ್ಕೆ ಹೋಗಿದ್ದೆ. ನನಗೆ ಅಲ್ಲಿಗೆ ವರ್ತಮಾನ ಬಂದಿತು. ಮಿರ್ಜಾರವರೇ ತಂತಿ ವರ್ತಮಾನ ಕಳುಹಿಸಿ ಪರಿಸ್ಥಿತಿ ಹತೋಟಿಗೆ ಬರುತ್ತಿದೆಯೆಂದು ತಿಳಿಯಪಡಿಸಿದರು. ಅದಕ್ಕೆ ಉತ್ತರವಾಗಿ ನಾನು ಸರಕಾರವು ಕೂಡಲೇ ಒಂದು ವಿಚಾರಣಾ ಸಮಿತಿಯನ್ನು ನಿಯಮಿಸತಕ್ಕದ್ದೆಂದು ಸೂಚಿಸಿ ಮರು ತಂತಿ ಕಳುಹಿಸಿದೆ."

"ಅಲ್ಲಿಂದ ಎರಡು ಮೂರು ದಿವಸ ಕಳೆದ ಮೇಲೆ ನಾನು ಬೆಂಗಳೂರಿಗೆ ಬರುವ ವೇಳೆಗೆ ಇಲ್ಲಿ ಅಭೂತಪೂರ್ವವಾದ ಉಲ್ಲೋಲ ಕಲ್ಲೋಲವೆದ್ದಿತ್ತು. ಹಿಂದೂ ಮುಸಲ್ಮಾನ್ ಸಮಾಧಾನಕ್ಕೆಂದು ಮಿರ್ಜಾರವರು ಕರೆದಿದ್ದ ಮಹಾಸಭೆಯಲ್ಲಿ ಶಾಂತಿಯ ವಾತಾವರಣ ಬರುವುದಕ್ಕೆ ಬದಲಾಗಿ ಎರಡು ಪಕ್ಷಗಳಿಗೂ ಬಿರುಸಾದ ಮಾತುಗಳೇ ನಡೆದವು. ಪರಸ್ಪರ ದೋಷಾರೋಪಣೆಯೇ ಹೆಚ್ಚಾಗಿತ್ತು. ನಾನು ಬೆಂಗಳೂರಿಗೆ ಬಂದ ದಿವಸ ಕೆಲಮಂದಿ ಸ್ನೇಹಿತರು ರೈಲ್ವೇ ಸ್ಟೇಷನ್ನಿಗೆ ಬಂದು ತಮ್ಮ ಪಕ್ಷದ ವಾದವನ್ನು ಉದ್ರೇಕದ ರೀತಿಯಲ್ಲಿ ತಿಳಿಸಿದರು. ನಾನು ಮನೆಗೆ ಬಂದಮೇಲೆ ಅಂಥ ಗುಂಪುಗಳು ಎರಡು ಮೂರು ಬಂದವು. ಅವರೆಲ್ಲ ಸನ್ಮಾನ್ಯರಾದ ಸ್ನೇಹಿತರು ; ಆವೇಶಕ್ಕೊಳಗಾಗುವವರಲ್ಲ; ನ್ಯಾಯ ನಿಷ್ಠರು. ಅವರೆಲ್ಲ ಹೇಳಿದ್ದರ ತಾತ್ಪರ್ಯ ಮಿರ್ಜಾ ಸಾಹೇಬರು ಆ ಹೊತ್ತಿನ ಘಟನೆಯನ್ನು ಹಿಂದೂಗಳ ಮೇಲೆ ಹೊರಿಸುವ ಮನಸ್ಸುಳ್ಳವರಾಗಿದ್ದಾರೆ ಎಂದು".

"ಈ ಮಾತು ನನಗೆ ಆಶ್ಚರ್ಯವನ್ನುಂಟುಮಾಡಿತು. ಆದರೂ ಇದು ಅಸಂಗತವೆಂದು ತೋರಲಿಲ್ಲ—ಹಾಗಿದ್ದರೂ ಇರಬಹುದು ಎಂದುಕೊಂಡು ಮಿರ್ಜಾರವರನ್ನು ಕಾಣಲು ಹೋಗಲಿಲ್ಲ. ಅಲ್ಲಿಂದ ಒಂದೂವರೆ ವರ್ಷಕಾಲ ನಾನು ಅವರನ್ನು ಭೇಟಿಮಾಡಲು ಹೋಗಲಿಲ್ಲ."

"ನಡೆದದ್ದೇನೋ ನಡೆದು ಹೋಯಿತು. ಪ್ರಜಾಸಮುದಾಯ ಒಡೆದದ್ದು ಎರಡಾಗಲ್ಲ ಮೂರಾಗಿ. ಹಿಂದೂಗಳು, ಮುಸಲ್ಮಾನರು ಎಂಬುದೆರಡುಂಟಷ್ಟೆ. ಹಿಂದೂಗಳಲ್ಲಿಯೇ ಎರಡು ಕಕ್ಷಿಗಳಾದುವು ; ಒಂದು ಸರಕಾರಕ್ಕೆ ಸಹಕಾರದ್ದು, ಇನ್ನೊಂದು ಪ್ರತೀಕಾರದ್ದು. ಸರಕಾರದ ಪಕ್ಷದಲ್ಲಿ ಕೆ. ಹೆಚ್. ರಾಮಯ್ಯನವರು, ಹೆಚ್. ಸಿ. ದಾಸಪ್ಪನವರು, ನೀಲಗಿರಿ ಸಂಜೀವಯ್ಯನವರು

ಮುಂತಾದವರಿದ್ದರು. ಪ್ರತೀಕಾರ ಪಕ್ಷದಲ್ಲಿ ಸಂಪಿಗೆ ವೆಂಕಟಪತಯ್ಯನವರು, ವೀರಕೇಸರಿ ಸೀತಾರಾಮಶಾಸ್ತ್ರಿಗಳವರು, ಪಾಮುಡಿ ಸುಬ್ಬರಾಮಶೆಟ್ಟರವರು, ಎಂ. ಪಿ. ಸೋಮಶೇಖರರಾಯರು, ನಿಟ್ಟೂರು ಶ್ರೀನಿವಾಸರಾಯರು, ತಿರುಮಲೆ ತಾತಾಚಾರ್ಯ ಶರ್ಮರವರು ಮೊದಲಾದವರಿದ್ದರು." ಹೀಗೆ ಪ್ರಾರಂಭವಾದ ಪಕ್ಷಕಕ್ಷಿಗಳ ಕಾವು ಬಹುಕಾಲ ಎಲ್ಲರಿಗೂ ಅಂಟಿತ್ತು.

ಡಿ ವಿ ಜಿ ಯವರ ಒಲವು ಸರಕಾರಕ್ಕೆ ಪ್ರತೀಕಾರದ ಕಡೆಗೇ. ಮುಖ್ಯವಾಗಿ ಸರಕಾರದ ಉದಾಸೀನತೆ, ಜನಾಭಿಪ್ರಾಯಕ್ಕೆ ಅಸಡ್ಡೆ, ಸರಕಾರದ ಇಲಾಖೆಗಳ ನಡುವೆ, ಅದರ ಮುಖ್ಯಸ್ಥರ ನಡುವೆ ಹೊಂದಾಣಿಕೆಯಿಲ್ಲದ್ದು, ಕೆಲವರ ದೌಲತ್ತು ಇಷ್ಟೆಲ್ಲ ರಂಪಕ್ಕೆ ಕಾರಣವಾಯಿತು. ಆಗ "What is wrong in Mysore? Bangalore Disturbances and After" ಎಂಬ ಲೇಖನವನ್ನು ಡಿ ವಿ ಜಿ ಯವರು ಅಂದಿನ ಸಾರ್ವಜನಿಕ ಪರಿಸ್ಥಿತಿಯನ್ನೂ ಸರಕಾರದವರ ಕಾರ್ಯನೀತಿಯನ್ನೂ ವಿಶ್ಲೇಷಿಸಿ ಬರೆದರು. ಆ ಲೇಖನಕ್ಕೆ ಪ್ರಚೋದಕವಾದದ್ದು ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ಒಂದು ಟೀಕೆ. ಆ ಪತ್ರಿಕೆ "The feeling of distrust is generally admitted to be due to communal prejudices. The Hindus who are in a majority in the State not relishing the appointmetnt of a Mohammadan as Dewan, whilst the Mohammadans jubilant at the appointment, consider that it is the best time for purging the State of idolatry and propogating the tenets of Islam" ಎಂದು ಹೇಳಿತ್ತು. ಇಂಗ್ಲಿಷ್‌ನವನೊಬ್ಬನನ್ನು ವಿಚಾರಣೆಗಾಗಿ ನೇಮಿಸಬೇಕೆಂದು ಮೈಸೂರು ಸಂಸ್ಥಾನದ ಪತ್ರಿಕೆಯೊಂದು ಸಲಹೆ ಮಾಡಿತು.

'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಯ ಆಪಾದನೆಯನ್ನು ಬುಡವಿಲ್ಲದ್ದೆಂದು ಡಿ ವಿ ಜಿ ನಿರಾಕರಿಸಿದ್ದಾರೆ. ಯಾರು ದಿವಾನರಾದರೂ ಗೊಣಗಾಡುವವರು ಇದ್ದೇ ಇರುತ್ತಾರೆ. ಅದು ಯಾರಿಗೂ ತಪ್ಪಿದ್ದಲ್ಲ. ಹಿಂದೂಗಳೂ ಮುಸ್ಲಿಂ ಜನರೂ ಯುದ್ಧಸನ್ನಾಹದಲ್ಲಿರುವರೆಂದು ಸೂಚಿಸುವುದೂ ತುಂಟತನ ಎಂದಿದ್ದಾರೆ.

ಹಾಗಾದರೆ ಇಷ್ಟು ಗಲಾಟೆಗೆ ಕಾರಣವೇನು? ಡಿ ವಿ ಜಿ ಯವರ ದೃಷ್ಟಿ ಇದು.

ನಗರವನ್ನು ಸುಂದರಗೊಳಿಸುವ ಮಿರ್ಜಾರವರ ಉತ್ಸಾಹಕ್ಕೆ ಮುಸಿಸಿ

ಪಾಲಿಟಿಯ ಅಧ್ಯಕ್ಷರಾಗಿದ್ದ ಅಬ್ಬಾಸ್ ಖಾನರು ಒತ್ತಾಸೆಯಾಗಿ ನಿಂತಿದ್ದರು. ಕೆಲವು ಪಂಗಡಗಳ ಜನದ ಅಭಿಪ್ರಾಯಗಳಿಗೆ ಸಲ್ಲಬೇಕಾದಷ್ಟು ಮನ್ನಣೆಯನ್ನು ಮಿರ್ಜಾ ಸಾಹೇಬರು ಕೊಟ್ಟಿರಲಿಲ್ಲ, ತಮ್ಮ ಉತ್ಸಾಹದ ಭರದಲ್ಲಿ. ಇದೂ, ಮತ್ತು ಅವರು ಅಬ್ಬಾಸ್ ಖಾನರಿಗೆ ಒತ್ತಾಸೆಯಾಗಿದ್ದಾರೆಂಬ ಅಭಿಪ್ರಾಯವೂ ಅನೇಕರ ಮನಸ್ಸಿಗೆ ಸರಿಯೆಂದು ತೋರಲಿಲ್ಲ. ಈ ಕಾರಣದಿಂದ ಅಬ್ಬಾಸ್ ಖಾನರ ಮನೆಯಿದ್ದ ಪ್ರದೇಶದಲ್ಲಿ ನಡೆದ ಘಟನೆ ಮಹತ್ವ ಹೊಂದಲು ಕಾರಣವಾಯಿತು.

ಗಣೇಶನ ವಿಗ್ರಹವಿದ್ದ ಕಟ್ಟಡ ಸರಕಾರಿ ಕಟ್ಟಡ. ಆ ವಿಗ್ರಹ ಅಲ್ಲಿ ವಿಧಿವತ್ತಾಗಿ ಪ್ರತಿಷ್ಠಿತವಾಗಿದ್ದದ್ದಲ್ಲ. ಕೆಲಸ ಕಾರ್ಯಗಳ ಅನುಕೂಲಕ್ಕಾಗಿ ಮಹಾರಾಜರ ಪಟವನ್ನು ಒಂದು ಕೊಠಡಿಯಿಂದ ಇನ್ನೊಂದಕ್ಕೆ ವರ್ಗಾಯಿಸಿ ದರೆ ಅದಕ್ಕೆ ಹೇಗೆ ಆಕ್ಷೇಪಿಸುವುದಿಲ್ಲವೋ, ಹಾಗೆ ಪ್ರತಿಷ್ಠಿತವಾಗದ ವಿಗ್ರಹ ವನ್ನು ಒಂದು ಕಡೆಯಿಂದ ಇನ್ನೊಂದೆಡೆಗೆ ಸಾಗಿಸುವುದರಲ್ಲಿ ತಪ್ಪೇನೂ ಇರು ತ್ತಿರಲಿಲ್ಲ. ಸರಕಾರಿ ಕಟ್ಟಡಗಳಲ್ಲಿ ಮತ ಸಂಬಂಧವಾದ ವಿಗ್ರಹಗಳನ್ನು ಇಡಬಹುದೇ ಎಂಬ ಪ್ರಶ್ನೆ ಪರಿಶೀಲಿಸಬೇಕಾದದ್ದು. ಆದರೆ ಸರಕಾರದವರು ಈ ವಿವರಗಳನ್ನು ಜನತೆಗೆ ಸರಿಯಾದ ಕಾಲದಲ್ಲಿ ತಿಳಿಸಬೇಕಾಗಿತ್ತು. ಯಾವಾಗ ಹಾಗೆ ಮಾಡದೆ ಹೋದರೋ ಆಗ ಜನ, "ಅಬ್ಬಾಸ್ ಖಾನ್ ಸಾಹೇಬರ ಮನೆಯೆದುರಿಗೆ ಅಲ್ಲವೆ ಆ ಸ್ಕೂಲಿರುವುದು ? ಅಂಥ ಪ್ರಭಾವಶಾಲಿ ಗಳು ಹೇಳಿದಲ್ಲದೆ ವಿದ್ಯಾಧಿಕಾರಿಗಳು ಆ ಮೂರ್ತಿಯನ್ನು ಅಲ್ಲಿಂದ ಸಾಗಿಸು ವರೆ? ಇದರ ಹಿಂದೆ ಏನೋ ಇದೆ" ಎಂದು ಊಹಿಸುವುದಕ್ಕೆ ಅವಕಾಶ ವಾಯಿತು. ಅನಂತರ ಪತ್ರಿಕೆಗಳಲ್ಲಿ ಟೀಕೆಗಳು ಬಂದಾಗಲೂ ಸರಕಾರ ಸುಮ್ಮನಿದ್ದಿತು. ಅನಂತರ ಶಾಲಾಬಾಲಕರ ಸತ್ಯಾಗ್ರಹ ಪ್ರಾರಂಭವಾದಾ ಗಲೂ ಸಹ ಸರಕಾರದ ಉನ್ನತಾಧಿಕಾರಿಗಳು ಸ್ಥಳಕ್ಕೆ ಭೇಟಿ ಕೊಡುವ ಕೃಪೆ ಮಾಡಿದರೆ? ಸರಕಾರದ ಅಧಿಕಾರಿಗಳು ಹಿಂದೂಮತಕ್ಕೋ ವಿಗ್ರಹಕ್ಕೋ ಯಾವ ಅವಮಾನವನ್ನೂ ಮಾಡುವ ಉದ್ದೇಶ ಸರ್ವಥಾ ಇರಲಿಲ್ಲವೆಂದು ವಿವರಣೆ ನೀಡಿದ್ದರೆ, ಇಷ್ಟು ರಾದ್ಧಾಂತಕ್ಕೆ ಅವಕಾಶವಿರುತ್ತಿರಲಿಲ್ಲ. ಗಣಪತಿಯ ವಿಗ್ರಹವನ್ನು ಅಲ್ಲಿಡಲು ಅಂಗೀಕರಿಸಿದ ಮೇಲೆ ಪೋಲೀಸಿನವರು ಆ ಸಂಜೆ ನಡೆದ ಗಲಭೆಗೆ ಕಾರಣರಾದವರನ್ನು ಕೂಡಲೇ ಏಕೆ ಬಂಧಿಸಲಿಲ್ಲ? ಸರಕಾರದವರು ಹೊರಡಿಸಿದ ಪ್ರಕಟನೆಯಲ್ಲಿ ಮಹಾಜನಕ್ಕೆ ಆಶ್ವಾಸನೆ ನೀಡುವ ವಿವರ ಯಾವುದೂ ಇಲ್ಲ. ಇವಕ್ಕೆ ಪೋಷಕವಾಯಿತು ದಿವಾನ್

ಸಾಹೇಬರು ಕರೆದಿದ್ದ "ರಹಸ್ಯ ಸಭೆ". ಆ ರಹಸ್ಯ ಸಭೆಯಲ್ಲಿ ಕೆಲವು ಮುಖಂಡರು ಇಷ್ಟು ದಿವಾನರನ್ನು ಅವರ ಪದವಿಯಿಂದ ಇಳಿಸಲು ಬ್ರಾಹ್ಮಣರು ಮಾಡಿದ ಪಿತೂರಿಯೆಂದು ಆಪಾದನೆ ಮಾಡುತ್ತಿದ್ದರೂ ದಿವಾನ್ ಸಾಹೇಬರು ಅದನ್ನು ತಪ್ಪೆಂದು ನಿರಾಕರಿಸುವ ಗೋಜಿಗೇ ಹೋಗಲಿಲ್ಲ. ಈ ಗಲಭೆಗಳನ್ನು ಕುರಿತು ವಿಚಾರಣೆ ನಡೆಸಲು ಸಮಿತಿಯನ್ನು ನೇಮಿಸುವುದರಲ್ಲೂ ಸರಕಾರ ತಡಮಾಡಿತು. ಹೀಗೆ ಒಂದಕ್ಕೊಂದು ಘಟನೆಗಳು ಸೇರಿಕೊಂಡು ದೇಶದ ವಾತವರಣವನ್ನೇ ಕಲುಷಿತಗೊಳಿಸಿವೆ.

ಮಂತ್ರಿ ಮಂಡಳದಲ್ಲಿ ಅಧಿಕಾರೇತರ ಸದಸ್ಯರಿದ್ದಿದ್ದರೆ, ತಮ್ಮ ಸ್ಥಾನವನ್ನು ಕಾಪಾಡಿಕೊಳ್ಳುವುದಕ್ಕಾಗಿಯಾದರೂ ಅವರು ಸಾರ್ವಜನಿಕ ಮನಸ್ಸಿನ ಸ್ಥಿತಿಗತಿಗಳನ್ನು ತಿಳಿದುಕೊಂಡು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದರು. ಸರಕಾರದ ಅಧಿಕಾರಿಗಳು ಎಲ್ಲ ಕೆಲಸಗಳಿಗೂ ದಿವಾನರ ಮರ್ಜಿಯನ್ನು ತಿಳಿದುಕೊಂಡು ಕೆಲಸ ಮಾಡುವುದಾದರೆ ಆಡಳಿತದಲ್ಲಿ ವಿಚಕ್ಷಣೆ ಹೇಗೆ ಬಂದೀತು ? ಶಿಕ್ಷೆಗೆ ಅರ್ಹರಾದವರಿಗೆ ಶಿಕ್ಷೆಯನ್ನು ಸರಕಾರ ವಿಧಿಸದಿದ್ದರೆ ಸರಕಾರದಲ್ಲಿ ಜನಕ್ಕೆ ವಿಶ್ವಾಸ ಹೇಗೆ ಬಂದೀತು ?

ಹೀಗೆ ಜವಾಬ್ದಾರಿ ಸರಕಾರವಿಲ್ಲದಿದ್ದ ಕಾರಣದಿಂದಲೇ ಇಷ್ಟೆಲ್ಲ ಅನಾಹುತ ಆಯಿತು ಎಂಬುದು ಡಿ ವಿ ಜಿ ಯವರ ವಾದ. ಈ ಸಮಯದಲ್ಲಿ ಅವರು ಸಾರ್ವಜನಿಕ ಅಭಿಪ್ರಾಯವನ್ನು ಕುರಿತು ಹೇಳಿರುವ ಮಾತುಗಳು ಇಂದಿಗೂ ಮನನೀಯವಾಗಿವೆ :

How to satisfy the public that conscience prevails in all and that justice is allowed to run its course? Alas! There is no royal road to the winning of the people's confidence and respect. The public brings no precise scientific formulae to apply. It is rarely content with sonorous assurances. It is too shrewd to be taken in by sudden gleem of goodness, or one dramatic concession to the right. It looks at a series of acts and judges in the bulk. Its fundamental horse-sense, so to say, is our ultimate arbitor. Our Government must cultivate faith in this—horse-sense of the common man. No one can long deceive it—no, not even the newspapers. This faith is the foundation of the great Abraham Lincoln's famous aphorism :

"You can deceive all the people some time,
and some people all the time;
but not all the people, all the time".

ಡಿ ವಿ ಜಿ ಯವರ ಈ ವಿಶ್ಲೇಷಣೆ ಆ ಸಂದರ್ಭವನ್ನು ಕುರಿತ ನಿಷ್ಪಕ್ಷಪಾತವಾದ ವಿಮರ್ಶೆ ಎಂದು ಹೇಳಬಹುದು. ಈ ಘಟನೆಯು ಮುಂದಿನ ಚರಿತ್ರೆಯ ಮೇಲೂ ಇದರ ಪ್ರಭಾವ ಬಹಳವಾಗಿದ್ದಿತು ಎನ್ನಬಹುದು.

28.8.1928 ರಂದು ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ಈ ಗಲಭೆಗಳನ್ನು ಕುರಿತು ವಿಚಾರಣೆ ನಡಸಲು ಒಂದು ಸಮಿತಿಯನ್ನು ಸರಕಾರದವರು ರಚಿಸಿದರು. ಅದನ್ನು ಕುರಿತು ವಿಶ್ವೇಶ್ವರಯ್ಯನವರು "I was unwilling at first but had to accept responsibility at the special desire of His Highness the Maharaja" ಎಂದಿದ್ದಾರೆ.

ವಿಶ್ವೇಶ್ವರಯ್ಯ ಸಮಿತಿಯ ಮುಂದೆ 10.10.1928 ರಂದು ಸಾಕ್ಷ್ಯ ನೀಡಿದರು ಡಿ ವಿ ಜಿ. "ಮೈಸೂರಿಗೇನು ಬಂದಿದೆ ಹೇಳಿ" ಎಂಬ ಅಧ್ಯಕ್ಷರ ಪ್ರಶ್ನೆಗೆ ಉತ್ತರವಾಗಿ ಅವರು "ಏನೂ ಇಲ್ಲ ಸ್ವಾಮಿ. ಆಡಳಿತ ಯಂತ್ರಕ್ಕೆ ಪಾರ್ಶ್ವ ವಾಯು ಬಂದಿರುವುದು ನೋಡಿ ನನಗೆ ಪರಮಾಶ್ಚರ್ಯವಾಗಿದೆ. 30ನೆಯ ತಾರೀಖಿನ ಪ್ರಳಯದ ಅನುಭವ ಮೈಸೂರಿಗೆ ಮೊದಲನೆಯದು. ಸಿವಿಲ್ ಸರ್ವಿಸ್ಸಿಗೆ ಸೇರಿದವರೆಂದು ಹಿಗ್ಗುವವರು ಈ ಪ್ರಳಯದಿಂದ ಎಚ್ಚರಿಕೆ ತೆಗೆದುಕೊಳ್ಳಬೇಕು. ಸಕಾಲದಲ್ಲಿ ಸರಕಾರವು ದಕ್ಷತೆಯಿಂದ ಕಾರ್ಯನಿರ್ವಾಹ ಮಾಡಬೇಕಾಗಿತ್ತು. ಸರಕಾರ ಈ ಸಂದರ್ಭದಲ್ಲಿ ಉದಾಸೀನದಿಂದಿತ್ತು. ನಗರಜೀವನಕ್ಕೂ ಸರಕಾರಕ್ಕೂ ಸಂಬಂಧವಿದ್ದಂತೆಯೇ ಕಾಣಬರುವುದಿಲ್ಲ. ತಿಂಗಳುಗಟ್ಟಲೆ ಪತ್ರಿಕೆಗಳಲ್ಲಿ ಚಳವಳವಿದ್ದರೂ ಸರಕಾರಕ್ಕೆ, ಪಾಪ, ಏನೂ ಗೊತ್ತೇ ಇಲ್ಲದಿರುವುದು ಪರಮಾಶ್ಚರ್ಯ....ಪತ್ರಿಕಾಕರ್ತರು ಸರ್ಕಾರಕ್ಕೆ ಪತ್ರ ಬರೆದಾಗಲಾದರೂ ಗಮನ ಕೊಡಬೇಡವೆ? ಪ್ರತ್ಯುತ್ತರ ಕೊಡುವ ನಡತೆಯನ್ನಾದರೂ ಕಲಿಯಬಾರದೆ? ನಗರದಲ್ಲಿ ಗಣೇಶನ ವಿಚಾರ ಚಳವಳಿ ನಡೆಯುತ್ತಿತ್ತು. ಆದರೆ ಸರ್ಕಾರದವರು ಆ ಚಳವಳದ ನಿಜಶಕ್ತಿಯನ್ನು ತಿಳಿಯಲು ಬಯಸಲಿಲ್ಲ....ಪತ್ರಿಕೆಗಳಿಗೆ ಮಾತ್ರ ಸ್ವಾತಂತ್ರ್ಯ ಕಡಮೆ. ಪತ್ರಿಕೆಗಳಿಗೆ ಪ್ರತ್ಯೇಕ ಕಾನೂನುಗಳು ಬೇಕಿಲ್ಲ. ಇಂಡಿಯನ್ ಪೀನಲ್ ಕೋಡಿನ ಬಾಣಗಳೇ ಸಾಕು. ಅವರಿಗೇಕೆ ಬೇರೆ ದಂಡ ಪ್ರಯೋಗಗಳು. ಸರಕಾರದವರು ಪತ್ರಿಕೆಗಳ ವಿಚಾರದಲ್ಲಿ ಕೊಂಚ ಸಹಿಷ್ಣುತೆ ವಹಿಸಬೇಕು" ಎಂದರು.

"ಸರ್ ವಿಶ್ವೇಶ್ವರಯ್ಯ ಸಮಿತಿಯ ವಿಚಾರ ಪೂರ್ಣವಾದ ನಂತರ ವರ್ತಮಾನ ಪತ್ರಿಕೆಗಳಿಗೆ ಸ್ವಲ್ಪ ವಿರಾಮ. ಅಣೆಕಟ್ಟು-ಕೋಡಿ ಹರಿಯು ವುದಕ್ಕೆ ಕೆಲವು ದಿನಗಳಾಗಬೇಕು" ಎಂದಿದೆ 25.11.1928ರ "ವಿಶ್ವ ಕರ್ನಾಟಕ".

ಪಂಜಾಬಿನ ಕೇಸರಿ ಲಾಲಾ ಲಜಪತ್‌ರಾಯ್ 17.11.1928ರಂದು ಸ್ವರ್ಗಸ್ಥರಾದರು. 25ನೆಯ ತಾರೀಖು ವಿಶ್ವವಿದ್ಯಾನಿಲಯದ ಅಧಿವೇಶನವು ಮೈಸೂರಿನಲ್ಲಿ ನಡೆದಾಗ ಅಲ್ಲಿ ಡಿ ವಿ ಜಿ, ಲಜಪತ್‌ರಾಯ್ ಅವರು ಭಾರತೀಯ ಶಿಕ್ಷಣಕ್ಕಾಗಿ ಮಾಡಿದ ಕೆಲಸ ಅವರು ಸಾಧಿಸಿದ ಶಿಕ್ಷಣಸಂಸ್ಥೆಗಳು ಇವುಗಳನ್ನು ಕುರಿತು ಮಾತನಾಡಿ ಅನುತಾಪವನ್ನು ಸೂಚಿಸಿದರು. ಬೆಂಗಳೂರಿನಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಪರವಾಗಿ ಗಾಂಧಿ ಮೈದಾನದಲ್ಲಿ ಪ್ರಚಂಡ ಸಾರ್ವಜನಿಕ ಸಭೆ ನಡೆಯಿತು. ಎಲ್.ಎಸ್.ರಾಜು ಅವರ ಅಧ್ಯಕ್ಷತೆಯಲ್ಲಿ ನಡೆದ ಆ ಸಭೆ ಯಲ್ಲಿ ಡಿ ವಿ ಜಿ ಯವರೂ ಮಾತನಾಡಿದರು.

ಇಷ್ಟರಲ್ಲಿ 15.1.1929ರಂದು ವಿಶ್ವೇಶ್ವರಯ್ಯನವರು ತಮ್ಮ ವರದಿ ಯನ್ನು ಸರಕಾರಕ್ಕೆ ಒಪ್ಪಿಸಿದರು. ಆದರೆ ಶಾಸನ ಸಭೆಯಲ್ಲಿ ಡಿ ವಿ ಜಿ ಕೇಳಿದ ಪ್ರಶ್ನೆಗೆ ಉತ್ತರವಾಗಿ ಸರಕಾರದವರು ಅದನ್ನು ಪ್ರಕಟಿಸುವ ಭರವಸೆ ಕೊಡದೆ ಹೋದರು. ಆದರೆ ಆ ವರದಿಯ ಮುಖ್ಯಾಂಶಗಳು ಪತ್ರಿಕೆಗಳಲ್ಲಿ ಪ್ರಕಟ ವಾದವು. ಅದರ ಕಥೆಯನ್ನು ಹೆಚ್.ಕೆ. ವೀರಣ್ಣಗೌಡರು "ಬದುಕು-ಮೆಲುಕು" ಗ್ರಂಥದಲ್ಲಿ ಸ್ವಾರಸ್ಯವಾಗಿ ವಿವರಿಸಿದ್ದಾರೆ. ಆಗ ಡಿ ವಿ ಜಿ "ಗಣಪತಿ ಪ್ರಸಂಗದ ಗೂಢಾರ್ಥ" ಎಂದು ಬರೆದ ಲೇಖನ 7.1.1929ರ 'ವಿಶ್ವ ಕರ್ನಾಟಕ'ದಲ್ಲಿ ಪ್ರಕಟವಾಯಿತು. "ಗಣಪತಿಯ ಗಲಭೆಗಳು ನಮಗೊಂದು ಎಚ್ಚರಿಕೆ ಯಾಗಿರಬೇಕು. ನಮ್ಮ ಮೈಸೂರು ಸಕಲ ಕಲ್ಯಾಣ ಪರಿಪೂರ್ಣವಾಗಿದೆ! ನಮ್ಮ ಸಮಾನ ಯಾವ ಸಂಸ್ಥಾನದವರೂ ಇಲ್ಲ! ನಮಗೆ ಬೇಕಾದುದೆಲ್ಲಾ ಸಿದ್ಧವಾಗಿಯೇ ಇದೆ. ಇನ್ನು ನಮಗೆ ವಿಚಾರವೇಕೆ — ಎಂಬ ಸ್ಥಿತಿಯಲ್ಲಿ ನಾವು ಮೈಮರೆತಿದ್ದೆವು. ಆದರೆ ಮಾವಿನ ಹಣ್ಣಿನ ಹೊರಗಣ ಬಣ್ಣ ಹೊಳೆ ಯುತ್ತಿರುವ ಮಾತ್ರದಿಂದ ಒಳಗಡೆ ತಿರುಳು ಕೊಳೆತಿಲ್ಲವೆಂದು ಖಂಡಿತವಾಗು ವುದಿಲ್ಲ. ಮನೆಯ ಹೊರಗಿನ ಶಿಖರ ಹೊಳೆಯುತ್ತಿರಬಹುದು. ಒಳಗಿನ ಕಂಭ ಅಲ್ಲಾಡುತ್ತಿರಬಹುದು. ಒಂದು ಮಳೆಯ ಹೊಡೆತ ಬಂದರೆ ಆಗ ಶಿಖರ ಮುಖ್ಯವೋ ಕಂಭ ಮುಖ್ಯವೋ ಗೊತ್ತಾಗುತ್ತದೆ. ಅದೇ ಪ್ರಕಾರವಾಗಿ ಈ ಗಲಭೆಗಳಿಂದ ನಮ್ಮ ರಾಜ್ಯಸಂಸ್ಥೆ ಎಷ್ಟು ಭದ್ರವಾಗಿದೆ, ನಮ್ಮ ಅಧಿಕಾರ

ವರ್ಗದ ಪ್ರತಿಷ್ಠೆ ಎಷ್ಟು ಆಳವಾಗಿದೆ — ಎಂಬುದು ಈಗ ವ್ಯಕ್ತಪಟ್ಟಿದೆ. ನಮ್ಮ ಸರಕಾರದ ನಾನಾ ಇಲಾಖೆಗಳಲ್ಲಿಯೂ ಕೋರ್ಟ್ ಕಛೇರಿಗಳಲ್ಲಿಯೂ ಅನೇಕ ಕುಂದಕಗಳಿವೆ ಎಂಬುದು ಈಗ ಸ್ಪಷ್ಟವಾಗಿದೆ. ಇನ್ನಾದರೂ ನಮ್ಮ ಜನರು ಅಲ್ಪ ವಿಚಾರಗಳನ್ನು ಒತ್ತಟ್ಟಿಗಿಟ್ಟು ದೊಡ್ಡ ವಿಚಾರಗಳನ್ನು ಆಲೋಚನೆಗೆ ತೆಗೆದುಕೊಳ್ಳಬೇಕು. ಚಿಲ್ಲರೆ ಚಾಕರಿಗಳ ಹೋರಾಟದ ನಡುವೆ ಭಾರೀ ಪ್ರಸಂಗಗಳನ್ನು ಮರೆತು ಹೋಗಬಾರದು. ಈ ನೀತಿಯು ನಮ್ಮ ಬ್ರಾಹ್ಮಣೇತರ ಮಹಾಜನರ ಅವಗಾಹನೆಗೆ ಬಂದು ಅವರ ಮುಖಂಡರು ಸಾರ್ವಜನಿಕ ದೃಷ್ಟಿಯಿಂದ ರಾಜಕೀಯ ಸಂಸ್ಥೆಗಳನ್ನೂ ಕ್ರಮಗಳನ್ನೂ ಉತ್ತಮಪಡಿಸುವ ಕೆಲಸಕ್ಕೆ ಕೈಹಾಕುವಂತಾದರೆ ಮಾತ್ರ ಗಣಪತಿಯು ನಮ್ಮ ರಾಜ್ಯದಲ್ಲಿ ಒಂದು ಶುಭ ಸಮಾರಂಭವನ್ನೇ ಮೊದಲುಮಾಡಿಸಿರುವನೆಂದು ನಾವು ಸಂತೋಷಪಡಬಹುದು."

ಕಡೆಗೂ ಸಮಿತಿಯ ವರದಿಯನ್ನು ಸರಕಾರ ತನ್ನ ಹುಕುಂನಾಮೆ ಯೊಡನೆ ಪ್ರಕಟಿಸಿತು. ಡಿ ವಿ ಜಿ ಯವರು ವಿಶ್ವೇಶ್ವರಯ್ಯ ವರದಿಯನ್ನು ಎಲ್ಲರೂ ಓದಬೇಕಾದ ಗ್ರಂಥ ಎಂದು ಹೇಳಿದ್ದಾರೆ. ಡಿ ವಿ ಜಿ ಯವರು ಆ ವರದಿಯ ಸಾರಾಂಶವನ್ನು ಹೀಗೆ ಹೇಳಿದ್ದಾರೆ :

(1) ಮೈಸೂರು ರಾಜ್ಯದಲ್ಲಿ ಅಧಿಕಾರ ಸೂತ್ರಗಳೆಲ್ಲ ಒಂದೇ ಕಡೆ ಕೇಂದ್ರೀಕೃತವಾಗಿದೆ.

(2) ಆದದ್ದರಿಂದ ಅಧಿಕಾರವನ್ನು ಚಲಾಯಿಸಬೇಕಾದ ನಾನಾ ಇಲಾಖೆಗಳ ಮುಖ್ಯಸ್ಥರು ತಮ್ಮ ಕೆಲಸ ನಡಸುವುದರಲ್ಲಿ ಕೇಂದ್ರದ ಮುಖ ವನ್ನು ನೋಡುತ್ತಿರುತ್ತಾರೆಯೇ ಹೊರತು ನ್ಯಾಯವೇನು ಎಂಬುದನ್ನು ಸ್ವತಂತ್ರವಾಗಿ ವಿಚಾರಮಾಡುವುದಿಲ್ಲ.

(3) ಹೀಗಾಗಿ ಇಲಾಖೆಗಳ ಅಧಿಕಾರಸ್ಥರ ಕೈಕಟ್ಟಿಹೋಗಿ ಯಾವ ಹೊತ್ತಿನಲ್ಲಿ ಏನು ಆಗಬೇಕೋ ಆ ನ್ಯಾಯ ಪ್ರಯೋಗ ನಡೆಯದೆ ನಿಂತು ಹೋಗುತ್ತದೆ.

(4) ಬೆಂಗಳೂರು ಗಲಭೆಗಳಲ್ಲಿ ಇದು ಸ್ಪಷ್ಟವಾಗಿ ಕಾಣುತ್ತದೆ. ಪೋಲೀಸಿನವರು ತಮ್ಮ ಕೆಲಸವನ್ನು ನಿಷ್ಪಕ್ಷಪಾತವಾಗಿಯೂ ಧೈರ್ಯ ದಿಂದಲೂ ಮಾಡಲಿಲ್ಲ. ಪರೀಕ್ಷೆಯ ಕಾಲದಲ್ಲಿ ಯಂತ್ರ ಮುರಿದುಬಿತ್ತು.

(5) ಇಂಥ ಪರಿಸ್ಥಿತಿಯನ್ನು ಹೋಗಲಾಡಿಸಿ ಸರಕಾರದ ಅಂಗಾಂಗ ಗಳು ವಿಹಿತ ರೀತಿಯಲ್ಲಿ ಸ್ವತಂತ್ರವಾಗಿ ಕೆಲಸ ಮಾಡಬೇಕೆಂದರೆ ಅದಕ್ಕೆ

ಜವಾಬ್ದಾರಿ ಸರಕಾರ ಪದ್ಧತಿಯೊಂದೇ ಇರುವ ಔಷಧ. ಅಧಿಕಾರ ಸೂತ್ರಗಳು ರಾಜ್ಯದ ನಾನಾ ಅಂಗಗಳಲ್ಲಿ ಹರಡಿ ಆ ಅಂಗಗಳು ಪರಸ್ಪರ ಪ್ರತ್ಯುತ್ತರಪ್ರದ (Responsible) ಗಳಾಗುವಂತೆ ವ್ಯವಸ್ಥೆ ಇರಬೇಕು.

ವಿಶ್ವೇಶ್ವರಯ್ಯನವರು ಡಿ ವಿ ಜಿ ಯವರ ವಾದದಿಂದ ಎಷ್ಟು ಪ್ರಭಾವಿತರಾದರೋ ಈಗ ಊಹಿಸುವುದು ಹೇಗೆ? ಆದರೂ ಇದು ಡಿ ವಿ ಜಿ ಯವರ ನಿಲುವಿಗೆ ಆಗ ಗೆಲುವು.

ವಿಶ್ವೇಶ್ವರಯ್ಯ ಸಮಿತಿಯವರು, "ರಾಜಕೀಯ ಅತೃಪ್ತಿಯನ್ನು ಪೂರೈಸುವುದೆಂತು" ಎಂಬ ವಿಚಾರವನ್ನು ಪರ್ಯಾಲೋಚಿಸಿ ಸಂಸ್ಥಾನದ ಸರಕಾರ ವ್ಯವಸ್ಥೆಯಲ್ಲಿ "ಉತ್ತರ ವಾದಿತ್ವ"ದ ಮೂಲತತ್ತ್ವದ ಲಕ್ಷಣಗಳನ್ನು ತಂದುಹಾಕಬೇಕೆಂಬುದನ್ನು ಒತ್ತಿ ಹೇಳಿದ್ದಾರೆ ಎಂದು ಹೇಳಿ ಸರಕಾರದವರು ಪರದಿಯ ಮೇಲೆ 26.1.1929ರಲ್ಲಿ ಹೊರಡಿಸಿದ ನಿರೂಪದಲ್ಲಿ: "ಶ್ರೀಮನ್ಮಹಾರಾಜಾ ಸರಕಾರದವರಿಗೆ ಈ ಮೊರೆಯು ಅರಿವಿಲ್ಲದೆ ಇಲ್ಲ,....ಸರಕಾರದ ಸ್ವರೂಪವನ್ನೇ ಬದಲಾಯಿಸಿದರೂ ದೊಂಬಿಯನ್ನು ನಿರ್ನಾಮ ಮಾಡಲಿಕ್ಕಾಗುವುದಿಲ್ಲ. ಇದು ಇತರ ದೇಶಗಳ ಅನುಭವದಿಂದ ಸಿದ್ಧವಾಗಿದೆ. ಹೊರಗಡೆಯಿಂದ ಆಮದು ಮಾಡಿದ .... ವ್ಯವಸ್ಥಾಯಂತ್ರವನ್ನು .... ಪುರಾತನವೂ ಭಿನ್ನ ಭಿನ್ನವಾದ ನಾಗರಿಕತೆಗಳೂ ಉಳ್ಳ ದೇಶದಲ್ಲಿ ಸ್ಥಾಪಿಸುವುದು ಸಹಜವಾಗಿ ಬಹುಕಷ್ಟವಾದ ಕೆಲಸ. ಮೈಸೂರಿನ ವಿಚಾರದಲ್ಲಿ ಮಾತ್ರ ಇಷ್ಟವಿಲ್ಲದ ಸರಕಾರದ ಕೈಯಿಂದ ಸುಧಾರಣೆಗಳನ್ನು ಕಿತ್ತುಕೊಳ್ಳುವ ಪ್ರಸಂಗದ ಸುಳಿವೇ ಇಲ್ಲ" ಎಂದು ಹೇಳಿಬಿಟ್ಟರು.

ಜವಾಬ್ದಾರಿ ಸರಕಾರಕ್ಕೆ ಗಣಪತಿಯ ಬೆಂಬಲ ಸಿಕ್ಕಿತು. ವಿಶ್ವೇಶ್ವರಯ್ಯನವರೇ ಶಿಫಾರಸು ಮಾಡಿದರು. ಮಿರ್ಜಾರವರು ಜಗ್ಗಲಿಲ್ಲ. 4.2.1929ರಲ್ಲಿ ಸರಕಾರದ ನಿರೂಪವನ್ನು ಖಂಡಿಸಲು ಒಂದು ಸಭೆ ನಡೆಯಿತು. ಪಾಮಡಿ ಸುಬ್ಬರಾಮಶೆಟ್ಟರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಡಿ ವಿ ಜಿ, ಎಂ.ಕೃಷ್ಣಮೂರ್ತಿ, ಎಂ.ಪಿ.ಸೋಮಶೇಖರರಾವ್, ಎಸ್.ವೆಂಕಟಪತಯ್ಯ, ಸಿಟ್ಟೂರು ಶ್ರೀನಿವಾಸರಾವ್, ಎಂ.ಸೀತಾರಾಮಶಾಸ್ತ್ರಿ ಮುಂತಾದವರು ಮಾತನಾಡಿದರು. ವಿಶ್ವೇಶ್ವರಯ್ಯ ಸಮಿತಿಯ ತೀರ್ಮಾನಗಳೂ ಸೂಚನೆಗಳೂ ಪ್ರಜಾಸಮ್ಮತವಾಗಿದೆಯೆಂದೂ ವರದಿಯ ಮೇಲೆ ಸರಕಾರದವರು ಹೊರಡಿಸಿರುವ ಹುಕುಂನಾಮೆಯು ತೃಪ್ತಿಕರವಾಗಿಲ್ಲವೆಂದೂ ಅಂದಿನ ಸಭೆಯು ತೀರ್ಮಾನಿಸಿತು.

22.2.1929ರಲ್ಲಿ ಡಿ ವಿ ಜಿ ಯವರ ಅಧ್ಯಕ್ಷತೆಯಲ್ಲಿ, ಗಾಂಧಿ ಮೈದಾನ

ದಲ್ಲಿ 'ಏಕೀಕರಣ ದಿನ'ವು ಆಚರಿಸಲ್ಪಟ್ಟಿತು. ಅಧ್ಯಕ್ಷರು ಭರತಖಂಡದ ಸ್ವಾತಂತ್ರ್ಯ ಸಮರವನ್ನು ಸಂಗ್ರಹವಾಗಿ ವರ್ಣಿಸಿ ಕರ್ಣಾಟಕದ ಚಳವಳಿಯ ಅರ್ಥವನ್ನು ಸೂಚಿಸಿದರು. ತಿರುಮಲೆ ತಾತಾಚಾರ್ಯರು ಬ್ರಿಟಿಷ್ ಕರ್ಣಾಟಕದ ಜಿಲ್ಲೆಗಳ ರಾಜಕೀಯ – ಏಕೀಕರಣವಾಗಬೇಕು. ಕನ್ನಡ ಮಾತ ನಾಡುವ ಎಲ್ಲ ಭಾಗಗಳಲ್ಲೂ ಸಾಂಸ್ಕೃತಿಕ ಏಕೀಕರಣವಾಗಬೇಕು ಎಂಬ ಗೊತ್ತುವಳಿಯನ್ನು ಸಭೆಯ ಮುಂದಿಟ್ಟು ಉಚಿತವಾದ ಭಾಷಣ ಮಾಡಿದರು. ಶ್ರೀಬೆಟಗೇರಿಯವರು "ಮರಾಠರು ಬೆಳಗಾವಿಯಲ್ಲಿ ತಮ್ಮ ಸಾಹಿತ್ಯ ಸಮ್ಮೇಳನ ವನ್ನು ನಡಸುವ ಉದ್ಯಮವು ದೂಷ್ಯವಾದುದು. ಇದನ್ನು ನಾವು ಖಂಡಿಸು ತ್ತೇವೆ" ಎಂಬ ಠರಾವನ್ನು ಮುಂದಿಟ್ಟು ಗಡಿನಾಡುಗಳ ಗೊಂದಲವನ್ನು ವರ್ಣಿಸಿದರು.

"ಮೈಸೂರು ಸ್ಟೇಟ್ ಕಾಂಗ್ರೆಸ್" ಎಂಬ ಮಹಾಸಭೆ 1928ನೆಯ ಜೂನ್ ತಿಂಗಳಿನಲ್ಲಿ ಮೈಸೂರಿನಲ್ಲಿ ವಿ. ಮಾಣಿಕ್ಯವೇಲು ಮೊದಲಿಯಾರ್ ಅವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಗಿತ್ತು.

ಮೇ 5, 1929ರಂದು ಎಂ. ವೆಂಕಟಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ಆ ಸಂಸ್ಥೆಯ ಎರಡನೆಯ ಸಮ್ಮೇಳನವು ಮೆಜಸ್ಟಿಕ್ ಥಿಯೇಟರಿನಲ್ಲಿ ನಡೆ ಯಿತು. ಹೊಸಕೊಪ್ಪ ಕೃಷ್ಣರಾಯರು, ಪಾಮಡಿ ಸುಬ್ಬರಾಮಶೆಟ್ಟರು, ಎಂ.ಪಿ. ಸೋಮಶೇಖರರಾಯರು, ಎಸ್.ಆರ್.ಎಸ್. ರಾಘವನ್ ಅವರು, ವಿ. ವೆಂಕಟಪ್ಪನವರು, ಸಿ. ವಿ. ನರಸಿಂಗರಾಯರು, ಕೆ. ಟಿ. ಭಾಷ್ಯಂ, ಎಸ್. ವೆಂಕಟಪತಯ್ಯನವರು, ಬೀರೂರಿನ ಕೆ.ಟಿ. ಸತ್ಯನಾರಾಯಣಮೂರ್ತಿ ಶೆಟ್ಟಿಯವರು, ಬಿ.ಎಲ್. ಜೈಯ್ಯಣ್ಣನವರು, ಚಿತ್ರಗುಪ್ತ ಪತ್ರಿಕೆಯ ಸಂಪಾ ದಕರಾದ ವೀರಣ್ಣಗೌಡರು, ರಮಣಲಾಲ್ ತಿವಾರಿ, ತಿರುಮಲೆ ತಾತಾಚಾರ್ಯ ಶರ್ಮ, ವೆಂಕಟರಂಗಂ ಅಯ್ಯಂಗಾರ್, ಬಿ.ಹೆಚ್. ಸಂಜೀವಪ್ಪ ಮುಂತಾದವರು ಪಾಲುಗೊಂಡರು. ಆ ಸಭೆಯಲ್ಲಿ ಹಾಜರಿದ್ದ ಡಿ ವಿ ಜಿ ಯವರು ಬಟ್ಲರ್ ಸಮಿತಿಯ ವರದಿಯನ್ನು ಕುರಿತು ಅಸಮಾಧಾನವನ್ನು ವ್ಯಕ್ತಪಡಿಸುತ್ತಾ ಸಂಸ್ಥಾನಗಳಲ್ಲಿ ಜವಾಬ್ದಾರಿ ಸರಕಾರ ಪದ್ಧತಿಯನ್ನು ಜಾರಿಗೆ ತರಬೇಕೆಂಬ, ಸಂಸ್ಥಾನದ ಅರಸರು, ಬ್ರಿಟಿಷ್ ಸರಕಾರ, ಬ್ರಿಟಿಷ್ ಇಂಡಿಯದ ಮುಖಂಡರು, ಸಂಸ್ಥಾನಗಳ ಪ್ರಜಾಪ್ರತಿನಿಧಿಗಳನ್ನೊಳಗೊಂಡ ದುಂಡುಮೇಜಿನ ಪರಿ ಷತ್ತೊಂದು ನಡೆಯಬೇಕೆಂಬ ಗೊತ್ತುವಳಿಯನ್ನು ಸಭೆಯ ಮುಂದಿಟ್ಟಿದ್ದರು. ಅದು ಸರ್ವಾನುಮತದಿಂದ ಅಂಗೀಕೃತವಾಯಿತು.

ಇಷ್ಟರಲ್ಲಿ ಸರಕಾರದವರ ದಬ್ಬಾಳಿಕೆ ಕ್ರೂರವಾಗಿ ನಡೆದಿತ್ತು. ಪತ್ರಿಕೆಗಳು ಮುಚ್ಚಲ್ಪಟ್ಟವು. ಸೀತಾರಾಮಶಾಸ್ತ್ರಿಗಳು, ಅಶ್ವತ್ಥನಾರಾಯಣಶಾಸ್ತ್ರಿಗಳು ಜೈಲಿಗೆ ಹೋದರು. ಅನೇಕರ ಮೇಲೆ ಮೊಖದ್ದಮೆಗಳು ನಡೆಯುತ್ತಲೇ ಇದ್ದುವು. "ದೇಶೀಯ ಸಂಸ್ಥಾನಗಳ ಪ್ರಜೆಗಳ ದಿವಸ" (Indian States Subjects' Day) ವನ್ನು 3.6.1929 ರಂದು ಹಲವು ಸಂಸ್ಥಾನಗಳಲ್ಲಿ ಆಚರಿಸಲಾಯಿತು. ಬೆಂಗಳೂರಿನಲ್ಲಿ ಕಲಾಸಿಪಾಳ್ಯದ ಜಯಲಕ್ಷ್ಮಿ ಥಿಯೇಟರಿನಲ್ಲಿ ನಡೆದ ಸಭೆಯನ್ನು ಏರ್ಪಡಿಸಿದ್ದವರು ಡಿ ವಿ ಜಿ ಯವರು. ಅವರ ಆಹ್ವಾನವನ್ನು ಮನ್ನಿಸಿ ಸುಮಾರು ಒಂದು ಸಾವಿರ ಜನ ಸಭೆಗೆ ಬಂದಿದ್ದರಂತೆ. ಮದರಾಸಿನ ವಕೀಲರಾದ ದಿವಾನ್ ಬಹದೂರ್ ಎಲ್. ಎ. ಗೋವಿಂದರಾಘವ ಅಯ್ಯರ್ ಅವರು ಅಧ್ಯಕ್ಷರು. ತಮ್ಮ ಅಧ್ಯಕ್ಷಭಾಷಣದಲ್ಲಿ ದೇಶೀಯ ಸಂಸ್ಥಾನದಲ್ಲಿ ಜವಾಬ್ದಾರಿ ಸರಕಾರದ ಸ್ಥಾಪನೆಯ ಆವಶ್ಯಕತೆಯನ್ನು ಕುರಿತೂ, ಸಂಸ್ಥಾನಗಳು ಸಂಯುಕ್ತ ಭಾರತದಲ್ಲಿ ಲೀನವಾಗುವುದನ್ನು ಕುರಿತೂ ಅವರು ಹೇಳಿದರು. ಸಭೆ, ದೇಶೀಯ ಸಂಸ್ಥಾನದ ಅರಸರು ಕೂಡಲೇ ಜವಾಬ್ದಾರಿ ಸರಕಾರ ಪದ್ಧತಿಯನ್ನು ಜಾರಿಗೆ ತರಬೇಕೆಂದೂ ಮೂಲಭೂತ ಹಕ್ಕುಗಳನ್ನು ಕೊಡುವ ಘೋಷಣೆಗಳನ್ನು ಮಾಡಬೇಕೆಂದೂ, ವಿಶ್ವೇಶ್ವರಯ್ಯ ಸಮಿತಿಯವರು ಸಲಹೆ ಮಾಡಿರುವ ಸಂಯುಕ್ತ ಭಾರತ ನಿಬಂಧನೆಯನ್ನು ಅನುಸರಿಸಬೇಕೆಂದೂ ನಿರ್ಣಯಗಳನ್ನು ಮಾಡಿತು. ಮೈಸೂರು, ಪುದುಕೋಟೆ ಮುಂತಾದ ಸ್ಥಳಗಳಲ್ಲಿಯೂ ಸಭೆಗಳು ನಡೆದವು.

ಜುಲೈ, 1928ರಲ್ಲಿ ನಡೆದದ್ದು ಸುಲ್ತಾನ್ ಪೇಟೆಯ ಗಲಭೆ. ಯಾವುದಾದರೊಂದು ಚಳುವಳಿ, ಗಲಭೆ–ಇದರ ಸಂಬಂಧ ಡಿ ವಿ ಜಿ ಯವರಿಗೆ ಇದ್ದಿದ್ದಾದರೆ ಅದು ಈ ಗಲಭೆಯ ಸಮಯದಲ್ಲಿ ಎನ್ನಬಹುದು. ಅದರಲ್ಲಿ ಡಿ ವಿ ಜಿ ಯವರ ಪ್ರತ್ಯಕ್ಷ ಪಾತ್ರ ಸ್ವಲ್ಪ. ಆದರೆ ಅದರ ಪರ್ಯವಸಾನದಲ್ಲಿ ಅವರ ಪರೋಕ್ಷ ಪಾತ್ರ ಬಹು ಹೆಚ್ಚಿನದು ಎನ್ನಿಸುತ್ತದೆ. ಆ ಪ್ರಕರಣದ ಪ್ರಾರಂಭವನ್ನು ಡಿ ವಿ ಜಿ ಯವರ ಮಾತಿನಲ್ಲೇ ಕೇಳೋಣ.

"30.8.1929 ರಂದು ಸುಲ್ತಾನ್‌ಪೇಟೆಯ ವಾರ್ಷಿಕವನ್ನು ನಡೆಸಬೇಕೆಂದು ನಾವು ಹದಿನೈದಿಪ್ಪತ್ತು ಮಂದಿ ಪ್ರಕಟನ ಪತ್ರಿಕೆ ಹೊರಡಿಸಿದೆವು" ಎನ್ನುತ್ತಾರೆ ಡಿ ವಿ ಜಿ. ವಿದ್ಯಾರ್ಥಿಗಳು ಗಣಪತಿಗೆ ಪೂಜೆ ನಡೆಸಲು ಹೋದರು; ಪೋಲಿಸರು ತಡೆಗಟ್ಟಿದರು. ದೊಡ್ಡ ದೊಂಬಿ ನಡೆಯಿತು. ಗಲಭೆಗೆ ಕಾರಣಕರ್ತರೆಂದು ಹದಿಮೂರು ಪ್ರಮುಖರನ್ನು ದಸ್ತಗಿರಿಮಾಡಿದರು. ಅದರಲ್ಲಿ ಐವರು

ಕ್ಷಮಾಪಣೆ ಕೇಳಿಕೊಂಡರು. ಒಬ್ಬರನ್ನುಳಿದು, ವಿಚಾರಣಾಧಿಕಾರಿಯೇ ಮಿಕ್ಕವರನ್ನು ಬಿಟ್ಟುಬಿಟ್ಟರು. ಒಬ್ಬರಿಗೆ 3 ತಿಂಗಳ ಸಜ, 200 ರೂಪಾಯಿ ಜುಲ್ಮಾನೆ ವಿಧಿಸಲ್ಪಟ್ಟಿತು. ಆಗ ವಿಚಾರಣೆಯ ಸಮಯದಲ್ಲಿ ಡಿ ವಿ ಜಿ ಯವರು ಅಪಾದಿತರಾಗಿದ್ದ, ತಿರುಮಲೆ ತಾತಾಚಾರ್ಯ ಶರ್ಮರ ಪರ ಸಾಕ್ಷಿ ಹೇಳಿದರು. ತಾವು 30.8.1929 ರಂದು ಬೆಳಗ್ಗೆ ತಿರುಮಲೆ ತಾತಾಚಾರ್ಯ ಶರ್ಮರನ್ನು ಚಿಕ್ಕಪೇಟೆಯಲ್ಲಿ ಕಂಡದ್ದಾಗಿಯೂ, ಆಗ ಅವರು ವಿದ್ಯಾಭ್ಯಾಸ ಇಲಾಖೆಯ ನಿರ್ದೇಶಕರು, ಸುಲ್ತಾನ್ ಪೇಟೆಯ ಸ್ಕೂಲಿನ ಹುಡುಗರಿಗೆ ಅಂದು ಗಣೇಶನ ಮಂಗಳಾರತಿ ಮಾಡಲು ಅನುಮತಿ ಕೊಟ್ಟಿರುವುದಾಗಿ ತಿಳಿಸಿದರೆಂದೂ, ವಾಸ್ತವಾಂಶ ಹಾಗಿದ್ದರೆ ಅದನ್ನು ಸಮಸ್ತರಿಗೂ ಶರ್ಮರು ಉದ್ದೇಶಿಸಿದ್ದ ನೋಟೀಸಿನ ಮೂಲಕ ತಿಳಿಸುವದು ಸರಿಯೆಂದು ತಾವು ಹೇಳಿದುದಾಗಿಯೂ ಹೇಳಿದರು. ಆದರೆ ತಾವು ಸ್ಕೂಲಿನೊಳಕ್ಕೆ ಸಾರ್ವಜನಿಕರ ಪ್ರವೇಶವನ್ನು ನಿಷೇಧಿಸಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಹೊರಡಿಸಿದ್ದ ಆಜ್ಞೆಯನ್ನು ಕೋಟೆಯ ಗೋಡೆಯಮೇಲೆ ಕಂಡದ್ದಾಗಿಯೂ ತಿಳಿಸಿದರು. ಈ ವಿಚಾರವನ್ನು ಪ್ರಸ್ತಾವಿಸುತ್ತ ನ್ಯಾಯಾಧೀಶರು, ಇಷ್ಟು ಪ್ರಮುಖರಾದ ಪತ್ರಕರ್ತರಾದ ಡಿ ವಿ ಜಿ ಯವರು ಮ್ಯಾಜಿಸ್ಟ್ರೇಟರ ಆಜ್ಞೆಯನ್ನು ಕಂಡಿದ್ದರೂ ಸಹ, ಶರ್ಮರಿಗೆ ನೋಟಿಸನ್ನು ಹಂಚಬಹುದೆಂದು ಹೇಳಿದ್ದು ತಮಗೆ ವಿಚಿತ್ರವಾಗಿ ಕಾಣುತ್ತದೆ ಎಂದು ಹೇಳಿದರು.

ನ್ಯಾಯಾಧೀಶರ ಈ ಟೀಕೆ ಸರಿಯಲ್ಲವೆಂದೂ ಅದನ್ನು ನ್ಯಾಯಾಧೀಶರ ತೀರ್ಪಿನ ಒಕ್ಕಣೆಯಿಂದ ತೆಗೆಸಿ ಹಾಕಲು ತಿರುಗಿ ಕೋರ್ಟನ್ನು ಕೇಳಬಹುದೇ ಎಂದೂ ಪ್ರಸಿದ್ಧ ನ್ಯಾಯವೇತ್ತರಲ್ಲಿ ಡಿ ವಿ ಜಿ ಸಲಹೆ ಕೇಳಿದರು. ಆ ಟೀಕೆ ನ್ಯಾಯಾಧೀಶರ ಅಭಿಪ್ರಾಯವೇ ಹೊರತು ತೀರ್ಮಾನವಲ್ಲವಾದ್ದರಿಂದ ಅದನ್ನು ಕುರಿತು ಚಿಂತಿಸುವುದು ಬೇಡವೆಂಬ ಸಲಹೆಯ ಮೇರೆಗೆ ಡಿ ವಿ ಜಿ ಮುಂದುವರಿಯಲಿಲ್ಲ.

ಈ ಸಮಯದಲ್ಲಿ ಮಿರ್ಜಾ ಅವರಲ್ಲಿ ಇವರಿಗಾದ ಮನಸ್ತಾಪದ ಕಥೆಯು ಮುಕ್ತಾಯವಾದದ್ದು ಹೀಗೆ.

ಡಿ ವಿ ಜಿ ಮಿರ್ಜಾರವರಲ್ಲಿಗೆ ಗಲಭೆ ಪ್ರಾರಂಭವಾದಮೇಲೆ ಹೋಗಲಿಲ್ಲವೆಂಬುದನ್ನು ಆಗಲೇ ಹೇಳಿದ್ದಾಗಿದೆ. ಮಿರ್ಜಾ ಎರಡು ಮೂರು ಸಲ ಹೇಳಿಕಳುಹಿಸಿದರೂ ಹೋಗಲಿಲ್ಲ. ನವರತ್ನ ರಾಮರಾಯರು ಒಂದು ಸಲ "ಅಯ್ಯ, ನಿನ್ನ ರಾಜಕೀಯ ಹೇಗಾದರಿರಲಿ. ಅದರ ತಂಟೆಗೆ ನಾನು ಬರುವುದಿಲ್ಲ. ಆದರೆ

ಸಾಹೇಬರು ನಿನ್ನಲ್ಲಿ ಪ್ರೀತಿ ಇಟ್ಟಿದ್ದಾರೆ. ನಿನ್ನ ಮಕ್ಕಳಿಗೋಸ್ಕರ ಬೊಂಬಾಯಿ ಯಿಂದ ಗೊಂಬೆಗಳನ್ನು ತಂದಿದ್ದಾರೆ. ನೀನು ಹೋಗಿ ಬರಬಹುದಲ್ಲ" ಎಂದರು. ಇವರು ಒಲ್ಲೆ ಎಂದರು. "ನಾನು ಅವುಗಳನ್ನು ತಂದು ಕೊಡುತ್ತೇನೆ" ಎಂದಾಗಲೂ ಇವರು "ಬಿಲ್ ಕುಲ್ ಆಗದು, ಮಾಫ್ ಮಾಡಬೇಕು" ಎಂದುಬಿಟ್ಟರು.

ಈ ವೈಷಮ್ಯದ ಕಥೆಯನ್ನು ಸ್ನೇಹಿತರು ಶ್ರೀನಿವಾಸಶಾಸ್ತ್ರಿಗಳ ಕಿವಿಗೆ ಹಾಕಿದ್ದರೆಂದು ಕಾಣುತ್ತದೆ. ಆ ವರ್ಷ ಬೇಸಗೆಯಲ್ಲಿ ಶ್ರೀನಿವಾಸಶಾಸ್ತ್ರಿಗಳು ಬೆಂಗಳೂರಿಗೆ ಬಂದಿದ್ದಾಗ ಅವರ 61ನೇ ಹುಟ್ಟುಹಬ್ಬದ ಸಮಯದಲ್ಲಿ ಸ್ನೇಹಿತರು ಒಂದು ಸಂತೋಷಕೂಟವನ್ನೇರ್ಪಡಿಸಿದ್ದರು. ಅದಕ್ಕೆ ಡಿ ವಿ ಜಿ ಹೋಗಿಯೇ ಇದ್ದರು. ಮಿರ್ಜಾ ಅವರೂ ಬರುವುದಾಗಿ ಹೇಳಿಕಳುಹಿಸಿದ್ದರು. ಮನೆಯ ಹೊರಗೆ ಚಪ್ಪರದಲ್ಲಿದ್ದರೆ ಮಿರ್ಜಾ ಅವರನ್ನು ನೋಡಬೇಕಾಗಬಹುದೆಂದು ಡಿ ವಿ ಜಿ ಮನೆಯೊಳಗಡೆ ಸೇರಿಕೊಂಡಿದ್ದರು. ಮಿರ್ಜಾ ಬಂದರು. ಆಗ ಶಾಸ್ತ್ರಿಗಳು "ಅಯ್ಯಾ ಗುಂಡಪ್ಪಾ, ಬಾ, ಬಾರಯ್ಯ ಬೇಗ" ಎಂದು ಕೂಗಿದರು. "ಅಲ್ಲಿದ್ದ ಸ್ನೇಹಿತರು ನನ್ನ ಎರಡು ರಟ್ಟೆಗಳನ್ನೂ ಹಿಡಿದು ದರ ದರ ಎಳೆದುಕೊಂಡು ಹೋದರು. ಮಿರ್ಜಾಸಾಹೇಬರು ನಗುತ್ತಿದ್ದರು. ಶಾಸ್ತ್ರಿಗಳು ಇನ್ನೂ ಹೆಚ್ಚು ನಗುತ್ತಿದ್ದರು. ಎದುರೆದುರಿಗೇ ಕಂಡ ಮೇಲೆ ಹಳೆಯ ಕೋಪತಾಪಗಳು ಉಳಿದಿರುತ್ತದೆಯೇ? ಆಗ ನಾವಿಬ್ಬರೂ ಕೈ ಕುಲುಕಿದೆವು. ಅಲ್ಲಿಂದ ನಮಗಿಬ್ಬರಿಗೂ ಎಂದೂ ಯಾವ ಮನಸ್ತಾಪವೂ ಬಂದಿರಲಿಲ್ಲವೇನೋ ಎಂಬಂತೆ ನಡೆದುಕೊಂಡೆವು" ಎಂದಿದ್ದಾರೆ ಡಿ ವಿ ಜಿ.

ಅಷ್ಟರಲ್ಲೇ ನಿಲ್ಲಿಸದೆ ಶಾಸ್ತ್ರಿಗಳು ಮರುದಿನ ಸೆಂಚುರಿ ಕ್ಲಬ್ಬಿನಲ್ಲಿ ಮಾಡಿದ ಉಪನ್ಯಾಸದಲ್ಲೂ ಸ್ನೇಹದ ವಿಷಯವನ್ನೇ ಕುರಿತು ಮಾತನಾಡಿದರು :

"ಸ್ನೇಹ ದೊಡ್ಡದು. ನಮ್ಮ ನಮ್ಮ ಅಭಿಪ್ರಾಯಗಳಿಗಿಂತ ದೊಡ್ಡದು. ನಮ್ಮ ಅಭಿಪ್ರಾಯಗಳನ್ನು ನಾವು ಬದಲಾಯಿಸಿಕೊಳ್ಳುವುದು ಎಷ್ಟೋ ಸಾರಿ ಕರ್ತವ್ಯವಾಗುತ್ತದೆ. ಅಭಿಪ್ರಾಯವೆಂಬುದು ಬುದ್ಧಿಕ್ರಿಯೆ. ಬುದ್ಧಿಗೆ ಸಾಮಗ್ರಿ ಹೊಸಹೊಸದಾಗಿ ದೊರೆತಂತೆಲ್ಲ ಬುದ್ಧಿಯು ಅಭಿಪ್ರಾಯವನ್ನು ತಿದ್ದುತ್ತದೆ. ಸ್ನೇಹವಾದರೋ ಹೃದಯಕ್ರಿಯೆ. ಅದು ಸರ್ವದಾ ನಮ್ಮ ಆತ್ಮವಿಕಾಸಕ್ಕೆ ಸಾಧನವಾಗುತ್ತದೆ. ಸ್ನೇಹವಿಲ್ಲದ ಜೀವನ ಬಡಜೀವನ. ನಮ್ಮ ದೇಶದಲ್ಲಿ ನಾವು ಈಗ ರಾಜಕೀಯವನ್ನು ಅತಿ ಮಾಡಿಕೊಂಡಿದ್ದೇವೆ. ಈ ಅತಿಯಲ್ಲಿ ಕ್ರೋಧಾವೇಶಗಳು ಪ್ರಬಲಿಸಿ ಜೀವನದ ಮಿಕ್ಕೆಲ್ಲ ಕ್ಷೇತ್ರಗಳನ್ನೂ ಹಾಳು ಮಾಡುತ್ತವೆ. ನಮ್ಮ ರಾಜಕೀಯ ಭೇದಗಳಲ್ಲಿ ನಾವು ನಮ್ಮ

ಮಾನವತ್ವವನ್ನು ಮರೆಯಬಾರದು. ಮಾನವತ್ವಕ್ಕೆ ಸಲ್ಲುವ ಗೌರವವನ್ನೂ ಪ್ರೀತಿಯನ್ನೂ ಮರೆಯಬಾರದು ಅಭಿಪ್ರಾಯ ಭೇದವಿದ್ದರೆ ಇದ್ದುಕೊಳ್ಳಲಿ. ಅದರಿಂದ ಆದ ಗಾಯವನ್ನು ಮಾಯಿಸಬಲ್ಲ ಔಷಧ ಸ್ನೇಹರಸ".

ಸಾಹಿತ್ಯ ಪರಿಷತ್ತು ಮತ್ತು ಕರ್ಣಾಟಕ ಸಂಘ

ಕನ್ನಡ ಭಾಷೆಯ ಬೆಳವಣಿಗೆಗಾಗಿ ಸಂಸ್ಥೆಯೊಂದು ಅಗತ್ಯವೆಂದು ಡಿ ವಿ ಜಿ 'ಕರ್ನಾಟಕ' ಪತ್ರಿಕೆಯಲ್ಲಿ ಬರೆದದ್ದನ್ನು ಹಿಂದೆಯೇ ನೋಡಿದ್ದೇವೆ.

ಈ ಸೂಚನೆಯನ್ನು ಗಮನಿಸಿಯೋ ಏನೋ 1914ರ ಮಹಾರಾಜರ ವರ್ಧಂತೀ ಮಹೋತ್ಸವದ ಕಾಲದಲ್ಲಿ ಸಂಪದಭ್ಯುದಯ ಸಮಾಜದ ವಾರ್ಷಿಕ ಸಮ್ಮೇಳನದಲ್ಲಿ ಕನ್ನಡ ಭಾಷಾ ಸಂಸ್ಕರಣ ವಿಷಯ ಮತ್ತು ಗ್ರಂಥಾಭಿವೃದ್ಧಿಯ ವಿಷಯ ಚರ್ಚಿತವಾಗಿ ಈ ತೀರ್ಮಾನವು ಅಂಗೀಕೃತವಾಯಿತು :

"ಕರ್ಣಾಟಕ ಭಾಷೆಯಲ್ಲಿ ವಿವಿಧ ಗ್ರಂಥಗಳನ್ನು ರಚಿಸುವವರ ಪ್ರೋತ್ಸಾಹಕ್ಕಾಗಿ ಸ್ವತಂತ್ರಾಧಿಕಾರವುಳ್ಳ ಪರಿಷತ್ತೊಂದು ಇರಬೇಕು, ಮತ್ತು ಸರ್ಕಾರದವರು ಆ ಪರಿಷತ್ತನ್ನು ಅಂಗೀಕರಿಸಿ ಅದಕ್ಕೆ ವಿಶೇಷ ಸಹಾಯವನ್ನು ಮಾಡುವುದು ಉಚಿತವೆಂದು ಸಂಪದಭ್ಯುದಯ ಸಮಾಜವು ಸರಕಾರಕ್ಕೆ ಶಿಫಾರಸು ಮಾಡಬೇಕು."

ಈ ತೀರ್ಮಾನವನ್ನು ಕಾರ್ಯರೂಪಕ್ಕೆ ತರಲು ಸಂಪಭ್ಯುದಯ ಸಮಾಜದ ವಿದ್ಯಾವಿಷಯಕ ಮಂಡಳಿಯವರು ಎಂ. ಶಾಮರಾಯರು, ಕರ್ಪೂರ ಶ್ರೀನಿವಾಸರಾಯರು, ಪಿ.ಅಚ್ಯುತರಾಯರು ಇವರನ್ನೊಳಗೊಂಡ ಉಪ ಸಮಿತಿಯೊಂದನ್ನು ನೇಮಿಸಿದರು.

ಆ ಸಮಿತಿಯು ವಿದ್ವಜ್ಜನಾಭಿಪ್ರಾಯವನ್ನು ತಿಳಿಯಲು ಕೆಲವು ಉಪನ್ಯಾಸಗಳನ್ನು ಸಂಕಲ್ಪಿಸಿತು. ಮೈಸೂರಿನಲ್ಲಿ ನಡೆದ ಅಂಥ ಒಂದು ಸಮಾರಂಭದಲ್ಲಿಯೇ ಡಿ ವಿ ಜಿ ಯವರು ಬಿ.ಎಂ.ಶ್ರೀಕಂಠಯ್ಯನವರನ್ನು ಮೊದಲ ಬಾರಿ ಕಂಡದ್ದು.

ಅಲ್ಲಿ ಮಾತನಾಡುತ್ತ ಬಿ.ಎಂ.ಶ್ರೀ. ಅವರು ಕನ್ನಡದ ಬರವಣಿಗೆಯಲ್ಲಿ ಸಂಸ್ಕೃತದ ಪದಗಳ ಬಳಕೆ ಮಿತವಾಗಿರಬೇಕು, ನಮ್ಮ ಹಳಗನ್ನಡ ಕಾವ್ಯಗಳಲ್ಲಿ ಅದು ಅಷ್ಟು ಅತಿಯಾಗಿರಬಾರದು ಎಂದು ಹೇಳಿದರಂತೆ. ಸಭಿಕರಲ್ಲೊಬ್ಬರಾಗಿದ್ದ ಇಂಜನಿಯರ್ ಕೆ.ಕೃಷ್ಣಯ್ಯಂಗಾರ್ಯರು 'ಸಂಸ್ಕೃತ ಅತಿಯಾಗಿರುವುದುಂಟೆ, ಶ್ರೀಕಂಠಯ್ಯನವರು ಸಂಸ್ಕೃತವನ್ನು ನಿಂದಿಸಿದರು, ಅದು ಅನ್ಯಾಯ' ಎಂದು ಕಟುವಾಗಿ ಟೀಕಿಸಿದರಂತೆ. ಆಗ ಆ ಸಭೆಗೆ ಹೋಗಿದ್ದ ಡಿ ವಿ ಜಿ ಯವರು

'ಶ್ರೀಕಂಠಯ್ಯನವರು ಸಂಸ್ಕೃತ ದ್ವೇಷಿಯಲ್ಲ; ಕನ್ನಡ ಬೆಳೆಯಬೇಕಾದರೆ ಕೂಡಿದ ಮಟ್ಟಿಗೆ ತನ್ನ ಸ್ವಂತ ಸಾಮಗ್ರಿಯನ್ನು ಬಳಸಿಕೊಳ್ಳಬೇಕು; ರಾಜರ ಮನೆಯ ಊಟದಿಂದ ಸುಖ ಪಡುವುದರಲ್ಲಿ ತನ್ನ ಸ್ವಂತ ಅಡಿಗೆಮನೆಯನ್ನು ಮರೆಯಬಾರದು; ತನ್ನ ಸ್ವಂತ ಉಗ್ರಾಣ ಎಷ್ಟಿದೆಯೋ ಅದನ್ನು ಬಳಸಿಕೊಂಡು ತನ್ನಲ್ಲಿಲ್ಲದ್ದಕ್ಕೆ ಸಂಸ್ಕೃತವನ್ನಾಶ್ರಯಿಸಬೇಕು—ಇದು ಶ್ರೀಕಂಠಯ್ಯನವರ ಅಭಿಪ್ರಾಯ. ಅದು ತಮಗೂ ಸಾಧುವಾದ ಅಭಿಪ್ರಾಯವೆಂದು ತೋರುತ್ತದೆ' ಎಂದು ಹೇಳಿದರಂತೆ. ಅದಕ್ಕೆ ಕೃಷ್ಣಯ್ಯಂಗಾರ್ಯರು "ಏನಯ್ಯಾ? ಖಾಜಿ ನ್ಯಾಯ ಮಾಡುವುದಕ್ಕೆ ಬಂದೆಯಾ?" ಎಂದು ಹಾಸ್ಯ ಮಾಡಿದರಂತೆ. ಬಿ.ಎಂ.ಶ್ರೀಯವರು ಬಂದು ಡಿ ವಿ ಜಿ ಯವರ ಕೈಕುಲುಕಿ "Blessed are the peace makers" "ಸಮಾಧಾನ ತರುವವರು ಧನ್ಯರು" ಎಂದರಂತೆ.

ಜನಾಭಿಪ್ರಾಯ ಸಂಗ್ರಹವಾದ ಮೇಲೆ 22-3-1915ರಲ್ಲಿ ಸಮ್ಮೇಳನದ ಕಾರ್ಯ 1915ನೆಯ ಮೇ ಮೂರನೇ ತಾರೀಖಿನಲ್ಲಿ ಪ್ರಾರಂಭವಾಗಬೇಕೆಂದು ತೀರ್ಮಾನವಾಯಿತು. ಈ ಸಮಿತಿಗಳ ಸದಸ್ಯನಾಗದಿದ್ದರೂ, "ಈ ವಿಚಾರದಲ್ಲಿ ನಾನು ಕೊಂಚ ಉತ್ಸಾಹ ತೋರಿಸಿದ್ದೆನಾದ್ದರಿಂದಲೋ ಏನೋ ಸಂಸ್ಥೆಯ ಸ್ಥಾಪನೆಯ ಕಾಲದಲ್ಲಿ ಅದರ ಮುಖ್ಯಸ್ಥರು ನನಗೆ ಒಂದಿಷ್ಟು ಪ್ರಾಧಾನ್ಯವನ್ನು ಕೊಟ್ಟಿದ್ದರು" ಎನ್ನುತ್ತಾರೆ ಡಿ ವಿ ಜಿ.

ಪರಿಷತ್ತು ಸ್ಥಾಪನೆಯಾದದ್ದು 3-5-1915ರಲ್ಲಿ. ಅದರ ಮೊದಲನೆಯ ಅಧಿವೇಶನದ ಕಾರ್ಯಕಲಾಪಗಳಲ್ಲಿ ಭಾಗವಹಿಸಿದ್ದೇ ಅಲ್ಲದೆ 6-5-1915ರಂದು ಸಭೆಗೆ ಬಂದಿದ್ದ ಮಹನೀಯರ ಸಂತೋಷಕ್ಕಾಗಿ ಡಿ ವಿ ಜಿ ಒಂದು ಸಂತೋಷ ಕೂಟವನ್ನೇರ್ಪಡಿಸಿದ್ದರು. ಆಗ ಪ್ರಖ್ಯಾತರಾಗಿದ್ದ ಪಿಟೀಲು ವಿದ್ವಾನ್ ಪುಟ್ಟಪ್ಪನವರ ಬಾಯಿ ಹಾಡಿಕೆ ನಡೆಯಿತು. ಡಿ ವಿ ಜಿ ಯವರ ಮಿತ್ರರಾಗಿದ್ದ ಡಿ. ಎಂ. ನರಸಿಂಗರಾಯರ ಮೂಲಕ ಸೆಂಟ್ರಲ್ ಕಾಲೇಜಿನ ಹಾಸ್ಟಲ್ ವಾರ್ಡನ್ ಆಗಿದ್ದ ಬಿ.ವೆಂಕಟೇಶಾಚಾರ್ಯರು ಪರಿಚಯವಾದದ್ದು ಆಗ. ಅವರು ಆ ಸಂತೋಷಕೂಟಕ್ಕೆ ಎಲ್ಲ ವಿಧಗಳಲ್ಲಿಯೂ ಸಹಾಯ ಮಾಡಿದರಂತೆ. ಅಲ್ಲಿಗೆ ಬಂದಿದ್ದ ಹೆಚ್.ವಿ.ನಂಜುಂಡಯ್ಯನವರು, ಡಿ ವಿ ಜಿ ಯವರನ್ನು ಕರೆದು "ಎಷ್ಟು ಖರ್ಚು ಮಾಡಿದೆ? ಸಾಲ ಹೆಚ್ಚು ಮಾಡಿದ್ದರೆ ಹೇಳು" ಎಂದು ಕೇಳಿದರು. ಆಗ ಎಂ. ಶಾಮರಾಯರು "ಮಾಡಲೇಳಿ, ಹುಡುಗನ ಹುಚ್ಚು" ಎಂದರಂತೆ.

ಹೀಗೆ ಪರಿಷತ್ತಿನೊಡನೆ ಪ್ರಾರಂಭವಾದ ಸಂಬಂಧ ಕಾಲಕ್ರಮೇಣ ಗಾಢವಾಯಿತು. ಸುಮಾರು 30-40 ವರ್ಷಗಳ ಕಾಲ ಡಿ ವಿ ಜಿ ಯವರ ಜೀವನದ ಭಾಗವಾಗಿ ಹೋಯಿತು.

ಡಿ. ವಿ. ಗುಂಡಪ್ಪನವರು, ಎಡಿಟರ್, 'ಕರ್ಣಾಟಕ', ಬೆಂಗಳೂರು ಇವರು ಪರಿಷತ್ತಿನ ಪ್ರಥಮವರ್ಗದ ಸಾಧಾರಣ ಸದಸ್ಯರಾದದ್ದು 14.5.1916ರಲ್ಲಿ ಎಂದು ಅಕ್ಟೋಬರ್ 1916ರ ಪರಿಷತ್ಪತ್ರಿಕೆ ತಿಳಿಸುತ್ತದೆ.

ಪರಿಷತ್ತು ಪ್ರಾರಂಭವಾದ ಕೆಲವು ದಿನಗಳ ತರುವಾಯ ಇಬ್ಬರು ದೊಡ್ಡಮನುಷ್ಯರು ಡಿ ವಿ ಜಿ ಯವರನ್ನು ನೋಡಲು ಬಂದರು. "ನೀವು ಯಾರು, ವಿಷಯವೇನು" ಎಂಬ ಇವರ ಪ್ರಶ್ನೆಗೆ, ಅವರು ತಾವು ಕಂಟೋನ್ಮೆಂಟಿನಿಂದ ಬಂದಿರುವುದಾಗಿ ಹೇಳಿ "ಸ್ವಾಮಿ, ಪರಿಷತ್ತನ್ನು ಪ್ರಾರಂಭ ಮಾಡಿದವರು ಎಲ್ಲರೂ ಮುದುಕರು : ಪ್ರತಿಷ್ಠಾವಂತರು. ನೀವು ಹೋಗಿ ಅವರ ಜೊತೆ ಸೇರಿಕೊಂಡಿದ್ದೀರಲ್ಲ! ಅವರಿಂದ ಏನು ಕೆಲಸ ನಡೆಯುತ್ತದೆ ? ಕೆಲಸ ಮಾಡುವವರಿಲ್ಲವೆ ಹೋದರೆ ಪರಿಷತ್ತಿನಿಂದ ಯಾರಿಗೇನು ಪ್ರಯೋಜನ ? ನೀವು ನಮ್ಮ ವಯಸ್ಸಿನವರು, ಹೋಗಿ ಆ ವೃದ್ಧರಲ್ಲಿ ತಗಲಿಹಾಕಿಕೊಂಡಿದ್ದೀರಿ" ಎಂದರು. ಡಿ ವಿ ಜಿ "ನಾನೇನೂ ತಗಲಿಹಾಕಿಕೊಂಡಿಲ್ಲ. ಅವರು ಒಳ್ಳೆಯ ಕೆಲಸ ಮಾಡೋಣ ಬಾ ಎಂದರು; ಹೋದೆ. ಈಗ ನೀವು ಬಾ ಎಂದರೆ ನಿಮ್ಮೊಡನೆಯೂ ಸೇರಲು ಸಿದ್ಧನಾಗಿದ್ದೇನೆ" ಎಂದರು. ಹಾಗೆ ಡಿ ವಿ ಜಿ ಯವರನ್ನು ಆಹ್ವಾನಿಸಿದವರು ಟಿ. ಎಸ್. ವೆಂಕಣ್ಣಯ್ಯ ಮತ್ತು ಎ. ಆರ್. ಕೃಷ್ಣಶಾಸ್ತ್ರಿಗಳು.

ಅಲ್ಲಿಂದ ಕೆಲವು ತಿಂಗಳುಗಳೊಳಗಾಗಿ ಪ್ರಾರಂಭವಾದದ್ದು ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘ (ಆಗಸ್ಟ್ 1918). ಅದು ಕರ್ಣಾಟಕ ಸಂಘಗಳಲ್ಲೆಲ್ಲಾ ಮೊದಲನೆಯದು. ಅದು ಪರಿಷತ್ತಿಗೆ ಪ್ರತಿಸ್ಪರ್ಧಿಯಾಗಿ ಹುಟ್ಟಿದ್ದಲ್ಲ; ಕೇವಲ ಪರಿಪೂರಕವಾದದ್ದು. ಪರಿಷತ್ತಿನಲ್ಲಿ ಮುಂದಾಳಾಗಿದ್ದ ಪ್ರೊ|| ಬಿ. ವೆಂಕಟನಾರಣಪ್ಪನವರು ಕರ್ಣಾಟಕ ಸಂಘದ ಅಧ್ಯಕ್ಷರಾಗಿದ್ದರು. ಬಹುವರ್ಷಗಳ ಕಾಲ ಕರ್ಣಾಟಕ ಸಂಘದ ಕಾರ್ಯಕಲಾಪಗಳು ಪರಿಷತ್ತಿನದಕ್ಕಿಂತ ಹೆಚ್ಚು ಯಶಸ್ವಿಯಾಗಿ ನಡೆದವು. ಪದೇ ಪದೇ ಉಪನ್ಯಾಸಗಳೂ ಕಾವ್ಯವಾಚನ ಪ್ರಸಂಗಗಳೂ ಸಂತೋಷಕೂಟಗಳೂ ನಡೆದವು. ಅವರಲ್ಲೆಲ್ಲ ಭಾಗವಹಿಸುತ್ತಿದ್ದರು ಡಿ ವಿ ಜಿ. ಸಂಘದ ಪ್ರಬುದ್ಧ ಕರ್ಣಾಟಕ ಪತ್ರಿಕೆ ಬಹು ಬೆಲೆಯುಳ್ಳ ಲೇಖನಗಳಿಂದ ತುಂಬಿಕೊಂಡು ಹೆಸರು ಪಡೆಯಿತು.

"ಕರ್ನಾಟಕ ಸಂಘದ ಕಾರ್ಯಕಲಾಪಗಳಲ್ಲಿ ಆಗಾಗ ಸಂತೋಷ ಕೂಟಗಳು ನಮಗೆ ದೊರೆಯುತ್ತಿದ್ದವು. ಇಂಥ ಸಮಾರಂಭಗಳು ಯುವ ಜನರುಗಳ ಕಡೆ ಬಹು ಮುಖ್ಯವಾದವೆಂದು ನನ್ನ ಅನುಭವ. ಕನ್ನಡ ಸಾಹಿತ್ಯ ಪರಿಷತ್ತಿನ ನನ್ನ ಅನುಭವದಲ್ಲಿಯೂ ಈ ಅಭಿಪ್ರಾಯ ಸಮರ್ಥಿತವಾಗಿದೆ. ಕರ್ನಾಟಕ ಸಂಘದ ಸಂತೋಷ ಸಮಾರಂಭಗಳನ್ನು ಏರ್ಪಡಿಸುವುದರಲ್ಲಿ ಕೃಷ್ಣಶಾಸ್ತ್ರಿಗಳ ಮರದು ಎತ್ತಿದ ಕೈ. ....ಕೃಷ್ಣಶಾಸ್ತ್ರಿಗಳಿಗೆ ಸಂಘದ ಯಾವ ಕೆಲಸವೂ ಸಣ್ಣದೆಂದು ತೋರಿರಲಿಲ್ಲ. ....ಎಲ್ಲ ಸಣ್ಣಪುಟ್ಟ ಕೆಲಸಗಳಲ್ಲಿಯೂ ಅವರಿಗಿದ್ದ ಶ್ರದ್ಧೆ, ಅವರಿಗೆ ವ್ಯಾಕರಣ ವಿಚಾರದಲ್ಲಿಯೂ ಸಾಹಿತ್ಯ ಶೋಧನೆಯಲ್ಲಿಯೂ ಎಷ್ಟು ಶ್ರದ್ಧೆಯಿತ್ತೋ ಅಷ್ಟೇ ಆಳವಾದದ್ದು. ಆದದ್ದರಿಂದ ಅವರ ತಿಂಡಿ ತೀರ್ಥಗಳು ಸೊಗಯಿಸುತ್ತಿದ್ದವು. ಒಂದಕ್ಕಿಂತ ಒಂದು ಸೊಗಯಿಸುವಂತಿದ್ದವು" ಎಂದು ಸಂತೋಷದಿಂದ ಅದನ್ನು ನೆನೆಯುತ್ತಾರೆ ಡಿ ವಿ ಜಿ.

ಕರ್ನಾಟಕ ಸಂಘದ ಸಂಬಂಧ ಡಿ ವಿ ಜಿ ಯವರ ಜೀವನಪರ್ಯಂತವೂ ಇದ್ದ ಒಂದು ಸಂಬಂಧ.

ಡಿ ವಿ ಜಿ ಯವರ ಮಗ ಡಾ॥ ಬಿ. ಜಿ. ಎಲ್. ಸ್ವಾಮಿ ಸೆಂಟ್ರಲ್ ಕಾಲೇಜಿನಲ್ಲಿ ಓದುತ್ತಿದ್ದಾಗ 1936ರಲ್ಲಿ ಕರ್ನಾಟಕ ಸಂಘದ ಕಾರ್ಯದರ್ಶಿಯಾಗಿದ್ದರು. ಅವರ ನೆನಪುಗಳನ್ನು "ಪಂಚ ಕಳಸ ಗೋಪುರ" ಎಂಬ ಗ್ರಂಥದಲ್ಲಿ ಅವರು ಬಹು ಸ್ವಾರಸ್ಯವಾಗಿ ಹೇಳಿದ್ದಾರೆ. ಕನ್ನಡ ಸಾಹಿತ್ಯದಲ್ಲೇ ಅದು ಅಪೂರ್ವವಾದ ಗ್ರಂಥ.

1920ರ ಸೆಪ್ಟೆಂಬರ್ 20ರಂದು ಡಿ ವಿ ಜಿ ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದ ದ್ವಿತೀಯ ವರ್ಷಾರಂಭ ಭಾಷಣವನ್ನು ಮಾಡಿದರು. ವಿಷಯ "ಸಾಹಿತ್ಯ ಮತ್ತು ಜನಜೀವನ". "ಕರ್ನಾಟಕ ಭಾಷೆಯು ಬೆಳೆಯಬೇಕಾದರೆ, ಕನ್ನಡ ಕಾವ್ಯರಾಶಿಯು ದೊಡ್ಡದಾಗಬೇಕಾದರೆ, ಕನ್ನಡನಾಡು ಮನ್ನಣೆಯನ್ನು ಪಡೆಯಬೇಕಾದರೆ, ನಮ್ಮಲ್ಲಿ ವಿದ್ಯಾವಂತರಾದವರು ಕೇವಲ ಸ್ವಲಾಭ ಪ್ರೇರಣೆಗೆ ಅಧೀನರಾಗದೆ ಸತ್ಕ್ರಿಯಾ ಪ್ರೇರಣೆಗೂ ತಮ್ಮೆದೆಯಲ್ಲಿ ಎಡೆಗೊಡಬೇಕು. ಯಾವ ದೇಶದಲ್ಲಿ ವಿದ್ಯಾವಂತರು ತಮ್ಮ ಬುದ್ಧಿಯನ್ನು ಕೂಲಿಯ ಕೆಲಸಕ್ಕೆ ಮೀಸಲು ಬಿಟ್ಟಿರುವರೋ, ಎಲ್ಲಿ ಅವರು ತಮ್ಮ ಶಕ್ತಿ ಸಾಮರ್ಥ್ಯಗಳನ್ನು ಬ್ಯಾಂಕುಗಳಿಗೆ ಬಾಡಿಗೆಗೆ ಕೊಟ್ಟಿರುವರೋ, ಎಲ್ಲಿ ಅವರಿಗೆ ಹೆಂಡತಿ ಮಕ್ಕಳು ಅಳಿಯಂದಿರ ವಿನಾ ಪ್ರಪಂಚವು ಇಲ್ಲವೋ ಅಥವಾ ಉಪಕರಣಮಾತ್ರವಾಗಿದೆಯೋ, ಎಲ್ಲಿ ಅವರಿಗೆ ಲೋಕಹಿತಚಿಂತನೆಯೆಂಬುದು

ದೂರವಲ್ಲಿಟ್ಟಿರಬೇಕಾದ ಒಂದು ವ್ಯಾಧಿವಿಶೇಷವೆಂದು ತೋರಿರುವುದೋ, ಎಲ್ಲಿ ಊಟದ ಮನೆ, ಕಛೇರಿ, ಮಲಗುವ ಕೋಣೆಗಳೇ ಸತ್ಯಲೋಕ ವೈಕುಂಠ ಕೈಲಾಸಗಳಾಗಿವೆಯೋ ಆ ದೇಶದಲ್ಲಿ ಉದ್ಗ್ರಂಥ ರಚನೆಯು ಹೇಗೆ ತಾನೆ ಆದೀತು? ಉದಾತ್ತ ಸಂಕಲ್ಪಗಳೂ ಉದಾರ ಹೃದಯವೂ ಇಲ್ಲದ ಜನರ ಮಧ್ಯದಲ್ಲಿ ಮಹಾಕಾವ್ಯ ಲೇಖನಕ್ಕೆ ಆವಶ್ಯಕವಾದ ಸ್ಫೂರ್ತಿ ವಿಶೇಷವು ಹೇಗೆ ದೊರಕೀತು?" ಎಂದು ಉದಾತ್ತ ಜೀವನಕ್ಕಾಗಿ ವಾದ ಮಾಡಿದ್ದಾರೆ.

1928ರ ಸೆಪ್ಟೆಂಬರ್ 3ರಲ್ಲಿ ಅವರು ಸೆಂಟ್ರಲ್ ಕಾಲೇಜ್ ಕರ್ಣಾಟಕ ಸಂಘದಲ್ಲಿ ಮಾಡಿದ ಸಂವತ್ಸರಾರಂಭ ಭಾಷಣದಲ್ಲಿ ಸಾಹಿತ್ಯ ಮತ್ತು ಜೀವನ ಸಿದ್ಧಾಂತ, ಸಾಹಿತ್ಯ ಮತ್ತು ವಿಜ್ಞಾನ ಇವುಗಳ ಅನ್ಯೋನ್ಯ ಸಂಬಂಧಗಳನ್ನು ಚರ್ಚಿಸಿ, ಪುರಾತನ ನೂತನಗಳ ಸಮನ್ವಯದ ಆವಶ್ಯಕತೆಯನ್ನು ವಿವರಿಸಿ ಜೀವನ ಸಾರ್ಥಕ್ಯಕ್ಕೆ ಜೀವನ ಮತವೊಂದರ ನಕ್ಷೆಯನ್ನು ಅಲ್ಲಿ ಕೊಟ್ಟಿದ್ದಾರೆ.

"ಪ್ರಬುದ್ಧ ಕರ್ನಾಟಕದ ಗೆಳೆಯರ ಜೊತೆಗೆ, ಪರಿಷತ್ತಿನ ಕಾರ್ಯಕರ್ತರ ಜೊತೆಗೆ ಸೇರಿ ಅವರು ಬರೆದುದೂ ಮಾಡಿದುದೂ ದೊಡ್ಡ ಕೆಲಸ. ಸೆಂಟ್ರಲ್ ಕಾಲೇಜ್ ಕರ್ನಾಟಕ ಸಂಘದ ವೇದಿಕೆಯ ಮೇಲೆಯೇ ಅವರು ಸಾಹಿತ್ಯ ಮತ್ತು ಜೀವನ ಸೌಂದರ್ಯಗಳನ್ನು ಕುರಿತು ಭಾಷಣ ಮಾಡಿದುದು. ಆ ಭಾಷಣಗಳನ್ನು ಕೃಷ್ಣಶಾಸ್ತ್ರಿಗಳು ಅವರು ಮಾತನಾಡುತ್ತಿದ್ದಂತೆಯೇ ಬರೆದುಕೊಂಡರು. ಹೆಚ್ಚು ಮಾರ್ಪಾಟುಗಳನ್ನು ಮಾಡದೆ ಅಚ್ಚು ಮಾಡಲು ಭಾಷಣ ಒದಗಿತು. ಅಷ್ಟು ಅಚ್ಚುಕಟ್ಟು ಅವರ ಮಾತು. ಅಂಥದಕ್ಕೆ ಬೇಕಾದ ಪೂರ್ವ ಸಿದ್ಧತೆಯನ್ನು ಊಹಿಸಿಕೊಳ್ಳಬಹುದು" ಎಂದು ವಿಸ್ಮಯಗೊಂಡಿದ್ದಾರೆ ವಿ. ಸೀ.

"ಸಾಹಿತ್ಯವನ್ನು ಕುರಿತ ದೀರ್ಘವಾದ ವಿವರಣೆ ಮೊದಲು ಕಂಡದ್ದು ಡಿ ವಿ ಜಿ ಯವರ 'ಸಾಹಿತ್ಯ ಮತ್ತು ಜನಜೀವನ' ಎಂಬ ಉಪನ್ಯಾಸದಲ್ಲಿ ಎಂದು ಕಾಣುತ್ತದೆ" ಎಂದು ಎಲ್. ಎಸ್. ಶೇಷಗಿರಿರಾಯರು 'ಹೊಸಗನ್ನಡ ಸಾಹಿತ್ಯ ಚರಿತ್ರೆ'ಯಲ್ಲಿ ಹೇಳಿದ್ದಾರೆ.

ಡಿ ವಿ ಜಿ ಯವರ "ವಸಂತಕುಸುಮ" ಮೊದಲು ಪ್ರಕಟವಾದದ್ದು "ಪ್ರಬುದ್ಧ ಕರ್ಣಾಟಕ"ದಲ್ಲಿ. ಅದು ಸಂಘದ ಪ್ರಾರ್ಥನಾಗೀತವೂ ಆಯಿತು. ಅವರ ಅನೇಕ ಕವನಗಳು, ಭಾಷೆಯನ್ನು ಕುರಿತ ಪ್ರಬಂಧ, 'ವಿದ್ಯಾರಣ್ಯರ ಸಮಕಾಲೀನರು', 'ಉಮರನ ಒಸಗೆ' ಎಲ್ಲಾ ಮೊದಲು ಬಂದದ್ದು ಅದರಲ್ಲಿ. ಕರ್ಣಾಟಕ ಸಂಘವು ಸ್ವತಂತ್ರವಾಗಿ ಪ್ರಕಟಿಸಿ ಪ್ರಬುದ್ಧ ಕರ್ಣಾಟಕದ ಚಂದಾದಾರ

ರಿಗೆ ಉಚಿತವಾಗಿ ಹಂಚಿದ ಪುಸ್ತಕಗಳಲ್ಲಿ "ವಸಂತ ಕುಸುಮಾಂಜಲಿ", "ನಿವೇದನ", ಬಿ ಎಂ ಶ್ರೀ ಅವರ "ಇಂಗ್ಲಿಷ್ ಗೀತಗಳು" ಮಾಸ್ತಿಯವರ "ತಾವರೆ" ಸೇರಿವೆ. ಪ್ರಬುದ್ಧ ಕರ್ಣಾಟಕದಲ್ಲಿ ಬಂದ ಅವರ ಲೇಖನಗಳು ಅನಂತರ ಉಮರನ ಒಸಗೆ, ವಿದ್ಯಾರಣ್ಯರ ಸಮಕಾಲೀನರು. ಎಂಬ ಪುಸ್ತಕ ಗಳಾಗಿ ಬಂದಿವೆ. ಈ ಲೇಖನಗಳಿಗೆ ಸಂಘ ಸಂಭಾವನೆಯನ್ನೇನೂ ಕೊಡುತ್ತಿ ರಲಿಲ್ಲ. ಬಿ ಎಂ ಶ್ರೀ, ಮಾಸ್ತಿ, ಡಿ ವಿ ಜಿ, "ಇಂಥವರು ಅಭಿಮಾನದಿಂದ ಬರೆದಿರುವ ಲೇಖನಗಳನ್ನೂ ಕೊಟ್ಟಿರುವ ಗ್ರಂಥಗಳನ್ನೂ ಎಷ್ಟು ದುಡ್ಡು ಕೊಟ್ಟರೆ ತಾನೆ ಬರೆದುಕೊಡುತ್ತಿದ್ದರು ? ದುಡ್ಡಿಗೆ ದೊರಕುವುದು 'ಬಜಾರಿ ಮಾಲು' ಎಂದಿದ್ದಾರೆ ಎ. ಆರ್. ಕೃಷ್ಣಶಾಸ್ತ್ರಿಗಳು.

ಪರಿಷತ್ತನ್ನು ಪ್ರಾರಂಭಿಸುವಾಗ ಹೇಗೆ, "ತಾನೆಲೆಯ ಪಿಂತಿರ್ದು ದೀನತೆಯ ತೋರಿ ಅಭಿಮಾನವನು ತೊರೆದು ಕೃತ ಕೃತ್ಯತೆಯ ಪಡೆವಂತೆ" ಇದ್ದರೋ ಹಾಗೆಯೇ ಅದರ ಇತರ ಚಟುವಟಿಕೆಗಳಲ್ಲಿ ಡಿ ವಿ ಜಿ ಭಾಗವಹಿಸು ತ್ತಿದ್ದರೂ, ಅದರ ಅಧಿಕಾರ ವರ್ಗದಲ್ಲಿ, ಅವರು ಉಪಾಧ್ಯಕ್ಷರಾಗುವವರೆಗೂ, ಸೇರಿರಲಿಲ್ಲ. ಪರಿಷತ್ತನ್ನು ಕಟ್ಟಿದವರ ಪೈಕಿ ಮೊದ ಮೊದಲಿನವರಾದ ಕರ್ಪೂರ ಶ್ರೀನಿವಾಸರಾಯರು, ಎಂ. ಎಸ್. ಪುಟ್ಟಣ್ಣನವರು, ಬೆಳ್ಳಾವೆ ವೆಂಕಟನಾರಣಪ್ಪನವರು, ವೈ. ಕೆ. ರಾಮಚಂದ್ರರಾಯರು, ನಂಗಪುರಂ ವೆಂಕಟೇಶ ಅಯ್ಯಂಗಾರ್ಯರು, ಕಡಬದ ನಂಜುಂಡ ಶಾಸ್ತ್ರಿಗಳು, ತೋಗೆರೆ ನಂಜುಂಡ ಶಾಸ್ತ್ರಿಗಳು ಇವರನ್ನೆಲ್ಲ "ಮನಸ್ತೃಪ್ತಿಯಿಂದ" ಅವರು ಜ್ಞಾಪಿಸಿ ಕೊಳ್ಳುತ್ತಾರೆ. ಅದೂ ಅಲ್ಲದೆ "ಪರಿಷತ್ತನ್ನು ಮೊದಮೊದಲು ಕಟ್ಟಿ ಬೆಳೆಸಿ ದವರಲ್ಲಿ ಮುಖ್ಯಮುಖ್ಯರಾದವರು ಒಂದು ಗುರುಶಿಷ್ಯ ಪರಂಪರೆಯಾಗಿ ಬಂದವರು. ನಂಗಪುರಂ ವೆಂಕಟೇಶ ಅಯ್ಯಂಗಾರ್ಯರ ಶಿಷ್ಯರು – ವೆಂಕಟ ನಾರಾಯಣಪ್ಪನವರು, ವೆಂಕಟನಾರಣಪ್ಪನವರ ಶಿಷ್ಯರು ಬಿ.ಎಂ.ಶ್ರೀಕಂಠಯ್ಯ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎಂ.ಆರ್. ಶ್ರೀನಿವಾಸಮೂರ್ತಿ—ಇವರು. ಶ್ರೀಕಂಠಯ್ಯನವರ ಶಿಷ್ಯರು ವೆಂಕಣ್ಣಯ್ಯ, ಕೃಷ್ಣಶಾಸ್ತ್ರಿ—ಇವರು. ಹೀಗೆ ಅನ್ಯೋನ್ಯ ಅಭಿಮಾನವಿದ್ದದ್ದು ಪರಿಷತ್ತಿಗೆ ಅನುಕೂಲವಾಯಿತು. ಅವರು ಗಳಲ್ಲಿ ಅಭಿಪ್ರಾಯಭೇದಗಳು ಎಷ್ಟೋ ಇದ್ದವು. ಆದರೆ ಅವುಗಳನ್ನು ತಿಳಿಸುವ ಮಾತಿನಲ್ಲಿ ನಯವೂ ನಾಜೂಕೂ ಸ್ನೇಹಧ್ವನಿಯೂ ಇದ್ದದ್ದರಿಂದ ಸಂಘದಲ್ಲಿ ಕೊಂಚ ಮಾತ್ರವೂ ಬಿರುಕು ತೋರಲಿಲ್ಲ. ಚರ್ಚೆಯ ಕಾಲದ ಹೊರತು ಮಿಕ್ಕೆಲ್ಲ ಕಾಲಗಳಲ್ಲಿಯೂ ಅವರು ಏಕೈಕ ಮನಸ್ಕರಾಗಿರುತ್ತಿದ್ದರು,"

ಎಂದು ಅಂದಿನ ವಾತಾವರಣವನ್ನು ಅವರು ವರ್ಣಿಸಿದ್ದಾರೆ. ಇವರೆಲ್ಲರ ಗೌರವಕ್ಕೆ ವಿಶ್ವಾಸಕ್ಕೆ ಪಾತ್ರರಾಗಿದ್ದರು ಡಿ ವಿ ಜಿ.

ಮೊದಮೊದಲ ಸುಮಾರು ಎಲ್ಲ ಸಾಹಿತ್ಯ ಸಮ್ಮೇಳನಗಳಿಗೂ ಹೋಗುತ್ತಿದ್ದುದನ್ನೂ ಅಲ್ಲಿನ ವಿಶೇಷಗಳನ್ನೂ ಅವರು 'ಜ್ಞಾಪಕ ಚಿತ್ರಶಾಲೆ'ಯಲ್ಲಿ ವಿವರಿಸಿದ್ದಾರೆ. ಹಾಗೆಯೇ ಡಿ ವಿ ಜಿ, ವೆಂಕಟನಾರಣಪ್ಪನವರೊಡನೆ ಹಂಪೆಗೆ ಹೋಗಿದ್ದ ವಿಷಯವನ್ನು ವಿ. ಸೀ. 'ಪಂಪಾ ಯಾತ್ರೆ'ಯಲ್ಲಿ ಹೇಳಿದ್ದಾರೆ.

ಪರಿಷತ್ತು ಪ್ರಕಟಿಸಿದ "ಪಂಪಭಾರತ"ದ ಸಂಪಾದನಾಕಾರ್ಯದಲ್ಲೂ ಅವರು ಪಾಲುಗೊಂಡಿದ್ದಾರೆ.

1925ರಲ್ಲಿ ಅವರು ಬೊಂಬಾಯಿಗೆ ಹೋಗಿದ್ದಾಗ, ಅವರು ಮಹಾರಾಷ್ಟ್ರ ಸಾಹಿತ್ಯ ಮಂಡಲಕ್ಕೆ ಹೋಗಿ ಕರ್ನಾಟಕ ಸಾಹಿತ್ಯ ಪರಿಷತ್ತಿಗೆ ಉಪಯುಕ್ತವಾದ ವಿಷಯಗಳು ಇವೆಯೆ ಎಂದು ವಿಚಾರಿಸಿಕೊಂಡು ವೆಂಕಟನಾರಣಪ್ಪನವರಿಗೆ ಪತ್ರ ಬರೆದಿದ್ದಾರೆ.

ಡಿ ವಿ ಜಿ ಯವರು ಮಡಿಕೇರಿಯಲ್ಲಿ ಡಿಸೆಂಬರ್ 28, 1932ರಲ್ಲಿ ನಡೆದ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾದರು. "ನಾನು ಅಧ್ಯಕ್ಷರನ್ನು ಮಡಿಕೇರಿಗೆ ನನ್ನ ಕಾರಿನಲ್ಲಿ ಕರೆದುಕೊಂಡು ಹೋಗುವ, ಅಲ್ಲಿಂದ ಕರೆದು ತರುವ ಹೊಣೆಯ ಭಾಗ್ಯವನ್ನು ವಹಿಸಿಕೊಂಡೆನು. ಸಮ್ಮೇಳನ ಬಹು ಚೆನ್ನಾಗಿ ನಡೆಯಿತು. ಪರಿಷತ್ತಿನ ಚರಿತ್ರೆಯಲ್ಲಿ ಅದು ಒಂದು ಹೊಸ ಘಟ್ಟವನ್ನು ಆರಂಭಿಸಿತೆಂದು ಹೇಳಬೇಕು" ಎನ್ನುತ್ತಾರೆ ಮಾಸ್ತಿ.

'ಕರ್ಣಾಟಕ ಸಾಹಿತ್ಯ ಸಮ್ಮೇಳನದ ಹದಿನೆಂಟನೆಯ ಅಧಿವೇಶನವು ಕೊಡಗು ದೇಶದ ಮುಖ್ಯ ನಗರವಾದ ಮಡಿಕೇರಿಯಲ್ಲಿ ಅಂಗೀರಸ ಸಂವತ್ಸರದ ಪುಷ್ಯ ಶುದ್ಧ ಪಾಡ್ಯಮಿಯ ದಿನ (1932ನೆಯ ಇಸವಿ ಡಿಸೆಂಬರ್ 28ನೆಯ ತಾರೀಖು) ಆರಂಭವಾಗಿ ಮೂರು ದಿನಗಳು ಬಹಳ ವಿಜೃಂಭಣೆಯಿಂದ ನಡೆಯಿತು. ಮೈಸೂರು, ಬೆಂಗಳೂರು, ದಕ್ಷಿಣ ಕನ್ನಡ, ಉತ್ತರ ಕನ್ನಡ, ನಿಜಾಂ ಕರ್ಣಾಟಕ ಮೊದಲಾದ ಪ್ರಾಂತಗಳಿಂದಲೂ ಕೊಡಗು ದೇಶದ ನಾನಾ ಭಾಗಗಳಿಂದಲೂ ಅನೇಕ ಮಂದಿ ಭಾಷಾ ಪ್ರೇಮಿಗಳು ಬಂದಿದ್ದರು" ಎಂದು ಸಾಹಿತ್ಯ ಪರಿಷತ್ಪತ್ರಿಕೆ ವರದಿ ಮಾಡಿದೆ. ಆ ಸಮ್ಮೇಳನದ ಒಂದೆರಡು ವಿವರಗಳನ್ನೂ ಇಲ್ಲಿ ನೋಡಬಹುದು: ಶ್ರೀಮಾನ್ ಶಂಭು ಶಾಸ್ತ್ರಿಗಳವರು ಪುರಾತನ ಕವಿತೆಗಳನ್ನೂ, ಹೊಸ ಮಾರ್ಗದಲ್ಲಿ ರಚನೆಯಾಗುತ್ತಿರುವ ಆಧುನಿಕ ಕವಿತೆಗಳನ್ನೂ ಹೋಲಿಸುವ ಪ್ರಯತ್ನ ಮಾಡಿ, ಈ ಹೊಸ ಕವಿತೆಗಳ

ದೋಷಗಳನ್ನು ತೋರ್ಪಡಿಸುವ ಉದ್ದೇಶದಿಂದ ಉಪನ್ಯಾಸ ಮಾಡಿದರು .... ಆಧುನಿಕ ಕವಿತ್ವವನ್ನು ಖಂಡಿಸಿದರು. ಈ ಉಪನ್ಯಾಸಕರ ಅಭಿಪ್ರಾಯಗಳನ್ನು ಖಂಡಿಸಿ ಶ್ರೀಮಾನ್ ಮಾಸ್ತಿ ವೆಂಕಟೇಶ ಐಯ್ಯಂಗಾರ್ಯರೂ, ಶ್ರೀಮಾನ್ ಸಿ.ಕೆ.ವೆಂಕಟರಾಮಯ್ಯನವರೂ, ಶ್ರೀಮಾನ್ ಟಿ.ಎಸ್.ವೆಂಕಣ್ಣಯ್ಯನವರೂ, ಶ್ರೀಮಾನ್ ತೀ.ನಂ.ಶ್ರೀಕಂಠಯ್ಯನವರೂ ಭಾಷಣಗಳನ್ನು ಮಾಡಿದರು." ಕವಿ ಸಮ್ಮೇಳನದಲ್ಲಿ, "ಮೈಸೂರಿನ ಶ್ರೀಮಾನ್ ಜಿ.ಪಿ.ರಾಜರತ್ನಮಯ್ಯಂಗಾರ್ಯರೂ, ಬೆಂಗಳೂರಿನ ಶ್ರೀಮಾನ್ ಎಂ.ಆರ್.ಶ್ರೀನಿವಾಸಮೂರ್ತಿಗಳೂ, ಮಂಗಳೂರಿನ ಶ್ರೀಮಾನ್ ಲಕ್ಷ್ಮೀನಾರಾಯಣ ಪುಣಿಂಚತ್ತಾಯರೂ, ಬೆಳಗಾವಿಯ ಆನಂದ ಕವಿಗಳೂ, ಮೈಸೂರಿನ ಶ್ರೀಮಾನ್ ಪಿ.ಟಿ.ನರಸಿಂಹಾಚಾರ್ಯರೂ ತಮ್ಮ ತಮ್ಮ ಕವನಗಳನ್ನು ಓದಿದರು." ಶ್ರೀಮಾನ್ ಕಡೆಂಗೋಡ್ಲು ಶಂಕರಭಟ್ಟರವರು ಕವಿ ಸಮ್ಮೇಳನದ ಅಧ್ಯಕ್ಷರು.

ಡಿ ವಿ ಜಿ ಯವರು ಅಂದು ಮಾಡಿದ ಉಪನ್ಯಾಸದಲ್ಲಿ ಕೆಲವು ಭಾಗಗಳನ್ನು ನೋಡಿದರೆ ಅವರ ಮನೋಗತದ ಅರಿವಾಗಬಹುದು :

"ನಮ್ಮ ದೇಶದಲ್ಲಿ ಇದು ಭಾಷೆಗಳ ಹೋರಾಟದ ಕಾಲ. ಒಂದುಕಡೆ 'ಸಂಸ್ಕೃತ ಆರ್ಷೇಯ ಭಾಷೆ, ದೇವ ಭಾಷೆ ; ಅದರ ಮುಂದೆ ಕನ್ನಡವೇತರದು ?' ಎಂದು ಕೇಳುವವರು; ಇನ್ನೊಂದು ಕಡೆ 'ಇಂಗ್ಲೀಷು ನಾಗರಿಕತೆಯ ಭಾಷೆ, ಸ್ವಾತಂತ್ರ್ಯದ ಭಾಷೆ, ವಿಜ್ಞಾನದ ಭಾಷೆ, ಮುಪ್ಪಾಗ ಪಾಲು ಪ್ರಪಂಚದ ಭಾಷೆ ; ಇದರ ಪಕ್ಕದಲ್ಲಿ ಕನ್ನಡ ಹೇಗೆ ನಿಂತೀತು ?' ಎಂದು ಕೇಳುವವರು ; ಮತ್ತೊಂದು ಕಡೆ 'ಹಿಂದೀ ನಮಗೆ ಜಾನಪದ ಭಾಷೆ, ಭರತಖಂಡವನ್ನೊಂದಾಗಿಸುವ ಭಾಷೆ, ಜೋರುಳ್ಳ ಭಾಷೆ : ಅದರೆದುರಿಗೆ ಕನ್ನಡವೇಕೆ ?' ಎಂದು ಕೇಳುವವರು. ಹೀಗೆ 'ಕನ್ನಡ ಹೋದರೆ ಹೋಗಲಿ ; ಅಥವಾ ಇರಲೇ ಬೇಕೆಂದರೆ, ಶ್ರೀಮಂತರ ಮನೆಯ ಬಡ ಬಳಗದಂತೆ ಮೂಲೆಯಲ್ಲಿದ್ದುಕೊಂಡಿರಲಿ' ಎಂದು ವಾದಿಸುವವರು ಈಗ ಪ್ರಬಲ ಸ್ಥಾನಗಳಲ್ಲಿದ್ದಾರೆ. ಅವರಿಗೆ ನಾವು ಹೇಳಬೇಕಾದುದಿಷ್ಟೇ : 'ಇದುವರೆಗೆ ನಿಮ್ಮ ಭಾಷೆಗಳು ದೊಡ್ಡವಾಗಿರುವುದು ನಿಜ ; ಆದರೆ ಇನ್ನು ಮುಂದಕ್ಕೆ ನಮ್ಮ ಭಾಷೆಯನ್ನೂ ದೊಡ್ಡದನ್ನಾಗಿಸಬೇಕೆಂದಿದ್ದೇವೆ. ನೀವು ನಮಗೆ ಉಪಕಾರಿಗಳು ನಿಜ ; ಆದರೆ ಈಗ ನಾವು ನಮ್ಮ ಬೆಂಬಲದಿಂದಲೇ ನಿಂತು ನಿಮ್ಮ ಸಹಾಯವನ್ನು ಸಾರ್ಥಕಗೊಳಿಸಬೇಕೆಂದಿದ್ದೇವೆ'. ಉಪಕೃತನು ಆತ್ಮಾವಲಂಬಿಯಾದಾಗಲೇ ಅಲ್ಲವೆ ಉಪಕಾರಿಯ ಯಶಸ್ಸು ಪರಿಪೂರ್ಣತೆಗೆ ಬರುವುದು ?"

"ಸಂಸ್ಕೃತದಿಂದ ಕನ್ನಡ ಬದುಕಿತು; ಮುಂದಕ್ಕೆ ಕನ್ನಡದಲ್ಲಿ ಸಂಸ್ಕೃತ ಬದುಕಬೇಕು."

"ನಮಗೆ ಸಂಸ್ಕೃತವೂ ಬೇಕು, ಇಂಗ್ಲಿಷೂ ಬೇಕು, ಹಿಂದೀ ಮರಾಠೀ ಬಂಗಾಳಿಗಳೂ ಬೇಕು, ಇವುಗಳ ಉಪಭಾಷೆ ಶಾಖಾ ಭಾಷೆಗಳೂ ಸಹ ಬೇಕು; ಆದರೆ ನಮ್ಮ ಮೇಲೆ ಕೈನಡಸುವುದಕ್ಕಲ್ಲ, ನಮ್ಮ ಬಲವನ್ನು ಹೆಚ್ಚಿಸುವುದಕ್ಕೆ."

"ಸಾಹಿತ್ಯ ಕ್ಷೇತ್ರದಲ್ಲಿ ಸ್ವದೇಶೀ ವ್ರತಕ್ಕೆ ಅವಕಾಶವಿಲ್ಲ. ಜನ ಜನಾಂಗಗಳ ಜೀವನದಲ್ಲಿ ಸರಸ್ವತಿ ಧನ್ವಂತರಿಯವರು ಕಾಲ ದೇಶಗಳ ಅವಧಿಗೆ ಒಳಪಡದೆ ಸಂಚರಿಸಬೇಕಾದವರು. ಆಕಾಶದಂತೆ, ಸೂರ್ಯ ಚಂದ್ರರಂತೆ ಎಲ್ಲರಿಗೂ ಸೇರಬೇಕಾದುದು ಜ್ಞಾನ. ಅದರ ಬೆಳಕೂ ಬಿಸಿಲೂ ಬೇಡವೆನ್ನುವ ಜನರು ತಮ್ಮ ಮೇಲ್ಮೆಯನ್ನು ತಾವಾಗಿ ತೊರೆದುಕೊಂಡವರಾಗುತ್ತಾರೆ. ಎಂದು ನಮ್ಮ ಪೂರ್ವಿಕರು ಅನ್ಯ ದೇಶ ಸಂಪರ್ಕವು ಮೈಲಿಗೆಯೆಂದು ಜರೆದರೋ ಅಂದು ಅವರು ಸ್ವಜನ ಜೀವನವನ್ನು ಗುಣಿಯೊಳಕ್ಕೆ ತಳ್ಳಿದರು. ಗುಣಿಯೊಳಗೆ ನಿಂತ ನೀರು ಕೆಲವು ದಿನದ ಬಳಿಕ ರೊಚ್ಚಾಗಿ ನಾರುವಂತೆ, ದೇಶ ವಿದೇಶಗಳೊಡನೆ ವ್ಯವಹಾರವನ್ನು ಬಿಟ್ಟ ಜನರ ಬುದ್ಧಿಯು ಮಲಿನವಾಗುವುದು ಸ್ವಾಭಾವಿಕವಾಗಿದೆ. ಬುದ್ಧಿತಟಾಕದೊಳಕ್ಕೆ ನೀರು ನಾಲ್ಕು ಕಡೆಗಳಿಂದಲೂ ಬರುತ್ತ, ಅಲ್ಲಿಂದ ನಾಲ್ಕು ಕಡೆಗಳಿಗೂ ಹರಿಯುತ್ತ ಇರಬೇಕು. ನಮ್ಮ ಜೀವನದ ಹೊರಮನೆಗೆ ಕಿಟಕಿಗಳಿರುವಂತೆ ಅದರ ಒಳಮನೆಗೂ ಇದ್ದು ಅಲ್ಲಿಯೂ ಗಾಳಿಯು ಸಂಚಾರವಾಗುತ್ತಿರಬೇಕು. ಯಾವ ಸಾಹಿತ್ಯವು ಹೀಗೆ ಎಲ್ಲ ಕಡೆಗಳಿಂದಲೂ ಬೆಳಕನ್ನೂ ಗಾಳಿಯನ್ನೂ ಬರಮಾಡಿಕೊಳ್ಳುವುದೋ ಅದು ತನ್ನ ನೈರ್ಮಲ್ಯವನ್ನು ಕಾಪಾಡಿಕೊಂಡು, ಚೈತನ್ಯವನ್ನು ಹೆಚ್ಚಿಸಿಕೊಂಡು ಮುಪ್ಪನ್ನು ದೂರದಲ್ಲಿಟ್ಟಿರುವುದು."

"ಸಾಹಿತ್ಯ ಶಬ್ದದಿಂದ ನಾವು ವಿಸ್ತಾರವಾದ ಅರ್ಥದಲ್ಲಿ ವಿವಿಧ ಗ್ರಂಥ ಸಮೂಹವೆಂದು ತಿಳಿಯಬಹುದು....ಕಾವ್ಯವನ್ನು ವಿನಾಯಿತಿಸಿದ ಸಾಹಿತ್ಯ.... ನಮ್ಮ ಬಹಿರಂಗ ಭಾಗಕ್ಕೆ ಸೇರಿದವು. ಪ್ರಕೃತಿ ವಿಜ್ಞಾನದ ಮತ್ತು ಸಮಾಜ ವಿಜ್ಞಾನದ ನಾನಾ ಶಾಖೋಪಶಾಖೆಗಳೇ ಅವು.....ಈ ನಾನಾ ಶಾಸ್ತ್ರಗಳ ಪ್ರತಿದಿನೋಪಯೋಗವನ್ನು — ಎಂದರೆ ಬಗೆ ಬಗೆಯ ಕಸಬು ಕಾರ್ಖಾನೆಗಳಿಗೆ ಸಂಬಂಧಪಟ್ಟ ಯಂತ್ರಸಾಧನಗಳನ್ನು — ಕುರಿತ ದೊಡ್ಡ ಸಣ್ಣ ಪ್ರಕರಣಗಳಿಗಂತೂ ಇಂಗ್ಲಿಷಿನಲ್ಲಿ ಲೆಕ್ಕವೇ ಇಲ್ಲ.... ಇಂಥಾ ಗ್ರಂಥಗಳು ಕನ್ನಡದಲ್ಲಿ ತೀರಾ ಸ್ವಲ್ಪವಾಗಿವೆ. ಈ ಬಗೆಯ ಗ್ರಂಥಗಳು ಜನರ ಲೌಕಿಕ ಜ್ಞಾನಕ್ಕು

ಅವರ ಜೀವನ ವೃತ್ತಿಗೂ ಸಹ ಸಾಧಕಗಳಾಗಿರುತ್ತವೆ. ಈ ಬಡತನವನ್ನು ನೀಗಿಸುವುದು ಇಂಗ್ಲಿಷ್ ಕಲಿತವರ — ಅದರಲ್ಲಿಯೂ ವಿಜ್ಞಾನಾಭ್ಯಾಸ ಮಾಡಿದವರ ಮೊದಲನೆಯ ಕರ್ತವ್ಯ."

ಇದೇ ಉಪನ್ಯಾಸದಲ್ಲಿ ಕಾವ್ಯ, ಶಾಸ್ತ್ರ, ಇವುಗಳ ಭಾಷೆ, ಸೌಂದರ್ಯ, ಇವುಗಳನ್ನು ಕುರಿತು ವಿಸ್ತಾರವಾಗಿ ಕೂಲಂಕಶವಾಗಿ ವಿಚಾರಮಾಡಿದ್ದಾರೆ.

ನಮ್ಮ ಮಹಾಜನದ ವಾಚನಾಭ್ಯಾಸ ಹೆಚ್ಚಬೇಕೆಂದು ಹೇಳಿ "ಈಗ ಲಂತೂ ನಮ್ಮ ದೇಶದಲ್ಲಿ ಪ್ರಜಾರಾಜ್ಯದ ಕಾಲವು ಬಂದಿದೆ. ರಾಜ್ಯಶಕ್ತಿಯು ಒಂದು ಶಕ್ತಿ. ತಿಳಿವಳಿಕೆಯುಳ್ಳವರ ಕೈಯಲ್ಲಿ ಅದು ಉಪಕಾರಿ. ಇಲ್ಲದವರ ಕೈಯಲ್ಲಿ ಅಪಾಯಕಾರಿ. ಪ್ರಜಾಜನರ ಕೈಗೆ ಬರುವ ರಾಜಕೀಯಾಧಿಕಾರ ಗಳಿಂದ ಅವರಿಗೆ ಹಾನಿ ಬರದೆ ಹಿತವಾಗಬೇಕಾದರೆ ಅವರ ರಾಜ್ಯ ಸೂತ್ರ ಚಾಲನೆಯಲ್ಲಿ ಉದಾತ್ತ ಭಾವಗಳೂ ಸಂತತ ವಿವೇಕವೂ ಇರಬೇಕು. ಈ ಬಗೆಯ ಭಾವೋನ್ನತಿಯೂ ಪ್ರಜ್ಞೆಯೂ ವಿವೇಚನೆಯೂ ಜನರಲ್ಲಿರಬೇಕಾದರೆ ಅವರು ಗ್ರಂಥ ಪಠನೆಗೆ ಹೆಚ್ಚು ಕಾಲವನ್ನೂ ಹೆಚ್ಚು ಗಮನವನ್ನೂ ವಿನಿಯೋಗಿಸಬೇಕು. ಸರಸ್ವತೀ ಪ್ರಸಾದವಿಲ್ಲದೆ ಸ್ವರಾಜ್ಯ ಸಂಸ್ಥಿತಿಯಿರದು" ಎಂದು ಎಚ್ಚರಿಕೆಯ ಮಾತನ್ನು ಹೇಳಿದ್ದಾರೆ.

ಪರಿಷತ್ತನ್ನು ಕುರಿತು "ಕರ್ನಾಟಕ ಸಾರಸ್ವತಪ್ರಪಂಚಕ್ಕೆಲ್ಲ ಅದು ಕೇಂದ್ರ ಸ್ಥಾನವಾಗಬೇಕು. ಎಲ್ಲ ಸಾಹಿತ್ಯ ಸೇವಕರೂ ಅದನ್ನು ತಮ್ಮ ಕುಲ ದೈವ ಕ್ಷೇತ್ರವೆಂದು ತಿಳಿಯಬೇಕು." ಎಂದಿದ್ದಾರೆ.

ಪ್ರತ್ಯೇಕ ಕರ್ನಾಟಕ ಪ್ರಾಂತದ ಅವಶ್ಯಕತೆಯನ್ನು ಕುರಿತು : "ಹರುಕು ಮುರುಕಾಗಿ ಒಡೆದು ಹೋಗಿರುವ ಕನ್ನಡ ನಾಡು ಮತ್ತೆ ಒಂದುಗೂಡಿದಲ್ಲದೆ ನಮ್ಮ ಜನಕ್ಕೂ ಭಾಷೆಗೂ ಏಳಿಗೆಯಾಗದು. ಮೈಸೂರು ಹೈದರಾಬಾದು ಮೊದಲಾದ ದೇಶೀಯ ಸಂಸ್ಥಾನಗಳ ಪ್ರಸಕ್ತಿ ತೊಡಕಾದುದು. ಅದು ಹಾಗಿರಲಿ. ಬ್ರಿಟಿಷ್ ಸರಕಾರದ ಪ್ರತ್ಯಕ್ಷಾಧಿಪತ್ಯಕ್ಕೆ ಒಳಪಟ್ಟಿರುವ ಬೊಂಬಾಯಿ, ಮದರಾಸು ಪ್ರಾಂತಗಳ ಕನ್ನಡ ಪ್ರದೇಶಗಳನ್ನೂ ಕೊಡಗನ್ನೂ ಸೇರಿಸಿ ಒಂದು ಪ್ರತ್ಯೇಕ ಕನ್ನಡ ಪ್ರಾಂತವನ್ನೂ ಏರ್ಪಡಿಸುವುದರಲ್ಲಿ ಕಷ್ಟ ವೇನೂ ಇಲ್ಲ" ಎಂದಿದ್ದಾರೆ.

ಕನ್ನಡ ವಿಶ್ವವಿದ್ಯಾಪೀಠ, ನಿಘಂಟು, ಕನ್ನಡ ಸಂಕ್ಷಿಪ್ತ ಲಿಪಿ ಮುಂತಾದು ವನ್ನು ಕುರಿತು ಮಾತನಾಡಿದ್ದಾರೆ.

ಕಡೆಯಲ್ಲಿ "ರಾಜನಂದಿನಿಯ ಸಿಂಗಾರಕ್ಕೆ ಕಾಶ್ಮೀರದ ಅಗರೂ,

ನೇಪಾಳದ ಕಸ್ತೂರಿಯೂ, ಗಾಂಧಾರದ ಕೇಸರಿಯೂ, ಪಾರಸಿಯ ಪನ್ನೀರೂ, ಮೈಸೂರಿನ ಚಂದನವೂ, ಮಳೆಯಾಳದ ಧೂಪವೂ ಬಂದು ಒದಗುವಂತೆ, ಭೂಮಂಡಲದ ಎಲ್ಲ ಸಾಹಿತ್ಯ ಎಲ್ಲ ವೈದುಷ್ಯಗಳ ಸಾರವಸ್ತುಗಳೂ ನಮ್ಮ ಭಾಷೆಯ ಭಂಡಾರಕ್ಕೆ ಬಂದು, ನಮ್ಮ ಸ್ವಶಕ್ತಿ ಕಲ್ಪಿತಗಳಾದ ನಾನಾ ಪರಿಕರಗಳೊಡಗೂಡಿ, ನಮ್ಮ ಜನದ ಜೀವನಕ್ಕನುವಾಗಬೇಕು. ಕನ್ನಡದ ಒಂದೊಂದು ನುಡಿಯೂ ಕಿಡಿಯಾಗಬೇಕು, ಸಿಡಿಲಾಗಬೇಕು, ನಕ್ಷತ್ರವಾಗಬೇಕು, ಅಮೃತ ಬಿಂದುವಾಗಬೇಕು. ಇದೀಗ ನಮ್ಮ ಆಶೆ. ಈ ಆಶೆಗಾಗಿ ದುಡಿಯುವುದರಲ್ಲಿ ನಮ್ಮ ಎಲ್ಲ ದೇಶ ಭಾಷಾ ಬಾಂಧವರೂ ಅವರ ಅದೃಷ್ಟಶಕ್ತಿಗಳೂ ಸಹಕರಿಸಲಿ... ಸಿರಿಗನ್ನಡಂ ಗೆಲ್ಗೆ, ವಂದೇ ಮಾತರಂ" ಎಂದು ಮುಕ್ತಾಯ ಮಾಡಿದ್ದಾರೆ.

ಮುಂದೆ ಶಿವಮೊಗ್ಗೆಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಬೇಂದ್ರೆಯವರು ಭಾಷಣ ಮಾಡಿದ್ದನ್ನೂ ಕುರಿತು ಬರೆಯುತ್ತ ಮಾಸ್ತಿ ನರಸಿಂಗರಾಯರು, "ಮಡಿಕೇರಿಯಲ್ಲಿ ಡಿ ವಿ ಗುಂಡಪ್ಪನವರು ಮಾಡಿದ ಅಧ್ಯಕ್ಷ ಭಾಷಣಕ್ಕೆ ಜನ ಇದರಂತೆ ಮೋಹಗೊಂಡಿತ್ತೆಂದು ಮಾಸ್ತಿಯವರು ಎಂದರು" ಎಂದು "ಕನ್ನಡ ಯಾತ್ರೆ"ಯಲ್ಲಿ ಈ ಭಾಷಣವನ್ನೂ ಜ್ಞಾಪಿಸಿಕೊಂಡಿದ್ದಾರೆ.

ಈ ಭಾಷಣವನ್ನು ಓದಿದ ಗೋರೂರು ರಾಮಸ್ವಾಮಿ ಅಯ್ಯಂಗಾರ್ಯರು ಡಿ ವಿ ಜಿ ಯವರಿಗೆ ಹೀಗೆ ಪತ್ರಬರೆದರು. "ಸಾಹಿತ್ಯಕ್ಷೇತ್ರದಲ್ಲಿ 'ಆಗಂತುಕ' ರೆಂದುಕೊಂಡಿರುವ ತಮ್ಮನ್ನು ಗುರುವೆಂದು ತಿಳಿದಿರುವ ನನ್ನ ಕೈಗೆ ಆ ಭಾಷಣದ ಪ್ರತಿಯು ಬಂದಾಗ ಉಂಟಾದ ಉತ್ಸಾಹವೂ ಆನಂದವೂ ನನ್ನನ್ನು ಕುಣಿಯುವಂತೆ ಮಾಡಿದವು.... ನಮ್ಮ ಸಾಹಿತ್ಯವು ಮುಂದೆ ಯಾವ ರೀತಿ ನಡೆದರೆ ನಮಗೆ ಶ್ರೇಯಸ್ಸುಂಟೆಂಬುದು ಯಾವಾಗಲೂ ಹುಡುಗರ ಮನಸ್ಸಿಗೆ ತೋರುವ ಪ್ರಶ್ನೆ. ಆ ಪ್ರಶ್ನೆಗೆ ತಾವು ಬಹಳ ಚೆನ್ನಾಗಿ ಉತ್ತರವನ್ನು ಕೊಟ್ಟಿರುವಿರಿ. ನಮ್ಮ ಸಾಹಿತ್ಯದ ಸಮಸ್ಯೆಗಳನ್ನು ಕಾರ್ಯಕಾರಿಯಾದ ರೀತಿಯಲ್ಲಿ ಹಿಡಿದು ಈ ರೀತಿಯಾಗಿ ಚರ್ಚಿಸಿ ಮುಂದಲ ದಾರಿಯನ್ನು ತೋರಿಸುವ ಭಾಷಣಗಳು ಇದುವರೆಗೆ ಯಾವುದೂ ಆಗಿರಲಿಲ್ಲ. ಗದ್ಯ ಗ್ರಂಥಗಳ ವಿಷಯದಲ್ಲಿಯೂ ಶಾಸ್ತ್ರೀಯ ಗ್ರಂಥಗಳ ವಿಚಾರದಲ್ಲಿಯೂ ತಾವು ಭಾಷಣದಲ್ಲಿ ಹೇಳುವ ಮಾತುಗಳನ್ನೇ ನನಗೆ ಅನೇಕ ಸಲ ಹೇಳಿದ್ದಿರಿ. "ನಮ್ಮ ತರುಣರಿಗೆ ಹೆಚ್ಚಿನ ಫಿಲಾಸಫಿ ಬೇಡ. ಮನೆಯಲ್ಲಿ ಎಲೆಕ್ಟ್ರಿಕ್ ದೀಪ ಸ್ವಲ್ಪ ಹೆಚ್ಚು ಕಡಮೆಯಾದರೆ ಸರಿಮಾಡುವುದು ಬಂದಿರಬೇಕು. ಸೀರಿನ ನಲ್ಲಿಯಲ್ಲಿ ಏನಾದರೂ ಹೆಚ್ಚು ಕಡಮೆಯಾದರೆ ಸ್ವಲ್ಪ ಸರಿಮಾಡುವುದು ಬೇಕು." — ಎಂಬುದಾಗಿ

ತಾವು ನನ್ನೊಂದಿಗೆ ಒಂದು ದಿವಸ ಹೇಳಿದ ಮಾತು ನನಗೆ ಮರೆಯುವಂತಿಲ್ಲ."

ಆಗಲೇ ಡಿ ವಿ ಜಿ ಯವರು ಮೈಸೂರು ಪ್ರಾಂತಕ್ಕೆ ಪರಿಷತ್ತಿನ ಸದಸ್ಯರಾಗಿ ಚುನಾಯಿತರಾದದ್ದು.

ಪರಿಷತ್ತಿನ ಉಪಾಧ್ಯಕ್ಷರಾಗಿ

ಪರಿಷತ್ತಿಗೆ ಮೊದಲ ಉಪಾಧ್ಯಕ್ಷರು ಎಂ. ಶಾಮರಾಯರು. ಅನಂತರ ಬಂದವರು ಕರ್ಪೂರ ಶ್ರೀನಿವಾಸರಾಯರು. ಅವರೆಲ್ಲ ತಮ್ಮ ಸ್ಥಾನಮಾನ ದಿಂದ ಪರಿಷತ್ತಿನ ಘನತೆಯನ್ನು ಎತ್ತರಿಸಿದವರು. ಮಡಕೇರಿಯಲ್ಲಿ ಸಮ್ಮೇಳನ ನಡೆಯುವ ವೇಳೆಗೆ ಕರ್ಪೂರ ಶ್ರೀನಿವಾಸರಾಯರು ತೀರಿಕೊಂಡಿದ್ದರು. ಉಪಾಧ್ಯಕ್ಷಸ್ಥಾನಕ್ಕೆ ಯಾರನ್ನು ನೇಮಿಸಿಕೊಳ್ಳುವುದು ? "ಸರಕಾರದ ಕೆಲಸ ದಲ್ಲಿರುವ ನಾವು ಯಾರೂ ಈ ಸ್ಥಾನವನ್ನು ವಹಿಸಿಕೊಳ್ಳಬಾರದು. ಅವಶ್ಯಕ ಬಿದ್ದರೆ ಸರಕಾರದ ಅಭಿಪ್ರಾಯಕ್ಕೆ ವ್ಯತಿರಿಕ್ತವಾದ ಅಭಿಪ್ರಾಯವನ್ನು ಪ್ರಕಟಿಸಬಲ್ಲವರು ಈ ಸಂಸ್ಥೆಯ ಕಾರ್ಯಾಧ್ಯಕ್ಷರಾಗಬೇಕು." ಎಂಬುದು ಮಾಸ್ತಿಯವರ ಅಭಿಪ್ರಾಯ. ಮಡಕೇರಿಯ ಸಮ್ಮೇಳನದ ಕೊನೆಯ ದಿನ ಇದರ ವಿಷಯ ಚರ್ಚೆಯಾಗಿ ವೆಂಕಟನಾರಣಪ್ಪನವರು, ಎಂ. ಎನ್. ಕೃಷ್ಣ ರಾಯರನ್ನು ಈ ಸ್ಥಾನವನ್ನು ವಹಿಸಿಕೊಳ್ಳಿ ಎಂದು ಪ್ರಾರ್ಥಿಸೋಣ, ಎಂದರು. ಮಾಸ್ತಿಯವರು "ಅವರು ಮಂತ್ರಿಗಳಾಗಿದ್ದಾರೆ. ಅವರು ಈ ಸ್ಥಾನವನ್ನು ಒಪ್ಪಿಕೊಂಡರೆ ಸಂಸ್ಥೆಯಸ್ಥಾನ ಎಂದಿನಂತೆ ಇರುತ್ತದೆ. ಆದರೆ ಈ ವಿಷಯ ದಲ್ಲಿ ಅವರ ಇಷ್ಟ ಹೇಗೆ ಎಂಬುದನ್ನು ವಿಚಾರಿಸಿದ್ದಾಗಿದೆಯೆ ?" ಎಂದು ಕೇಳಿದ ರಂತೆ. ಮುಂದಿನ ಕಥೆಯನ್ನು ಮಾಸ್ತಿ ಹೀಗೆ ಹೇಳಿದ್ದಾರೆ : "ವಿಚಾರಿಸಿದ್ದರೇ ಇಲ್ಲವೇ ಸ್ಪಷ್ಟವಾಗಲಿಲ್ಲ. ಆದರೆ ಅವರು ಒಪ್ಪಿದರೆ ಚೆನ್ನಾಗುತ್ತದೆ ಎಂದು ಎಲ್ಲರದೂ ಅಭಿಪ್ರಾಯ. ಕೊನೆಗೆ ಶ್ರೀ ಎಂ. ಎನ್. ಕೃಷ್ಣರಾಯರನ್ನು ಉಪಾ ಧ್ಯಕ್ಷರಾಗಿ ಆರಿಸಿ ಬೆಂಗಳೂರಿಗೆ ಹೋದಮೇಲೆ ಅವರ ಒಪ್ಪಿಗೆಯನ್ನು ಬೇಡ ತಕ್ಕದೆಂದು ನಿರ್ಣಯವಾಯಿತು. ಶ್ರೀಕೃಷ್ಣರಾಯರು ಈ ಪ್ರಾರ್ಥನೆಯನ್ನು ಅಂಗೀಕರಿಸಲಿಲ್ಲ. ಬೇರೆಯವರನ್ನು ನೇಮಿಸಿಕೊಳ್ಳುವುದಕ್ಕೆ ಸದಸ್ಯರ ಸಭೆ ಯನ್ನು ಮತ್ತೆ ಸೇರಿಯಿಸಬೇಕು. ಇದು ಕಷ್ಟ. ಒಂದು ವರ್ಷ ಪರಿಷತ್ತು ಉಪಾ ಧ್ಯಕ್ಷರಿಲ್ಲದೆಯೇ ನಡೆಯಿತು. ಅದರ ಮಾರನೆಯ ವರ್ಷ 1933ರಲ್ಲಿ ಹುಬ್ಬಳ್ಳಿ ಯಲ್ಲಿ ನಡೆದ ಸಮ್ಮೇಳನದಲ್ಲಿ ಶ್ರೀ ಗುಂಡಪ್ಪನವರು ಉಪಾಧ್ಯಕ್ಷರಾಗಿ ನೇಮಕ ಪಡೆದರು."

ಡಿ ವಿ ಜಿ ಯವರು ಪರಿಷತ್ತಿನ ಉಪಾಧ್ಯಕ್ಷರಾದ ಸಂದರ್ಭವನ್ನು ಅ. ನ. ಕೃಷ್ಣರಾಯರು ('ಬರಹಗಾರನ ಬದುಕು') ಹೀಗೆ ವಿವರಿಸಿದ್ದಾರೆ :

"1933ರಲ್ಲಿ 13ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಹುಬ್ಬಳ್ಳಿಯಲ್ಲಿ ಸೇರಿತ್ತು. ಆಗ ಪರಿಷತ್ತಿನ ವಾರ್ಷಿಕಾಧಿವೇಶನ, ಕಾರ್ಯಸಮಿತಿ ಚುನಾವಣೆ ಸಮ್ಮೇಳನ ಕಾಲದಲ್ಲಿಯೇ ನಡೆಯುತ್ತಿತ್ತು.

"ಉಪಾಧ್ಯಕ್ಷ ಸ್ಥಾನಕ್ಕೆ ಯಾರನ್ನು ಆರಿಸಬೇಕೆಂದು ದೊಡ್ಡ ಜಿಜ್ಞಾಸೆ ಯೆದ್ದಿತು. ಬೆಳ್ಳಾವೆಯವರ ಹೆಸರು ಸೂಚಿತವಾಗಲು ಅವರು ಬೇಡವೆಂದರು.

"ನಾನೂ ನನ್ನ ಗೆಳೆಯರೂ ಒಬ್ಬರನ್ನು ಗುರಿಯಲ್ಲಿಟ್ಟುಕೊಂಡಿದ್ದೆವು. ತಳಕಿನ ವೆಂಕಣ್ಣಯ್ಯನವರು ನಮ್ಮನ್ನು ಹೊರಕ್ಕೆ ಕರೆದು : "ಈ ಸ್ಥಾನಕ್ಕೆ ಒಬ್ಬರನ್ನು ಅನಿರೋಧವಾಗಿ ಆರಿಸೋಣ. ಪರಿಷತ್ತಿನೊಳಗೆ ಸ್ಪರ್ಧೆ, ಚುನಾವಣೆ ಬರಬಾರದು. ನೀವು ಯಾರ ಹೆಸರನ್ನು ಸೂಚಿಸಬೇಕೆಂದಿದ್ದೀರಿ ?" ನಾವು ಒಂದು ಹೆಸರು ಹೇಳಿದೆವು. ವೆಂಕಣ್ಣಯ್ಯನವರು ಯೋಚಿಸುತ್ತ, "ಅವರು ದೊಡ್ಡವರು. ನನಗೆ ಪೂಜ್ಯರು. ಆದರೆ ಸದ್ಯಕ್ಕೆ ಅವರು ಬೇಡ. ಸರಕಾರ, ಸಾರ್ವಜನಿಕ ಕ್ಷೇತ್ರ, ಸಾಹಿತ್ಯಕ್ಷೇತ್ರಗಳೆಲ್ಲದರಲ್ಲಿಯೂ ಪ್ರಭಾವಶಾಲಿಗಳಾಗಿರುವ ಒಬ್ಬರನ್ನು ನಾನು ಸೂಚಿಸುತ್ತೇನೆ. ನೀವು ಒಪ್ಪಿಕೊಳ್ಳಿ" ಎಂದರು. "ಯಾರು ಸರ್ ಅವರು ?" "ಡಿ. ವಿ. ಗುಂಡಪ್ಪನವರು." "ಆಗತ್ಯವಾಗಿ ಆಗಬಹುದು" ಎಂದು ನಾವು ಒಪ್ಪಿಕೊಂಡೆವು".

ಹೀಗೆ ಉಪಾಧ್ಯಕ್ಷ ಸ್ಥಾನವು ಡಿ ವಿ ಜಿ ಯವರನ್ನು ಹುಡುಕಿಕೊಂಡು ಬಂದಿತು.

ಹುಬ್ಬಳ್ಳಿಯಲ್ಲಿ ಸಾಹಿತ್ಯ ಸಮ್ಮೇಳನದ ಹತ್ತೊಂಬತ್ತನೆಯ ಅಧಿವೇಶನ ವೈ. ನಾಗೇಶ ಶಾಸ್ತ್ರಿಗಳವರ ಅಧ್ಯಕ್ಷತೆಯಲ್ಲಿ 29-12-1933ರಲ್ಲಿ ನಡೆದಾಗ, ವಿಜಯನಗರ ಸ್ಮಾರಕೋತ್ಸವ ಮಂಡಲಿಯ ಸಭೆಯೂ ಡಿ ವಿ ಜಿ ಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಆಗಲೇ, 30ನೆಯ ತಾರೀಖು, ಪರಿಷತ್ತಿನ ಹದಿನೆಂಟನೆಯ ವಾರ್ಷಿಕಾಧಿವೇಶನವೂ ನಡೆಯಿತು. ಸಮ್ಮೇಳನಾಧ್ಯಕ್ಷರೇ ಆ ಸಭೆಗೂ ಅಧ್ಯಕ್ಷರಾಗಿದ್ದರು. ಸಭೆಯಲ್ಲಿ ಡಿ ವಿ ಜಿ ಯವರೇ ಮುಂದಿನ ಸಾಲಿನ ಆಯುವ್ಯಯದ ಅಂದಾಜುಪಟ್ಟಿಯನ್ನು ಸಭೆಯ ಅವಗಾಹನೆಗೆ ತಂದರು. ಅನಂತರ ಚುನಾವಣೆಗಳಾಗುವುದಕ್ಕೆ ಮೊದಲು ಕಾರ್ಯಭಾಗಕ್ಕೆ ಸಂಬಂಧಪಟ್ಟ ತಿದ್ದುಪಾಟುಗಳನ್ನು ತೀರ್ಮಾನಿಸುವುದು ಯುಕ್ತವೆಂದು ಡಿ ವಿ ಜಿ ಸೂಚಿಸಿದರು. ಕಾರ್ಯನಿರ್ವಾಹಕ ಮಂಡಲಿಯನ್ನು ಕುರಿತು ತಿದ್ದುಪಾಟುಗಳನ್ನು, ಅಂಗಸಂಸ್ಥಾ ಯೋಜನೆಯ ನಿಯಮಗಳನ್ನು ಸಭೆ ಅಂಗೀಕರಿಸಿದ ಮೇಲೆ ಉಪಾಧ್ಯಕ್ಷರ ಚುನಾವಣೆಯಾಯಿತು. ಉಪಾಧ್ಯಕ್ಷರ ಸ್ಥಾನಕ್ಕೆ

ನಾಲ್ಕು ಹೆಸರುಗಳು ಸೂಚಿತವಾಗಿ, ಬ್ಯಾಲೆಟ್ ಪದ್ಧತಿಯಲ್ಲಿ ಚುನಾವಣೆಗೆ ಹಾಕಿದ ತರುವಾಯ ಡಿ ವಿ ಜಿ ಯವರಿಗೆ ಹೆಚ್ಚು ಅಭಿಮತಗಳು ದೊರೆತು ಅವರು ಉಪಾಧ್ಯಕ್ಷರಾದರು.

ಡಿ ವಿ ಜಿ ಉಪಾಧ್ಯಕ್ಷರಾಗುವ ವೇಳೆಗೆ ಶಂಕರಪುರದ ನಾಲ್ಕನೆಯ ರಸ್ತೆಯಲ್ಲಿನ ಕಟ್ಟಡದಲ್ಲಿದ್ದ ಪರಿಷತ್ತು 29.5.33ರಲ್ಲಿ ತನ್ನ ಸ್ವಂತ ಮನೆಗೆ ಬಂದಿತ್ತು.

ಡಿ ವಿ ಜಿ ಯವರು ಉಪಾಧ್ಯಕ್ಷರಾಗಿದ್ದ ಕಾಲವನ್ನು ಕುರಿತು, ಅ.ನ. ಕೃಷ್ಣರಾಯರು, "ಡಿ ವಿ ಜಿ ಅವರು 1933ರಿಂದ 1937ರವರೆಗೆ ಐದು ವರ್ಷ ಪರಿಷತ್ತಿನ ಉಪಾಧ್ಯಕ್ಷರಾಗಿದ್ದರು. ಅವರ ಕಾಲದಲ್ಲಿ ಪರಿಷತ್ತಿಗೆ ಕರ್ನಾಟಕದ ವ್ಯಾಪ್ತಿ ಬಂದುದಲ್ಲದೆ ಪರಿಷತ್ತಿನ ಕಾರ್ಯಕ್ರಮಗಳಿಗೆ ಅಚ್ಚುಕಟ್ಟುತನ ಬಂದಿತು. ಡಿ ವಿ ಜಿ ಅವರ ದಕ್ಷತೆ, ವಿವೇಚನೆ, ಕಾರ್ಯನಿರ್ವಹಣಾ ಸಾಮರ್ಥ್ಯ ಅಸಾಧಾರಣವಾದುದು. ಪರಿಷತ್ತು ಕೇವಲ ಸಾಹಿತ್ಯಕ್ಕೇ ಮೀಸಲಾಗದೆ ಸಾಂಸ್ಕೃತಿಕ ಕೇಂದ್ರವಾಯಿತು.

"ಡಿ ವಿ ಜಿ ಯವರು ಉಪಾಧ್ಯಕ್ಷರಾಗಿದ್ದಾಗ ಹಿಂದಿ ಹೆಡೆಯೆತ್ತಿತ್ತು. ಹಿಂದಿ ಪ್ರಚಾರಕರು ಹಿಂದಿ ಪ್ರಚಾರಮಾಡುವುದಕ್ಕಿಂತ ಹೆಚ್ಚಾಗಿ ಕನ್ನಡವನ್ನು ದೂಷಿಸುತ್ತಿದ್ದರು. ಈ ಬಗ್ಗೆ ಎ.ಆರ್.ಕೃ. ಅವರು "ಪ್ರಬುದ್ಧಕರ್ಣಾಟಕ"ದಲ್ಲಿ ಒಂದು ಅಗ್ರ ಲೇಖನವನ್ನು ಬರೆದುದಲ್ಲದೆ ಪರಿಷತ್ತಿನ ಕಾರ್ಯಕಾರಿ ಸಮಿತಿಯಲ್ಲಿ ಒಂದು ನಿರ್ಣಯ ಮಂಡಿಸಿದರು. ಬಿ.ಎಂ.ಶ್ರೀ, ಮಾಸ್ತಿ, ಎಂ.ಆರ್.ಶ್ರೀ, ಡಿ.ಸಿ.ಸುಬ್ಬರಾಯಪ್ಪ ಅದನ್ನು ಸಮರ್ಥಿಸಿದರು. ನಿಟ್ಟೂರು ಶ್ರೀನಿವಾಸರಾಯರು, ನಾನು ವಿರೋಧಿಸಿದೆವು. ನಮ್ಮ ವಿರೋಧ ಬಿದ್ದು ಹೋಯಿತು.

"ರಾಷ್ಟ್ರೀಯ ವಾತಾವರಣದಲ್ಲಿ ಬೆಳೆದಿದ್ದ ನನಗೆ ಹಿಂದಿಯನ್ನು ವಿರೋಧಿಸುವುದು ತಪ್ಪು ಎನ್ನುವ ಭಾವನೆ ಆಗ ಇತ್ತು. ಆದರೆ ಒಂದೆರಡು ವರ್ಷದಲ್ಲಿ ಹಿಂದಿ ಪ್ರಚಾರಕರ ಪೋಷಕರ ದುರಭಿಸಂಧಿಯನ್ನು ಕಂಡಮೇಲೆ ನಾನು ಉಗ್ರವಾಗಿ ಹಿಂದಿ ವಿರೋಧ ಕೈಗೊಳ್ಳಬೇಕಾಯಿತು. ಲೇಖನಗಳು, ಭಾಷಣಗಳು, ನಾಟಕಗಳ ಮೂಲಕ ನಾನು ಹಿಂದಿಯ ಅಹಿತ ಬೆಳವಣಿಗೆಯನ್ನು ಎದುರಿಸಿದೆ"ಎಂದು ಹೇಳಿದ್ದಾರೆ.

ವೆಂಕಟೇಶ ಸಾಂಗ್ಲಿಯವರು ಡಿ ವಿ ಜಿ ಯವರ ಆಡಳಿತವನ್ನು ಕುರಿತು ಹೀಗೆಂದಿದ್ದಾರೆ: "ಪರಿಷತ್ತಿಗೆ ಸುಭದ್ರವಾದ 'ಆಡಳಿತ ಯಂತ್ರ'ವನ್ನು ನಿರ್ಮಿಸಿ

ಕೊಟ್ಟವರು ಒಂದುರೀತಿಯಲ್ಲಿ ಗುಂಡಪ್ಪನವರು. ಹಿಂದಿನ ಆಡಳಿತೆಯ ಕರ್ತವ್ಯ ನಿಷ್ಠೆ ಮತ್ತು ಪ್ರಾಮಾಣಿಕತೆಗೆ ಎರಡು ಮಾತು ಇಲ್ಲ; ಆದರೆ ಅವರದು ಪಂಡಿತ ಮಾರ್ಗ. ಆಡಳಿತ ನಿರ್ವಹಣೆಗೆ ಕ್ರಮಬದ್ಧವಾದ ಯುಕ್ತ ದಾರಿಯನ್ನು ಗುರುತಿಸುವುದು ಅವರ ಕ್ಷೇತ್ರವನ್ನು ಮೀರಿದ್ದು. ಅಲ್ಲದೆ ಹಿಂದಿನ ಉಪಾಧ್ಯಕ್ಷರು ಪರಿಷತ್ತಿನ ಅನುದಿನದ ಆಡಳಿತೆಯಲ್ಲಿ ಭಾಗವಹಿಸುವಷ್ಟು ವ್ಯವಧಾನ ಇಲ್ಲದವರು. ಗುಂಡಪ್ಪನವರು ಅಧಿಕಾರಕ್ಕೆ ಬಂದಮೇಲೆ ಪರಿಸ್ಥಿತಿ ಬದಲಾಯಿತು. ಆಡಳಿತೆಗೆ ಸಂಬಂಧಪಟ್ಟ ಪ್ರತಿಯೊಂದು ಅಂಶವನ್ನೂ ತಾವೇ ನೋಡಿಕೊಳ್ಳಲಾರಂಭಿಸಿದರು. ಹಿಂದೆ ಕಾರ್ಯದರ್ಶಿಗಳು ಮುಖ್ಯ ಸೂತ್ರಧಾರರಾಗಿದ್ದರೆ, ಈಗ ಅವರು ಉಪಾಧ್ಯಕ್ಷರಿಗೆ ಸಹಾಯಕರು ಮಾತ್ರ. ಉಪಾಧ್ಯಕ್ಷರಾದರೂ ಕಾರ್ಯಸಮಿತಿಯ ನಿರ್ದೇಶನ ಪಡೆದು ಆಡಳಿತ ನಡೆಸಬೇಕು. ಈ ಯಂತ್ರಕ್ಕೆ ಗುಂಡಪ್ಪನವರು ಖಚಿತವಾದ ಮಾರ್ಗಸೂಚಿಯನ್ನು ಹಾಕಿಕೊಟ್ಟರು. ಅದಕ್ಕೆ ಪೂರಕವಾಗಿ ಪರಿಷತ್ತಿನ ಅಂಗರಚನೆ, ಮತ್ತು ನಿಬಂಧನೆಗಳಲ್ಲಿ ಆದುವರೆಗೆ ಆಗಿದ್ದ ತಿದ್ದುಪಡಿಗಳನ್ನು ಕ್ರೋಢೀಕರಿಸಿ ಪ್ರಕಟಿಸಿದರು. ಪದವೀಧರರೂ ಕನ್ನಡ ಪಾಂಡಿತ್ಯವುಳ್ಳವರೂ ಆದ ಯುವಕರನ್ನು ಸಿಬ್ಬಂದಿಯಲ್ಲಿ ನಿಯಮಿಸಿಕೊಂಡರು".

ಡಿ ವಿ ಜಿ ಯವರು ಪರಿಷತ್ತಿನ ಉಪಾಧ್ಯಕ್ಷ ಪದವಿಗೆ ಚುನಾಯಿತರಾದ ದಿನದಿಂದಲೇ ಅದರ ಆಡಳಿತದಲ್ಲಿ ಒಂದು ಹೊಸ ಅಧ್ಯಾಯ ಪ್ರಾರಂಭವಾಯಿತೆನ್ನಬಹುದು.

ಪರಿಷತ್ತಿನ ಕಾರ್ಯಾಲಯದ ಪುನರ್ವ್ಯವಸ್ಥೆಯೊಂದಿಗೆ ಅದು ಆರಂಭವಾಯಿತು. ದಿನ ಪೂರ್ತಿ ಕೆಲಸಮಾಡುವ ಸಹಾಯಕ ಕಾರ್ಯದರ್ಶಿಯೊಬ್ಬನನ್ನೂ ಇಂಗ್ಲಿಷ್ ಷಾರ್ಟ್‌ಹ್ಯಾಂಡ್ ಮತ್ತು ಟೈಪ್‌ರೈಟಿಂಗ್ ಬಲ್ಲ ಗುಮಾಸ್ತರೊಬ್ಬರನ್ನೂ ಕನ್ನಡ ಷಾರ್ಟ್‌ಹ್ಯಾಂಡ್ ಬಲ್ಲ ಇನ್ನೊಬ್ಬರು ಗುಮಾಸ್ತರನ್ನೂ ನೇಮಿಸಿಕೊಳ್ಳಲಾಯಿತು. ಕಾರ್ಯಾಲಯವು ರಜಾದಿವಸಗಳ ಹೊರತು ಪ್ರತಿದಿನವೂ ಸಾಮಾನ್ಯವಾಗಿ ಬೆಳಿಗ್ಗೆ 8 ರಿಂದ ರಾತ್ರಿ 8 ರ ವರೆಗೂ ತೆರೆದಿರುತ್ತಿತ್ತು. ಆಡಳಿತದ ಕೆಲಸಗಳಿಗಾಗಿ ಹಣಕಾಸು ಲೆಕ್ಕಾಚಾರಕ್ಕಾಗಿ ಪರಿಷತ್ತಿನ ವರ್ಷವನ್ನು ಜನವರಿ ಮೊದಲಿನಿಂದ ಡಿಸೆಂಬರ್ ಕಡೆಯವರೆಗೆ ಎಂದು ಪರಿಗಣಿಸುವಂತೆ ನಿರ್ಣಯವನ್ನು ಕೈಗೊಳ್ಳಲಾಯಿತು. ಆಜೀವ ಸದಸ್ಯರು ಸಹಾಯಕರು ಮೊದಲಾದ ವಿಶೇಷ ವರ್ಗದ ಸಹಾಯಕರು ಕೊಡುವ ಹಣವನ್ನು ಪರಿಷತ್ತಿನ ಸಾಮಾನ್ಯ ವೆಚ್ಚಗಳಿಗೆ ವಿನಿಯೋಗಿಸದೆ ಪರಿಷತ್ತಿನ

ಶಾಶ್ವತ ನಿಧಿಗೆ ಸೇರಿಸಬೇಕು; ಅದರಿಂದ ಬರುವ ಬಡ್ಡಿಯನ್ನು ಮಾತ್ರ ದಿನನಿತ್ಯ ವೆಚ್ಚಕ್ಕೆ ಉಪಯೋಗಿಸಿಕೊಳ್ಳಬಹುದು ಎಂದು ತೀರ್ಮಾನಿಸ ಲಾಯಿತು.

ಪರಿಷತ್ತಿನ ಕಾರ್ಯ ಕಲಾಪಗಳು ದಕ್ಷತೆಯಿಂದ ನಡೆಯಲು ಕಾರ್ಯ ಕಾರಿ ಸಮಿತಿಯ ಅಂಗವಾಗಿ ಉಪನ್ಯಾಸ ಸಮಿತಿ, ಪುಸ್ತಕ ಭಂಡಾರ ಉಪ ಸಮಿತಿ, ದ್ರವ್ಯಾನುಕೂಲತೆಯ ಉಪಸಮಿತಿ ಮೊದಲಾದ ಉಪಸಮಿತಿಗಳನ್ನು ರಚಿಸಲಾಯಿತು. ಈ ಉಪಸಮಿತಿಗಳ ಉದ್ದೇಶ, ಕಾರ್ಯವಿಧಾನ, ಹಣಕಾಸಿನ ವ್ಯವಸ್ಥೆ ಮೊದಲಾದ ಅಂಶಗಳನ್ನು ಕುರಿತು ನಿಯಮಗಳು ರಚಿತವಾದವು.

ಪರಿಷತ್ತಿನ ಸಭಾ ಮಂಟಪದ ನಿಯಮಗಳು, ಸಭಾಮಂಟಪದಲ್ಲಿ ಇರಿಸ ಬೇಕಾದ ಚಿತ್ರಪಟಗಳಿಗೆ ಸಂಬಂಧಪಟ್ಟ ನಿಯಮಗಳು, ಸಾಹಿತ್ಯ ಸಂಸ್ಥೆಗಳು ಪರಿಷತ್ತಿನ ಅಂಗವಾಗಿ ಸೇರಲು ನಿಯಮಗಳು, ಸಾಹಿತ್ಯ ಸಮ್ಮೇಳನದ ಕ್ರಮದ ಸೂಚನಾವಳಿ ಮೊದಲಾದ ನಿಯಮಗಳು ರಚಿತವಾದವು.

ಈ ನಿಯಮಾವಳಿಗಳನ್ನು ಮಾಡಿದಾಗ ವೆಂಕಣ್ಣಯ್ಯನವರ ಪ್ರತಿಕ್ರಿಯೆ ಯನ್ನು ಕುರಿತು ಡಿ ವಿ ಜಿ ಜ್ಞಾಪಿಸಿಕೊಂಡಿದ್ದಾರೆ. "ಸಾಹಿತ್ಯ ಪರಿಷತ್ತಿನ ಉಪಾ ಧ್ಯಕ್ಷ ಸ್ಥಾನಕ್ಕೆ ನಾನು ಬಂದ ಕೂಡಲೇ ವಾರ್ಷಿಕ ಸಮ್ಮೇಳನಗಳ ಬಗ್ಗೆ ಒಂದು ನಿಯಮಾವಳಿಯನ್ನು ತಯಾರು ಮಾಡಿ ಪರಿಷತ್ತಿನ ಕಾರ್ಯ ಸಮಿ ತಿಯ ಮುಂದೆ ಇರಿಸಿದೆ. ಹಾಗೆಯೇ ವಿಶೇಷ ಸಾಹಿತ್ಯೋತ್ಸವ ಮೊದಲಾದ ಕಾರ್ಯಗಳನ್ನು ಕುರಿತೂ ನಿಯಮಗಳನ್ನು ಸೂಚಿಸಿದೆ. ಸಭೆ ಸಮ್ಮೇಳನಗಳಿಗೆ ಕಾಲ ನಿಯಮವಿರಬೇಕು; ಉಪನ್ಯಾಸಾದಿಗಳ ಅನುಕ್ರಮವು ನಿಷ್ಕರ್ಷೆಯಾಗ ಬೇಕು, ಭಾಷಣಗಳಿಗೆ ವೇಳೆ ಕ್ಲುಪ್ತವಾಗಿರಬೇಕು. ಗೊತ್ತುಗುರಿಯಿಲ್ಲದ ಕಾರ್ಯಕಲಾಪಗಳಿಂದ ಪ್ರಯೋಜನವಾಗದು. ಸಮ್ಮೇಳನ ದೊಂಬಿಯ ಗದ್ದಲವಾಗಿರಬಾರದು. ಶಿಸ್ತನ್ನಿರಿಸಿಕೊಂಡು ನಡೆದರೆ ಕೆಲಸ ಹೆಚ್ಚಾಗಿ ಮಾಡ ಲಾಗುತ್ತದೆ. ಮತ್ತು ಮಾಡಿದ ಕೆಲಸ ಹೆಚ್ಚು ಫಲಕಾರಿಯಾಗುತ್ತದೆ. ಇದು ನನ್ನ ವಾದ.

"ಪರಿಷತ್ತಿನ ಕಾರ್ಯ ಸಮಿತಿ ಇದನ್ನು ಉತ್ಸಾಹದಿಂದ ಅನುಮೋದಿ ಸಿತು. ಹಾಗೆ ಅನುಮೋದಿಸಿ ಚಪ್ಪಾಳೆ ತಟ್ಟಿದವರಲ್ಲಿ ವೆಂಕಣ್ಣಯ್ಯ ಮೊದ ಲನೆಯವರು. ಅವರು ನಗುನಗುತ್ತ 'ತಥಾಸ್ತು' ಎಂದು ಹೇಳಿ ಆ ಕೂಡಲೆ "ಅನ್ಯಥಾ ಭವತಿ" ಎಂದರು. ನಾವೆಲ್ಲ ಅವರ ಕಡೆ ದಿಟ್ಟಿಸಿ ನೋಡಿದೆವು. ಅವರು ನಗುತ್ತ, "ನೀವು ಹೇಳುವುದೆಲ್ಲ ಸರಿ. ಆದರೆ ಅದೊಂದೂ ನಡೆಯುವು

ದಿಲ್ಲ" ಎಂದು ಹೇಳಿಬಿಟ್ಟರು. ನಾನು "ಅದೇಕೆ ಹಾಗೆನ್ನುತ್ತೀರಿ ?" ಎಂ: "ಏಕೆಂದರೆ ನಮ್ಮ ಜನದ ಸ್ವಭಾವ ಅಂಥಾದ್ದು. ಅವರು ಒಂದು ನಿಯಮ ವನ್ನು ನಡಸಗೊಡುವುದಿಲ್ಲ. ನೀವು ಎಂಟೂವರೆಗೆ ಸಭೆ ಎನ್ನುತ್ತೀರಿ. ಒಂಬತ್ತರ ವರೆಗೂ ಜನ ಬರುವುದಿಲ್ಲ. ಒಂಬತ್ತಕ್ಕೆ ಸಭೆ ಎನ್ನಿ; ಹತ್ತು ಘಂಟೆಯ ವರೆಗೂ ಒಬ್ಬರೂ ತಲೆ ಹಾಕುವುದಿಲ್ಲ. ನೀವು ಭಾಷಣಕ್ಕೆ ಹದಿನೈದು ನಿಮಿಷ ಗೊತ್ತು ಮಾಡಿರುತ್ತೀರಿ. ಇಪ್ಪತ್ತೈದು ನಿಮಿಷವಾದರೂ ನಮ್ಮ ಭಾಷಣ ಕರ್ತರು ವಿಷಯಕ್ಕೇ ಬಂದಿರುವುದಿಲ್ಲ. ಪೀಠಿಕೆಯಲ್ಲೇ ಇರುತ್ತಾರೆ. ನೀವು ಅವರನ್ನೇನು ಮಾಡುತ್ತೀರಿ? ನಿಲ್ಲಿಸಿದರೆಂದರೆ ಅವರಿಗೆ ಕೋಪ. ನಾವೂ ಕೋಪ ಮಾಡಿಕೊಂಡು ನೀವು ಭಾಷಣಕಾರರಿಗೆ ಅಪಮಾನ ಮಾಡಿದಿರಿ ಎನ್ನುತ್ತೇವೆ. ಕಾಫಿಗೆ ಕೂಡ ನಿಮ್ಮ ನಿಯಮ ನಡೆಯದಂತೆ ನೋಡಿಕೊಳ್ಳುತ್ತೇವೆ. ನೀವು ಮೂರು ಘಂಟೆಗೆಂದರೆ ನಾವು ಎರಡೂವರೆಗೇ ಸೇರಿ ದಬಾದುಬಿ ಮಾಡಿ ಕುಡಿದು ಚೆಲ್ಲಾಡಿ ಮೂರು ಘಂಟೆಗೆ ಬಂದವರಿಗೆ ಖಾಲಿ ಪಾತ್ರೆ ಬಿಟ್ಟಿರುತ್ತೇವೆ. ಅಥವಾ ನಾವೇ ನಾಲ್ಕಕ್ಕೆ ಬಂದು ಕಾಫಿ ತಣ್ಣಗಾಯಿತೆಂದು ಬೊಬ್ಬೆಯಿಡುತ್ತೇವೆ. ನಿಮ್ಮ ನಿಯಮ ಶಿಸ್ತುಗಳು ನಮ್ಮ ಸ್ವಭಾವಕ್ಕೆ ಒಗ್ಗುವುದಿಲ್ಲ ದೇವರು".

"ಈ ನಿರುತ್ಸಾಹದ ಮಾತುಗಳನ್ನಾಡುವಾಗ ವಾಕ್ಯಗಳನ್ನು ಛಂದೋ ಬದ್ಧಮಾಡಿ ರಾಗತಾಳಗಳಲ್ಲಿ ಹಾಡಿದರು.

"ಕಡೆಗೆ "ಇದೆಲ್ಲ ಅಚ್ಚಾಗಿರಲಿ. ನಿಮ್ಮ ಉದ್ದೇಶವೇನೆಂಬುದು ತಿಳಿಯು ತ್ತದೆ; ನೋಡುವವರಿಗೆ. ನಮ್ಮ ಜನಕ್ಕೆ ಒಂದು ಕಟ್ಟಿಲ್ಲ ಒಂದು ಶಿಸ್ತಿಲ್ಲ. ದೊಂಬಿಯೆಬ್ಬಿಸುವುದೇ ನಮ್ಮ ಸಭೆಯ ಕೆಲಸ. ನೋಡಿ ನೋಡ್ರಲಾ" ಎಂದರು.

"ಅಂದಿನಿಂದೀಚೆಗೆ ನನಗಾಗಿರುವ ಅನುಭವಗಳು ವೆಂಕಣ್ಣಯ್ಯನವರ ವಾದವನ್ನು ಎತ್ತಿ ಹಿಡಿಯುತ್ತವೆ. ಸಭಿಕರು ಒಂದು ಕ್ರಮದಲ್ಲಿ ಒಂದು ಸಾಲಿ ನಲ್ಲಿ ಕುಳಿತುಕೊಳ್ಳುವಂತೆ ಹೇಳಲಾಗುತ್ತದೆ. ಬಂದ ಜನ ಬಾಗಿಲು ಹತ್ತಿರವೇ ಒಬ್ಬರನ್ನೊಬ್ಬರು ಒತ್ತಿಕೊಂಡು ಮಿಕ್ಕಭಾಗವನ್ನು ಖಾಲಿ ಬಿಟ್ಟಿರುತ್ತಾರೆ. ವಿಶಾಲವಾಗಿ ಕೂಡಿರೆಂದರೆ "ಪರವಾಯಿಲ್ಲ. ಇಲ್ಲೇ ಇರುತ್ತೇವೆ" ಎನ್ನುತ್ತಾರೆ. ಅವರ ಅಭಿಪ್ರಾಯದಲ್ಲಿ ಇದು ವಿನಯ. ಅದರಿಂದ ಇತರರಿಗಾಗುವುದು ತೊಂದರೆ. ಹೀಗೆ ಎಲ್ಲಿಯೂ ಯಾವ ಶಿಸ್ತೂ ನಡೆಯುವುದು ನಮ್ಮ ದೇಶದಲ್ಲಿ ಏಕೋ ಕಷ್ಟವಾಗಿದೆ. ನಾನು ಹೀಗೆ ಸೋತವನಾಗಿದ್ದೇನೆ. ವೆಂಕಣ್ಣಯ್ಯನ ದೊಂಬಿ ಜಯ ಘೋಷವೇ ಕಾರ್ಯಕ್ಕೆ ಬರುತ್ತಿದೆ."

ಎ. ಆರ್. ಕೃಷ್ಣಶಾಸ್ತ್ರಿಗಳೇ ಮುಖ್ಯರಾಗಿದ್ದ ಪರಿಷತ್ಪತ್ರಿಕೆಯ ಸಂಪಾದಕೀಯ ಮಂಡಳಿಯೊಂದು ರಚಿತವಾಗಿ ಪತ್ರಿಕೆಯ ಸ್ವರೂಪ, ಅದನ್ನು ನಡೆಸುವುದರ ಬಗ್ಗೆ ನಿರ್ಣಯಗಳಾದುವು.

ಉಪನ್ಯಾಸಗಳು ಮತ್ತು ಪರಿಷತ್ತಿನ ಇತರ ಕಾರ್ಯ ಕಲಾಪಗಳು ಕನ್ನಡ ಶೀಘ್ರಲಿಪಿಯ ಮೂಲಕ ಯಥಾವತ್ತಾಗಿ ವರದಿಯಾಗುವ ಏರ್ಪಾಟು ನಡೆಯಿತು.

ಅಲ್ಲಿಯವರೆಗೂ ಉಪಾಧ್ಯಕ್ಷರು ಪರಿಷತ್ತಿನ ದೈನಂದಿನ ಕೆಲಸಕಾರ್ಯಗಳನ್ನು ಗಮನಿಸುವಷ್ಟು ವ್ಯವಧಾನವಿಲ್ಲದವರಾಗಿದ್ದರು. ಆದರೆ ಡಿ ವಿ ಜಿ ಯವರು ಪರಿಷತ್ತಿನ ಆಡಳಿತಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳನ್ನೂ ತಾವೇ ಗಮನಿಸಲಾರಂಭಿಸಿದರು. ಅಂದಿನ ವ್ಯವಸ್ಥೆಗೆ ಉದಾಹರಣೆಯಾಗಿ ಕಾರ್ಯ ನಿರ್ವಾಹಕ ಸಮಿತಿಯ ಒಂದು ನಿರ್ಣಯವನ್ನು ಹೇಳಬಹುದು. "ಪರಿಷತ್ತಿನ ಸರಸ್ವತೀ ಭಂಡಾರಕ್ಕಾಗಿಯಾಗಲಿ ಅವಶ್ಯವಾದ ಸಾಮಾನುಗಳಿಗಾಗಲಿ ಉಪಾಧ್ಯಕ್ಷರು ತಮ್ಮ ಸ್ವಂತ ಜವಾಬ್ದಾರಿಯ ಮೇಲೆ ತಿಂಗಳೊಂದಕ್ಕೆ 10 ರೂಪಾಯಿಗೆ ಮೀರದಂತೆ ಮತ್ತು ವರ್ಷಕ್ಕೆ ಒಂದು ನೂರು ರೂಪಾಯಿಗಳಿಗೆ ಮೀರದಂತೆ ವೆಚ್ಚಮಾಡಲು ಅಧಿಕಾರವುಳ್ಳವರಾಗಿರತಕ್ಕದ್ದು".

ಹೀಗೆ ಪರಿಷತ್ತಿನ ಉದ್ದೇಶಗಳ ಸಾಧನೆಗಾಗಿ, ಕೆಲಸಗಳು ಸುಸೂತ್ರವಾಗಿ ನಡೆದುಕೊಂಡು ಹೋಗುವುದಕ್ಕಾಗಿ ಪರಿಷತ್ತಿನ ಆಡಳಿತ ಕ್ರಮದಲ್ಲಿ ಒಂದು ವ್ಯವಸ್ಥೆಯನ್ನು ತಂದುಕೊಂಡರು ಡಿ ವಿ ಜಿ ಯವರು. ಪ್ರಜಾಪ್ರಭುತ್ವದ ತತ್ತ್ವವನ್ನು ಮೈಗೂಡಿಸಿಕೊಂಡಿದ್ದ ಅವರಿಗೆ, ಆಡಳಿತದ ಮೂಲಸೂತ್ರಗಳ ಒಳ ತಿರುಳನ್ನು ತಿಳಿದ ಅವರಿಗೆ, ಅವುಗಳನ್ನು ತಾವು ಪ್ರಯೋಗಿಸಿ ನೋಡುವ ಅವಕಾಶ ಪರಿಷತ್ತಿನಲ್ಲಿ ದೊರೆಯಿತು ಎನ್ನಬಹುದು. ಸುವ್ಯವಸ್ಥಿತ ಆಡಳಿತ ಹೇಗೆ ನಡೆಯಬೇಕು ಎಂಬುದಕ್ಕೆ ಅದು ಒಂದು ಮಾದರಿಯಾಯಿತು.

21.1.1934ರಲ್ಲಿ ನಡೆದ ಕಾರ್ಯನಿರ್ವಾಹಕ ಮಂಡಲಿಯ ಸಭೆಯಲ್ಲಿ ಅವರು ಹೇಳಿದ ಮಾತುಗಳು ಒಂದು ಸಂಸ್ಥೆಗೆ ಹೇಗೋ ಹಾಗೆ ಒಂದು ದೇಶದ ಆಡಳಿತಕ್ಕೂ ಮಾರ್ಗದರ್ಶಕವಾಗಿವೆ: "ನಾವು ಪರಸ್ಪರ ಸ್ನೇಹದಿಂದ—ನಿಜವಾದ ವಿಶ್ವಾಸ ಗೌರವಗಳಿಂದ—ಒಂದು ಕುಟುಂಬದಂತೆ ನಡೆದುಕೊಳ್ಳುವೆವೆಂದು ನಾನು ಮನಃಪೂರ್ವಕ ನಂಬಿದ್ದೇನೆ. ನಮ್ಮಲ್ಲಿ ಅಭಿಪ್ರಾಯ ಭೇದಗಳು ಕಾಣಬಹುದು. ಅಭಿಪ್ರಾಯ ಭೇದಗಳು ಬೇಡವಾದರೆ ಈ ಮಂಡಲಿಯಲ್ಲಿ ನಾವಿಷ್ಟು ಮಂದಿ ಏಕಿರಬೇಕು? ಆಗ ಒಬ್ಬರ ಕೈಯಲ್ಲೆ ಎಲ್ಲವನ್ನೂ ಬಿಡ

ಬಹುದಾಗಿತ್ತು. ಅಭಿಪ್ರಾಯ ಭೇದವಿಲ್ಲದೆ ಅಭಿಪ್ರಾಯ ಶೋಧನೆಯಾಗಲಾರದು. ಆದರೆ ಉದ್ದೇಶ ಭೇದ ಮಾತ್ರ ಇರಬಾರದು. ನಮ್ಮಲ್ಲಿ ಅದು ಇಲ್ಲ. ನಮಗೆಲ್ಲ ಇರುವುದು ಒಂದೇ ಉದ್ದೇಶ, ಒಂದೇ ಆಶಯ :— ಅದು ನಮ್ಮ ಜನದ ಮತ್ತು ನಮ್ಮ ಭಾಷೆಯ ಮೇಲ್ಮೆ. ಈ ಉದ್ದೇಶವನ್ನು ಸಾಧಿಸುವ ಕ್ರಮಗಳ ವಿಚಾರದಲ್ಲಿ ಒಂದೊಂದು ವೇಳೆ ಅಭಿಪ್ರಾಯ ಭೇದ ತೋರಬಹುದು. ಆದರೇನು ? ಚರ್ಚೆಯಲ್ಲಿ ಅಭಿಪ್ರಾಯಗಳನ್ನು ಒಬ್ಬರೊಬ್ಬರಿಗೆ ಕೊಟ್ಟು ತೆಗೆದು, ಫಲಿತಾಂಶದಲ್ಲಿ ಒಮ್ಮನಸ್ಸಿನವರಾಗುವಷ್ಟು ಅನ್ಯೋನ್ಯ ವಿಶ್ವಾಸವೂ ಸಹನೆಯೂ ನಮಗೆ ಅಸಾಧ್ಯವೇನಲ್ಲ."

ಆ ಸಮಯದಲ್ಲಿ ಬೆಳ್ಳಾವೆ ವೆಂಕಟನಾರಣಪ್ಪನವರು ಕೋಶಾಧ್ಯಕ್ಷರ ಸ್ಥಾನಕ್ಕೂ ಮತ್ತು ಪರಿಷತ್ಪತ್ರಿಕೆಯ ಸಂಪಾದಕ ಸ್ಥಾನಕ್ಕೂ ರಾಜೀನಾಮೆ ಕೊಟ್ಟಿದ್ದರಿಂದ ವಿ. ಸೀತಾರಾಮಯ್ಯನವರು ಗೌರವ ಕೋಶಾಧ್ಯಕ್ಷರಾದರು. ಸಿ. ಕೆ. ವೆಂಕಟರಾಮಯ್ಯನವರು ಗೌರವ ಕಾರ್ಯದರ್ಶಿಗಳಾದರು. ಎಂ. ಆರ್ ಕೃಷ್ಣಶಾಸ್ತ್ರಿಗಳು ಪರಿಷತ್ಪತ್ರಿಕೆಯ ಸಂಪಾದಕರಾದರು.

ವಿ.ಸೀ. ಹೇಳುತ್ತಾರೆ : ಡಿ ವಿ ಜಿ "ಅವರು ಉಪಾಧ್ಯಕ್ಷ ಪದವಿಯನ್ನು ಒಪ್ಪಿಕೊಂಡ ಕೂಡಲೆ ಅವರು ನಮಗೆ ಹೇಳಿದ್ದು : "ಸಾರ್ವಜನಿಕ ಸಂಸ್ಥೆ ಇದು. ಯಾರ ಖಾಸಗಿ ಸ್ನೇಹ ಪಕ್ಷಪಾತ ಪೂರ್ವಗ್ರಹಗಳನ್ನು ಬೇರೊಟ್ಟಿಗಿಡಿ. ಯಾರು ಬಂದರೂ ಸ್ವಾಗತ ಕೊಡಿ. ವಿರೋಧಿಗಳು ಬಂದರೆ ಮೊದಲು ಅವರಿಗೆ ಮರ್ಯಾದೆ ಮಾಡತಕ್ಕದ್ದು. ಇನ್ನೊಂದು : ಸಂಬಳಕ್ಕೆ ದುಡಿಯುವವರು ನಾವು, ಗೌರವಸ್ಥಾನಗಳಲ್ಲಿರುವವರು ತಮ್ಮ ಘನತೆ ಹೆಚ್ಚು ಎಂಬ ಎಣಿಕೆ ತಕ್ಕುದಲ್ಲ. ಇಂಥವರು ಸಂಬಳಕ್ಕಿರುವವರಿಗಿಂತ ಮಿಗಿಲಾಗಿ ದುಡಿಯಬೇಕು ಎಂದರು. ಕಾರ್ಯಕ್ರಮ ಏರ್ಪಡಿಸುತ್ತೇವೆ. ಗೊತ್ತಾದವರು ಬಾರದಾದರೆ ನಮ್ಮಲ್ಲಿ ಯಾರಾದರೊಬ್ಬರು ಆ ಕೆಲಸವನ್ನು ನಿರ್ವಹಿಸಲು ಸಿದ್ಧವಾಗಿರತಕ್ಕದ್ದು. ಆಗ ಗುರ್ ಗುರ್ ಎನ್ನಬಾರದು ಎಂಬುದು ಆದೇಶ."

ಏಪ್ರಿಲ್ 1934ರ ಪರಿಷತ್ಪತ್ರಿಕೆಯಿಂದಲೇ ಹಲವು ಬದಲಾವಣೆಗಳು ಕಂಡುಬಂದುವು. ಭಾಷಾಸಾಹಿತ್ಯಾದಿಗಳಿಗೆ ಸಂಬಂಧಪಟ್ಟ ಪ್ರೌಢಲೇಖನಗಳ ಜೊತೆಗೆ, ಪರಿಷತ್ತಿನ ಕಾರ್ಯ ಕಲಾಪಗಳ ವರದಿ, ಬೇರೆ ಬೇರೆ ಊರುಗಳಲ್ಲಿರುವ ಕನ್ನಡ ಸಂಸ್ಥೆಗಳ ಚಟುವಟಿಕೆಗಳ ವರದಿ, ಇತರ ಪತ್ರಿಕೆಗಳಲ್ಲಿ ಪ್ರಕಟವಾದ ಮುಖ್ಯವಾದ ಲೇಖನಗಳ ಸೂಚಿ, ಪ್ರಾಚ್ಯಲೇಖನ ಮಾಲೆ ಮುಂತಾದುವು ಕಂಡು ಬಂದವು. ಇದರೊಂದಿಗೆ ಪತ್ರಿಕೆಗೆ ಚಂದಾದಾರರಲ್ಲದ ಸಾಮಾನ್ಯ

ಸದಸ್ಯರ ಉಪಯೋಗಕ್ಕಾಗಿ "ಪರಿಷತ್ಪತ್ರಿಕೆಯ ಸಂಗ್ರಹ ಪ್ರತಿ"ಯೊಂದು ಪ್ರಕಟಿಸಲ್ಪಟ್ಟಿತು. ಮುಖ್ಯ ಲೇಖನಗಳ ಇಂಗ್ಲಿಷ್ ಸಾರಾಂಶ ಪ್ರಕಟವಾಯಿತು.

ಪರಿಷತ್ತು ಕೈಗೊಂಡ ಇನ್ನೊಂದು ಕಾರ್ಯಕ್ರಮ ಆಧುನಿಕ ವಿಚಾರೋಪನ್ಯಾಸಗಳ ಕಾರ್ಯಕ್ರಮ. ಇದರ ಜವಾಬ್ದಾರಿ ಎಂ. ಆರ್. ಶ್ರೀನಿವಾಸಮೂರ್ತಿಗಳದು. 1934ರ ಮೇ ತಿಂಗಳು ಈ ವಿಶೇಷ ಸಾಹಿತ್ಯೋತ್ಸವ ನಡೆಯಿತು. ಇದರ ಉದ್ದೇಶಗಳನ್ನು ವಿವರಿಸುತ್ತ ಡಿ ವಿ ಜಿ : "ಈ ಉತ್ಸವದ ಆಶಯಗಳು ಎರಡು : ಆಧುನಿಕ ಪ್ರಪಂಚದ ಜೀವನಕ್ಕೆ ಸಂಬಂಧ ಪಟ್ಟ ಎಲ್ಲ ವಿಚಾರಗಳನ್ನು ಕುರಿತು ಕನ್ನಡದಲ್ಲಿ ಭಾಷಣ ಮಾಡುವುದೂ ಚರ್ಚೆ ನಡಸುವುದೂ ಸಾಧ್ಯವೆಂಬುದನ್ನು ಮಹಾಜನರಿಗೆ ತೋರಿಸಿಕೊಡಬೇಕೆಂಬುದು ಒಂದು. ಇಂಥ ವಿಚಾರಗಳನ್ನು ಕುರಿತು ತಿಳಿವಳಿಕೆಯನ್ನು ಸಂಪಾದಿಸಿಕೊಳ್ಳಲು ದೇಶ ವಿಚಾರ ನಿಷ್ಠರಾದವರಿಗೆ— ವಿಶೇಷವಾಗಿ ಉಪಾಧ್ಯಾಯ ಮಂಡಳಿಗೆ— ಅವಕಾಶ ಕಲ್ಪಿಸಿಕೊಡಬೇಕೆಂಬುದು ಇನ್ನೊಂದು" ಎಂದಿದ್ದಾರೆ.

ಇದನ್ನು ಕುರಿತು ಮಾಸ್ತಿಯವರು : "ಗುಂಡಪ್ಪನವರು ಮಾಡಿದ ಹತ್ತು ಮುಖದ ಕೆಲಸದಲ್ಲಿ ಬಹುಮುಖ್ಯವಾದದ್ದು, ಅವರು ವಿದ್ಯಾಭ್ಯಾಸದ ಇಲಾಖೆಯ ಮುಖ್ಯಾಧಿಕಾರಿಗಳಾಗಿದ್ದ ಎನ್. ಎಸ್. ಸುಬ್ಬರಾಯರಲ್ಲಿ ಮಾತನಾಡಿ ವರ್ಷ ವರ್ಷವೂ ಬೇಸಗೆಯ ರಜಾದಿನದಲ್ಲಿ ಪರಿಷತ್ತಿನಲ್ಲಿ ವಸಂತೋತ್ಸವ ಎಂಬ ಉತ್ಸವವನ್ನು ಏರ್ಪಡಿಸಿ, ಅದಕ್ಕೆ ಪ್ರಾಂತದ ಎಲ್ಲ ಜಿಲ್ಲೆಗಳಿಂದಲೂ ಹಲವಾರು ಉಪಾಧ್ಯಾಯರು ಬರುವಂತೆಯೂ, ವಿಷಯಗಳನ್ನು ಬಲ್ಲ ವಿಜ್ಞಾನಿಗಳು ಅವರು ಸೇರಿದ ಸಭೆಯಲ್ಲಿ ಭೌತಶಾಸ್ತ್ರಗಳ ಆಧುನಿಕ ವಿಚಾರಗಳನ್ನು ಕುರಿತ ಉಪನ್ಯಾಸಗಳನ್ನು ಮಾಡುವಂತೆಯೂ, ಏರ್ಪಡಿಸಿದ್ದು. ಅವರು ಉಪಾಧ್ಯಕ್ಷರಾಗಿದ್ದಾಗ ನಾಲ್ಕು ವರ್ಷವೂ ಕೆಲಸ ಶ್ಲಾಘ್ಯ ರೀತಿಯಲ್ಲಿ ನಡೆಯಿತು. ಪರಿಷತ್ತು ದಿಟವಾಗಿಯೂ ಕನ್ನಡದಲ್ಲಿ ಜ್ಞಾನ ಪ್ರಸಾರ ಮಾಡುವಂತೆ ಆಯಿತು" ಎಂದಿದ್ದಾರೆ.

ಮೊದಲನೆಯ ವಿಶೇಷ ಸಾಹಿತ್ಯೋತ್ಸವದಲ್ಲಿ ಆದ ಉಪನ್ಯಾಸಗಳನ್ನು ನೋಡಿದರೆ ಸಾಹಿತ್ಯೋತ್ಸವದ ಆಶಯ ಎಷ್ಟರ ಮಟ್ಟಿಗೆ ಸಫಲವಾಯಿತು ಎನ್ನುವುದು ತಿಳಿಯುತ್ತದೆ. ಬಿ. ವೆಂಕಟೇಶಾಚಾರ್ಯರು "ಆಧುನಿಕ ವಿಜ್ಞಾನ"ವನ್ನು ಕುರಿತು, ವಿ. ಎಲ್. ಡಿಸೋಜ ಅವರು "ಪ್ರಪಂಚದ ಈಗಿನ ಬಡತನ"ವನ್ನು ಕುರಿತು; ಎಂ. ಎಚ್. ಕೃಷ್ಣ ಅವರು "ಮೈಸೂರಿನ ವಾಸ್ತು ಶಿಲ್ಪ"

ವನ್ನು ಕುರಿತು, ಲಕ್ಷ್ಮೀಪುರಂ ಶ್ರೀನಿವಾಸಚಾರ್ಯರು "ಹಿಂದೂ ದರ್ಶನ" ಗಳನ್ನು ಕುರಿತು, ಬಿ. ವೆಂಕಟನಾರಣಪ್ಪನವರು "ಜೀವ ವಿಜ್ಞಾನ"ವನ್ನು ಕುರಿತು, ಕುಕ್ಕೆ ಸುಬ್ರಹ್ಮಣ್ಯ ಶಾಸ್ತ್ರಿಗಳವರು "ಕಾಳಿದಾಸನ ಕವಿತ್ವ"ವನ್ನು ಕುರಿತು, ನವರತ್ನ ರಾಮರಾಯರು "ಇಂಡಿಯಾ ದೇಶದ ಸಂಯುಕ್ತ ರಾಜ್ಯ ರಚನೆ"ಯನ್ನು ಕುರಿತು, ಎ. ಎನ್. ನರಸಿಂಹಯ್ಯನವರು "ನಾವು ಆಡುವ ಮಾತ"ನ್ನು ಕುರಿತು, ಎಲ್. ರಾಮರಾವ್ ಅವರು 'ಭರತ ಖಂಡಕ್ಕೆ ಈಗಿನ ಭೂಸ್ವರೂಪ ಬಂದಿರುವ ಬಗೆ'ಯನ್ನು ಕುರಿತು, ಎನ್. ಎಸ್. ಸುಬ್ಬರಾಯರು "ಅಂತರ ರಾಷ್ಟ್ರೀಯ ಸೌಹಾರ್ದ"ವನ್ನು ಕುರಿತು, ವೆಂಕಣ್ಣಯ್ಯನವರು "ಕನ್ನಡ ದಲ್ಲಿ ಹೊಸ ಸಾಹಿತ್ಯದ ರೀತಿ"ಯನ್ನು ಕುರಿತು ಉಪನ್ಯಸಿಸಿದರು. ಪ್ರಶ್ನೋತ್ತರ ಗಳು ನಡೆದವು. ಜಿ. ಪಿ. ರಾಜರತ್ನಂ, ಎಂ. ಎನ್. ಕಾಮತರು, ಶಿವರಾಮ ಕಾರಂತರು ತಮ್ಮ ಕವನಗಳನ್ನು ಓದಿದರು. ಬಿಂದುರಾಯರ ಭಾರತ ವಾಚನ ವಾಯಿತು. ಎಚ್. ಯೋಗಾನರಸಿಂಹಂ ಅವರಿಂದ, ರಾಳ್ಳಪಲ್ಲಿ ಅನಂತಕೃಷ್ಣ ಶರ್ಮರಿಂದ ಸಂಗೀತ ಕಛೇರಿಗಳು ನಡೆದುವು.

1901ರಿಂದ ಈಚೆಗೆ ಪ್ರಕಟವಾದ ಗ್ರಂಥಗಳ ಪ್ರದರ್ಶನವೊಂದು ನಡೆಯಿತು.

ಸಭೆಗೆ ಬಂದಿದ್ದ ಉಪಾಧ್ಯಾಯರೂ ಇತರರೂ ಮಹಾರಾಜಾ ಮಿಲ್ಲು, ರಾಮಕೃಷ್ಣ ಎಣ್ಣೆಯ ಕಾರ್ಖಾನೆ, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್, ಪೊರ್ಸಿಲಿನ್ ಕಾರ್ಖಾನೆಗಳಿಗೆ ಹೋಗಿ ನೋಡಿಕೊಂಡು ಬರುವ ಏರ್ಪಾಟಾಗಿತ್ತು.

ಪ್ರತಿ ದಿನವೂ ಸುಮಾರು 550-600 ಮಂದಿ ಬರುತ್ತಿದ್ದರು. ಪರಿಷತ್ತಿನ ಸದಸ್ಯರು 120 ಮಂದಿ. ಉಪಾಧ್ಯಾಯರು 250 ಮಂದಿ. ಟಿಕೆಟ್ಟು ತೆಗೆದುಕೊಂಡು ಬಂದವರು 120 ಮಂದಿ. ಗೌರವಾರ್ಥವಾಗಿ ಬಂದವರು 100 ಮಂದಿ. ಸಭಾ ಮಂಟಪ ಪೂರ ತುಂಬಿರುತ್ತಿತ್ತು.

ಆ ದಿನಗಳ ಸಂಭ್ರಮವನ್ನು ಕಂಡವರು ಹೂವು ಗಂಧಗಳ ಪರಿಮಳ ದಿಂದ, ಸಭಿಕರ ಸಂತೋಷದಿಂದ, ಮದುವೆಯ ಸಂಭ್ರಮದಂತಿತ್ತು ಉತ್ಸವದ ಸಂಭ್ರಮ ಎಂದು ನೆನೆಸಿಕೊಳ್ಳುತ್ತಾರೆ. ಆಗ "ವಸಂತ ಸಾಹಿತ್ಯೋತ್ಸವದ ಲಾವಣಿ"ಯನ್ನು "ಹೇಳಿದವ ಲಕ್ಷ್ಮಣ, ಬರೆದವ ಹೊಯಿಸಳ". ಅದರ ಕೆಲವು ಭಾಗಗಳು ಹೀಗಿವೆ :

ಗುಂಡಪ್ನೋರ ನಾಂದಿ ಪೂಜೆ । ಮಂಗಳ ವೀಳ್ಯ ಆವರದ್ದಯ್ಯ ।
ಕಂಡಿದ್ದೀಯ ತಿಂಗಳ ಮಂಗಳ । ಮದುವೆ ಮೊಗವ ॥
ನಕ್ಕು ನಲಿದು ಓಡಾಡ್ಯೋರು । ಸಿಕ್ಕಿದ ಸೇವೆ ಈಗ್ಮಾಡೋರು ॥
ಅಕ್ಕರೆಯಿಂದ ಕೂಡಾಡೋರು । ದೊಡ್ಡೋರಣ್ಣಯ್ಯ ॥
ಅವರವರೆಲ್ಲ ತಂ ತಂ ಲೋಕ । ಈಮಂವೀಗೆ ಬಿಟ್ಟು ಬಂದು ।
ಸೊಗಸಿನ ಸೂರೆ ನಿಮ್ಮ ದಿನಕೆ । ಕೇಳೋ ತಮ್ಮಣ್ಣ ॥

ಬಂದಿದ್ದ ಮಹನೀಯರನ್ನು ಕುರಿತು ಎರಡೆರಡು ಮಾತು ಹೇಳಿ, ಬರದಿರುವವರನ್ನು ಸ್ಮರಿಸಿಕೊಂಡು,

ಸಂಗೀತ್ಸಂಪತ್ ಸಿಕ್ಕಿದ ಮೇಲೆ । ಇಂಗಿತದಲ್ಲಿ ಬೆಳಕೇ ಕಂಡೆ ।
ಕನ್ನಡದಕ್ಷರ ಮೂಲ ಕಂಡೆ । ನಾ ಕಂಡೆ ॥
ತಾತಾ ಮಂದಿರ ಸಿ.ವಿ.ರಾಮರ । ಹತ್ತಿ ಹಿಂಜಿ ನೂತು ನೇವುದ ।
ಸುದ್ದಿ ಮಣ್ಣ ಗಾಜೀ ಮಾಳ್ಪದ । ಸುತ್ತಿ ಸುತ್ತಿ ಕಂಡೆ ।........
ಕುಣಿಯುವ ಹಾವನು ನಾ ಕಂಡೆ । ಕುಣಿತದ ರಸವನು ನಾನುಂಡೇ ॥
ಶುದ್ಧ ಸಂತಾನ ಸನ್ಮಾರ್ಗವನು । ಕಂಡೆ ನಾಕಂಡೇ ॥
ಹರಿಜನರಿರವನು ನಾನೆನೆದೆ । ಸಿರಿ ಜನರೆಲ್ಲರ ಕರೆದೆ ।
ಮೃದುಮಯ ಜೀವನ ಹರಿಜನಕೆ । ಬರಲೆಂದೇ ॥

* * * *

ಮೇಷ್ಟರು ಮುಂದೆ ಬಂದಿತ್ತಂತೆ । ಕೇಸರಿ ಹಿಂಡ ಕೂಡಿತ್ತಂತೆ ।
ಎಷ್ಟೆಷ್ಟೋ ತೀರ್ಥದಿ ಮಿಂದು । ಪಾವನವಾಯ್ತಂತೆ ॥
ಪರಿಷತ್ತೆಲ್ಲ ದೀಪದಮಾಲೆ । ಒಳಗೆ ಹೊರಗೆ ದೀಪದ ಸಾಲೆ ।
ಒಳಗೆ ಬಾರೋ ಎನ್ನದೆ ನಾಳೆ । ತೆರೆಯೋ ಕಂಗಳನು ॥
ಧೂಪದ ಮರದಲಿ ದೀಪದ ಹಣ್ಣು । ಬೆಂಗಳೂರೆಲ್ಲ ಕಣ್ಣೇ ಕಣ್ಣು ।
ಕಣ್ಣಿನ ಬೆಳಕಲಿ ಒಂದೇ ಇತ್ತು । ಪರಿಷತ್ತು ।

ಉತ್ಸವಕ್ಕೆ ಬಂದಿದ್ದ ವೆಂಕಟೇಶ ಕುಲಕರಣಿ ಗಳಗನಾಥರವರೂ ಪಂಡಿತ ಚಕ್ರವರ್ತಿ ಐಯ್ಯಂಗಾರ್ಯರೂ ಇನ್ನೂ ಕೆಲವು ಮಂದಿ ಉಪಾಧ್ಯಾಯರೂ ಈ ವಿಶೇಷೋಪನ್ಯಾಸಗಳಿಂದಲೂ ಗ್ರಂಥಪ್ರದರ್ಶನದಿಂದಲೂ ತಮಗಾಗಿರುವ ಪ್ರಯೋಜನಗಳನ್ನು ಸೂಚಿಸಿ ಇಲ್ಲಿಯ ಏರ್ಪಾಟುಗಳ ವಿಷಯದಲ್ಲಿ ತಮ್ಮ ಒಪ್ಪಿಗೆಯನ್ನು ತಿಳಿಸಿ ಭಾಷಣ ಮಾಡಿದರು. ರಾ. ನರಸಿಂಹಾಚಾರ್ಯರು ತಮ್ಮ ಸಂತೃಪ್ತಿಯನ್ನು ವ್ಯಕ್ತಪಡಿಸಿದರು.

ಉಪಸಂಹಾರ ಭಾಷಣ ಮಾಡಿದ ಡಿ ವಿ ಜಿ "ಒಂದು ವಿಷಯವನ್ನು ಸ್ವಲ್ಪ ಕಾಲದಲ್ಲಿ ಹೇಳಿದರೂ, ಹೇಳುವ ರೀತಿಯು ವಿಚಕ್ಷಣೆಯಿಂದ ಶ್ರೋತೃಗಳ ಮನಸ್ಸಿನಲ್ಲಿ ಒಂದು ಸಮಗ್ರವಾದ ಬಿಂಬವು ಕಲ್ಪಿತವಾಗಬೇಕು. ವಿಷಯವು ಅಪಾರವಾಗಿರುತ್ತದೆ. ಉಪನ್ಯಾಸಕರು ಆ ಅಪಾರ ಕ್ಷೇತ್ರದ ಒಂದೆರಡು ಭಾಗಗಳನ್ನು ಮಾತ್ರ ಆರಿಸಿಕೊಂಡು ಆ ಒಂದೆರಡು ವಿಷಯಗಳನ್ನು ಕುರಿತು ಸುಸಂಬದ್ಧ ಕ್ರಮದಲ್ಲಿ ಉಪನ್ಯಾಸ ಮಾಡಿದರೆ ಸಾಕಾಗಿರುತ್ತದೆ. ಇವು ಕೇವಲ ದಿಕ್‌ಪ್ರದರ್ಶನಾರ್ಥವಾದವು .... ವಿಷಯದ ಸ್ವರೂಪವೆಂಥಾದ್ದು, ಅದು ಹೋಗತಕ್ಕ ದಾರಿ ಎಂಥಾದ್ದು—ಎಂದಿಷ್ಟುಮಾತ್ರ ಉಪನ್ಯಾಸದಿಂದ ತೋರಿಬಂದರೆ ಅದೇ ದೊಡ್ಡ ಉಪಕಾರವಾಗುತ್ತದೆ.ಹೀಗೆ ಮಾಡುವುದಕ್ಕೆ ಬದಲಾಗಿ, ಉಪನ್ಯಾಸಕರು ವಿಷಯದ ಯಾವುದೋ ಒಂದು ಅಂಚನ್ನು ಹಿಡಿದು ಪ್ರಾರಂಭಿಸಿ, ಮತ್ತಿನ್ನಾವುದೋ ಒಂದು ಅಂಚಿಗೆ ಹಾರಿ, ಕೈಗೆ ಅಬ್ಬಲಾರದಷ್ಟು ಹೊರೆಯನ್ನೆತ್ತುವ ಸಾಹಸದಿಂದ ಅಕಾಂಡ ತಾಂಡವ ಮಾಡಿದರೆ ಅದರಿಂದ ಶ್ರೋತೃಗಳಿಗೆ ವಿಷಯದ ಸ್ವರೂಪವನ್ನಾಗಲಿ ಸ್ವಭಾವವನ್ನಾಗಲಿ ವಿಶದಪಡಿಸಿದಂತೆ ಆಗಲಾರದು. ಉಪನ್ಯಾಸವು ಚಿಕ್ಕದಾಗಿದ್ದರೂ ಅಷ್ಟರಲ್ಲೇ ಅದು ಒಂದು ಸಂಪೂರ್ಣತೆಯನ್ನು ಪಡೆದು ಮನಸ್ಸಿಗೆ ಒಂದು ಸಮಗ್ರ ಬಿಂಬವನ್ನು ತರುವಂಥಾದ್ದಾಗಿ ಇರಬೇಕು."

"ಉಪನ್ಯಾಸಕರೊಡನೆ ಶ್ರೋತೃಗಳು ಸಹಕರಿಸುವುದು ಅಗತ್ಯವೆಂಬುದನ್ನು ಆಗಲೇ ಅರಿಕೆ ಮಾಡಿದ್ದೇವೆ. ಶ್ರೋತೃಗಳು ತಮಗೆ ಸಾಧ್ಯವಿದ್ದಷ್ಟು ಮಟ್ಟಿಗೂ ಮೊದಲೇ ಗ್ರಂಥಾವಲೋಕನ ಮಾಡಿ, ವಿಷಯವನ್ನು ಕುರಿತು ಆಲೋಚಿಸಿ, ಪೂರ್ವಸಿದ್ಧತೆಯನ್ನು ಮಾಡಿಕೊಂಡು ಬಂದವರಾಗಿರಬೇಕು. ಹಾಗೆ ಇಲ್ಲದೆ ಅಸಂಸ್ಕೃತರಾಗಿ ಬಂದರೆ ಅವರಿಗೆ ಉಪನ್ಯಾಸಗಳ ಪೂರ್ಣ ಪ್ರಯೋಜನವು ಕೈಗೂಡಲಾರದು. ಮತ್ತೊಮ್ಮೆ ಇಂಥ ಉಪನ್ಯಾಸಗಳು ಏರ್ಪಟ್ಟಾಗ ಶ್ರೋತೃಗಳು ತಕ್ಕ ಸಿದ್ಧತೆಯನ್ನು ಸಂಪಾದಿಸಿಕೊಂಡು ಬರುವರೆಂದು ನಂಬಿದ್ದೇನೆ." — ಎಂದು ಉಪನ್ಯಾಸಕರ, ಮತ್ತು ಸಭಿಕರ ಜವಾಬ್ದಾರಿಯನ್ನು ವಿವರಿಸಿದರು.

ಕನ್ನಡ ಭಾಷೆ ಮತ್ತು ಸಾಹಿತ್ಯಗಳಲ್ಲಿ ಹೆಚ್ಚಿನ ಪರಿಶ್ರಮವನ್ನು ಸಂಪಾದಿಸಬೇಕೆಂದು ಇಷ್ಟಪಡುವಂಥ ಸದಸ್ಯರ ಉಪಯೋಗಕ್ಕಾಗಿ ಪರಿಷತ್ತಿನ ಆಶ್ರಯದಲ್ಲಿ ಒಂದು "ವ್ಯಾಸಂಗ ಗೋಷ್ಠಿ" ನವೆಂಬರ್ 1934 ರಿಂದ ಆರಂಭವಾಯಿತು.

1921 ರಲ್ಲಿ ಪ್ರಾರಂಭವಾದ ಪಿ.ಇ.ಎನ್. ಸಂಸ್ಥೆ ಭಾರತದಲ್ಲಿ ಒಂದು ಶಾಖೆಯನ್ನು ಸ್ಥಾಪಿಸಿತು. ಅದರ ಅಖಿಲ ಭಾರತ ದೇಶಭಾಷಾ ಮಂಡಳಿಯಲ್ಲಿ ಕನ್ನಡದ ಪ್ರತಿನಿಧಿಯಾದರು ಡಿ ವಿ ಜಿ.

1934 ರ ಡಿಸೆಂಬರ್ ತಿಂಗಳಿನಲ್ಲಿ ರಾಯಚೂರಿನಲ್ಲಿ ನಡೆದ ಸಾಹಿತ್ಯ ಸಮ್ಮೇಳನಕ್ಕೆ ಡಿ ವಿ ಜಿ ಹೋಗಿದ್ದರು. ರಾಯಚೂರಿನಿಂದ ಪರಿಷತ್ತಿಗೆ ಯಥಾವಿಧಿಯಾಗಿ ಆಹ್ವಾನ ಬಂದಿದ್ದರೂ ರಾಯಚೂರಿನ ಸ್ವಾಗತ ಸಮಿತಿಯಲ್ಲಿ ಕಕ್ಷಿಗಳು ಹುಟ್ಟಿಕೊಂಡು ಸಮ್ಮೇಳನಕ್ಕೆ ವಿಘಾತ ಬಂದೀತೇನೋ ಎಂಬ ಹೆದರಿಕೆಗೆ ಕಾರಣಗಳಿದ್ದುವು. ಆಗ ಧೈರ್ಯ ಕೊಟ್ಟವರು ಹೈದರಾಬಾದ್ ಸರಕಾರದಲ್ಲಿ ವ್ಯವಸಾಯದ ಇಲಾಖೆಯಲ್ಲಿದ್ದ ಕೂರಪಾಡು ಎಸ್. ಗುಂಡಪ್ಪನವರು ಮತ್ತು ಅಲ್ಲಿನ ಸರಕಾರದ ಅಧಿಕಾರಿಗಳು. ಸಮ್ಮೇಳನಾಧ್ಯಕ್ಷರು ಪಂಜೆ ಮಂಗೇಶರಾಯರು. ಪರಿಷತ್ತಿನ ವಾರ್ಷಿಕಾಧಿವೇಶನವೂ ಆಗಲೇ ನಡೆಯಿತು.

ಆಲೂರು ವೆಂಕಟರಾಯರು ಈ ಸಮ್ಮೇಳನದಲ್ಲಿ ನಡೆದ ಒಂದು ಸಂದರ್ಭವನ್ನು ವಿವರಿಸಿರುವುದನ್ನು ನೋಡಬಹುದು: "ಬೆಂಗಳೂರಿನವರು ಹೊರಗಿನವರಿಗೆ ಹೆಸರಿಗೆ ಮಾತ್ರ ಪ್ರತಿನಿಧಿಗಳನ್ನಾಗಿ ಸೇರಿಸಿಕೊಳ್ಳುವರೋ ಅಥವಾ ಅವರಿಗೆ ಕೆಲಸ ಮಾಡಲಿಕ್ಕೆ ಕಿಂಚಿತ್ ಆದರೂ ಆಸ್ಪದ ಕೊಡುವರೋ ಎಂಬುದೇ ಮುಖ್ಯಪ್ರಶ್ನೆ. 'ಅದು ಮನಸ್ಸಿನಲ್ಲಿದ್ದರೆ ಈ (ಅಂಗ ಸಂಸ್ಥೆಗಳ) ಯೋಜನೆಯನ್ನಾಗಲಿ ಮತ್ತಾವುದೇ ಯೋಜನೆಯನ್ನಾಗಲಿ ಕೈಗೊಂಡು ತರುಣರಿಗೆ ಆಸ್ಪದ ಕೊಡಿರಿ, ಇಲ್ಲದಿದ್ದರೆ ಬಿಡಿರಿ. ಮನಸ್ಸಿಗೆ ಬಂದಂತೆ ಮಾಡಿರಿ ನನ್ನ ಮಟ್ಟಿಗೆ ನಾನು ಸರಿದು ನಿಂತುಬಿಡುತ್ತೇನೆ' ಎಂದು ತಿಳಿಸಿದೆ. ಮತ್ತೆ ಆರು ಬೇರೆ ಬೇರೆ ಸೂಚನೆಗಳನ್ನು ಆದರ ಮುಂದೆ ಇಟ್ಟೆ. ಡಿಸಂಬರ್‌ನಲ್ಲಿ ರಾಯಚೂರು ಸಮ್ಮೇಳನದ ಕಾಲಕ್ಕೆ ಪರಿಷತ್ತಿನ ಅಧಿವೇಶನದಲ್ಲಿ ಈ ಪ್ರಶ್ನೆ ಹೊರಟಿತು. ನಾನು ಎದ್ದು "ಹೆಸರಿಗೆ ಮಾತ್ರ ಹೊರಗಿನವರು ಪ್ರತಿನಿಧಿಗಳಾಗಿರುವರು. ಅದನ್ನು ಹೇಗಾದರೂ ತಪ್ಪಿಸಿರಿ" ಎಂದು ಅಂದ ಕೂಡಲೆ ಬಿ. ಎಂ. ಶ್ರೀಕಂಠಯ್ಯನವರು ಏಕೋ ಏನೋ, ಅಧ್ಯಕ್ಷರಾದ ಡಿ ವಿ ಗುಂಡಪ್ಪನವರು ತಡೆದು ಹಿಡಿದರೂ ಕೇಳದೆ, ಭರದಿಂದ ಹೊರಟು ಹೋದರು. ಮುಂದೆ ಕೆಲವು ಹೊತ್ತಿನ ಮೇಲೆ ಸಭೆ ವಿಸರ್ಜನೆಯಾಯಿತು".

ಪರಿಷತ್ತಿಗೆ ಮೈಸೂರು ಪ್ರಾಂತದ ಹೊರಗಿನವರೊಬ್ಬರು ಕಾರ್ಯದರ್ಶಿಗಳಾಗಿ ಇರಬೇಕು ಎಂಬ ಆಲೂರು ವೆಂಕಟರಾಯರ ತಿದ್ದುಪಡಿಯ ಮೇಲೆ ಚರ್ಚೆನಡೆದಾಗ ಜಿನಗಲ್ ರಾಮರಾಯರೂ ಬಿ.ಎಂ. ಶ್ರೀಕಂಠಯ್ಯ

ನವರೂ ಅದನ್ನು ವಿರೋಧಿಸಿದರೆಂದೂ, ಚರ್ಚೆಯಾದ ಬಳಿಕ ಅದು ಬಹು ಮತದಿಂದ ನಿರಾಕೃತವಾಯಿತೆಂದೂ ಪರಿಷತ್ಪತ್ರಿಕೆಯ ವರದಿ ತಿಳಿಸುತ್ತದೆ.

ಉಪಾಧ್ಯಕ್ಷಸ್ಥಾನದ ವಿಚಾರ ಬಂದಾಗ ಹಿಂದೆ ಒಬ್ಬ ಸದಸ್ಯರು ಜ್ಞಾಪಕ ಕೊಟ್ಟಮೇರೆಗೆ ಉಪಾಧ್ಯಕ್ಷಸ್ಥಾನದ ಚುನಾವಣೆಯು 1933 ನೆಯ ಡಿಸೆಂಬರಿನಲ್ಲಿ ನಡೆಯಿತೆಂದೂ ಅಧಿಕಾರಿಗಳ ಚುನಾವಣೆ ಎರಡು ವರ್ಷಕ್ಕೊಂದು ಸಲ ನಡೆಯತಕ್ಕದೆಂಬುದು ನಿಯಮವೆಂದೂ ಸಭೆಗೆ ಅರಿಕೆಮಾಡಿದ್ದರ ಮೇರೆಗೆ ಆ ಸ್ಥಾನದಲ್ಲಿ ಡಿ ವಿ ಜಿ ಮುಂದುವರಿದರು.

"ಸಭಾ ಮರ್ಯಾದೆ ನಡಸಬೇಕು; ಕ್ರಮ, ಮರ್ಯಾದೆ ನಡೆಯಬೇಕಾಗಿರುವಾಗ ಇವರು ಅವರು ಎಂಬ ವ್ಯತ್ಯಾಸ ಮಾಡರು ಡಿ ವಿ ಜಿ" ಎಂದು ಹೇಳಿ ವಿ.ಸೀ. ಒಂದು ಉದಾಹರಣೆಯನ್ನು ಕೊಟ್ಟಿದ್ದಾರೆ. "ರಾಯಚೂರು ಸಮ್ಮೇಳನದಲ್ಲಿ ಕೋಲಾಹಲವೆದ್ದಿತ್ತು. 6–8 ಜನ ಮಾತನಾಡಿದ್ದರು. ಬಿ. ಎಂ. ಶ್ರೀ ಅವರೂ ವಿಸ್ತಾರವಾಗಿ ಮಾತನಾಡಿದ್ದರು. ಇನ್ನೊಬ್ಬರು ತುಂಬಾ ಕಟುವಾಗಿ ಮಾತನಾಡುತ್ತಿದ್ದರು. ಅಲ್ಲಿ ವ್ಯಂಗ್ಯ ವಿಕಟವಿಲಾಸ ಇತ್ತು. ಆಗ ನಡುನಡುವೆ ಪ್ರತಿಯಾಗಿ ಒಂದೆರಡು ಸಲ ಬಿ.ಎಂ.ಶ್ರೀ ಅವರು ಮಾತನಾಡಲು ಎದ್ದರು. ಬಿ.ಎಂ.ಶ್ರೀ ಅವರಲ್ಲಿ ಡಿ ವಿ ಜಿ ಯವರಿಗೆ ತುಂಬಾ ಗೌರವ, ಪೂಜ್ಯ ಭಾವ. ಎದುರು ಮಾತನಾಡುತ್ತಿದ್ದವರಲ್ಲಿ ಅಷ್ಟು ಗೌರವವಿರಲಿಲ್ಲ. ಆದರೂ ಬಿ.ಎಂ.ಶ್ರೀ ಅವರನ್ನು ಕುರಿತು, ಸಭಾಧ್ಯಕ್ಷರಾಗಿದ್ದ ಡಿ ವಿ ಜಿ : ಇಲ್ಲ ಸ್ವಾಮಿ, ಈಗ ಮಾತನಾಡುವ ಹಕ್ಕಿರುವವರು ಇಂಥವರು. He has the floor. ನಡುವೆ ಅಡ್ಡ ಮಾಡದಿದ್ದರೆ ಒಳಿತು. ಅವರು ಹೇಳುವುದನ್ನೆಲ್ಲ ಹೇಳಿ ಬಿಡಲಿ. ಆ ಮುಂಚೆ ಅವಕಾಶವಿಲ್ಲ ಎಂದುಬಿಟ್ಟರು."

ಡಿ ವಿ ಜಿ ಸಭೆಯನ್ನು ನಡಸುವ ವಿಚಕ್ಷಣೆಗೆ ವಿ.ಸೀ. ಇನ್ನೊಂದು ಉದಾಹರಣೆಯನ್ನು ಕೊಟ್ಟಿದ್ದಾರೆ. ಜಮಖಂಡಿಯಲ್ಲಿ ಸಮ್ಮೇಳನ. ಯಾವುದೋ ನಿಲುವನ್ನು ಕುರಿತು ಬೇಕಾದಷ್ಟು ಚರ್ಚೆ ನಡೆಯಿತು. ವಿಷಯವನ್ನು ವೋಟಿಗೆ ಹಾಕಿದಾಗ ಅಭಿಮತ ಸಮಸಮವಾಗಿತ್ತು. ಅಧ್ಯಕ್ಷರು ತಮ್ಮ ವೋಟನ್ನು ಈ ಕಡೆಯೋ ಆ ಕಡೆಯೋ ಹಾಕಿ ತೀರ್ಮಾನ ಮಾಡಬಹುದಾಗಿತ್ತು. ಆದರೆ ಪರಿಷತ್ತಿನ ನಿಲವಿಗೆ ಪ್ರಬಲ ಪ್ರತಿರೋಧ ಇರುವಾಗ ಸ್ಪಷ್ಟವಾದ ಬಹುಮತ ಯಾವ ಕಡೆಗಿದೆಯೆಂಬುದನ್ನು ಅರಿತ ಹೊರತು ತನ್ನ ಇಷ್ಟದಂತೆ ತೀರ್ಮಾನ ಮಾಡುವುದು ಸರಿಯಾಗುವುದಿಲ್ಲ ಎಂದು ತಿಳಿಸಿ, ಹೇಗೋ ಹಾಗೋ ಸಭೆಯ ಬೆಂಬಲ ಯಾವ ಕಡೆಗಿದೆ ಎಂಬುದನ್ನು ಸಕಲ ಸದಸ್ಯರ ಸಭೆ ತಿಳಿಸದಿದ್ದರೆ

ಸಂಸ್ಥೆಗೆ ಕಷ್ಟವಾಗುತ್ತದೆ ಎಂದವರೇ ಹತ್ತು ನಿಮಿಷಗಳ ಕಾಲ ಸಭೆಯನ್ನು ಬರಖಾಸ್ತು ಮಾಡಿದರು. ಅಧಿವೇಶನ ಪುನಃ ಕೂಡಿತು. ಪರಿಷತ್ತಿನವರ ನಿಲುವು, ಪ್ರತಿವಾದ, ಈವರೆಗೆ ನಡೆದ ಚರ್ಚೆ—ಇವುಗಳಲ್ಲಿ ಮುಖ್ಯಾಂಶಗಳನ್ನು ಪಟ್ಟಿ ಮಾಡಿ ತಿಳಿಸಿ, ಹೀಗೆ ನಡೆದರೆ ಈ ಪರಿಣಾಮ, ಬೇರೆ ರೀತಿ ನಡೆದರೆ-ಇನ್ನೊಂದು ಪರಿಣಾಮ; ಯಾವುದು ಪರಿಷತ್ತಿನ ಕಾರ್ಯಕಾರಿಕೆಗೂ ಮರ್ಯಾದೆಗೂ ತಕ್ಕದ್ದು, ತಮ್ಮ ಅಭಿಪ್ರಾಯದಲ್ಲಿ ಯಾವುದಲ್ಲ-ಎಂಬುದನ್ನು ಸಂಗ್ರಹಿಸಿ ಹೇಳಿದರು. ದಯಮಾಡಿ ಸಭೆಯ ಸ್ಪಷ್ಟಾಭಿಪ್ರಾಯವನ್ನು ತಿಳಿಸಬೇಕು ಎಂದರು. ಎರಡು ನಿಮಿಷಗಳಲ್ಲಿ 30-40 ಬಹುಮತದಿಂದ ಪರಿಷತ್ತಿನ ನಿಲುವಿಗೆ ಬಹುಮತ ಬಂದಿತು. ಹೀಗೆ "ಸಭಾ ಮರ್ಯಾದೆ, ಕ್ರಮ, ವಿಧಾನ, ನಿಂಧುತ್ವ ಮುಂತಾದುವುಗಳನ್ನು ಪಾಲಿಸುವುದರಲ್ಲಿ ಅವರ ನಿಷ್ಠೆ ಅತಿಶಯವಾದದ್ದು. ವಾದ ತಮಗೆ ವಿರುದ್ಧವಾದಾಗಲೂ ಅದನ್ನು ತೆಗೆದುಕೊಳ್ಳುವ ರೀತಿ ತುಂಬಾ ಗಂಭೀರ. ಸಾಮಾನ್ಯ ಸಂಭಾಷಣೆಯ ಸಮಯ ಬೇರೆ. ಅಲ್ಲಿ ಲಘುವಾಗಿ ನಡೆಯಬಹುದು. ಇಲ್ಲಿ ವ್ಯವಹಾರ ಕಟ್ಟು, ಕಟ್ಟಳೆ, ನಯ ಖಚಿತವಾಗಿರಬೇಕು. ದಂಡಿನಲ್ಲಿ ಸೋದರ ಮಾವನೆ ಎಂಬಂತೆ" ಎಂದಿದ್ದಾರೆ ವಿ.ಸೀ.

ಹಿಂದೀ - ಕನ್ನಡ ಸಮಸ್ಯೆಯನ್ನು ಚರ್ಚಿಸುವ ವ್ಯಾಜದಿಂದ ಕೆಲವು ಮಹನೀಯರು ಪರಿಷತ್ತಿನ ಹೆಸರನ್ನು ಎತ್ತಿ ಇಪ್ಪತ್ತು ವರ್ಷಗಳಿಂದ ಅದು ಮಾಡಿರುವ ಕೆಲಸವೇನು ಎಂದು ಕೇಳಿದ್ದಕ್ಕೆ ಜನವರಿ 1935 ರ ಪರಿಷತ್ಪತ್ರಿಕೆ ಉತ್ತರ ನೀಡುತ್ತ ಕೆಲವು ಅಂಕಿ ಅಂಶಗಳನ್ನು ಒದಗಿಸಿದೆ. 1933 ರ ಅಂತ್ಯದಲ್ಲಿದ್ದ ಪರಿಷತ್ ಸದಸ್ಯರ ಸಂಖ್ಯೆ 139, 1934 ರ ಅಂತ್ಯದಲ್ಲಿ 264, 1935 ರ ಅಂತ್ಯದಲ್ಲಿ ಸದಸ್ಯರ ಚಂದಾ ವರ್ಷಕ್ಕೆ 6 ರೂಪಾಯಿ, 1934 ರಿಂದ ಚಂದಾ 3 ರೂಪಾಯಿ. ಮಲ್ಲೇಶ್ವರದ ಮಿಡಲ್ ಸ್ಕೂಲಿನ ಹೆಡ್‌ಮಾಸ್ಟರ್, ಚಾಮರಾಜಪೇಟೆ ಮಾಧ್ಯಮಿಕ ಶಾಲೆಯ ಉಪಾಧ್ಯಾಯರು ಪರಿಷತ್ತಿನ ಕಾರ್ಯಕ್ರಮಗಳು ಎಷ್ಟು ಉಪಯುಕ್ತವಾಗಿದೆ ಎಂದು ಬರೆದ ಪತ್ರಗಳನ್ನು ಪತ್ರಿಕೆ ಪ್ರಕಟಿಸಿದೆ.

ಡಿ ವಿ ಜಿ ಯವರೊಡನೆ ಸಾಹಿತ್ಯಪರಿಷತ್ತಿನಲ್ಲಿ ಕೆಲಸ ಮಾಡಿದವರ ಪೈಕಿ ಎಂ. ವಿ. ಸೀತಾರಾಮಯ್ಯನವರು, ಕೈವಾರ ರಾಜಾರಾಯರು ಇದ್ದರು. ಅವರ ನೆನಪನ್ನು ಇಲ್ಲಿ ಹೇಳಬೇಕು: "ನನ್ನ ಗುರುಗಳಾದ ಟಿ. ಎಸ್. ವೆಂಕಣ್ಣಯ್ಯನವರ ಸಲಹೆ ಮತ್ತು ಶಿಫಾರಸುಗಳ ಪರಿಣಾಮವಾಗಿ ನಾನು ಕರ್ಣಾಟಕ

ಸಾಹಿತ್ಯ ಪರಿಷತ್ತಿನ ಸಹಾಯಕ ಕಾರ್ಯದರ್ಶಿಯಾಗಿ ನೇಮಕಗೊಂಡೆ. 1934 ರ ಜನವರಿಯಲ್ಲಿ. ಹೊಸದರಲ್ಲಿ ಅವರ ದರ್ಪ, ಮುಂಗೋಪ, ಇದನ್ನು ಸಹಿಸುವುದು ಕಷ್ಟವೇ ಆಗಿತ್ತು; ನನ್ನ ಬರವಣಿಗೆಯ ದೋಷ, ಮರವಿನ ಸ್ವಭಾವ, ನಿಧಾನದ ಕೆಲಸ, ತರುಣ ಬರಹಗಾರ ಎನ್ನುವ ಗರ್ವ ಇತ್ಯಾದಿ ಇತ್ಯಾದಿ ನನ್ನ ಓರೆ ಕೋರೆಗಳನ್ನು ತಿದ್ದುವುದರಲ್ಲಿ ಸ್ವಲ್ಪ ಕಾಠಿಣ್ಯವನ್ನೇನೋ ತೋರುತ್ತಿದ್ದರು. ಅವರ ನಿಜವಾದ ವ್ಯಕ್ತಿತ್ವದ ಅರಿವು ನನಗಾಗಿರಲಿಲ್ಲ. ಪರಿಸ್ಥಿತಿಗೆ ಹೊಂದದ ಸ್ವತಂತ್ರ ಮನೋವೃತ್ತಿಯನ್ನು ಆರೋಪಿಸಿಕೊಂಡಿದ್ದ ನಾನು ನನ್ನ ಕೆಲಸಕ್ಕೆ ರಾಜೀನಾಮೆಯ ಕಾಗದವನ್ನೂ ಕೊಟ್ಟುಬಿಟ್ಟೆ. ರಾಜೀನಾಮೆಯನ್ನು ಅವರು ಒಪ್ಪಿಕೊಂಡಿದ್ದಂತೆ ಕಂಡುಬರಲಿಲ್ಲ. ನಾನೂ ಆ ಬಗ್ಗೆ ಮಾತೆತ್ತದೆ ಕೆಲಸ ಮಾಡಿಕೊಂಡು ಹೋಗುತ್ತಿದ್ದೆ. ಅವರೂ ತಮ್ಮ ಮುನಿಸಿನ ಮೊಗವಾಡ ಕಳಚಿ, ಮುಗುಳುನಗೆ ನಗುತ್ತ, ಕೆಲಸ ಮಾಡಿಸಿಕೊಳ್ಳುತ್ತಿದ್ದರು. ಕೆಲ ದಿನಗಳಾದ ಮೇಲೆ, ಕಾರ್ಯನಿರ್ವಾಹಕ ಮಂಡಳಿಯ ಸಭೆಗೆ ಬಂದಿದ್ದ ವೆಂಕಣ್ಣಯ್ಯನವರು ನನ್ನನ್ನು ಏಕಾಂತ ಸ್ಥಳಕ್ಕೆ ಕರೆದುಕೊಂಡು ಹೋಗಿ "ರಾಜೀನಾಮೆ ಪತ್ರ"ವನ್ನು ಕೈಗಿತ್ತು "ಹೀಗೆಲ್ಲಾ ಮಾಡಬೇಡ. ಅವರಿಗೆ ನಿನ್ನ ವಿಚಾರ ಎಲ್ಲ ತಿಳಿಯಹೇಳಿದ್ದೇನೆ. ಅವರು ಮೇಲೆ ನೋಡುವುದಕ್ಕೆ ಬೆಣಚು ಕಲ್ಲು, ಒಳಗೆ ಬೆಣ್ಣೆ" ಎಂದು ನನ್ನನ್ನು ಸಮಾಧಾನ ಪಡಿಸಿದರು.

"ಡಿ ವಿ ಜಿ ಯವರ ಪ್ರಕೃತಿ ಬದಲಾವಣೆಯಾಗಲಿಲ್ಲ. ಆದರೆ ನನ್ನ ಗುರುವಿನ ಮಾತು ಸುಳ್ಳಾಗಲಿಲ್ಲ. ಡಿ ವಿ ಜಿ ಯವರ ಬೆಣ್ಣೆಯ ಹೃದಯವನ್ನು ಗುರುತಿಸುವ ಕಾಲ ಬೇಗನೆ ಬಂತು. ಮೊದಲ (ಅಥವಾ ಎರಡನೆಯ) ವಿಶೇಷ ಸಾಹಿತ್ಯೋತ್ಸವದ ಉಪಸಂಹಾರ ಭಾಷಣದ ವಂದನಾರ್ಪಣೆಯ ಸಂದರ್ಭ. ಸಂಬಂಧಪಟ್ಟವರಿಗೆಲ್ಲ ವಂದನೆ ಸಲ್ಲಿಸಿಯಾದ ಮೇಲೆ "ನಮ್ಮ ಕಛೇರಿಯ ಸಿಬ್ಬಂದಿ ನಾನು ಕೊಟ್ಟ ಕಿರುಕುಳವನ್ನೆಲ್ಲಾ ಸಹಿಸಿಕೊಂಡು ಮೈಮುರಿಯ ದುಡಿದಿದ್ದಾರೆ. ಅವರನ್ನು ನಾನು ಗೋಳುಹುಯ್ದುಕೊಂಡಿದ್ದೇನೆ. ಆ ಚಿರಂಜೀವಿಗಳು ಅದನ್ನೆಲ್ಲಾ ಮನಸ್ಸಿಗೆ ಹಚ್ಚಿಕೊಳ್ಳಬಾರದು. ಹಚ್ಚಿಕೊಂಡಿಲ್ಲ ಎಂದು ನಂಬಿದ್ದೇನೆ. ದೇವರು ಅವರಿಗೆ ಒಳ್ಳೆಯದು ಮಾಡಲಿ" ಎಂಬ ಅರ್ಥ ಬರುವಂತೆ ಮಾತನಾಡಿದರು. ಅವರ ಕಂಠ ಗದ್ಗದವಾಗಿತ್ತು. ಕಣ್ಣು ಒದ್ದೆಯಾಗಿತ್ತು. ಇದನ್ನು ನಾನು ಹೇಗೆ ಮರೆಯಲಿ?

"ಡಿ ವಿ ಜಿ ಯವರ ಉಳಿಪೆಟ್ಟು ಮಾತ್ರ ತನ್ನ ಪಾಡಿಗೆ ತಾನು ಮುಂದುವರಿಯಿತು. ನಾನೂ ಸಂತೋಷದಿಂದ ಅದಕ್ಕೆ ಮೈಯೊಡ್ಡಿದೆ. ಒಂದು

ವಿಗ್ರಹ ಮೂಡಿನಿಂತಿತು. ನನ್ನನ್ನು ಕಡೆದ ರೂವಾರಿ ಡಿ ವಿ ಜಿ."

20.1.1935 ರಲ್ಲಿ ನಡೆದ ಕಾರ್ಯ ನಿರ್ವಾಹಕ ಮಂಡಳಿಯ ಮೊದಲನೆಯ ಅಧಿವೇಶನದಲ್ಲಿ ಅವರು ಹೇಳಿದ ಮಾತುಗಳು ಸಂಘ ಸಂಸ್ಥೆಗಳನ್ನು ನಡಸುವ ಎಲ್ಲರೂ ಗಮನದಲ್ಲಿಟ್ಟುಕೊಳ್ಳಬೇಕಾದ ವಿಷಯಗಳು.

"ಈ ಕಾರ್ಯ ನಿರ್ವಾಹಕ ಮಂಡಳಿಯ ಸದಸ್ಯರಲ್ಲಿ ಪರಸ್ಪರ ಸೌಹಾರ್ದವೂ ಐಕಮತ್ಯವೂ ಇರಬೇಕು.... ಈ ಸಂಸ್ಥೆಯ ಕೆಲಸದ ಜವಾಬ್ದಾರಿಯನ್ನು ಹೊತ್ತಿರುವವರು ಕೂಡಿದಮಟ್ಟಿಗೂ ಒಮ್ಮನಸಿನವರಾಗಿರಬೇಕೆಂಬುದು ನನ್ನ ಪ್ರಬಲವಾದ ಆಸೆ. ರಾಜಕೀಯದಲ್ಲಿ ಮಂತ್ರಿ ಮಂಡಳಿಯ ಜವಾಬ್ದಾರಿ ಏಕವಾದದ್ದು ಮತ್ತು ಅಖಂಡವಾದದ್ದು, ಎಂಬ ತತ್ತ್ವ ತಮ್ಮಲ್ಲಿ ಎಲ್ಲರಿಗೂ ತಿಳಿದೇ ಇದೆ. ಅದರಂತೆ ಪ್ರತಿಯೊಂದು ಸಂಸ್ಥೆಯಲ್ಲೂ ಕಾರ್ಯಕರ್ತರಲ್ಲಿ ಒಡಕು ಹುಟ್ಟದೆ ಕೂಡಿದ ಮಟ್ಟಿಗೂ ಐಕಮತ್ಯದ ದೃಷ್ಟಿಯಿರಬೇಕು."

ಅವರು ಆಗ ಹೇಳಿದ ಇನ್ನೊಂದು ವಿಚಾರ: ಯುವಕರು ಪರಿಷತ್ತಿನ ಕಾರ್ಯಗಳಿಗೆ ಬೇಗಬೇಗ ನೆರವಾಗಿ ಬಂದು ವ್ಯಾಸಂಗ ಗೋಷ್ಠಿಯ ಮತ್ತು ಸ್ನೇಹಾನುಕೂಲದ (ಸೋಷಿಯಲ್) ರೀತಿಯ ಸಮಾರಂಭಗಳನ್ನು ನಡಸುವ ಜವಾಬ್ದಾರಿಯನ್ನೂ ವಹಿಸಿಕೊಳ್ಳಬೇಕೆಂಬುದು.

17.2.1935 ರಲ್ಲಿ ಕಾರ್ಯ ನಿರ್ವಾಹಕ ಮಂಡಳಿಯು ಈ ಕೆಳಗಿನ ಕಾರ್ಯ ವಿಧಾನಗಳನ್ನು ಗುರಿಯಲ್ಲಿಟ್ಟುಕೊಳ್ಳಬೇಕೆಂದು ನಿರ್ಧರಿಸಿತು:

1. ಭಾಷಾ ಪ್ರಚಾರ: ಗ್ರಾಮಾಂತರಗಳಲ್ಲಿ, ಮುಖ್ಯವಾಗಿ ಗಡಿನಾಡುಗಳಲ್ಲಿಯೂ ಪರಭಾಷೆಗಳ ಪ್ರಾಬಲ್ಯ ಹೆಚ್ಚಾಗಿರುವ ಕಡೆಗಳಲ್ಲಿಯೂ, ಕನ್ನಡ ಲಿಪಿ ಭಾಷೆಗಳನ್ನು ಕಲಿಯಬೇಕೆಂದಿರುವ ಜನರಿಗೆ ಕನ್ನಡ ಕಲಿಸಲು ಏರ್ಪಡಿಸುವುದು.

2. ಉಪನ್ಯಾಸಗಳು, ಕಾವ್ಯಬೋಧನೆ ಮತ್ತು ಗಮಕ ಕಲೆ ಇವುಗಳ ಮೂಲಕ ಸಾಹಿತ್ಯ ಪ್ರಚಾರ ಮಾಡುವುದು ಮತ್ತು ಅದಕ್ಕೆ ತಕ್ಕ ಜನರನ್ನು ಒದಗಿಸುವುದು. ಮೇ 2, 1935 ರಂದು ಪರಿಷತ್ತಿನ ಸದಸ್ಯರ ಹಕ್ಕು ಬಾಧ್ಯತೆಗಳಿಗೂ ಪರಿಷತ್ತಿನ ಪ್ರಗೋಭಿವೃದ್ಧಿಗೂ ಸಂಬಂಧಪಟ್ಟ ವಿಷಯಗಳನ್ನು ಚರ್ಚಿಸಿ ತೀರ್ಮಾನ ಕೈಗೊಳ್ಳಲು ವಿಶೇಷ ಅಧಿವೇಶನವೊಂದು ನಡೆಯಿತು.

ಸಾರ್ವಜನಿಕ ಪ್ರಮುಖರ ಬೆಂಬಲವನ್ನು ಸಂಪಾದಿಸಿಕೊಳ್ಳುವುದಕ್ಕಾಗಿ 30.6.1935 ರಂದು ಶಾಸನ ಸಭೆಯ ಅಧಿವೇಶನಕ್ಕಾಗಿ ಬಂದಿದ್ದ ಮಹನೀಯರನ್ನು ಪರಿಷತ್ತಿಗೆ ಆಹ್ವಾನಿಸಲಾಗಿತ್ತು. ಪರಿಷತ್ತಿನ ಪ್ರಚಾರ ಕಾರ್ಯದ

ಬಗ್ಗೆಯೂ ಪರಿಷತ್ತಿಗೆ ಮಹಾಜನರ ಸಹಕಾರ ಸಹಾಯಗಳ ಸಂಪತ್ತನ್ನು ಹೆಚ್ಚಿಸಿಕೊಳ್ಳುವ ಬಗ್ಗೆಯೂ ಸಲಹೆಗಳನ್ನು ತೆಗೆದುಕೊಳ್ಳಬೇಕೆಂಬುದು ಉದ್ದೇಶವಾಗಿತ್ತು. ಸಭೆಗೆ ವಿ. ವೆಂಕಟಪ್ಪನವರು, ಡಿ.ಎಸ್. ಮಲ್ಲಪ್ಪನವರು, ಎಚ್.ಸಿ. ದಾಸಪ್ಪನವರು, ಎಚ್. ಸಿದ್ದಯ್ಯನವರು ಮುಂತಾದ ಮುಖಂಡರು ದಯಮಾಡಿಸಿದ್ದರು. "ಪರಿಷತ್ತಿಗೆ ನಾವೇ ಬರಬೇಕಾಗಿತ್ತು. ಆದರೆ ನಾವು ಹೇಳಿಸಿಕೊಂಡು ಬಂದಿದ್ದೇವೆ. ಪರಿಷತ್ತಿಗಾಗಿ ನಾವು ಯಾವ ಕೆಲಸವನ್ನಾದರೂ ಮಾಡಲು ಸಿದ್ಧರಾಗಿದ್ದೇವೆ. ನಮ್ಮಲ್ಲಿ ಈ ಬಗ್ಗೆ ಅಭಿಪ್ರಾಯ ಭೇದವೇ ಇಲ್ಲ" ಎಂದು ಆ ಮಹನೀಯರು ಬೆಂಬಲ ಸೂಚಿಸಿದುದಕ್ಕೆ ಉತ್ತರವಾಗಿ ಡಿ ವಿ ಜಿ ಹೀಗೆಂದರು :

"ನನಗೆ ತಮ್ಮಗಳ ಮಾತು ಕೇಳಿ ಎರಡು ಭುಜವಲ್ಲ, ನಾಲ್ಕು ಭುಜ, ಎಂಟು ಭುಜ ಬಂದ ಹಾಗಾಗಿದೆ. ನಮ್ಮ ಸಹಾಯಕ್ಕೆ ಹೀಗೆ ಜನ ಪ್ರಮುಖರು ಇದ್ದಾರೆಂಬುದು ನನಗೆ ಗೊತ್ತಾದದ್ದರಿಂದ ಎಷ್ಟೋ ಉತ್ತೇಜನ ದೊರೆತ ಹಾಗಾಯಿತು. ಹೆಚ್ಚು ಜನಬೆಂಬಲವಿಲ್ಲದಿದ್ದ ನಮಗೆ—'ನಮ್ಮನ್ನು ನಂಬ ಬಹುದು. ನಿಮಗಾಗಿ ಕೆಲಸ ಮಾಡಲು ನಾವು ಸಿದ್ಧರಾಗಿದ್ದೇವೆ' ಎಂದು ತಮ್ಮಂಥ ಜನ ಪ್ರಮುಖರಾದವರು ಹೇಳಿದ ಬಳಿಕ ನನಗೆ ಕೊರತೆಯೇನು?

"ಒಟ್ಟಿನಲ್ಲಿ ಒಂದು ತತ್ತ್ವ ಚೆನ್ನಾಗಿ ವ್ಯಕ್ತವಾಗಿದೆ. ಲಂಡನ್ನಿನಲ್ಲಿ ಈಚಿನ ಒಂದು ಭಾಷಣದಲ್ಲಿ ಸರ್ ತೇಜ್ ಬಹದ್ದೂರ್ ಸಪ್ರು ಅವರು ಜ್ಞಾಪಕಕ್ಕೆ ತಂದಿರುವ ಹಾಗೆ 'ರಾಜಕೀಯವು ಜನರನ್ನು ಭೇದಿಸುತ್ತದೆ; ಸಾಹಿತ್ಯವು ಜನ ರನ್ನು ಸೇರಿಸುತ್ತದೆ' ಎಂಬ ಸಂಗತಿ ಈದಿನ ನಮಗೆ ಚೆನ್ನಾಗಿ ತೋರಿಬಂದಿದೆ. ನಮ್ಮ ನಮ್ಮ ರಾಜಕೀಯ ಭೇದಗಳು ಏನೇ ಇರಲಿ, ತಾವೆಲ್ಲ "ಕನ್ನಡ ನಮ್ಮದು" "ನಾವು ಕನ್ನಡದಲ್ಲಿ ಅಭಿಮಾನಿಗಳು" ಎಂದು ಒತ್ತಿ ಒತ್ತಿ ಹೇಳಿರುತ್ತೀರಿ."

ಡಿ ವಿ ಜಿ ಯವರ ಮನೋಭಾವವನ್ನು ಚಿತ್ರಿಸುವ ಇನ್ನೊಂದು ಘಟನೆ ಯನ್ನು ವಿ.ಸೀ. ಹೇಳುತ್ತಾರೆ. ಅದನ್ನು ಅವರ ಮಾತುಗಳಲ್ಲೇ ಹೇಳಬೇಕು.

"ಇನ್ನೊಂದು ಸಲ ವಸಂತ ಸಾಹಿತ್ಯೋತ್ಸವಕ್ಕೆ ಚಂದಾ ಕೇಳುವುದಕ್ಕಾಗಿ ಬೆಂಗಳೂರಿನ ಒಬ್ಬ ದೊಡ್ಡ ವರ್ತಕರ ಬಳಿಗೆ ಮೊದಲು ಹೋದೆವು. ಅವರು ತುಂಬಾ ಮರ್ಯಾದೆಯಿಂದ ನಮ್ಮನ್ನು ಬರಮಾಡಿಕೊಂಡರು. ಇವರಲ್ಲಿ ಅವರಿಗೆ ಭಕ್ತಿ. ನಾವು ಚಂದಾಗೆ ಹೋಗಿದ್ದೆವೆಂಬುದನ್ನು ತಿಳಿದವರೇ,—"ಏನು ಸ್ವಾಮಿ, ಎಲ್ಲಕ್ಕೂ ವರ್ತಕರನ್ನು ಹಿಂಡಿದರೆ [ಅದಲ್ಲ ಅವರು ಬಳಸಿದ ಮಾತು:

ಅರ್ಥ ಅಂಥದು! ಹೇಗೆ?" ಎಂದರು. ಗುಂಡಪ್ಪನವರಿಗೆ ಕೋಪ ಬಂದಿತು. "ಯಾವಯಾವ ಕೆಲಸಕ್ಕೋ ಯಾರುಯಾರೋ ಬಂದು ನಿಮ್ಮನ್ನು ಚಂದಾ ಬೇಡಬಹುದು: ನೀವು ಕೊಡಬಹುದು. ಸಾರ್ವಜನಿಕ ಹಿತಕಾರ್ಯಗಳಿಗೆ ಹೀಗೆ ನೆರವು ಕೊಡುವುದಕ್ಕೋಸ್ಕರವೇ ಶಿಷ್ಟ ವರ್ತಕರಲ್ಲಿ ಹಣವಿರುವುದು. ನಾವು ಬಂದಿರುವ ಇದು ಸಂಸ್ಕೃತಿ ಕಾರ್ಯ; ಬೇಡಲು ಬಂದಿದ್ದೇವೆ. ಕೊಟ್ಟರೆ ತೆಗೆದುಕೊಂಡು ಹೋಗುತ್ತೇವೆ. ಇಲ್ಲವಾದರೆ ಬಂದ ದಾರಿಗೆ ಸುಂಕವಿಲ್ಲ!" ಎಂದರು. "ಕೋಪ ಮಾಡಿಕೊಂಡಂತೆ ಕಾಣುತ್ತದೆ" ಎಂದರು ಸಾಹುಕಾರರು. "ಕೋಪ ಏನು ಬಂತು ಸಾಹುಕಾರರೆ? ನಾವು ಇದನ್ನು ಎರಡನೆಯ ವರ್ಷ ಮಾಡುತ್ತಿದ್ದೇವೆ. ಒಂದು ಬಿಡಿಕಾಸನ್ನೂ ನಿಮ್ಮಿಂದ ಕಳೆದ ವರ್ಷ ಬೇಡಲಿಲ್ಲ. ವರ್ತಕರು ಎಷ್ಟು ಸಹಾಯ ಮಾಡಿದ್ದಾರೆ ಎಂದು ಲೆಕ್ಕ ಕೊಡುತ್ತೇನೆ" ಎಂದು ಹೇಳಿ ಕೋಶಾಧ್ಯಕ್ಷನಾಗಿದ್ದ ನನಗೆ ಲೆಕ್ಕ ಕೊಡೆಂದರು. ಬೊಂಬಾಯಿ ಸಮ್ಮೇಳನದಲ್ಲಿ ಅಧ್ಯಕ್ಷ ಪದವಿಯನ್ನು ವಹಿಸಿದ್ದ ಎನ್. ಎಸ್. ಸುಬ್ಬರಾಯರು ತಮಗೆ ಪ್ರಯಾಣದ ಖರ್ಚು, ವಸತಿ ಸೌಕರ್ಯಗಳ ಖರ್ಚು ಇತ್ಯಾದಿಯಾಗಿ ಸ್ವಾಗತ ಸಮಿತಿಯವರು ಕಳಿಸಿದ್ದ ಚೆಕ್ಕನ್ನು (ಸುಮಾರು 600-800 ರೂಪಾಯಿಗಳಷ್ಟು) ನಮಗೆ ಚಂದಾ ಆಗಿ ಕೊಟ್ಟಿದ್ದರು. ವರ್ತಕರೆಲ್ಲ ಸೇರಿ, ಒಟ್ಟು 2800ರ ಲೆಕ್ಕಕ್ಕೆ ಕೊಟ್ಟಿದ್ದ ಚಂದಾಹಣ, ಇನ್ನೂರು ಮುನ್ನೂರು ರೂಪಾಯಿ! ಇದನ್ನು ಕೇಳಿ ಸಾಹುಕಾರರಿಗೆ ಸಂಕೋಚವಾಯಿತು. ಅವರು ತುಂಬಾ ವಿಶ್ವಾಸದಿಂದ ಇವರ ಕ್ಷಮಾಪಣೆ ಬೇಡಿ, "ನಾವಿಬ್ಬರು-ಮೂವರು ಸೇರಿ ಸೂಕ್ತವಾದ ಚಂದಾ ಕಳಿಸುತ್ತೇವೆ. ದಯವಿಟ್ಟು ಬೇಸರ ಪಟ್ಟುಕೊಳ್ಳಬಾರದು" ಎಂದು ಹೇಳಿ ನಮ್ಮನ್ನು ಬೀಳ್ಕೊಟ್ಟರು. ಹೊರಗೆ ಬಂದವರೆ ನಾವು ಗುಂಡಪ್ಪನವರಿಗೆ ಹೇಳಿದೆವು: "ಇನ್ನು ಬೇರೆ ಕಡೆಗಳಿಗೆ ನಾವೇ ಹೋಗಿ ಬರುತ್ತೇವೆ. ನೀವು ದಯವಿಟ್ಟು ಈ ತೊಂದರೆ ತೆಗೆದುಕೊಳ್ಳಬೇಕಾದದ್ದಿಲ್ಲ" ಎಂದು. ಇನ್ನೂ ಅವರಲ್ಲಿ ಬಿಸಿ ಆರಿರಲಿಲ್ಲ. "ಚಂದಾ ಕೇಳಲು ಹೋಗಿ ಇಷ್ಟು ಕಷ್ಟವಾಗಿ ಮಾತನಾಡಿಬಿಟ್ಟರೆ ಹೇಗೆ?" ಎಂದರು ನಮ್ಮಲ್ಲಿ ಇನ್ನೊಬ್ಬರು. ಗುಂಡಪ್ಪನವರೆಂದರು: "ನಿಸ್ಪೃಹಸ್ಯ ತೃಣಂ ಜಗತ್. ಇವರಿಗೆಲ್ಲ ನಾನು ಮಾಡಿಕೊಟ್ಟಿರುವ ಕೆಲಸಕ್ಕೆ ಶೇ. ಒಂದರಂತೆ ನಾನು ಪುರಸ್ಕಾರ ಬಯಸಿದ್ದರೆ ಅವರು ಹತ್ತಾರು ಸಾವಿರ ತೆರಬೇಕಿತ್ತು. ನಾವು ದಿನಾ ಬೇಡುವುದಕ್ಕೆ ಹೋಗುತ್ತೇವೆಯೇ? ಇಂಥ ಯಾವುದೋ ಸಂಸ್ಕೃತಿ ಕಾರ್ಯಗಳಿಗಾಗಿ ಇವರು ಕೊಡದಾದರೆ ಇನ್ನೇತಕ್ಕೆ ಕೊಟ್ಟರೆ ಏನು? ಕೀರ್ತಿ

ಬಿರುದು ಇದರಿಂದ ಬಾರವು.... ನೀವು ಇನ್ನೆಲ್ಲಿಯೂ ಹೋಗಬೇಕಾಗಿಲ್ಲ. ಮೂರು ಸಾವಿರ ರೂಪಾಯಿಗೆ ಬಡ್ಜೆಟ್ ಹಾಕಿ ಅಂದಾಜು ತಯಾರು ಮಾಡಿ ಬಿಡಿ. ಎಲ್ಲಿಂದಲೋ ಹಣ ತರುತ್ತೇನೆ. ಹಣವಿಲ್ಲದೆ ಯಾವ ದೊಡ್ಡ ಕೆಲಸವೂ ನಿಲ್ಲುವುದಿಲ್ಲ" ಎಂದುಬಿಟ್ಟರು. ಅದು ಬಾಯಿ ಧಾರಾಳ ಮಾತ್ರವಲ್ಲ. ಹಣ ತರಬಲ್ಲವರೇ ಅವರು. ಅದಕ್ಕಿಂತ ಹೆಚ್ಚಾಗಿಯೇ ಆ ಸಲದ ಉತ್ಸವಕ್ಕೆ ವೆಚ್ಚ ಹಿಡಿಯಿತು."

ಪರಿಷತ್ತಿನಲ್ಲಿ ಪರೀಕ್ಷಾ (Experimental) ರೀತಿಯಲ್ಲಿ ಪ್ರಾರಂಭಿಸಿದ ಗಮಕ ಕಲಾ ಶಿಕ್ಷಣದ ಗೋಷ್ಠಿಗೆ ಬಿಂದೂರಾಯರು ಶಿಕ್ಷಕರಾಗಿ ಏಪ್ರಿಲ್ 20, 1935 ರಂದು ಕಾವ್ಯಾಭ್ಯಾಸವನ್ನು ಪ್ರಾರಂಭಿಸಿದರು. ಎರಡು ತಿಂಗಳು ಅಭ್ಯಾಸವಾದಮೇಲೆ ಪರೀಕ್ಷೆ ಜೂನ್ ತಿಂಗಳಿನಲ್ಲಿ ನಡೆದು ಜೂನ್ 29 ರಂದು ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ ಆರ್. ನರಸಿಂಹಾಚಾರ್ಯರ ಅಧ್ಯಕ್ಷತೆಯಲ್ಲಿ ಪ್ರಶಸ್ತಿ ಪತ್ರಿಕೆಗಳನ್ನು ಹಂಚಲಾಯಿತು.

ವಿಶೇಷ ಸಾಹಿತ್ಯೋತ್ಸವದ ಸಹಾಯಾರ್ಥವಾಗಿ ಬೆಂಗಳೂರಿನ ಅಮೆಚ್ಯೂರು ನಾಟಕಮಂಡಳಿಯು ವೆಂಕಟರಾಮಯ್ಯನವರ 'ನಚಿಕೇತ' ನಾಟಕವನ್ನಾಡಿ ಅದರ ಉತ್ಪತ್ತಿ 556 ರೂಪಾಯಿ 12 ಆಣೆಯನ್ನು ಪರಿಷತ್ತಿಗೆ ಕೊಟ್ಟಿತು. ಹಾಗೆಯೇ ಬಿ.ಎಂ.ಶ್ರೀ ಅವರು ಪರಿಷತ್ತಿಗೆ ಒಂದು ಸಾವಿರ ರೂಪಾಯಿಗಳನ್ನು ದಾನ ಮಾಡಿದರು.

ಮ್ಯಾಜಿಕ್ ಲಾಂಟರ್ನ್, ಹ್ಯಾಂಡ್ ಸಿನಿಮ ಮುಂತಾದ ವೈಜ್ಞಾನಿಕ ಸಾಧನಗಳಿಲ್ಲದಿರುವುದರಿಂದ ಉಪನ್ಯಾಸ ಕಾರ್ಯವು ಸಮರ್ಪಕವಾಗಿ ನಡೆಯಲು ಅಡಚಣೆಯಾಗಿದೆ. ಇದಕ್ಕೆ "ನಾನೆಂಟಿಟೀಸ್" ಸಂಘದಿಂದ ಸಹಾಯ ದೊರಕೀತೆ ಎಂದು ಬಿ.ಪುಟ್ಟಯ್ಯನವರಿಗೆ ಡಿ ವಿ ಜಿ ಒಂದು ಪತ್ರ ಬರೆದಿದ್ದಾರೆ.

ಪರಿಷತ್ತಿನ ಪರವಾಗಿ ಪರಸ್ಥಳಗಳಿಗೆ ಹೋಗುವ ಉಪನ್ಯಾಸಕರ ಮತ್ತು ಗಮಕಿಗಳ ವೆಚ್ಚ ಮೊದಲಾದವುಗಳಿಗೆ ಸಂಬಂಧಪಟ್ಟ ಒಂದು ನಿಯಮಾವಳಿ ರಚಿತವಾಯಿತು.

1935ರ ಡಿಸೆಂಬರ್ ಹೊತ್ತಿಗೆ ಡಿ ವಿ ಜಿ ಉಪಾಧ್ಯಕ್ಷರಾಗಿ ಎರಡು ವರ್ಷಗಳಾಗುತ್ತಿತ್ತು. ತಾವು ಆ ಜವಾಬ್ದಾರಿಯನ್ನು ಮುಂದೆಯೂ ಹೊತ್ತುಕೊಳ್ಳಲು ತಮ್ಮ ಗೃಹಕೃತ್ಯದ ಜವಾಬ್ದಾರಿಯಿಂದ ಸಾಧ್ಯವಿಲ್ಲವೆಂದು ಅವರು ಸ್ನೇಹಿತರಿಗೆ ತಿಳಿಸಿದರು. ಆಗ ಪರಿಷತ್ತಿನ ಗೌರವ ಕಾರ್ಯದರ್ಶಿಯವರಾಗಿದ್ದ ಸಿ. ಕೆ. ವೆಂಕಟರಾಮಯ್ಯನವರು 10.11.35 ರಲ್ಲಿ ಪತ್ರವೊಂದನ್ನು ಬರೆದು

"ಶ್ರೀ ಡಿ. ವಿ. ಗುಂಡಪ್ಪನವರಿಗೆ ಈಗ ಗೃಹಕೃತ್ಯದ ಅನನುಕೂಲಗಳಿವೆ ಯೆಂಬುದು ಕಾರ್ಯನಿರ್ವಾಹಕಮಂಡಲಿಯವರಿಗೆ ಗೊತ್ತಿದೆಯಾದರೂ ಪ್ರಕೃತ ಸಂದರ್ಭದಲ್ಲಿ ಅವರ ರಾಜೀನಾಮೆಯನ್ನು ಅಂಗೀಕರಿಸಲು ಸಾಧ್ಯವಿಲ್ಲವೆಂದೂ ಅವರೇ ಉಪಾಧ್ಯಕ್ಷರಾಗಿದ್ದುಕೊಂಡು ಮುಂದೆ ಕೆಲಸವನ್ನು ನಡೆಸಿಕೊಂಡು ಬರಬೇಕೆಂದೂ ಕಾರ್ಯನಿರ್ವಾಹಕ ಮಂಡಲಿಯು ಅವರನ್ನು ಸರ್ವಾನುಮತ ದಿಂದ ಪ್ರಾರ್ಥಿಸಿಕೊಳ್ಳುತ್ತದೆ" ಎಂದು ಬರೆದರು. ಬೆಳ್ಳಾವೆ ವೆಂಕಟನಾರಣಪ್ಪ ನವರು "You awoke the Parishat from its slumbers and took considerable pains to make it extraordinarily active. You have given it a new term and have made it serve the needs of a much larger public. As far as I am aware, there is no other person in Bangalore (or for the matter of that anywhere in our country) who can keep the Parishat going in its present condition. By your quitting at this juncture it is likely to descend to a much lower level than it ever was before and every one of us will have to share the blame" ಎಂದು ಬರೆದರು.

ಡಿಸೆಂಬರ್ 1935 ರಲ್ಲಿ ಬೊಂಬಾಯಿಯಲ್ಲಿ ಎನ್. ಎಸ್. ಸುಬ್ಬರಾಯರ ಅಧ್ಯಕ್ಷತೆಯಲ್ಲಿ ನಡೆದ 21ನೆಯ ಸಾಹಿತ್ಯ ಸಮ್ಮೇಳನಕ್ಕೆ ಡಿ ವಿ ಜಿ ಕೆಲವು ಅನನುಕೂಲಗಳಿಂದ ಹೋಗಲಿಲ್ಲ. ತಮ್ಮ ಪರವಾಗಿ ಮಾಸ್ತಿಯವರು ಉಪಾಧ್ಯಕ್ಷರ ಕರ್ತವ್ಯಗಳನ್ನು ನೆರವೇರಿಸಿಕೊಡಬೇಕೆಂದು ಬಿನ್ನಯಿಸಿಕೊಂಡಿದ್ದರು. ಪರಿಷತ್ತಿನ 20ನೆಯ ವಾರ್ಷಿಕಾಧಿವೇಶನದಲ್ಲಿ ಮಾಸ್ತಿಯವರ ಸೂಚನೆಯ ಮೇರೆಗೆ ಸಭಾಸದಸ್ಯರೆಲ್ಲರೂ ಡಿ ವಿ ಜಿ ಯವರನ್ನು ಏಕಮತದಿಂದ ಉಪಾಧ್ಯಾಕ್ಷರನ್ನಾಗಿ ಚುನಾಯಿಸಿದರು.

1936ರಲ್ಲಿ ಪರಿಷತ್ತಿಗೆ ಪತ್ರಿಕೆಯ ಭಾರ ಹೆಚ್ಚಾದ ಕಾರಣದಿಂದ 'ಗ್ರಂಥ ವಿಮರ್ಶೆ'ಯ ಭಾಗ ಬಿಡಬೇಕಾಯಿತು. ಏಪ್ರಿಲ್‌ನಿಂದ ಆರಂಭವಾಗುತ್ತಿದ್ದ ಪತ್ರಿಕೆ ಮಿಕ್ಕೆಲ್ಲ ಪರಿಷತ್ಕಾರ್ಯಗಳಂತೆ ಜನವರಿ ತಿಂಗಳನ್ನೇ ಸಂವತ್ಸರಾದಿಯಾಗಿ ಇಟ್ಟುಕೊಂಡಿತು.

ಅದೇ ವರ್ಷ ಜನವರಿಯಲ್ಲಿ ಸುಪ್ರಸಿದ್ಧ ಮಳೆಯಾಳ ಕವಿ ವಳ್ಳತ್ತೋಳ್ ಅವರ ಗೌರವಾರ್ಥವಾಗಿ ಪರಿಷತ್ತು ಸಂತೋಷಗೋಷ್ಠಿಯನ್ನೇರ್ಪಡಿಸಿತ್ತು.

1936ರ ವಿಶೇಷ ಸಾಹಿತ್ಯೋತ್ಸವ ಮೇ ತಿಂಗಳಿನಲ್ಲಿ ನಡೆಯಿತು. ಒಂದಿನ ವರ್ಷಗಳಂತೆ ಉಪನ್ಯಾಸಗಳು ನಡೆದವು. ಬಿ. ವೆಂಕಟೇಶಾಚಾರ್ಯರು

ಭೌತಶಾಸ್ತ್ರ, ಎಂ. ಎಚ್. ಕೃಷ್ಣ ಅವರು ಕನ್ನಡ ವರ್ಣಮಾಲೆಯ ಚರಿತ್ರೆ, ಎಲ್. ರಾಮರಾಯರು ಮೈಸೂರು ಸಂಸ್ಥಾನದ ಶಿಲಾ ಸಂಪತ್ತು, ಎ. ಎಲ್. ಡಿಸೋಜಾ ಅವರು ಇಂಡಿಯಾ ದೇಶದ ಹೊಸ ರಾಜ್ಯವ್ಯವಸ್ಥೆ, ಪಂಜೆ ಮಂಗೇಶ ರಾವ್ ಅವರು ಕಾವ್ಯಬೋಧೆ, ವಿ. ಕೆ. ಗೋಕಾಕ್ ಅವರು ಕಾವ್ಯ ಜೀವನದ ಮಹೋನ್ನತಿ, ವಿ. ವೆಂಕಟ ಸುಬ್ಬಯ್ಯನವರು ಹರಿಜನರ ಸಮಸ್ಯೆಗಳು ಇವುಗಳನ್ನು ಕುರಿತು ಉಪನ್ಯಾಸ ಮಾಡಿದರು.

ಅದೇ ಸಮಯದಲ್ಲಿಯೇ ಡಿ ವಿ ಜಿ ಯವರ ಅಧ್ಯಕ್ಷತೆಯಲ್ಲಿ ಸಕಲ ಕರ್ಣಾಟಕ ಸಂಘಗಳ ಸಮ್ಮೇಳನ ನಡೆಯಿತು. ಹಾಗೆಯೇ ಬಿ. ಎಂ. ಶ್ರೀ ಅವರ ಅಧ್ಯಕ್ಷತೆಯಲ್ಲಿ ಕನ್ನಡ ಅಕ್ಷರ ಸಂಸ್ಕರಣ ಸಮ್ಮೇಳನ ನಡೆಯಿತು. ಎಂದಿನಂತೆ ಗ್ರಂಥ ಪ್ರದರ್ಶನವೂ ನಡೆಯಿತು.

29.7.36 ರಲ್ಲಿ ಪರಿಷತ್ತಿನಲ್ಲಾದ ಒಂದು ಉಪನ್ಯಾಸ ಸ್ವಲ್ಪ ವಾದ ವಿವಾದಗಳನ್ನು ಎಬ್ಬಿಸಿದ್ದರಿಂದ ಡಿ ವಿ ಜಿ ಇವುಗಳನ್ನು ಕುರಿತು ಪರಿಷತ್ತಿನ ನಿಲುವನ್ನು ವಿವರಿಸಬೇಕಾಯಿತು :

“ಪರಿಷತ್ತು ಮತ ಸಿದ್ಧಾಂತಗಳ ಸಾಧುತೆ ಅಸಾಧುತೆಗಳ ವಿಚಾರಕ್ಕಾಗಲಿ ಮತಸ್ಥಾಪಕರ ಮತದೃಷ್ಟಿಯ ಚರಿತ್ರಾಂಶಗಳ ಚರ್ಚೆಗಳಿಗಾಗಲಿ ಕೈಹಾಕತಕ್ಕದ್ದಲ್ಲ. ಮತ ಸ್ಥಾಪಕರೂ ಮತ ಪ್ರಚಾರಕರೂ ಸಾಹಿತ್ಯಕ್ಕೆ ಮಾಡಿರುವ ಉಪಕಾರವೇನಾದರೂ ಇದ್ದರೆ ಅದಷ್ಟು ಮಾತ್ರವೇ ಈ ಪರಿಷತ್ತಿಗೆ ಬೇಕಾದದ್ದು. ಇಲ್ಲಿ ಸಾಹಿತ್ಯವೆಂದರೆ ಎಲ್ಲ ಮತಗಳವರಿಗೂ, ಯಾವ ಮತವನ್ನೂ ಇಟ್ಟು ಕೊಳ್ಳದ ಸಭ್ಯಜನರಿಗೂ ಸಹ ಗ್ರಾಹ್ಯವಾಗಿರುವ ವಾಙ್ಮಯ. ಎಲ್ಲ ಮತಗಳಲ್ಲಿಯೂ ಒಂದು ಸತ್ಯಾನ್ವೇಷಣೆ, ಒಂದು ಜೀವಗೌರವ, ಒಂದು ಪುಣ್ಯ ಪ್ರೀತಿ, ಒಂದು ಪಾಪ ಭೀತಿ, ಒಂದು ಭೂತದಯೆ, ಒಂದು ಲೋಕಸಹಾನುಭೂತಿ, ಒಂದು ಧರ್ಮ ನಿಯಮ—ಇವು ಸಾಮಾನ್ಯವಾಗಿ ಕಾಣಬರುತ್ತವೆ. ಹೀಗೆ ಎಲ್ಲ ಮತಗಳವರ ಪುರಾಣ ಪುಣ್ಯ ಕಥೆಗಳಲ್ಲಿಯೂ ತತ್ತ್ವಗ್ರಂಥಗಳಲ್ಲಿಯೂ ಸಕಲ ಮಾನವ ಜನ ವರ್ಗದ ಜೀವನಕ್ಕೂ ಸಂಬಂಧಪಟ್ಟದ್ದಾಗಿ ಸಕಲ ಮಾನವರ ಬುದ್ಧಿವಿಕಾಸಕ್ಕೂ ಭಾವೋತ್ಕರ್ಷಕ್ಕೂ ಸಾಧಕವಾಗಿರುವ ವಾಙ್ಮಯ ಸಿಕ್ಕುವುದು ಸ್ವಾಭಾವಿಕವಾಗಿದೆ. ಅಂಥ ವಾಙ್ಮಯವೇ ಈ ಪರಿಷತ್ತಿನ ದೃಷ್ಟಿಯಲ್ಲಿರುವ ಸಾಹಿತ್ಯ. ನಮ್ಮ ಮತ ಗ್ರಂಥಗಳಲ್ಲಿ ಇಂಥ ಸಕಲ ಮತಾತೀತವಾಗಿ ಸರ್ವಮಾನವ ಸಾಧಾರಣವಾಗಿರುವ ಭಾಗವೆಷ್ಟುಂಟೋ ಅಷ್ಟು ಮಾತ್ರವೇ ನಮ್ಮ ಗಮನದಲ್ಲಿರತಕ್ಕದ್ದು. ಉಳಿದ ವಾದವಿವಾದ

ಗಳನ್ನು ಇತ್ಯರ್ಥ ಪಡಿಸುವ ಕೆಲಸ ಈ ಸಂಸ್ಥೆಯ ಅಧಿಕಾರವಲ್ಲಿಲ್ಲ."

1936ರಲ್ಲಿ ಸಾಹಿತ್ಯ ಸಮ್ಮೇಳನಕ್ಕೆ ಯಾವ ಸ್ಥಳದಿಂದಲೂ ಆಹ್ವಾನ ಬರಲಿಲ್ಲವಾದ ಕಾರಣದಿಂದ ಪರಿಷತ್ತಿನ ಕರ್ತೃತ್ವದಲ್ಲಿ ಸಮ್ಮೇಳನ ನಡೆಯಲಿಲ್ಲ ವಾದ ಕಾರಣ, ವಾರ್ಷಿಕಾಧಿವೇಶನವೂ ನಡೆಯಲಿಲ್ಲ. ಆದ್ದರಿಂದ ವಾರ್ಷಿಕಾಧಿ ವೇಶನವು 1937ರ ಮೇಯಲ್ಲಿ ವಿಶೇಷ ಸಾಹಿತ್ಯೋತ್ಸವದ ಸಂದರ್ಭದಲ್ಲಿ ನಡೆ ಯಿತು. ಪರಿಷತ್ತಿನ ಸದಸ್ಯರಾಗಲು ಅನುಕೂಲವಿಲ್ಲದವರು ಪರಿಷತ್ತಿನ ಕಾರ್ಯಕ್ರಮದಲ್ಲಿ ಮಿಳಿತರಾಗಲು ಅನುಕೂಲಿಸುವಂತೆ ಅಭಿಮಾನಿಗಳ ವರ್ಗ ವೊಂದನ್ನು ಏರ್ಪಡಿಸತಕ್ಕದ್ದು — ವರ್ಷಕ್ಕೆ ಎಂಟು ಆಣೆ ಚಂದಾ ಮೇಲೆ, ಎಂಬುದು ಆ ಸಭೆಯಲ್ಲಾದ ತೀರ್ಮಾನಗಳಲ್ಲೊಂದು.

"ವರ್ಷವರ್ಷವೂ ನಡೆಯಬೇಕಾದ ಎಲ್ಲ ಸಮಾರಂಭಗಳಿಗೂ ನಮ್ಮಲ್ಲಿ ಸಾಧಾರಣವಾಗಿ ಅಂಟಿಕೊಳ್ಳುವ ನಿರುತ್ಸಾಹ ಜಾಡ್ಯವು ಯಾವಾಗಲೋ ಅವನ್ನು ನೋಕಿತೆಂದು ಕಾಣುತ್ತದೆ. ಲಕ್ಷ್ಮೀದೇವಿಯ ಚಾಂಚಲ್ಯ ಫಲ. ಪರಿಷತ್ತು ತನ್ನ ಹೆಸರನ್ನು ಪದೇಪದೇ ಉಚ್ಚರಿಸುವ ರೀತಿ ವಿಧಾಯಕ ಮಾಡಿರುವ ಆ ಮಂಗಲ ದೇವತೆಯು ಸಲುವಾಗಿ ಬಗೆಬಗೆಯ ಕೃಷಿ, ಪೂಜೆ ತಪಸ್ಸುಗಳು ಏರ್ಪಟ್ಟವು. ಪಲ್ಲಗಟ್ಟಲೆ ಪ್ರಯತ್ನ: ಪಾವಿನಷ್ಟು ಫಲವಿಲ್ಲ." ಆದರೂ ವಿಶೇಷ ಸಾಹಿತ್ಯೋತ್ಸವವಂತೂ ನಡೆಯಿತು. ಸಭೆಯಲ್ಲಿ ಸುಮಾರು 600 ಜನ ಹಾಜರಿರುತ್ತಿದ್ದರು. ಕೆ. ಶಂಕರಭಟ್ಟರಿಂದ ಕುಮಾರವ್ಯಾಸ, ಜಿ. ಪಿ. ರಾಜರತ್ನಂ ಅವರಿಂದ ಪಾಲಿ ಸಾಹಿತ್ಯ, ಪಿ. ಶ್ರೀನಿವಾಸರಾಯರಿಂದ ವಿಶ್ವದ ಬೆಳವಣಿಗೆ, ಸಿ.ಎನ್.ಶ್ರೀನಿವಾಸ ಅಯ್ಯಂಗಾರ್ಯರಿಂದ ಜ್ಯೋತಿರ್ವಿ ಜ್ಞಾನ, ಪಿ. ಕೃಷ್ಣರಾಯರಿಂದ ಕ್ಷಯರೋಗ, ಎ. ಎನ್. ನರಸಿಂಹಯ್ಯ ನವರಿಂದ ಕನ್ನಡ ಭಾಷಾಶಾಸ್ತ್ರ ವಿಚಾರ, ಜಿ. ಎಂ. ಮೇಕ್ರಿ ಅವರಿಂದ ಹಳ್ಳಿ ಯವರ ಸಾಲದ ಹೊರೆ; ಪೂರ್ವ ಪಶ್ಚಿಮದ ದಾರ್ಶನಿಕರ ತತ್ತ್ವಶಾಸ್ತ್ರ ಪದ್ಧತಿ ಗಳನ್ನು ಕುರಿತೂ, ಕನ್ನಡ ಸಾಹಿತ್ಯ ಚರಿತ್ರೆ ಮತ್ತು ಲಕ್ಷಣಗಳನ್ನು ಕುರಿತೂ ಉಪನ್ಯಾಸಗಳಾದುವು.

ಆ ವರ್ಷ ಕಂಠಪಾಠಸ್ಪರ್ಧೆ, ಲಾವಣಿ ದೇವರನಾಮಗಳ ಹಾಡುಗಾರಿಕೆ, ನಾಟಕಾಭಿನಯ, ಸ್ಕೌಟುಗಳ ಕ್ಯಾಂಪ್ ಫೈರ್, ಅಂಗ ಸಾಧನೆಯ ಪ್ರದರ್ಶನ, ನೃತ್ಯ ಕಲಾ ಪ್ರದರ್ಶನ, ಲೇಖಕ ಗೋಷ್ಠಿ, ಮಹಿಳೆಯರ ಸಭೆ ಮುಂತಾದ ಹೊಸ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು. ಮತ್ತು ಪರಿಷತ್ತಿನಲ್ಲಿ ನಡೆಯುತ್ತಿದ್ದ ಜ್ಞಾನ ಸಂತರ್ಪಣೆಯ ಜೊತೆಗೆ ಬಿ. ಎಂ. ಶ್ರೀ ಅವರು

ಮೃಷ್ಟಾನ್ನ ಸಂತರ್ಪಣೆಯನ್ನು ಏರ್ಪಡಿಸಿದ್ದರು.

ಇಷ್ಟರಲ್ಲಿ ಸಿ.ಕೆ. ವೆಂಕಟರಾಮಯ್ಯನವರ ಸ್ಥಾನಕ್ಕೆ ಎಸ್.ವಿ. ರಂಗಣ್ಣನವರು ಗೌರವ ಕಾರ್ಯದರ್ಶಿಯಾಗಿಯೂ, ಎ. ಆರ್. ಕೃಷ್ಣಶಾಸ್ತ್ರಿಗಳ ಸ್ಥಾನಕ್ಕೆ ಡಿ. ಸಿ. ಸುಬ್ಬರಾಯಪ್ಪನವರು ಪರಿಷತ್ಪತ್ರಿಕೆಯ ಸಂಪಾದಕತ್ವವನ್ನೂ ವಹಿಸಿಕೊಂಡರು.

ಕನ್ನಡದ ವಿಷಯದಲ್ಲಿ ಜನರಿಗೆ ಉತ್ಸಾಹ ಅಭಿಮಾನಗಳು ಹೆಚ್ಚುವಂತೆ ಮಾಡಲು ಪ್ರತಿ ವರ್ಷ ಒಂದು ದಿನ 'ಕನ್ನಡದ ಹಬ್ಬ'ವನ್ನು ಆಚರಿಸಬೇಕೆಂದು ಕರ್ಣಾಟಕ ಸಂಘಗಳ ವಾರ್ಷಿಕಾಧಿವೇಶನದಲ್ಲಿ ನಿರ್ಣಯಿಸಿದ್ದಂತೆ 10-10-37 ರಲ್ಲಿ ಈ ಹಬ್ಬವು ಮಾಸ್ತಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಆಗ ಒಂದು ಸಂದೇಶವನ್ನು ಕಳುಹಿಸಿದ್ದ ಡಿ ವಿ ಜಿ "ಕನ್ನಡ ದೇವಿಯ ಆರಾಧನೆಯನ್ನು ಎಲ್ಲ ಕನ್ನಡಿಗರೂ ಮಾತೃಪೂಜೆಯೆಂದು ನಂಬಿ ನಡಸುವುದು ಅವಶ್ಯಕರ್ತವ್ಯವೆಂದು ನಾನು ವಿಜ್ಞಾಪಿಸುತ್ತೇನೆ. ಪ್ರಪಂಚಕ್ಕೆ ಭರತ ಖಂಡವು ಹೇಗೋ ಭರತ ಖಂಡಕ್ಕೆ ಕನ್ನಡ ದೇಶವು ಹಾಗೆ ಹೃದಯಪ್ರಾಯವಾಗಿರುತ್ತದೆ.... ಕನ್ನಡ ನಾಡಿನಲ್ಲಿ ಇತರ ಭಾಷೆಗಳನ್ನು ಆಡುವ ಜನರು ಅಲ್ಲಲ್ಲಿ ಹಲ ಕೆಲವರು ನೆಲೆಸಿರುತ್ತಾರೆ. ಇಂಥವರು ಸಹ ಇಲ್ಲಿಂದ ಮುಂದಕ್ಕೆ ಕನ್ನಡವು ತಮ್ಮದೇ ಎಂದು ಸ್ವೀಕರಿಸುವುದು ನ್ಯಾಯವಾಗಿರುತ್ತದೆ. ಈಗಿನ ಕಾಲ ಇಂಡಿಯಾ ದೇಶದಲ್ಲಿ ದೇಶಭಾಷೋಜ್ಜೀವನದ ಕಾಲವಾಗಿದೆ. ಇನ್ನು ಮುಂದೆ ನಮ್ಮಗಳ ದೇಶಾಭಿಮಾನದಲ್ಲಿ ಭಾಷಾಭಿಮಾನವೆಂಬ ಅಂಶವು ಹಿಂದೆಂದೂ ಅದಕ್ಕೆ ಇಲ್ಲದಿದ್ದಷ್ಟು ಹೆಚ್ಚಾದ ಪ್ರಾಮುಖ್ಯತೆಯನ್ನು ಪಡೆಯತಕ್ಕದ್ದಾಗಿದೆ....ಕನ್ನಡಕ್ಕೆ ಒದಗಿರುವ ವಿಪತ್ತುಗಳನ್ನು ತೊಲಗಿಸಿ ಅದರ ಅಭ್ಯುದಯವನ್ನು ನಿರಾತಂಕವಾಗಿ ಸಾಧಿಸಲು ನಾವು ಒಂದು ಪ್ರತಿಜ್ಞೆ ಮಾಡಬೇಕಾದ ಕಾಲ ಈ ಕನ್ನಡದ ಹಬ್ಬ" ಎಂದಿದ್ದಾರೆ.

22ನೆಯ ಸಾಹಿತ್ಯ ಸಮ್ಮೇಳನ ಜಮುಖಂಡಿಯಲ್ಲಿ ಬೆಳ್ಳಾವೆ ವೆಂಕಟನಾರಣಪ್ಪನವರ ಅಧ್ಯಕ್ಷತೆಯಲ್ಲಿ ಡಿಸೆಂಬರ್ 1937ರಲ್ಲಿ ನಡೆಯಿತು. ವಾರ್ಷಿಕಾಧಿವೇಶನವೂ ಆಗಲೇ ನಡೆಯಿತು. ವಾರ್ಷಿಕಾಧಿವೇಶನದಲ್ಲಿ ಆದ ತೀರ್ಮಾನಗಳ ಪೈಕಿ ಮುಖ್ಯವಾದವು : 1) ಕಾರ್ಯನಿರ್ವಾಹಕ ಮಂಡಲಿಯಲ್ಲಿ ಸದಸ್ಯರ ಬದಲಾವಣೆ, 2) ಪರಿಷತ್ತಿನ ಉಪಾಧ್ಯಕ್ಷರ ಬದಲಾವಣೆ, 3) ಪರಿಷತ್ತಿನ ಅಧಿಕಾರಿಗಳು ಇನ್ನು ಮುಂದಕ್ಕೆ ವರ್ಷಕ್ಕೊಂದುಬಾರಿ ಚುನಾಯಿತರಾಗಬೇಕೆಂಬ ನಿರ್ಧಾರ.

ಆಗ ಡಿ ವಿ ಜಿ ಉಪಾಧ್ಯಕ್ಷ ಸ್ಥಾನದಿಂದ ವಿರಮಿಸಿದ್ದನ್ನು ಕುರಿತು ಮಾಸ್ತಿ ಹೇಳಿರುವ ಮಾತುಗಳು ಇವು : "ಗುಂಡಪ್ಪನವರು ನಾಲ್ಕು ವರ್ಷ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ ವೇಳೆಗೆ ನಮ್ಮ ತರುಣ ಸದಸ್ಯರು ಕೆಲವರು 'ಬಹುವರ್ಷ ಒಬ್ಬರೇ ಉಪಾಧ್ಯಕ್ಷರಾಗಿರುವುದು ಬೇಡ, ಬೇರೆ ಒಬ್ಬರನ್ನು ಉಪಾಧ್ಯಕ್ಷನ್ನಾಗಿ ಮಾಡೋಣ' ಎಂದು ಯೋಚಿಸಿದ್ದು ಕಂಡಿತು. ಅನೇಕರಿಗೆ ಇದು ಅನವಶ್ಯಕ ಎನ್ನಿಸಿತು. ಆದರೂ 1937ರಲ್ಲಿ ಜಮಖಂಡಿಯಲ್ಲಿ ನಡೆದ ವಾರ್ಷಿಕ ಸಭೆಯಲ್ಲಿ ಈ ಸೂಚನೆ ಬಂದು ಗುಂಡಪ್ಪನವರು ತಮಗೆ ಇನ್ನು ಉಪಾಧ್ಯಕ್ಷ ಸ್ಥಾನ ಬೇಡವೆಂದರು. ಸಭೆ ಬೇರೆ ಜನರನ್ನು ಉಪಾಧ್ಯಕ್ಷರನ್ನಾಗಿ ಆರಿಸ ಬೇಕಾಯಿತು. ತರುಣರು ಶ್ರೀ ಬಿ.ಎಂ.ಶ್ರೀಕಂಠಯ್ಯನವರು ಆ ಸ್ಥಾನಕ್ಕೆ ಬರಲಿ ಎಂದು ಅಪೇಕ್ಷಿಸಿದರು. ಶ್ರೀಕಂಠಯ್ಯನವರು ಈ ಸೂಚನೆಗೆ ಒಪ್ಪಿದರು. ಸರಕಾರದ ಕೆಲಸದಲ್ಲಿರುವವರು ಈ ಸ್ಥಾನಕ್ಕೆ ಬರುವುದೆನ್ನುವುದು ನನಗೆ ಒಟ್ಟಿನಲ್ಲಿ ಸಮ್ಮತ ಅಲ್ಲ. ಆದರೆ ಶ್ರೀಕಂಠಯ್ಯನವರು ಪ್ರತಿಷ್ಠಿತ ಅಧ್ಯಾಪಕ ಮಹನೀಯರು. ಅವರು ಸ್ಥಾನದ ಗೌರವವನ್ನು ಉಳಿಸಿಕೊಂಡು ನಡೆಯುವುದು ಸಾಧ್ಯ. ಇದು ನನ್ನ ಸ್ವಂತ ಯೋಚನೆ. ಇದನ್ನು ನಾನು ಸಭೆಯಲ್ಲಿ ಬಹಿರಂಗವಾಗಿ ಹೇಳಲಿಲ್ಲ. ಹೇಗೂ ಸಭೆ ಅವರನ್ನು ಉಪಾಧ್ಯಕ್ಷ ಸ್ಥಾನಕ್ಕೆ ಆರಿಸಿತು. ಇದು ಎಲ್ಲರಿಗೂ ಸಂತೋಷ."

"ತರುಣರು ತಮ್ಮ ವಿಷಯಕ್ಕೆ ಸ್ವಲ್ಪ ಅವಿನಯದಿಂದ ನಡೆದರೆಂದು ಗುಂಡಪ್ಪನವರಿಗೆ ಸ್ವಲ್ಪ ಅಸಮಾಧಾನ. ಸ್ಥಾನ ತಪ್ಪಿದ್ದರಿಂದಲೋ, ಶ್ರೀಕಂಠಯ್ಯನವರು ಸ್ಥಾನಕ್ಕೆ ಬಂದದ್ದರಿಂದಲೋ, ಇವರಿಗೆ ಅಸಮಾಧಾನ ಆಯಿತೆಂದು ಕೆಲವರಾದರೂ ಅಪಾರ್ಥ ಮಾಡುವ ಸಂಭವ ಒದಗಿದಾಗ ನಾನು, ಗುಂಡಪ್ಪನವರನ್ನು ಬೇಡಿ, ತರುಣರನ್ನು ಕುರಿತ ಅಸಮಾಧಾನವನ್ನು ಬದಿಗೆ ಇಟ್ಟು, ಹಿರಿಯರು ತಮ್ಮ ಮಧ್ಯೆ ಯಾವ ಅಸಮಾಧಾನವೂ ಇಲ್ಲ ಎನ್ನುವುದು ತೋರಲು ಏರ್ಪಾಡು ಮಾಡಿದೆನು. ಸಮ್ಮೇಳನ ಸಮಾಧಾನದಲ್ಲಿ, ಸಂತೋಷದಲ್ಲಿ ಮುಗಿಯಿತು."

ಪರಿಷತ್ತಿನ ಹೊಸ ಕಾರ್ಯನಿರ್ವಾಹಕ ಮಂಡಲಿ 21.1.38ರಲ್ಲಿ ನಡೆದ ಸಭೆಯಲ್ಲಿ ಡಿ ವಿ ಜಿ ಯವರ ಸೇವೆಯನ್ನು ಹೀಗೆ ಪ್ರಶಂಸೆ ಮಾಡಿತು : "ಕಳೆದ ನಾಲ್ಕು ವರ್ಷಗಳಿಂದ ಪರಿಷತ್ತಿನ ಉಪಾಧ್ಯಕ್ಷರಾಗಿದ್ದುಕೊಂಡು, ಪರಿಷತ್ತಿನ ಕಾರ್ಯಕ್ಷೇತ್ರವನ್ನು ವಿಸ್ತಾರಗೊಳಿಸಿ, ಅದಕ್ಕೆ ಬರುತ್ತಿದ್ದ ಸರಕಾರದ ಸಹಾಯ ದ್ರವ್ಯವನ್ನು ಹೆಚ್ಚುಮಾಡಿಸಿ, ಸದಸ್ಯಸಂಪತ್ತನ್ನು ಬೆಳೆಸಿ, ಒಟ್ಟಿನ ಘನತೆ

ಯನ್ನು ಹೆಚ್ಚಿಸಿ, ಅವಿಶ್ರಾಂತವಾಗಿ ದುಡಿದು ಪರಿಷತ್ತಿಗೆ ಬಹು ವಿಧಗಳಲ್ಲಿ ಉಪಕಾರಗಳನ್ನು ಮಾಡಿ, ಈಗ ಉಪಾಧ್ಯಕ್ಷ ಪದವಿಯನ್ನು ಬಿಟ್ಟು ನಿವೃತ್ತಿ ಪಡೆದಿರುವ ಶ್ರೀಮಾನ್ ಡಿ. ವಿ. ಗುಂಡಪ್ಪನವರಿಗೆ ಪರಿಷತ್ತಿನ ಕಾ॥ ನಿ॥ ಮಂಡಲಿ ಪರಿಷತ್ತಿನ ಪರವಾಗಿ ತನ್ನ ಕೃತಜ್ಞತಾಪೂರ್ವಕವಾದ ವಿಶೇಷ ವಂದನೆಗಳನ್ನು ಅರ್ಪಿಸುತ್ತದೆ."

ಭಾಷೆಗಳ ಹೋರಾಟ

ಮಡಿಕೇರಿ ಸಾಹಿತ್ಯ ಸಮ್ಮೇಳನದಲ್ಲಿ ಡಿ ವಿ ಜಿ, "ಇದು ಭಾಷೆಗಳ ಹೋರಾಟದ ಕಾಲ" ಎಂದು ಹೇಳಿದ್ದರು. ಆ ಹೋರಾಟದ ವಾದವಿವಾದಗಳಲ್ಲಿ ಡಿ ವಿ ಜಿ ಪಾಲುಗೊಳ್ಳಲೇಬೇಕಾಯಿತು—ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿದ್ದಾಗ ಮತ್ತು ಅನಂತರ. ಇದರ ವಿವರಗಳನ್ನು ಕೊಡುವುದಕ್ಕೆ ಪೀಠಿಕೆಯಾಗಿ ಬಿ.ಎಂ.ಶ್ರೀ ಅವರ ಅಭಿಪ್ರಾಯವನ್ನೂ ನೋಡಬಹುದು.

26.4.1935ರಲ್ಲಿ "ಕನ್ನಡ ಪುನರುಜ್ಜೀವನ"ವನ್ನು ಕುರಿತು ಬಿ.ಎಂ.ಶ್ರೀ ಅವರು ಪರಿಷತ್ತಿನಲ್ಲಿ ಉಪನ್ಯಾಸ ಮಾಡಿದಾಗ "ಭಾಷೆಗಳ ಹೋರಾಟ"ವನ್ನು ಕುರಿತು ಪ್ರಸ್ತಾವ ಮಾಡಿದರು. "ಕನ್ನಡ ನಾಡಿಗೆ ಕನ್ನಡವೇ ಗತಿ. ಅನ್ಯಥಾ ಶರಣಂ ನಾಸ್ತಿ. ಸಂಸ್ಕೃತವಲ್ಲ, ಇಂಗ್ಲಿಷಲ್ಲ, ಹಿಂದಿಯಲ್ಲ, ಕನ್ನಡ. ಸಾಹಿತ್ಯ ಬೆಳೆಯಬೇಕಾದರೆ ಬರಿಯ ಲಕ್ಷಣಗಳಿಗೆ, ಸೂತ್ರಗಳಿಗೆ, ಕಟ್ಟುಬಿದ್ದಿರಬೇಕಾದುದಿಲ್ಲ. ಸಾಹಿತ್ಯದಿಂದ ಲಕ್ಷಣ ಸೂತ್ರಗಳೇ ಹೊರತು ಲಕ್ಷಣ ಸೂತ್ರಗಳಿಂದ ಸಾಹಿತ್ಯವಲ್ಲ. ನಮಗೆ ಯಾವುದು ಹೊಂದಿಕೊಳ್ಳುತ್ತದೆಯೋ ನಮ್ಮ ಜನರಿಗೆ ಯಾವುದರಿಂದ ತಿಳಿವಳಿಕೆಯನ್ನೂ ಜ್ಞಾನವನ್ನೂ ಸಾಹಿತ್ಯವನ್ನೂ ಕೊಡಬಹುದೋ ಅಂತಹ ಲಕ್ಷಣ ಸೂತ್ರವಿದ್ದರೆ ಇರಲಿ, ಇಲ್ಲದಿದ್ದರೆ ಹೋಗಲಿ. ಇದು ಕನ್ನಡತನದ ಒಳಗುಟ್ಟು, ಒಳಗೆ ಕುಳಿತಿರುವ ಕೆಚ್ಚು. ಇದು ಈಗ ಇಂಗ್ಲಿಷ್ ಸಾಹಿತ್ಯ ಪ್ರಭಾವದಲ್ಲಿ ಹೊರಕ್ಕೆ ಬರುತ್ತಿದೆ. ವಸಂತದಲ್ಲಿ ಕಣ್ಣಿನ ಮೇಲೆ ಕಣ್ಣೊಡೆದು ಚಿಗುರುವ ಬಳ್ಳಿಯಂತೆ ಎತ್ತೆತ್ತಲೂ ಹೊರಹೊಮ್ಮುತ್ತಿದೆ. ಈಗ ಒಂದು ಅರ್ಧ ಶತಮಾನದಿಂದ ಇಂಗ್ಲಿಷ್ ಸಾಹಿತ್ಯವೊಂದು ನಮ್ಮ ಗಮನವನ್ನು ತನ್ನೆಡೆಗೆ ಎಳೆದುಕೊಳ್ಳುತ್ತಿದೆಯಷ್ಟೆ. ಆ ಸಾಹಿತ್ಯಸಂಪರ್ಕ ಹೆಚ್ಚಿದ ಹಾಗೆಲ್ಲ ಅಲ್ಲಿರುವ ಭಾವಗಳು ಅಭಿಪ್ರಾಯಗಳು ಪ್ರೌಢ ವಿಚಾರಗಳು ಅವುಗಳನ್ನು ಪ್ರತಿಪಾದಿಸಿರುವ ರೀತಿ, ಶೈಲಿ, ಮಾರ್ಗ ಇವುಗಳನ್ನು ತಿಳಿದುಕೊಳ್ಳಬೇಕೆಂಬ ಬಯಕೆ ಜನರಲ್ಲಿ ಹೆಚ್ಚುತ್ತಿದೆ. ಇಲ್ಲಿನ ಅನೇಕ ಭಾವಗಳೂ ಶಬ್ದಗಳೂ ನಮ್ಮಲ್ಲಿ ಈಗಾಗಲೇ ಬೇರೂರುತ್ತಿವೆ. ಬೇರೂರಲಿ, ಬರಲಿ. ನನಗೆ ಇಂಗ್ಲಿಷಿನ ಭೀತಿಯಿಲ್ಲ. ದಾಸ್ಯ, ಪರಭಿಕ್ಷೆ, ಸಂಪ್ರದಾಯಭಂಗ ಮುಂತಾದ ಕೂಗುಗಳು ನನಗೆ ಅರ್ಥವಾಗವು. ಪುನರುಜ್ಜೀವನಕ್ಕೆ ಸ್ವಾತಂತ್ರ್ಯಕ್ಕೆ ಹೊಸ ಆತ್ಮಕ್ಕೆ ಪ್ರ-

ಯವೂ ಬೇಕು, ಸೃಷ್ಟಿಯೂ ಬೇಕು. ಅದಕ್ಕಾಗಿ ಬಿಡುವುದೂ ಉಂಟು ; ಇಡುವುದೂ ಉಂಟು ; ಸೇರಿಸುವುದೂ ಉಂಟು. ಹೊಸದನ್ನು ಕಲಿಯುವುದರಿಂದ ದೇಶವೂ ಮುಳುಗುವುದಿಲ್ಲ, ಭಾಷೆಯೂ ಕೆಡುವುದಿಲ್ಲ, ಸತ್ಸಂಪ್ರದಾಯವೂ ಅಳಿಯುವುದಿಲ್ಲ. ಅದರಲ್ಲಿ ಜೀವವಿಲ್ಲದ್ದು ಹೋಗಲಿ, ಬಿಡಿ. ಸಂಸ್ಕೃತವನ್ನೂ ಜೀರ್ಣಿಸಿಕೊಂಡು, ಇಂಗ್ಲಿಷನ್ನೂ ಜೀರ್ಣಿಸಿಕೊಂಡು ಉಳಿದಂತೆ ಉಳಿದು, ಕನ್ನಡವನ್ನು ಉಳಿಸಿ, ಬೆಳಸಿ! ಸಂಸ್ಕೃತದಲ್ಲಿಯೂ ಇಂಗ್ಲಿಷಿನಲ್ಲಿಯೂ ಸಿಕ್ಕದ್ದು ಹಿಂದಿಯಲ್ಲೇನಾದರೂ ಸಿಕ್ಕಿದರೆ ಅದನ್ನು ಕೊಳ್ಳಿ".

25.11.1936 ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸಭೆಯಲ್ಲಿ ಎ. ಆರ್. ವಾಡಿಯಾ ಅವರು ಹಿಂದಿಯನ್ನು ವಿಶ್ವವಿದ್ಯಾನಿಲಯದಲ್ಲಿ ಪೋಷಿಸುವ ಬಗ್ಗೆ ಉದಾತ್ತ ಭಾಷಣ ಮಾಡಿದರು. ಬೆಳ್ಳಾವೆ ವೆಂಕಟನಾರಣಪ್ಪನವರು, ವಿಶ್ವವಿದ್ಯಾನಿಲಯದವರು ಅನುಸರಿಸಬೇಕೆಂದು ಒತ್ತಾಯ ಮಾಡುವಷ್ಟು ಹಿಂದಿಗೆ ಪ್ರಾಮುಖ್ಯತೆಯಿಲ್ಲವೆಂದು ಹೇಳಿದರು. ಡಿ ವಿ ಜಿ ಹಿಂದಿಯು ಇತರ ಒಂದೆರಡು ಭಾಷೆಗಳೊಡನೆ ರಾಷ್ಟ್ರೀಯಭಾಷೆ ಎಂದು ಗಣಿಸಲರ್ಹವಾದುದು. ವಿಶ್ವವಿದ್ಯಾನಿಲಯವು ಹಿಂದಿಯ ಫಾಲೋ ಆನ್ ಕೋರ್ಸ್‌ಗಳನ್ನು ಅನುಸರಿಸುವುದು ಸಾಧ್ಯವಿಲ್ಲ ಎಂದರು. 'ವಿಶ್ವವಾಣಿ' (ಡಿಸೆಂಬರ್ 1936) ಪತ್ರಿಕೆಯಲ್ಲಿ ಇದರ ವರದಿಯನ್ನು ಪ್ರಕಟಿಸಿ ಅದರ ಸಂಪಾದಕರಾದ ಅ. ನ. ಕೃಷ್ಣರಾಯರು, "ಕಾಂಗ್ರೆಸ್, ಮಹಾತ್ಮಾಜಿ, ರಾಷ್ಟ್ರೀಯತೆಗಳನ್ನು ಮುಂದೆಮಾಡಿಕೊಂಡು ಸ್ತ್ರೀಜನತೆಯ ಸರಳ ವಿಶ್ವಾಸದ ಮೇಲೆ ಬೆಳೆಯುತ್ತಿದ್ದ ಹಿಂದಿ ಇಂದು ವಿಶ್ವವಿದ್ಯಾನಿಲಯದಲ್ಲೂ ತನ್ನ ಜಯಭೇರಿಯನ್ನು ಹೊಡೆದಿದೆ. ಕೊಂಚ ನೆಳಲನ್ನು ಕೇಳಿ ಬಂದ ಒಂಟೆಯು ಇಂದು ಗುಡಿಸಲ ಒಳಗೆ ನುಗ್ಗಿದೆ. ಮುಂದೆ ಗುಡಿಸಲ ಯಜಮಾನನನ್ನು ಹೊರಗೆ ಹಾಕುವುದಿಲ್ಲ ಎನ್ನುವುದಕ್ಕೆ ಏನು ಆಧಾರ" ಎಂದು ಕೇಳಿ, ಕನ್ನಡಿಗರು ತಪ್ಪು ಕಲ್ಪನೆಗಳಿಂದ ಕನ್ನಡದ ಪ್ರಗತಿಗೆ ಅಡ್ಡಿಮಾಡುವ ಭಾಷೆ, ಸಂಸ್ಥೆಗಳನ್ನು ರಕ್ಷಿಸಿ ಪೋಷಿಸುವುದು ಆತ್ಮಘಾತುಕತನವಲ್ಲದೆ ಮತ್ತೇನು? "ಈ ಮನೋವೃತ್ತಿಯೇ ಅಲ್ಲವೆ ಹಿಂದೆ ನಮ್ಮ ದೇಶವನ್ನು ಕಂಡವರಿಗೆ 'ಹಸಾದ' ಮಾಡಿ ಕೊಟ್ಟದ್ದು!!" ಎಂದು ಎಚ್ಚರಿಕೆ ಹೇಳಿದ್ದರು.

ಬೊಂಬಾಯಿಯಲ್ಲಿ ಡಿಸೆಂಬರ್ 1936ರಲ್ಲಿ ಸಾಹಿತ್ಯ ಸಮ್ಮೇಳನ ನಡೆದಾಗ ಸ್ವಾಗತ ಸಮಿತಿಯ ಅಧ್ಯಕ್ಷರೂ ಸಮ್ಮೇಳನಾಧ್ಯಕ್ಷರೂ ಮಾಡಿದ ಭಾಷಣಗಳಲ್ಲಿ ಹಿಂದೀ ಭಾಷೆಗೆ ಕನ್ನಡನಾಡಿನಲ್ಲಿ ತಕ್ಕ ಸ್ಥಾನವನ್ನು ಕುರಿತು

ಕೆಲವು ಅಭಿಪ್ರಾಯಗಳನ್ನು ತಿಳಿಸಿದರು. ಸಾಹಿತ್ಯ ಪರಿಷತ್ಪತ್ರಿಕೆಯಲ್ಲೂ ಕೆಲವು ಸಂಪಾದಕೀಯ ಲೇಖನಗಳು ಬಂದಿದ್ದುವು. ಈ ಲೇಖನಗಳನ್ನು ಕುರಿತು ಕೆಲವು ಪರಿಷತ್ ಸದಸ್ಯರು ಪರಿಷತ್ತಿನ ವಾರ್ಷಿಕಾಧಿವೇಶನದಲ್ಲಿ ಟೀಕೆ ಮಾಡಿದರು. ಡಿ ವಿ ಜಿ ಆಗ "ಈ ಪರಿಷತ್ಸೇವಕನು" ವಿಷಯವನ್ನು ವಿಶದ ಗೊಳಿಸುವುದು ಯುಕ್ತವೆಂದು ತಿಳಿದು "ಹಿಂದೀ–ಕನ್ನಡ ಸಮಸ್ಯೆ" ಯನ್ನು ಕುರಿತು ಜನವರಿ 1936 ರ ಪರಿಷತ್ಪತ್ರಿಕೆಯಲ್ಲಿ ಬರೆದರು. ಅದರ ಮುಖ್ಯ ಅಂಶಗಳು ಇವು :

"ರಾಷ್ಟ್ರಭಾಷೆಯ ಜವಾಬ್ದಾರಿಯು ಕರ್ನಾಟಕ ಸಾಹಿತ್ಯ ಪರಿಷತ್ತಿಗೆ ಸಂಬಂಧಪಟ್ಟದ್ದೆಂದು ಈ ಸಂಸ್ಥೆಯ ಮೂಲಕರ್ತರು ಅಭಿಪ್ರಾಯ ಪಟ್ಟದ್ದಂತೆ ತೋರುವುದಿಲ್ಲ. ಕನ್ನಡನಾಡಿನಲ್ಲಿ ಕನ್ನಡಪ್ರೊಂದರ ಸ್ಥಿತಿಗತಿಗಳು ಹೇಗೆ ಇರ ಬೇಕೆಂಬುದನ್ನು ನಿಶ್ಚಯಿಸಿ ಅದಕ್ಕಾಗಿ ದುಡಿಯುವುದು ಪರಿಷತ್ತಿನ ಕಾರ್ಯ ವೆಂಬುದು ಅವರ ತಾತ್ಪರ್ಯವಾಗಿತ್ತೇ ಹೊರತು, ಸಮಸ್ತ ಇಂಡಿಯದ ಭಾಷಾನೀತಿ ಹೇಗೆ ಇರಬೇಕೆಂದು ನಿರ್ಣಯಿಸುವುದು ಈ ಸಂಸ್ಥೆಗೆ ಸೇರಿದ ಜವಾಬ್ದಾರಿಯೆಂದು ಅವರು ಭಾವಿಸಿದ್ದಂತೆ ನನಗೆ ತೋರುವುದಿಲ್ಲ.

"ಕನ್ನಡ ನಾಡಿನಲ್ಲಿ ಕನ್ನಡ ಪ್ರಬಲಿಸಬೇಕು. ಕನ್ನಡಿಗನ ಜೀವನ ವ್ಯವ ಹಾರಗಳಲ್ಲಿ ಕನ್ನಡ ಮೊದಲನೆಯ ಸ್ಥಾನದಲ್ಲಿರಬೇಕು — ಇಷ್ಟೇ ಪರಿಷತ್ತಿನ ಮೂಲೋದ್ದೇಶ. ಈ ಒಂದು ತತ್ತ್ವವನ್ನು ಅಂಗೀಕರಿಸಿದ ಬಳಿಕ, ಉಳಿದ ವಿಚಾರಗಳಲ್ಲಿ ನಮ್ಮ ಸದಸ್ಯರು ಯಾರು ಯಾವ ಅಭಿಪ್ರಾಯಗಳನ್ನು ಇಟ್ಟು ಕೊಂಡಿದ್ದರೂ ಅದಕ್ಕೆ ಪರಿಷತ್ತಿನ ಅಭ್ಯಂತರವಿರುವುದಿಲ್ಲ. ಇತರ ಭಾಷೆಗಳ ಹಕ್ಕುಗಳಿಂದ ಎದುರಿಗೆ ಕನ್ನಡಕ್ಕೆ ಧಕ್ಕೆ ತಾಕುವ ಸಂಭವವಿಲ್ಲವೋ ಅದು ವರೆಗೆ ಆ ಭಾಷೆಗಳ ವಿಚಾರಕ್ಕೆ ಪರಿಷತ್ತು ಕೈಹಾಕುವ ಕಾರಣವಿರುವುದಿಲ್ಲ. ಮತ್ತು ಅವುಗಳ ವಿಚಾರದಲ್ಲಿ ಪರಿಷತ್ಸದಸ್ಯರು ವ್ಯಕ್ತಿಶಃ ಸ್ವತಂತ್ರರಾಗಿರು ತ್ತಾರೆ. ಹೀಗಿರುವುದರಿಂದ ರಾಷ್ಟ್ರಭಾಷಾ ವಾದವನ್ನೆತ್ತಿ ಪರಿಷತ್ತಿನ ಶರೀರ ವನ್ನು ವಿಭಾಗಿಸುವುದು ಪರಿಷತ್ತಿನ ಉದ್ದೇಶಕ್ಕೆ ಅವಶ್ಯವಲ್ಲವೆಂದೂ ಮತ್ತು ಅದರ ಹಿತಕ್ಕೆ ಸಾಧಕವಲ್ಲವೆಂದೂ ನಾನು ತಿಳಿದಿದ್ದೇನೆ. ಸಮಸ್ತ ಇಂಡಿಯದ ದೃಷ್ಟಿಯಿಂದ ರಾಷ್ಟ್ರಭಾಷಾ ವಿಷಯ ಅತ್ಯಂತ ಮುಖ್ಯವಾದದ್ದಿರಬಹುದು. ಆದರೆ ಅದು ಈ ಪರಿಷತ್ತಿನ ದೃಷ್ಟಿ ಪರಿಧಿಯಿಂದ ಹೊರಗಡೆ ಇರತಕ್ಕದ್ದು. ಆ ರಾಷ್ಟ್ರಪ್ರಶ್ನೆಯ ಕಾರಣದಿಂದ ಕನ್ನಡಕ್ಕೆ ಅಪಾಯವೇನಾದರೂ ಸಂಭವಿಸು ವಂತಿದ್ದರೆ ಹೊರತು ಅಥವಾ ಲಾಭವೇನಾದರೂ ಆಗುವಂತಿದ್ದರೆ ಹೊರತು

ಮಿಕ್ಕಂತೆ ಅದರ ಸುದ್ದಿ — ಸಂಸ್ಥಾಮರ್ಯಾದೆಯಿಂದ ನೋಡಿದರೆ — ಈ ಪರಿಷತ್ತಿಗೆ ಸಂಬಂಧಪಟ್ಟದ್ದಲ್ಲವೆಂದು ನನ್ನ ಭಾವನೆ."

"ಹಿಂದಿಗೆ ರಾಷ್ಟ್ರ ಭಾಷೆಯ ಪಟ್ಟವನ್ನು ಕಟ್ಟ ಹೊರಟಿರುವವರು ಸದ್ಯಕ್ಕೆ ಕೆಲಮಂದಿ ರಾಜಕೀಯಸ್ಥರು ಮತ್ತು ಹಿಂದಿಯೇ ತಮ್ಮ ಹುಟ್ಟು ನುಡಿಯಾಗಿರುವವರು....ರಾಜಕೀಯವು ನಮ್ಮ ಜೀವನದಲ್ಲಿ ಪ್ರಧಾನವಾದ ಒಂದಂಶ, ಆದರೆ ಅದು ಒಂದಂಶ ಮಾತ್ರವೇ. ಅದು ಜೀವನದ ಸರ್ವಸ್ವವಾಗದು. ರಾಜಕೀಯ ದೃಷ್ಟಿಯಿಂದ ತೋರುವ ಒಂದು ಆಲೋಚನೆ ಇತರ ದೃಷ್ಟಿಗಳಿಂದ ಹೇಗೆ ಕಾಣುತ್ತದೆಂಬುದನ್ನು ನಾವು ವಿಚಾರಿಸಬೇಕು. ಇದು ಮನುಷ್ಯ ಜೀವನದ ನಾನಾ ಕ್ಷೇತ್ರಗಳನ್ನೂ ಸಂಸ್ಕೃತಿಯ ನಾನಾ ಸಾಮಗ್ರಿಗಳನ್ನೂ ಪರೀಕ್ಷಿಸಿರುವವರು ನಾನಾ ಮುಖಗಳಿಂದ ವಿಚಾರಿಸಿ ನಿರ್ಣಯಿಸಬೇಕಾದ ಪ್ರಶ್ನೆಯೇ ಹೊರತು ಕೇವಲ ರಾಜಕೀಯಸ್ಥರು ಮಾತ್ರವೇ ನಿರ್ಣಯಿಸ ಬಹುದಾದ ಪ್ರಶ್ನೆಯಲ್ಲ.

"ಕನ್ನಡಿಗನ ಜೇಬಿನಲ್ಲಿರುವುದು ಒಂದು ಕಾಸಾದರೆ ಅವನು ಅದನ್ನು ಕನ್ನಡ ಪುಸ್ತಕಕ್ಕೆ ಕೊಡಬೇಕೆ? ಅಥವಾ ಹಿಂದೀ ಕಿತಾಬಿಗೆ ಕೊಡಬೇಕೆ?

"ಕನ್ನಡ ಪರಿಷತ್ತಿನ ಕಾರ್ಯಕರ್ತರ ಮೇಲೆ ಬಂದಿರುವ ದೂರು ಅವರು ಕನ್ನಡವನ್ನು ಕೈಬಿಟ್ಟರೆಂಬುದಲ್ಲ. ಕನ್ನಡಕ್ಕಾಗಿ ಕೈಎತ್ತಿದರೆಂಬುದು. ಹಿಂದಿ ಯನ್ನು ರಾಷ್ಟ್ರಭಾಷೆಯಾಗಿಸುವ ಅವಸರದಲ್ಲಿ ಕನ್ನಡಿಗರು ಕನ್ನಡವನ್ನು ಮರೆಯಬಾರದೆಂದು ಹೇಳಿದ್ದು ಅವರ ಅಪರಾಧ." ಅಖಿಲ ಕರ್ಣಾಟಕ ಹಿಂದೀ ಪರಿಷತ್ತಿನ 8ನೆಯ ಅಧಿವೇಶನವು 26–3–1937 ರಂದು ಡಿ ವಿ ಜಿ ಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಅಲ್ಲಿ ಮಾತನಾಡುತ್ತ ಅವರು "ಬೆಂಗಳೂರಿನಲ್ಲಿ ಕನ್ನಡವು ಪ್ರತಿಯೊಬ್ಬರ ಮಾತೃಭಾಷೆಯಲ್ಲ. ಮಹಾರಾಷ್ಟ್ರ ತೆಲುಗು ತಮಿಳು ಮಾತನಾಡುವವರಿರುವರು. ಪ್ರತಿಯೊಬ್ಬರೂ ತಮ್ಮ ಮಾತೃಭಾಷೆಯನ್ನು ಕಲಿಯುವುದು ಅತ್ಯಾವಶ್ಯಕ. ಅನಂತರ ದೇಶಭಾಷೆಯನ್ನು ಕಲಿಯಬೇಕು. ಕನ್ನಡ ಮೈಸೂರು ಸಂಸ್ಥಾನದ ಮಾತೃಭಾಷೆಯೆಂದು ಹೇಳಬಹುದು. ಆದರೆ ಹಿಂದಿ ಭಾಷೆಗಿರುವಂತೆ ಇಂಗ್ಲಿಷ್ ಭಾಷೆಗೆ ಪ್ರಚಾರಕರಿಲ್ಲ. ಅದು ತನ್ನಷ್ಟಕ್ಕೆ ತಾನು ಬೆಳೆಯುತ್ತಿದೆ. ಅದು ಬಹಳ ಅಗತ್ಯವಾದ ಭಾಷೆ. ಆದರೆ ನಮ್ಮ ಧರ್ಮ ಸಂಸ್ಕೃತಿ ಇವುಗಳನ್ನು ಕಲಿಯಬೇಕಾದರೆ ಸಂಸ್ಕೃತಜ್ಞಾನವಿರಬೇಕು. ....ನಮ್ಮ ಸಮಸ್ತ ಭರತಖಂಡಕ್ಕೆ ಹಿಂದಿಯೂ ಆವಶ್ಯಕ ಎಂದು ಹೇಳುವವರು ಆಸೇತುಹಿಮಾಚಲದವರೆಗೆ ಒಂದೇ ಮತವಿದ್ದಿದ್ದರೆ ಎಷ್ಟು ಅನುಕೂಲ

ವಾಗಿದ್ದಿತೆಂಬುದನ್ನು ಊಹಿಸಬಹುದು. ಆದರೆ ಅದು ಸಾಧ್ಯವಿಲ್ಲ. ಅದೇ ರೀತಿ ಏಕಭಾಷೆಯೂ ಸಾಧ್ಯವಿಲ್ಲವೆಂದು ನನ್ನ ಅಭಿಪ್ರಾಯ. ಭಾರತದ ಐಕ ಮತ್ಯವು ಮತದ ಐಕ್ಯತೆಯಿಂದಲಾಗಲಿ ಏಕ ಭಾಷೆಯಿಂದಲಾಗಲಿ ಸಾಧ್ಯವಿಲ್ಲ. ಪರಸ್ಪರ ವಿಶ್ವಾಸದಿಂದಲೂ ಮತ್ತು ಸೋದರತ್ವದಿಂದಲೂ ಐಕ್ಯತೆಯನ್ನು ಸಂಪಾದಿಸಲು ಯತ್ನಿಸಬೇಕು. ನಮ್ಮ ದೇಶಕ್ಕೆ ಇಂಗ್ಲಿಷ್ ಭಾಷೆ ಬಂದದ್ದು ಹಾನಿಯನ್ನು ತಂದೊಡ್ಡಿದೆಯೆಂದು ಕೆಲವರು ಭಾವಿಸಿರುತ್ತಾರೆ. ನಾನು ಆ ವರ್ಗಕ್ಕೆ ಸೇರಿದವನಲ್ಲ. ನಮ್ಮ ದೇಶದಲ್ಲಿರುವ ಪರದೇಶೀಯರನ್ನು ಓಡಿ ಸುವ ಬುದ್ಧಿಯನ್ನು ಕರುಣಿಸಿದುದು ಇಂಗ್ಲಿಷೇ ಆಗಿದೆ. ಧರ್ಮಕ್ಕೂ ಮತ್ತು ದೇಶಕ್ಕೂ ಹೊಡೆದಾಡುತ್ತಿರುವವರು ಇಂಗ್ಲಿಷ್ ವ್ಯಾಸಂಗ ಮಾಡಿದ ಮೇಧಾವಿ ಗಳು. ಅಖಿಲ ಕರ್ನಾಟಕ ಹಿಂದಿ ಪರಿಷತ್ತಿನವರು ಕನ್ನಡಭಾಷೆಗೆ ಧಕ್ಕೆ ತಗಲದಂತೆ ಹಿಂದಿ ಪ್ರಚಾರಮಾಡುವಂತೆ ಸೂಚಿಸಿರುವರು. ಅವರು ಹಿಂದಿಯ ಜತೆಗೆ ಕನ್ನಡ ಪ್ರಚಾರವನ್ನೂ ಮಾಡಲಿ. ಹಿಂದಿ ಗ್ರಂಥಗಳ ಜತೆಗೆ ಕನ್ನಡ ಗ್ರಂಥಗಳ ಪರಿಚಯವನ್ನು ಮಾಡಿಕೊಡಲಿ. ಕನ್ನಡವನ್ನು ತಿಳಿಯದಿರುವವರಿಗೆ ಕನ್ನಡವನ್ನು ಹೇಳಿಕೊಡದೆ ಹಿಂದಿಯನ್ನು ಹೇಳಿಕೊಡದಿರಲಿ."

27–3–1937 ರ 'ವಿಶ್ವಕರ್ಣಾಟಕ' ಈ ಸಂಪಾದಕೀಯವನ್ನು ಬರೆ ಯಿತು. "ಅಖಿಲ ಕರ್ಣಾಟಕ ಹಿಂದಿ ಪರಿಷತ್ತಿನ ಎಂಟನೆಯ ಅಧಿವೇಶನವು ನಿನ್ನೆ ಮಲ್ಲೇಶ್ವರದಲ್ಲಿ ನಡೆಯಿತು. ಶ್ರೀ ಡಿ. ವಿ ಗುಂಡಪ್ಪನವರು ಅಧ್ಯಕ್ಷತೆ ವಹಿ ಸಿದ್ದರು. ಅವರು ಬಹಳ "ಆಲೋಚನೆ ಮಾಡಿ" ಅನಂತರ ಈ ಸ್ಥಾನವನ್ನು ಅಂಗೀಕರಿಸಿದರು. ಏಕೆಂದರೆ "ನಾನು ಸಾಹಿತ್ಯ ಪರಿಷತ್ತಿನ ಜವಾಬ್ದಾರಿ ಯುತನಾದ ಅಧಿಕಾರಿ. ಕನ್ನಡಕ್ಕೆ ಅಪಾಯವಾಗದಂತೆ ನೋಡಿಕೊಳ್ಳುವುದು ನನ್ನ ಧರ್ಮವಾಗಿದೆ. ಆದುದರಿಂದಲೇ ನಾನು ಹಿಂದಿ ಪ್ರಚಾರಕ್ಕೆ ಸೇರುವುದು ಅಸಮಂಜಸವೆಂದು ಸುಮ್ಮನಿದ್ದೆ." ಆದರೆ ಶ್ರೀ ಡಿ. ವಿ. ಗುಂಡಪ್ಪನವರ ದೃಷ್ಟಿಪರಿವರ್ತನಕ್ಕೆ ಒಂದು ಪ್ರಕರಣವು ಕಾರಣವೆನಿಸಿತು. ಅವರ ಬಾಯಿಂದಲೇ ಆ ಪ್ರಕರಣವನ್ನು ಕೇಳಿ. "ಹಿಂದಿಯ ಪ್ರಭಾವವೆಂತಹು ದೆಂಬುದನ್ನು ಕಳೆದ ಚುನಾವಣೆಯ ಕಾಲದಲ್ಲಿ ಅರಿತೆನು. ಬೆಂಗಳೂರಿನಲ್ಲಿ ಉತ್ತರ ದೇಶದಿಂದ ಬಂದ ಜನರು ನೆಲಸಿರುವರು. ಅವರು ಮೈಸೂರಿನ ಪ್ರಜೆ ಗಳಾಗಿರುವರು. ಅವರಿಗೆ ವೋಟಿನ ಹಕ್ಕಿದೆ. ಅವರಿಗೆ ಹಿಂದಿಯ ಹೊರತು ಕನ್ನಡ ಇಂಗ್ಲಿಷ್ ತೆಲುಗು ಭಾಷೆಗಳಲ್ಲಿ ಮಾತನಾಡಿದರೆ ತಿಳಿಯುವುದಿಲ್ಲ. ಅದ್ದರಿಂದ ಹಿಂದಿಯು ದಕ್ಷಿಣ ದೇಶದಲ್ಲಿಯೂ ಸಹ ಎಷ್ಟು ಅವಶ್ಯವಾದ ಭಾಷೆ

ಯೆಂಬುದು ತಿಳಿದು ಬಂದಿತು." ಇಂಥ ಅಲ್ಪ ಸಂದರ್ಭವು ಶ್ರೀ ಡಿ. ವಿ. ಗುಂಡಪ್ಪನವರಂಥಹ ಜ್ಞಾನಸನಿಧಿಗಳಿಗೆ ತಿಳಿವಳಿಕೆಯನ್ನು ಕೊಟ್ಟದ್ದು ಪರಮಾಶ್ಚರ್ಯಕರವಾದ ವಿಷಯ. ಏನಾದರೂ ಆಗಲಿ; ಹಿಂದಿಯ ವಿರುದ್ಧ ಪಡೆಯಲ್ಲಿದ್ದ ಶ್ರೀ ಗುಂಡಪ್ಪನವರು ಅದರ ಪ್ರೇಮಿಗಳ ವರ್ಗಕ್ಕೆ ಬಂದುದಕ್ಕಾಗಿ ಬಹಳ ಸಂತೋಷಪಡುತ್ತೇವೆ. ಏಕೆಂದರೆ ಕೆಲವು ಕಾಲದಿಂದ ಕರ್ಣಾಟಕ ಸಾಹಿತ್ಯ ಪರಿಷತ್ತಿನಲ್ಲಿ ಪ್ರತ್ಯಕ್ಷವಾಗಿಯೂ ಅಪ್ರತ್ಯಕ್ಷವಾಗಿಯೂ 'ಹಿಂದಿ-ಕನ್ನಡ ವಾದ"ವು ನಡೆಯುತ್ತಿದೆ. ಈ ವಾದದಿಂದ ವಾತಾವರಣವು ಕೊಂಚ ಕೆಟ್ಟದೆ. ಇದರಿಂದ ಅನಾರೋಗ್ಯ ಬೇರೂರೀತೆಂಬ ಭಯವು ಹಲವರನ್ನು ಬಾಧಿಸುತ್ತಿದೆ. ಈ ಅಂಶವು ಶ್ರೀ ಡಿ. ವಿ. ಗುಂಡಪ್ಪನವರನ್ನೂ ಬಾಧಿಸುತ್ತಿದೆ. ಆದುದರಿಂದಲೇ ಅವರು "ರಾಷ್ಟ್ರ ಭಾಷಾವಾದವನ್ನೆತ್ತಿ ಪರಿಷತ್ತಿನ ಶರೀರವನ್ನು ವಿಭಾಗಿಸುವುದು ಪರಿಷತ್ತಿನ ಉದ್ದೇಶಕ್ಕೆ ಅವಶ್ಯವಲ್ಲವೆಂದೂ ಮತ್ತು ಅದರ ಹಿತಕ್ಕೆ ಸಾಧಕವಲ್ಲವೆಂದೂ ನಾನು ತಿಳಿದಿದ್ದೇನೆ"— ಎಂದು ಒಂದು ವರ್ಷದ ಹಿಂದೆಯೇ ಹೇಳಿದ್ದರು. ಶ್ರೀ ಡಿ. ವಿ. ಗುಂಡಪ್ಪನವರು ತಮ್ಮ ಮನಸ್ಸಿನ ಬಾಗಿಲನ್ನು ಸದಾ ತೆರೆದೇ ಇರುತ್ತಾರೆ. ಯಾವದಾದರೊಂದು ವಾದದಲ್ಲಿ ಬದಲಾವಣೆಯಾಗಬೇಕಾದ ಅವಶ್ಯಕತೆ ಕಂಡು ಬಂದರೆ, ಅದು ಅವರಿಗೆ ಒಪ್ಪಿತವಾಗಿ ಕಂಡು ಬಂದರೆ, ಆ ಬದಲಾವಣೆಯನ್ನು ತಮ್ಮ ರೀತಿ ನೀತಿಗಳಲ್ಲಿ ತೋರಿಸಲು ಕೊಂಚವೂ ಹಿಂತೆಗೆಯುವುದಿಲ್ಲ. ಇದೊಂದು ಉದಾರ ಗುಣ. "ಹಿಂದಿಯಲ್ಲಿ ಯಾರಿಗೂ ಮಾತ್ಸರ್ಯವಿಲ್ಲ. ಹಿಂದಿಯು ದೇಶದ ಏಳಿಗೆಯ ಭಾಷೆಯಾಗಿದೆ. ದೇಶದ ಹಿತ ಸಾಧನೆಯ ಭಾಷೆಯೆಂಬುದರಲ್ಲಿ ವಾದವೇ ಇಲ್ಲ"—ಎಂಬುದಾಗಿ ಶ್ರೀ ಡಿ. ವಿ. ಗುಂಡಪ್ಪನವರು ಹೇಳಿದರು. ಇನ್ನುಮೇಲಾದರೂ ಕನ್ನಡ ನಾಡಿನಲ್ಲಿ 'ಹಿಂದೀ ಕನ್ನಡ ಜಗಳ'ವು ನಿರ್ಮೂಲವಾದೀತೆಂದು ನಾವು ನಿರೀಕ್ಷಿಸಿಕೊಂಡಿದ್ದೇವೆ."

ಇಲ್ಲಿ "ಹಿಂದಿಯು ದೇಶದ ಏಳಿಗೆಯ ಭಾಷೆಯಾಗಿದೆ" ಎಂದು ಡಿ ವಿ ಜಿ ಹೇಳಿದಂತೆ 'ವಿಶ್ವಕರ್ಣಾಟಕ' ಎತ್ತಿ ತೋರಿಸಿರುವುದನ್ನು ಕುರಿತು ಡಿ ವಿ ಜಿ ಆ ಪತ್ರಿಕೆಯ ಸಂಪಾದಕರಿಗೆ ಹೀಗೆ ಒಂದು ಪತ್ರ ಬರೆದರು. "ವಾಸ್ತವವಾಗಿ ಆ ಮಾತುಗಳು ನನ್ನ ಬಾಯಿಂದ ಹೊರಡಲಿಲ್ಲವೆಂದು ನಾನು ವಿಜ್ಞಾಪಿಸಬೇಕಾಗಿದೆ. ಯಾರಾದರೂ ಯಾವ ಭಾಷೆಯನ್ನಾದರೂ ಕುರಿತು 'ಅದು ಏಳಿಗೆಯ ಭಾಷೆ' ಎಂದು ಹೇಳಿದ್ದಿದ್ದರೆ, ಅವರನ್ನು ನಾನು "ಹಾಗೆಂದರೆ ಅರ್ಥವೇನು ?" ಎಂದು ಕೇಳಿರುತ್ತಿದ್ದೆ. ಏಕೆಂದರೆ ಏಳಿಗೆ ತಡೆಯುವ ಮತ್ತು ಏಳಿಗೆಗೆ ಸಾಧಕವಾಗ

ಬಲ್ಲ ಶಕ್ತಿ ನನಗೆ ತಿಳಿದಿರುವ ಎಲ್ಲ ಭಾಷೆಗಳಿಗೂ ಇರುತ್ತವೆಂದು ನನ್ನ ನಂಬಿಕೆ."

"ಹಿಂದೀ ವಿವಾದದ ವಿಷಯದಲ್ಲಿ ನನ್ನ ಅಭಿಪ್ರಾಯವೇನೆಂಬುದನ್ನು ನನ್ನ ಸ್ವಂತ ಮಾತುಗಳಲ್ಲಿಯೇ ತಿಳಿಸಲು ತಮ್ಮ ಅಪ್ಪಣೆ ಬೇಡುತ್ತೇನೆ. ಕನ್ನಡ ನಾಡಿನವನು ಮೊದಲು ಕನ್ನಡವನ್ನು ಕಲಿಯಬೇಕು. ಜೈಮಿನಿ ಭಾರತ ವನ್ನು ಓದಿ ಅರ್ಥಮಾಡಿಕೊಳ್ಳುವಷ್ಟರ ಕನ್ನಡ ಜ್ಞಾನವಾದರೂ ಅವನಿಗೆ ಬಂದ ಬಳಿಕ ಅಂಥವನು ಮಿಕ್ಕ ಪ್ರಪಂಚದೊಡನೆ ವ್ಯವಹಾರ ನಡಸುವುದ ಕ್ಕಾಗಿ, ಇಂಗ್ಲಿಷನ್ನು ಕಲಿತುಕೊಳ್ಳಲು ಅನುಕೂಲವಾಗಲಿ, ಶಕ್ತಿಯಾಗಲಿ ಇಲ್ಲದೆ ಹೋದರೆ, ಇಂಡಿಯದ ಇತರ ಪ್ರಾಂತಗಳವರೊಡನೆ ಸಾಮಾನ್ಯ ವ್ಯವ ಹಾರಕ್ಕಾಗಿ ಹಿಂದೀ, ಹಿಂದೂಸ್ತಾನೀಯನ್ನು ಕಲಿತುಕೊಳ್ಳಬಹುದು."

ಕನ್ನಡ ಸಾಹಿತ್ಯ ಪರಿಷತ್ತಿನ ವಸಂತ ಸಾಹಿತ್ಯೋತ್ಸವದ ಅಂಗವಾಗಿ ಭಾಷಾ ಶಿಕ್ಷಣ ಗೋಷ್ಠಿಯೊಂದು 12.4.1941 ರಂದು ಡಿ ವಿ ಜಿ ಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಗೋಷ್ಠಿಯ ಪ್ರಾರಂಭದಲ್ಲಿ ಮಾತನಾಡುತ್ತ ಅವರು :

"ಭಾಷಾ ಶಿಕ್ಷಣದ ಪ್ರಶ್ನೆ ಈ 10–15 ವರ್ಷಗಳಿಂದ ಅನೇಕರ ಗಮನಕ್ಕೆ ಬಂದಿದೆ. ಕನ್ನಡದ ಏಳಿಗೆಗೆ ಹಿಂದಿನಿಂದ ಸಹಾಯ ಮಾಡುತ್ತ ಬಂದಿರುವ ಸಂಸ್ಕೃತದ ಜೊತೆಗೆ ಈಗ, ಇಲ್ಲಿಂದಾಚೆಗೆ ಇಂಗ್ಲಿಷ್ ಕೂಡ ಅವಶ್ಯವಾಗಿದೆ. ಇಂದು ಕನ್ನಡ ನಾಡಿನಲ್ಲಿ ನಮ್ಮ ನಮ್ಮ ಮನೆಗಳಲ್ಲಿ ನಾವು ಯಾವ ಮಾತನ್ನೇ ಆಡಿದರೂ ಕನ್ನಡವೇ ನಮ್ಮ ಮುಖ್ಯ ಸ್ವಭಾಷೆಯಾಗಿದೆ. ನಮ್ಮ ಮುಖ್ಯ ಗಮನ ಕನ್ನಡದ ಮೇಲೆ ಇರಬೇಕಾದದ್ದು ಸಹಜ. ಮಿಕ್ಕ ಭಾಷೆಗಳನ್ನು ಕನ್ನಡಕ್ಕೆ ಪುಷ್ಟಿ ಕೊಡುವ ರೀತಿಯಲ್ಲಿ ಉಪಯೋಗಿಸಿಕೊಳ್ಳಬೇಕು.

"ಕನ್ನಡ ಜನ ಸ್ವಭಾಷೆಯ ಪುರೋಭಿವೃದ್ಧಿಯನ್ನು ಕುರಿತು ಆಲೋಚಿಸ ಹೊರಟರೆ, ಅವರಿಗೆ ಹಿಂದಿ ಮೊದಲಾದ ಅನ್ಯ ಭಾಷೆಗಳ ಮೇಲೆ ದ್ವೇಷವೆಂದು ಯಾರೂ ಅಭಿಪ್ರಾಯಪಡಬಾರದು. ಕನ್ನಡ ಭಾಷೆಯ ಬೆಳವಣಿಗೆಗೆ ಅನೇಕ ಇತರ ಭಾಷೆಗಳ ಸಹಾಯ ಅವಶ್ಯವೆಂಬುದನ್ನು ನಾವು ಚೆನ್ನಾಗಿ ಕಂಡುಕೊಂಡಿ ದ್ದೇವೆ. ಇತರ ಭಾಷೆಗಳು ಕನ್ನಡಕ್ಕೆ ಎಷ್ಟು ಮಾತ್ರ ಸಹಾಯವಾಗಬಲ್ಲವೋ ಅಷ್ಟುಮಾತ್ರ ಆ ಭಾಷೆಗಳಲ್ಲಿ ನಮಗೆ ಆಸಕ್ತಿ ಇದ್ದೇ ಇರುತ್ತದೆ.

"ಕನ್ನಡವೊಂದರ ದೃಷ್ಟಿಯಿಂದ ಮಾತ್ರವೇ ಅಲ್ಲ, ಕನ್ನಡಿಗನು ಕಲಿಯ ಬೇಕಾಗಿರುವ ಇಂಗ್ಲಿಷ್ ಮೊದಲಾದ ಭಾಷೆಗಳ ದೃಷ್ಟಿಯಿಂದ ಸಹ ಅವನ ವ್ಯಾಕರಣ ಜ್ಞಾನ ಸಾಧುವಾಗಿರುವುದು ಅವಶ್ಯವಾಗಿದೆ. ವ್ಯಾಕರಣ ತತ್ತ್ವ

ಗಳು ಯಾವುದಾದರೊಂದು ಭಾಷೆಯಲ್ಲಿ ಮೊದಲು ವಿದ್ಯಾರ್ಥಿಯ ಸ್ವಾಧೀನಕ್ಕೆ ಬಂದರೆ, ಆಮೇಲೆ ಅವನು ಅದೇ ತತ್ತ್ವಗಳನ್ನು ಇತರ ಭಾಷೆಗಳಿಗೆ ಅನ್ವಯಿಸಿ ಕೊಳ್ಳುವುದು ಸುಲಭವಾಗುತ್ತದೆ.

"ಇಂದು ಮಾತ್ರವಲ್ಲದೆ ಮುಂದೆಯೂ ಬಹು ವರ್ಷಗಳವರೆಗೆ ನಮ್ಮ ಭಾಷೆಯ ಏಳಿಗೆಗೆ ಇಂಗ್ಲಿಷ್ ಆವಶ್ಯಕವಾಗಿದೆ. ದೇಶದ ಯೋಗಕ್ಷೇಮದ ದೃಷ್ಟಿಯಿಂದ ಪ್ರಾಯಶಃ ಇನ್ನೂ ನೂರು ವರ್ಷದ ಮಟ್ಟಿಗಾದರೂ ಇಂಗ್ಲಿಷನ್ನು ನಾವು ಬಿಡುವಂತಿಲ್ಲ. ಇಂಗ್ಲಿಷ್ ಭಾಷೆಯಲ್ಲಿರುವ ರಸವತ್ತಾದ ಜ್ಞಾನಪ್ರದ ವಾದ ಗ್ರಂಥಗಳನ್ನು ನಾವು ನಮ್ಮವನ್ನಾಗಿ ಇನ್ನೂ ರೂಡಿಸಿಕೊಳ್ಳಬೇಕಾಗಿದೆ. ಆದ್ದರಿಂದ ನಮ್ಮಲ್ಲಿ ಕನ್ನಡದ ಜ್ಞಾನದ ಜೊತೆಗೆ ಇಂಗ್ಲಿಷ್ ಜ್ಞಾನವೂ ಹೆಚ್ಚಬೇಕಾಗಿದೆ.

"ಹೊಸ ಸಾಹಿತ್ಯ ರಚನೆಗೆ ಸಂಸ್ಕೃತ ಜ್ಞಾನ ಆವಶ್ಯಕ. ಹೊಸ ಸಂಗತಿ ಗಳನ್ನೂ ಸಂದರ್ಭಗಳನ್ನೂ ವಿವರಿಸಲು ಹೊಸ ಮಾತುಗಳನ್ನು ನಾವು ಮಾಡಿ ಕೊಳ್ಳಬೇಕಾಗಿದೆ. ನವೀನ ಪದರಚನೆಯಿಲ್ಲದೆ ನವೀನ ಸಾಹಿತ್ಯವಾಗುವುದಿಲ್ಲ. ಹಳಗನ್ನಡ ಸಾಹಿತ್ಯದ ಅಭ್ಯಾಸಕ್ಕೂ ಸಂಸ್ಕೃತ ಪದಗಳ ಜ್ಞಾನ ಬೇಕು. ಪಂಪ, ಷಡಕ್ಷರಿ ಮುಂತಾದವರ ಗ್ರಂಥಗಳನ್ನು ಓದಿ ಅವುಗಳ ಸಾರವನ್ನು ಗ್ರಹಿಸಲು ಸಂಸ್ಕೃತ ಶಬ್ದಗಳ ಅರ್ಥ ಚೆನ್ನಾಗಿ ತಿಳಿದಿರಬೇಕೆಂದು ಬೇರೆ ಹೇಳ ಬೇಕಾಗಿಲ್ಲ. ನಾವು ಹೊಸ ಸಾಹಿತ್ಯ ಬರೆಯುವಾಗ ಕನ್ನಡದ ಮಾತನ್ನೇ ಬಳಸುವೆವೆಂದು ಹಟತೊಟ್ಟು ಕೂತುಕೊಳ್ಳಲಾಗುವುದಿಲ್ಲ. ಹಾಗೆ ಕೂತರೆ ಶಬ್ದದಾರಿದ್ರ್ಯ ಹೆಚ್ಚುವುದು. ಎಂದರೆ ಸಂಸ್ಕೃತವನ್ನೇ ಹೆಚ್ಚಾಗಿ ಬಳಸ ಬೇಕೆಂದು ನನ್ನ ಅಭಿಪ್ರಾಯವಲ್ಲ. ಯಾವುದೂ ಅತಿರೇಕಕ್ಕೆ ಹೋಗ ಕೂಡದು."

25.5.1940ರಲ್ಲಿ ಮೈಸೂರು ಪಂಡಿತ ಮಂಡಲದ ಆರನೆಯ ಸಮ್ಮೇಳ ನಕ್ಕೆ ಅಧ್ಯಕ್ಷರಾಗಿದ್ದರು ಡಿ ವಿ ಜಿ ಯವರು. ಆಗ ಮಾತನಾಡುತ್ತ ಅವರು "ಕನ್ನಡ ಸಂಸ್ಕೃತಗಳ ಪ್ರಾಬಲ್ಯದಿಂದ ಇಂಗ್ಲಿಷಿಗೆ ಕಾಲು ಮುರಿಯಿತೆಂದು ಕೆಲ ವರು ಹೇಳುತ್ತಾರೆ. ಈ ಮಾತು ಶುದ್ಧ ಅಸಂಗತವೆಂದು ನಾನು ತಿಳಿದಿದ್ದೇನೆ. ಇಂಗ್ಲಿಷು ಚೆನ್ನಾಗಿರಬೇಕಾದರೆ ಮೊದಲು ಕನ್ನಡ ಚೆನ್ನಾಗಿರಬೇಕು. ಈ ತತ್ತ್ವವನ್ನು ಸಮಸ್ತರೂ ಗ್ರಹಿಸುವುದು ನಮ್ಮ ವಿದ್ಯಾ ಪದ್ಧತಿಯಲ್ಲಿ ಮೊಟ್ಟ ಮೊದಲು ಆಗಬೇಕಾದ ಸುಧಾರಣೆಗಳಲ್ಲೊಂದು" ಎಂದರು.

ರಾಜಾಜಿಯವರಿಗೆ 8.11.46 ರಲ್ಲಿ ಬರೆದ ಪತ್ರದಲ್ಲಿ "I am all for

the supremacy of the "regional language". But I would not weaken the position of English in the High school and College courses for some years. However let the matter be considered by an authoritative body in a comprehensive way" ಎಂದಿದ್ದಾರೆ.

ಅಕ್ಟೋಬರ್ 1941 ರ "ಕರೆಂಟ್ ಸೈನ್ಸ್" ಎಂಬ ಪತ್ರಿಕೆಯಲ್ಲಿ Scientific Terminology in Indian Languages (ದೇಶೀಯ ಭಾಷೆಗಳಲ್ಲಿ ವಿಜ್ಞಾನದ ಪಾರಿಭಾಷಿಕ ಪದಗಳು) ಎಂಬುದನ್ನು ಕುರಿತು ಬರೆಯುತ್ತ, ವಿಜ್ಞಾನದ ಬೆಳವಣಿಗೆ ಹೆಚ್ಚುತ್ತ, ನಮ್ಮ ವಿದ್ಯಾಭ್ಯಾಸ ಪದ್ಧತಿಯಲ್ಲಿ ವಿಜ್ಞಾನದ ಭಾಗ ಹೆಚ್ಚುತ್ತಿರುವಾಗ, ದೇಶ ಭಾಷೆಗಳಲ್ಲಿ ವಿದ್ಯಾಭ್ಯಾಸ ನಡೆಯಬೇಕಾಗಿರುವಾಗ, ಭಾರತದೇಶದ ಎಲ್ಲ ಭಾಷೆಗಳಿಗೂ ಸಾಮಾನ್ಯವಾದ ಪದಗಳನ್ನು ಹುಡುಕಿಕೊಳ್ಳುವುದು, ಸೃಷ್ಟಿಸುವುದು ಅಗತ್ಯವಾಗಿದೆ. ಇದಕ್ಕೆ ನಾವು ಬೇರೆ ಭಾಷೆಗಳಿಂದ ಪದಗಳನ್ನು ಎರವಲು ತಂದುಕೊಳ್ಳಲು ಸಂಕೋಚಪಡಬೇಕಾಗಿಲ್ಲ ಎಂದು ಹೇಳಿ ಇಂಗ್ಲಿಷ್ ಭಾಷೆ ಬೇರೆ ಭಾಷೆಗಳಿಂದ ಪದಗಳನ್ನು ತಂದುಕೊಂಡು ಹೇಗೆ ಶ್ರೀಮಂತವಾಗಿದೆ ಎಂದು ವಿವರಿಸಿ ಹೇಳಿದ್ದಾರೆ.

ಭಾಷೆಗಳ ಹೋರಾಟದಲ್ಲಿ ತಮ್ಮ ತೀರ್ಮಾನವೇನು ಎಂಬುದನ್ನು ಡಿಸೆಂಬರ್... ಡಿ ವಿ ಜಿ, 1958 ರಲ್ಲಿ ಪ್ರಕಟವಾದ "ಇಂಡಿಯದ ಭಾಷಾಪ್ರಶ್ನೆ, ಇಂಗ್ಲಿಷಿನ ಸ್ಥಾನ" ಎಂಬ ಚಿಕ್ಕ ಪುಸ್ತಕದಲ್ಲಿ ಸಂದೇಹಕ್ಕೆಡೆಯಿಲ್ಲದಂತೆ ವಿವರಿಸಿದ್ದಾರೆ.

ವಿದ್ಯಾಭ್ಯಾಸದಲ್ಲಿ ಪ್ರಾಥಮಿಕ ವಿದ್ಯಾ ಪ್ರಾರಂಭವು ಪ್ರಾದೇಶಿಕ ಭಾಷೆಯಲ್ಲಿ—ಮೈಸೂರಿನಲ್ಲಿ ಕನ್ನಡದಲ್ಲಿ—ಆಗತಕ್ಕದ್ದು. ಹೈಸ್ಕೂಲಿನಲ್ಲಿಯೂ ಹಾಗೆಯೇ. ಆದರೆ ಫಿಸಿಕ್ಸ್ ಕೆಮಿಸ್ಟ್ರಿ ಮೊದಲಾದ ವಿಜ್ಞಾನ ವಿಷಯಗಳನ್ನು ಬೋಧಿಸುವುದರಲ್ಲಿ ಉಪಾಧ್ಯಾಯನು ಯುಕ್ತ ಕಂಡಂತೆ ಇಂಗ್ಲಿಷನ್ನು ಹೆಚ್ಚಾಗಿ ಬಳಸಬಹುದು.

ಈ ಸಂದರ್ಭದಲ್ಲಿ ಕನ್ನಡದಲ್ಲಿ ವಾಕ್ಯರಚನೆಯನ್ನೂ ವ್ಯಾಕರಣದ ಮೊದಲ ಪಾಠಗಳನ್ನೂ ಕಲಿಸುವ ತರಗತಿಯಲ್ಲಿ ವಿದ್ಯಾರ್ಥಿಯ ಪೋಷಕರು ಅಪೇಕ್ಷಿಸಿದರೆ ಇಂಗ್ಲಿಷನ್ನು ಪ್ರಾರಂಭಿಸತಕ್ಕದ್ದು. ಯಾವ ವಿದ್ಯಾರ್ಥಿ ಹೈಸ್ಕೂಲ್ ದರ್ಜೆಗೆ ಹೋಗತಕ್ಕವನಲ್ಲವೋ ಅವನಿಗೆ ಪಾಠಶಾಲೆಯಲ್ಲಿ ಇಂಗ್ಲಿಷ್ ಕಲಿಸುವುದು ಅನಾವಶ್ಯಕ.

ಕಾಲೇಜಿನಲ್ಲಿ ಕಲಾವರ್ಗದ ವಿಷಯಗಳನ್ನು ಪ್ರದೇಶ ಭಾಷೆಯ ಮೂಲಕ ಬೋಧಿಸಬಹುದು. ವಿಜ್ಞಾನ ವರ್ಗದಲ್ಲಿ—ಇದರಲ್ಲಿ ಮನಶ್ಶಾಸ್ತ್ರ,

ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ವ್ಯವಹಾರಶಾಸ್ತ್ರ ಇವೂ ಸೇರುತ್ತವೆ—ಬೋಧನೆಗೆ ಇಂಗ್ಲಿಷೇ ಹೆಚ್ಚು ಉಪಯೋಗವಾಗಬೇಕಾದದ್ದು. ವಿಷಯವನ್ನು ಸುಲಭ ಪಡಿಸುವುದಕ್ಕೋಸ್ಕರ ದೇಶಭಾಷೆಯನ್ನು ಉಪಯೋಗಿಸಬಹುದು.

ರಾಜಕೀಯದಲ್ಲಿ ಪ್ರದೇಶರಾಜ್ಯವಾದ ಮೈಸೂರಿನಲ್ಲಿ ಸರಕಾರದ ಒಳ ಆಡಳಿತಗಳ ಬಗ್ಗೆ ಕನ್ನಡವನ್ನೇ ಉಪಯೋಗಿಸಬೇಕು. ಭಾರತ ಸಮಷ್ಟಿಯ ಕಾನೂನಿಗಾಗಲಿ ಆಡಳಿತಕ್ಕಾಗಲಿ ಒಳಪಟ್ಟ ವಿಚಾರಗಳಲ್ಲಿ ಮಾತ್ರ ಇಂಗ್ಲಿಷ್ ಅವಶ್ಯವಾಗುತ್ತದೆ.

ಶಾಸನ ಸಭೆಗಳಲ್ಲಿ ಆಯಾ ಪ್ರಾದೇಶಿಕ ಭಾಷೆ ಉಪಯೋಗವಾಗ ತಕ್ಕದ್ದು. ಸಮಷ್ಟಿ ಭಾರತದ ಶಾಸನ ಸಭೆಗಳಲ್ಲಿ ಮುಖ್ಯ ಭಾಷೆ ಇಂಗ್ಲಿಷಾ ಗಿದ್ದುಕೊಂಡು ಅದರ ಜೊತೆಗೆ ಇಂಡಿಯದ ರಾಜ್ಯ ನಿಬಂಧನೆಯಲ್ಲಿ ಹೆಸರಿಸಿ ರುವ ಭಾಷೆಗಳಲ್ಲಿ ಯಾವುದಾದರೂ, ಸದಸ್ಯನ ಸೌಕರ್ಯದಂತೆ, ಉಪಯೋಗ ಪಡೆಯಲು ಅವಕಾಶವಿರಬೇಕು.

ಅವರ ನಂಬಿಕೆ ಇದು: "ಕನ್ನಡವನ್ನೂ ಸಂಸ್ಕೃತವನ್ನೂ ಬಿಟ್ಟು ಇಂಗ್ಲಿಷಲ್ಲ. ಅವುಗಳ ಜೊತೆಗೆ — ಅವುಗಳ ಉಪಯೋಗಕ್ಕಾಗಿಯೇ — ಇಂಗ್ಲಿಷು. ಕನ್ನಡ ಸಾಹಿತ್ಯದ ಪರಿಪುಷ್ಟಿಗಾಗಿ, ಸಂಸ್ಕೃತದ ಪ್ರಯೋಜನಗಳು ಎಲ್ಲ ಮನುಷ್ಯ ಲೋಕಕ್ಕೂ ದೊರೆಯುವುದಕ್ಕಾಗಿ, ಬೇಕಾದದ್ದು ಆ ಇಂಗ್ಲಿಷ್ ಸಾಧನ. ನಮ್ಮ ಉದ್ದೇಶ ಇಂಗ್ಲೆಂಡನ್ನು ಬಲ ಪಡಿಸುವುದಲ್ಲ.— ಇಂಗ್ಲಿಷಿನ ಕೀರ್ತಿ ವಿಸ್ತರಣವಲ್ಲ. ನಮ್ಮ ಉದ್ದೇಶ ನಮ್ಮ ಜೀವನದ ಸರ್ವಾಂಗ ಸುಂದರತೆ. ನಮಗೆ ಸಮಸ್ತ ಮಾನವ ಪ್ರಪಂಚದ ಬುದ್ಧಿಕಾರ್ಯಗಳೂ ಮನಃಕಾರ್ಯ ಗಳೂ ಕೈವಶವಾಗಬೇಕು. ಆ ದಿಗ್ವಿಜಯಕ್ಕೆ ಆಯುಧ ಇಂಗ್ಲಿಷ್. ಅದು ನಮ್ಮ ನಮ್ಮ ಸ್ವಂತ ಭಾಷೆಗಳಿಗೆ—ಕನ್ನಡಕ್ಕೆ ಸಂಸ್ಕೃತಕ್ಕೆ—ಸಹಾಯಕ ಸ್ಥಾನ ದಲ್ಲಿರಬೇಕಾದದ್ದು. ಅದನ್ನಲ್ಲಿರಿಸಿ ಹೇಗೆ ಕೆಲಸ ಮಾಡಿಸಬೇಕೋ ಅದನ್ನರಿತು ಕೆಲಸ ತೆಗೆದುಕೊಳ್ಳಬೇಕೆಂಬುದು ನಮ್ಮ ನೀತಿ. ಅದು ಕನ್ನಡ ಜನದ ಬಲಕ್ಕಾಗಿ. ಭಾರತದ ಯಶಸ್ಸಿಗಾಗಿ."

ಸುಧಾರಣೆಗಳಿಗೆ ಒತ್ತಾಯ

1928 ರಿಂದ ಭಾರತದ ಸ್ವಾತಂತ್ರ್ಯ ಹೋರಾಟದ ಚಳವಳಿಯು ಒಂದು ಹೊಸ ಮಾರ್ಗವನ್ನು ಹಿಡಿಯಿತು ಎನ್ನಬಹುದು. ಅದರ ಮೊದಲನೆಯ ಅಂಶ ಬಡೋರ್ಲಿಯ ಸತ್ಯಾಗ್ರಹ.

1930, ಜನವರಿ 19, ರವೀಂದ್ರನಾಥ ಠಾಕೂರರು ಗಾಂಧಿಯವರನ್ನು ಕಾಣಲು ಸಬರ್ಮತಿ ಆಶ್ರಮಕ್ಕೆ ಬಂದು, 1930 ರಲ್ಲಿ ದೇಶಕ್ಕೇನು ಕಾದಿದೆ ಯೆಂದು ಗಾಂಧಿಯವರನ್ನು ಕೇಳಿದರು. “ನಾನು ಹಗಲೂ ರಾತ್ರಿ ಚಿಂತಿಸು ತ್ತಿದ್ದೇನೆ. ಸುತ್ತಲೂ ಮುಸುಕಿರುವ ಕತ್ತಲಲ್ಲಿ ಯಾವ ಬೆಳಕೂ ಕಾಣುವು ದಿಲ್ಲ” ಎಂದರು ಗಾಂಧಿ. ಅವರು ಆರು ವಾರಗಳ ಕಾಲ “ಒಳದನಿ”ಗಾಗಿ ಕಾದರು. “ಒಳದನಿ, ದೇವರ ದನಿಯಾದರೂ ಆಗಬಹುದು; ಪಿಶಾಚಿಯ ದನಿ ಯಾದರೂ ಆಗಬಹುದು. ಇಬ್ಬರೂ ಮಾನವ ಹೃದಯದಲ್ಲಿ ಹೋರಾಡುತ್ತಿರು ತ್ತಾರೆ. ದನಿಯ ಸ್ವಭಾವ ಕಾರ್ಯಗಳಿಂದ ನಿರ್ಧರವಾಗುತ್ತದೆ” ಎಂದು ಬರೆದರು. ಫೆಬ್ರವರಿ 27 ರಲ್ಲಿ ‘ಯಂಗ್ ಇಂಡಿಯಾ’ ಪತ್ರಿಕೆಯಲ್ಲಿ “ನಾನು ಸೆರೆಮನೆಗೆ ಹೋದಾಗ” ಎಂಬ ಸಂಪಾದಕೀಯದಲ್ಲಿ ಉಪ್ಪಿನ ತೆರಿಗೆಯನ್ನು ಖಂಡಿಸಿದರು. ಮಾರ್ಚ್ 3 ರಂದು, ಇನ್ನು ಒಂಬತ್ತು ದಿನಗಳಲ್ಲಿ ಸತ್ಯಾಗ್ರಹ ಪ್ರಾರಂಭವಾಗುವುದೆಂದು ಬರೆದರು. ಮಾರ್ಚ್ 12, ಸಬರ್ಮತಿಯನ್ನು ಬಿಟ್ಟು ದಂಡಿಯ ಕಡೆ ಹೊರಟರು. ಶಾಸನೋಲ್ಲಂಘನೆಯ ಚರಿತ್ರೆ ಪ್ರಾರಂಭವಾಯಿತು.

ಡಿ ವಿ ಜಿ ಯವರು ಯಾವ ನಂಬಿಕೆಯಿಂದ ಸಾರ್ವಜನಿಕ ಜೀವನವನ್ನು ನಡಸುತ್ತ ಬಂದಿದ್ದರೋ ಅದಕ್ಕೆ ವಿಪರೀತವಾದ ಮಾರ್ಗ ಇದು. ಆದರೆ ಇದರ ಪ್ರವರ್ತಕರೋ, ತಾವು ‘ದೈವ ಸಂಪನ್ಮಾರ್ಗ ದರ್ಶಕ’ರೆಂದು ಒಪ್ಪಿಕೊಂಡ ಗಾಂಧಿಯವರು. ಡಿ ವಿ ಜಿ ಯವರ ಜೀವನದಲ್ಲಿ ಗಾಂಧಿಯವರಲ್ಲಿ ವೈಯಕ್ತಿಕ ವಾಗಿ ಭಕ್ತಿಯೂ, ಅವರ ರಾಜಕೀಯ ಮಾರ್ಗದಲ್ಲಿ ಸಂದೇಹವೂ ಕಾಣ ಬರುತ್ತದೆ.

“ತಾಯಿನಾಡು” ಪತ್ರಿಕೆಯ ಪ್ರತಿನಿಧಿಯು ಡಿ ವಿ ಜಿ ಯವರನ್ನು ಭೇಟಿ ಮಾಡಿದಾಗ ಅವರು “I sincerely and in all humility pray for the

speedy and overwhelming success of the Salt Satyagraha campaign ... what's more noteworthy today is not the campaign of repression by government which was only to be expected, but the enthusiasm with which the country has been responding to Mahatmaji's appeal in spite of the ruthlessness of government" ಎಂದು ಗಾಂಧಿಯವರ ನೇತೃತ್ವದಲ್ಲಿ ನಡೆಯುತ್ತಿದ್ದ ಆಂದೋಳನಕ್ಕೆ ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದ್ದಾರೆ. ಈ ಸಂದರ್ಭದಲ್ಲಿಯೇ ಅವರು ಧರ್ಮಾಂಬುಧಿ ಕೆರೆಯ ಅಂಗಳದಿಂದ ಈಗ ಕೆಂಪೇಗೌಡ ಸರ್ಕಲ್ ಇರುವ ಕಡೆಗೆ ಖಾದಿ ಪೈಜಾಮಾ ಧರಿಸಿ, ತಕಲಿಯಲ್ಲಿ ನೂಲುತ್ತಾ ಮೆರವಣಿಗೆಯಲ್ಲಿ ಭಾಗವಹಿಸಿದರೆಂದು ವಿ. ಎಸ್. ನಾರಾಯಣರಾಯರೂ, ಗೋರೂರು ರಾಮಸ್ವಾಮಿ ಅಯ್ಯಂಗಾರ್ಯರೂ ಜ್ಞಾಪಿಸಿಕೊಳ್ಳುತ್ತಾರೆ.

ಮುಂದೆ 1932 ರಲ್ಲಿ ಇಂಡಿಯದ ಸ್ವಾತಂತ್ರ್ಯ ಭಾವನೆಯನ್ನು, ಹೊಸದಾಗಿ ಬಂದಿದ್ದ ಬ್ರಿಟಿಷ್ ಸರಕಾರ ಹೆಚ್ಚು ತೀವ್ರತೆಯಿಂದ ಎದುರಿಸಲಾರಂಭಿಸಿದಾಗ, ತಾನು ಸತ್ಯಾಗ್ರಹ ಪ್ರಾರಂಭಿಸಬೇಕಾಗಬಹುದೆಂದು ಗಾಂಧಿಯವರು ತಿಳಿಸಿದರು. ಜನವರಿ 3ನೆಯ ತಾರೀಖು ಗಾಂಧಿಯವರು ರಾಷ್ಟ್ರಕ್ಕೆ "ಸರಕಾರ ನನ್ನ ಮುಖದ ಮೇಲೆ ಬಾಗಿಲು ಮುಚ್ಚಿದೆ" ಎಂದು ತಿಳಿಸಿದರು. ಮಾರನೆಯ ದಿನ ಸರಕಾರ ಅವರ ಮುಖದ ಮೇಲೆ ಕಬ್ಬಿಣದ ಬಾಗಿಲನ್ನು ನಿಜವಾಗಿಯೇ ಮುಚ್ಚಿತು.

ಜನವರಿ 4, 1932, ರಾತ್ರಿ 9 ಘಂಟೆಯಲ್ಲಿ ಡಿ ವಿ ಜಿ ಮಿರ್ಜಾಸಾಹೇಬರಿಗೆ ಬರೆದ ಪತ್ರ :

"I know you are as deeply disturbed in mind as any countryman of yours must naturally be over the arrest of Gandhiji, and would have cancelled the social party of tomorrow evening if you were as free as I am. You would thus, I feel sure, not misunderstand me for my not attending the function (which pleasure I was eagerly looking forward to) and would really sympathise with me."

ಅರ್ವಿನ್ ನಾಲಾ ರೈತರಿಗೆ ಪ್ರಾಪ್ತವಾಗಿದ್ದ ಕಷ್ಟನಷ್ಟಗಳನ್ನು ಹೇಳಿಕೊಳ್ಳಲು ಸುಮಾರು ನೂರು ಗಾಡಿಗಳಲ್ಲಿ ನಾಲ್ಕು ಸಾವಿರ ಜನ ರೈತರು ಬೆಂಗಳೂರಿಗೆ ಬಂದಿದ್ದರು. (ಈ ಕಥೆಯನ್ನು ಹೆಚ್.ಕೆ. ವೀರಣ್ಣ ಗೌಡರ

'ಬದುಕು–ಮೆಲುಕು' ಗ್ರಂಥದಲ್ಲಿ ನೋಡಬಹುದು.) ಅದನ್ನು ಕುರಿತು ಡಿ ವಿ ಜಿ ಅದೇ ಕಾಗದದಲ್ಲಿ ಹೀಗೆಂದರು.

"How about the Irwin canal ryots' 'walk-up'? On the whole, I am not happy that such things are taking p'ace. Cannot government be possibly more conciliatory? This mass remonstrance shows rare organisation and leadership and the spirit is significant. I feel it should be regarded with good humour and gentleness and shown every gesture of reasonablness and desire to afford relief. Some one tells me you heard them with patience and sympathy and I am glad (though of course not surprised)."

9.4.1933 ರಲ್ಲಿ ಮಧುಗಿರಿಯಲ್ಲಿ ನಡೆದ ಸರ್ವಪಕ್ಷ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದ ಡಿ ವಿ ಜಿ ಯವರು ಸರಕಾರದವರು ದೇಶೀಯ ಸಂಸ್ಥಾನಗಳನ್ನು ಕುರಿತು ಹೊರಡಿಸಿದ್ದ ಶ್ವೇತಪತ್ರವನ್ನು ಕುರಿತು ಮಾತನಾಡಿ, ದೇಶೀಯ ಸಂಸ್ಥಾನಗಳ ಪ್ರಜೆಗಳು ತಮ್ಮ ಅಭಿಪ್ರಾಯವನ್ನು ಸರಿಯಾಗಿ ವ್ಯಕ್ತಪಡಿಸದಿರುವುದೇ ಅವರ ಇಂದಿನ ಪರಿಸ್ಥಿತಿಗೆ ಕಾರಣವೆಂದು ಹೇಳಿದರು. ಇತರರ ಸಹಾಯಕ್ಕಾಗಿ ಕಾಯದೆ ತಾವಾಗಿಯೇ ತಮ್ಮ ಹಕ್ಕುಗಳಿಗಾಗಿ, ಜವಾಬ್ದಾರಿ ಸರಕಾರದ ಸ್ಥಾಪನೆಗಾಗಿ, ಆಂದೋಳನವನ್ನು ನಡಸಬೇಕೆಂದು ಸಲಹೆ ಮಾಡಿದರು.

1933ರ ಡಿಸೆಂಬರ್ 4ರಂದು ವೈಸ್‌ರಾಯ್ ಆಗಿದ್ದ ವೆಲ್ಲಿಂಗ್‌ಡನ್ ಮೈಸೂರಿಗೆ ಬಂದಿದ್ದಾಗ ಮಹಾರಾಜರು ಭೋಜನ ಕೂಟವೊಂದನ್ನು ಏರ್ಪಡಿಸಿದ್ದರು. ಭೋಜನಾನಂತರದ ಭಾಷಣದಲ್ಲಿ ವೈಸ್‌ರಾಯ್ : The maintenance of that standard of administration which was handed over to your revered father in 1881 has been a matter of satisfaction to successive viceroys and I am glad to be able to give signal proof of the recognition of this high standard by the British government by announcing that in response to Your Highness's wishes, the restrictions imposed by Article 18 of the Treaty of 1913 on legislation by your Highness's government have now been removed" ಎಂದನು.

ಈ ಮಾತುಗಳ ಅಂತರ್ಭಾವವೇನು, ಮೈಸೂರು ಸರಕಾರಕ್ಕೆ ಇದರಿಂದ

ದೊರೆತ ಸ್ವಾತಂತ್ರ್ಯ ಎಂಥಾದ್ದು ಎಂಬುದನ್ನು ವಿವರಿಸಿ 8–12–1933 ರ 'ಹಿಂದೂ' ಪತ್ರಿಕೆಯಲ್ಲಿ ಡಿ ವಿ ಜಿ ಒಂದು ಲೇಖನವನ್ನು ಬರೆದರು.

ಸುಮಾರು ನೂರುವರ್ಷಗಳ ಹಿಂದೆ ಬ್ರಿಟಿಷ್ ಕಮಿಷನ್ ಮೈಸೂರನ್ನು ಆಳುತ್ತಿದ್ದಾಗ ಮಾಡಿದ ಕಾನೂನುಗಳು ಮತ್ತು ನಿಯಮಗಳು ಇನ್ನೂ ಜಾರಿಯಲ್ಲಿರಬೇಕೆಂದು ಹೇಳಿದ್ದದ್ದು 1913ರ ಒಪ್ಪಂದದ 18ನೆಯ ಖಂಡ. ಯಾವ ಬಗೆಯ ಕಾನೂನಿನ ಕ್ರಮವೂ ಇಲ್ಲದೆ ಸಂಪಗೆ ವೆಂಕಟಪತಯ್ಯನವರನ್ನು ಕಾರವಾರದ ಆಡಳಿತಕ್ಕೆ ಮೈಸೂರು ಸರಕಾರ ಒಪ್ಪಿಸಿದ್ದು ಈ ಹಳೆಯ ಒಪ್ಪಂದದ ಪ್ರಕಾರವೇ. ಹಾಗೆಯೇ ಮೈಸೂರಿನವರು ಉಪ್ಪನ್ನು ತಯಾರು ಮಾಡಬಾರದೆಂಬ ನಿಷೇಧವೂ ಆ ಕಾಲದ್ದೇ. ಇದರಿಂದ ಮೈಸೂರಿನವರ ಆರ್ಥಿಕ ಸ್ವಾತಂತ್ರ್ಯಕ್ಕೆ ಬಂದಿದ್ದ ಅಡ್ಡಿಯನ್ನು ಕುರಿತು ಡಿ ವಿ ಜಿ 1927ರಲ್ಲೇ ದಿವಾನರಿಗೆ ಹೇಳಿದ್ದರಂತೆ. ಹಿಂದಿನ ನಿಯಮಗಳನ್ನು ಭಾರತ ಸರಕಾರದ ಸಮ್ಮತಿಯಿಂದ ತೆಗೆದು ಹಾಕಬಹುದಾಗಿತ್ತು. ಆದರೆ: "That consent is not an easy thing to obtain ... and it is a matter of common experience that when a Government Department is in actual possession of power, no amount of justice or reason on the other side could suffice to persuade that Department to yield."

1913ರ ಒಪ್ಪಂದದ 18 ನೆಯ ಖಂಡ, 1881 ರಲ್ಲಿ ಮಹಾರಾಜರಿಗೆ ಆಡಳಿತವನ್ನು ವಹಿಸಿ ಕೊಟ್ಟಾಗ ಮಾಡಿದ ಹುಕುಂನಾಮೆಯ 19 ನೆಯ ಕ್ಲಾಸಿನ ಪುನರುಚ್ಚರಣೆ. ಅದಾದರೋ 1799 ರಲ್ಲಿ ಮಾಡಿಕೊಂಡ ಒಪ್ಪಂದದ 4ನೆ ಖಂಡದಿಂದ ಹುಟ್ಟಿದ್ದು. ಇದೆಲ್ಲದರ ಸಾರಾಂಶವೇನೆಂದರೆ ಬ್ರಿಟಿಷ್ ಸರಕಾರವು ಒಳ ಆಡಳಿತದ ವಿಚಕ್ಷಣೆಗಾಗಿಯೂ, ತೆರಿಗೆಗಳನ್ನು ವಸೂಲಿ ಮಾಡುವುದರಲ್ಲೂ ಯಾವ ಬಗೆಯಾದ ಕಾನೂನನ್ನೋ ಅಥವಾ ನಿಯಮಗಳನ್ನೋ ಮಾಡಲು ಸಂಪೂರ್ಣ ಅಧಿಕಾರವನ್ನು ಹೊಂದಿರುತ್ತದೆ, ಎಂಬುದೇ. ಈಗ ಆ ಸಂಕೋಲೆಯಿಂದ ವಿಮುಕ್ತವಾದ ಮೈಸೂರು ಸರಕಾರ ಎಲ್ಲ ಕಾನೂನುಗಳನ್ನೂ ಪರೀಕ್ಷಿಸಿ, ತನಗೆ ಬೇಕಾದಂತೆ ತನ್ನ ಆಡಳಿತ ಕ್ರಮವನ್ನು ರೂಪಿಸಿಕೊಳ್ಳಬಹುದು. ಹೀಗೆ ಸೂಚಿಸಿ ಅವರು ಹೇಳಿರುವ ಮಾತುಗಳು ಇವು: If the talk of Federation has any meaning and reality, a necessary preparation towards that ideal is the endowing of every unit with the fullest measure of independence and power of self-determination consistant with that ideal. Now that

Mysore's fitness for such freedom of autonomy has been admitted, let us hope that the removal of the of the galling features of the Treaty will follow in rapid succession. There are many such features in it. Most notable of all, Article 15 asks for the summary arrest and surrender of a subject of Mysore to the British Government. Article 19 makes the consent of the Governor General in Council indispensible even for improvements and reforms in the administration in response to popular demands. This latter article has often been pointed to as an obstacle in the way of constitutional reforms."

ಫೆಬ್ರುವರಿ 4, 1937 ರಂದು ದಿವಾನರು 13 ಮಂದಿ ಸಾರ್ವಜನಿಕರನ್ನು ಕರೆಸಿ ಒಂದು ಪುಟ್ಟ ಸಭೆ ನಡಸಿದರು. ಆ 13 ಮಂದಿಯಲ್ಲಿ ಡಿ ವಿ ಜಿ ಯವರೂ ಒಬ್ಬರು. ಉದ್ದೇಶ "ಫೆಡರೇಷನ್" ಗೆ ಸಂಬಂಧ ಪಟ್ಟ ಸರಕಾರ ಸಿದ್ಧ ಪಡಿಸಿದ "ಮೆಮೊರಾಂಡಮ್" ಅನ್ನು ಚರ್ಚಿಸುವುದಕ್ಕೆ. ವಿಶ್ವಕರ್ಣಾಟಕ ಪತ್ರಿಕೆ "ಮೆಮೊರ್ಯಾಂಡಂ"ಗೆ ಸಭಿಕರು ಒಪ್ಪಿಗೆ ಕೊಟ್ಟ ಹಾಗಿದೆ ಎಂದು ವರದಿ ಮಾಡಿತು.

ಡೆಹಲಿಯಿಂದ ಪ್ರಕಟವಾಗುತ್ತಿದ್ದ "ಯುನೈಟೆಡ್ ಇಂಡಿಯ ಎಂಡ್ ಇಂಡಿಯನ್ ಸ್ಟೇಟ್ಸ್" ಎಂಬ ಪತ್ರಿಕೆ ತನ್ನ 4–9–1937 ರ ಸಂಚಿಕೆಯಲ್ಲಿ ದೇಶೀಯ ಸಂಸ್ಥಾನಗಳನ್ನು ಸಂಯುಕ್ತ ರಾಷ್ಟ್ರಗಳಲ್ಲಿ ಸೇರಿಸಿಕೊಳ್ಳುವ ಪ್ರಯತ್ನ, ಸಂಸ್ಥಾನಗಳಲ್ಲಿ ಜವಾಬ್ದಾರಿ ಸರಕಾರ ರಚಿತವಾಗುವ ಪ್ರಯತ್ನ ಇವುಗಳನ್ನು ಕುರಿತು ಡಿ ವಿ ಜಿ "ಹಿಂದೂ" ಪತ್ರಿಕೆಯಲ್ಲಿ ಬರೆದ ಲೇಖನವನ್ನು ಅನುಮೋದಿಸಿದೆ.

ಭಾರತ ದೇಶದ ಎಲ್ಲೆಡೆಯಲ್ಲಿಯೂ ಒಂದಲ್ಲ ಒಂದು ವಿಧದಲ್ಲಿ ಸಂಕ್ಷೋಭೆಯ ವಾತಾವರಣ ತಲೆದೋರಿತ್ತು. ದುಂಡು ಮೇಜಿನ ಪರಿಷತ್ತುಗಳು ಶಾಸನ ವಿಹಿತ ರೀತಿಯಲ್ಲಿ ಬ್ರಿಟಿಷರನ್ನು ಒಡಂಬಡಿಸಿ ಸ್ವಾತಂತ್ರ್ಯವನ್ನು ಪಡೆಯುವುದು ಸಾಧ್ಯವಿಲ್ಲವೆಂಬ ಭಾವನೆಗೆ ಎಡೆಗೊಟ್ಟಿತ್ತು. ಈ ಸಂಕ್ಷೋಭೆಯ ದಾರಿ ಡಿ ವಿ ಜಿ ಯವರಿಗೆ ಯಾವಾಗಲೂ ರುಚಿಸಲಿಲ್ಲ. ಆ ಕಾರಣದಿಂದ ಸಂಕ್ಷೋಭೆಯ ದಾರಿಯನ್ನೂ ಚಳುವಳಿಯ ದಾರಿಯನ್ನೂ ತಿರಸ್ಕರಿಸಿ ಶಾಸನ ವಿಹಿತ ದಾರಿಯನ್ನು ಒಪ್ಪಿಕೊಳ್ಳುವ ಜನವನ್ನು ಒಂದುಸೇರಿಸಿ ಶಾಸನ ಪಾರಮ್ಯದಲ್ಲಿ ನಂಬಿಕೆಯನ್ನು ಘೋಷಿಸಿ, ಆ ದಾರಿಯ ಉಪಯೋಗಗಳನ್ನು

ತಿಳಿಸಬೇಕೆಂಬ ಉದ್ದೇಶದಿಂದ ದಿ ಮೈಸೂರ್ ಪೊಲಿಟಿಕಲ್ ಕನ್‌ವೆನ್‌ಷನ್ (ಮೈಸೂರು ರಾಜಕೀಯ ಸಂಘಟನೆ) ಎಂಬ ಸಂಸ್ಥೆಯನ್ನು ಪ್ರಾರಂಭಿಸುವ ಪ್ರಯತ್ನ ಮಾಡಿದರು. ವಕೀಲರಾಗಿದ್ದ, ನ್ಯಾಯವಿಧಾಯಕ ಸಭೆಯ ಸದಸ್ಯರಾಗಿದ್ದ ಮೈಸೂರಿನ ಬಿ. ಎಸ್. ಪುಟ್ಟಸ್ವಾಮಿಯವರೊಡನೆ ಇದನ್ನು ಕುರಿತು ಡಿಸೆಂಬರ್ 1937ರಲ್ಲಿ ಆಲೋಚಿಸಿದರು.

ಇಷ್ಟರಲ್ಲಿ 1935ರ ಗವರ್ನ್‌ಮೆಂಟ್ ಆಫ್ ಇಂಡಿಯಾ ಆಕ್ಟ್ ಎಂಬ ಮಸೂದೆ ಜಾರಿಗೆ ಬಂದಿತು. "ಬ್ರಿಟಿಷ್ ಇಂಡಿಯ"ದಲ್ಲಿ ಒಂದು ಬಗೆಯಾದ ಜವಾಬ್ದಾರಿ ಸರಕಾರ ರಚಿತವಾಗಿತ್ತು. ದೇಶೀಯ ಸಂಸ್ಥಾನಗಳಲ್ಲಾದರೋ ಆ ಮಸೂದೆ ಯಾವ ವಿಧವಾದ ಬದಲಾವಣೆಯನ್ನೂ ಮಾಡಲಿಲ್ಲ. ಆ ಮಸೂದೆಯಲ್ಲಿ ದೇಶೀಯ ಸಂಸ್ಥಾನಗಳಿಗೆ ಸಂಬಂಧಿಸಿದ ಭಾಗ ಅಮಾನತ್ತಿನಲ್ಲಿತ್ತು.

26-1-1938ರಂದು ಡಿ ವಿ ಜಿ, ಶಾಸನ ಸಭೆಯಲ್ಲಿ, ಭಾರತ ಸಂಯುಕ್ತ ರಾಷ್ಟ್ರ ರಚನೆಯನ್ನು ಕುರಿತು 1935ರ ಮಸೂದೆಯನ್ನು ಪರಿಶೀಲಿಸಲು ಮತ್ತು ಮೈಸೂರು ಸಂಸ್ಥಾನ ಆ ಸಂಯುಕ್ತ ರಾಷ್ಟ್ರಕ್ಕೆ ಸೇರಲು ಮಾಡಬೇಕಾದ ಆಡಳಿತ ಮತ್ತು ರಾಜ್ಯಾಂಗ ಬದಲಾವಣೆಗಳನ್ನು ಕುರಿತು ಸಲಹೆ ಮಾಡಲು ಒಂದು ಸಮಿತಿಯನ್ನು ರಚಿಸಬೇಕೆಂದು ಒಂದು ಗೊತ್ತುವಳಿಯನ್ನು ಸಭೆಯ ಮುಂದಿಟ್ಟರು. ಆ ಸಮಯದಲ್ಲಿ ಡಿ ವಿ ಜಿ ಮಾತನಾಡುತ್ತ ಭಾರತ ಸರ್ಕಾರದ 1935ರ ಮಸೂದೆಯು ಯಾರಿಗೂ ಒಪ್ಪಿತವಾಗಿಲ್ಲ. ಅದರ ಸ್ಥಾನದಲ್ಲಿ ಏನನ್ನು ತರಬೇಕೆಂಬುದರ ವಿಷಯದಲ್ಲಿ ಒಮ್ಮತವಿಲ್ಲವೆಂದರು. "What Indian political life is suffering from today is not the paucity of truths, original and profound but the neglect of the practice of some elementary laws of the art of living together. Both democracy and nationalism are to me nothing else than certain highly evolved processes of this art of living together. It is from this point of view that I would look at the New Government of India Act....It is one of the inescapable facts of our situation. So regarding it I see in it one supreme merit in the midst of a hundred sinister malformations. For the first time in Indo-British history, it marks an attempt to put both the political divisions together on one political platform and impart to India some measure of that statal unity

and integrity of which she has so long stood in clamant need. This I consider a service of capital importance.... We decline to make use of the present Act and defer the day of any kind of direct contact between the two parts of India now kept apart. How then is the situation to be made better? In candid language, the chief objection of British India to taking the states in as partners is that they are autocratically governed and that their influence in all-Indian councils will be anti-democratic and pro-imperialistic.... The pressure of nationalist aspiration is the only remedial agency left on which to base all our hopes for the reform of the States and their befitment for membership in an all Indian polity." ಹೀಗೆಂದು ಹೇಳಿ, ಸಂಯುಕ್ತ ರಾಷ್ಟ್ರದಲ್ಲಿ ದೇಶೀಯ ಸಂಸ್ಥಾನಗಳನ್ನು ಸೇರಿಸಿಕೊಂಡು, ಮುಂದಿನ ಬದಲಾವಣೆಗಳಿಗಾಗಿ ಹೊಡೆದಾಡುವುದೇ ನಮಗಿರುವ ದಾರಿಯೆಂದಿದ್ದಾರೆ. "The ideal of Swaraj is a trinity. It comprises ideas of (1) Unity (2) Democracy and (3) Independence. It seems to me that a complete realisation of all these three great ideas at one and the same time is much more than we can hope for. At any rate the realisation of the first is fundamental to the other two. Our approach towards democracy and independence will be in proportion to our achievement of national unity. It is to this basic ideal that the Act promises to open the way. Therefore, before rejecting the Act, let us examine its provisions with sympathy and explore its possibilities with good will."

ಸಂಸ್ಥಾನದ ಒಳಗಡೆ ಜವಾಬ್ದಾರಿ ಸರಕಾರ ಪದ್ಧತಿ ಜಾರಿಗೆ ಬಂದರೆ ಸಂಯುಕ್ತ ರಾಷ್ಟ್ರದೊಡನೆ ವಿಲೀನವಾಗುವ ಕೆಲಸ ಸುಲಭವಾಗುವುದೆಂದೂ ಇದನ್ನು ತಾವು 20 ವರ್ಷಗಳಿಂದಲೂ ಹೇಳುತ್ತಿರುವುದಾಗಿಯೂ ಹೇಳಿ ಜವಾಬ್ದಾರಿ ಸರಕಾರ, ನಿರಂಕುಶ ಪ್ರಭುತ್ವಕ್ಕಿಂತ, ಆಡಳಿತಗಾರರ ಸರಕಾರಕ್ಕಿಂತ, ಹೇಗೆ ಉತ್ತಮ ಎಂದು ಎತ್ತಿ ತೋರಿಸಿದ್ದಾರೆ. ಜವಾಬ್ದಾರಿ ಸರಕಾರ ಪದ್ಧತಿ ಜಾರಿಗೆ ಬಂದಾಗ ಎದುರಿಸಬೇಕಾದ ಸಮಸ್ಯೆಗಳ ಬಗ್ಗೆ ತಾವು ಚಿಂತಿಸಿರುವುದಾಗಿ ಹೇಳುತ್ತ, "In pleading thus I have not lost sight of possible

risks and dangers. Indeed, I would not think of reform with out at the same time devising provisions for four purposes: (1) The stability of the ministry. We prefer to have long-term cabinets and fair chances of continuity for policies and programmes. (2) A scrupulous regard for the rights and interests of minorities. (3) The purity of the electorates. (4) The saving power of the sovereign.

ಈ ಭಾಷಣ, ಸಭೆಯಲ್ಲೇ ಮೆಚ್ಚಿಗೆಯನ್ನು ಗಳಿಸಿದ್ದಲ್ಲದೆ, ದೇಶದ ಇತರೆಡೆಗಳಲ್ಲೂ ಮೆಚ್ಚಿಗೆಯನ್ನು ಪಡೆಯಿತು. ಸರಕಾರದ ಪ್ರತಿನಿಧಿಗಳು ಇದಕ್ಕಾಗಿ ಕೇವಲ ಸಹಾನುಭೂತಿಯನ್ನು ಸೂಚಿಸಿದರು.

ದಿವಾನರಿಗೆ ಡಿ ವಿ ಜಿ ಕೊಟ್ಟ ಸಲಹೆ (6.4.1938):

Government have exhibited a marked eagerness to win applause at the hands of **outsiders**. It has often appeared to people that Government cared more for outside public opinion than for local public opinion. So the agitator thinks it profitable to lay his appeal before the outside tribunal to which Government themselves so often resort.

This takes me to the heart of the matter. You mustn't make us think that you look upon any body as demi gods and what is more, you must treat us, local public men, as **not** the inferiors of public men from outside. In every Indian State I know the local public man is at a discount....

Another grave source of weakness of Government now is the non-existence among your colleagues and Heads of Departments of one who can deliver harangues in Kannada.... As under Responsible Government — like Cabinet Ministers in England — your colleagues have got to meet the public in the open frequently, explain and defend Government policies and give the fight direct to their opponents. At present your colleagues either sit quiet or make either dogmatic or platitudinous speeches, and that in English ....

ರಾಜಕೀಯ ಸುಧಾರಣೆಗಳ ಸಮಿತಿಯಲ್ಲಿ ಡಿ ವಿ ಜಿ ಯವರೂ ಇರ

ಬೇಕೆಂದು ಮಿರ್ಜಾ ಸಾಹೇಬರು ಮಾಡಿದ ಒತ್ತಾಯಕ್ಕೆ, ಡಿ ವಿ ಜಿ 3.3.1938 ರಂದು ಹೀಗೆ ಬರೆದರು :

"Now for the last time—really for the very last time — let me revert for just a moment to an old point of difference between us. What do you think of having on the committee a pauper pursued by bill collectors and bailiffs ? Could he add to the strength or prestige of the committee or make any contribution of value to its deliberations ? He should rather be avoided as a danger or a disgrace. Let me plainly say my position is not very different. If I do not take care, I shall soon have half a dozen court decrees and warrants seizing me by the neck. Why press me ? I do sincerely wish to be left out of the committees. No more the pose of a public man for me. I have still some sense of honour left in me ; and it cries that I must first look to paying my creditors. They are now my country and my world. My first duty is to them.

Believe me — I am not down-hearted or disappointed. Why should I be down-hearted or disappointed ? Hardship and I have long been friends, and I have courage in my heart. I am not afraid of hard work and privation. I'll struggle and struggle and pay creditors like an honest man and then enjoy my freedom. That is now my prayer. I have never looked for any prizes from any quarter and do not want any — neither membership of the State Council nor the State's deputyship in the Federal Legislature, nor speakership of the Legislative Council. My ambitions have never been in that direction. I have never aspired to the honours of leadership anywhere. I am aware af my limitations. My role is that of an humble student and I am content with that. When I have redeemed my honour from the clutches of my creditors my wish is to give the rest of my life to the work of interpreting to my countrymen some of the things that I value in the great books I've read — in Poetry and philosophy and politics ; Shakes-

peare and the Ramayana and Plato are the voices that call me and to them I would go in my freedom. Public life has made me sick. My soul is crying for peace. So have mercy and let me go out of public life."

1937 ಮೈಸೂರಿನ ಚರಿತ್ರೆಯಲ್ಲಿ ಬಹುಮುಖ್ಯವಾದ ವರ್ಷ.

ಮದರಾಸಿನ "ಜಸ್ಟಿಸ್" ಪಾರ್ಟಿಯ ರೀತಿಯಲ್ಲಿದ್ದ ಪ್ರಜಾಮಿತ್ರ ಮಂಡಲಿ ಬಸವಯ್ಯನವರಿಂದ ಸ್ಥಾಪಿತವಾಗಿತ್ತು. ಪ್ರಜಾನುರಾಗ ಸರಕಾರದ ಸ್ಥಾಪನೆಗಾಗಿ ಈ ಪಾರ್ಟಿಯ ಸದಸ್ಯರನೇಕರು 1930ರ ಸುಮಾರಿನಲ್ಲಿ ಪ್ರಜಾ ಪಕ್ಷವೊಂದನ್ನು ಸ್ಥಾಪಿಸಿದರು. ನಾಲ್ಕು ವರ್ಷಗಳಲ್ಲಿ "ಪ್ರಜಾ ಮಿತ್ರಮಂಡಲಿ" ಪ್ರಜಾಪಕ್ಷಗಳೆರಡೂ ಒಂದಾದವು. ಈ ಹೊಸ ಸಂಸ್ಥೆಗೆ ಪ್ರಜಾ ಸಂಯುಕ್ತ ಪಕ್ಷವೆಂಬ ಹೆಸರು. 16-10-37ರಲ್ಲಿ ಈ ಪಕ್ಷ ಕಾಂಗ್ರೆಸಿನೊಡನೆ ಸೇರಿ ಕೊಂಡಿತು. "ಪ್ರಜಾಪಕ್ಷ, ಪ್ರಜಾಸಂಯುಕ್ತ ಪಕ್ಷ, ಪ್ರಜಾಮಿತ್ರ ಮಂಡಳಿ— ಎಂದು ರೂಪರೂಪಾಂತರ ತಾಳಿದ ಚರಿತ್ರೆ ನನಗೆ ಸವಿವರವಾಗಿ ತಿಳಿಯದು" ಎನ್ನುತ್ತಾರೆ ಡಿ ವಿ ಜಿ. ಆ ವರ್ಷವೇ ಚುನಾವಣೆಯಲ್ಲಿ ಕಾಂಗ್ರೆಸ್ ತನ್ನ ಉಮೇದುವಾರರನ್ನು ನಿಲ್ಲಿಸಲು ನಿರ್ಧರಿಸಿದ್ದು. ಬೊಂಬಾಯಿನಿಂದ ನಾರಿಮನ್ ಎಂಬ ಪಾರ್ಸಿ ಚಳವಳಿಗಾರ ಬೆಂಗಳೂರಿಗೆ ಬಂದಿದ್ದು, ರಾಷ್ಟ್ರಧ್ವಜಕ್ಕೆ ಅವ ಮಾನವಾಯಿತೆಂಬ ವ್ಯಾಜದಿಂದ, ಗಲಭೆ ನಡೆದು ಪೋಲೀಸರು ಬನಪ್ಪ ಪಾರ್ಕಿ ನಲ್ಲಿ ಗುಂಡಿನ ಮಳೆಗರೆದರು. 1937ರ ಡಿಸೆಂಬರ್ ತಿಂಗಳಿನಲ್ಲಿ "ಸಂಸ್ಥಾನದ ಮುಸ್ಲಿಂ ಲೀಗ್" ಹುಟ್ಟಿತು. "ಸಿವಿಲ್ ಲಿಬರ್ಟೀಸ್ ಯೂನಿಯನ್" ಜೂನ್ ತಿಂಗಳಿನಲ್ಲಿ, "ಜನಜಾಗೃತಿಸಂಘ" ಮೇ ತಿಂಗಳಿನಲ್ಲಿ ಅವತರಿಸಿದುವು. ಮೈಸೂರಿನಲ್ಲಿ ಪ್ರಜಾಪ್ರತಿನಿಧಿ ಸಭೆಯ ಅಧಿವೇಶನದ ಹಿಂದಿನ ದಿನ ಕೆ. ಟಿ. ಭಾಷ್ಯಂ ಅವರು ಬಂಧಿಸಲ್ಪಟ್ಟರು. ಅಧಿವೇಶನದ ದಿನ ವೀರಣ್ಣಗೌಡರ ನಾಯಕತ್ವದಲ್ಲಿ 90 ಮಂದಿ ಸದಸ್ಯರು ಸರಕಾರದ ದಬ್ಬಾಳಿಕೆಯನ್ನು ಪ್ರತಿ ಭಟಿಸಿ ಸಭೆಗೆ ಬಹಿಷ್ಕಾರ ಹಾಕಿ ಹೊರಟುಹೋದರು. ಡಿಸೆಂಬರ್ ತಿಂಗಳಿನಲ್ಲಿ ಪಟ್ಟಾಭಿಸೀತಾರಾಮಯ್ಯನವರೂ ಬಲವಂತ ರಾಯ್ ಮೆಹತಾರವರೂ ಸಂಸ್ಥಾನದಲ್ಲಿ ಸಂಚರಿಸಿ ರಾಜಕೀಯ ಪರಿಸ್ಥಿತಿಯನ್ನು ಪರಿಶೀಲಿಸಿ ವರದಿ ಯೊಂದನ್ನು ಪ್ರಕಟಿಸಿದರು.

ಆ ಮಹನೀಯರು ಬರೆದ ವರದಿಯಲ್ಲಿ "The coming to power of the Congress Ministers, both in Bombay and Madras, to

speak of only the two provinces that abut the State, has kindled similar aspirations in the hearts of the people of the State'' ಎಂದಿದ್ದಾರೆ. ಆದರೆ ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರಕಾರ ಪದ್ಧತಿಗಾಗಿ ಗಲಭೆಯಿಲ್ಲದ ಹೋರಾಟ ಎಷ್ಟು ವರ್ಷಗಳಿಂದ ನಡೆಯುತ್ತಿದೆ ಎಂಬುದು ಈ ಚರಿತ್ರೆಯನ್ನು ಓದುವವರಿಗೆ ಮನವರಿಕೆಯಾಗದೆ ಇರದು.

"ಸ್ವಾತಂತ್ರ್ಯದಿನ"ದ ರಾಷ್ಟ್ರೀಯ ಧ್ವಜಾರೋಹಣದ ಸಂಬಂಧವಾಗಿ ಸರಕಾರ ಉಗ್ರ ಕಾರ್ಯಕ್ರಮಗಳನ್ನು ಕೈಗೊಂಡಿತು. ದೇಶದ ನಾನಾ ಮೂಲೆಗಳಲ್ಲಿ ಪ್ರತಿಬಂಧಕ ಆಜ್ಞೆಗಳು, ಬಂಧನಗಳು, ಶಿಕ್ಷೆಗಳು ಪರಿಸ್ಥಿತಿಯನ್ನು ಬಿಗಡಾಯಿಸುವಂತೆ ಮಾಡಿದುವು.

ಕಾಂಗ್ರೆಸಿನ ಮುಖಂಡರಾದ ನೆಹರೂ, ಗಾಂಧಿ ಇವರಿಗೂ ಮಿರ್ಜಾ ಸಾಹೇಬರವರಿಗೂ ಪತ್ರವ್ಯವಹಾರ ನಡೆಯುತ್ತಿತ್ತು. ಈ ಸಂದರ್ಭದಲ್ಲಿ ಪರಿಸ್ಥಿತಿಯನ್ನು ಕಂಡ ಸರಕಾರ ರಾಜಕೀಯ ಸುಧಾರಣೆಗಳ ಅನಿವಾರ್ಯತೆಯನ್ನು ಕಂಡು ಒಂದು ಸಮಿತಿಯನ್ನು ರಚಿಸಲು ನಿರ್ಧರಿಸಿತು. ಆದರೆ ಕಾಂಗ್ರೆಸ್ ಇದರಲ್ಲಿ ಭಾಗವಹಿಸಲು ಒಪ್ಪಲಿಲ್ಲ. ಆ ಸಮಯದಲ್ಲೇ ಗಾಂಧಿಯವರು ಸರ್‌ದಾರ್ ಪಟೇಲರನ್ನೂ ಆಚಾರ್ಯ ಕೃಪಲಾನಿಯವರನ್ನೂ ಮಾತುಕಥೆಗಳಿಗಾಗಿ ಕಳುಹಿಸಿದರು. ಅದರ ಫಲವಾಗಿ ಆದದ್ದೇ ಪಟೇಲ್–ಮಿರ್ಜಾ ಒಪ್ಪಂದ. ಅದು ಪ್ರಕಟವಾದದ್ದು 1.5.1938 ರಲ್ಲಿ. ಅದರ ಮುಖ್ಯಾಂಶಗಳು ಹೀಗಿವೆ :

(1) ಮಹಾರಾಜರ ಕೃಪಾಶ್ರಯದಲ್ಲಿ ಜವಾಬ್ದಾರಿ ಸರಕಾರ ಸ್ಥಾಪನೆಯೇ ಗುರಿಯಾಗುಳ್ಳ "ಮೈಸೂರು ಕಾಂಗ್ರೆಸ್" ರಾಜಕೀಯ ಪಕ್ಷವನ್ನು ಮೈಸೂರು ಸಂಸ್ಥಾನ ಪುರಸ್ಕರಿಸಬೇಕು.

(2) ಸುಧಾರಣಾ ಸಮಿತಿಗೆ ಏಳು ಮಂದಿ ಕಾಂಗ್ರೆಸ್ ಪಕ್ಷದ ಸದಸ್ಯರನ್ನು ಸೇರಿಸಬೇಕು.

(3) ಜವಾಬ್ದಾರಿ ಸರಕಾರ ಸ್ಥಾಪನೆ ಸಲಹೆ ಮಾಡುವ ಅಧಿಕಾರ ಸುಧಾರಣಾಸಮಿತಿಗಿರಬೇಕು.

(4) ಸಾರ್ವಜನಿಕ ಸಮಾರಂಭಗಳಲ್ಲೆಲ್ಲ ಗಂಡಭೇರುಂಡ ಧ್ವಜದೊಂದಿಗೆ ರಾಷ್ಟ್ರಧ್ವಜವನ್ನೂ ಹಾರಿಸಲು ಯಾವ ಪ್ರತಿಬಂಧಕವೂ ಇರಲಾಗದು.

ಈ ಸಂಧಾನದಲ್ಲಿ ಬಹು ಮುಖ್ಯ ಪಾತ್ರ ವಹಿಸಿದ್ದವರು ಡಿ ವಿ ಜಿ ಮತ್ತು

ಹರಿಜನ ಸೇವಕ ಸಂಘದ ಬ್ರಹ್ಮಚಾರಿ ರಾಮಚಂದ್ರ ಅವರು. ಅವರು ಮಾಡಿದ ಕೆಲಸ ಅಮೂಲ್ಯವಾದದ್ದಾದರೂ ಅವರ ಹೆಸರುಗಳು ಸ್ವಾತಂತ್ರ್ಯ ಸಂಗ್ರಾಮದ ಚರಿತ್ರೆಗಳಲ್ಲಿ ಕಾಣಬರುವುದಿಲ್ಲ.

ರಾಜಕೀಯ ಸುಧಾರಣಾ ಸಮಿತಿಯಲ್ಲಿ

ಸಂಸ್ಥಾನದಲ್ಲಿ ಮತ್ತಷ್ಟು ರಾಜಕೀಯ ಸುಧಾರಣೆಗಳನ್ನು ಮಾಡುವ ವಿಚಾರವನ್ನು ಪರಿಶೀಲಿಸಲು ಮೈಸೂರು ಸರಕಾರದ 1.4.1938ರ ಹುಕುಮಿನ ಮೇರೆಗೆ, ಕೆ. ಆರ್. ಶ್ರೀನಿವಾಸ ಅಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚಿತವಾಯಿತು. ಅದರ ಸದಸ್ಯರ ಪೈಕಿ ಡಿ ವಿ ಜಿ ಯವರೂ ಒಬ್ಬರಾಗಿದ್ದರು. ಕಾಂಗ್ರೆಸ್ ಪಕ್ಷದ ಸದಸ್ಯರು ಮೊದಮೊದಲು ಸಮಿತಿಯ ಕಾರ್ಯಕಲಾಪಗಳಲ್ಲಿ ಪಾಲುಗೊಂಡಿದ್ದರೂ ಅನಂತರ, 17.1.1939 ರಿಂದ ಈಚೆಗೆ, ಹಲವು ಕಾರಣಗಳಿಗಾಗಿ ಭಾಗವಹಿಸಲಿಲ್ಲ.

ಕೆ. ಆರ್. ಶ್ರೀನಿವಾಸ ಅಯ್ಯಂಗಾರ್ಯ ಸಮಿತಿಯು 13.12.1938 ರಲ್ಲಿ ನಡಸಿದ ಸಭೆಯಲ್ಲಿ ಯಾವ ವಿಧವಾದ ಸರಕಾರ ಬೇಕು ಎಂಬುದನ್ನು ಕುರಿತು ಸದಸ್ಯರು ತಮ್ಮ ಆಲೋಚನೆಗಳನ್ನು ತಿಳಿಸಬೇಕೆಂದು ಕೋರಲಾಯಿತು.

ಸಿ. ನರಸಿಂಹಯ್ಯನವರು ಶ್ರೀ ಚೆಂಗಲರಾಯ ರೆಡ್ಡಿಯವರ ಅಭಿಪ್ರಾಯವೇನು ಎಂಬುದನ್ನು 18.10.1937 ನೆಯ "ವಿಶ್ವಕರ್ನಾಟಕ"ದಲ್ಲಿ ಕಾಣಬಹುದೆಂದು ಹೇಳಿ ಅವರ ಮಾತುಗಳನ್ನು ಉದಾಹರಿಸಿದರು. "ನನಗೆ ಇನ್ನೂ ಅನೇಕ ವರ್ಷಗಳ ಕಾಲ ಜವಾಬ್ದಾರಿ ಸರಕಾರ ಬೇಕಿಲ್ಲ. ಈ ಆಂದೋಳನವೂ ಬೇಡ. ಆದರೆ ಏಳು ಪ್ರಾಂತಗಳಲ್ಲಿ ಕಾಂಗ್ರೆಸ್ ಮಂತ್ರಿಮಂಡಲಗಳು ಯಾವ ಬಗೆಯ ರಚನಾತ್ಮಕ ಕಾರ್ಯ ಕೈಗೊಂಡು ಮಾಡುತ್ತಿವೆಯೋ ಆ ಕೆಲಸಗಳು ಮೈಸೂರಿನಲ್ಲಿಯೂ ನಡೆಯಲಿ. ನನಗೆ ಮತ್ತಿನ್ನೇನೂ ಬೇಕಾಗಿಲ್ಲ. ಜವಾಬ್ದಾರಿ ಸರಕಾರವು ತಡವಾಗಿ ಬರಲಿ."

ಇನ್ನೊಬ್ಬ ಕಾಂಗ್ರೆಸ್ ಸದಸ್ಯರು ಹೀಗೆಂದರು :

"ಶ್ರೀಮನ್ ಮಹಾರಾಜರವರ ಕೃಪಾಶ್ರಯದಲ್ಲಿ ಜವಾಬ್ದಾರಿ ಸರಕಾರವನ್ನು ಸ್ಥಾಪಿಸುವುದೇ ನಮ್ಮ ಸದ್ಯದ ರಾಜಕೀಯ ಕಾರ್ಯಕಲಾಪವಾಗಿರಬೇಕೆಂದು ನಾವು ನಿಶ್ಚಯಿಸಿದ್ದೇವೆ."

ಡಿ ವಿ ಜಿ ಯವರು ಆ ಸಭೆಯಲ್ಲಿ ಮಾಡಿದ ಭಾಷಣವು ಅವರು ಆ ವಿಚಾರವನ್ನು ಕುರಿತು ಎಷ್ಟು ಆಳವಾಗಿ ಯೋಚನೆ ಮಾಡಿದ್ದರೆಂಬುದನ್ನು

ತೋರಿಸುತ್ತದೆ.

"ಜವಾಬ್ದಾರಿ ಸರಕಾರವೇ ನಮ್ಮ ಗುರಿಯೆಂದು ನಾವು ಒಪ್ಪಬೇಕು. ಆದರೆ ಈ ಕೂಡಲೇ ಅಂಥ ಸರಕಾರ ಜಾರಿಗೆ ಬರಬೇಕೆಂದು ನಾನು ಕೇಳಲಾರೆ. ಏಕೆಂದರೆ ಆ ಗುರಿಯತ್ತ ಸಾಗುವಾಗ ನಾವು ತಪ್ಪು ಹೆಜ್ಜೆಗಳನ್ನಿಡಬಾರದು. ಅದು ಒಂದು ಏಣಿಯ ಮೇಲೆ ಹತ್ತುವಂಥಾದ್ದು. ನೀವು ಒಂದು ಹಂತವನ್ನು ತಪ್ಪಿದರೆ, ನೀವು ಮೊದಲು ಇದ್ದ ಹಂತಕ್ಕಿಂತ ಕೆಳಗಿನದಕ್ಕೆ ಹೋಗಿಬಿಡಬಹುದು. ಜವಾಬ್ದಾರಿ ಸರಕಾರ ಬೇಕೆಂದು ಹೇಳುವಾಗ ನಾನು ಅದರ ಪೂರ್ವಾಪರಗಳನ್ನು ಯೋಚಿಸಿ ಹೇಳುತ್ತಿದ್ದೇನೆ. ನಾವು ಆ ಆದರ್ಶ ಸಾಧನೆಗಾಗಿ ಪ್ರಯತ್ನ ಪಡಬೇಕು, ಅದರ ಪಾಲನೆಗಾಗಿ ಬೇಕಾದ ವಿವೇಕವನ್ನು ಸಂಪಾದಿಸಿಕೊಳ್ಳಬೇಕು—ಎಲ್ಲಿಯವರೆಗೆ ಜವಾಬ್ದಾರಿ ಸರಕಾರವಿರುವುದಿಲ್ಲವೋ ಅಲ್ಲಿಯವರೆಗೂ ಪ್ರಜಾಪ್ರಭುತ್ವ ಸರಕಾರ ಇಲ್ಲವೆಂದೇ ಹೇಳಬೇಕು. ಮತ್ತು ಸರಕಾರವು ಜನತೆಯ ಆಶೋತ್ತರಗಳನ್ನು ತನ್ನದೆಂದು ತಿಳಿಯುವ ಸಾಧನವೂ ಇಲ್ಲವೆಂದೇ ಹೇಳಬೇಕು. ದಿವಾನ್ ರಂಗಾಚಾರ್ಯರು ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸುವಾಗ ಈ ಆದರ್ಶವನ್ನೇ ಮುಂದಿರಿಸಿದರು. ಮೈಸೂರು ದೇಶದಲ್ಲಿ ರಾಜಕೀಯ ಬೆಳವಣಿಗೆಯಾಗಿದ್ದರೂ ಆ ಆದರ್ಶ ಇಲ್ಲಿಯವರೆಗೂ ಪ್ರಾಪ್ತಿಯಾಗಿಲ್ಲ."

ಈ ರಾಜಕೀಯ ಸುಧಾರಣೆಗಳ ಗುರಿಯು ಜವಾಬ್ದಾರಿ ಸರಕಾರ ಸ್ಥಾಪನೆಯೇ ಆಗಿದೆಯೆಂಬ ಅಂಶವನ್ನು ಕಂಠೋಕ್ತವಾಗಿ ನಿರೂಪಣೆ ಮಾಡಬೇಕೇ ಎಂಬ ವಿಷಯವನ್ನು ಸಮಿತಿಯವರು ವಿಶೇಷ ಕುತೂಹಲದಿಂದ ಪರ್ಯಾಲೋಚಿದರು. ಕೆಲವು ಮಂದಿ ಸದಸ್ಯರು ಜವಾಬ್ದಾರಿ ಸರಕಾರವೆಂಬುದಾಗಿ ಸ್ಪಷ್ಟವಾಗಿ ನಿರೂಪಣೆಮಾಡುವುದರಿಂದ ರಾಜಕೀಯ ಸಂಬಂಧವಾದ ಪ್ರಯೋಜನವಿದೆಯೆಂಬುದು ಸಂದೇಹಾಸ್ಪದವಾದ ವಿಚಾರವೆಂದೂ, ತೃಪ್ತಿಪಡಿಸಲು ಸರ್ವದಾ ಸಾಧ್ಯವಿಲ್ಲದೆ ಇರಬಹುದಾದಂಥ ಆಶೋತ್ತರಗಳನ್ನು ಜನಗಳಲ್ಲಿ ಉಂಟುಮಾಡಲು ಅದರಿಂದ ಸಹಾಯವಾಗುವುದೆಂದೂ, ಮತ್ತು ಮಹಾರಾಜರು ತಮ್ಮ ವಿವೇಚನಾನುಸಾರ ವರ್ತಿಸುವುದಕ್ಕೆ ಎಂದೆಂದಿಗೂ ಅವಕಾಶವೇ ಇಲ್ಲದಂತೆ ಅವರ ಕೈಯನ್ನು ಕಟ್ಟಿದಂತಾಗುವುದೆಂದೂ, ವಾದಿಸಿದರು.

ಈ ವಾದಕ್ಕೇ ಹೆಚ್ಚು ಬಲವಿರುವುದೆಂದು ಕಂಡು ಡಿ ವಿ ಜಿ ಯವರಿಗೆ, ಬಹಳ ಹಿಂದಿನಿಂದಲೂ ಜವಾಬ್ದಾರಿ ಸರಕಾರ ಪದ್ಧತಿ ಜಾರಿಗೆ ಬರಬೇಕೆಂಬ ಧ್ಯೇಯಕ್ಕಾಗಿಯೇ ತಮ್ಮ ಜೀವಮಾನವನ್ನೆಲ್ಲವನ್ನೂ ತೆತ್ತಿದ್ದ ಅವರಿಗೆ, ನಿರಾಸೆ

ಯುಂಟಾದುದರಲ್ಲಿ ಆಶ್ಚರ್ಯವೇನು? ಅವರಿಗೆ ಬೆಂಬಲ ಕೊಡಲು, ಜವಾಬ್ದಾರಿ ಸರಕಾರ ಪದ್ಧತಿಯನ್ನು ತಮ್ಮ ಪಕ್ಷದ ಗುರಿಯನ್ನಾಗಿ ಹೊಂದಿದ್ದ ಕಾಂಗ್ರೆಸ್ ಪಕ್ಷದ ಸದಸ್ಯರೂ ಇರಲಿಲ್ಲ. ಇದನ್ನು ಕಂಡು, ಇನ್ನು ಸಮಿತಿಯ ಸದಸ್ಯರಾಗಿ ಮುಂದುವರೆಯುವುದರಲ್ಲಿ ಯಾವ ಉಪಯೋಗವೂ ಇಲ್ಲವೆಂದು ತಿಳಿದ ಡಿ ವಿ ಜಿ, ಮಿರ್ಜಾ ಸಾಹೇಬರಿಗೆ, ತಾವು ಸಮಿತಿಯಿಂದ ಹೊರ ಬರುವುದಾಗಿ ಪತ್ರ ಬರೆದರು. ತಮ್ಮ ನಿರ್ಧಾರವನ್ನು ಅವರು 16-3-1939 (ರಾತ್ರಿ 9 ಘಂಟೆಗೆ) ಮಿರ್ಜಾರವರಿಗೆ ಬರೆದ ಪತ್ರದಲ್ಲಿ ತಿಳಿಸಿ ತಮ್ಮ ಜೀವನದ ಧ್ಯೇಯವನ್ನು ಹೀಗೆ ವಿವರಿಸಿದ್ದಾರೆ:

"As you know so well, I have cherished and advocated the ideal of Responsible Government for over twenty two years now. I have spoken and written and argued in favour of it in public on every available occasion; and it will surely be doing violence to my own conscience if at this stage of my life I swallowed the conviction of a lifetime. I sincerely and firmly believe:

(1) That Responsible Government will on the whole be for the good of the country;

(2) That our people are capable of being trained and fitted for it, and

(3) That a patriotic Government should be got to make it a part of its nation building policy so as to prepare the country for Responsible Government.

On these points I can make no compromise, even as an orthodox Brahmin cannot admit compromises as to the authority of the Vedas or a Mussalman as to the Koran. There are some things which every one of us holds to be sacred and unassailable and beyond the province of bargaining. Responsible Government issue is to me such a thing—a thing so all important. That being so, if the committee will not agree to recommend Responsible Government as a goal at least I can have no place in it."

ನೇಪಥ್ಯದಲ್ಲಿ ನಡೆದ ಸಂಧಾನದ ಫಲವಾಗಿಯೋ ಏನೋ ಸಮಿತಿಯು ವರು "ಈ ವಿಚಾರದ ಸಾಧಕ ಬಾಧಕಗಳನ್ನು ಸಾವಧಾನವಾಗಿ ಪರ್ಯಾಲೋಚಿಸಿದ ತರುವಾಯ ಸದಸ್ಯರ ಪೈಕಿ ಹೆಚ್ಚುಮಂದಿ ಎಂದರೆ 12 ಮಂದಿ ಸದಸ್ಯರು ರಾಜಕೀಯ ಸುಧಾರಣೆಯ ಗುರಿಯು ಜವಾಬ್ದಾರಿ ಸರಕಾರ ಸ್ಥಾಪನೆಯೆಂಬ ಅಂಶವನ್ನು ಸ್ಪಷ್ಟವಾಗಿ ನಿರೂಪಣೆ ಮಾಡುವುದರಿಂದಲೇ ಹೆಚ್ಚು ಪ್ರಯೋಜನವೆಂಬುದಾಗಿ ಅಭಿಪ್ರಾಯ ಪಟ್ಟಿರುತ್ತಾರೆ" ಎಂದು ಹೇಳಿದರು. ಅನಂತರ ಸಮಿತಿಯು ಸಂಪೂರ್ಣವಾದ ಅಭಿಪ್ರಾಯವೂ ವ್ಯಾಪ್ತಿಯೂ ಮಹಾಜನಗಳಿಗೆ ಚೆನ್ನಾಗಿ ತಿಳಿಯುವಂತೆ ಮಾಡಲು ಮೂರು ಸೂಚನೆಗಳು ಬಂದುವು. ಬಿ. ಎಸ್. ಪುಟ್ಟಸ್ವಾಮಿಯವರದು, ಡಿ ವಿ ಜಿ ಯವರದು, ಹಯವದನರಾಯರು ಮತ್ತು ಟಾಮ್ಲಿನ್ಸನ್ ಅವರು ಮಾಡಿದ ಸೂಚನೆ. ಅವುಗಳಲ್ಲಿ ಡಿ ವಿ ಜಿ ಯವರಿಂದ ಸೂಚಿತವಾದುದಕ್ಕೆ ಹೆಚ್ಚುಮಂದಿ ಸದಸ್ಯರಿಂದ (9 ಪರವಾಗಿ 6 ಮಂದಿ ವಿರುದ್ಧವಾಗಿ) ಅಭಿಮತವು ದೊರೆಯಿತು. ಅದನ್ನು ಸಮಿತಿ ಸ್ವಲ್ಪ ತಿದ್ದುಪಾಟುಗಳನ್ನು ಮಾಡಿ ಅಖೈರಾಗಿ ಹೀಗೆ ರೂಪಿಸಿತು.

"ಮೈಸೂರು ಸಂಸ್ಥಾನದಲ್ಲಿ ರಾಜಕೀಯ ಸುಧಾರಣೆಗಳು ನಡೆಯತಕ್ಕ ಎಲ್ಲ ಸಂದರ್ಭಗಳಲ್ಲಿಯೂ ಆ ಸುಧಾರಣೆಗಳ ಗುರಿಯು ಶ್ರೀಮನ್ಮಹಾರಾಜರವರ ಅಧಿಷ್ಠಾತೃತ್ವದ ಅಧಿಕಾರದ ಮತ್ತು ರಕ್ಷಣಾಧಿಕಾರದ ಆಶ್ರಯದಲ್ಲಿ ಜವಾಬ್ದಾರಿ ಸರ್ಕಾರದ ಶಿಸ್ತನ್ನು ಸ್ಥಾಪಿಸುವುದೇ ಆಗಿರತಕ್ಕದ್ದೆಂಬ ಅಂಶವನ್ನು ಗಮನದಲ್ಲಿಟ್ಟಿರಬೇಕು; ಎಂದರೆ ಆ ಶಿಸ್ತಿನ ಮೇರೆಗೆ ಸಂಸ್ಥಾನದ ಆಡಳಿತವನ್ನು ಶ್ರೀಮನ್ಮಹಾರಾಜರವರಿಂದ ನೇಮಕ ಮಾಡಲ್ಪಟ್ಟಿರತಕ್ಕ ಮತ್ತು ಶ್ರೀಮನ್ಮಹಾರಾಜರವರ ನಂಬಿಕೆಗೂ ಶಾಸನ ಸಭೆಗಳ ಸದಸ್ಯರ ಒತ್ತಾಸೆಗೂ ಪಾತ್ರರಾಗಿರತಕ್ಕ ಮಂತ್ರಿಮಂಡಲದವರು (ಎಂದರೆ "ಕ್ಯಾಬಿನೆಟ್" ಮಂಡಲದವರು) ನಡೆಯಿಸಬೇಕು; ಸಂಸ್ಥಾನದಲ್ಲಿ ಶಾಂತಿಯೂ ಸುವ್ಯವಸ್ಥಿತ ಕಟ್ಟುಪಾಡುಗಳೂ, ಮತ್ತು ಪ್ರಜಾಹಿತಸಾಧಕವಾದ ಆಡಳಿತ ಕ್ರಮವೂ ನೆಲಸಿರುವಂತೆ ಮಾಡುವ ವಿಷಯದಲ್ಲಿಯೂ, ಅಲ್ಪ ಸಂಖ್ಯಾತ ಪಂಗಡಗಳೂ ಸೇರಿ ಶ್ರೀಮನ್ಮಹಾರಾಜರವರ ಪ್ರಜಾವರ್ಗಕ್ಕೆ ಸೇರಿದ ಎಲ್ಲ ತರಗತಿಗಳ ಜನರ ಹಿತ ರಕ್ಷಣೆಯ ವಿಷಯದಲ್ಲಿಯೂ ಮತ್ತು ಬ್ರಿಟಿಷ್ ಸರಕಾರದವರೊಡನೆ ಮಾಡಿಕೊಂಡಿರತಕ್ಕ ಕರಾರಿನ ಷರತ್ತುಗಳನ್ನು ನೇರವೇರಿಸುವ ವಿಷಯದಲ್ಲಿಯೂ ಶ್ರೀಮನ್ಮಹಾರಾಜರವರಿಗಿರತಕ್ಕ ಅಧಿಕಾರಗಳು ಸಮಸ್ತ ಸಂದರ್ಭಗಳಲ್ಲಿಯೂ

ಅಬಾಧಿತವಾಗಿದ್ದು ಆ ಅಧಿಕಾರಗಳೇ ಸರ್ವಶ್ರೇಷ್ಠವಾಗಿ ಇತರರ ಅಧಿಕಾರಗಳೆಲ್ಲಕ್ಕಿಂತಲೂ ಮೇಲಾಗಿದ್ದು ಅವುಗಳ ಮೇಲೆ ಚಲಾಯಿಸಲ್ಪಡುವಂತಿರಬೇಕು. ಈ ಧ್ಯೇಯ ಸಾಧನೆಗೆ ಸಂಬಂಧಪಟ್ಟ ಮುಂದಿನ ಮಜಲುಗಳನ್ನು ಗೊತ್ತುಮಾಡುವುದರಲ್ಲಿ, ಹಿಂದಿನ ಮಜಲಿನಲ್ಲಿ ಕೈಗೊಂಡ ಕಾರ್ಯಕ್ರಮಗಳು ಎಷ್ಟರಮಟ್ಟಿಗೆ ಫಲಕಾರಿಯಾಗಿ ನೆರವೇರಿವೆಯೆಂಬುದನ್ನು ನೋಡಿಕೊಂಡು ತದನುಸಾರವಾಗಿ ಶ್ರೀಮನ್ಮಹಾರಾಜರವರು ಅದನ್ನು ಗೊತ್ತುಮಾಡಬೇಕು."

"ರಾಜಕೀಯ ಸುಧಾರಣೆಗಳನ್ನು ಪ್ರಕಟಿಸಿ ಸರಕಾರದವರು ಸಾದರು ಮಾಡತಕ್ಕ ಹುಕುಮಿನಲ್ಲಿ ಅಥವಾ ಇತರ ಯಾವುದಾದರೂ ಕಾಗದ ಪತ್ರದಲ್ಲಿ ಈ ನಿರೂಪಣೆಯನ್ನೂ ಸೇರಿಸಬೇಕೆಂಬುದಾಗಿ ನಾವು ಸವಿನಯವಾಗಿ ಸೂಚಿಸುತ್ತೇವೆ. ಸಮಿತಿಯ ಸದಸ್ಯರುಗಳಲ್ಲೊಬ್ಬರಾದ ಮಿ॥ ಎನ್. ಎಸ್. ಸುಬ್ಬರಾವ್ ಅವರು ಈ ಸಲಹೆಯ ಪರವಾಗಿರಲು ಇಷ್ಟಪಡಲಿಲ್ಲ" ಎಂದು ಸಮಿತಿಯ ವರದಿಯು ತಿಳಿಸುತ್ತದೆ.

ಸಮಿತಿಯ ಸದಸ್ಯರಾಗಿ ಡಿ ವಿ ಜಿ ಮಾಡಿದ ಕೆಲವು ಸಲಹೆಗಳನ್ನು ಇಲ್ಲಿ ನೋಡಬಹುದು.

1) ಪ್ರಜಾಪ್ರತಿನಿಧಿ ಸಭೆಯ ಗೌರವವನ್ನಾಗಲಿ ಅಥವಾ ಅದರ ಪ್ರಾಮುಖ್ಯತೆಯನ್ನಾಗಲಿ ಇಳಿಸುವಂಥ ಯಾವ ಪ್ರಯತ್ನವನ್ನೂ ಮಾಡಕೂಡದೆಂಬುದಾಗಿ ಜನಗಳ ಮನಸ್ಸಿನಲ್ಲಿ ಒಂದು ಬಗೆಯ ಧರ್ಮಶ್ರದ್ಧೆಯ ಭಾವನೆ ನೆಲಸಿದೆ. ಆದ್ದರಿಂದ ಮಸೂದಾ ಕಾನೂನಿನ ಮುಖ್ಯ ವಿಷಯಗಳಲ್ಲಿ ಮಾತ್ರವೇ ಅಲ್ಲದೆ ಅದರ ಯಾವುದಾದರೂ ನಿಬಂಧನೆಗಳ ವಿಷಯದಲ್ಲೂ ಸಹ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೂ ಪ್ರಜಾಪ್ರತಿನಿಧಿ ಸಭೆಯವರಿಗೆ ಅಧಿಕಾರವಿರಬೇಕು. ಮಸೂದಾ ಕಾನೂನಿನ ಸಾಮಾನ್ಯ ನಿಯಮಗಳಿಗೆ ಮಾತ್ರವೇ ಅಲ್ಲದೆ ಅದರ ಯಾವುದಾದರೂ "ಕ್ಲಾಸಿ"ಗೂ ಸಹ ತಿದ್ದುಪಡಿಗಳನ್ನು ಸೂಚಿಸಲು ಅವಕಾಶವಿರಬೇಕು. ಮತ್ತು ಪ್ರಜಾಪ್ರತಿನಿಧಿ ಸಭೆಯ ಮುಕ್ಕಾಲು ಭಾಗದಷ್ಟು ಮಂದಿ ಒಂದು ಮಸೂದಾ ಕಾನೂನನ್ನು ಒಟ್ಟಿನಲ್ಲಿ ಅನುಮೋದಿಸದೆ ಹೋದರೆ ಅದನ್ನು ನ್ಯಾಯ ವಿಧಾಯಕ ಸಭೆಯಲ್ಲಿ ಚರ್ಚೆಗೆ ತರಲೇ ಕೂಡದು.

2) ಅಲ್ಲಿಯವರೆಗೂ ಅಂಕೆಗಳಿಂದು ಕರೆಯಲ್ಪಡುತ್ತಿರುವ ಕಾರ್ಯಭಾಗವನ್ನು ಇನ್ನು ಮುಂದೆ ನಿಲ್ಲಿಸಿಬಿಡಬೇಕು. ಅದಕ್ಕೆ ಬದಲಾಗಿ ಒಟ್ಟು ಸಂಸ್ಥಾನದ ಹಿತಕ್ಕೆ ಸಂಬಂಧಪಟ್ಟ ವಿಷಯಗಳನ್ನು ನಿರ್ಣಯಗಳ ರೂಪದಲ್ಲಿ

ಸಭೆಯಲ್ಲಿ ತರಲು ಅವಕಾಶಕೊಡಬೇಕು. ಹಾಗೇನಾದರೂ ಇನ್ನು ಮುಂದೆಯೂ ಅರಿಕೆಗಳಿಗೆ ಆಸ್ಪದ ಕೊಡುವುದಾದಲ್ಲಿ ಈ ವಿಷಯಗಳನ್ನೂ ಸಹ ಸಭೆಯಲ್ಲಿ ಚರ್ಚೆಗೆ ತರಲು ಆಸ್ಪದ ಕೊಡಬೇಕು.

3) ಫಲಾನಾ ಮೊತ್ತವೆಂದು ಗೊತ್ತಾದ ಒಂದು ಮೊಬಲಗಿಗೆ ಮೇಲ್ಪಟ್ಟು ಹಣವು ವೆಚ್ಚವಾಗಬೇಕಾಗಿರುವ ಯಾವುದೇ ಏರ್ಪಾಟನ್ನೂ ಸರಕಾರದವರು ಕೈಗೊಳ್ಳಲಿ (ಅದು ಬಡ್ಜೆಟ್ಟಿನಲ್ಲಿ ಸೇರಿದ್ದರೂ ಸರಿ, ಸೇರಿಲ್ಲ ದಿದ್ದರೂ ಸರಿ) ಅದನ್ನು ಪ್ರಜಾಪ್ರತಿನಿಧಿ ಸಭೆಯವರ ಗಮನಕ್ಕೆ ತಂದು ಅನುಮೋದನೆ ಪಡೆಯಬೇಕು.

4) ಹತ್ತುಮಂದಿ ಸದಸ್ಯರನ್ನು ನಾಮಿನೇಷನ್ ಮೂಲಕ ನೇಮಕ ಮಾಡುವ ಅಧಿಕಾರವನ್ನು ಸರಕಾರದವರು ಉಳಿಸಿಟ್ಟುಕೊಳ್ಳಬೇಕಾದುದು ಆವಶ್ಯಕ. ವಿಶೇಷವಾಗಿ ಯಾವುದಾದರೂ ಒಂದು ವಿಚಾರವನ್ನು ವ್ಯಾಸಂಗ ಮಾಡಿರುವ ತಜ್ಞರನ್ನಾಗಲಿ ಅಥವಾ ಪಾರಿಭಾಷಿಕ ವಿಚಾರಗಳಲ್ಲಿ ಕೌಶಲವನ್ನು ಪಡೆದಿರತಕ್ಕವರನ್ನಾಗಲಿ ಅಥವಾ ಯಾವುದಾದರೊಂದು ರೀತಿಯ ವಿಶೇಷ ವಿಧದ ಪರಿಶ್ರಮ ಹೊಂದಿರುವವರನ್ನಾಗಲಿ ಪ್ರಜಾಪ್ರತಿನಿಧಿ ಸಭೆಯ ಸದಸ್ಯ ರನ್ನಾಗಿ ನೇಮಕಮಾಡಲು ಅದರಿಂದ ಅನುಕೂಲವಾಗುತ್ತದೆ.

5) ಮುಸಲ್ಮಾನ ಪಂಗಡದವರಿಗೆ ಪ್ರತ್ಯೇಕವಾದ ಚುನಾವಣಾ ಸ್ಥಾನ ಗಳನ್ನು ಕಾದಿರಿಸಬೇಕೆ ಎಂಬ ವಿಚಾರದಲ್ಲಿ ಯಾವುದಾದರೊಂದು ರೂಪದಲ್ಲಿ ಸಾರ್ವತ್ರಿಕ ಚುನಾವಣೆ ಸ್ಥಾನಗಳ ಶಿಸ್ತನ್ನೇ ಆಚರಣೆಗೆ ತರಬೇಕು; ಯಾವ ಸಂದರ್ಭದಲ್ಲಿಯೂ ಪ್ರತ್ಯೇಕ ಚುನಾವಣೆ ಸ್ಥಾನಗಳ ಏರ್ಪಾಟನ್ನು ಅಂಗೀಕರಿಸ ಕೂಡದು. ಇದೇ ಕ್ರೈಸ್ತ ಪಂಗಡದವರಿಗೂ ಅನ್ವಯಿಸುತ್ತದೆ.

6) ಪ್ರತಿಯೊಂದು ಡಿಸ್ಟ್ರಿಕ್ಟಿನಿಂದಲೂ ಚುನಾಯಿಸಲ್ಪಡಬೇಕಾಗಿರುವ ಸ್ತ್ರೀಯರನ್ನು ಆಯಾ ಡಿಸ್ಟ್ರಿಕ್ಟಿನಲ್ಲಿರುವ ಅಂಗೀಕೃತವಾದ ಸ್ತ್ರೀಯರ ಸಂಘಗಳ ಮೂಲಕ ಚುನಾಯಿಸುವ ಏರ್ಪಾಟನ್ನು ಆಚರಣೆಗೆ ತರಬಹುದು.

7) ಆಡಳಿತ ವಿಧ್ಯಮಾನಗಳು ಸರಿಯಾಗಿ ನಡೆಯುತ್ತಿಲ್ಲವೆಂದೂ ಸರ ಕಾರದವರ ಕಾರ್ಯನೀತಿಯಲ್ಲಿ ಬದಲಾವಣೆಯಾಗಬೇಕೆಂದೂ ಶಾಸನ ಸಭೆಗಳ ವರಿಗೆ ಕಂಡು ಬಂದ ಸಂದರ್ಭದಲ್ಲಿ ಅವರು ಮಂತ್ರಿವರ್ಗದವರಲ್ಲಿ ತಮಗೆ ನಂಬುಗೆಯಿಲ್ಲವೆಂಬ ಠರಾವನ್ನು ಮಾಡಿ ಅವರನ್ನು ಅವರ ಹುದ್ದೆಗಳಿಂದ ತಪ್ಪಿಸುವ ಕಾರ್ಯಕ್ರಮವನ್ನು ಅನುಸರಿಸಬೇಕೆಂಬುದಾಗಿ ನಾನು ಸಲಹೆ ಮಾಡುವವನಲ್ಲ. ನಾನು ಸೂಚಿಸುವ ಕಾರ್ಯಕ್ರಮವು ಬೇರೆ ರೀತಿಯಾಗಿರು

ತ್ತದೆ. ಮಂತ್ರಿಮಂಡಳಿಯವರು ತಮ್ಮ ಕಾರ್ಯನೀತಿಯನ್ನು ಬದಲಾಯಿಸಿ ಕೊಳ್ಳಬೇಕೆಂಬುದಾಗಿ ಅವರಿಗೆ ಆಜ್ಞಾಪಿಸಬೇಕೆಂಬುದಾಗಿ ಕೋರಿ ಪ್ರಜಾಪ್ರತಿನಿಧಿ ಸಭೆಯವರೂ ಮತ್ತು ನ್ಯಾಯ ವಿಧಾಯಕ ಸಭೆಯವರೂ ಪ್ರತ್ಯೇಕ ಪ್ರತ್ಯೇಕವಾಗಿ ಶ್ರೀಮನ್ಮಹಾರಾಜರವರಿಗೆ ವಿಜ್ಞಾಪಿಸುವುದಕ್ಕೆ ಅವಕಾಶವಿರಬೇಕೆಂಬುದೇ ನಾನು ಸೂಚಿಸುವ ಕಾರ್ಯಕ್ರಮ. ಇದು ಆಚರಣೆಯಲ್ಲಿ ನಡೆದು ಬರತಕ್ಕ ಒಂದು ಸಂಪ್ರದಾಯವಾಗಿ ಏರ್ಪಡುತ್ತದೆ. ಸರಕಾರದವರು ಅನುಸರಿಸುತ್ತಿರುವ ಕಾರ್ಯನೀತಿಯು ಜನಗಳಿಗೆ ಸಮ್ಮತವಾಗಿಲ್ಲವೆಂದೂ ಅವರ ಕಾರ್ಯನೀತಿಯನ್ನು ಬದಲಾವಣೆ ಮಾಡಿಕೊಳ್ಳುವುದು ಆವಶ್ಯಕವೆಂದೂ ಪ್ರಜಾಪ್ರತಿನಿಧಿ ಸಭೆಯಲ್ಲಿಯೂ ಮತ್ತು ನ್ಯಾಯ ವಿಧಾಯಕ ಸಭೆಯಲ್ಲಿಯೂ ಒಂದು ಗೊತ್ತಾದ ಪ್ರಮಾಣದಷ್ಟು ಅಧಿಕ ಸಂಖ್ಯೆಯ ಸದಸ್ಯರು ನಿರ್ಣಯವನ್ನು ಮಾಡಿದಲ್ಲಿ ಅದು ಸಚಿವ ಮಂಡಲದವರ ವಿಷಯದಲ್ಲಿ ಆ ಸಭೆಗಳವರು ಮಾಡತಕ್ಕ ಅಸಮಾಧಾನ ಸೂಚನೆಯೇ ಎಂಬುದಾಗಿ ಭಾವಿಸಬೇಕು. ಆಗ ಸಚಿವ ಮಂಡಲದಲ್ಲಿರತಕ್ಕವರೆಲ್ಲರನ್ನಾಗಲಿ ಅಥವಾ ಅವರ ಪೈಕಿ ಕೆಲವರನ್ನಾಗಲಿ ಅವರ ಹುದ್ದೆಗಳಿಂದ ತೆಗೆದು ಬೇರೆಯವರನ್ನು ಅವರ ಸ್ಥಾನದಲ್ಲಿ ನೇಮಕ ಮಾಡುವ ಅಧಿಕಾರವನ್ನು ಶ್ರೀಮನ್ಮಹಾರಾಜರವರಿಗೇ ಬಿಟ್ಟುಬಿಡಬೇಕು.

8) "ಬ್ರಿಟಿಷ್ ನ್ಯಾಷನಾಲಿಟಿ ಅಂಡ್ ಸ್ಟೇಟಸ್ ಆಫ್ ಏಲಿಯನ್ಸ್ ಆಕ್ಟ್" ಮತ್ತು "ನ್ಯಾಚುರಲೈಸೇಷನ್ ಆಕ್ಟ್ ಆಫ್ ಬ್ರಿಟಿಷ್ ಇಂಡಿಯ" ಎಂಬ ಕಾನೂನುಗಳ ಮಾದರಿಯಲ್ಲಿ ಮೈಸೂರು ಸಂಸ್ಥಾನದಲ್ಲಿಯೂ ಕೆಲವರನ್ನು ಸಂಸ್ಥಾನದ ಪ್ರಜೆಗಳನ್ನಾಗಿ ಭಾವಿಸುವುದಕ್ಕೆ ಸಂಬಂಧಪಟ್ಟ ಒಂದು ಕಾನೂನನ್ನು ಏರ್ಪಡಿಸುವುದು ಅಗತ್ಯ.

9) ಚುನಾವಣೆಗೆ ನಿಲ್ಲತಕ್ಕ ಉಮೇದುವಾರರುಗಳು ತಾವು ಚುನಾಯಿಸಲ್ಪಟ್ಟ ಪಕ್ಷದಲ್ಲಿ, ಸಂಯುಕ್ತ ಸರಕಾರದ ಶಾಸನಸಭೆಯಲ್ಲಿ ಪರ್ಯಾಲೋಚನೆಗೆ ಬರತಕ್ಕ ವಿಚಾರಗಳ ಸಂಬಂಧದಲ್ಲಿ ಮೈಸೂರು ಸಂಸ್ಥಾನದ ಸರಕಾರದವರ ಉದ್ದೇಶಗಳೂ ಮತ್ತು ಕಾರ್ಯನೀತಿಗಳೂ ಯಾವ ರೀತಿ ಇರುತ್ತವೆಂಬುದನ್ನು ತಿಳಿದುಕೊಳ್ಳಲು ತಾವು ಸರ್ವಪ್ರಯತ್ನಗಳನ್ನು ಮಾಡುವುದಾಗಿಯೂ ಮತ್ತು ಸಂಯುಕ್ತ ಸರಕಾರದ ಶಾಸನ ಸಭೆಯ ಆಯಾ ಶಾಖಾ ಸಭೆಯ ಸದಸ್ಯರಾಗಿದ್ದುಕೊಂಡು ತಾವು ತಮ್ಮ ಆತ್ಮಸಾಕ್ಷಿಯಾಗಿ ಸಂಸ್ಥಾನದ ಹಿತದಲ್ಲಿ ದೃಷ್ಟಿಯನ್ನಿಟ್ಟು ನಡೆದುಕೊಳ್ಳುವುದಾಗಿಯೂ ಒಂದು ಪ್ರಮಾಣ ಪತ್ರಿಕೆಯನ್ನು ತಮ್ಮ ರುಜು ಹಾಕಿ ಬರೆದು ಕೊಡಬೇಕು ಎಂದು ವಿಧಾಯಕ

ಮಾಡಬೇಕು.

10) ಪ್ರಜಾಪ್ರತಿನಿಧಿ ಸಭೆಗೆ ಅದುವರೆಗೆ ಇದ್ದಂತೆಯೇ ಇನ್ನು ಮುಂದೆಯೂ ದಿವಾನರವರೇ ಅಧ್ಯಕ್ಷರಾಗಿರಬೇಕೆಂಬ ಸೂಚನೆಗೆ ಅಸಮ್ಮತಿಯನ್ನು ಸೂಚಿಸಿದ್ದಾರೆ.

11) ಮೂಲಭೂತ ಹಕ್ಕುಗಳನ್ನು ಸಮಿತಿಯು ಪಟ್ಟಿಮಾಡುವಾಗ "ಸಾರ್ವಜನಿಕ ಶಾಂತಿ ಮತ್ತು ಶಿಸ್ತನ್ನು ಕಾಪಾಡುವ ಷರತ್ತಿಗೆ ಒಳಪಟ್ಟು ಎಲ್ಲ ಪ್ರಜೆಗಳೂ ಸಾರ್ವಜನಿಕ ರಸ್ತೆಗಳನ್ನೂ ಬಾವಿಗಳನ್ನೂ ಮತ್ತು ಕೆರೆಗಳನ್ನೂ ಮತ್ತು ಜನಗಳು ಸರ್ವೇ ಸಾಧಾರಣವಾಗಿ ಬಂದುಹೋಗತಕ್ಕ ಇತರ ಎಲ್ಲ ಸ್ಥಳಗಳನ್ನೂ ಉಪಯೋಗಿಸಲು ಅವಕಾಶವಿರತಕ್ಕುದಾಗಿದೆ" ಎಂದು ನಮೂದಿಸಿತ್ತು. ಇದರಲ್ಲಿ "ಸಾರ್ವಜನಿಕ ಶಾಂತಿ ಮತ್ತು ಶಿಸ್ತನ್ನು ಕಾಪಾಡುವ ಷರತ್ತಿಗೆ ಒಳಪಟ್ಟು" ಎಂಬ ಪದಗಳನ್ನು ತೆಗೆದುಹಾಕಬೇಕೆಂದು ಡಿ ವಿ ಜಿ ಯವರು ಸೂಚಿಸಿದ್ದರು.

ಸಮಿತಿಯು ತನ್ನ ವರದಿಯನ್ನು ಉಪಸಂಹಾರ ಮಾಡುತ್ತ, "ಈ ಕೂಡಲೇ ಸಂಪೂರ್ಣ ಜವಾಬ್ದಾರಿ ಸರಕಾರವನ್ನು ಸ್ಥಾಪಿಸಿ ಬಿಡಬೇಕೆಂಬ ತೀವ್ರಾಭಿಲಾಷೆಯುಳ್ಳವರಿಗೆ ನಮ್ಮ ಸಲಹೆಗಳು ಸಮ್ಮತವಾಗಿ ಕಂಡುಬರದೇ ಇದ್ದರೂ ಇರಬಹುದು. ಆದರೆ ಅವರಿಗೂ ನಮಗೂ ರಾಜಕೀಯ ಅಭ್ಯುದಯ ಸಾಧನೆಯ ಪರಿಣಾಮದ ಅಂತಿಮ ಧ್ಯೇಯದ ವಿಷಯದಲ್ಲಿ ಭಿನ್ನಾಭಿಪ್ರಾಯವಿರುವುದಿಲ್ಲ. ಅವರಿಗೂ ನಮಗೂ ಪರಸ್ಪರ ಭಿನ್ನಾಭಿಪ್ರಾಯವು ಹೆಚ್ಚಾಗಿರುವುದು, ಆ ಧ್ಯೇಯ ಸಾಧನೆಯು ಯಾವಾಗ ಎಷ್ಟೆಷ್ಟು ಮಟ್ಟಿಗೆ ನಡೆಯುತ್ತ ಹೋಗಬೇಕೆಂಬ ವಿಚಾರದಲ್ಲಿ ಮಾತ್ರ; ಒಡನೆಯೇ ಸಂಪೂರ್ಣ ಜವಾಬ್ದಾರಿ ಸರಕಾರವು ಏರ್ಪಡಬೇಕೆಂಬುದು ಅವರ ಆಶೆ; ಅದು ಮುಂದೆ ಯಥಾಕಾಲ ಏರ್ಪಡುವುದು ಉಚಿತವೆಂಬುದು ನಮ್ಮ ಅಭಿಪ್ರಾಯ. ರಾಜಕೀಯ ಸುಧಾರಣೆಗಳನ್ನೂ ಮತ್ತು ಬದಲಾವಣೆಗಳನ್ನೂ ಆಚರಣೆಗೆ ತರುವ ಕುತೂಹಲಭರದಲ್ಲಿ, ಅವುಗಳಿಂದ ಉತ್ತಮ ರೀತಿಯ ರಾಜ್ಯಾಡಳಿತವು ನೆಲೆಗೊಳ್ಳುವುದಕ್ಕೆ ಆತಂಕವುಂಟಾಗದಿರುವಂತೆಯೂ ಮತ್ತು ಅನೂಚಾನವಾಗಿ ನಡೆದು ಬಂದಿರತಕ್ಕ ಸತ್ಯಧರ್ಮಗಳ ಸತ್ಸಂಪ್ರದಾಯಗಳು ನೆಲೆ ತಪ್ಪಿ ಅವ್ಯವಸ್ಥೆಯುಂಟಾಗದಂತೆಯೂ ನೋಡಿಕೊಳ್ಳಬೇಕಾದುದು ಅವಶ್ಯಕ. ಟೆನ್ನಿಸನ್ ಎಂಬ ಸುಪ್ರಸಿದ್ಧ ಆಂಗ್ಲೇಯ ಕವಿಯು ತನ್ನ ಕವಿತೆಗಳಲ್ಲೊಂದರಲ್ಲಿ ಇಂಗ್ಲೆಂಡ್ ದೇಶವನ್ನು ಕುರಿತು, "ಸುವ್ಯವಸ್ಥಿತವಾಗಿ ನೆಲೆಗೊಂಡಿರತಕ್ಕ ರಾಜ್ಯಭಾರ ಕ್ರಮ

ಮನ್ನುಳ್ಳ ದೇಶವಿದು; ಉಚಿತವಾದ ರೀತಿಯಲ್ಲಿ ಪ್ರಾಚೀನ ಕಾಲದಿಂದಲೂ ಪ್ರಖ್ಯಾತಿ ಪಡೆದಿರತಕ್ಕ ದೇಶವಿದು; ಮತ್ತು ಪ್ರಜಾ ಸ್ವಾತಂತ್ರ್ಯವು ಕ್ರಮ ಕ್ರಮವಾಗಿ ವಿಕಾಸಗೊಳ್ಳುತ್ತ ಒಂದು ಮಜಲಿನ ಅವಲಂಬನದಿಂದ ಅದರ ಮುಂದಿನ ಮಜಲಿನಲ್ಲಿ ಸಾವಧಾನವಾಗಿ ಅಭಿವೃದ್ಧಿ ಹೊಂದುತ್ತ ಬಂದಿರುವ ದೇಶವಿದು" ಎಂದು ತಾತ್ಪರ್ಯವಾಗುವಂತೆ ನುಡಿದಿದ್ದಾನೆ. ಆ ಕವಿಯು ನುಡಿದಿರತಕ್ಕ ಉದಾತ್ತವಾದ ವಾಕ್ಯಗಳು ಮೈಸೂರು ಸಂಸ್ಥಾನಕ್ಕೂ ಅನ್ವಯಿಸುವಂತೆ ಕೆಲಸ ನಡೆಯಲು ಸಾಧ್ಯವಾಗಲೆಂಬುದೇ ನಮ್ಮ ಆಂತರವಾದ ಹಾರೈಕೆಯಾಗಿದೆ"— ಎಂದು ಹೇಳಿತು.

ಈ ಮಾತುಗಳನ್ನು ನೋಡಿದಾಗ ಈ ಹಾರೈಕೆ ಡಿ ವಿ ಜಿ ಯವರಿಂದ ಪ್ರಚೋದಿತವಾಯಿತು ಎಂದು ಊಹಿಸಬಹುದು. ಈ ರಾಜಕೀಯ ಸುಧಾರಣಾ ವರದಿಗಾಗಿ ಅವರು ಆ ವಿಚಾರವನ್ನು ಆಳವಾಗಿ ಕೂಲಂಕಶವಾಗಿ ಚಿಂತಿಸಿದ್ದರು, ಪ್ರಜೆಗಳ ಸರಕಾರ ಬರಲು ಪ್ರಾಯೋಗಿಕವಾದ ಸಲಹೆಗಳನ್ನು ಮಾಡಿದ್ದರು.

ಸಮಿತಿಯು ಜವಾಬ್ದಾರಿ ಸರಕಾರದ ಧ್ಯೇಯವನ್ನು ಒಪ್ಪಿಕೊಂಡು ಅದರಂತೆಯೇ ವರದಿಯನ್ನು ಕೊಟ್ಟಿದ್ದರೂ ಸಹ ಅದರ ವಿಚಾರದಲ್ಲಿ ಇನ್ನೂ ವಿವರಣೆಯು ಅಗತ್ಯ ಎಂದು ತಿಳಿದು ಡಿ ವಿ ಜಿ ಒಂದು "ಭಿನ್ನಾಭಿಪ್ರಾಯ ಟಿಪ್ಪಣಿ"ಯನ್ನು ಕೊಟ್ಟು, ಅದರಲ್ಲಿ ಶಾಸನ ಸಂಸ್ಥೆಗೆ ಜವಾಬ್ದಾರರಾಗಿರುವ ಮಂತ್ರಿಮಂಡಲ ಸರಕಾರ ನಡಸಬೇಕೆಂಬ ಧ್ಯೇಯವನ್ನು ಪ್ರತಿಪಾದಿಸಿದ್ದಾರೆ. ಆ ಧ್ಯೇಯ ಸಾಧನೆ ಕ್ರಮವಾಗಿ ಆಗಬೇಕಾದದ್ದು ಮತ್ತು ಅದರ ಮುಂದಿನ ಹೆಜ್ಜೆಯನ್ನು ನಿರ್ಧರಿಸುವವರು ಸರಕಾರದವರಲ್ಲ, ಶಾಸನ ಸಭೆಯೇ. ತಾವು ಜವಾಬ್ದಾರಿ ಸರಕಾರ ಪದ್ಧತಿಯನ್ನು ಕೂಡಲೇ ಜಾರಿಗೆ ತರಬೇಕೆಂದು ನಿರ್ಬಂಧ ಪಡಿಸುವುದಿಲ್ಲವೆಂದೂ ಅದಕ್ಕೆ ಸಿದ್ಧತೆಯ ಆವಶ್ಯಕತೆಯಿದೆಯೆಂದೂ ವಿವರಣೆ ನೀಡಿದ್ದಾರೆ. ಜವಾಬ್ದಾರಿ ಸರಕಾರ ಏಕೆ ಬೇಕು, ಆಗ ಪ್ರಚಲಿತವಾಗಿದ್ದ ಸರಕಾರ ಪದ್ಧತಿ ಏಕೆ ಬೇಡ ಎಂಬುದನ್ನು ವಿಸ್ತಾರವಾಗಿ ವಿಚಾರಮಾಡಿದ್ದಾರೆ. ಮೈಸೂರು ದೇಶದಲ್ಲಿ ಪ್ರಜೆಗಳು ಮೂರು ದಶಕಗಳಿಂದಲೂ ಜವಾಬ್ದಾರಿ ಸರಕಾರ ಪದ್ಧತಿಗಾಗಿ ಹೋರಾಡುತ್ತಿದ್ದಾರೆಂದೂ, ರಾಜಗೋಪಾಲಾಚಾರ್ಯರು ಮದ್ರಾಸಿನಲ್ಲಿ ಮುಖ್ಯಮಂತ್ರಿಗಳಾದದ್ದು ಮಾತ್ರ ಇದಕ್ಕೆ ಪ್ರಚೋದಕವಾಗಲಿಲ್ಲವೆಂದೂ, ಮೈಸೂರಿನ ಚರಿತ್ರೆಯನ್ನು ವಿವರಿಸಿದ್ದಾರೆ. "ಮೈಸೂರು ಮೈಸೂರಿನವರಿಗೇ" ಎಂಬುದನ್ನು ಜಾರಿಗೆ ತರಲು ಸಲಹೆಗಳನ್ನು ಮಾಡಿದ್ದಾರೆ.

ಕೊನೆಯಲ್ಲಿ "To see clearly into the future farther than a few paces in front of him is given to no man. In which exact year of grace Responsible Government will come to be found established in a perfect form in Mysore and what its distinct features will be are questions that need not be asked, for the answer is obvious that fulfilment will be largely in accordance with the good sense and capacity of the seekers" ಎಂದಿದ್ದಾರೆ.

ನಿರೀಕ್ಷೆ ಮಣ್ಣುಪಾಲು

ಸಮಿತಿ ತನ್ನ ವರದಿಯನ್ನು 31.8.1939 ರಂದು ಸರಕಾರಕ್ಕೆ ಒಪ್ಪಿಸಿತು. ಬಹು ದೀರ್ಘಕಾಲದಿಂದ ನಿರೀಕ್ಷಿಸಲ್ಪಡುತ್ತಿದ್ದ ಈ ವರದಿ, ಅದರ ಮೇಲೆ ಸರಕಾರದವರು ಹೊರಡಿಸಿದ ಆಜ್ಞೆ, ಶ್ರೀಮನ್ಮಹಾರಾಜರ ರಾಜಶಾಸನ ಎಲ್ಲ 6.11.1939 ರಲ್ಲಿ ಪ್ರಕಟವಾದುವು. ಅದನ್ನು ಕಂಡ ಡಿ ವಿ ಜಿ : "ಸದ್ಯದಲ್ಲಿ ಬರಲಿರುವ ಸುಧಾರಣೆಗಳಿಂದ ಸಂಸ್ಥಾನದ ಸಾರ್ವಜನಿಕ ಪರಿಸ್ಥಿತಿಗಳು ಉತ್ತಮಪಟ್ಟು ಒಳ್ಳೆಯ ದಿನಗಳು ಬಂದಾವೆಂದು ನಾನು ಮಾಡಿಕೊಂಡಿದ್ದ ನಿರೀಕ್ಷಣೆಯು ಸರಕಾರದ ಈ ಆಜ್ಞಾಪತ್ರದಿಂದ ಮುರಿದು ಮಣ್ಣುಪಾಲಾಗಿದೆ. ಈ ಹುಕುಮಿನಿಂದ ಆಗಲಿರುವ ಬದಲಾವಣೆಗಳು ಅಲ್ಪಸ್ವಲ್ಪ ವಿಚಾರದವು. ಅವು ನಮ್ಮ ರಾಜಕೀಯ ಪ್ರಶ್ನೆಯ ಅಂತರಂಗವನ್ನು ಮುಟ್ಟಲಾರವು....ಈಗ ಇರುವ ಮೂಲಭೂತವಾದ ಪ್ರಶ್ನೆ ಏನೆಂದರೆ:— ಸರಕಾರವು ಪ್ರಜಾಸಂಸ್ಥೆಗಳಿಗೆ ಎಷ್ಟು ಅಧಿಕಾರವನ್ನು ಬಿಟ್ಟುಕೊಡಲು ಸಿದ್ಧವಾಗಿದೆ ಎಂಬುದು. ಇದಕ್ಕೆ ಹುಕುಮಿನಲ್ಲಿ ಕಾಣಬರುವ ಉತ್ತರವು ವಾಸ್ತವವಾಗಿ "ಎಳ್ಳಷ್ಟೂ ಇಲ್ಲ" ಎಂಬುದೇ....ಶಾಸಕ ಸಂಸ್ಥೆಯ ವಿಚಾರಣೆಗೆ ಒಳಪಡದೆ ಇರುವ ಮಂತ್ರಿಪದವಿಗೆ ಇಬ್ಬರನ್ನಲ್ಲ ಇಪ್ಪತ್ತು ಮಂದಿಯನ್ನು ಏರಿಸಿದರೂ ಅದರಿಂದ ಪ್ರಜಾಪ್ರಗತಿಗೆ ಯಾವ ಸಹಾಯವೂ ಆಗಲಾರದು. ಅದು ರಾಜ್ಯದ ವೆಚ್ಚವನ್ನು ಮಾತ್ರ ಹೆಚ್ಚಿಸುವ ಏರ್ಪಾಟು. ತೆರಿಗೆಯ ಹೊರೆ ಹೆಚ್ಚುವುದೊಂದೇ ರೈತಸಿಗೆ ಅದರಿಂದ ಲಾಭ....ನಮ್ಮ ದೇಶದಲ್ಲಿ ಬಹುಕಾಲದಿಂದ ಅನುಸರಿಸಿಕೊಂಡು ಬಂದಿರುವ "ಅರ್ಜಿದಾರರು ಮತ್ತು ಉದ್ಧಾರಕರ್ತರು" ಎಂಬ ರಾಜಕೀಯ ಸಂಬಂಧವನ್ನೇ ಈ ಹುಕುಮು ಶಾಶ್ವತಪಡಿಸುವುದಾಗಿದೆ. ....ಈಗ ಹೊಸದಾಗಿ ಆಗಬೇಕಾಗಿರುವ ರಾಜ್ಯಗತ ಸಂಬಂಧವು "ಅರ್ಜಿ–ಅನುಗ್ರಹ"ಗಳದಲ್ಲ. 'ಹಕ್ಕು–ಕರ್ತವ್ಯ'ಗಳದು. ಇದನ್ನು ನಡಸುವುದು ಸರಕಾರದ ಕರ್ತವ್ಯ. ಇದರಲ್ಲಿ ಉಪಕಾರ ಹೇಸಾನುಗಳ ಅಥವಾ ದಯಾ ದಾಕ್ಷಿಣ್ಯಗಳ ಪ್ರಸಕ್ತಿಗೆ ಎಡೆಯಿಲ್ಲ— ಸರ್ಕಾರೀ ಆಜ್ಞೆಯು ಪ್ರಜಾಪಕ್ಷವನ್ನು ಅಣಕಿಸುವುದಕ್ಕೋ ಎಂಬಷ್ಟು ನಿರಾಶಾಕಾರಕವಾಗಿದೆ.. ಜವಾಬ್ದಾರಿ ಸರ್ಕಾರದ ಸ್ಥಾಪನೆಗಾಗಿ ಮೈಸೂರು ದೇಶದಲ್ಲಿ ಪ್ರಜಾಪ್ರಯತ್ನವು ಇನ್ನೂ ಬಹುಮಟ್ಟಿಗೆ ನಡೆಯ

ಬೇಕಾಗಿದೆ. ಇನ್ನೂ ಬಹುದೂರ ಸಾಗಬೇಕಾಗಿದೆ" ಎಂಬ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದರು.

ಆಗ ತಿರುಮಲೆ ತಾತಾಚಾರ್ಯ ಶರ್ಮಾ ಅವರು ತಾವು ನಡಸುತ್ತಿದ್ದ ವಿಶ್ವಕರ್ಣಾಟಕ ಪತ್ರಿಕೆಯಲ್ಲಿ ಸಮಿತಿಯ ಸಲಹೆಗಳು ಜನರನ್ನು ಪೂರ್ಣ ನಿರಾಶೆಗೊಳಿಸಿವೆ ಎಂದು ಕೆಲವು ಪ್ರಧಾನ ಲೇಖನಗಳನ್ನು ಪ್ರಕಟಿಸಿದರು. ಸ್ನೇಹಿತರ ಸಲಹೆಯ ಮೇಲೆ ಆ ಲೇಖನಗಳನ್ನೆಲ್ಲ ಒಂದು ಪುಸ್ತಕ ರೂಪದಲ್ಲಿ ಪ್ರಕಟಿಸಿ, ಅದಕ್ಕೆ ಡಿ ವಿ ಜಿ ಯವರ ಮುನ್ನುಡಿಯನ್ನು ಬರೆಸಿದರು. ಇದನ್ನು ಕುರಿತು ಶರ್ಮರು ಹೇಳಿರುವ ಮಾತುಗಳು ಇವು: "ಯೋಗ್ಯರಾದ ಹಿರಿಯರಿಂದ ಅದಕ್ಕೊಂದು 'ಮುನ್ನುಡಿ'ಯನ್ನೂ ಬರೆಸೋಣವೆನ್ನಿಸಿತು. ಹೀಗೆ ಅನ್ನಿಸಿದ ಕೂಡಲೆ ನೆಟ್ಟಗೆ ಶ್ರೀ ಡಿ. ವಿ. ಗುಂಡಪ್ಪನವರ ಬಳಿ ಹೋದೆ. ಅವರಿಗೆ ನನ್ನ ಉದ್ದಿಶ್ಯವನ್ನು ತಿಳಿಸಿದೆ. ಶ್ರೀ ಡಿ. ವಿ. ಗುಂಡಪ್ಪನವರು 'ಇಲ್ಲ' ಅನ್ನುವುದಿಲ್ಲ. ಆದರೆ ಅವರ ಬಾಯಲ್ಲಿ 'ಆಗಲಿ' ಅನ್ನಿಸುವುದು ಸುಲಭವಲ್ಲ. ಇದಕ್ಕೆ ಕಾರಣ ಅವರ ಅನೌದಾರ್ಯವಲ್ಲ. ಅವರಿಗಿರುವ ಕೆಲಸದ ಭಾರ. ನಾನು ನಿಜವಾಗಿ ಅದೃಷ್ಟಶಾಲಿ. ಹೋಗಿ ಕೇಳುವುದೇ ತಡ. "ಸಂತೋಷವಾಗಿ ಬರೆದು ಕೊಡುತ್ತೇನೆ" ಎಂಬುದಾಗಿ ಬಾಯಿ ತುಂಬ ಹೇಳಿದರು. ನಾನು ಕೈಗೊಂಡ ಕಾರ್ಯಕ್ಕೆ ಬಹಳ ಪ್ರೋತ್ಸಾಹವಿತ್ತರು. ಅಮೋಘವಾದ ಮುನ್ನುಡಿಯನ್ನು ಬರೆದುಕೊಟ್ಟರು. ಇದರಿಂದ ಪುಸ್ತಕಕ್ಕೆ ಅಪೂರ್ವವಾದ ಕಳೆ ಬಂತು. ನಿಜವನ್ನು ಹೇಳಬೇಕಾದರೆ ಪುಸ್ತಕದ ಬೆಲೆಯೆಲ್ಲ ಈ ಮುನ್ನುಡಿಯೆ."

ಮುನ್ನುಡಿಯ ಪ್ರಾರಂಭದಲ್ಲಿ ಡಿ ವಿ ಜಿ "ಒಳ್ಳೆಯ ಮದ್ಯದ ಪ್ರಸಿದ್ಧಿಗೆ ಈಚಲಗರಿಯ ಪತಾಕೆ ಬೇಕಾಗಿಲ್ಲವೆಂದು ಇಂಗ್ಲಿಷಿನಲ್ಲಿ ಒಂದು ಗಾದೆಯುಂಟು. 'ವಿಶ್ವಕರ್ಣಾಟಕ'ದ ಲೇಖನಗಳನ್ನು ಮಹಾಜನರಿಗೆ ಮೆಚ್ಚೆನಿಸಲು ಯಾರ ಶಿಫಾರಸೂ ಬೇಕಾಗಿಲ್ಲ. ಉನ್ನತ ಧ್ಯೇಯದಿಂದಲೂ, ಸ್ವತಂತ್ರ ದೃಷ್ಟಿಯಿಂದಲೂ ತನ್ನೊಂದು ವಿಶೇಷವಾದ ಸಜೀವ ಶೈಲಿಯಿಂದಲೂ ಆ ಪತ್ರಿಕೆ ನಮ್ಮ ಸಾರ್ವಜನಿಕ ರಂಗದಲ್ಲಿ ಒಂದು ಪ್ರಶಸ್ತ ಸ್ಥಾನವನ್ನು ಸಂಪಾದಿಸಿಕೊಂಡಿದೆ. ಇಂಥ ಪತ್ರಿಕೆ ಒಂದು ಗೌರವವನ್ನು ನೀಡುವುದಾದರೆ ಅದು ಯಾರಿಗೆ ತಾನೆ ಬೇಡ ? ನಾನಂತೂ ಅಂಥ ವಿರಕ್ತನೆಂದು ನಟಿಸಲಾರೆ." ಎಂದು ಹೇಳಿ ಮೈಸೂರು ದೇಶದಲ್ಲಾಗಿರುವ ರಾಜಕೀಯ ಬೆಳವಣಿಗೆಯ ಚರಿತ್ರೆಯನ್ನು ಸ್ಥೂಲವಾಗಿ ಹೇಳಿದ್ದಾರೆ. ಪ್ರಜಾಪ್ರಭುತ್ವಪದ್ಧತಿಯ ಮೇಲೆ ಬಂದಿರುವ ಆಕ್ಷೇಪಣೆಗಳನ್ನು ಪರೀಕ್ಷಿಸಿ, ಆ ಪದ್ಧತಿ ಕೃತಕೃತ್ಯವೆನಿಸಬೇಕಾದರೆ

ಸಭ್ಯಜನಾಂಗಗಳಲ್ಲಿ ಆಗಬೇಕಾದ ಮಾರ್ಪಾಟುಗಳನ್ನು ಸೂಚಿಸಿದ್ದಾರೆ. ಅವು ಯಾವುವೆಂದರೆ :

(1) ದೇಶ ವಿದೇಶಗಳ ಅನ್ಯೋನ್ಯ ಸಂಬಂಧವು ನ್ಯಾಯಸಮ್ಮತವಾದದ್ದಾಗಬೇಕು. ಹೀಗಾಗುವುದಕ್ಕೆ ಎಲ್ಲ ದೇಶಗಳಲ್ಲೂ ಪ್ರಜಾಧಿಕಾರ ಪದ್ಧತಿ ವ್ಯಾಪಿಸಬೇಕು.

(2) ಪ್ರತಿಯೊಂದು ರಾಜ್ಯದಲ್ಲಿಯೂ ನಾನಾ ಜನವರ್ಗಗಳಲ್ಲಿ ಸಂಪದ್ವಿಭಜನೆ (ಎಂದರೆ ಆಸ್ತಿ ವರಮಾನಗಳ ಹಂಚಿಕೆ) ಸಾಧ್ಯವಾದ ಮಟ್ಟಿಗೂ ಒಂದು ಸಮಹಿತ ನೀತಿಯನ್ನನುಸರಿಸಿರಬೇಕು.

(3) ರಾಜಕೀಯ ವಿಚಾರಗಳಲ್ಲಿ ಅಭಿಮತದಾರರುಗಳಲ್ಲಿ (ವೋಟರ್ಸ್) ವಿವೇಚನಾಭ್ಯಾಸವೂ ಸಾರ್ವಜನಿಕ ದೃಷ್ಟಿಯೂ ಹೆಚ್ಚಬೇಕು. ಎಂದರೆ ಪಕ್ಷ (ಪಾರ್ಟಿ) ದಾಸ್ಯವೂ ಜಾತಿ ಕೋಮು ಮೊದಲಾದ ಪೃಥಗ್ವರ್ಗನಿಷ್ಠೆಯೂ ತಗ್ಗಬೇಕು.

(4) ಸಾರ್ವಜನಿಕ ವಿಚಾರ ತಲೆ ಎತ್ತಿದಾಗ ಜನ ವಿಭಾಗದ ಮಾತು ತಲೆಬಾಗಬೇಕು. ನಮ್ಮ ಗೃಹ ಬಾಂಧವ್ಯದಲ್ಲಿಯ ನಾನಾ ಮಮತೆಗಳನ್ನು ನಾವು ದರ್ಜೆಗನುಸಾರವಾಗಿ ಹೊಂದಿಸಿ ಸಮನ್ವಯ ಪಡಿಸುವಂತೆ ನಮ್ಮ ದೇಶ ಜೀವನದಲ್ಲಿಯ ನಾನಾ ನಿಷ್ಠೆಗಳ ತಾರತಮ್ಯಗಳನ್ನರಿತು ಅವುಗಳಲ್ಲಿ ಚಿಕ್ಕದರಿಂದ ದೊಡ್ಡದಕ್ಕೆ ಬಾಧೆ ತಟ್ಟದಂತೆ ಜಾಗರೂಕತೆಯಿಂದಿರುವುದು ಧರ್ಮಸೂಕ್ಷ್ಮ.

(5) ಓದುಬರಹ ಹರಡಿದ ಮಾತ್ರದಿಂದಲೇ ಲೋಕದಲ್ಲಿ ವಿವೇಕ ಪ್ರಬಲಿಸುವುದೆಂಬ ಭರವಸೆಗೆ ಕಾರಣ ತೋರಿಲ್ಲ. ಲೇಖನ ಭಾಷಣಗಳು ಸಮಾಧಾನದಿಂದ ವಿಷಯವನ್ನು ವಿಶದ ಪಡಿಸುವುದರ ಬದಲು ವಾಚಕ ಸಭಿಕರಲ್ಲಿ ಉದ್ವೇಗಾವೇಶಗಳನ್ನು ಕೆರಳಿಸುತ್ತವೆ. ಎಲ್ಲ ಮನುಷ್ಯರಲ್ಲಿಯೂ ಕೆಲವು ಅಪರಿಷ್ಕೃತ ಭಾವನೆಗಳೂ ಕೆಲವು ಪೂರ್ವವಿಶ್ವಾಸಗಳೂ ಸ್ವಾಭಾವಿಕವಾಗಿರುತ್ತವೆ. ಇವುಗಳನ್ನೇ ಭಾಷಕರೂ ಹಿಡಿದೆತ್ತಿ ಪೋಷಿಸಿ, ಜನಕ್ಕೆ ಚಿತ್ತೋದ್ರೇಕ ಉಂಟುಮಾಡಿದರೆ ನಿಷ್ಪಕ್ಷಪಾತವಾದ ವಿವೇಚನೆ ನಡೆಯುವುದು ಹೇಗೆ? ಸತ್ಯದರ್ಶನಕ್ಕಿರುವ ಈ ಅಡಚಣೆಗಳನ್ನು ಅಭಿಮತದಾರನು ನೆನಪಿನಲ್ಲಿಟ್ಟು ಜಾಗರೂಕನಾಗಿ ತನ್ನ ಸ್ವಂತ ವಿವೇಕವನ್ನು ಉಳಿಸಿಕೊಳ್ಳಬೇಕು.

(6) ಚುನಾವಣೆಯ ಯಂತ್ರವನ್ನು ಎಷ್ಟು ಪರಿಶುದ್ಧ ಮಾಡಿದರೂ ಎಷ್ಟು ಪ್ರಾಮಾಣಿಕವನ್ನಾಗಿ ಮಾಡಿದರೂ ಅದು ರಾಜ್ಯಸೇವೆಗೆ ದೊರಕಿಸ

ಲಾಗದ ಶಕ್ತಿಗಳು, ಅಮೂಲ್ಯವಾದವು, ಕೆಲವು ಬೇರೆ ನಿಂತಿರುತ್ತವೆ. ವ್ಯಕ್ತೈಕ ಲಭ್ಯವಾದ ಪ್ರತಿಭೆ ದಕ್ಷತೆಗಳನ್ನು ಸರಕಾರಕ್ಕೆ ಸಂಪಾದಿಸಿ ಕೊಡಲು ಬರಿಯ ಚುನಾವಣೆಯ ವ್ಯವಸ್ಥೆ ಸಾಲದು. ಅದರ ಜೊತೆಗೆ ಬೇರೊಂದು ವಿಧಾನವಿರ ಬೇಕು. ಆ ವಿಧಾನ ಹೇಗೆಂದು ಪ್ರಜಾರಾಜ್ಯಗಳು ಕಂಡು ಹಿಡಿದುಕೊಳ್ಳು ವುದು ಅವುಗಳ ಕ್ಷೇಮಕ್ಕೆ ಈಗ ಅತ್ಯಂತ ಅವಶ್ಯವಾಗಿದೆ.

(7) ಎಲ್ಲಕ್ಕಿಂತ ಮುಖ್ಯವಾಗಿ ಪ್ರತಿಯೊಬ್ಬ ಪ್ರಜೆಯ ಮನಸ್ಸಿನಲ್ಲೂ ತನ್ನ ಹಕ್ಕಿನ ಯೋಚನೆಗಿಂತ ತನ್ನ ಕರ್ತವ್ಯದ ಯೋಚನೆ ಹೆಚ್ಚಾಗಿ ಪ್ರಬಲಿ ಸಿರಬೇಕು.

ಪ್ರಜಾತಂತ್ರವು ಸಾಧ್ಯವಾದಷ್ಟು ಮಟ್ಟಿನ ಪರಿಪೂರ್ಣದೆಶೆಗೆ ಬಂದು ಜಯಶಾಲಿಯಾಗಬೇಕಾದರೆ ಅದಕ್ಕೆ ಬೇಕಾಗಿರುವುದು ಹೊಸ ಧರ್ಮದರ್ಶನ. ಪ್ರಜಾಜನರ ಮನಸ್ಸು ಇನ್ನೂ ವಿಸ್ತಾರವಾಗಿ ಬೆಳೆದು ಅವರ ಧ್ಯೇಯಗಳು ಇನ್ನೂ ಉನ್ನತಮಟ್ಟಕ್ಕೇರಿ ಅವರ ಪರಸ್ಪರ ವರ್ತನೆಯಲ್ಲಿ ಇನ್ನೂ ಹೆಚ್ಚಿನ ಸ್ನೇಹಭಾವವು ತೋರಿಬಂದಲ್ಲದೆ ಪ್ರಜಾರಾಜ್ಯವು ತನ್ನ ಆದರ್ಶಸ್ಥಿತಿಗೆ ಏರ ಲಾರದು. ಪ್ರಜಾರಾಜ್ಯದ ಉತ್ಕೃಷ್ಟತೆ ಪ್ರಜೆಯ ಆತ್ಮ ಸಂಸ್ಕಾರಕ್ಕೆ ತಕ್ಕಂತೆ. ಇದೇ ಈ ಒಟ್ಟು ವಿಚಾರದ ಸಾರಾಂಶ.

ಜವಾಬ್ದಾರಿ ಸರಕಾರದ ಅಪೇಕ್ಷೆಯುಳ್ಳ ಪ್ರಜಾಜನರು ಆ ಅಪೇಕ್ಷೆ ಸಾಂಗವಾಗಿ ಕೈಗೂಡುವವರೆಗೂ ಅದಕ್ಕೆ ತಕ್ಕ ಮನೋಧರ್ಮವನ್ನು ವ್ಯವ ಸಾಯ ಮಾಡಿಕೊಳ್ಳುತ್ತಲೂ ಅನುಭವವನ್ನು ಕೂಡಿದ ಮಟ್ಟಿಗಾದರೂ ಸಂಪಾದಿಸಿಕೊಳ್ಳುತ್ತಲೂ ಪರಿಶ್ರಮಿಸಬಹುದು. ಅವರು ಮಾಡಬಹುದಾದ ಯೋಗ್ಯತಾ ಸಾಧನ ಕಾರ್ಯಗಳಲ್ಲಿ ಮೊದಲನೆಯದು ರಾಜಕೀಯ ಶಾಸ್ತ್ರ ವ್ಯಾಸಂಗ. ಎರಡನೆಯ ಕಾರ್ಯ ಪ್ರಕೃತವಿರುವ ಸಭೆ ಸಂಸ್ಥೆಗಳನ್ನು ಪ್ರಾಮಾ ಣಿಕತೆಯಿಂದ ನಡಸುವುದು.

ಜವಾಬ್ದಾರಿ ಸರಕಾರ ನಮ್ಮ ಧ್ಯೇಯ ಎಂದು ಸಮಿತಿ ಹೇಳುವುದಕ್ಕೇ ಡಿ ವಿ ಜಿ ಹೆಣಗಾಡಬೇಕಾಯಿತು. ಹಾಗೆ ಮೊದಲನೆಯ ಹಂತದಲ್ಲಿ ಒಂದು ರೀತಿ ಗೆದ್ದಾದ ಮೇಲೆ, ತಮ್ಮ ಮನೋಗತವನ್ನು ಬಲ್ಲ ಮಿರ್ಜಾರವರು ಸಮಿತಿಯ ಈ ಸಲಹೆಯನ್ನು ಒಪ್ಪಿಕೊಳ್ಳುವರೆಂಬ ನಿರೀಕ್ಷೆ ಅವರಿಗೆ ಇತ್ತೋ ಏನೋ, ಅಂತೂ ಅವರಿಗಾದ ನಿರಾಸೆ ಹೇಳತೀರದು. ತಾನು ಹೇಳುವುದು ಒಂದು, ಮಾಡುವುದು ಇನ್ನೊಂದು ಎಂಬಂತೆ, ಮಿರ್ಜಾರವರ ರಾಜನೀತಿ ಚಾತು ರ್ಯಕ್ಕೆ ತಾನೂ ಬಲಿಯಾದೆನೋ ಎಂದು ಅವರಿಗನ್ನಿಸಿದ್ದಿರಬಹುದು.

ಶರ್ಮರ ಪುಸ್ತಕಕ್ಕೆ ಮುನ್ನುಡಿಯನ್ನು ಬರೆದು ಕಳುಹಿಸಿದ ಐದು ದಿನಗಳೊಳಗಾಗಿ 2.8.40ರಂದು ಮಹಾರಾಜರಾಗಿದ್ದ ಶ್ರೀಕೃಷ್ಣರಾಜ ಒಡೆಯರ್ ಅವರು ಕಾಲಾಧೀನರಾದರು. ಅದು ಡಿ ವಿ ಜಿಯವರಿಗೆ ಒಂದು ವೈಯಕ್ತಿಕವಾದ ದುಃಖವಾಯಿತು ಎನ್ನಬಹುದು.

ಆಗಸ್ಟ್ 1940ರ "ತ್ರಿವೇಣಿ" ಪತ್ರಿಕೆಯಲ್ಲಿ ಡಿ ವಿ ಜಿ ಕೃಷ್ಣರಾಜೇಂದ್ರ ಒಡೆಯರ್ ಅವರನ್ನು ಕುರಿತು ಒಂದು ಲೇಖನವನ್ನು ಬರೆದು ಅವರಲ್ಲಿದ್ದ ದೇಶ ಭಕ್ತಿಯನ್ನೂ ಸಮಗ್ರ ಭಾರತ ದೃಷ್ಟಿಯನ್ನೂ ಸಾಂಕುಶ ರಾಜ್ಯಾಧಿಪತ್ಯದ ಸಂಪ್ರದಾಯಗಳನ್ನು ಅವರು ಪಾಲಿಸಿಕೊಂಡು ಬಂದ ರೀತಿಯನ್ನೂ ಕೊಂಡಾಡಿದ್ದಾರೆ. ಆ ಲೇಖನದ ಕೊನೆಯಲ್ಲಿ ಅವರನ್ನು ಕುರಿತು "Constitutionalist and Nationalist as he was, his politics had for its basis a certain upward looking disposition of the soul. He was for ever on a quest after Dharma. Life's experiences had filled him with a vivid and constant sense of the limited values of the things of this world ...The late Maharaja was a lover of great solitudes and great silences, a man who loved to brood and to penetrate to the mystery of life, one who sought to commune with Nature and realise the one Essence behind her phantasmagoria. He was such a one among princes as might have been singled out by Plato for approbation. He belongs to the company of Ashoka and Aurelius, with the splendour of the crown made mellow by the wrinkles on the brow" ಎಂದು ತಮ್ಮ ಮನಸ್ಸಿನಲ್ಲಿ ಆ ಪ್ರಭುವನ್ನು ಕುರಿತು ಇದ್ದ ಅಭಿಪ್ರಾಯವನ್ನು ಸೊಗಸಾಗಿ ವಿವರಿಸಿದ್ದಾರೆ.

ತಮ್ಮ 38 ವರ್ಷಗಳ ರಾಜ್ಯಭಾರದಲ್ಲಿ ಯಾವಾಗಲೂ ಆ ಪ್ರಭುಗಳು ಸಾಂಕುಶ ವ್ಯವಸ್ಥೆಯಲ್ಲಿ ಅನುಸರಿಬೇಕಾದ ಮರ್ಯಾದೆಯನ್ನು ಮೀರಿದವರಲ್ಲ. ಅಂಥವರ ಕೃಪಾಪೋಷಣೆಯಿದ್ದಿದ್ದರೆ ಜವಾಬ್ದಾರಿ ಸರಕಾರದ ಪ್ರಾರಂಭಕ್ಕೆ ಸಂದರ್ಭ ಅತ್ಯಂತ ಅನುಕೂಲವಾಗುತ್ತಿತ್ತು. ಆಗ ಹೊಸದಾಗಿ ಪದವಿಗೆ ಬಂದಿದ್ದ ಶ್ರೀ ಜಯಚಾಮರಾಜ ಒಡೆಯರು ರಾಜ್ಯಪರಿಸ್ಥಿತಿಗಳನ್ನು ಸ್ವತಂತ್ರವಾಗಿ ಪರಿಶೀಲಿಸಿ ಅನುಭವ ತಂದುಕೊಂಡ ಬಳಿಕ ಜವಾಬ್ದಾರಿ ಸರಕಾರ ವ್ಯವಸ್ಥೆಯ ವಿಚಾರವನ್ನು ರೂಪಗೊಳಿಸುವರೆಂಬ

ನಂಬಿಕೆಯನ್ನು ಶರ್ಮರ ಗ್ರಂಥದ ಮುನ್ನುಡಿಗೆ ಸೇರಿಸಿದ ಟಿಪ್ಪಣಿಯಲ್ಲಿ ವ್ಯಕ್ತ ಪಡಿಸಿದರು.

ಆದರೆ ಆ ನಂಬಿಕೆ ನಿಜವಾಗಲಿಲ್ಲ.

ಈ ಮುನ್ನುಡಿ ಡಿ ವಿ ಜಿ ಯವರ ರಾಜಕೀಯ ಸಿದ್ಧಾಂತದ ಬೆಳವಣಿಗೆಯ ಒಂದು ಹಂತವನ್ನು ತೋರಿಸುತ್ತದೆ ಎನ್ನಬಹುದು. 1913ರಿಂದಲೂ ಜವಾಬ್ದಾರಿ ಸರಕಾರಕ್ಕೆ, ಪ್ರಜಾಪ್ರಭುತ್ವಕ್ಕೆ ಹೋರಾಡುತ್ತಿದ್ದ ಅವರಿಗೆ ಪ್ರಜಾಪ್ರಭುತ್ವ ಬಂದಾಗ ಎದುರಿಸಬೇಕಾದ ಆತಂಕಗಳ ಚಿಂತೆ ಎದುರಾಯಿತು. ಶ್ರೀನಿವಾಸ ಆಯ್ಯಂಗಾರ್ ಸಮಿತಿಯಲ್ಲೂ, ನ್ಯಾಯ ವಿಧಾಯಕ ಸಭೆಯಲ್ಲೂ ಸರಕಾರದ ಜನ, ಅವರನ್ನು ಅನುಸರಿಸುತ್ತಿದ್ದ ಜನ ಪ್ರಜಾ ಪ್ರಭುತ್ವ ಪಾಶ್ಚಾತ್ಯ ರಾಜ್ಯಗಳಲ್ಲಿ ಎದುರಿಸುತ್ತಿದ್ದ ತೊಂದರೆಗಳನ್ನೇ ಎತ್ತಿ ತೋರಿಸಿ, ಪಾಶ್ಚಾತ್ಯ ರಾಜ್ಯ ಶಾಸ್ತ್ರಜ್ಞರ ಅಭಿಪ್ರಾಯಗಳನ್ನು ಉದಾಹರಿಸುತ್ತಿದ್ದರು. ಪ್ರಜಾಪ್ರಭುತ್ವ ಪದ್ಧತಿ ಜರ್ಮನಿಯಲ್ಲಿ ನಾಶವಾಗಿ ಹೋಗಿ ಮಹಾಯುದ್ಧ ಪ್ರಾರಂಭವಾಗಿತ್ತು. ಆಗ ಪ್ರಜಾರಾಜ್ಯ ಪದ್ಧತಿ ಜಯಶೀಲವಾಗಬೇಕಾದರೆ ಅದಕ್ಕೆ ಒಂದು ಮನೋಭಾವಬೇಕು, ಒಂದು ಸಿದ್ಧತೆಬೇಕು ಎಂಬ ವಿಷಯ ಡಿ ವಿ ಜಿ ಅವರ ಮನಸ್ಸಿನಲ್ಲಿ ಮನೆಮಾಡಿತು.

ಅದಕ್ಕೆ ದಾರಿ, ಗೋಖಲೆಯವರು ಅನುಸರಿಸಿದ ದಾರಿಯೇ ಸರಿ ಎಂದು ಅವರಿಗೆ ತೋರಿತು. ಅವರ ನ್ಯಾಯವಿಧಾಯಕಸಭೆಯ ಸದಸ್ಯತ್ವದ ಅವಧಿ ಮುಗಿದಾಗ, ರಾಜಕೀಯ ಸುಧಾರಣೆಗಳ ಪರಿಣಾಮವಾಗಿ ಹೊಸ ಸಭೆಯ ರಚನೆಯಾದಾಗ, ಡಿ ವಿ ಜಿ ಯವರು ಪುನಃ ಆ ಸಭೆಯ ಚುನಾವಣೆಗೆ ನಿಲ್ಲಲಿಲ್ಲ. ಆ ಸಮಯದಲ್ಲಿ 6-1-1941ರಲ್ಲಿ ತಾವು ಪ್ರತಿನಿಧಿಸುತ್ತಿದ್ದ ವಿಶ್ವವಿದ್ಯಾಲಯ ಚುನಾವಣಾ ಕ್ಷೇತ್ರದ ಮತದಾರರಿಗೆ ಒಂದು ಪತ್ರವನ್ನು ಬರೆದು ಸುಮಾರು ಆರು ವರ್ಷಗಳ ಕಾಲ ಅವರನ್ನು ಪ್ರತಿನಿಧಿಸುವ ಗೌರವವನ್ನು ತೋರಿಸಿದ್ದಕ್ಕಾಗಿ ಅವರಿಗೆ ಕೃತಜ್ಞತೆಗಳನ್ನು ತಿಳಿಸಿದ್ದಾರೆ. ಮತ್ತು ವೈಯಕ್ತಿಕ ಕಾರಣಗಳಿಗಾಗಿ ಅವರ ಪ್ರತಿನಿಧಿಯಾಗಿ ಪುನಃ ಸೇವೆಸಲ್ಲಿಸಲು ಸಾಧ್ಯವಾಗದೆ ಹೋದುದಕ್ಕೆ ವಿಷಾದವನ್ನು ವ್ಯಕ್ತಪಡಿಸಿದ್ದಾರೆ. ವಿಶ್ವವಿದ್ಯಾಲಯ ಚುನಾವಣಾಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾಗ ತಾವು ಮಾಡಿದ ಕೆಲಸಗಳನ್ನು ಸ್ಥೂಲವಾಗಿ ಹೀಗೆ ಹೇಳಿದ್ದಾರೆ: (1) ಎಲ್ಲ ರಾಜಕೀಯ ಸುಧಾರಣೆಗಳಿಗೂ ಜವಾಬ್ದಾರಿ ಸರಕಾರದ ಗುರಿಯನ್ನಿಟ್ಟುಕೊಂಡದ್ದು (2) ವ್ಯಕ್ತಿಸ್ವಾತಂತ್ರ್ಯಕ್ಕೆ ಅಡ್ಡಿ ಬಂದಾಗ, ದಬ್ಬಾಳಿಕೆಯ ನೀತಿಗೆ ವಿರೋಧವನ್ನು ವ್ಯಕ್ತ

ಪಡಿಸಿದ್ದು (3) ಸಾರ್ವಜನಿಕ ವೆಚ್ಚ ಮತ್ತು ಸಾರ್ವಜನಿಕ ಆಡಳಿತಗಳ ಪರಿಶೀಲನೆಗೆ ಒತ್ತಾಯ (4) ಸರಕಾರಿ ನೌಕರರ ಸಂಬಳ ಸಾರಿಗೆಗಳನ್ನು ಉತ್ತಮಗೊಳಿಸಲು ಪ್ರಯತ್ನ (5) ಸರಕಾರದ ವಾಣಿಜ್ಯ ಕೈಗಾರಿಕಾ ಉದ್ಯಮಗಳ ಪರಿಶೀಲನೆ (6) ವಿಶ್ವವಿದ್ಯಾಲಯ ಮತ್ತು ಇತರ ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ಅಧಿಕಾರವನ್ನು ದೊರಕಿಸಿಕೊಡಲು ಪ್ರಯತ್ನ (7) ವಿಶ್ವವಿದ್ಯಾಲಯಕ್ಕೆ ಹೆಚ್ಚಿನ ಹಣದ ಅನುದಾನಕ್ಕೆ ಒತ್ತಾಯಪಡಿಸಿದ್ದು. (8) ಕೈಗಾರಿಕೆಗೆ ಮತ್ತು ವಾಣಿಜ್ಯಗಳ ಬೆಳವಣಿಗೆಗೆ ಪ್ರೋತ್ಸಾಹ.

ಹೀಗೆ (1948ರಲ್ಲಿ ಸ್ವಲ್ಪ ಕಾಲವನ್ನು ಬಿಟ್ಟರೆ) 1940ಕ್ಕೆ ಶಾಸನ ಸಭೆ ಮೊದಲಾದ ಸಾರ್ವಜನಿಕ ಸಂಸ್ಥೆಗಳೊಡನೆ ಡಿ ವಿ ಜಿ ಯವರಿಗಿದ್ದ ಸಂಪರ್ಕ ಮುಗಿಯಿತು. “ಆ ಬಳಿಕ ಸರಕಾರಕ್ಕೂ ನನಗೂ ನೇರವಾದ ಸಂಪರ್ಕವೇನೂ ಇರಲಿಲ್ಲ. ಅಲ್ಲಿಂದೀಚೆಗೆ ನಾನು ಬರಿಯ ಸಾಕ್ಷಿ–ದೂರದ ಸಾಕ್ಷಿ” ಎಂದಿದ್ದಾರೆ ಡಿ ವಿ ಜಿ.

ಪಶ್ಚಾತ್ತಾಪ

"ಎಣ್ಣೆ ಬಂದಾಗ ಕಣ್ಣು ಮುಚ್ಚಿಕೊಂಡರು" ಎಂಬ ಗಾದೆಯೊಂದುಂಟಲ್ಲವೆ. ಹಾಗೆ ಜವಾಬ್ದಾರಿ ಸರಕಾರದತ್ತ ದೇಶ ನಡೆಯುತ್ತಿದ್ದಾಗ ಡಿ ವಿ ಜಿಯುವರು ರಾಜಕೀಯದಿಂದ ದೂರವಾದದ್ದೇಕೆ? ಅವರು ತಾವು ರಾಜಕೀಯದಿಂದ ದೂರವಾದುದಕ್ಕೆ ಯಾವ ವಿಧವಾದ ಹೇಳಿಕೆಯನ್ನೂ ಕೊಟ್ಟಂತೆ ತೋರುವುದಿಲ್ಲ. ಆದರೆ ಕೆಲವು ಕಾರಣಗಳನ್ನು ನಾವು ಊಹಿಸಬಹುದು. "ಶ್ರೀ ಕ್ಯಾಸಂಬಳ್ಳಿ ಚಂಗಲರಾಯ ರೆಡ್ಡಿಯವರು ಜವಾಬ್ದಾರಿ ಸರಕಾರದ ಯುಗದಲ್ಲಿ ಮುಖ್ಯ ಮಂತ್ರಿಗಳಾದರು. ಅವರ ತರುವಾಯ ಮುಖ್ಯ ಮಂತ್ರಿಗಳಾದವರನ್ನು ಎಲ್ಲರೂ ಬಲ್ಲರು. ಅವರನ್ನು ಕುರಿತು ಮಾತನಾಡಲು ನನಗೆ ಅಧಿಕಾರ ಸಾಲದೆಂದು ತಿಳಿದುಕೊಂಡಿದ್ದೇನೆ. ನಾನು ಪ್ರಾಚೀನ; ಅವರೆಲ್ಲ ನವೀನರು. ನನ್ನ ಮನಸ್ಸು ಪೂರ್ವಾಗ್ರಹ ಬದ್ಧವಾದದ್ದೆಂದು (Prejudiced) ಹೇಳಿದರೆ ಅದಲ್ಲವೆಂದು ನಾನು ಪ್ರತ್ಯುತ್ತರ ಹೇಳಲಾರೆ. ಹಾಗಿರಬಹುದೋ ಏನೋ. ನಾನು ಪರಮ ಪರಿಶುದ್ಧ, ನನ್ನ ಮನಸ್ಸು ಅತ್ಯಂತ ನಿಷ್ಕಲ್ಮಷವಾದದ್ದು—ಎಂದು ಹೇಳಿಕೊಳ್ಳುವ ಧೈರ್ಯ ನನಗಿಲ್ಲ" ಎಂದು ಅವರು ಹೇಳಿರುವ ಮಾತುಗಳ ಹಿನ್ನೆಲೆಯಲ್ಲಿ ಅವರು ರಾಜಕೀಯದಿಂದ ವಿರಮಿಸಿದ್ದನ್ನು ಕುರಿತು ಎರಡು ಮಾತುಗಳನ್ನು ಹೇಳಬಹುದು.

ಮೊದಲನೆಯದಾಗಿ ಅವರಿಗೆ ಶ್ರೀನಿವಾಸ ಅಯ್ಯಂಗಾರ್ ಸಮಿತಿಯಲ್ಲಿ ಆದ ಅನುಭವ. ಅವರು 16-3-1939 ರಲ್ಲಿ ಮಿರ್ಜಾ ಸಾಹೇಬರಿಗೆ ಬರೆದ ಒಂದು ಪತ್ರದಲ್ಲಿ "From the early stages of the committee's work I have had disagreeable experiences there and my apprehensions in regard to a considerable section of the personal elemants have since turned out grievously true." ಎಂದರು. ಮತ್ತು ಸಮಿತಿಯು ಜವಾಬ್ದಾರಿ ಸರಕಾರವನ್ನು ಮುಂದಿನ ಗುರಿ ಎಂದೂ ಸಲಹೆ ಮಾಡಲು ಸಿದ್ಧವಾಗಿರಲಿಲ್ಲ. ಆ ಸಲಹೆ ಮಾಡಲೂ ಸಮಿತಿಯೊಡನೆ ಅವರು ಹೋರಾಡಬೇಕಾಯಿತು. ಈ ಪರಿಸ್ಥಿತಿಯಲ್ಲಿ ಅವರಿಗೆ ತಾವು ರಾಜಕೀಯದಲ್ಲಿ ಮುಂದುವರಿಯುವುದು ವೃಥಾ ಶ್ರಮವೆನ್ನಿಸಿರಬೇಕು.

ಎರಡನೆಯದಾಗಿ ಡಿ ವಿ ಜಿ ಯವರು, ಗೋಖಲೆಯವರನ್ನು ಅನುಸರಿಸಿ, ನಡೆಯುತ್ತಿದ್ದದ್ದು ಒಡಂಬಡಿಕೆಯ ದಾರಿಯಲ್ಲಿ. "ಒಡಂಬಡಿಕೆಯ ದಾರಿಯೆಂದರೆ ವಿವೇಕದ ದಾರಿ. ಕಾರ್ಯ ಕಾರಣಗಳ ವಿವೇಚನೆ. ನ್ಯಾಯಾನ್ವೇಷಣೆ. ಇದು ಯಾವಾಗಲೂ ಸಾವಧಾನದ ದಾರಿ. ವಿವೇಕವು ಅವಸರ ಆತುರಗಳಿಂದ ಬರತಕ್ಕದ್ದಲ್ಲ." ಆದರೆ "ಮಹಾತ್ಮಾಗಾಂಧಿಯವರೇ ಆತುರದಲ್ಲಿ ಮುಂದಾಳಾಗಿದ್ದರು. ವಿದುರಾಶ್ವತ್ಥದ ಗಲಭೆಯಾದ ಮಾರನೆಯ ದಿನ ಅವರು ದಿವಾನ್ ಮಿರ್ಜಾರವರಿಗೆ ಟೆಲಿಗ್ರಾಂ ಕಳುಹಿಸಿದರು. ಹೀಗೆ: "ಕೂಡಲೇ ಜವಾಬ್ದಾರಿ ಸರಕಾರವನ್ನು ಕೊಟ್ಟುಬಿಡಿ, ಜನ ತಮ್ಮ ಅರ್ಹತೆಯನ್ನು ಈಗ ರುಜುವಾತು ಮಾಡಿಕೊಟ್ಟಿದ್ದಾರೆ"—ಎಂದು. ಇದರ ತಾತ್ಪರ್ಯ ಏನು? ದೊಂಬಿಯ ಉತ್ಸಾಹವು ಅರ್ಹತೆಯ ರುಜುವಾತೆಂದಲ್ಲವೆ? ಜವಾಬ್ದಾರಿ ಸರಕಾರದ ಹೆಸರಿನಲ್ಲಿ ನಡಸುತ್ತಿದ್ದ ಚಳವಳಿ 1939 ಕ್ಕೆ ಹಿಂದೆಯೇ ಪ್ರಬಲವಾಗಿತ್ತು. ಸುಲ್ತಾನ್ ಪೇಟೆಯ ಗದ್ದಲ (1928), ವಿದುರಾಶ್ವತ್ಥದ ಗದ್ದಲ ಮೊದಲಾದ ದೊಂಬಿಯ ಪ್ರಕರಣಗಳು ಆ ಚಳವಳಿಯ ಅಂಶಗಳು. ಆ ಕಾಲದಲ್ಲಿ ಬ್ರಿಟಿಷ್ ಇಂಡಿಯದಲ್ಲಿ ರಾಜಕೀಯ ಚಳವಳಿ ಜೋರಾಗಿತ್ತಷ್ಟೆ? ಮಹಾತ್ಮಾ ಗಾಂಧಿಯವರ ಸ್ಫೂರ್ತಿ ಪ್ರಭಾವದಿಂದ ಅಲ್ಲಿಯ ದೊಡ್ಡ ಚಳವಳಿ ಬಹು ಮುಖವಾಗಿ ಹರಡುತ್ತಿತ್ತು. ಮದರಾಸಿನ ಬಳಿಯ ಬಂಗಾಳಕೊಲ್ಲಿಯಲ್ಲಿ ವಾಯುಮಾನದ ಒತ್ತಡ ಬಂದು ಮೋಡವೆದ್ದು ಹನಿ ಜಿನುಗಿದಾಗ ಬೆಂಗಳೂರಿನ ಹವೆ ಅದನ್ನು ತಪ್ಪಿಸಿಕೊಳ್ಳಲಾಗುತ್ತದೆಯೆ? ಹೀಗೆ ಕಾಂಗ್ರೆಸ್ಸಿನ ಚಳವಳಿ ಮೈಸೂರಿನ ಚಳವಳಿಗೆ ಮದ್ದತ್ತು ಕೊಟ್ಟಿತು." ಮುಂದಿನ ರಾಜಕೀಯವು ಒಡಂಬಡಿಕೆಯ ಮಾರ್ಗದಲ್ಲಿ ಹೋಗುವುದಲ್ಲವೆಂದೂ, ಚಳವಳಿಯ ಮಾರ್ಗದಲ್ಲಿ ಹೋಗುವುದೆಂದೂ ಅವರಿಗೆ ಅರಿವಾದಾಗ, ಚಳವಳಿಯ ಮಾರ್ಗದಲ್ಲಿ ನಂಬಿಕೆಯಿಲ್ಲದ ಅವರು ರಾಜಕೀಯದಿಂದ ಹೊರಬಂದದ್ದರಲ್ಲಿ ಏನಾಶ್ಚರ್ಯ.

ಮೂರನೆಯದಾಗಿ ಚಳುವಳಿಯ ಸ್ವರೂಪವನ್ನೂ ಜನಮುಖಂಡರ ಮನೋಭಾವವನ್ನೂ ತಿಳಿಸುವ ಒಂದು ನಿದರ್ಶನವನ್ನು ಅವರು ಕೊಟ್ಟಿದ್ದಾರೆ. "ಬಿನ್ನಿಮಿಲ್ ಗಲಾಟೆಯ ಸಂಬಂಧದಲ್ಲಿ ಇನ್ನೂ ಇತರ ಚಳವಳಿಗಳೂ ಹುಟ್ಟುವ ಸೂಚನೆ ಪೋಲೀಸಿನವರಿಗೆ ತಿಳಿದುಬಂದಿತ್ತು. ಸರಕಾರವು ಮುಂಜಾಗ್ರತೆಯಿಂದ ಚಳವಳಿಯನ್ನು ಹುಟ್ಟದಂತೆ ಮಾಡತಕ್ಕದ್ದು ಯುಕ್ತವೆಂದು ತಿಳಿದು, ಅದರಂತೆ ಬಹಿರಂಗ ಸಭೆಗಳನ್ನು ಕೊಂಚಕಾಲ ರದ್ದು ಮಾಡುವ

ಆಜ್ಞೆಯನ್ನು ಹೊರಡಿಸಿತು. ಆಗ ಒಂದು ದಿನ ಸಂಜೆ ನಾನು ನನ್ನ ಸ್ನೇಹಿತರಾದ ಲಾಯರೊಬ್ಬರ ಮನೆಯಲ್ಲಿ ಕುಳಿತಿದ್ದೆ. ಅಲ್ಲಿಗೆ ಇನ್ನೊಬ್ಬರು ಲಾಯರು ದಯಮಾಡಿಸಿದರು. ಈ ಎರಡನೆಯ ಸ್ನೇಹಿತರು ಸಿಟಿ ಮ್ಯಾಜಿಸ್ಟ್ರೇಟರು ಹೊರಡಿಸಿದ್ದ ಸಭಾಪ್ರತಿಬಂಧಕಾಜ್ಞೆಯನ್ನು ಪ್ರಸ್ತಾಪಿಸಿ ಹಾ ಹೂ ಎಂದು ಕೂಗಾಡಿದರು. ನಾನು ಆತನನ್ನು ಸಮಜಾಯಿಷಿ ಮಾಡಲು ಯತ್ನಿಸಿದೆ. 'ಸರಕಾರ ದುಡುಕಿತೆಂದು ನೀವು ಹೇಳುತ್ತೀರಿ, ನಿಮ್ಮ ಮಾತು ಸರಿಯಾದದ್ದೇ ಇದ್ದೀತು. ಆದರೆ ಆ ಆಜ್ಞೆಯನ್ನು ಮುರಿಯ ಹೊರಡುವುದು ನನಗೆ ಯುಕ್ತವೆನಿಸದು. ಮ್ಯಾಜಿಸ್ಟ್ರೇಟರೇ ಹಿಂದಕ್ಕೆ ತೆಗೆದುಕೊಳ್ಳುವಂತೆ ಅವರನ್ನು ಕೇಳಿಕೊಳ್ಳಬಹುದು. ಈಗಿನ ಸಿಟಿ ಮ್ಯಾಜಿಸ್ಟ್ರೇಟರು ತುಂಬ ಒಳ್ಳೆಯವರು, ನ್ಯಾಯಶೀಲರು ಮತ್ತು ಪ್ರಜಾನುರಾಗಿಗಳು. ನೀವು ಅವರಲ್ಲಿಗೆ ಹೋಗುವುದಾದರೆ, ಮತ್ತು ನೀವು ಇಷ್ಟಪಟ್ಟರೆ, ನಾನೂ ನಿಮ್ಮೊಡನೆ ಅಲ್ಲಿಗೆ ಬರುತ್ತೇನೆ—ಅವರು ತಮ್ಮ ಆರ್ಡರನ್ನು ಕ್ಯಾನ್ಸಲ್ ಮಾಡಿಯಾರೆಂದು ನನ್ನ ಮನಸ್ಸಿಗೆ ಭರವಸೆಯಿದೆ.' ಅದಕ್ಕೆ ಆ ಲಾಯರು ಸ್ನೇಹಿತರು ಒಪ್ಪಲಿಲ್ಲ. ಅವರು ಹೇಳಿದರು "ಅಧಿಕಾರಿಗಳ ಬಳಿ ಹೋಗಿ ಕೇಳಿಕೊಳ್ಳುವುದು ನಮ್ಮ ದಾರಿಯಲ್ಲ. ನಮ್ಮ ಹಕ್ಕನ್ನು ನಾವಾಗಿ ನಮ್ಮ ಬಲದಿಂದ ನಾವು ಸಂಪಾದಿಸಿಕೊಳ್ಳಬೇಕು. ಪ್ರಜೆಯಲ್ಲಿ ಜಾಗೃತಿಯುಂಟಾಗಬೇಕು. ಅದಕ್ಕೆ ಚಳವಳಿಗಳು ಸಾಧನ." ಇದನ್ನು ಕೇಳಿ ನಾನು ಸುಮ್ಮನಾದೆ. ಆ ಚಳವಳಿಯ ಪ್ರತಿಪಾದಕರು ಈಗಲೂ ಇದ್ದಾರೆ. ಅವರು ಕೆಲವು ಕಾಲ ಪ್ರಸಿದ್ಧರಾಗಿ ದೊಡ್ಡ ದೊಡ್ಡ ಹುದ್ದೆಗಳನ್ನು ನಡಸಿದ್ದಾರೆ. ಇಷ್ಟೆಲ್ಲ ಆಗಿದ್ದರೂ ಆಗ ನಮ್ಮ ಮೈಸೂರು ರಾಜ್ಯಕ್ಕೆ ಜನದ ಚಳವಳಿಯ ದಾರಿ ಅವಶ್ಯವಾಗಿತ್ತೆಂದು ಅನ್ನಿಸಿರಲಿಲ್ಲ. ಈಗಲೂ ಅನ್ನಿಸಿಲ್ಲ. ಈ ಹೊತ್ತು ಸಮಸ್ತ ಇಂಡಿಯದಲ್ಲಿಯೂ ಕೆಲ ಜನರಿಗೆ ಚಳವಳಿಯೇ ನಿತ್ಯಜೀವನವಾಗಿದೆ. ಆದರ ಫಲವನ್ನು ಎಲ್ಲರೂ ಅನುಭವಿಸುತ್ತಿದ್ದಾರೆ."

ನಾಲ್ಕನೆಯದಾಗಿ, "ಮಿರ್ಜಾರವರ ಕಾಲದಲ್ಲಿ ಜನವೇ ಸರಕಾರದ ಕಟ್ಟುಗಳನ್ನು ಸಡಲಿಸಲು ಪ್ರಾರಂಭಮಾಡಿತ್ತು. ಶಾಸ್ತ್ರವೇನೋ ಹೇಳುತ್ತದೆ. "ಧರ್ಮೋ ರಕ್ಷತಿ ರಕ್ಷಿತಃ" ಎಂದು. ಧರ್ಮವನ್ನು ನಾವು ರಕ್ಷಿಸಿದರೆ ಅದು ನಮ್ಮನ್ನು ರಕ್ಷಿಸೀತು. ಧರ್ಮವನ್ನು ಕುಂಟು ಮಾಡಿದರೆ ಆದು ನಮ್ಮನ್ನು ರಕ್ಷಿಸಲು ಹೇಗೆ ಸಮರ್ಥವಾದೀತು ? ಜನ ಸರಕಾರದ ಮರ್ಯಾದೆಗಳನ್ನು ಕಾಪಾಡಿದರೆ ಸರಕಾರ ಜನದ ನ್ಯಾಯವನ್ನು ಕಾಪಾಡಲಾದೀತು. ಜನವೇ ಸರಕಾರದ ಮೇಲೆ ತಿರುಗಿ ಬಿದ್ದರೆ ? ಎಂಥ ಸರಕಾರ ತಾನೆ ಏನು ಮಾಡೀತು ?"

25 ವರ್ಷಗಳಿಗಿಂತಲೂ ಮೇಲಾಗಿ ಜವಾಬ್ದಾರಿ ಸರಕಾರಕ್ಕಾಗಿ ಹೋರಾಡಿ, ಅದು ಜೊಂಬಿಯ ದವಲತ್ತಿನ ದಾರಿ ಹಿಡಿಯುತ್ತಿರುವುದನ್ನು ಕಂಡು, "ಇದಕ್ಕಾಗಿ ನಾನು ಹೋರಾಡಿದೆನೆ ?" ಎಂದು ಪಶ್ಚಾತ್ತಾಪವಾಗಿರ ಬೇಕು ಅವರಿಗೆ. ತಾವು ಪ್ರತ್ಯಕ್ಷವಾಗಿ ರಾಜಕೀಯದಲ್ಲಿದ್ದು ಅಥವಾ ಶಾಸನ ಸಭೆಯಲ್ಲಿದ್ದು ತಮ್ಮ ದಾರಿಗೆ ಅಂದಿನ ಜನಾಭಿಪ್ರಾಯವನ್ನು ತಿರುಗಿಸಿ ಕೊಳ್ಳುವ ಸಂಭವ ಕಡಮೆ ಎಂದು ತಿಳಿದು ಅವರು ಅಲ್ಲಿಂದ ಹೊರ ಬಂದಿರ ಬೇಕು. ಅವರು ಬೇರೆ ಬೇರೆ ಕಡೆ ಹೇಳಿರುವ, ಮೇಲೆ ಉದಾಹರಿಸಿರುವ ಮಾತುಗಳಿಂದ ಹಾಗೆಂದು ಊಹಿಸಿಕೊಳ್ಳಬಹುದು.

1941 ರ ಫೆಬ್ರುವರಿಯಲ್ಲಿ ಶಿವಮೊಗ್ಗ ಕರ್ನಾಟಕ ಸಂಘದ 10ನೆಯ ವಾರ್ಷಿಕೋತ್ಸವವು ಡಿ ವಿ ಜಿ ಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಆಗ ಕರ್ನಾಟಕ ಸಂಘ ಕೇವಲ ಸಾಹಿತ್ಯದ ಕೆಲಸಕ್ಕೆ ಮಾತ್ರ ಇದೆಯೆಂದು ತಿಳಿಯದೆ ವಿನೋದಗೋಷ್ಠಿಯಾಗಿಯೂ ಇರಬೇಕೆಂದು ಅವರು ಹೇಳಿದರು.

ಅವರು ಇನ್ನೊಂದು ಸಭೆಯಲ್ಲಿ "ರಾಷ್ಟ್ರಕ ಧರ್ಮ ಮತ್ತು ಸಂಸ್ಕೃತಿ" ಎಂಬ ವಿಷಯವನ್ನು ಕುರಿತು ಮಾತನಾಡಿದರು. ಶಾಸಕ ಪದವಿಯನ್ನು ತ್ಯಜಿಸಿದ್ದ ಡಿ ವಿ ಜಿ ಯವರ ಚಿಂತನೆ ಎತ್ತ ಕಡೆಗೆ ಸಾಗಿತ್ತು ಎಂಬುದನ್ನು ತೋರಿಸುವ ಈ ಉಪನ್ಯಾಸ ಅವರ ಮುಂದಿನ ಜೀವನಕ್ಕೆ ಪೀಠಿಕೆಯಾಗಿದೆ ಎನ್ನಬಹುದು. ಆ ಉಪನ್ಯಾಸವನ್ನು "ಕನ್ನಡ ನುಡಿ" (28-2-1941) ಹೀಗೆ ವರದಿ ಮಾಡಿದೆ :

" 'ರಾಷ್ಟ್ರಕ' ಎಂಬ ಪದವನ್ನು ದೇಶದಲ್ಲಿ ಇಂದು ಮೂಡುತ್ತಿರುವ ಹೊಸ ಭಾವನೆಗಳಿಗನುಗುಣವಾಗಿ ಬಳಸಿದ್ದೇನೆ. ಒಂದು ದೇಶದ ರಾಜ್ಯಭಾರದಲ್ಲಿ ನಿಯಮಿತವಾದ ಸ್ಥಾನವುಳ್ಳ ಪ್ರಜೆ ರಾಷ್ಟ್ರಕ. ಅವನ ಧರ್ಮ ರಾಷ್ಟ್ರಕ ಧರ್ಮ. ಇದನ್ನು ಸಿಟಿಸನ್‌ಷಿಪ್ ಪೌರತ್ವ ಎಂದು ಹೇಳಬಹುದು. ಹಿಂದಿನ ಆಡಳಿತಗಳಲ್ಲಿ ಇದಕ್ಕೆ ಸ್ಥಳವಿರಲಿಲ್ಲ. ರಾಜ್ಯಭಾರಕ್ರಮದಲ್ಲಿ ಸಪ್ತಾಂಗಗಳು ಮಾತ್ರ ಪ್ರಚಲಿತವಾಗಿದ್ದವು. ಸ್ವಾಮಿ, ಅಮಾತ್ಯ, ಸ್ನೇಹಿತ, ಕೋಶ, ರಾಷ್ಟ್ರ, ದುರ್ಗ ಮತ್ತು ಬಲ ಇವೇ ಸಪ್ತಾಂಗಗಳು. ಪ್ರಜೆ ಒಂದು ಅಂಗವಾಗಿರಲಿಲ್ಲ. ಈಚೆಗೆ ಪಾಶ್ಚಾತ್ಯ ದೇಶಗಳಲ್ಲಿಯೂ ನಮ್ಮ ದೇಶ ದಲ್ಲಿಯೂ ಪ್ರಜೆಯೂ ಒಂದು ಅಂಗವೆಂಬ ಭಾವನೆ ಬಂದಿದೆ.

ರಾಷ್ಟ್ರಕನಿಗೆ ರಾಜಕೀಯ ಸಂಬಂಧದಿಂದ, ಆಯ್ಕೆಗಳಲ್ಲಿ ಮತ ಕೊಡುವ ಹಕ್ಕು ಬಂದಾಗಿನಿಂದ ಒಂದು ಅಧಿಕಾರ ಪ್ರಾಪ್ತವಾಗುತ್ತದೆ. ಓಟಿನ

ಹಕ್ಕುಳ್ಳವನು ರಾಷ್ಟ್ರಕ. ಓಟು ಕೊಡುವುದೇ ಅಲ್ಲದೆ ಓಟು ಪಡೆದವನ ಕೆಲಸವನ್ನು ವಿಮರ್ಶಿಸುವ ಹಕ್ಕು ರಾಷ್ಟ್ರಕನಿಗಿದೆ. ಈ ಹಕ್ಕನ್ನು ಅವನು ಸರಿಯಾಗಿ ಉಪಯೋಗಿಸಲು ಅವನಿಗೆ ಸಂಸ್ಕಾರವಿರಬೇಕು. ಈ ಸಂಸ್ಕಾರ ಬಲವನ್ನು ಸಾಹಿತ್ಯಾಧ್ಯಯನದಿಂದ ದೊರಕಿಸಿಕೊಳ್ಳಬೇಕು. ಅವನು ಚಲಾಯಿಸುವ ಓಟು ಎಂಬ ಆಯುಧ ರಾಷ್ಟ್ರ ಕಲ್ಯಾಣ ಸಾಧನೆಯಲ್ಲಿ ಪರ್ಯಾಪ್ತವಾನವಾಗಬೇಕಾದರೆ ತನ್ನಲ್ಲಿ ಅಗತ್ಯವಾಗಿರಬೇಕಾದ ತಿಳಿವಳಿಕೆ ಅನುಭವ ವಿವೇಚನೆಗಳನ್ನು ಬೆಳೆಸಿಕೊಂಡು ರಾಷ್ಟ್ರ ಕಲ್ಯಾಣಕ್ಕಾಗಿ ತಾನು ಕೈಗೊಳ್ಳುವ ಪ್ರಯತ್ನಗಳು ಯಾವುವು ಎಂಬುದನ್ನು ಅವನು ಗ್ರಹಿಸಬೇಕು. ಈ ಬಗ್ಗೆ ಬಹಳ ಪ್ರಯೋಜನವುಂಟು. ಸಾಹಿತ್ಯ, ಹೃದಯಕ್ಕೆ ಸಂಬಂಧಿಸಿದಂತೆ ಸರಸವಾಗಿ, ಆಲೋಚನೆಗೆ ಸಂಬಂಧಿಸಿದಂತೆ ಪ್ರಬೋಧಕವಾಗಿ, ಎರಡು ಮುಖವಾಗಿ ಅದು ನಮ್ಮಲ್ಲಿ ಬೆಳೆದು ಅದರ ಅಧ್ಯಯನದಿಂದ ರಾಷ್ಟ್ರಕನಲ್ಲಿ ಅವನ ನಿಜವಾದ ಕರ್ತವ್ಯಗಳ ಜವಾಬ್ದಾರಿಗಳ ಅರಿವು ಮೂಡುವಂತಾಗಬೇಕು. ಇದಕ್ಕಾಗಿ ಕರ್ನಾಟಕ ಸಂಘಗಳೂ ಇತರ ಸಂಘಗಳೂ ಪ್ರಜಾನುರಾಗಿ ವಿಶ್ವವಿದ್ಯಾನಿಲಯ (ಪಾಪ್ಯುಲರ್ ಯೂನಿವರ್ಸಿಟಿ) ಗಳಾಗಿ ರಾಷ್ಟ್ರದ ಯೋಗಕ್ಷೇಮವನ್ನು ನೋಡಿಕೊಳ್ಳಬೇಕು.”

ಸ್ವಯಂಕೃತಾಪರಾಧಕ್ಕೆ ಪ್ರಾಯಶ್ಚಿತ್ತವಾಗಿ ಅವರು ರಾಷ್ಟ್ರಕಧರ್ಮದ ಪ್ರತಿಪಾದಕರಾದರು.

ಪ್ರಗತಿ: ನುತಿಯ ಕಿಂಚಿದ್ವಿಜಯ

ಎ.ಎನ್. ವೈಟ್‌ಹೆಡ್ ಎಂಬ ಗಣಿತ ಶಾಸ್ತ್ರಜ್ಞನೂ ತತ್ತ್ವಜ್ಞಾನಿಯೂ ತನ್ನ 'ದಿ ಅಡ್ವೆನ್‌ಚರ್ ಆಫ್ ಐಡಿಯಾಸ್' ಎಂಬ ಗ್ರಂಥದಲ್ಲಿ ನಾಗರಿಕತೆ ಯೆಂದರೆ ಬಲಾತ್ಕಾರ ಮಾರ್ಗದ ಮೇಲೆ ಒಡಂಬಡಿಕೆಯ ಮಾರ್ಗದ ವಿಜಯ ಎಂದು ವಿವರಿಸಿದ್ದಾನೆ. "The creation of the world—said Plato—is the victory of persuasion over force. The worth of men consists in their liability to persuasion. They can persuade and can be persuaded by the disclosuse of alternatives the better and the worse. Civilization is the maintenance of social order by its own inherent persuasiveness as embodying the nobler alternative!" ಏಪ್ರಿಲ್ 1931 ರಲ್ಲಿ ಗಾಂಧಿಯವರಿಗೂ ವೈಸ್‌ರಾಯ್ ಅರ್‍ವಿನ್ನಿಗೂ ಆದ ಒಪ್ಪಂದವನ್ನು ಆತ ಇದಕ್ಕೆ ಉದಾಹರಣೆಯಾಗಿ ಎತ್ತಿ ತೋರಿಸಿ ದ್ದಾನೆ. ಪಾಶ್ಚಾತ್ಯ ವಿಜ್ಞಾನ, ಸಂಸ್ಕೃತಿ, ಪ್ರಜಾಪ್ರಭುತ್ವ, ತತ್ತ್ವ ಎಲ್ಲದರ ಹೆಚ್ಚುಗಾರಿಕೆ ಪಾಶ್ಚಾತ್ಯರ ಹೆಮ್ಮೆಗೆ ಕಾರಣವಾಗಿತ್ತು, ಅವರ ಪ್ರಗತಿ ಸೂಚಕವಾಗಿತ್ತು.

ಆದರೆ ಇದೆಲ್ಲಕ್ಕೂ ದೊಡ್ಡ ಪೆಟ್ಟು ಬಿದ್ದದ್ದು ಹಿಟ್ಲರನು ತನ್ನ ಪಾಶವೀ ಶಕ್ತಿಯಿಂದ ಉಂಟುಮಾಡಿದ ಸಂಕ್ಷೋಭೆಯಿಂದ. ಇದರ ಪರಿಣಾಮವಾಗಿ ಬ್ರಿಟಿಷರು ಭಾರತದ ಪರವಾಗಿ ಹಿಟ್ಲರನ ಮೇಲೆ ಯುದ್ಧ ಘೋಷಣೆ ಮಾಡಿದ್ದು, ಇದಕ್ಕೆ ಭಾರತೀಯರ ಪ್ರತಿಭಟನೆ, ಮತ್ತು ಬ್ರಿಟನ್ನಿನೊಡನೆ ಹೆಚ್ಚಾದ ವಿರಸ—ಹೀಗೆ ಎಲ್ಲೆಡೆಯಲ್ಲಿಯೂ ನಾಗರಿಕತೆಯ ಮತ್ತು ಪ್ರಜಾಪ್ರಭುತ್ವದ ತತ್ತ್ವದ ಅಡಿಪಾಯಕ್ಕೇ ಧಕ್ಕೆ ಬಂದಿತ್ತು.

"We are assiting at the death agony of the society which began so hepefully with the Declaration of Independence and the French Revolution. At the dawn of that society, liberty, the reign of science and industrial revolution seemed as if they must give unlimited happiness to the human race" ಎಂದು ಫ್ರಾನ್ಸ್‌ನ ವೈದ್ಯ ತತ್ತ್ವಜ್ಞಾನಿ ಅಲೆಕ್ಸಿಸ್ ಕ್ಯಾರೆಲ್ ಪಾಶ್ಚಾತ್ಯ

ಸಂಸ್ಕೃತಿ ಹುಟ್ಟಿಸಿದ್ದ ಭ್ರಮೆಯ ನಿರಸನವನ್ನು ಎರಡನೆಯ ಮಹಾಯುದ್ಧದ ಸಮಯದಲ್ಲಿ ವ್ಯಕ್ತಪಡಿಸಿದ.

ಇದನ್ನು ಕಂಡಾಗ ಸಿಸಿಫಸನ ಕಥೆ ನೆನಪಿಗೆ ಬಂತು ಡಿ ವಿ ಜಿ ಯವರಿಗೆ.

ಗಿರಿಯ ಮೇಲಕೆ ದೊಡ್ಡ ಬಂಡೆಯನು ಸಿಸಿಫಸನು ।
ಉರುಳಿಸಿರಲೊಂದೆರಡು ಮೂರು ಘಾಸಿಯಲಿ ॥
ಸರಿದು ಕೆಳಕದದೆಂತೊ ಜಾರುವುದು ಮರಮರಳಿ ।
ಪುರುಷಪ್ರಗತಿಯಂತು—ಮಂಕುತಿಮ್ಮ ॥

ಮಾನುಷದ ಚರಿತೆ ಪರಸತ್ತ್ವಸಾಕ್ಷಾತ್ಕವಿತೆ ।
ಕಾಣಿಪುದನಾತ್ಮಸ್ವಭಾವದುದ್ಗಮವ ॥
ಏನಾಶೆ! ಯೇನು ಸಾಹಸ! ವೇನು ಭಂಗಗಳು! ।
ಅನುಭವವೇದವದು—ಮಂಕುತಿಮ್ಮ ॥ ಎನ್ನಿಸಿತು.

ಮುತ್ತಿರುವುದಿಂದು ಭೂಮಿಯನೊಂದು ದುರ್ದೈವ ।
ನೃತ್ಯ ಕುಣಿಯುತಲಿಹನು ಕೇಕೆ ಹಾಕುತಲಿ ॥
ಸುತ್ತಿಪುದು ತಲೆಯನನುದಿನದ ಲೋಕದ ವಾರ್ತೆ ।
ಎತ್ತಲಿದಕೆಲ್ಲ ಕಡೆ?—ಮಂಕುತಿಮ್ಮ ॥

ಪುರುಷ ಸ್ವತಂತ್ರತೆಯ ಪರಮ ಸಿದ್ಧಿಯದೇನು? ।
ಧರಣಿಗನುದಿನದ ರಕ್ತಾಭಿಷೇಚನೆಯೆ? ॥
ಕರವಾಲವನು ಪುಷ್ಪಸರವೆಂದು ಸೆಳೆದಾಡೆ ।
ಪರಿಮಳವ ಸೂಸುವುದೆ?—ಮಂಕುತಿಮ್ಮ ॥

ಮಾನವರೊ ದಾನವರೊ ಭೂಮಾತೆಯನು ತಣಿಸೆ ।
ಶೋಣಿತವನೆರೆಯುವರು ಬಾಷ್ಪಸಲುವುದಿರೆ ॥
ಏನು ಹಗೆ! ಏನು ಧಗೆ! ಏನು ಹೊಗೆ! ಯೀ ಧರಣಿ ।
ಸೌನಿಕನ ಕಟ್ಟೆಯೇಂ?—ಮಂಕುತಿಮ್ಮ ॥

—ಎಂದು ಚಿಂತಿಸಿದರು ಅವರು.

9.2.1940 ರಲ್ಲಿ ಡಿ ವಿ ಜಿ ಸೆಂಟ್ರಲ್ ಕಾಲೇಜು ಕರ್ನಾಟಕ ಸಂಘದಲ್ಲಿ

ಉಪಸಂಹಾರ ಭಾಷಣ ಮಾಡಿದಾಗ ಈ ಪ್ರಶ್ನೆಗಳು ಅವರನ್ನು ಕಾಡುತ್ತಿದ್ದಿರಬೇಕು. ಆಗ ಉಪನ್ಯಾಸಕ್ಕೆ ಅವರು ಆರಿಸಿಕೊಂಡ ವಿಷಯ : ಪ್ರಗತಿ–ಸ್ವಾತಂತ್ರ್ಯ. ಆ ಭಾಷಣವನ್ನು ಅವರು ಬರೆದಿಡಲಿಲ್ಲವೆಂದು ಕಾಣುತ್ತದೆ. ಎಲ್. ಗುಂಡಪ್ಪನವರು ಅದರ ಸಾರಾಂಶವನ್ನು "ಕನ್ನಡ ನುಡಿ" (16.2.1940)ಯಲ್ಲಿ ವರದಿಮಾಡಿದ್ದಾರೆ. ಆ ದಿನ ಸಂಘದ ಉಪಾಧ್ಯಕ್ಷರಾದ ಕೆ. ವಿ. ಪುಟ್ಟಪ್ಪನವರು : "ವನಸುಮ" ಡಿ ವಿ ಜಿ ಯವರ ಜೀವನವನ್ನು ಚೆನ್ನಾಗಿ ಚಿತ್ರಿಸುತ್ತದೆ; ಅದು ಸಾಧಕರ ಮನಸ್ಸಿನ ಹೊಮ್ಮುಗೆ ಎಂದು ಹೇಳಿ, ಡಿ ವಿ ಜಿ ಯವರ ಸಾಹಿತ್ಯ ಸೇವೆ ಮರದ ಬೇರಿನಂತೆ ಹೊರಗಡೆಗೆ ತೋರಿಸಿಕೊಳ್ಳದೆ ಆಳವಾಗಿ ಇಳಿದು ತುದಿಗೊಂಬೆಯ ಹೂಗಳಂತೆ ನಮಗೆ ಚೈತನ್ಯವನ್ನು ಕೊಡುತ್ತದೆ; ನಮ್ಮ ನಾಡು, ನುಡಿಗಳು ಜೀವಂತವಾಗಿರುವ ತನಕ ಇವರ ಕೃತಿಗಳು ಉಳಿದಿರುತ್ತವೆ ಎಂದರು. ಡಿ ವಿ ಜಿ ಯವರ ಅಂದಿನ ಉಪನ್ಯಾಸದ ಮುಖ್ಯಾಂಶಗಳು ಇವು :

ಪ್ರಗತಿತತ್ತ್ವ (Progress —ಪುರೋಗತಿ, ಮುಂದಕ್ಕೆ ಹೋಗುವುದು) ವನ್ನು ಕುರಿತ ಮಾತು ಈಗ ರೂಢಿಯಾಗಿದೆ. "ನಮ್ಮ ಸ್ಥಿತಿ ದಿನದಿನಕ್ಕೆ ಉತ್ತಮವಾಗುತ್ತಿದೆ. ದುಃಖ ಕಡಮೆಯಾಗುತ್ತಿದೆ. ಮನುಷ್ಯ ಪ್ರಯತ್ನದಿಂದ, ಧೈರ್ಯ ಸಾಹಸಗಳಿಂದ ಕವಿಗಳು ಕನಸು ಕಾಣುವ ಸ್ವರ್ಗವನ್ನು ಇಲ್ಲಿಯೇ ಸಾಧ್ಯಮಾಡಿಕೊಳ್ಳಬಹುದು; ಪರಲೋಕಕ್ಕಾಗಿ ಕಾಯಬೇಕಾಗಿಲ್ಲ" ಎಂಬುದೇ ಈ ಪ್ರಗತಿ ತತ್ತ್ವದ ತಿರುಳು. ಪ್ರಾಚೀನರಿಗೆ ಈ ಭಾವನೆ ಗೋಚರವಾಗಲಿಲ್ಲ. "ಒಳ್ಳೆಯ ಕಾಲ ಹಿಂದೆ ಆಗಿ ಹೋಯಿತು. ಮುಂದೆ ಕ್ಷೀಣಗತಿ; ಇದು ಪ್ರಪಂಚದ ಸ್ವಭಾವ. ಆ ಗತಿಯನ್ನು ತಪ್ಪಿಸಲು ಯಾರಿಗೂ ಸಾಧ್ಯವಿಲ್ಲ" ಎಂಬುದೇ ಅವರ ದೃಢವಾದ ನಂಬಿಕೆ. ಪುರಾತನ ಗ್ರೀಕರಲ್ಲಿ ಕೂಡ ಈ ದೈವವಾದ ಕಾಣಬರುತ್ತದೆ. ಹಿಂದೂಗಳಿಗೆ ಉತ್ಕರ್ಷ ಮತವಿಲ್ಲ. ಅವರದು ಅವನತಿ ಮತ. ಕ್ರಿಸ್ತನ ಪ್ರಕಾರವೂ ಪರಿಪೂರ್ಣತೆ, ಪರಮ ಪದದ ಉತ್ತಮತೆ ಪರಲೋಕದಲ್ಲಿಯೇ.

ಡಿ ವಿ ಜಿ ಯವರು ಷೆಲ್ಲಿ, ಗಾಡ್ವಿನ್, ಮಟ್ಸೀನಿ, ಡೀನ್ ಇಂಜ್, ಬ್ಯೂರಿ ಮುಂತಾದ ಪಾಶ್ಚಾತ್ಯ ಚಿಂತಕರು ಇದನ್ನು ಕುರಿತು ಹೇಳಿರುವ ವಾದಗಳನ್ನು ವಿಸ್ತಾರವಾಗಿ ವಿವರಿಸಿದ್ದಾರೆ.

ಕೊನೆಗೆ, ಹಾಗಾದರೆ ಪ್ರಗತಿ ಇಲ್ಲವೆ? ಮನುಷ್ಯ ಪ್ರಯತ್ನಕ್ಕೆ ಅವಕಾಶವಿಲ್ಲವೆ? ಫಲವಿಲ್ಲವೆ? ಎಂಬ ಪ್ರಶ್ನೆಗಳಿಗೆ ಉತ್ತರ ಹೇಳುತ್ತ, ಡೀನ್ ಇಂಜ್

ಹೇಳುವಂತೆ ಸ್ವಲ್ಪಮಾತ್ರ ಪ್ರಗತಿ ಉಂಟು. ಉತ್ಕರ್ಷಕ್ಕಾಗಿ, ಅಭಿವೃದ್ಧಿಗಾಗಿ ದುಡಿಯುವುದು ಮನುಷ್ಯನ ಅಧಿಕಾರ. ಮನುಷ್ಯ ಪ್ರಯತ್ನಕ್ಕೆ ಸ್ಥಾನವಿಲ್ಲದಿದ್ದರೆ ಪುಣ್ಯಪಾಪಗಳು, ಕರ್ಮದ ಫಲ ಎಂಬ ಮಾತಿಗೆ ಅರ್ಥವಿಲ್ಲ. ಜೀವಕ್ಕೆ ಸ್ವಾತಂತ್ರ್ಯ ಉಂಟು, ಸ್ವಾತಂತ್ರ್ಯದ ಜೊತೆಗೆ ಜವಾಬ್ದಾರಿಯೂ ಉಂಟು—ಎಂದಿದ್ದಾರೆ.

"ಭಾವಾವೇಶ ಬುದ್ಧಿಕಾರ್ಯವಾಗಿ ನಡೆಯಬೇಕು; ಬುದ್ಧಿ ಬೆಳೆಯಬೇಕು.' "ನಮ್ಮ ಬುದ್ಧಿಯನ್ನು ಪ್ರಚೋದಿಸು" "ಧಿಯೋ ಯೋ ನಃ ಪ್ರಚೋದಯಾತ್" ಎಂಬುದು ನಮ್ಮ ಪ್ರಾರ್ಥನೆ. ವಿಮರ್ಶನ ವಿವೇಚನಗಳು ಬುದ್ಧಿಕಾರ್ಯ. ಈಗ ಸುಮ್ಮನೆ ಮಂತ್ರೋಚ್ಚಾರ ಮಾಡುವುದು ರೂಢಿಯಾಗಿ ಸ್ವತಂತ್ರ ವಿವೇಚನೆ ಇಲ್ಲವಾಗಿದೆ. ಸ್ವತಂತ್ರವಾಗಿ ವಿಚಾರಮಾಡಿ ಸರಿತೋರಿದರೆ ಒಪ್ಪಿಕೊಳ್ಳಬೇಕು. ಇರುವ ಸ್ವಾತಂತ್ರ್ಯವನ್ನು ಪೂರ್ಣವಾಗಿ ಉಪಯೋಗಿಸಬೇಕಾದದ್ದು ಮನುಷ್ಯನ ಧರ್ಮ, ಕರ್ತವ್ಯ. ....ಲೋಕೋದ್ಧಾರಕ್ಕಾಗಿ ಕೆಲಸ ಮಾಡುತ್ತಿದ್ದೇವೆಂದು ಯಾರೂ ತಿಳಿದು ಕೊಳ್ಳಬಾರದು. ನಮ್ಮ ಪ್ರಯತ್ನ ನಮ್ಮ ಏಳಿಗೆಗಾಗಿ, ನಮ್ಮ ಬಾಳಿನ ಸಫಲತೆಗಾಗಿ, ನಮ್ಮ ಜೀವಸಂಸ್ಕಾರಕ್ಕಾಗಿ"—ಎಂದೂ ಹೇಳಿದರು.

ಇದನ್ನೇ ಕಗ್ಗ ಹೀಗೆ ವಿವರಿಸುತ್ತದೆ:

ನೂತ್ನತೆಯು ಪೂರ್ಣತೆಯನನ್ಯೂನತೆಯು ಗಳಿಪ ।
ಯತ್ನಮೇ ಪೌರುಷಪ್ರಗತಿ; ಅದೆ ಪ್ರಕೃತಿ ॥
ವಿಜ್ಞಾನ ಶಾಸ್ತ್ರ ಕಲೆ ಕಾವ್ಯ ವಿದ್ಯೆಗಳೆಲ್ಲ ।
ಧನ್ಯತೆಯ ಬೆದಕಾಟ—ಮಂಕುತಿಮ್ಮ ॥

ಮತಿಯು ತಾಂ ಸತ್ಯಶುಭಗಳ ನವ ನವಾಂಶಗಳ ।
ಗತಿಯನರಸುತನಡೆಯೆ ಪೌರುಷಪ್ರಗತಿ ॥
ಮತ ನೀತಿ ಶಾಸ್ತ್ರಗಳು ರಾಜ್ಯಸಂಧಾನಗಳು ।
ಮತಿಯ ಕಿಂಚಿದ್ವಿಜಯ—ಮಂಕುತಿಮ್ಮ ॥

ವೈಟ್‌ಹೆಡ್ ಮಹಾಶಯನು: "Human Nature is so complex that paper plans for society are to the statesman not worth even the price of the defaced paper. Successful progress creeps from point to point, testing each step" ಎಂದು ಹೇಳಿದಾಗ

ಅದು ಗೋಖಲೆಯವರು ಪ್ರತಿಪಾದಿಸುತ್ತಿದ್ದ, ಡಿ ವಿ ಜಿ ಯವರು "ಕಿಂಚಿದ್ವಿಜಯ" ಎಂದು ಹೇಳಿದ ಮಾತಿನ ವಿವರಣೆಯೆನಿಸುತ್ತದೆ.

1941ರ ಸುಮಾರಿನಲ್ಲಿ ಡಿ ವಿ ಜಿ ಯವರ ಷಡ್ಡಕಂದಿರ ಮಗ ಶ್ರೀನಿವಾಸಯ್ಯನವರು 'ಕರೆಂಟ್ ಸೈನ್ಸ್' ಎಂಬ ಪತ್ರಿಕೆಯನ್ನು ಪ್ರಾರಂಭಿಸಿದರು. ಅದಕ್ಕೆ ಬಂದ ಲೇಖನಗಳನ್ನು ಆರಿಸುವುದರಲ್ಲಿ, ವಿಮರ್ಶಿಸುವುದರಲ್ಲಿ ಡಿ ವಿ ಜಿ ಸಂಪಾದಕರಿಗೆ ಸಹಾಯಮಾಡಿದರು. ಡಿ ವಿ ಜಿ ಯವರ ಕೆಲವು ಲೇಖನಗಳೂ ಅದರಲ್ಲಿ ಬಂದುವು.

'ಅಟ್ಲಾಂಟಿಕ್ ಚಾರ್ಟರ್' Science to Rebuild ಎಂಬ ವಿಷಯವನ್ನು ಕುರಿತು ನವೆಂಬರ್ 1941ರಲ್ಲಿ ಡಿ ವಿ ಜಿ ಬರೆದಿದ್ದ ಲೇಖನವನ್ನು ಕುರಿತು ಲಂಡನ್ನಿನ ಪ್ರಖ್ಯಾತ ವಿಜ್ಞಾನ ಪತ್ರಿಕೆ 'ನೇಚರ್' ಸಂಪಾದಕೀಯ ಲೇಖನವನ್ನೊಂದನ್ನು ಬರೆಯಿತು : "The article in 'Current Science' indicates further steps to be taken notably in the extension of scientific knowledge in those fields where it would assist man to acquire control over his own nature corresponding with his control over material resources. Besides it is essential that even such declarations as the Atlantic Charter should be submitted to careful scientific scrutiny. The article is on firm ground in directing attention to the omission of any reference to such countries as India and again in insisting that the first axiom in world planning is that the prime motive force of life is hunger, which knows no distinction of colour. It challenges the durability of any settlement respecting the right of its peoples to choose the form of government under which they live unless in practice that Government is some form of democracy. It raises the question of the responsibility of scientific man in respect of disarmament with reference to work likely to be useful for military purposes and suggests that such researches should be submitted for examination and their report on results for control by an international agency. It is abundantly clear that there is an immense field in which fundamental thinking is required before we can implement many of the principles of the

Atlantic Charter and assess rightly the schemes of reconstruction which must be worked out in readiness even in the dark and exacting days of War." ಹೀಗೆ ಮೂಲಭೂತವಾದ ಪ್ರಶ್ನೆಗಳನ್ನು ಎತ್ತಿ ಪರೀಕ್ಷಿಸಿರುವ ಡಿ ವಿ ಜಿ ಯವರ ಲೇಖನ ಆದರ ಮನ್ನಣೆಯನ್ನು ಪಡೆಯಿತು.

ಅದೇ ಪತ್ರಿಕೆಯ ಡಿಸೆಂಬರ್ 1941 ರ ಸಂಚಿಕೆಯಲ್ಲಿ ಡಿ ವಿ ಜಿ ಯವರು 'ವಿಜ್ಞಾನ ಮತ್ತು ಧರ್ಮ' (Science and Ethics) ಎಂಬ ವಿಷಯವನ್ನು ಕುರಿತು ಒಂದು ಲೇಖನ ಬರೆದರು. ಸಿ. ಎಚ್. ವ್ಯಾಡಿಂಗ್‌ಟನ್ ಎಂಬ ಜೀವ ವಿಜ್ಞಾನಿಯು ಧರ್ಮ (Ethics) ಎಂಬುದು ವಿಜ್ಞಾನವು ಒದಗಿಸುವ ಸಾಮಗ್ರಿಯಿಂದ ನಿರ್ಣಯಿಸಲ್ಪಡುತ್ತದೆ ಎಂಬ ವಾದವನ್ನು ಮಂಡಿಸಿದನು. ಅದರ ಮೇಲೆ ಆದ ಚರ್ಚೆಯಲ್ಲಿ ಭಾಗವಹಿಸಿದ ಡಿ ವಿ ಜಿ ಯವರು ಮೇಲೆ ಹೇಳಿದ ಲೇಖನವನ್ನು ಬರೆದು ಹಿಂದೂ ಧರ್ಮದ ನಿಲುವನ್ನು ವಿವರಿಸಿದರು. ಇದನ್ನು ಕುರಿತು 'ನೇಚರ್' ಪತ್ರಿಕೆ ಏಪ್ರಿಲ್ 1942 ರಲ್ಲಿ, "A comment on the symposium by D. V. Gundappa was published in the Indian Journal "Current Science" in December last, and a revised and enlarged reprint of his remarks has just reached us. Mr. Gundappa emphasises the lack of agreement between the contributors to the symposium and states his own view, "That the data which science in its present state can furnish ....for a theory of ethics or metaphysics are a field of quick sand." He then presents an extremely valuable summary of Hindu philosophy of ethics, which, as he rightly points out, is only too little understood in Great Britain. Its elaborate structure and the mystical nature of its concepts will probably always make it difficult for non-Hindus to comperhend, but Mr. Gundappa's account, which is short and admirably clear, should serve as a most useful introduction to this important phase of human thought"—ಎಂದು ಬರೆಯಿತು.

ಅಕ್ಟೋಬರ್ 1945 ರ ಜಯಪುರದಲ್ಲಿ ಅಖಿಲ ಭಾರತ ಲೇಖಕರ ಸಮ್ಮೇಳನ ನಡೆಯಿತು. ಅಲ್ಲಿಗೆ ಡಿ ವಿ ಜಿ ಹೋಗಿರಲಿಲ್ಲವಾದರೂ, ಸಮ್ಮೇಳನಕ್ಕಾಗಿ "Conditions of Freedom in Literature" ಎಂಬ ಉಪನ್ಯಾಸ

ವನ್ನು ಕಳುಹಿಸಿದ್ದರು. ಲೇಖಕನ ಸ್ವಾತಂತ್ರ್ಯದ ಮುಖ್ಯತೆಯನ್ನು ವಿವರಿಸಿ, ಆಂದಿನ ಸಂದರ್ಭದಲ್ಲಿ ಪರಕೀಯ ಸರಕಾರದಿಂದ ಕೋಮುವಾರು ಭಾವನೆಯಿಂದ ಲೇಖಕನ ಸ್ವಾತಂತ್ರ್ಯಕ್ಕೆ ಒದಗಿರುವ ಅಡ್ಡಿಗಳನ್ನು ಹೇಳಿದ್ದಾರೆ.

ಏಪ್ರಿಲ್ 4, 1942 ರಂದು ಡಿ ವಿ ಜಿ ಬೆಂಗಳೂರಿನ ವಿಜ್ಞಾನ ಸಂಸ್ಥೆಗಳ ಸಮ್ಮೇಳನ (Joint Easter Session of Science Associations in Bangalore) ವನ್ನು ಉದ್ದೇಶಿಸಿ Towards a New world order (ನಮ್ಮ ಪ್ರಪಂಚಕ್ಕೆ ಒಂದು ಹೊಸ ವ್ಯವಸ್ಥೆ) ಎಂಬ ವಿಷಯವನ್ನು ಕುರಿತು ಉಪನ್ಯಾಸ ಮಾಡಿದರು. ಪ್ರಜಾಪ್ರಭುತ್ವವು ವ್ಯಕ್ತಿ ಮನುಷ್ಯನು ಇತರರೊಂದಿಗೆ ಬಾಳುವುದನ್ನು ಕಲಿಸುವುದಲ್ಲದೆ ಅವನ ಜೀವನಕ್ಕೆ ಒಂದು ಶಿಸ್ತನ್ನು ತರುತ್ತದೆ, ಮತ್ತು ರಾಷ್ಟ್ರದ ಎಲ್ಲರ ಹಿತವನ್ನು ಯೋಚಿಸುವಂತೆ ಮಾಡುತ್ತದೆ. ತನ್ನ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲು ಪ್ರತಿಯೊಬ್ಬನಿಗೂ ಸಹಾಯ ಮಾಡುತ್ತದೆ. ಈ ಕಾರಣದಿಂದ ಪ್ರಜಾಪ್ರಭುತ್ವಪದ್ಧತಿಯು ಇತರ ಪದ್ಧತಿಗಳಿಗಿಂತ ಉತ್ತಮವಾದದ್ದೆಂದು ಹೇಳಿ ಅದಕ್ಕಿರುವ ಅಪಾಯಗಳನ್ನು ವಿವರಿಸಿದ್ದಾರೆ: "Morphology seems at present to have taken precedence over physiology. It is as easy for symbolism and superstition to find quarter in a democracy as in a monorchy. The ballot paper and the superiority of numbers may be reverenced quite as unintelligently and as wastefully as the throne or the sword. The machinery and mathematics of elections have, as a matter of fact, come to eclipse that life-principle of which they were intended to be merely the seekers and heralds. Hence the need for a revision of the struture of the apparatus of democracy... Some device has to be employed as a supplement to election by vote, so that the wealth of personality missed by the ballot-box may be secured for the service of the state . The abdication of the responsibility for independent thought and conscientious decision by the average party member of a legislature marks the Achillean heel of democracy. Without party, democracy stands crippled ; with party it walks awry. Political thinkers have been racking their brains for a way of reconciling loyalty to party with

loyalty to country and conscience; but no clear answer has yet been found. One means of correcting the evils of the party system is in the vigilant activity of a body of independent minded, non-party public men. There should be institutions of such disinterested students of Public Affairs who, without fixing their eye on office, on prize, on party advantage, or on any group interest, will examine all measures and policies in a scientfic frame of mind and instruct the public about the excesses and defects of the proposals and programmes of the various parties in the country.... Rectifying the mechanism of democracy is only one part of the needed scheme of reform. The other part is in spreading democracy throughout the world.

The achievements of science have made modern man impatient for further conquests. We are today in a hurry to grasp all that catches our fancy and to gobble up all that our neighbours seem to be relishing in their mouths. And the slightest resistance irritates our tempers and provokes us to mutinous menaces. In other words our sense of values is disbalanced; our care for justice is obscured; our ego supersedes every consideration.

The Western concept of Progress needs to be modified at an essential point if it should not be extravagant and therefore misleading. Progress, if taken as implying continuous, uniform and illimitable improvement in our conditions of living, is nothing more than pleasant fancy-play. As improvements do certainly take place in some parts of man's life and environment in consequence of the free functioning of his will and intelligence, impairments too do as certainly setin in other parts. Seeds of the latter are as much a part of our nature as seeds of the former.

........Progress is
The law of life; man is not Man as yet.
Progress, Man's distinctive mark alone

Not God's and not the beasts'; God is, they are.
Man partly is and wholly hopes to be.

—Browning

Progress or improvement may relate to either or both of two totally different things; to man's outward state and circumstance and to man himself. Not only material conditions and social environment—wealth or poverty, health or sickness, education or ignorance, freedom or slavery, justice or inequality—but also intellectual and aesthetic conditions must be counted as pertaining to the exterior. What makes the man himself are the postures and proclivities of his soul, —how it looks upon the objects of senses, how it yields or resists temptation,....how it regards life-centres other than itself.... Progress in the subjective sense is the soul's ability to control its own impulses and to bring into mutual harmony the stimuli offered by the objective world and its own reactions thereto. In this sense the progress of the world has not kept pace with the advances which science has made possible to it in realms of external existence... The new paraphernalia designed and perfected by science are so alluring and so gratifying to the bodily senses as to expel from the mind all thought of the soul. .. Its ignoring has led to an erroneous sense of values and in the train of that error have followed illusion and tragedy. The true foundations of the new world order must therefore be laid in the souls of men.

Progress is certainly possible, but not perfection in conditions of outward existence. Perfection is possible only in the realm of the soul, and that only after prolonged effort and evolution. And imperfections in the outward progress are of use as spurs to the inward progress.

And to find the true path of progress, we need the twin lamps of science and humanistic culture. We need as eyes both reason and faith— our assumption of further possibi-

lities of research in science and of improvement in human conditions being itself an act of faith:

I shall now conclude with some brief lines from Matthew Arnold in which I find a statement of my own faith:

"I say: Fear not! Life still
Leaves human effort scope
But, since life teems with ill,
Nurse no extravagant hope:
Because thou must not dream,
thou need'st not then despair"

ಈ ಮಾತನ್ನೇ ಅವರು "ರಾಜ್ಯ ಶಾಸ್ತ್ರ"ದಲ್ಲಿಯೂ ಹೇಳಿದ್ದಾರೆ:

"ಜನದ ನಿರಂತರ ಪ್ರಯತ್ನಕ್ಕಾಗಿ—ಅವರ ಅಂತಶ್ಶಕ್ತಿಗಳನ್ನು ಎಬ್ಬಿಸಿ ಉಪಯೋಗಕ್ಕೆ ತರಿಸುವುದಕ್ಕಾಗಿ—ಅವರ ಜೀವನವನ್ನು ಪ್ರೋತ್ಸಾಹಿಸುವುದಕ್ಕಾಗಿ—ಮಹಾಕವಿಯಾದವನು ಅವರ ಕಣ್ಣಿಗೆ ಒಂದು ಗುರಿಯನ್ನು ಗುರುತು ಮಾಡಿಕೊಡುತ್ತಾನೆ. ಆ ಗುರಿ ಒಂದು ಅಪೂರ್ವಸುಂದರ ಲೋಕ.

"ಕಲ್ಯಾಣ ಪರಿಪೂರ್ಣತೆ ಭಗವಂತನೊಬ್ಬನಿಗೆ ಮಾತ್ರ ಸೇರಿದ್ದು: ಮನುಷ್ಯನಿಗೆ ಅದು ಲಭ್ಯವಾಗತಕ್ಕದ್ದಲ್ಲ—ಅವನು ಮನುಷ್ಯಮಾತ್ರನಾಗಿರುವವರೆಗೂ. ಅವನು ಕೇವಲ ಮನುಷ್ಯತ್ವದ ಮಟ್ಟದಿಂದ ಮೇಲಕ್ಕೇರಿದಂತೆಲ್ಲ ಆ ಭಗವದ್ವಿಭೂತಿ ಅವನಿಗೆ ಹತ್ತಿರ ಹತ್ತಿರವಾದೀತು. ರಾಮರಾಜ್ಯದ ಪರಿಪೂರ್ಣತೆ ಅಂತರ್ಬಹಿಶ್ಚ ಎರಡು ಪ್ರಪಂಚಗಳಿಗೂ ಸೇರಿದ್ದು. ನಮ್ಮ ಸಾಮಾನ್ಯ ಮನುಷ್ಯನ ಲಕ್ಷ್ಯದಲ್ಲಿರುವ ಪೂರ್ಣತೆಯಾದರೋ ಬಾಹ್ಯ ಸಂಪತ್ತನ್ನು ಮಾತ್ರ ಹೊಂದಿದ್ದು. ನೀತಿ ನಿರ್ಬಂಧವಿಲ್ಲದ ಸಂಪತ್ತು ಅವನ ಮನಸ್ಸನ್ನೆಳೆಯುತ್ತಿರುವಂಥಾದ್ದು. ಆದರೆ ಈ ಬಹಿರಾವರಣದ ಪರಿಪೂರ್ಣತೆಯೊಳಗಡೆ ಅವನ ಪಾಲಿಗೆ ಒಂದು ಅಪರಿಪೂರ್ಣತೆ ಅಡಗಿಕೊಂಡಿರುತ್ತದೆ. ನೀತಿವಿಸ್ಮೃತಿಯೇ ಅದು. ಸುಖ ಸಮೃದ್ಧಿ ಅವನನ್ನು ಅಜಾಗರೂಕನನ್ನಾಗಿ ಮಾಡುತ್ತದೆ; ಅವನಿಗೆ ಮೈಮರೆಯಿಸುತ್ತದೆ; ಅವನ ಜೀವವನ್ನು ಜಡವಾಗಿಸುತ್ತದೆ. ಎಲ್ಲ ಬಯಕೆಗಳೂ ಅವನಿಗೆ ಕೈಗೂಡಿರುವಾಗ ಅವನು ಶ್ರಮಿಸಬೇಕಾದದ್ದೇತಕ್ಕೋಸ್ಕರ? ಹಾಗೆ ಸ್ವಪ್ರಯತ್ನವನ್ನು ಅನವಶ್ಯ ಮಾಡುವುದೇ ಪರಿಪೂರ್ಣತೆಯ ಅವಗುಣ. ಭಾಗ್ಯಸಂಪಾದನೆಗಲ್ಲದಿದ್ದರೆ ಅದರ ಸಂರಕ್ಷಣೆಗಾಗಿಯಾದರೂ ಮನುಷ್ಯನು ಎಚ್ಚತ್ತಿರಬೇಕು. ಎಚ್ಚರತಪ್ಪಿದವನ ಸಂಪತ್ತು

ಗಾಳಿ ಬೀಸುವೆಡೆಯ ತೇವದಂತೆ ಆರಿಹೋಗುತ್ತದೆ.

"ಎಚ್ಚರಿಕೆ ಕೊಡಬಲ್ಲದ್ದು ಕೊರತೆ, ಕಹಿ, ಬಡತನ. ಈ ಹುಡುಕುವಿಕೆಯೇ ಆತ್ಮಯತ್ನ. ಅದೇ ಆತ್ಮಸಂಸ್ಕಾರ. ಅದೇ ಆತ್ಮದ ಬೆಳವಣಿಗೆ. ಹೀಗೆ ಸಂಕಟದರ್ಶನದಿಂದಲೇ ಮಂಗಳ ಸ್ಮರಣೆ. ರಿಕ್ತತೆಯೇ ಸಂಪತ್ತಿನ ಪ್ರಚಾರ ದೂತ; ನ್ಯೂನತೆಯೇ ಪರಿಪೂರ್ಣತೆಯ ಕಡೆಗೆ ನಮ್ಮನ್ನು ತಿರುಗಿಸುವ ನಿಮಿತ್ತ ಧ್ವನಿ.

"ರಾಮರಾಜ್ಯವು ಸಿದ್ಧವಸ್ತುವಾಗದೆ ಸಾಧ್ಯಧ್ಯೇಯವಾಗಿಯೇ ಇರುವ ಒಂದು ಜೀವಿತ ಸೌಂದರ್ಯದ ಕಲ್ಪನೆ. ಅದನ್ನು ಹುಡುಕುತ್ತಿರುವುದೇ, ಅದಕ್ಕಾಗಿ ಪಡುವ ಶ್ರಮವೇ, ಅದನ್ನು ಕುರಿತ ತಪಸ್ಸೇ ನಮ್ಮ ಆತ್ಮಕ್ಕೆ ಲಾಭ. ಅದರಿಂದಲೇ ಆತ್ಮಕ್ಕೆ ಪರಿಪೂರ್ಣತಾಪಾತ್ರತೆ. ರಾಮರಾಜ್ಯ ಹಿಂದೆ ಎಂದೋ ಇದ್ದಂತೆ ಮುಂದೆ ಎಲ್ಲೋ ಇರುತ್ತದೆ. ಆ ನಂಬಿಕೆಯೇ ನಮಗೆ ಪ್ರಗತಿ ಪ್ರೇರಕ."

ಕಗ್ಗದಲ್ಲಿ ಬರುವ ಪ್ರಶ್ನೆಗಳು ಎದುರಾದದ್ದೂ, ಅದಕ್ಕೆ ಅವರು ಸಮಾಧಾನವನ್ನು ಕಂಡುಕೊಂಡು ಕಗ್ಗದ ನಕ್ಷೆಯನ್ನು ಮನಸ್ಸಿನಲ್ಲಿ ಭಾವಿಸಿಕೊಂಡದ್ದೂ ಈ ಹಿನ್ನೆಲೆಯಲ್ಲಿಯೇ ಎಂದು ಕಾಣುತ್ತದೆ.

ಪಾರಾಕ್ಯಾಕ್ರಾಂತಿಯೀಗಳ್ ಪರಿದುದು

ಈ ಮಧ್ಯೆ ಸ್ವಾತಂತ್ರ್ಯ ಹೋರಾಟ ಸಾಗುತ್ತಿತ್ತು. ಬ್ರಿಟಿಷರು ಒಂದಲ್ಲ ಒಂದು ನೆಪದಿಂದ ಇಲ್ಲಿಂದ ತೊಲಗುವ ದಿನವನ್ನು ಮುಂದೂಡುತ್ತಿದ್ದರು. ಅವರಿಗೆ ಸಿಕ್ಕಿದ ಒಂದು ದೊಡ್ಡ ನೆಪ 'ಪಾಕಿಸ್ತಾನ'ದ ಬೇಡಿಕೆ. ಇದನ್ನು ಕುರಿತು 1931ರಲ್ಲಿಯೇ ಡಿ ವಿ ಜಿ ಹೀಗೆ ಟಿಪ್ಪಣಿ ಬರೆದುಕೊಂಡಿದ್ದರು: "Read R.T.C. Reports in papers and Sir M. Iqbal's address to Muslim League. He wants a separate Muslim province to grow into a Muslim State in India. A thoroughly fanatical and mischievous speech."

ಆಗ ಹುಟ್ಟುಹಾಕಿದ ವಿಷಬೀಜ ದೊಡ್ಡ ಮರವಾಗಿ ಬ್ರಿಟಿಷರಿಗೆ ಒಳ್ಳೆಯ ಉಪಕರಣವಾಗಿ ಪರಿಣಮಿಸಿತು. ಒಂದು ಕಡೆ ದೇಶೀಯ ಸಂಸ್ಥಾನಗಳು ಇನ್ನೊಂದು ಕಡೆ ಪಾಕಿಸ್ತಾನಕ್ಕಾಗಿ ಬೇಡಿಕೆ. ಇವೆರಡರ ಮಧ್ಯೆ ಭಾರತದ ಸ್ವಾತಂತ್ರ್ಯದ ದಿನ ಮುಂದಕ್ಕೆ ಹೋಗುತ್ತಲೇ ಇತ್ತು.

1941 ರಲ್ಲಿ ಬರೆದ "India's political Dilemma: wanted a new technique" ಎಂಬ ಒಂದು ಲೇಖನದಲ್ಲಿ ಕಾಂಗ್ರೆಸಿನವರ ರಾಜಕೀಯ ಸಾಧನಗಳನ್ನು ಕುರಿತು ಒಂದು ವಿಶ್ಲೇಷಣೆ ನಡಸಿದ್ದಾರೆ ಡಿ ವಿ ಜಿ:

"An influential section of the Nationalist Press and many public men of note have for sometime past been pleading that the Congress ought not to convert itself into an esoteric body upholding a set of ethical or spiritual abstractions.... Politics is a secular department of life and purposes and processes there should be pragmatic rather than transcendental. Poiltics being a practical art is not fit to serve as a laboratory for conceptual ethics; and to insist on absolute standards there without reference to attendant facts would be like going into a popular restaurant and looking for the disciplines of a hospital.....The issue of non-violence or violence is really irrelevant today so far as our quarrel with Britain is conce-

rned. It became irrelevant the day when secret organisations for armed revolt were denounced and destroyed....There are a great number of people in the country today who, while not differing materially from the Congress as regards the political objective are unable to accept the non-political parts of its creed and programme such as Satyagraha and charaka-spinning." ಈ ಕಾರಣದಿಂದ ಬೇರೆ ಅಭಿಪ್ರಾಯಗಳಿರುವ ನಾಯಕರನ್ನೂ ಕಾಂಗ್ರೆಸು ದೇಶದ ಒಟ್ಟು ಹಿತದ ದೃಷ್ಟಿಯಿಂದ ತನ್ನೊಂದಿಗೆ ಸೇರಿಸಿಕೊಳ್ಳುವ ಪ್ರಯತ್ನ ಮಾಡಬೇಕು. " In one word the need of today is a coalition technique and it will surely be courage and not at all self-stultification for the Congress to adopt it."

ಸಿ. ರಾಜಗೋಪಾಲಾಚಾರ್ಯರ ಸಲಹೆಯ ಮೇರೆಗೆ ಮದರಾಸಿನ ಶಾಸನ ಸಭೆಯ ಕಾಂಗ್ರೆಸ್ ಪಕ್ಷವು 23-4-1942 ರಲ್ಲಿ, ಮುಂದೆ ಮುಸ್ಲಿಂ ಲೀಗ್‌ನ ಬೇಡಿಕೆಯನ್ನು ಮನ್ನಿಸುವ ಷರತ್ತಿನ ಮೇಲೆ, ಈಗ ಯುದ್ಧ ಕಾಲದಲ್ಲಿ ರಾಷ್ಟ್ರೀಯ ಸರಕಾರವನ್ನು ರಚಿಸಲು ಮುಸ್ಲಿಂ ಲೀಗಿನ ಸಮ್ಮತಿಯನ್ನು ಪಡೆಯಬಹುದೆಂಬ ಸಲಹೆಯನ್ನು ಮಾಡಿತು. "ರಾಜಾಜಿಯವರು ಬಹು ದೂರಾಲೋಚನೆಯುಳ್ಳವರು, ಸದ್ಯಃಪ್ರಯೋಜನಕ್ಕಾಗಿ ತಮ್ಮ ಆದರ್ಶವನ್ನು ತ್ಯಾಗ ಮಾಡುವವರಲ್ಲ, ಅಂಥವರು ಈ ಸಲಹೆಯನ್ನೇಕೆ ಮಾಡಿದರು." ಎಂದು ಡಿವಿಜಿ, ಈ ಸಲಹೆಯನ್ನು "To End the Deadlock" ಎಂಬ ಲೇಖನದಲ್ಲಿ ಪರಿಶೀಲಿಸಿದ್ದಾರೆ. 1935ರ ರಾಷ್ಟ್ರ ನಿಬಂಧನೆಯನ್ನು ನಾವು ಸಂಪೂರ್ಣವಾಗಿ ಒಪ್ಪಿಕೊಳ್ಳಬೇಕಾಗಿತ್ತು. "The Congress has certainly seemed totalitarian to others...The Liberals, the Responsive Co-operationists, the Democratic Swarajists and others wearing similar progressive labels are simply nobodies in its eye. This totalitarian attitude of the Congress has repelled the other parties as much as the mysticism in its political philosophy It is no small gain to national Politics that a man of Mr. Rajagopalacharya's record of self-sacrifice and of ability in parliamentaty management and public administration has been converted from acquiescence in mystical negativism to an attitude of positive activism. Non-violence

and Non-cooperation undoubtedly have their occasions in human affairs. But there are other occasions also. No single formula can be great enough to suffice for all sorts of occasions that inevitably arise in the life of the world. Mr. Rajagopalacharya has come to perceive, during the last year or two, the need that there is for a realistic political programme".

"The fundamental point about India's unity is that it is a thing to be desired for its own sake, altogether apart from its value as the means of throwing off the foreign yoke".

"The objection to the creation of a Pakistan and a "Hindudom" alike is not simply that it makes for a subtraction from the total strength of India; it is equally to be emphasized that it makes for our reversion to the stage of theocracy. A State formed on the basis of religion is an anachronism today....Nationalism and Citizenship are capable of rising to their highest only when they are independent of all theocratic and sacerdotal considerations ... Indeed the modern state is not concerned to know to what church or denomination its citizen belongs. It is only concerned to secure to him the fullest possible freedom for exercising his membership of whichever church of denomination he has chosen for himself. It is from this point of view that the creation of "Stans" and "doms" on the foundations of religious differences is to be deprecated. Mr. Rajagopalacharya is yielding recognition to a radically wrong and dangerous idea out of his faith in a doubtful method of securing a temporary advantage".

"How would you deal with the cry for a Dravidastan? If the formula of self-determination is to be applied without regard to the conditions of the case, how would you resist, or would you not resist at all, the cry for a Rajaputrastan, a Sikhistan, a Parsistan, a Christistan—aye, a Brahministan, even

a Smarthastan, a Vaishnavastan, a Srivaishnavastan? The picture cannot be dismissed as fanciful. We have all seen how concessions made to communalism in the field of public services have only served to multiply communities and conplicate public life. Where would you stop? Which is to be your irreducible and indivisible unit of the Nation or the State of India?"

ಆದ್ದರಿಂದ ಕಾಂಗ್ರೆಸ್ ಸಂಸ್ಥೆಯು ಇತರ ಪಕ್ಷಗಳನ್ನೂ ತನ್ನೊಡನೆ ಸೇರಿಸಿಕೊಂಡು, ಪಾಕಿಸ್ತಾನದ ಬೇಡಿಕೆಯನ್ನು ಎದುರಿಸುವ ಪ್ರಯತ್ನ ಮಾಡಬೇಕೆಂದು ಸಲಹೆ ಮಾಡಿದರು.

ಅಷ್ಟರಲ್ಲಿ ಗಾಂಧಿಯವರು "ಕ್ವಿಟ್ ಇಂಡಿಯ" ಎಂಬ ಬ್ರಿಟಿಷ್ ಭೂತೋಚ್ಚಾಟನೆಯ ಮಂತ್ರವನ್ನು ಘೋಷಿಸಿದರು. ದೇಶದ ಜನ ಬ್ರಿಟಿಷ್ ಭೂತವನ್ನು ತೊಲಗಿಸುವ ಕಾರ್ಯದಲ್ಲಿ ತೊಡಗಿದರು. ಆ ಭೂತದ ಗದ್ದುಗೆಯು ನಡುಗಿದ್ದುತೂ ನಿಜ. ಅದು ಭಾರತದ ಚರಿತ್ರೆಯ ಒಂದು ದೊಡ್ಡ ಘಟನೆ. ಇದನ್ನು ಕುರಿತು ಡಿ ವಿ ಜಿ ಯವರ ಅಭಿಪ್ರಾಯವೇನು?

ನವಂಬರ್ 1945 ರ 'ದಿ ಆರ್ಯನ್ ಪಾತ್' ಎಂಬ ಪತ್ರಿಕೆಯಲ್ಲಿ "England and India: Essays in Mutual Understanding" ಎಂಬ ಶೀರ್ಷಿಕೆಯಲ್ಲಿ ಆಗಿನ ರಾಜಕೀಯ ಪರಿಸ್ಥಿತಿಯನ್ನು ಕುರಿತು ಸಂಭಾಷಣಾ ರೂಪವಾದ ಲೇಖನವೊಂದನ್ನು ಡಿ ವಿ ಜಿ ಬರೆದರು. ಥಾಮಸ್ ಎಂಬ ಇಂಗ್ಲೆಂಡಿನ ಪ್ರಾಧ್ಯಾಪಕ, ಮತ್ತು ಕೃಷ್ಣ ಎಂಬ ಆತನ ಶಿಷ್ಯ ಇವರ ನಡುವೆ ನಡೆದ ಸಂಭಾಷಣಾರೂಪವಾದದ್ದು ಅದು. ಕಾಂಗ್ರೆಸ್ ಸಂಸ್ಥೆ ಪ್ರಾರಂಭವಾದ ಮೊದಲಿನ ದಶಕಗಳಲ್ಲಿ ಎಲ್ಲರೂ ಭಾರತೀಯರು ಎಂಬ ಭಾವನೆಯೇ ಪ್ರಬಲವಾಗಿತ್ತು. ಆದರೆ ಇಂಗ್ಲಿಷಿನವರ ಹುನ್ನಾರಿನ ಕಾರಣದಿಂದ ಹಿಂದೂ ಮುಸ್ಲಿಂ ಭೇದಭಾವನೆ ಮೊಳೆತು ದೊಡ್ಡ ಮರವಾಯಿತು ಎಂದು ಹೇಳಿ ಹೀಗೆ ಮುಂದುವರಿಯುತ್ತದೆ ಆ ಲೇಖನ:

K: It is the realisation of this psychological fact that made Mr. Gandhi ask for the withdrawal of the British. When Britain is no longer here to breed and encourage discontent in the Muslim Camp and point to that circumstance as a source of danger to the Hindus, and then to use the fear complex so generated on both sides as a justification for her

own self-perpetuation in power, then Muslims and Hindus are forced to make peace with each other as inescapable sharers in a common destiny.

T: So you would justify the 'Quit India' campaign of Mr. Gandhi and all the grim events that followed it ; would you?

K: Frankly, I am unable to see anything morally wrong either in that cry or in what followed. The disturbances were the people's reaction to the Governments'... act of repression. The popular leaders were all spirited away. But the urge in the people's heart for their country's independence and for the liberty of their leaders was not killed that way ; and it had to express itself in some form of action. And the disturbances of 1942 were its most natural form....I think their (The Britishers') insistance on absolute unity among Indian parties as a precondition for a move forward is a matter of imperialist strategy. Our Rulers have made sure that it is a condition impossible of fulfilment by seeing to it that the parties concerned are always at daggers drawn against one another. Your lips ask for unity while your hands pursue division."

ಹೀಗೆ 1942 ರ ಘಟನೆಗಳು ಭಾರತದ ಚರಿತ್ರೆಯಲ್ಲಿ ಅನಿವಾರ್ಯ ವಾಯಿತು, ಮತ್ತು ಅದರ ಪೂರ್ಣ ಜವಾಬ್ದಾರಿ ಬ್ರಿಟಿಷ್ ಸರಕಾರಕ್ಕೇ ಸೇರಿದ್ದು ಎಂಬುದೇ ಡಿ ವಿ ಜಿ ಯವರ ಅಭಿಪ್ರಾಯವಾಗಿತ್ತು.

10-8-1942 ರಲ್ಲಿ ರಾಜಾಜಿಯವರಿಗೆ ಪತ್ರ ಬರೆದು ತಮ್ಮ ಸಲಹೆ ಯನ್ನು ಅವರ ಮುಂದಿಟ್ಟರು :

"The Voice that reaches you through this letter proceeds from one among the millions of hearts that are feeling today the load of a great sorrow and a great humiliation. Cannot something be done to improve matters ?

"You have to show us a way out of the morass. Let me plead with you in all humility: why shouldn't you see the Viceroy? A fair and honourable way may be found if the Viceroy would help. First, the status of Independence should be reiterared in the phrases of the Cripps formula and with

full authority of the parliament. Second, all questions pertaining to the after-war constitution, including Pakistan and all other comunal issues should be deferred till the day of peace. Third, the cabinet of the interim war period Govrnment should be a composite one and in forming this Mr. Jinnah may have a free hand. Fourth, such parts of the military and defence portfolio as cannot be fully transferred to Indian hands, that is matters that are of Allied Nations' interest or imperial interest in addition to being of Indian interest, should be subject to the joint power and control of both the British and the Indian Governments." ಅದಕ್ಕೆ ಉತ್ತರವಾಗಿ ರಾಜಾಜಿ "It is easy to come to conclusions on isolated issues. It is unfortunately much harder to come to a definite and single result as a synthesis of all the issues. That has taken us to this tragedy Any way the situation has been rendered particularly "impossible" by the step taken by Gandhiji under the express and implied encouragement of most Indian nationalists including yourself. That is my definite charge! There was no way but what I pleaded for. I know what otherwise was coming. It seems we have to wait and go through misfortune in the meanwhile" ಎಂದು 12-8-1942ರಲ್ಲಿ ಬರೆದರು.

ವಿಲಿಯಂ ಫಿಲಿಪ್ಸ್ ಎಂಬ ಅಮೆರಿಕದ ರಾಯಭಾರಿ ಭಾರತಕ್ಕೆ ಭೇಟಿ ಕೊಟ್ಟಾಗ ಬೆಂಗಳೂರಿಗೂ ಬಂದಿದ್ದರು. ಅವರನ್ನು ಮಾರ್ಚ್ 1943 ರಲ್ಲಿ ಸಂಧಿಸಿದ ಡಿ ವಿ ಜಿ ಭಾರತದ ರಾಜಕೀಯದ ವಿಷಯದಲ್ಲಿ ತಮ್ಮ ಅಭಿಪ್ರಾಯಗಳನ್ನು ಅವರ ಮುಂದಿಟ್ಟರು.

ಆ ಸಮಯದಲ್ಲೇ India's Political Problem ಎಂಬ ಲೇಖನವನ್ನು ಬರೆದು ಬ್ರಿಟಿಷ್ ಸರಕಾರದವರು ಕೂಡಲೇ ರಾಷ್ಟ್ರೀಯ ಸರಕಾರವೊಂದನ್ನು ರಚಿಸಬೇಕೆಂದೂ, ಯುದ್ಧಾನಂತರ ಎರಡು ವರ್ಷಗಳ ಒಳಗಡೆ ಭಾರತಕ್ಕೆ ಸ್ವಾತಂತ್ರ್ಯವನ್ನು ಕೊಡುವುದಾಗಿ ಭರವಸೆಯನ್ನು ಕೊಡಬೇಕೆಂದೂ ವಾದಿಸಿದರು. ಇದನ್ನು ದೇಶದ ನಾಯಕರೆಲ್ಲರಿಗೂ, ವೈಸ್‌ರಾಯರಿಗೂ ಕಳುಹಿಸಿದರು. ದೇಶೀಯ ಸಂಸ್ಥಾನದ ಅಧಿಪತಿಗಳು ಮತ್ತು ಹೃದಯನಾಥ ಕುಂಜ್ರು, ಸರ್

ತೇಜ್ ಬಹದೂರ್ ಸಪ್ರು, ಸಿ.ಪಿ ರಾಮಸ್ವಾಮಿ ಅಯ್ಯರ್ ಮುಂತಾದವರೊಡನೆ ಪತ್ರವ್ಯವಹಾರ ನಡಸಿ, ಜೈಲಿನಲ್ಲಿರುವ ಭಾರತದ ನಾಯಕರ ಬಿಡುಗಡೆಗೆ ಏರ್ಪಾಟುಮಾಡಿ, ಸಂಧಾನದ ಕ್ರಮಗಳನ್ನು ಕೈಗೊಳ್ಳುವಂತೆ ಕೇಳಿಕೊಂಡರು.

ಕ್ರಿಪ್ಸ್‌ನಿಯೋಗ ಭಾರತಕ್ಕೆ ಬಂದು ತಮ್ಮ ಸಲಹೆಗಳನ್ನು ಭಾರತ ದೇಶದ ನಾಯಕರ ಮುಂದಿಟ್ಟ ಸಂದರ್ಭದಲ್ಲಿ ಮತ್ತು ಅನಂತರ ಡಿ ವಿ ಜಿ ಯವರು ಗೋಖಲೆ ಸಂಸ್ಥೆಯ ಮೂಲಕ ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಪಡಿಸಿದರು. All India Union (ಮಾರ್ಚ್ 1945), The Cabinet Delegation and After (ಜುಲೈ 1946), All India Federal Union (ಮಾರ್ಚ್ 1946), The Constituent Assembly and the States (ಡಿಸೆಂಬರ್ 1946)—ಇವೆಲ್ಲದರ ಸಾರಾಂಶವೆಂದರೆ: ಮೊದಲು ಬ್ರಿಟಿಷರನ್ನು ಹೊರಗೆ ಕಳುಹಿಸಬೇಕು; 1935 ರ ರಾಜ್ಯ ನಿಬಂಧನೆಯ ತಳಹದಿಯ ಮೇಲೆ ಸ್ವತಂತ್ರ ಭಾರತದ ರಾಜ್ಯ ನಿಬಂಧನೆಯನ್ನು ರಚಿಸಿಕೊಳ್ಳಬೇಕು; ಹಾಗೆ ಮಾಡುವಾಗ ದೇಶೀಯ ಸಂಸ್ಥಾನಗಳ ಪ್ರಾತಿನಿಧ್ಯವೂ ಇರಬೇಕು; ದೇಶೀಯ ಸಂಸ್ಥಾನಾಧಿಪತಿಗಳ ಜೊತೆ ಸಂಧಾನ ನಡೆಸಲು ಒಂದು ಸಮಿತಿ ಇರಬೇಕು. ಸಂಸ್ಥಾನಗಳಲ್ಲಿ ಜವಾಬ್ದಾರಿ ಸರಕಾರ ಸ್ಥಾಪನೆಯಾಗಬೇಕು; ಬ್ರಿಟಿಷ್ ಇಂಡಿಯದಲ್ಲಿರುವ ಕನ್ನಡ ಪ್ರದೇಶಗಳನ್ನು ಸೇರಿಸಿ ಕರ್ನಾಟಕ ಪ್ರದೇಶದ ಸ್ಥಾಪನೆಯಾಗಬೇಕು ಎಂಬುದೇ.

ಬ್ರಿಟಿಷರು ಭಾರತದಿಂದ ಹೊರಟಮೇಲೆ ದೇಶೀಯ ಸಂಸ್ಥಾನಗಳ ಪರಿಸ್ಥಿತಿಯೇನು ಎಂಬ ಪ್ರಶ್ನೆ ಎಲ್ಲರ ಮುಂದೆಯೂ ನಿಂತಿತು. ಆಗ ಡಿ ವಿ ಜಿ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ಯರಿಗೆ 3-6-1946 ರಲ್ಲಿ ಬರೆದ ಪತ್ರದಲ್ಲಿ, ಹೈದರಾಬಾದು ಸಂಯುಕ್ತ ರಾಷ್ಟ್ರದೊಡನೆ ವಿಲೀನವಾಗಲು ತಿರಸ್ಕರಿಸಿದರೆ ಮುಂದೇನು ?—ಎಂಬ ಪ್ರಶ್ನೆಯನ್ನೆತ್ತಿದ್ದಾರೆ.

ಡಿ ವಿ ಜಿ ಯವರು 'ತ್ರಿವೇಣಿ' ಯಲ್ಲಿ ಬರೆದ ಲೇಖನ ತಲುಪಿದ್ದನ್ನು ಹೇಳುತ್ತ ರಾಜಾಜಿಯವರು "No, there is no room any longer for throwing the blame on the Britisher. Our struggle has shifted from external battlefields to the more difficult Kurukshetra, wherein we shall fall or succeed in the measure of our loyalty to the principles of Truth and Cooperation proclaimed in our religion ..." ಎಂದು 2.9.1946 ರಲ್ಲಿ ಪತ್ರ ಬರೆದರು.

"ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ"ಯ ಹೃದಯನಾಥಖುಂಜ್ರು ಅವರು ತಮ್ಮ 19-7-1946 ರ ಪತ್ರದಲ್ಲಿ "I trust that you will be one of the representatives of Mysore in the Constituent Assembly. No one in the Indian States, I think, has a better knowledge of the questions relating to the position of the Indian States in the future Constitution of India" ಎಂದು ಬರೆದಿದ್ದರು. ಅದಕ್ಕೆ ಉತ್ತರವಾಗಿ ಡಿ ವಿ ಜಿ ಹೀಗೆಂದರು. "I cannot fancy myself as in the Consembly at all. What the Mysore Government's plans are I have no means of knowing. Our new Dewan is a stranger to me. And somehow I have never felt like going to people in power and cultivating them. True, Sir Mirza and I were friends in a limited sense. But such as it was, that relationship began about 1913, some thirteen years before he became Dewan. Today I am content to remain an observer in the outer court. I have the right to comment and advice from where I am, and that is enough for me. I am convinced that entering into any kind of competition for power or place of influence is an evil I should avoid."

ಜನವರಿ 1947 ರಲ್ಲಿ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ಯರಿಗೆ ಪತ್ರವೊಂದನ್ನು ಬರೆದು "This is a shout of pure joy! I am so delighted that Pandit Nehru's resolution has been accepted by the Con. Assembly and that so unanimously. May I beg you to communicate my warm felicitation to the Pandit? Ofcourse congratulations are due to you no less. Isn't there some piquant significance in that the present congratulator is one who at first had fears and misgiving as to the possible consequences of the resolution?" ಎಂದು ಹೇಳಿ, ತಾವು ದೇಶೀಯ ಸಂಸ್ಥಾನಗಳಲ್ಲಿ ಜವಾಬ್ದಾರಿ ಸರಕಾರದ ಸ್ಥಾಪನೆಗಾಗಿ, ಸಂಯುಕ್ತ ರಾಷ್ಟ್ರದೊಡನೆ ಅವುಗಳು ಸೇರುವುದಕ್ಕಾಗಿ ಮಾಡಿದ ಪ್ರಯತ್ನಗಳನ್ನು ಜ್ಞಾಪಿಸಿಕೊಳ್ಳುತ್ತ ಈ ವಿವರಗಳನ್ನೂ ಹೇಳಿದ್ದಾರೆ: "At the second Round Table Conference Dr. Ambedkar read an extract from my 1931 book on the States' problems and tried to raise a dis-

cussion. Bikaner flared up and inquired as to my standing. Dr. Ambedkar referred him to Sir Mirza who was present there. I do not think Sir Mirza stood up for me. He didn't tell me of the episode either. But it is all found in the printed official report of the R. C. C. Sir Mirza was sore about my book, because I had dared to plead for Responsible Government and what was more, I had persuaded Sir M. Visweswaraya (so Sir Mirza seemed to believe though that was not so) to urge the introduction of Responsible Government in Mysore. On the other side public leaders in British India were indifferent. V.S.S. Sastrigal and Sir P.S.S., would not take me with any degree of seriousness on the issue of Responsible Government for the States, and there was indeed an open quarrel between me and Sir P.S.S. once on the issue. I have been like Cassandra for the States all these 30 years. You could fancy my satisfaction now! National public opinion has at last come to recognise the imperativeness of the States' Peoples' need. We are no longer to be asked to remain content with an inferior brand of citizenship, which Mirzas and Ramaswamis would have us accept in consideration of the unique Privilege given to us of calling ourselves the subjects of ancient dynasties. You have placed us on the high road to equal partnership in All Indian citizen-life. I am sure the resolution is going to have a salutary effect on the minds of all Maharajas and Dewans!

I am also glad CR is moving for priority to the question of the jurisdiction and powers of the Union-centre. The States' people want a strong centre than anybody else.

Yon have achieved a master stroke of strategy by adopting the Resolution. I see success in the offing."

ಡಿ ವಿ ಜಿ ಯವರಿಗೆ ಹೀಗೆ ಮಹದಾನಂದವನ್ನೂ ಕೃತಕೃತ್ಯತೆಯ ಭಾವವನ್ನೂ ತಂದ ಸಂಗತಿಯೆಂದರೆ ದೇಶೀಯ ಸಂಸ್ಥಾನಗಳ ವಿಷಯದಲ್ಲಿ ರಾಷ್ಟ್ರ ಸಂಘಟನೆಯ ಧ್ಯೇಯೋದ್ದೇಶಗಳ ಗೊತ್ತುವಳಿ (Objectives Reso

lution) ಯನ್ನು ಸಭೆಯ ಮುಂದಿಟ್ಟು ಪಂಡಿತ ನೆಹರೂ ಅವರು 13.12.1946ರಲ್ಲಿ ಹೇಳಿದ ಮಾತುಗಳು: There is no incongruity or impossibilty about a certain definite form of administration in the States provided there is complete freedom and responsible government there and the people are really in charge. If monorchichal figure-heads are approved by the people of the State, of a particular State, whether I like it or not, I certainly will not like to interfere".

ಎನ್. ಗೋಪಾಲಸ್ವಾಮಿ ಅಯ್ಯಂಗಾರ್ಯರೂ ಸಹ: Remnants of all pervasive autocracy deerve to be swept away and replaced by a provision which declares that all powers of gvoernment, legislative, executive and judicial should be deemed to be derived from the people and exercised by such organs of state including the heriditary ruler as may be designated in the written constitution and to the extent authorised by the constitution" ಎಂದರು.

ಹೀಗೆ ಯಾವ ಬಗೆಯಾದ ಜನಾಧಿಕಾರಕ್ಕಾಗಿ ಜವಾಬ್ದಾರಿ ಸರಕಾರಕ್ಕಾಗಿ ತಮ್ಮ ಜೀವಮಾನವೆಲ್ಲ ಹೊಡೆದಾಡಿದ್ದರೋ ಅದನ್ನು ರಾಷ್ಟ್ರ ಸಂವಿದಾನ ಸಭೆ ಅಂಗೀಕರಿಸಿದ್ದು ಡಿ ವಿ ಜಿ ಯವರಿಗೆ ತುಂಬ ತೃಪ್ತಿಯನ್ನು ತಂದಿತ್ತು.

14.8.47 ಗುರುವಾರ ರಾತ್ರಿ 12 ಘಂಟೆಯ ಹೊತ್ತಿನಲ್ಲಿ ಆದ ಭರತ ಖಂಡದ ಸ್ವರಾಜ್ಯ ಸ್ಥಾಪನೆಯನ್ನು ಕುರಿತು ಅದೇ ಹೊತ್ತಿನಲ್ಲಿ ಗೋಖಲೆ ಸಂಸ್ಥೆಯ ಮಂದಿರದಲ್ಲಿ ಮಹಾಜನ ಸಭೆ ನಡೆಯಿತು. 11-30 ಘಂಟೆಗೆ ಪ್ರಾರಂಭವಾದ ಸಭೆಯಲ್ಲಿ ಪಾಲುಗೊಂಡಿದ್ದ ಡಿ ವಿ ಜಿ ಬೆಳಗಿನ ಝಾವ 1 ಘಂಟೆಗೆ ಕಲಾಮಂದಿರದಲ್ಲಿ, 8 ಘಂಟೆಗೆ ಲಾ ಅಸೋಸಿಯೇಷನ್‌ನಲ್ಲಿ, 9 ಘಂಟೆಗೆ ನರಸಿಂಹರಾಜಾ ಕಾಲೋನಿ ಅಸೋಷಿಯೇಷನ್‌ನಲ್ಲಿ, 10-30ಕ್ಕೆ ಮಹಾರಾಷ್ಟ್ರ ಮಹಿಳಾ ವಿದ್ಯಾಲಯದಲ್ಲಿ, ಸಂಜೆ 4-15 ಕ್ಕೆ ಗಾಂಧಿ ನಗರದಲ್ಲಿ, 5-30 ಕ್ಕೆ ಕನ್ನಡ ಸಾಹಿತ್ಯಪರಿಷತ್ತಿನಲ್ಲಿ, 6 ಘಂಟೆಗೆ ಗಾಂಧಿ ಬಜಾರಿನಲ್ಲಿ, 6-30 ಕ್ಕೆ ಅಶಕ್ತ ಪೋಷಕ ಸಭೆಯಲ್ಲಿ ನಡೆದ ಸ್ವಾತಂತ್ರ್ಯೋತ್ಸವ ಸಮಾರಂಭಗಳಲ್ಲಿ ಪಾಲುಗೊಂಡರು.

ಅಂದು ಅವರು "ಸ್ವತಂತ್ರ ಭಾರತ ಅಭಿನಂದನ ಸ್ತವ" ಎಂಬ 24 ವೃತ್ತ

ಗಳ ಪದ್ಯ ಪ್ರಬಂಧವನ್ನೂ ರಚಿಸಿಕೊಟ್ಟರು. ಭಾರತದ ಹಿರಿಮೆಯೇನು, ಅದರಿಂದ ಲೋಕಕ್ಕಾಗಬೇಕಾಗಿರುವ ಕೆಲಸವೇನು, ಭಾರತ ಸ್ವಾತಂತ್ರ್ಯ ಪಡೆದು ಕೊಂಡ ರೀತಿ ಹೇಗೆ, ಭಾರತ ಪುತ್ರರ ಮುಂದಿರುವ ಕರ್ತವ್ಯವೇನು ಮುಂತಾದ ಅನೇಕ ವಿಷಯಗಳನ್ನು ಒಳಗೊಂಡ ಗಂಭೀರವಾದ ಕೃತಿ ಅದು. ಈಗ ಭಾರತ ವಿಭಜನೆಯಿಂದ ಆಗಿರುವ ಗಾಯವು ಗುಣವಾದರೆ ಪುನಃ ಭಾರತವು ಒಂದು ಆಗದೆ ಇರುತ್ತದೆಯೇ ಎಂಬ ಆಸೆಯನ್ನೂ ಅವರು ಅಲ್ಲಿ ವ್ಯಕ್ತಪಡಿಸಿದ್ದಾರೆ. ರಾಷ್ಟ್ರಕ ಧರ್ಮ ಕೈಪಿಡಿಯೆನಿಸಿಕೊಳ್ಳಬಹುದಾದ ಆ ಪದ್ಯಮಾಲೆಯನ್ನು ಅರ್ಥ ವಿವರಣೆಗಳೊಂದಿಗೆ, "ಶ್ರೀ ಡಿ ವಿ ಜಿ ಯವರ ಭಾರತ ಭೂ ವಂದನಂ" ಎಂಬ ಹೆಸರನಿಟ್ಟು ಜಿ. ಪಿ. ರಾಜರತ್ನಂ ಅವರು 1978 ರಲ್ಲಿ ಪುನಃ ಪ್ರಕಟಿಸಿದ್ದಾರೆ.

ಭಾರತಕ್ಕೆ ಸ್ವಾತಂತ್ರ್ಯ ಬಂದರೂ ಮೈಸೂರು ಸಂಸ್ಥಾನದಲ್ಲಿ ನಿರಂಕುಶಾ ಧಿಕಾರವೇ ಮುಂದುವರಿದಿತ್ತು. ಇದ್ದ ಹುಣ್ಣಿನ ಮೇಲೆ ಉಪ್ಪು ತಿಕ್ಕಿದಂತೆ ಮೈಸೂರೇತರರೊಬ್ಬರ ದರ್ಬಾರು ನಡೆಯುತ್ತಿತ್ತು. ಆರ್ಕಾಟ್ ರಾಮಸ್ವಾಮಿ ಮೊದಲಿಯಾರರು ದಿವಾನರಾದಾಗ ಜವಾಬ್ದಾರಿ ಸರಕಾರವನ್ನು ರಚಿಸುವ ಸಲುವಾಗಿ ಅದರ ಮೂಲ ತತ್ತ್ವಗಳನ್ನು ಪರಿಶೀಲಿಸಲು ಒಂದು ಸಮಿತಿಯನ್ನು ನೇಮಿಸಿದರು. ಆ ಸಮಿತಿಯ ಶಿಪಾರಸುಗಳನ್ನು 12-9-1947 ರ ಸರಕಾರಿ ಪ್ರಕಟಣೆಯೊಂದು ಬಹಿರಂಗ ಪಡಿಸಿತು. ಅದರ ಶಿಫಾರಸುಗಳು ಜವಾಬ್ದಾರಿ ಸರಕಾರವೆಂಬ ತತ್ತ್ವವನ್ನು ಹೀಯಾಳಿಸುವಂತಿದೆ ಎಂದು ಡಿ ವಿ ಜಿ ಒಂದು ಲೇಖನ ಬರೆದರು. ಶಾಸನ ಸಭೆಯಿಂದ ಕೆಲವರನ್ನು ಮಹಾರಾಜರು ಮಂತ್ರಿ ಗಳಾಗಿರಲು ನೇಮಿಸಬಹುದೆಂತಲೂ, ಆಡಳಿತದ ಕೆಲಸಕ್ಕಾಗಿ ಬೇರೆಯವರನ್ನು ನೇಮಿಸಬಹುದೆಂದೂ ಆ ಸಮಿತಿ ಸಲಹೆ ಮಾಡಿತ್ತು. ಆ ಎರಡು ಭಾಗಗಳಿಗೆ ಅಧಿಕಾರಗಳನ್ನು ಹಂಚಲಾಗಿತ್ತು. ಆಗ ಡಿ ವಿ ಜಿ, ನಿಟ್ಟೂರು ಶ್ರೀನಿವಾಸ ರಾಯರು, ಎಂ.ಪಿ. ಸೋಮಶೇಖರ ರಾಯರು 17-9-1947ರಲ್ಲಿ ಮಹಾರಾಜರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸಿದ ಒಂದು ತಂತಿಯಲ್ಲಿ ಆಗಿನ ಸರಕಾರ ದಲ್ಲಿ ತಮಗೆ ವಿಶ್ವಾಸವಿಲ್ಲವೆಂದೂ, ಪೋಲೀಸರ ದೌರ್ಜನ್ಯವನ್ನು ಮುಕ್ತಾಯ ಗೊಳಿಸಿ ಶಾಸನ ಸಭೆಗೆ ಜವಾಬ್ದಾರಿಯಾಗಿರುವ ತಾತ್ಕಾಲಿಕ ಸರಕಾರವನ್ನು ರಚಿಸಬೇಕೆಂದೂ, ರಾಜ್ಯ ನಿಬಂಧನೆಯನ್ನು ರಚಿಸಲು, ಜನಾಭಿಪ್ರಾಯವನ್ನು ಪ್ರತಿನಿಧಿಸುವ ಸಭೆಯೊಂದನ್ನು ರಚಿಸಬೇಕೆಂದೂ ಕೇಳಿಕೊಂಡರು. ಜನಾ ಭಿಪ್ರಾಯವನ್ನು ಕಡೆಗಣಿಸಿ ದಿವಾನರು ರಾಜಕೀಯ ಬದಲಾವಣೆಗಳನ್ನು ಮುಂದುವರಿಸುತ್ತಿರುವ ಬಗ್ಗೆ ಆಶ್ಚರ್ಯವನ್ನು ವ್ಯಕ್ತಪಡಿಸಿದರು.

ಇದಕ್ಕೆ ಮೊದಲೇ ಜುಲೈ ತಿಂಗಳಿನಲ್ಲಿಯೇ ಮೈಸೂರು ಸಂಸ್ಥಾನ ಸಂಯುಕ್ತ ರಾಷ್ಟ್ರಕ್ಕೆ ಸೇರುವುದೇ ಸರಿಯೆಂದೂ, ಕೇಂದ್ರ ಶಾಸನಸಭೆಯ ನಡವಳಿಕೆಗಳಲ್ಲಿ ಮೈಸೂರಿನ ಪ್ರತಿನಿಧಿಗಳು ಪಾಲುಗೊಳ್ಳಲು ಸಂಯುಕ್ತ ರಾಷ್ಟ್ರದೊಡನೆ ಮೈಸೂರು ವಿಲೀನವಾಗಲೇಬೇಕೆಂದೂ ವಾದಿಸಿದರು.

ಆದರೆ ಈ ಒಡಂಬಡಿಕೆಯ ದಾರಿ ಅಂದಿನ ಸರಕಾರಕ್ಕೆ ಪಥ್ಯವಾಗಲಿಲ್ಲ. ಜನ ಆಗ ಕಾಂಗ್ರೆಸಿನ ನೇತೃತ್ವದಲ್ಲಿ ಚಳವಳಿಯ ದಾರಿಯನ್ನು ಹಿಡಿದು ಅವರು ಒಡಂಬಡುವಂತೆ ಮಾಡಿದ್ದು ಭಾರತ ಚರಿತ್ರೆಯಲ್ಲಿ ಸೇರಿ ಹೋಗಿರುವ ಸಂಗತಿ.

ಆಗ ಜವಾಬ್ದಾರಿ ಸರಕಾರಕ್ಕಾಗಿ ಚಳವಳಿ ಬ್ರಾಹ್ಮಣರ ಪಿತೂರಿ ಎಂಬ ಆಪಾದನೆಯನ್ನೊಳಗೊಂಡ ಹಸ್ತಪತ್ರಿಕೆಗಳು ಹಂಚಲ್ಪಟ್ಟುವು. ಅದಕ್ಕೆ ಜವಾಬನ್ನು ಕೊಟ್ಟು 30–9–1947ರಲ್ಲಿ ಡಿ ವಿ ಜಿ ಜವಾಬ್ದಾರಿ ಸರಕಾರ ವೆಂದರೇನು, ಅದು ಮೈಸೂರಿಗೂ ಏಕೆ ಬೇಕು, ಅದು ಬ್ರಾಹ್ಮಣರ ಪಿತೂರಿ ಏಕೆ ಅಲ್ಲ ಎಂಬುದನ್ನು ಸಂಗ್ರಹವಾಗಿ ತಿಳಿಸಿದ್ದಾರೆ.

ಚಳವಳಿಯಲ್ಲಿ ನೇರವಾಗಿ ಪಾತ್ರವಹಿಸಲಿಲ್ಲ ಡಿ ವಿ ಜಿ. ಆದರೆ ಅದರಲ್ಲಿ ಪಾತ್ರವಹಿಸಿದ ಎಲ್ಲ ಸ್ನೇಹಿತರಿಗೂ ಬೆಂಬಲವಾಗಿದ್ದವರು ಡಿ ವಿ ಜಿ. ಅಕ್ಟೋಬರ್ 1947ರಲ್ಲಿ ಜವಾಬ್ದಾರಿ ಸರಕಾರದ ಕಟ್ಟಡಕ್ಕೆ ಗುದ್ದಲಿಪೂಜೆಯಾಯಿತು.

ಆಗ ಡಿ ವಿ ಜಿ ತಮ್ಮ ಸಂತೋಷವನ್ನು ವ್ಯಕ್ತಪಡಿಸುತ್ತ ಒಂಬತ್ತು ಮಂತ್ರಿಗಳಿರುವುದು ಹೆಚ್ಚೆಂದೂ, ದಿವಾನರ ಪದವಿಯನ್ನು ಮುಂದುವರಿಸುತ್ತಿರುವುದು ಅಷ್ಟು ಸಮಾಧಾನಕರವಾದ ವಿಷಯವಲ್ಲವೆಂದೂ, ಮುಂದೆ ಮೈಸೂರಿನ ಸಂವಿಧಾನ ರಚನೆಯಾಗುವ ಸಂದರ್ಭದಲ್ಲಿ ಇವೆಲ್ಲವೂ ಸರಿಹೋಗಬಹುದೆಂದೂ ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದರು. 13–10–1947ರಂದು ಕೆ.ಸಿ. ರೆಡ್ಡಿಯವರಿಗೆ ಪತ್ರವೊಂದನ್ನು ಬರೆದು "May I ask you to convey my congrats to those of your colleagues that are, as you know, my personal friends. I hope you will not mind my submitting a suggestion. It would be well if your colleagues will not talk too. much—at any rate for some time. Statements at this stage about enquiry or no-enquiry into the conduct of the police and such matters are both unnecessary and inexpedient." ಎಂದು ಎಚ್ಚರಿಕೆಯ ಮಾತನ್ನು ನುಡಿದರು.

"ನಿನ್ನೆಯ ದಿನ ಬಂದ ವಿಶ್ವಕರ್ಣಾಟಕವನ್ನು ನೋಡಿದ್ದರಿಂದ....ನೀವು

ಮುಂದಿನ ಮಂತ್ರಿಮಂಡಲದಲ್ಲಿ ಒಂದು ಸ್ಥಳವನ್ನು ಅಲಂಕರಿಸುವಿರಿ" ಎಂಬ ಆಸೆಯನ್ನು 13-10-47ರಲ್ಲಿ ಸ್ನೇಹಿತರೊಬ್ಬರು ವ್ಯಕ್ತಪಡಿಸಿದಾಗ ಡಿ ವಿ ಜಿ ಅವರಿಗೆ "ಅಧಿಕಾರಾಪೇಕ್ಷೆ ಒಂದು ದುರ್ವ್ಯಸನ. ನನ್ನ ಮನಸ್ಸು ಎಂದಿಗೂ ಆ ಕಡೆ ಚಲಿಸದಂತೆ ಗುರುಗಳು ಅನುಗ್ರಹಿಸಲಿ" ಎಂದು ಉತ್ತರವಿತ್ತರು.

ನವಂಬರ್ 5, 1947ರಲ್ಲಿ ಮಿತ್ರರೊಬ್ಬರಿಗೆ ಬರೆದ ಪತ್ರದಲ್ಲಿ:

"I may tell you I took every possible care to see that I did or said nothing that might have been construed as an attempt to cadge or contrive for a place in the Ministry. I stick to the ancient rule of the Brahmana's Dharma. His duty is to study and then to make the results of the study available to those who care for it. He may not seek office or power. He must be content to exercise moral and intellectual influence. The field of practical action by means of authority and power is for others, except of course when times are extraordinary or when he is expressly invited and really wanted by others. Even then he is only the practical teacher or exemplar. He must relinquish that position as soon as possible.

I feel the country today has particular need of that type of public men that would serve without getting entangled in power politics. Power-politician is at the root of the poison-tree of communalism whose existence we are all so loud in deploring. Let some of us keep out of the competition and do our best from outside the seats of power." ಎಂದು ತಮ್ಮ ನಿರ್ಧಾರವನ್ನು ತಿಳಿಯಪಡಿಸಿದ್ದಾರೆ.

1948 : ಡಿ ವಿ ಜಿ ಪುನಃ ಸ್ವಲ್ಪ ಕಾಲ ರಾಜಕೀಯದಲ್ಲಿ ಸುಳಿದ ಕಾಲ.

ಆ ವರ್ಷ ಮೈಸೂರು ಸಂಸ್ಥಾನದ ಕಾನ್ಸ್ಟಿಟ್ಯುಯೆಂಟ್ ಅಸೆಂಬ್ಲಿಗೆ ಸದಸ್ಯರನ್ನು ಚುನಾಯಿಸಲು ಘೋಷಣೆ ಹೊರಟಿತು. ಆಗ ಕಾಂಗ್ರೆಸ್ ಪಕ್ಷವು ಡಿ ವಿ ಜಿ ಯವರನ್ನು ಹೇಗೆ ಉಪಯೋಗಿಸಿಕೊಳ್ಳುವುದು ಎಂದು ಯೋಚಿಸಿತು. ಅವರನ್ನು ಕಾನ್ಸ್ಟಿಟ್ಯೂಷನಲ್ ಅಡ್ವೈಸರ್ ಎಂದು ನೇಮಿಸುವುದೇ, ಅಥವಾ ಸಭೆಗೆ ಸದಸ್ಯರನ್ನಾಗಿ ಚುನಾಯಿಸಿಕೊಳ್ಳುವುದೆ? ಕೆಂಗಲ್

ಹನುಮಂತಯ್ಯನವರು ಡಿ ವಿ ಜಿ ಯವರನ್ನು ಕಂಡಾಗ ಡಿ ವಿ ಜಿ ಗೆ ಅನಾರೋಗ್ಯ; ತಾವು ಹೇಗೆ ಬೇಕಾದರೂ ಸೇವೆ ಸಲ್ಲಿಸಲು ಸಿದ್ಧ ಎಂದರು ಡಿ ವಿ ಜಿ. ಆದರೆ ಚುನಾವಣೆಯಾದರೆ ತಾನು ಮತಗಳಿಗಾಗಿ ಬೇಡಿಕೊಂಡು ತಿರುಗುವ ಸ್ಥಿತಿಯಲ್ಲಿಲ್ಲ ಎಂದೂ, ಹಾಗೆ ಚುನಾವಣೆಗೆ ನಿಲ್ಲಲೇಬೇಕಾದರೆ ಕೋಲಾರ ಜಿಲ್ಲೆಯಿಂದ ನಿಲ್ಲಲು ತಮಗೆ ಇಷ್ಟವುಂಟೂ ಎಂದರು. ಆಗ ಮುಖ್ಯಮಂತ್ರಿಗಳಾಗಿದ್ದ ಚಂಗಲರಾಯ ರೆಡ್ಡಿಯವರಿಗೆ ಬರೆದ ಪತ್ರದಲ್ಲಿ ರಾಜ್ಯನಿಬಂಧನೆಯ ಕರಡು ಕನ್ನಡದಲ್ಲಿಯೂ ಇಂಗ್ಲಿಷಿನಲ್ಲಿಯೂ ಇರಬೇಕೆಂದು ಸೂಚಿಸಿ, ಪಾರಿಭಾಷಿಕ ಪದಗಳ ಪಟ್ಟಿಯನ್ನು ಸಿದ್ಧ ಮಾಡಬೇಕು, ಮತ್ತು ಸಭೆಯ ಸದಸ್ಯರಿಗೆ ಇದರ ವಿಷಯವಾಗಿ ತಿಳಿವಳಿಕೆ ಕೊಡುವ ಏರ್ಪಾಡು ಮಾಡಬೇಕು ಎಂದೂ ಸಲಹೆ ಮಾಡಿದರು.

ಡಿ ವಿ ಜಿ ವಿರೋಧವಿಲ್ಲದೆ ಕೋಲಾರ ಜಿಲ್ಲೆಯಿಂದ ಕಾಂಗ್ರೆಸ್ ಪಕ್ಷದ ಪರವಾಗಿ ಆಯ್ಕೆಯಾದರು. ಪುನಃ ಆಗ ಕಾಂಗ್ರೆಸ್ "ಪ್ಲೆಡ್ಜ್" ವಿಚಾರ, ಕಾಂಗ್ರೆಸ್ ನಿಧಿಗೆ ಹಣ ಕಟ್ಟುವ ಪ್ರಸಂಗ ಬಂತು. ನಾನು ಕಾಂಗ್ರೆಸ್‌ಗೆ ಹಣ ಕೊಡುವುದಿರಲಿ, ನಿಮ್ಮಲ್ಲಿ ಹಣವಿದ್ದರೆ ದಯವಿಟ್ಟು ನಮ್ಮ ಗೋಖಲೆ ಸಂಸ್ಥೆಗೆ ಕೊಡಿ ಎಂದರು ಡಿ ವಿ ಜಿ.

ಅಷ್ಟರಲ್ಲಿ ಅವರು ರಾಜ್ಯ ನಿಬಂಧನೆಯ ಸಭೆಗೆ ಅಧ್ಯಕ್ಷರಾಗಿ ಚುನಾಯಿತರಾದರೆಂಬ ಸುದ್ದಿಯೂ ಹರಡಿತು. ಆದರೆ ಅದು ಒಂದು ಸೂಚನೆಯಾಗಿತ್ತಷ್ಟೆ.

ಅವರಿಗೆ ಅಂದಿನ ರಾಜಕೀಯದ ರುಚಿ ಗೊತ್ತಾಗಿ ಹೋಯಿತು: "Congress politics is far too turbid. The like of me are wanted there to provide screens to others to make places safe for them. I don't see a single man of idealism among them. They cry 'God' and seek Mammon" ಎಂದುಕೊಂಡರು.

ಒಬ್ಬ ಸ್ನೇಹಿತರಿಗೆ 20.3.1948ರಲ್ಲಿ ಪತ್ರ ಬರೆಯುತ್ತ: "The bosses want office and power and therefore they don't want to offend certain groups or interests however just be the cause that calls for the opposing of those groups. And they don't care what the qualities needed for a particular office are. They must placate some and propitiate some. Silencing the loul-mouthed is their only principle.........People in positions of responsibility have felt disgusted and thought of drastic

steps. Would you believe it–I am the man that is counselling patience and dissuading would-be rebels from acting hastily. So you can see that I am not contemplating any extreme step for the present. I'll wait and see how the Consembly work will go on ....'' ಎಂದು ಅಂದಿನ ಸ್ಥಿತಿಯನ್ನು ವಿವರಿಸಿದ್ದಾರೆ.

ಕಾನ್‌ಸೆಂಬ್ಲಿಯ ಕೆಲಸ 7.4.1948ರಂದು ಪ್ರಾರಂಭವಾಯಿತು.

ಸಂವಿಧಾನದ ಸಭೆಯಲ್ಲಿ ಡಿ ವಿ ಜಿ ಯವರು ಮಾಡಿದ ಭಾಷಣವನ್ನು "ಒಬ್ಬರೇ ಒಬ್ಬರ ಉಪಯುಕ್ತ ಭಾಷಣ" ಎಂಬ ಶೀರ್ಷಿಕೆಯಲ್ಲಿ "ವದಂತಿ" ಎಂಬ ಪತ್ರಿಕೆ ವರದಿ ಮಾಡಿದೆ: "ದೇಹಕ್ಕೆ ಮುಖ ಹ್ಯಾಗೆ ಅವಶ್ಯಕವೋ ಹಾಗೆ ದೇಶಕ್ಕೆ ಒಬ್ಬ ಪ್ರಮುಖ ಅವಶ್ಯಕ. ದೇಶ ಒಂದು ಭಾರಿ ಮರವಿದ್ದಂತೆ. ಬೇರುಗಳೇ ಪ್ರಜೆಗಳು. ಕಾಂಡವೇ ರಾಜ. ಕೊಂಬೆ ಎಲೆ ಇವೇ ರಾಜ್ಯಾಂಗ. ಏವಂಚ ಅಖಂಡವೇ ಹೊರತು ಖಂಡ ಖಂಡ ಬೇಡ. ಈವತ್ತಿನ ಆಡಳಿತ ಪದ್ಧತಿಯಲ್ಲಿ ಅಧ್ಯಕ್ಷ ಉಂಟು. ಅಧ್ಯಕ್ಷ ಎಂದರೂ ರಾಜಾ ಎಂದರೂ ಒಂದೇ. ಆತ ಚುನಾವಣೆಯಾಗಿ ಬರತಕ್ಕವನು. ರಾಜರು ವಂಶಪಾರಂಪರ್ಯವಾಗಿ ಗದ್ದುಗೆ ಏರುವವರು. ಇಷ್ಟೆ ವ್ಯತ್ಯಾಸ. ರಿಪಬ್ಲಿಕ್ ಎಂದು ಕರೆಯಬೇಕಾದಲ್ಲಿ ರಾಜ್ಯವು ಸಾರ್ವಜನಿಕ ಸ್ವತ್ತಾಗುವುದೇ ಹೊರತು ರಿಪಬ್ಲಿಕ್‌ನಲ್ಲಿ ರಾಜರ ವಿಚಾರವೇ ಇಲ್ಲ. ರೆಸಿಡ್ಯುಯರಿ ಪವರ್ಸ್ ಅಥವಾ ಶಿಲ್ಕು ಅಧಿಕಾರ, ಇದು ಹೆಚ್ಚಿನ ಅಧಿಕಾರ ಪ್ರಯೋಗ ಕಾಲಕ್ಕೆ; ಅಂದರೆ ಇಲ್ಲಿ ಚಲಾಯಿಸದೇ ಹೋಗುವ ಕಾಲಕ್ಕೆ ಕೇಂದ್ರ ಸರಕಾರದಲ್ಲಿರತಕ್ಕದ್ದು ಮತ್ತು ಅನಿರೀಕ್ಷಿತ ಸಂದರ್ಭಗಳಲ್ಲೂ ಅಷ್ಟೆ. ಮಿಕ್ಕ ಕಾಲಗಳಲ್ಲಿ ಉಳಿಕೆ ಕೈಲಾಗುವ ಅಧಿಕಾರ ಚಲಾವಣೆ ಇಲ್ಲೇ ನಡೆಯತಕ್ಕದ್ದು. ಒಟ್ಟಿನಲ್ಲಿ ಈ ರೆಸಿಡ್ಯುಯರಿ ಪವರ್ಸ್ ಕೇಂದ್ರ ಮತ್ತು ಸಂಸ್ಥಾನ ಇಬ್ಬರಲ್ಲೂ ಇರಬಹುದು. ಇವತ್ತಿನ ಮುಂದುವರಿದ ಅಮೆರಿಕಾಭಿಪ್ರಾಯವೂ ಇದೇ ಆಗಿದೆ. ಧರ್ಮಕ್ಕೆ ದೇವರಿಲ್ಲ. ಜನರ ಏಳಿಗೆಯೇ ಧರ್ಮದ ಗುರಿ. "ದಯೆಯೇ ಧರ್ಮದ ಮೂಲವಯ್ಯ" ಎನ್ನುವ ಬಸವಣ್ಣನವರ ವಚನದಲ್ಲೂ ಪೂರ್ಣ ಅರ್ಥವಿದೆ. "ಧರ್ಮ" ಪದ ವಿಮರ್ಶೆ ಇಷ್ಟು ಅತ್ಯಲ್ಪ ಕಾಲದಲ್ಲಿ ಅಸಾಧ್ಯ."

ಹೀಗೆ ವರದಿ ಮಾಡಿ ಆ ಪತ್ರಿಕೆ "ಅನುಪಯುಕ್ತ ತೊದಲು ಮಾತುಗಳು" ಎಂಬ ಶೀರ್ಷಿಕೆಯಲ್ಲಿ ಹೀಗೆ ಟೀಕೆ ಮಾಡಿದೆ: "ಈ ಸಾರಿ ಕಾನ್‌ಸೆಂಬ್ಲಿಯಲ್ಲಿ ಬರೀ ಎರಡು ಭಾಷಣಗಳು. ಶ್ರೀ ಗುಂಡಪ್ಪನವರೊಬ್ಬರೇ ಹಿಂದಿನ

ಪುಟದಂತೆ ವಿಮರ್ಶಾತ್ಮಕ ದೃಷ್ಟಿಯಲ್ಲಿ ವಿಚಾರಗಳ ವ್ಯಾಸಂಗದೊಂದಿಗೆ ಹೇಳಿದ್ದೇ ಹೇಳದೆ ಬೇಕಾದಷ್ಟನ್ನೇ ಗುರ್ತು ಹಾಕಿಕೊಂಡು ಸ್ಪಷ್ಟವಾಗಿ ನುಡಿದದ್ದು. ಧ್ಯೇಯೋದ್ದೇಶಗಳ ಪದ ಜೋಡಣೆ ಅಭಾಸವಾಗಿದೆ. ಅರ್ಥವೇ ಸಲೀಸಾಗಿ ಸಿಗದು. ಅದರ ಅಕ್ಷರಗಳ ತಿದ್ದುಪಾಟಿಗೆ ಇಡೀ ಸಭೆಯನ್ನೇ ಸಮಿತಿಯನ್ನಾಗಿ ಪರಿವರ್ತಿಸಿ ಎಲ್ಲ ತಿದ್ದುಪಾಟುಗಳನ್ನೂ ಒಟ್ಟು ಸೇರಿಸಿ ಸಮಿತಿ ಒಪ್ಪಿಗೆ ಪಡೆದಲ್ಲಿ ಬಹುಬೇಗ ಆ ಕಾರ್ಯ ಮುಗಿಸಬಹುದೆಂಬ ಶ್ರೀ ಗುಂಡಪ್ಪನವರ ಉಪಯುಕ್ತ ಸಲಹೆ ಅಧ್ಯಕ್ಷ ಶ್ರೀ ಸುಬ್ರಹ್ಮಣ್ಯಂರವರಿಗೆ ಒಪ್ಪಿಗೆಯಾಗಿ ಅವರು ಅಂತೆಯೇ ಮಾಡಲಾಗಿ ಈ ಸಾರಿ ಅಧಿವೇಶನ ಸ್ವಲ್ಪ ಸುಲಭಸಾಧ್ಯವಾಯಿತು.

"ನಾವು ಗುಂಡಪ್ಪನವರು ಯಾರೆಂಬುದನ್ನೇ ಅರಿಯೆವು. ಕಾನ್‌ಸೆಂಬ್ಲಿಯಲ್ಲಿ ಅವರ ಚಟುವಟಿಕೆ ಅವರನ್ನು ಉತ್ತಮ ರಾಜಕೀಯ ತಜ್ಞರೆಂದು ಕರೆಯುವಂತೆ ಮಾಡಿದೆ. ರಾಜಕೀಯ ತಿಳಿವಳಿಕೆ ಸಾಲದ ಭಾರಿ ತಂಡ ಕೂರುವ ಬದಲು ಇಂಥ ನಾಲ್ಕು ಮಂದಿ ಕುಳಿತು ಮೈಸೂರು ರಾಜ್ಯಾಂಗ ರಚಿಸಿದರೆ ಎಷ್ಟೋ ಮೇಲು."

ಮುಂದಿನ ಕೆಲವು ವಾರಗಳಲ್ಲಿಯೇ ಡಿ ವಿ ಜಿ ಆ ಸಭೆಯಿಂದ ಹೊರ ಬಂದರು. ಆ ಸಂಗತಿಯನ್ನು ಹೆಚ್. ಕೆ. ವೀರಣ್ಣಗೌಡರು ತಮ್ಮ "ಬದುಕು –ಮೆಲುಕು" ಗ್ರಂಥದಲ್ಲಿ ಹೀಗೆ ವಿವರಿಸಿದ್ದಾರೆ.

"ಮೈಸೂರು ಸಂವಿಧಾನಸಭೆಗೆ (Constituent Assembly) ನಮ್ಮಲ್ಲಿ ಹಿರಿಯರಾಗಿದ್ದ ಶ್ರೀತಾಳಕೆರೆ ಸುಬ್ರಹ್ಮಣ್ಯಂ ಅವರನ್ನು ಅಧ್ಯಕ್ಷರನ್ನಾಗಿ ಆರಿಸಿಕೊಂಡೆವು... ಸಂವಿಧಾನ ಸಭೆಯಲ್ಲಿ ಎಂತಹ ಸಂವಿಧಾನ ರಚನೆಯಾಗಬೇಕೆಂಬುದನ್ನು ಕುರಿತು ನಾವು ಕೂಲಂಕಶವಾಗಿ ವಿಮರ್ಶೆಮಾಡಿ ಚರ್ಚಿಸುತ್ತಿದ್ದೆವು. ಆ ಸಭೆಗೆ ಡಿ ವಿ ಗುಂಡಪ್ಪನವರನ್ನು ಸರಕಾರದವರು ಒಬ್ಬ ಸದಸ್ಯರನ್ನಾಗಿ ನಾಮಕರಣ ಮಾಡಿದ್ದರು. (ಇವು ಗ್ರಂಥದಲ್ಲಿಯ ಮಾತುಗಳು). ಸಂವಿಧಾನಕ್ಕೆ ರಾಜ್ಯಾಂಗ ಶಾಸನಸಭೆ ಎಂದು ಹೆಸರಿಡಬೇಕೆಂದು ನಾನೂ ಸೇರಿ ಕೆಲವು ಸ್ನೇಹಿತರು ಸೂಚಿಸಿದೆವು. ಶ್ರೀ ಡಿ. ವಿ. ಗುಂಡಪ್ಪನವರು ಆ ಸೂಚನೆಯನ್ನು ವಿರೋಧಿಸಿ ರಾಜ್ಯಾಂಗ ಸಭೆಯೆಂದರೆ ಕೇವಲ ಆಡಳಿತದ ಒಂದು ಭಾಗದ ಹೆಸರನ್ನು ಸೂಚಿಸುತ್ತದೆಯೇ ವಿನಹ ಶಾಸನಾಂಗ ಮುಂತಾದ ಹೆಸರುಗಳನ್ನು ಅದು ಸೂಚಿಸುವುದಿಲ್ಲವಾದ್ದರಿಂದ ಸಂವಿಧಾನ ಸಭೆಯೆಂತಲೋ ಅಥವಾ ಎಲ್ಲ ಸರಕಾರದ ಅಂಗಗಳನ್ನು ಸೂಚಿಸುವ ಇನ್ಯಾವುದಾದರೂ

ಹೆಸರನ್ನೇ ಇಡಬೇಕೆಂದೂ ವಾದಿಸಿದರು. ನಾನು ಶ್ರೀ ಡಿ ವಿ ಗುಂಡಪ್ಪನವರ ವಾದವನ್ನು ವಿರೋಧಿಸಿ ಸಾಮಾನ್ಯವಾಗಿ ಉಪಯೋಗದಲ್ಲಿರುವ ರಾಜ್ಯಾಂಗ ಸಭೆಯೆಂದು ಹೆಸರಿಟ್ಟರೆ ಜನರಿಗೆ ಅರ್ಥವಾಗುವುದೆಂದೂ, ಹೆಚ್ಚು ಪ್ರಚಾರ ದಲ್ಲಿಲ್ಲದ ಹೆಸರನ್ನಿಟ್ಟರೆ ಜನಸಾಮಾನ್ಯರಿಗೆ ಅರ್ಥವಾಗುವುದಿಲ್ಲವೆಂದೂ, ಪ್ರತಿ ವಾದಿಸಿದೆನು. ಅನೇಕ ಸದಸ್ಯರು ನನ್ನ ವಾದವನ್ನೇ ಎತ್ತಿ ಹಿಡಿದು ಮಾತನಾಡಿ ದರು. ಅಂತ್ಯವಾಗಿ ನನ್ನ ಸಲಹೆಯನ್ನೇ ಸದಸ್ಯರು ಅಂಗೀಕರಿಸಿದರು. ಮಾರನೆಯ ದಿನ ಶ್ರೀ ಡಿ. ವಿ. ಗುಂಡಪ್ಪನವರು ಆ ಸಭೆಯ ಸದಸ್ಯತನಕ್ಕೆ ರಾಜೀನಾಮೆ ನೀಡಿದರು. ಇದು ನಿಜಕ್ಕೂ ಅತ್ಯಂತ ವಿಷಾದಕರವಾದ ಘಟನೆ ಯೆಂದೂ ಅತ್ಯಂತ ಮೇಧಾವಿಗಳೆನಿಸಿಕೊಂಡಿರುವ ಶ್ರೀ ಡಿ ವಿ ಗುಂಡಪ್ಪ ನವರು ನಮ್ಮ ಜೊತೆಯಲ್ಲಿಲ್ಲದಿರುವುದು ದೇಶಕ್ಕೆ ಒಂದು ದೊಡ್ಡ ಹಾನಿ ಯೆಂದೂ ನಾವೆಲ್ಲರೂ ಭಾವಿಸಿದೆವು. ಶ್ರೀಮಾನ್ ಗುಂಡಪ್ಪನವರು ತಮ್ಮ ರಾಜೀನಾಮೆಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಶ್ರೀಮಾನ್ ವೆಂಕಟಪ್ಪನವರೂ ಹಾಗೂ ಇನ್ನೂ ಅನೇಕ ಸ್ನೇಹಿತರೂ ಮತ್ತು ನಾನೂ ಶ್ರೀಮಾನ್ ಗುಂಡಪ್ಪನವರನ್ನು ಬಹಳವಾಗಿ ಕೇಳಿಕೊಂಡೆವು. ಅವರ ನಿರ್ಧಾರ ಅಚಲಿತವಾಗಿತ್ತು. ಪ್ರಜಾಪ್ರಭುತ್ವದಲ್ಲಿ ಬಹುಮತಕ್ಕೆ ತಲೆ ಬಾಗು ವುದು ಧರ್ಮವೆಂದೂ ಆದರೆ ತಮ್ಮ ಆತ್ಮಸಾಕ್ಷಿಗೆ ವಿರೋಧವಾಗಿ ನಡೆಯುವ ಕೆಲಸಕ್ಕೆ ತಾವು ಎಷ್ಟು ಮಾತ್ರವೂ ಸಹಕಾರ ನೀಡಲು ಸಾಧ್ಯವಿಲ್ಲವೆಂದೂ ಹೇಳಿಬಿಟ್ಟರು. ಹೀಗೆ ಕೇವಲ ಒಂದು ಹೆಸರಿನ ಸಂಬಂಧವಾಗಿ ಶ್ರೀಮಾನ್ ಗುಂಡಪ್ಪನವರ ಸೇವೆಯನ್ನು ಶಾಸನಸಭೆಯು ಕಳೆದುಕೊಳ್ಳಬೇಕಾಯಿತು."

ಆದರೆ ಮುಂದೆ ಆ ಸಭೆ ಮೈಸೂರಿಗೇ ಬೇರೆಯಾದ ಸಂವಿಧಾನವನ್ನು ರಚಿಸಬೇಕಾದ ಸಂದರ್ಭವೇ ಬರಲಿಲ್ಲ. ಭಾರತಕ್ಕೆಲ್ಲ ಏಕೈಕ ಸಂವಿಧಾನ ರಚನೆ ಯಾಗುತ್ತಿದ್ದುದರಿಂದ ಬೇರೆ ಬೇರೆ ಸಂವಿಧಾನಗಳ ರಚನೆಯ ಅಗತ್ಯವಿಲ್ಲ ವೆಂಬ ಕಾರಣದಿಂದ ಮೈಸೂರಿನಲ್ಲಿದ್ದ ಸಂವಿಧಾನಸಭೆ ಶಾಸನಸಭೆಯಾಗಿ ಕೆಲಸ ಮಾಡಿತು.

ಆದರೂ ಡಿ ವಿ ಜಿ ಯವರು ಕೇಂದ್ರ ರಾಜ್ಯಾಂಗ ಸಭೆಯ ಕಾರ್ಯಕ್ರಮ ಗಳಲ್ಲಿ ಕುತೂಹಲವುಳ್ಳವರಾಗಿ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ಯ ರೊಡನೆಯೂ ಮೈಸೂರಿನ ಪ್ರತಿನಿಧಿಯಾಗಿದ್ದ ಎಸ್. ವಿ. ಕೃಷ್ಣಮೂರ್ತಿರಾಯ ರೊಡನೆಯೂ ಪತ್ರವ್ಯವಹಾರವನ್ನಿಟ್ಟುಕೊಂಡು ದೇಶೀಯ ಪ್ರಾಂತಗಳ ವಿಷಯದಲ್ಲಿ ತಮ್ಮ ನಿಲುವನ್ನು ಅವರಿಗೆ ತಿಳಿಸುತ್ತಿದ್ದರು. ಅವರ ಈ ಪ್ರಯತ್ನ

ಗಳನ್ನು ಕುರಿತು, ಒಂದು ಪತ್ರದಲ್ಲಿ ರಾಜಾಜಿಯವರು "admiring your tireless plea for a large and unified administration" ಎಂದರು.

ಸಾರ್ವಜನಿಕ ವಿಚಾರದಲ್ಲಿ ಆವರು ಮುಂದೆ ಮಾಡಿದ ಕೆಲಸವೆಲ್ಲವೂ ಗೋಖಲೆ ಸಂಸ್ಥೆಯ ಮೂಲಕವೇ.

ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ

ಪ್ರಜಾರಾಜ್ಯವೇ ದೇಶದ ಎಲ್ಲ ಸಮಸ್ಯೆಗಳಿಗೂ ಪರಿಹಾರವನ್ನೊದಗಿಸ ಬಲ್ಲುದೆ? ಇಲ್ಲ ಎಂಬುದು ಡಿ ವಿ ಜಿ ತಿಳಿದಿದ್ದ ವಿಷಯವೇ. ಆದರೆ ಸ್ವಾತಂತ್ರ್ಯೋದಯಕ್ಕೆ ಮೊದಲೇ ಶಾಸನ ಸಭೆಯಲ್ಲಿ ಪ್ರಜಾರಾಜ್ಯ ಪದ್ಧತಿಯ ವಿರುದ್ಧ ಅನೇಕರು ಮಾತನಾಡಿದಾಗ, ಇಂಡಿಯದಲ್ಲಿ ಇತರೆಡೆಯ, ಮತ್ತು ಇಂಡಿಯದ ಹೊರಗಿನ ವಿದ್ಯಮಾನಗಳು ಪ್ರಜಾರಾಜ್ಯ ಪದ್ಧತಿಯ ನ್ಯೂನತೆ ಗಳನ್ನು ತೋರಿಸುತ್ತಿದ್ದಾಗ ಅವರು ಈ ವಿಷಯವನ್ನು ಕುರಿತು ಹೆಚ್ಚು ಚಿಂತಿಸಿರಬೇಕು.

ಸಂಪ್ರದಾಯಬದ್ಧವಾಗಿದ್ದ ನಮ್ಮ ದೇಶದ ಮೇಲೆ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ ಹೆಚ್ಚಾಗುತ್ತಿದೆ. ಆರ್ಥಿಕ ಸಾಮಾಜಿಕ ರಾಜಕೀಯ ಪರಿಸ್ಥಿತಿಗಳಲ್ಲಿ ಬದಲಾವಣೆಗಳಾಗುತ್ತಿವೆ. ಇವು ಅನಿವಾರ್ಯ ಮತ್ತು ಸ್ವಾಭಾವಿಕ. ಆದರೆ ಅದರೊಡನೆ ಹುಟ್ಟುವುದು ಪಕ್ಷ ಕಕ್ಷಿಗಳ ವೈಷಮ್ಯ. ಜೊತೆಗೆ ಆಡಳಿತ ಕ್ಲಿಷ್ಟವಾಗುತ್ತಿದೆ. ಶಾಸನಗಳು ಹೆಚ್ಚುತ್ತಿವೆ. ರಾಜಕೀಯವು ಜೀವನದ ಮುಖ್ಯಭಾಗವಾಗುತ್ತಿದೆ. ಪ್ರಜಾರಾಜ್ಯ ಪದ್ಧತಿ ಬರುವುದಂತೂ ಖಂಡಿತ. ಆದರೆ ರಾಜಕೀಯ ಭಯಾಸ್ಪದವಾದದ್ದು. ಅಲ್ಲಿ ಪ್ರಮಾದವಾಗ ಬಹುದು. ಅದು ಗೊಂದಲಕ್ಕೆ ಕಾರಣವಾಗಬಹುದು. ದೊಂಬಿಯ ದವಲತ್ತೂ ಆಗಬಹುದು. ಇದಕ್ಕೆ ಪರಿಹಾರವೇನು?

ತಿಳಿವಳಿಕೆಯೇ ಪರಿಹಾರೋಪಾಯ ಎಂದು ತಿಳಿದಿದ್ದವರು ಅವರು — ವಸ್ತುಸ್ಥಿತಿಯ ವೈಜ್ಞಾನಿಕ ಪರಿಶೀಲನೆ, ತಲಸ್ಪರ್ಶಿಯಾದ ವೈಜ್ಞಾನಿಕ ರೀತಿಯ ತತ್ತ್ವಶೋಧನೆ, ಪೂರ್ವಸಿದ್ಧಾಂತ ವರ್ಜಿತವಾದ ಸಮೀಕ್ಷೆ— ಇವುಗಳಿಂದ ಬಂದ ತಿಳಿವಳಿಕೆ. ಇಂಥ ವಿಜ್ಞಾನದ ಪ್ರಮಾಣಮಾರ್ಗ ರಾಜ್ಯಕರ್ಮಿಗೆ ಅವಲಂಬನೀಯ. ಆದರೆ ಅಂಥ ಪರೀಕ್ಷೆ ಸಾಮಾನ್ಯ ರಾಜಕೀಯಸ್ಥನಿಂದ ಸಾಧ್ಯವಿಲ್ಲ. ಇದು ಜ್ಞಾನಸಂಪನ್ನರಾದ ಮತ್ತು ಸಾರ್ವಜನಿಕಾಭಿಮಾನವುಳ್ಳ ಮತ್ತು ಪಕ್ಷಾತೀತರಾದ ಜನರಿಂದ ಮಾತ್ರ ಸಾಧ್ಯ. ಇದೇ ಪ್ರಜಾ ರಾಜ್ಯಕ್ಕೆ ಬೆನ್ನುಮೂಳೆ. ಅದು ಬಲಿಷ್ಠವಾಗದಿದ್ದರೆ ಪಕ್ಷಕಕ್ಷಿಗಳ ಆಡಂಬರ ಹೆಚ್ಚಿ ದೇಶದಲ್ಲಿ ಖಾಲಿ ಗಲಾಟೆ ಹೆಚ್ಚುವುದೇ ಹೊರತು ದೇಶಸೇವೆಯಾಗದು.

ಇಂಥ ಪಕ್ಷಾತೀತ ಜನರನ್ನು ಒಂದುಗೂಡಿಸಬೇಕು. ಪ್ರಜೆಗಳಲ್ಲಿ ತಿಳಿವಳಿಕೆ ಹರಡಬೇಕು. ಅದರಿಂದ ಸರಕಾರ ಸರಿಯಾದ ಮಾರ್ಗದಲ್ಲಿ ನಡೆಯಲು ಸಹಾಯವಾದೀತು.

ಈ ಉದ್ದೇಶ ಸಾಧನೆಗಾಗಿ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯೆಂಬ ಹೆಸರುಳ್ಳ ಸಂಸ್ಥೆಯನ್ನು ಸ್ಥಾಪಿಸಬೇಕು, ಎಂಬುದು ಅವರ ಅಂತರಂಗದಲ್ಲಿ 1915 ರಿಂದಲೂ ಬೇರೂರಿ ಹೋಗಿದ್ದ ಆಶಯ.

"The Institute is to be looked upon as a laboratory for the analysis and assessment of opinion and policy rather than a factory to produce original contributions to thought and learning or as a platform for propaganda or agitation, or as a mission of philanthropy and social service. It does not aim at supplanting any political party or movement. Not that the Institute does not appreciate the great uses of these and other forms of service to the country. But this Institute would rather leave those other forms of service to other agencies specialising in those lines, so that it could give its undivided attention to the particular field of service which it has chosen for itself—namely to be a study-room for intelligent citizenship, an exchange house of thought and information for men and women of public spirit and an unofficial secretariat for all good and worthy popular causes."

ಇದು ಯಾವ ರಾಜಕೀಯ ಪಕ್ಷಕ್ಕೂ ಯಾವ ಕೋಮಿಗೂ ಸೇರದೆ ಯಾರೊಬ್ಬರ ಹಂಗಿಗೂ ಒಳಗಾಗದೆ ಇರುವ ಸಂಸ್ಥೆಯಾಗಿರಬೇಕು.

ಹೀಗೆ 1930ರಲ್ಲಿ ತೀರ್ಮಾನ ಮಾಡಿ ಡಿ ವಿ ಜಿ ತಮ್ಮ ಯೋಜನೆಯನ್ನು ಅಂದಿನ ಪ್ರಜಾಪ್ರಮುಖರಾದ ಕೆ.ವಿ.ಪುಟ್ಟಣ್ಣಶೆಟ್ಟರವರು ಮುಂತಾದವರಲ್ಲಿ ಪ್ರಸ್ತಾಪಿಸಿದರು. ಅವರೆಲ್ಲರೂ ಈ ಯೋಜನೆಗೆ ಸಮ್ಮತಿಯನ್ನೂ ಸೂಚಿಸಿದರು, ಆದರೆ ಮಹಾಲಕ್ಷ್ಮಿ ಮಾತ್ರ ಒಲಿಯಲಿಲ್ಲ.

1932 ಜನವರಿಯಲ್ಲಿ ಈ ಯೋಚನೆ ಮತ್ತೆ ಮೂಡಿತು. 30.1.1932 ರಲ್ಲಿ "Finished draft scheme of G I P A. As I finish it I am stricken with fear and doubt as to its prospects. Will I be able to bring it into material existence? Can I trust myself

to remain steady at it? I have been such a waverer all my life—and such a bee-like skipper from ideal to ideal. I can't set my teeth and stick to one post. Hence all the futility I have to deplore.''—ಎಂಬ ಶಂಕೆ ಅವರನ್ನು ಕಾಡಿತು. ಆಗಲೂ ಅವರ ಆಶೆ ಸಫಲವಾಗಲಿಲ್ಲ.

1941ರಲ್ಲಿ, ಮೈಸೂರು ಸಂಸ್ಥಾನದಲ್ಲಿ ಸುಧಾರಣೆಗಳು ಜಾರಿಗೆ ಬಂದಾಗ ಈ ಸಂಸ್ಥೆಯನ್ನು ಪ್ರಾರಂಭಿಸುವ ಉದ್ದೇಶದಿಂದ, ಅದಕ್ಕೆ ಅಂಕುರಾರ್ಪಣವಾಗಿ, ಮೈಸೂರು ಪ್ರಜಾಪ್ರತಿನಿಧಿಸಭೆ, ಶಾಸನ ಸಭೆಗಳ ಸದಸ್ಯರಿಗೂ ರಾಜ್ಯಸಂಸ್ಥಾ ವಿಚಾರಗಳಲ್ಲಿ ಆಸಕ್ತಿಯುಳ್ಳ ಇತರ ಮಹಾಜನರಿಗೂ ಉಪಯುಕ್ತವಾಗುವಂತೆ ಒಂದು ರಾಜಕೀಯ ಗೋಷ್ಠಿಯನ್ನು ನಡೆಯಿಸಿದರು. "ಗೋಖಲೆ ಜ್ಞಾಪಕದ ಸಾರ್ವಜನಿಕ ವಿಚಾರ ಸಂಸ್ಥೆ" ನ್ಯಾಷನಲ್ ಕಾಲೇಜಿನಲ್ಲಿ ಮೇ 22, 1941 ರಿಂದ ಮೇ 25ರವರೆಗೆ ಈ ಗೋಷ್ಠಿಯನ್ನು ನಡೆಸಿತು. "ಗೋಷ್ಠಿಯ ಉದ್ದೇಶ ಕೇವಲ ಅಭಿಪ್ರಾಯ ವಿನಿಮಯ ಮತ್ತು ತಿಳಿವಳಿಕೆಯ ಹಂಚಿಕೆ; ಸಿದ್ಧಾಂತವಲ್ಲ, ಪಕ್ಷ ಪ್ರಚಾರವಲ್ಲ. ಅದು ಯಾವ ತೀರ್ಮಾನವನ್ನೂ ಕೊಡತಕ್ಕದ್ದಲ್ಲ. ಚರ್ಚೆಯಲ್ಲಿ ವ್ಯಾಸಂಗಿಗಳು ಹೇಳಬಹುದಾದ ಅಭಿಪ್ರಾಯಗಳನ್ನು ಅವರ ಸ್ವಂತ ವೈಯಕ್ತಿಕ ಭಾವನೆಗಳೆಂದು ಅಂಗೀಕರಿಸತಕ್ಕದೇ ಹೊರತು ಅವು ಅವರು ಸೇರಿರುವ ರಾಜಕೀಯ ಪಕ್ಷದ ಅಥವಾ ಪಂಗಡದ ಭಾವನೆಗಳೆಂದು ಪರಿಗಣಿಸಲಾಗದು. ಭಾಷಣಕರ್ತರೂ, ಚರ್ಚಾಕರ್ತರೂ ಪಕ್ಷಪರವಶರಾಗದೆ ಮತ ಹಠವಿಲ್ಲದೆ, ಸತ್ಯವೆಲ್ಲಿ? ಧರ್ಮವಾವುದು? ಎಂದು ಹುಡುಕುತ್ತಿರುವವನಿಗೆ ತಕ್ಕುದಾಗಿರುವ ವೈಜ್ಞಾನಿಕ ಮನೋಭಾವದಿಂದ ಎಲ್ಲ ವಿಷಯಗಳನ್ನೂ ವಿಮರ್ಶಿಸುವರೆಂದೂ ಯಾವ ಒಂದು ಪಕ್ಷದ ಅಥವಾ ಪಂಗಡದ ಅನುಕೂಲಕ್ಕಾಗಿಯಾಗಲಿ ಪ್ರತಿಕೂಲಕ್ಕಾಗಿಯಾಗಲಿ ಪ್ರಚಾರ ನಡಸಲು ಈ ಅವಕಾಶವನ್ನು ಉಪಯೋಗಪಡಿಸಲಾರರೆಂದೂ ನಿರೀಕ್ಷಿಸಿದೆ"

ಈ ಉದ್ದೇಶ ನಿರೀಕ್ಷೆಗಳಿಂದ ನಡೆದ ಗೋಷ್ಠಿಯಲ್ಲಿ ಡಿ ವಿ ಜಿ ಯವರು ಪ್ರಜಾಪ್ರತಿನಿಧಿಸಂಸ್ಥೆಗಳ ಚರಿತ್ರೆಯನ್ನು ಕುರಿತೂ, ಎಂ.ಎ. ಗೋಪಾಲಸ್ವಾಮಿ ಅಯ್ಯಂಗಾರ್ಯರು ರಾಜ್ಯ ಮತ್ತು ಅದರ ಕಾರ್ಯವನ್ನು ಕುರಿತೂ, ಎಂ.ಪಿ. ಸೋಮಶೇಖರರಾಯರು ಮೈಸೂರು ಸಂವಿಧಾನವನ್ನು ಕುರಿತೂ, ವಿ. ಸೀತಾರಾಮಯ್ಯನವರು ಸಾರ್ವಜನಿಕ ಹಣಕಾಸನ್ನು ಕುರಿತೂ ಮಾತನಾಡಿದರು. ಈ ಕಾರ್ಯಕ್ರಮಕ್ಕೆ ಸಂಚಾಲಕರಾಗಿದ್ದವರು ಡಿ ವಿ ಜಿ ಯವರ

ಹಳೆಯ ಸ್ನೇಹಿತರಾದ ಕೆ.ಎಸ್. ಕೃಷ್ಣ ಅಯ್ಯರ್.

ಎರಡನೆಯ ಮಹಾಯುದ್ಧದ ಸಮಯದಲ್ಲಿ ಜಪಾನೀಯರ ಧಾಳಿಯ ಸಂಭವದ ಸನ್ನಿವೇಶ ಒದಗಿದಾಗ ಬೆಂಗಳೂರಿನ ನಾಗರಿಕರ ಸಂರಕ್ಷಣೆಗಾಗಿ "ಆತ್ಮ ಸಂರಕ್ಷಣಾ ಸಮಿತಿ" ಯೊಂದು ರಚಿತವಾಯಿತು. ಆಯಾಯಾ ಪ್ರದೇಶ ಗಳವರು ತಮ್ಮ ತಮ್ಮ ಸಂಸ್ಥೆಗಳನ್ನು ಏರ್ಪಡಿಸಿಕೊಂಡರು. ರಾತ್ರಿ ಗಸ್ತು ತಿರುಗು ವುದು ಮುಂತಾದ ಈ ಕಾರ್ಯಕ್ರಮದಲ್ಲಿ ಮುಖ್ಯವಾಗಿ ಪಾಲುಗೊಂಡವರು ಡಿ ವಿ ಜಿ, ನಿಟ್ಟೂರು ಶ್ರೀನಿವಾಸರಾಯರು, ಸಿ. ಕೃಷ್ಣರಾಯರು ಮುಂತಾದವರು. "ಸಮಿತಿಯಲ್ಲಿ ಡಿ ವಿ ಜಿ ಯವರ ನೇತೃತ್ವದ ಭಾಗ್ಯವನ್ನು ಪಡೆದ ಆ ಕಾಲ ವನ್ನು ನಾವು ಯಾರೂ ಮರೆಯುವಂತಿಲ್ಲ. ಆ ದಿನಗಳಲ್ಲಿ ಸುಖಸಂಕಥಾವಿನೋದ ದಿಂದಲೂ ಅವರ ಅನುಭವ ಮತ್ತು ಜ್ಞಾನಭಂಡಾರದಿಂದ ನಾವು ಪಡೆದ ಲಾಭ ಅಷ್ಟಿಷ್ಟಲ್ಲ" ಎಂದು ನಿಟ್ಟೂರು ಶ್ರೀನಿವಾಸರಾಯರು ನೆನೆಸಿಕೊಳ್ಳುತ್ತಾರೆ.

ಪುನಃ 25-11-1944 ರಲ್ಲಿ ಡಿ ವಿ ಜಿ ಧೈರ್ಯಮಾಡಿ (took courage in both the hands) 20-30 ಸ್ನೇಹಿತರಿಗೆ ಪತ್ರ ಬರೆದು ಗೋಖಲೆ ಸಂಸ್ಥೆ ಯನ್ನು ಪ್ರಾರಂಭಿಸುವ ಯೋಚನೆಯನ್ನು ತಿಳಿಸಿದರು. ಸಂಸ್ಥೆಯ ನಿಯಮಗಳ ಕರಡೊಂದನ್ನು ಕಳುಹಿಸಿ, ಸಭೆಯೊಂದನ್ನು ಕರೆದರು. ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಸಭೆ ಎಂ.ಪಿ. ಸೋಮಶೇಖರರಾಯರ ಅಧ್ಯಕ್ಷತೆಯಲ್ಲಿ 18-2-1945ರಂದು ಡಿ ವಿ ಜಿ ಯವರ ಮನೆಯಲ್ಲೇ ನಡೆಯಿತು. ನಿಟ್ಟೂರು ಶ್ರೀನಿವಾಸ ರಾಯರು, ಕೆ. ಸಂಪದ್ಗಿರಿರಾಯರು, ಕೆ.ಆರ್. ಗೋಪೀವಲ್ಲಭ ಅಯ್ಯಂಗಾರ್ಯರು ಪಿ.ಆರ್. ರಾಮಯ್ಯನವರು, ಎಂ.ವಿ. ಕೃಷ್ಣಮೂರ್ತಿ ಯವರು, ತಿರುಮಲೆ ತಾತಾಚಾರ್ಯ ಶರ್ಮ ಅವರು, ಪಾಮಡಿ ಸುಬ್ಬರಾಮ ಶೆಟ್ಟರು, ಬಿ.ವಿ. ರಾಮಯ್ಯಂಗಾರ್ಯರು ಮುಂತಾದ ಸ್ನೇಹಿತರು, ಪ್ರಮುಖರು ಸಭೆಗೆ ಬಂದಿದ್ದರು. ಎನ್. ಗೋಪಾಲಸ್ವಾಮಿ ಅಯ್ಯಂಗಾರ್ಯರು, ಎಸ್.ಎ. ಶ್ರೀನಿವಾಸನ್, ಡಾಕ್ಟರ್ ಬಿ.ಕೆ. ನಾರಾಯಣರಾಯರು, ಶಿವಮೊಗ್ಗದ ಜಿ. ಶ್ರೀನಿವಾಸ ಅಯ್ಯಂಗಾರ್ಯರು, ವೆಂಕಟಸುಬ್ಬಾ ಶಾಸ್ತ್ರಿಗಳು, ತುಮಕೂರಿನ ಎಚ್. ವೆಂಕಟರಾಮಯ್ಯನವರು, ಬೊಂಬಾಯಿನ ರುದ್ರ ಅವರು, ಮಿರ್ಜಾ ಇಸ್ಮಾಯಿಲ್ ಅವರು ಸಭೆಗೆ ಬರಲಾಗದುದಕ್ಕೆ ಕ್ಷಮೆಯನ್ನು ಕೋರಿ ಡಿ ವಿ ಜಿ ಯವರ ಯೋಜನೆಗೆ ಬೆಂಬಲವನ್ನು ಸೂಚಿಸಿದ್ದರು.

ಸಭೆ ಎಸ್. ಜಿ. ಶಾಸ್ತ್ರಿಗಳ ಸೂಚನೆಯ ಮೇರೆಗೆ ಗೋಖಲೆ ಸಂಸ್ಥೆಯ ಸ್ಥಾಪನೆಗೆ ಸಮ್ಮತಿಯನ್ನು ಸೂಚಿಸಿ, ಡಿ ವಿ ಜಿ, ಎಂ.ಪಿ. ಸೋಮಶೇಖರ ರಾವ್,

ಕೆ. ಸಂಪದ್ಗಿರಿರಾವ್, ಇವರನ್ನು ಒಳಗೊಂಡ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಿತು. ಆ ಸಮಿತಿ ನಿಟ್ಟೂರು ಶ್ರೀನಿವಾಸರಾಯರನ್ನು ಸಮಿತಿಗೆ ಸೇರಿಸಿಕೊಂಡಿತು. ಡಿ ವಿ ಜಿ ಮತ್ತು ನಿಟ್ಟೂರು ಶ್ರೀನಿವಾಸ ರಾಯರು ಕಾರ್ಯದರ್ಶಿಗಳಾದರು.

ಆ ಸಭೆಯಲ್ಲಿ ಡಿ ವಿ ಜಿ ತಾವು ಗೋಖಲೆಯವರ ಹೆಸರನ್ನೇಕೆ ಸಂಸ್ಥೆಗೆ ಇಟ್ಟೆನೆಂಬುದನ್ನು ವಿವರಿಸುತ್ತಾ "He was the first to set an example of systematic study and self-discipline and self-preparation for a carreer of self-less service in the field of politics.... My hope is that the association ofthis name with this Institute will serve to keep two principles constantly before our minds: first, that in considering all questions we should remember to regard the whole of India as our basis and our back-ground; second, that in all our critical and constructive endeavours, we should be actuated by his example of conscien-tious study, scientific impartiality, rationalistic out-look and scrupulous sense of responsibility."

ಹೀಗೆ ಡಿ ವಿ ಜಿ ಯವರ 30 ವರ್ಷಗಳ ತಪಸ್ಸಿನ ಫಲವಾಗಿ ಗೋಖಲೆ ಸಂಸ್ಥೆ ಸ್ಥಾಪಿತವಾಯಿತು. ಹೀಗೆ ಪ್ರಾರಂಭವಾದ ಸಂಸ್ಥೆ ತನ್ನ ಕೆಲಸಗಳಲ್ಲಿ ಕೂಡಲೆ ತೊಡಗಲಾಗಲಿಲ್ಲ. ದೇಶದ ಪ್ರಕ್ಷುಬ್ಧ ವಾತಾವರಣ, ಅನುಕೂಲಗಳ ಕೊರತೆ ಈ ಕೆಲಸವನ್ನು ತಡಮಾಡಿತು. ಎಂ. ಎನ್. ಕೃಷ್ಣರಾವ್ ಪಾರ್ಕಿನ ಈಶಾನ್ಯ ದಿಕ್ಕಿನಲ್ಲಿರುವ ಸರ್ಕಲ್ಲಿನಲ್ಲಿದ್ದ ಪಾಮುಡಿ ಸುಬ್ಬರಾಮ ಶೆಟ್ಟರ ಮನೆ ಯೊಂದಕ್ಕೆ ಸಂಸ್ಥೆ 1-7-46 ರಲ್ಲಿ ಬಂದಿತು. 1946 ರ ಅಕ್ಟೋಬರ್ -ನವೆಂಬರ್ ತಿಂಗಳುಗಳಲ್ಲಿ ಎಸ್. ರಾಘವಾಚಾರ್ಯರ ನೇತೃತ್ವದಲ್ಲಿ ಪ್ಲೇಟೋವಿನ 'ರಿಪಬ್ಲಿಕ್' ಗ್ರಂಥದ ಅಧ್ಯಯನ ನಡೆಯಿತು. ತರುಣ ಮಿತ್ರರ ಅನುಕೂಲಕ್ಕಾಗಿ 'ವ್ಯಾಸಂಗ ಗೋಷ್ಠಿ'ಯೊಂದು ಅವಶ್ಯವೆಂದು ಕಂಡು ಬರ ಲಾಗಿ 15-12-1947 ರಲ್ಲಿ ವ್ಯಾಸಂಗ ಗೋಷ್ಠಿಯೊಂದು ಸ್ಥಾಪಿಸಲ್ಪಟ್ಟಿತು. ಪ್ರತಿ ಭಾನುವಾರವೂ 15-20 ಮಂದಿ ಸೇರಿ, ಒಂದು ಸಂಸ್ಕೃತ ಗ್ರಂಥ, ಒಂದು ಇಂಗ್ಲಿಷ್ ಗ್ರಂಥ—ಇವುಗಳ ಅಧ್ಯಯನ ಮಾಡಲಾರಂಭಿಸಿದರು. 9-3-48 ರಲ್ಲಿ ವಾಚನಾಲಯ ಪ್ರಾರಂಭವಾಯಿತು. 15-8-1948 ರಲ್ಲಿ ಬಿ. ಪಿ. ವಾಡಿಯಾ ಅವರು ಪುಸ್ತಕ ಭಂಡಾರವನ್ನು ಉದ್ಘಾಟಿಸಿದರು. 25-4-50

ರಲ್ಲಿ ಸರಕಾರದವರು ಈಗ ಕಟ್ಟಡವಿರುವ ಸ್ಥಳವನ್ನು ದಾನವಾಗಿ ಕೊಟ್ಟರು. 26-11-50 ರಲ್ಲಿ ಕಟ್ಟಡದ ಸಮಿತಿ ನಿಯಮಿತವಾಯಿತು, 26-10-55 ರಲ್ಲಿ ಗುದ್ದಲಿ ಪೂಜೆ, 28-6-1956 ರಲ್ಲಿ ಗೋಖಲೆ ಸಂಸ್ಥೆಯ ನೂತನ ಗೃಹಪ್ರವೇಶೋತ್ಸವವಾಯಿತು.

ಕಟ್ಟಡವನ್ನು ಕಟ್ಟಲು ಹಣಕ್ಕಾಗಿ ಪರದಾಡುತ್ತಿದ್ದಾಗ ಎಂ. ಎನ್. ಕೃಷ್ಣರಾಯರು 500 ರೂಪಾಯಿಗಳನ್ನೂ ಜಿ. ಎ. ಆಚಾರ್ಯರು 1441 ರೂಪಾಯಿಗಳನ್ನೂ ಕೊಟ್ಟರು. 7-10-1955 : ಸಂಸ್ಥೆಯ ಸಹಾಯಾರ್ಥವಾಗಿ ವಿನೋದ ರತ್ನಾಕರ ಗುಬ್ಬಿ ವೀರಣ್ಣನವರು ದಶಾವತಾರ ನಾಟಕವನ್ನಾಡಿದರು. ಅದರಿಂದ ಬಂದದ್ದು 1900 ರೂಪಾಯಿಗಳು. ಹೀಗೆ ಅನೇಕ ಕಡೆಗಳಿಂದ ದ್ರವ್ಯರೂಪವಾಗಿ ಸಾಮಗ್ರಿಗಳ ರೂಪದಲ್ಲಿ ಸಹಾಯ ಬಂತು.

ನೂತನ ಗೃಹಪ್ರವೇಶೋತ್ಸವದ ಸಂದರ್ಭದಲ್ಲಿ ಡಿ ವಿ ಜಿ ಸಂಸ್ಥೆಯ ಧ್ಯೇಯವನ್ನು ಹೀಗೆ ವಿವರಿಸಿದ್ದಾರೆ: "ಈ ಸಂಸ್ಥೆಯ ಮುಖ್ಯೋದ್ದೇಶ ನಮ್ಮ ಜನತೆಗೆ ರಾಷ್ಟ್ರಕ ಧರ್ಮದ ವಿಷಯದಲ್ಲಿ ಸಹಾಯ ಸಾಧನಗಳನ್ನೊದಗಿಸಬೇಕೆಂಬುದು. ಪ್ರಜಾಸರಕಾರದ ಪದ್ಧತಿ ನಮ್ಮದೇಶಕ್ಕೆ ಹೊಸದು. ಅದು ಜಯವಂತವಾಗಿ ನಡೆಯಬೇಕಾದರೆ ಪ್ರಜಾವ್ಯಕ್ತಿ ಮಾಡಬೇಕಾದ ಕರ್ತವ್ಯಗಳು ಅಪಾರವಾಗಿರುತ್ತವೆ. ಆ ಕರ್ತವ್ಯಗಳೆಂಥವು? ಪ್ರಜೆಗೂ ಸರಕಾರಕ್ಕೂ ಇರತಕ್ಕ ಸಂಬಂಧ ಎಂಥಾದ್ದು? ಸರಕಾರದಿಂದ ಪ್ರಜೆ ನಿರೀಕ್ಷಿಸಲು ಅರ್ಹವಾದದ್ದು ಏನೇನು? —ಇವೇ ಮೊದಲಾದ ವಿಚಾರಗಳನ್ನು ಕುರಿತು ಜನರಲ್ಲಿ ವಿದ್ಯಾ ಪ್ರಚಾರ ಮಾಡುವುದೂ, ಆ ವಿಚಾರಗಳಿಗೆ ಸಂಬಂಧಪಟ್ಟ ರಾಜಕೀಯ ಶಾಸ್ತ್ರ, ಅರ್ಥಶಾಸ್ತ್ರ ಸಮಾಜ ಶಾಸ್ತ್ರಗಳ ವಿಷಯದಲ್ಲಿ ತಿಳಿವಳಿಕೆ ಕೊಡುವುದೂ ಮತ್ತು ರಾಷ್ಟ್ರಕ ಧರ್ಮವನ್ನು ಕೂಡಿದ ಮಟ್ಟಿಗೂ ಆಚರಣೆಯ ಮೂಲಕ ಅಭ್ಯಾಸ ಮಾಡಿಸುವುದೂ ಈ ಸಂಸ್ಥೆಯ ಆಶಯಗಳು. ಸಮಸ್ತಜನಹಿತಕ್ಕೆ ಸಂಬಂಧಪಟ್ಟ ಎಲ್ಲ ಪ್ರಶ್ನೆಗಳನ್ನೂ ಶಾಸ್ತ್ರ ವಿಹಿತ ದೃಷ್ಟಿಯಿಂದಲೂ ನಿಷ್ಪಕ್ಷಪಾತ ಮನೋಭಾವದಿಂದಲೂ ವ್ಯಾಸಂಗ ಮಾಡಿಸುವುದು, ಅಂಥ ಉಪನ್ಯಾಸಗಳನ್ನು ಏರ್ಪಡಿಸುವುದು, ಪುಸ್ತಕ ಪತ್ರಿಕೆಗಳನ್ನು ಪ್ರಕಟಿಸುವುದು, ಗ್ರಂಥ ಪರಿಶ್ರಮಮಾಡಿಸುವುದು, ನಾನಾಜನವರ್ಗಗಳಲ್ಲಿ ಸ್ನೇಹವನ್ನೂ ಐಕಮತ್ಯವನ್ನೂ ಬೆಳಸುವುದು, ಜನದ ನಡೆ ನುಡಿಗಳಲ್ಲಿ ಸೌಜನ್ಯ ಸೌಶೀಲ್ಯಗಳು ಅಭಿವೃದ್ಧಿಯಾಗುವಂತೆ ಸಂಸ್ಕೃತಿಯನ್ನು ಪ್ರೋತ್ಸಾಹಿಸುವುದು, ಜನಕ್ಕಿರುವ ಕಷ್ಟಗಳನ್ನೂ ಕೊರತೆಗಳನ್ನೂ ಆಗಿಂದಾಗ್ಗೆ ಆಯಾ ಅಧಿಕಾರಿಗಳ ಗಮನಕ್ಕೆ

ತರುವುದು ; ಒಟ್ಟಿನಲ್ಲಿ ಜನಾಭಿಪ್ರಾಯವು ವಿವೇಕದಿಂದಲೂ ಸ್ಫುಟವಾಗಿಯೂ ವ್ಯಕ್ತಪಡುವಂತೆ ಮಾಡುವುದು —ಇವು ಈ ಸಂಸ್ಥೆಯ ಕಾರ್ಯವಿಧಾನಗಳು."

"ಸಂಸ್ಥೆ ಯಾವ ರಾಜಕೀಯ ಕಕ್ಷಿಗಾಗಲಿ, ಯಾವ ಮತ ಜಾತಿ ವರ್ಗಕ್ಕಾಗಲಿ ಯಾವೊಂದು ಕೋಮಿಗಾಗಲಿ ಒಳಪಟ್ಟಿದ್ದಲ್ಲ. ಇದು ಇಂಗ್ಲಿಷಿನಲ್ಲಿ 'ಪವರ್ ಪಾಲಿಟಿಕ್ಸ್' ಎಂದು ವರ್ಣಿಸುವ ಅಧಿಕಾರ ಪ್ರಸಕ್ತಿಯ ರಾಜಕೀಯಕ್ಕೆ ಕೈಹಚ್ಚತಕ್ಕದ್ದಲ್ಲ. ಇದು ತನ್ನ ಕರ್ತವ್ಯವನ್ನು ಯಾವ ಪಕ್ಷಕ್ಕೂ ಸೇರದೆ ಸ್ವತಂತ್ರ ವಿವೇಚನೆಯಿಂದ ನಡಸಲುಳ್ಳದ್ದು. ಆದ ಕಾರಣ ಇದಕ್ಕೆ ಅವಶ್ಯವಾದ ಸಹಾಯವು ದೇಶದ ಮಹಾಜನರಿಂದಲೇ ಬರಬೇಕಾಗಿದೆ."

"ದೇಶವಿಚಾರಗಳ ಪರಿಜ್ಞಾನ ಪರ್ಯಾಲೋಚನೆಗಳ ವಿನಿಮಯ ಸಂಚಾರಕ್ಕೆ ಈ ಸಂಸ್ಥೆ ರಾಜಮಾರ್ಗದಂತೆ ಇರಬೇಕಾದದ್ದು. ಎಲ್ಲ ಪ್ರಾಮಾಣಿಕವಾದ ಭಾವನೆಗಳ ಪರಿಶೀಲನೆಗೂ ಇಲ್ಲಿ ಅವಕಾಶವುಂಟು. ಇಲ್ಲಿ ಯಾರಿಗೂ ತಿರಸ್ಕಾರವಿಲ್ಲ. ಯಾರಿಗೂ ಅತಿಪೂಜೆ ಇಲ್ಲ. ಒಂದಾನೊಂದು ಅಭಿಪ್ರಾಯವನ್ನು ನಾವು ಅಂಗೀಕರಿಸಲಾಗದಿದ್ದರೂ ಅದನ್ನು ಸಹಾನುಭೂತಿಯಿಂದ ವಿವೇಚಿಸುವುದು ಸಾಧ್ಯವೆಂದೂ ನ್ಯಾಯವೆಂದೂ ಈ ಸಂಸ್ಥೆ ತಿಳಿದುಕೊಂಡಿದೆ. ಮನುಷ್ಯ ಮಾತ್ರರಿಗೆ ಎಷ್ಟು ಮಟ್ಟಿನ ವಿವೇಕ ದೊರೆಯುವುದು ಸಾಧ್ಯವೋ ಅಷ್ಟರಮಟ್ಟಿಗೆ ಅದು ನಮ್ಮಲ್ಲಿ ಉಂಟಾಗಬೇಕಾದರೆ ನಾವು ಪ್ರಸಕ್ತ ವಿಷಯ ಪರಿಜ್ಞಾನವನ್ನೂ ಅಭಿಪ್ರಾಯಗಳನ್ನೂ ಪರಸ್ಪರ ಪ್ರತಿದಾನ ಮಾಡಿಕೊಂಡು, ಪ್ರತಿಯೊಬ್ಬನೂ ತನ್ನತನ್ನ ಅಂತಸ್ಸಾಕ್ಷಿಯೊಪ್ಪುವಂತೆ ಸ್ವತಂತ್ರ ನಿರ್ಣಯಕ್ಕೆ ಬರುವುದೇ ಸರಿಯಾದ ದಾರಿಯೆಂದು ನಾವು ಭಾವಿಸಿದ್ದೇವೆ. ಯಾವ ಒಬ್ಬ ಮನುಷ್ಯನ ದೃಷ್ಟಿಯೂ ಸಮಗ್ರ ಸತ್ಯಗ್ರಹಣಕ್ಕೂ ಸಂಪೂರ್ಣ ಧರ್ಮದರ್ಶನಕ್ಕೂ ಅದೊಂದೇ ಸಾಲಲಾರದು ; ಅದರ ಜೊತೆಗೆ ಅವನು ತನ್ನ ಸಹಜೀವಿಗಳ ದೃಷ್ಟಿಪ್ರಕಾರಗಳನ್ನೂ ಸೇರಿಸಿಕೊಂಡು ನೋಡಬೇಕು. ಯಾವ ಒಬ್ಬ ಮನುಷ್ಯನ ಬುದ್ಧಿಕಾರ್ಯವನ್ನೂ ಅದು ಪ್ರಮಾದಾಸ್ಪದವಿಲ್ಲದ್ದೆಂದು ನಾವು ಅಂಗೀಕರಿಸಬೇಕಾದ್ದಿಲ್ಲ; ಆದರೆ ಪ್ರಾಮಾಣಿಕತೆಯನ್ನು ಮಾತ್ರ ನಾವು ಪ್ರತಿಯೊಬ್ಬನಿಂದಲೂ ಅಪೇಕ್ಷಿಸತಕ್ಕದ್ದಾಗಿದೆ. ಪ್ರಜಾರಾಜ್ಯವು ತನ್ನ ವಿವೇಕವನ್ನು ನಿರ್ಮಲವಾಗಿಯೂ ತನ್ನ ನೀತಿಯನ್ನು ಉನ್ನತವಾಗಿಯೂ ಉಳಿಸಿಕೊಳ್ಳಬೇಕಾದರೆ, ಎಲ್ಲರಲ್ಲಿಯೂ ರಾಷ್ಟ್ರಕ ಮನೋವೃತ್ತಿಯನ್ನು ಜಾಗರೂಕಗೊಳಿಸುತ್ತಿರುವುದಕ್ಕೂ ಇಂಥ ಸಂಸ್ಥೆ ಅತ್ಯಂತ ಅವಶ್ಯಕರ್ಮಸಾಧನವಾಗಿದೆ. ಈ ಸಂಸ್ಥೆ ರಾಜ್ಯದ ನಾನಾ ಅಂಗಗಳನ್ನು

ಆಗಿಂದಾಗ್ಗೆ ಪರಿಶೋಧಿಸಿ ಅವುಗಳ ಕಾರ್ಯರೀತಿಗಳಲ್ಲಿ ಜನಜೀವನಸತ್ಯದ ಜೀವಾಳವನ್ನು ತುಂಬಲು ಸಹಾಯವಾದೀತೆಂಬುದು ನಮ್ಮ ನಿರೀಕ್ಷಣೆ. ರಾಷ್ಟ್ರಕ ಧರ್ಮ ತತ್ತ್ವಧ್ಯೇಯಗಳಿಗೆ ಈ ಸಂಸ್ಥೆ ಕೇಂದ್ರ ಸ್ಥಾನವೂ ಪ್ರತ್ಯಕ್ಷ ನಿದರ್ಶನವೂ ಆಗಿರಬೇಕೆಂಬುದೇ ನಮ್ಮ ಆಸೆ."

ಸಂಸ್ಥೆಯ ವಿವಿಧ ಕಾರ್ಯವಿವರಗಳನ್ನು ನೋಡಿದರೆ ಡಿ ವಿ ಜಿಯವರ ಕೆಲಸದ ಹರಹು ಅರಿವಾಗುತ್ತದೆ:

ಸಂಸ್ಥೆಯಲ್ಲಿ ಬಹು ಅಮೂಲ್ಯವಾದ ಪುಸ್ತಕ ಭಂಡಾರವಿದೆ. ಡಿ ವಿ ಜಿ ಯವರ ಪುಸ್ತಕ ಭಂಡಾರ ಸಂಸ್ಥೆಗೆ ಬಂದಿದೆ. ಅಲ್ಲಿ ವೇದವೇದಾಂಗಗಳು, ಕಾವ್ಯ, ನಾಟಕ ಮುಂತಾದ ವಿಷಯಗಳನ್ನು ಕುರಿತು ಕನ್ನಡದ ಸಂಸ್ಕೃತದ ಇಂಗ್ಲಿಷಿನ ಗ್ರಂಥಗಳಿವೆ. ಜೀವನ ಚರಿತ್ರೆ, ದೇಶ ದೇಶಗಳ ಚರಿತ್ರೆ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಕಾನೂನುಶಾಸ್ತ್ರ ಇವುಗಳನ್ನು ಕುರಿತು ಗ್ರಂಥಗಳಿವೆ. ನಮ್ಮ ದೇಶದ ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ಪ್ರಕಟವಾದ, ಅದನ್ನು ಕುರಿತ, ಗ್ರಂಥಗಳಿವೆ. ಸರಕಾರದ ಆಡಳಿತದ ವರದಿಗಳಿವೆ. ಈ ಗ್ರಂಥ ಭಂಡಾರಕ್ಕೆ ಪುಸ್ತಕದಾನ ಅನೇಕ ಕಡೆಯಿಂದ ಬಂದಿದೆ. ಡಿ ವಿ ಜಿ ಯವರು, ನಿಟ್ಟೂರು ಶ್ರೀನಿವಾಸರಾಯರು, ಸರ್ ಎಂ. ವಿಶ್ವೇಶ್ವರಯ್ಯನವರು, ತುಮಕೂರಿನ ಕೆ. ರಂಗಯ್ಯಂಗಾರ್ಯರು, ಬಳ್ಳಾರಿಯ ಬೆಲ್ಲೋಣಿ ಭೀಮರಾಯರು, ರಾಮಕೃಷ್ಣ ಕಾರಂತರು, ಜಿ. ಪಿ. ರಾಜರತ್ನಂ ಅವರು, ಎ. ಆರ್. ಕೃಷ್ಣಶಾಸ್ತ್ರಿಗಳು, ಕೆ. ವಿ. ರಾಘವಾಚಾರ್ಯರು, ಎಸ್. ವಿ. ಶ್ರೀನಿವಾಸರಾಯರು, ಹೆಮ್ಮಿಗೆ ದೇಶಿಕಾಚಾರ್ಯರು, ಬಿ. ಎನ್. ಗುಪ್ತ ಅವರು, ಕೆ. ಅನಂತರಾಮಯ್ಯನವರು, ಎ. ಎನ್. ಮೂರ್ತಿರಾಯರು ಮುಂತಾದ ಅನೇಕರು, ಮತ್ತು ಮೊದಲಿಯಾರ್ ಸಂಘ ಮುಂತಾದ ಸಂಸ್ಥೆಗಳ ಪುಸ್ತಕ ಭಂಡಾರ ಇಲ್ಲಿಗೆ ಬಂದಿದೆ. ಜಿ. ಪಿ. ರಾಜರತ್ನಂ ಅವರು ಕನ್ನಡದ ಗ್ರಂಥಗಳನ್ನು ಶೇಖರಿಸಲು ಪ್ರಾರಂಭಿಸಿದ "ಶ್ರೀಗಂಧಕುಟಿ" ವಿಭಾಗ ಬಹು ಅಮೂಲ್ಯ ಗ್ರಂಥಭಂಡಾರ.

ಇದರೊಂದಿಗೆ ಡಿ ವಿ ಜಿ ಯವರು ಶೇಖರಿಸಿಟ್ಟಿದ್ದ ಹಿಂದೂ ಪತ್ರಿಕೆಗಳ ಸಂಗ್ರಹ, ಸುಮಾರು 1930 ರಿಂದ, ಇಲ್ಲಿದೆ. ಮೈಸೂರಿನ ವೃತ್ತಾಂತಪತ್ರಿಕೆ, 19ನೆಯ ಶತಮಾನದ ವೃತ್ತಾಂತ ಬೋಧಿನಿ, ಕರ್ನಾಟಕ ಪ್ರಕಾಶಿಕಾ, ಪತ್ರಿಕೆಗಳಿವೆ. ಬ್ರಹ್ಮವಾದಿನ್, ಮಾಡರ್ನ್ ರೆವ್ಯೂ, ಇಂಡಿಯನ್ ರೆವ್ಯೂ, ತ್ರಿವೇಣಿ, ಪ್ರಬುದ್ಧಕರ್ನಾಟಕ, ಜಯಕರ್ನಾಟಕ, ಸಾಹಿತ್ಯಪರಿಷತ್ ಪತ್ರಿಕೆ, ಜೀವನ, ಸಾಕ್ಷಿ, ಕನ್ನಡನುಡಿ ಮುಂತಾದ ಪತ್ರಿಕೆಗಳಿವೆ.

ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿಸಭೆ ನ್ಯಾಯವಿಧಾಯಕ ಸಭೆಯ ವರದಿಗಳಲ್ಲದೆ ಲೋಕಸಭೆಯ ರಾಜ್ಯಸಭೆಯ ವರದಿಗಳಿವೆ. ಭಾರತದ ಸಂವಿಧಾನ ಸಭೆಯ ವರದಿಗಳಿವೆ.

ಸರಕಾರದವರು ನೇಮಿಸಿದ್ದ ಸಮಿತಿಗಳ ವರದಿಗಳ ಇಲ್ಲಿನ ಭಂಡಾರ ಬಹು ಅಮೂಲ್ಯವಾದದ್ದು. ಅಂತಾರಾಷ್ಟ್ರೀಯ ಕಾನೂನುಶಾಸ್ತ್ರಕ್ಕೆ ಸಂಬಂಧ ಪಟ್ಟ ಇಲ್ಲಿಯ ಸಂಗ್ರಹ ಅಪರೂಪವಾದದ್ದು

ಹೀಗೆ ಸಾರ್ವಜನಿಕ ಪ್ರಶ್ನೆಗಳನ್ನು ಪರಿಶೀಲಿಸಲು ಬೇಕಾದ ಎಲ್ಲ ಪರಿಕರ ಗಳೂ ಇಲ್ಲಿ ಸಿದ್ಧವಾಗಿವೆ.

ಸಂಸ್ಥೆಯ ಮುಖ್ಯವಾದ ಚಟುವಟಿಕೆ ಉಪನ್ಯಾಸಗಳ ಏರ್ಪಾಟು. ಪ್ರತಿ ಶನಿವಾರ ಒಂದು ಉಪನ್ಯಾಸ ಸಾಮಾನ್ಯವಾಗಿ ಇರುತ್ತದೆ. ಕನ್ನಡ ಸಾಹಿತ್ಯದ ಹೆಸರಾಂತ ಮಹನೀಯರೆಲ್ಲ ಇಲ್ಲಿ ಉಪನ್ಯಾಸ ಮಾಡಿದ್ದಾರೆ. ಭಾರತದ ಇತರೆಡೆ ಗಳಿಂದ ಬಂದ, ಹೊರದೇಶದಿಂದ ಬಂದ ವಿದ್ವಾಂಸರು, ಇಲ್ಲಿ ಉಪನ್ಯಾಸ ಮಾಡಿ ದ್ದಾರೆ. ರಾಜಕೀಯ, ಆರ್ಥಿಕ ಪರಿಸ್ಥಿತಿ, ಸಾಹಿತ್ಯ, ವಿಜ್ಞಾನ, ಮತವಿಚಾರ ಎಲ್ಲ ವಿಚಾರಗಳನ್ನು ಕುರಿತೂ ಉಪನ್ಯಾಸಗಳು ನಡೆಯುತ್ತವೆ. ಇಲ್ಲಿ ಎಲ್ಲ ಅಭಿಪ್ರಾಯಗಳಿಗೂ ಮನ್ನಣೆಯುಂಟು.

ನಿಟ್ಟೂರು ಶ್ರೀನಿವಾಸರಾಯರು ಅಂತಾರಾಷ್ಟ್ರೀಯ ವಿಚಾರಗಳನ್ನು ಕುರಿತು ತಿಂಗಳಿಗೊಂದು ಬಾರಿ ಉಪನ್ಯಾಸಮಾಡುತ್ತಿದ್ದರು. ಅವರ ನಂತರ ಕೆಲವು ಕಾಲ, ಈಗ ಮಂತ್ರಿಗಳಾಗಿರುವ ಎ. ಲಕ್ಷ್ಮಿಸಾಗರ್ ಅವರೂ, ಮಿರ್ಲೆ ಕೃಷ್ಣಮೂರ್ತಿಯವರೂ ಆ ಕೆಲಸವನ್ನು ಮುಂದುವರಿಸಿದರು.

ಭಾರತದ ಸಾರ್ವಜನಿಕ ವಿಚಾರಗಳನ್ನು ಕುರಿತ ಸಮೀಕ್ಷಾ–ಉಪನ್ಯಾಸ ಗಳೂ ನಡೆದುವು. ವಿ.ಪಿ. ಮೇನನ್, ವಿ. ನರಹರಿರಾಯರು, ಬಿ.ವಿ.ನಾರಾಯಣ ರೆಡ್ಡಿ, ಬಿ. ವಾಸುದೇವಮೂರ್ತಿ ಮುಂತಾದವರು ಭಾಗವಹಿಸುತ್ತಿದ್ದ ಈ ಕಾರ್ಯ ಕ್ರಮ ಮೂರು ತಿಂಗಳಿಗೊಂದಾವರ್ತಿ ನಡೆಯುತ್ತಿತ್ತು.

ವಿಜ್ಞಾನ ವಿಷಯಗಳನ್ನು ಕುರಿತು ಉಪನ್ಯಾಸಗಳನ್ನು ಏರ್ಪಡಿಸುವ ಸಲುವಾಗಿ ಆರ್. ಎಲ್. ನರಸಿಂಹಯ್ಯನವರು, ಪಿ. ಶ್ರೀನಿವಾಸರಾಯರು, ಎಂ. ಶಿವರಾಂ ಅವರು, ಬಿ.ಆರ್. ಶೇಷಾಚಾರ್ ಅವರು ಮುಂತಾದವರು ಇದ್ದ ಒಂದು ಸಮಿತಿ ರಚಿತವಾಗಿತ್ತು. ವಿಜ್ಞಾನ ವಿಷಯಗಳನ್ನು ಕುರಿತು ಕನ್ನಡದಲ್ಲಿಯೂ ಇಂಗ್ಲಿಷಿನಲ್ಲಿಯೂ ಉಪನ್ಯಾಸಗಳಾಗುತ್ತಿದ್ದವು.

ಉಪನ್ಯಾಸ ಏರ್ಪಡಿಸುವ ವಿಷಯದಲ್ಲಿ ಡಿ ವಿ ಜಿ ಯವರು ತೋರಿಸು

ತ್ತಿದ್ದ ಆಸಕ್ತಿ ವಿಶೇಷವಾದದ್ದು. ನಾಲ್ಕಾರು ತಿಂಗಳುಗಳ ಮುಂಚೆಯೇ ಉಪನ್ಯಾಸಕರನ್ನು ಗೊತ್ತುಮಾಡಬೇಕು. ಉಪನ್ಯಾಸದ ವಿಷಯ, ಸಮಯ ಎಲ್ಲ ನಿರ್ಧರವಾಗಿಬಿಡಬೇಕು. ಉಪನ್ಯಾಸಕರಿಗೆ ತಯಾರು ಮಾಡಿಕೊಳ್ಳಲು ತಕ್ಕಷ್ಟು ಸಮಯ ಕೊಡಬೇಕೆಂಬುದು ನಿಯಮ. ಉಪನ್ಯಾಸವನ್ನು ಬರೆದು ಕೊಂಡು ಬಂದುಬಿಟ್ಟಿದ್ದರೆ ಉತ್ತಮ ಮತ್ತು ಉಪನ್ಯಾಸ 45 ನಿಮಿಷಗಳಿಗಿಂತ ಮೀರಬಾರದು ಎಂಬುದನ್ನೂ ಉಪನ್ಯಾಸಕರಿಗೆ ಸೂಚಿಸುತ್ತಿದ್ದರು. ಉಪನ್ಯಾಸದ ದಿನ ಸಂಜೆ ನಿರ್ದಿಷ್ಟ ಸಮಯಕ್ಕೆ ಒಂದು ಘಂಟೆಗೆ ಮೊದಲೇ ಬಂದು ಎಲ್ಲ ಏರ್ಪಾಟುಗಳೂ ಸರಿಯಾಗಿದೆಯೇ ಎಂದು ನೋಡುತ್ತಿದ್ದರು. ಜಮಖಾನ ಹೇಗೆ ಹಾಸಬೇಕು, ಕುರ್ಚಿಗಳನ್ನು ಇಡುವುದು ಹೇಗೆ ಎಲ್ಲವೂ ಸಂಸ್ಥೆಗೆ ಸೇರಿದವರಿಗೆ ಪಾಠವಾಗಿದೆ. ಹಾಕಿರುವ ಕುರ್ಚಿಗಳ ಮಧ್ಯೆ ಬಿಡುವು (ಓಣಿ) ಉಪನ್ಯಾಸಕರ ನೇರ ಎದುರಿಗೆ ಇರಬಾರದು. ಅವರ ಎದುರಿಗೆ ಸಭಿಕರು ಕಾಣಿಸಬೇಕು. ಉಪನ್ಯಾಸಕರು ಬಂದಾಗ ಅವರನ್ನು ಸಂಸ್ಥೆಯ ಗೇಟಿನ ಬಳಿಯೇ ಸ್ವಾಗತಿಸಬೇಕು. ಅವರ ಅನುಕೂಲವನ್ನು ನೋಡಬೇಕು. ಸಭಿಕ ರನ್ನು ತಾವೇ ಬಾಗಿಲಬಳಿ ನಿಂತು ಬರಮಾಡಿಕೊಳ್ಳುತ್ತಿದ್ದರು ಡಿ ವಿ ಜಿ. ಕೆಲವರು ಬಂದಾಗ ಅವರನ್ನು ಕರೆದುಕೊಂಡು ಹೋಗಿ ಆಸನದಲ್ಲಿ ಕುಳ್ಳಿರಿಸು ತ್ತಿದ್ದರು. ಮಿಕ್ಕವರಿಗೆ "They will find their places" ಎಂದು ಹೇಳಿದರೂ ಎಲ್ಲರಿಗೂ ಒಂದೇ ವಿಧವಾದ ಆತ್ಮೀಯವಾದ ಆಹ್ವಾನ. ಪ್ರತಿಯೊಬ್ಬರೂ ಅವರಿಗೆ ಪರಿಚಯಸ್ಥರೇ. ಬಂದವರು ಬಾಗಿಲ ಬಳಿ ಕುಳಿತುಕೊಳ್ಳುವುದು, ನಿಂತುಕೊಳ್ಳುವುದು ಎಲ್ಲ ಅವರಿಗೆ ಹಿಡಿಸುತ್ತಿರಲಿಲ್ಲ. ಒಳಗಡೆ ಬಂದು ಒಂದು ಸಾಲಿನಲ್ಲಿ ಕುಳಿತುಕೊಳ್ಳುವಂತೆ ವಿನಂತಿಸಿಕೊಳ್ಳುತ್ತಿದ್ದರು. ಈ ವಿಷಯವನ್ನು ಕುರಿತು 'ಪ್ರಜಾಮತ' (22-12-1957) ಪತ್ರಿಕೆಯಲ್ಲಿ ಬಂದ "ಬಹು ಬಗೆಯ ಪ್ರತಿಭಾನ್ವಿತ ವ್ಯಕ್ತಿ ಡಿ ವಿ ಜಿ: ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯನ್ನು ಅವರು ಬಹು ಮೋಜಿನಿಂದ ನಡಸುತ್ತಾರೆ" ಎಂಬ ಲೇಖನ ಬಹು ಸ್ವಾರಸ್ಯವಾಗಿ ವರ್ಣಿಸುತ್ತದೆ.

ನಿರ್ದಿಷ್ಟವಾದ ಸಮಯಕ್ಕೆ ಸರಿಯಾಗಿ ಸಭೆ ಪ್ರಾರಂಭವಾಗಿ ಬಿಡ ಬೇಕು. ಉಪನ್ಯಾಸಕ್ಕೆ ಮೊದಲು "ಪ್ರಾರ್ಥನೆ" ಎಂಬ ಕಾರ್ಯಕ್ರಮವಿಲ್ಲ. "ಓಂ" ಎಂಬುದೇ ಅದಕ್ಕೆ ಮೊದಲು. ಸ್ವಾಗತ ಭಾಷಣ ಎರಡು ಮೂರು ನಿಮಿಷ. ಉಪನ್ಯಾಸಕರನ್ನು ಕುರಿತು ಸಂಗ್ರಹವಾಗಿ, ಆದರೆ ಯಾವ ವಿಷಯ ವನ್ನೂ ಬಿಡದೆ, ಪರಿಚಯಮಾಡಿಸಬೇಕು. ಉಪನ್ಯಾಸದ ವಿಷಯ ಎರಡು

ಮೂರು ಮಾತು. ಉಪನ್ಯಾಸದ ನಂತರ ವಂದನಾರ್ಪಣೆ ನಾಲ್ಕೈದು ನಿಮಿಷ. ಉಪನ್ಯಾಸಕರು ಹೇಳಿದ ವಿಷಯಗಳಲ್ಲಿ ಮುಖ್ಯವಾದದ್ದು ಅಥವಾ ಅದಕ್ಕೆ ಪೋಷಕವಾದದ್ದು ಅದನ್ನು ಕುರಿತು ನಾಲ್ಕು ಮಾತು. ಉಪನ್ಯಾಸಕರು ಹೇಳದೆ ಬಿಟ್ಟದ್ದನ್ನು ಕುರಿತೋ, ಅವರು ಹೇಳಿದ ವಿಷಯದಲ್ಲಿ ಆಕ್ಷೇಪಣೆಯೋ ಸರ್ವಥಾ ಕೂಡದು. ಯಾವಾಗಲೂ ಉಪನ್ಯಾಸಕರ ಶ್ರಮಕ್ಕೆ ನಮ್ಮ ಕೃತಜ್ಞತೆಗಳನ್ನು ತಿಳಿಸತಕ್ಕದ್ದು. ಅನಂತರ ಉಪನ್ಯಾಸಕರನ್ನು ಸಂಸ್ಥೆಯ ಗೇಟಿನ ವರೆಗೂ ಹೋಗಿ ಬೀಳ್ಕೊಡತಕ್ಕದ್ದು. ಅವರ ಮಾತಿನಲ್ಲಿಯೇ ಹೇಳುವುದಾದರೆ 'ಎಲ್ಲ ಶ್ರಾದ್ಧನಿಯಮ'ದಂತೆ ನಡೆಯಬೇಕು.

ಡಿ ವಿ ಜಿ ಯವರು ಯಾವ ಉಪನ್ಯಾಸಕ್ಕೂ ತಪ್ಪಿಸಿಕೊಳ್ಳುತ್ತಿರಲಿಲ್ಲ. ಎಲ್ಲ ಉಪನ್ಯಾಸಗಳನ್ನೂ ಆಸಕ್ತಿಯಿಂದ ಕೇಳುತ್ತಿದ್ದುದೇ ಅಲ್ಲದೆ ಉಪನ್ಯಾಸಕರನ್ನು ಪ್ರೋತ್ಸಾಹಿಸುತ್ತಿದ್ದರು.

ರಾಜಕೀಯ ತತ್ತ್ವಜ್ಞಾನಿಗಳನ್ನು ಕುರಿತ ಉಪನ್ಯಾಸ ಮಾಲೆ ತುಂಬ ಚೆನ್ನಾಗಿ ನಡೆಯಿತು.

ರಾಜಾಜಿಯವರ ಜನ್ಮೋತ್ಸವದ ನೆನಪಿನಲ್ಲಿ ಮದರಾಸಿನ ಎಂ.ಎಸ್. ಸುಬ್ಬುಲಕ್ಷ್ಮಿಯವರು ಅವರ ಪತಿ ಟಿ. ಸದಾಶಿವಂ ಅವರು ಒಂದು ದತ್ತಿಯನ್ನು ಕೊಟ್ಟಿದ್ದಾರೆ. ಗೋವಿಂದಪೈ ಅವರ ಹೆರಿನಲ್ಲಿ ಟಿ. ಎಸ್. ವೆಂಕಣ್ಣಯ್ಯನವರ ಹೆಸರಿನಲ್ಲಿ ಉಪನ್ಯಾಸಗಳನ್ನು ಏರ್ಪಡಿಸುವುದಕ್ಕಾಗಿ, ಅ.ನ. ಕೃಷ್ಣರಾಯರ ಹೆಸರಿನಲ್ಲಿ ಪ್ರಬಂಧ ಸ್ಪರ್ಧೆಗಾಗಿ ರಾಜರತ್ನಂ ಅವರು ದತ್ತಿಗಳನ್ನು ಕೊಟ್ಟಿದ್ದಾರೆ. ರಾವ್ ಬಹದೂರ್ ವೆಂಕಟೇಶಾಚಾರ್ಯರ ಹೆಸರಿನಲ್ಲಿ, ಕೆ.ವಿ. ರಾಘವಾಚಾರ್ಯರ ಚಿಕ್ಕಪ್ಪಂದಿರ ಹೆಸರಿನಲ್ಲಿ, ಛಾಬ್ರಾ ಅವರ ಮಗನ ಹೆಸರಿನಲ್ಲಿ ದತ್ತಿಗಳಿವೆ. ವಾಜಪೇಯಂ ವೆಂಕಟಸುಬ್ಬಯ್ಯನವರ ಹೆಸರಿನಲ್ಲಿ ಪ್ರಬಂಧ ಸ್ಪರ್ಧೆಗಾಗಿ ದತ್ತಿಯಿದೆ.

ಸಂಸ್ಥೆಯ ಮುಖ್ಯವಾದ ಕಾರ್ಯಾಂಗ ವ್ಯಾಸಂಗ ಗೋಷ್ಠಿ. ಡಿ ವಿ ಜಿ: "ಸಾರ್ವಜನಿಕ ಜೀವನದ ಅನುಭವ ಬೆಳೆದಂತೆ ರಾಜಕೀಯಕ್ಕೂ ಧರ್ಮಪ್ರಶ್ನೆಗೂ ಇರುವ ಸಂಬಂಧ ನನ್ನ ಮನಸ್ಸಿಗೆ ವಿಶದಪಡುತ್ತ ಬಂತು. ಗೋಖಲೆ ಸಂಸ್ಥೆಯ ಜವಾಬ್ದಾರಿ ಒದಗಿದ ಮೇಲಂತೂ ದೇಶಹಿತಕ್ಕೆ ಧಾರ್ಮಿಕ ಸಾಹಿತ್ಯದ ಅನಿವಾರ್ಯತೆ ಎಷ್ಟೆಂಬುದು ಮತ್ತಷ್ಟು ಸ್ಪಷ್ಟವಾಯಿತು. ಮನುಷ್ಯ ಸಮಾಜದ ನಾನಾ ಉದ್ದೇಶ ಪ್ರವೃತ್ತಿಗಳಲ್ಲಿ ಧರ್ಮಾಧರ್ಮ ವಿವೇಕವಿಲ್ಲದೆ ಹೋದಾಗ ಅದೆಂಥ ರಾಜಕೀಯವಾದೀತು ? ಗುಣಾವಗುಣ ವಿಮರ್ಶೆ ಮಾಡದ

ಸಾರ್ವಜನಿಕ ಕಾರ್ಯದಿಂದ ಎಂಥ ಪ್ರಜಾಕ್ಷೇಮವಾದೀತು ?" ಎಂಬ ತೀರ್ಮಾನಕ್ಕೆ ಬಂದಿದ್ದರು. ಈ ಕೊರತೆಯನ್ನು ನೀಗಲು ವ್ಯಾಸಂಗ ಗೋಷ್ಠಿಯಿರಬೇಕೆಂಬ ಉದ್ದೇಶ ಅವರಿಗೆ ಪರಿಷತ್ತಿನ ಕಾಲದಲ್ಲೂ ಇತ್ತು, ಗೋಖಲೆ ಸಂಸ್ಥೆ ಪ್ರಾರಂಭಿಸಿದಾಗಲೂ ಇತ್ತು.

ಈ ಕಾರಣದಿಂದ ಪ್ರತಿ ಭಾನುವಾರ ಬೆಳಿಗ್ಗೆ ಸಂಸ್ಕೃತದ ಒಂದು ಗ್ರಂಥದ, ಇಂಗ್ಲಿಷಿನ ಒಂದು ಗ್ರಂಥದ ವ್ಯಾಸಂಗ ನಡೆಯುತ್ತದೆ. ಡಿ ವಿ ಜಿ ಯವರೇ, ಶಾಕುಂತಲ, ಉತ್ತರರಾಮಚರಿತೆ, ಭಗವದ್ಗೀತೆ, ಉಪನಿಷತ್ತುಗಳ ಪಾಠ ಹೇಳುತ್ತಿದ್ದರು. ಹಾಗೆಯೇ ರಾನಡೆ, ಗೋಖಲೆ, ಗ್ಲಾಡ್‌ಸ್ಟನ್, ಮಿಲ್ ಮುಂತಾದವರ ಜೀವನಚರಿತ್ರೆಗಳು, ಪ್ಲೇಟೋವಿನ ಸಂವಾದಗಳು, ಬರ್ಕ್, ಮಾರ್ಲೆ, ಮಿಲ್, ಬಾರ್ಕರ್ ಮುಂತಾದವರ ರಾಜ್ಯಶಾಸ್ತ್ರಗ್ರಂಥಗಳು, ಎರ್ರಿಕ್ ರೋಲ್ ಎಂಬಾತನ ಅರ್ಥಶಾಸ್ತ್ರದ ಚರಿತ್ರೆ ಮುಂತಾದ ಗ್ರಂಥಗಳ ವ್ಯಾಸಂಗ ನಡೆದಿದೆ.

ವ್ಯಾಸಂಗ ಗೋಷ್ಠಿಯ ಮುಖ್ಯವಾದ ಒಂದು ಚಟುವಟಿಕೆಯೆಂದರೆ ನಗರದ ವಿವಿಧ ಬಡಾವಣೆಗಳಿಗೆ ಭೇಟಿಕೊಟ್ಟು ಅಲ್ಲಿನ ಕುಂದುಕೊರತೆಗಳನ್ನು ಅನಾನುಕೂಲಗಳನ್ನು ಕುರಿತು ವರದಿ ಮಾಡುವುದು. ಈ ಕೆಲಸವನ್ನು ಪ್ರಾರಂಭಿಸಿದವರು ಎಸ್.ವಿ. ಶೇಷಾದ್ರಿಯವರು ; ಅದನ್ನು ಸುಬ್ಬನರಸಿಂಹಯ್ಯನವರು ಮುಂದುವರಿಸಿದರು. ಹಾಗೆ ಮಾಡಿದ ವರದಿಗಳು ಸಂಬಂಧ ಪಟ್ಟ ಅಧಿಕಾರಿಗಳಿಗೆ ಕಳುಹಿಸಲ್ಪಟ್ಟು ಪತ್ರಿಕೆಗಳಲ್ಲೂ ಪ್ರಕಟವಾಗುತ್ತಿದ್ದುವು. ಆಗಬೇಕಾದ ಕಾರ್ಯಗಳ ಬಗ್ಗೆ ಸರಕಾರದವರೊಡನೆಯೂ ಸಂಸ್ಥೆ ಪತ್ರವ್ಯವಹಾರ ನಡಸುತ್ತಿತ್ತು. ವ್ಯಾಸಂಗ ಗೋಷ್ಠಿಯ ಈ ವರದಿಗಳನ್ನು ಕುರಿತು ದಿವಾನರಾಗಿದ್ದ ಎನ್.ಮಾಧವರಾಯರು: "In the course of my work of the Bangalore Development Committee I came across and felt much interested in some of the Civic Survey Reports prepared by the members of the Gokhale Institute. A brief but appreciative reference to this aspect of the Institute's activities will be found in para 174 of the Committee's Report" ಎಂದು ಪತ್ರ ಬರೆದರು. ಆ ವರದಿಯಲ್ಲಿ ಸಮಿತಿ "Voluntary organisations such as the G.I.P.A. are from time to time making detailed studies of local requirements and bringing them to the notice of concerned authorites. Efforts of this kind should be encouraged" ಎಂದು ಬರೆದು ಸಂಸ್ಥೆಯ ಕೆಲಸವನ್ನು ಮೆಚ್ಚಿಕೊಂಡಿತ್ತು.

ವ್ಯಾಸಂಗ ಗೋಷ್ಠಿಯ ವಾರ್ಷಿಕೋತ್ಸವವು ಒಂದು ದೊಡ್ಡ ಹಬ್ಬ. ಸುಮಾರು ಡಿಸೆಂಬರ್ ತಿಂಗಳಿನಲ್ಲಿ, ಈ ಉತ್ಸವ ನಡೆಯುತ್ತಿತ್ತು. ಅದಕ್ಕೆ ಪೀಠಿಕೆಯಾಗಿ ಸಂಗೀತ ಸ್ಪರ್ಧೆಗಳು, ಪ್ರಬಂಧ ಸ್ಪರ್ಧೆಗಳು, ಆಟಪಾಟಗಳ ಸ್ಪರ್ಧೆಗಳು ನಡೆಯುತ್ತಿದ್ದವು. ಆ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಪಾರಿತೋಷಕಗಳನ್ನು ಕೊಡಲು ದತ್ತಿಗಳಿವೆ.

ಆ ಉತ್ಸವದ ದಿನ ಸ್ನೇಹಿತರ ಜೊತೆಯಲ್ಲಿರಲು, ಡಿ ವಿ ಜಿ ಯವರನ್ನು ಕಾಣಲು ಸಂಸ್ಥೆಯ ಸದಸ್ಯರೆಲ್ಲರೂ ಬರುತ್ತಿದ್ದರು. ಸಂಗೀತ ಕಛೇರಿ, ಸಭೆ, ಭರ್ಜರಿ ಊಟ ಎಲ್ಲ ಇರುತ್ತಿತ್ತು. ಒಂದು ಸಲ ರಾಜರತ್ನಂ ಅವರು ತಯಾರಿಸಿದ್ದ 'ಬಾಹುಬಲಿವಿಜಯಂ' ನಾಟಕವೂ ನಡೆಯಿತು. ಊಟದ ಪರಿಶವಣೆಯಿಂದ ಹಿಡಿದು ಎಲ್ಲ ವಿಷಯಗಳಲ್ಲೂ ಡಿ ವಿ ಜಿ ಪಾಲುಗೊಳ್ಳುತ್ತಿದ್ದರು. "ಜೋಷಯೇತ್ ಸರ್ವಕರ್ಮಾಣಿ ವಿದ್ವಾನ್ ಯುಕ್ತಃ ಸಮಾಚರನ್." ಆಗ ಆಗುತ್ತಿದ್ದ ಚರ್ಚೆ, ಹಾಸ್ಯ ಎಲ್ಲ ಇಂದಿಗೂ ಸದಸ್ಯರ ಮನಸ್ಸನ್ನು ಶ್ರೀಮಂತಗೊಳಿಸಿರುವ ನೆನಪುಗಳು.

"ಬಡ್ಜೆಟ್"ನ ಸಂಬಂಧದಲ್ಲಿ ಪ್ರತಿವರ್ಷವೂ ಒಂದು ಚರ್ಚಾಕೂಟ ಏರ್ಪಡಾಗುತ್ತಿತ್ತು. ಭೂ ಸುಧಾರಣೆಯ ವಿಷಯದಲ್ಲಿ 12-4-1959ರಲ್ಲಿ ಒಂದು ವಿಚಾರ ಸಂಕಿರಣ, 26-6-60ರಲ್ಲಿ ಸಾರ್ವಜನಿಕ ಕಾರ್ಯಕರ್ತರ ಸಮ್ಮೇಳನ ಎಲ್ಲ ನಡೆದವು.

ನಗರದ ನೀರು ಸರಬರಾಜು ವ್ಯವಸ್ಥೆಯನ್ನು ಪರಿಶೀಲಿಸಿ ಸಲಹೆಗಳನ್ನು ಕೊಡಲು ಇಂಜಿನಿಯರಾದ ಸಿ.ಎನ್ ಶ್ಯಾಮರಾಯರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಕೆಲಸ ಮಾಡಿ ಕಾವೇರಿಯಿಂದ ನಗರಕ್ಕೆ ನೀರು ತರುವ ಸಲಹೆಯನ್ನು 1958ರ ಹೊತ್ತಿಗೇ ಮಾಡಿತ್ತು.

ಶಾಸನ ಸಭೆಯು ಮುಂದೆ ಬರುವ ಕಾನೂನುಗಳ ಪೂರ್ವವಿಮರ್ಶೆಗಾಗಿ ಎಂ.ಪಿ ಸೋಮಶೇಖರರಾಯರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯಿತ್ತು.

ವರ್ಷದಲ್ಲಿ ನಾಲ್ಕು ಬಾರಿ ವ್ಯಾಸಪೂಜೆ ನಡೆಯುತ್ತದೆ. ಆಗ ವೇದ ಪಂಡಿತರು ಚತುರ್ವೇದಗಳಿಂದಲೂ ಕೆಲವುಭಾಗಗಳನ್ನು ಗಾನ ಮಾಡುತ್ತಾರೆ. ಶ್ರೀರಾಮನವಮಿಯಂದು, ಶ್ರೀಕೃಷ್ಣಾಷ್ಟಮಿಯಂದು ಉಪನ್ಯಾಸಗಳಾಗುತ್ತವೆ.

ದೇಶಕಾರ್ಯವಿಚಾರಗಳಲ್ಲಿ ಆಸಕ್ತಿಯುಳ್ಳ ಸಮಸ್ತ ರಾಷ್ಟ್ರಕ ಜನತೆ ಉಪಯೋಗಕ್ಕಾಗಿಯೂ, ವಿಶೇಷವಾಗಿ ಶಾಸನ ಸಭೆ ಮೊದಲಾದ ಪ್ರಜಾ ಸಂಸ್ಥೆಗಳ ಸದಸ್ಯ ಮಹಾಶಯರ ಉಪಯೋಗಕ್ಕಾಗಿಯೂ ಸಂಸ್ಥೆ ಒಂದು

ವ್ಯಾಸಂಗ ಶಿಬಿರವನ್ನು ನಡಸಿತು. ಜುಲೈ 1967ರಲ್ಲಿ. ವಿಧಾನಸೌಧದ ಪಕ್ಕದಲ್ಲಿರುವ ಶಾಸಕರ ಭವನದಲ್ಲಿ ಒಂದು ಉಪನ್ಯಾಸ ಮಾಲೆಯನ್ನು ಏರ್ಪಡಿಸಲಾಗಿತ್ತು. ಆಗ ವಿಧಾನ ಸಭೆಯ ಅಧ್ಯಕ್ಷರಾಗಿದ್ದ ಬಿ. ವೈಕುಂಠ ಬಾಳಿಗಾ ಅವರು ಆರಂಭೋತ್ಸವವನ್ನು ಮಾಡಿದರು. ಶಾಸನ ಸಭೆಯ ಕಾರ್ಯದರ್ಶಿಯಾಗಿದ್ದ ಟಿ. ಹನುಮಂತಪ್ಪನವರು ರಾಜ್ಯ ನಿಬಂಧನೆಯಲ್ಲಿ ಶಾಸನ ಸಭೆಯನ್ನು ಕುರಿತೂ, ಶಾಸನ ಸಭೆಯ ಕಾರ್ಯವಿಧಾನವನ್ನು ಕುರಿತೂ ಮಾತನಾಡಿದರು. ಸರಕಾರದ ಆಯವ್ಯಯದ ಮೇಲಿನ ಹತೋಟಿ, 'ಬಡ್ಜೆಟ್', ಸರಕಾರೀ ಇಲಾಖೆಗಳು, ವಾಣಿಜ್ಯ, ವ್ಯಾಪಾರ, ವ್ಯವಸಾಯ, ವಿದ್ಯಾಭ್ಯಾಸ ಮುಂತಾದ ಎಲ್ಲ ವಿಷಯಗಳನ್ನು ಕುರಿತೂ ಉಪನ್ಯಾಸಗಳು ಏರ್ಪಾಟಾಗಿದ್ದುವು.

ಐದು ವರ್ಷಕ್ಕೊಮ್ಮೆ ಸಾರ್ವತ್ರಿಕ ಚುನಾವಣೆಗಳ ತರುಣದಲ್ಲಿ ಎಲ್ಲ ರಾಜಕೀಯ ಪಕ್ಷಗಳ ಪ್ರತಿನಿಧಿಗಳನ್ನು ಆಹ್ವಾನಿಸಿ ಅವರ ತತ್ತ್ವಗಳನ್ನೂ ಕಾರ್ಯಕ್ರಮಗಳನ್ನೂ ವೋಟರು ಮಹಾಶಯರಿಗೆ ವಿವರಿಸಲು ಉಪನ್ಯಾಸ ಗಳು ಏರ್ಪಾಟಾಗುತ್ತವೆ. ರಾಜಕೀಯ ಪಕ್ಷಗಳು ಪ್ರಕಟಿಸಿದ ಕಾರ್ಯ ಕ್ರಮ ವಿವರಣೆಗಳನ್ನೆಲ್ಲ ಒಂದು ಕ್ರಮದಲ್ಲಿ ಸಂಗ್ರಹಿಸಿ ಪ್ರಕಟಪಡಿಸಲಾಗು ತ್ತಿತ್ತು. ವೋಟರುಗಳಿಗೆ ಅವರ ಕರ್ತವ್ಯಗಳನ್ನು ನೆನಪು ಮಾಡಿಕೊಡುವ, ಡಿ ವಿ ಜಿ ಸಿದ್ಧಪಡಿಸಿದ, ಪ್ರಸಿದ್ಧ ಪತ್ರಿಕೆ ಹಂಚಲಾಗುತಿತ್ತು.

ವೃತ್ತಪತ್ರಿಕೆಯ ಕಾರ್ಯನಿರ್ವಾಹಕ್ಕೆ ತರಬೇತಿ ಕೊಡುವ ಸಲುವಾಗಿ ಸಂಸ್ಥೆ 1948ರಲ್ಲಿ ಸ್ಕೂಲ್ ಆಫ್ ಜರ್ನಲಿಸಂ (ವೃತ್ತಪತ್ರಿಕಾ ಶಾಲೆ) ಯೊಂದನ್ನು ಪ್ರಾರಂಭಿಸುವ ಕೆಲಸವನ್ನು ಕೈಗೊಂಡು ವೃತ್ತಪತ್ರಿಕೆಗಳಿಗೂ, ಅದರ ಮಾಲೀಕರಿಗೂ ಒಂದು ಬೇಡಿಕೆಯನ್ನು ಕಳುಹಿಸಿತ್ತು. ಅವರು ಆ ವಿಷಯದಲ್ಲಿ ಯಾವ ಬಗೆಯ ಪ್ರತಿಕ್ರಿಯೆಯನ್ನೂ ತೋರಿಸದಿದ್ದ ಕಾರಣದಿಂದ ಆ ಯೋಚನೆ ಅಲ್ಲಿಗೇ ನಿಂತಿತು.

ಗೋಖಲೆ ಸಂಸ್ಥೆ ನಡಸುತ್ತಿರುವ ಮತ್ತೊಂದು ಕಾರ್ಯ ಸಾರ್ವಜನಿಕ ಪ್ರಶ್ನೆಗಳ ಪರಿಶೀಲನೆ.

1945ರಲ್ಲಿ ಮೈಸೂರು ಸಂಸ್ಥಾನದ ಪ್ರಜಾಸಮಾಜದಲ್ಲಿ ಮಧ್ಯಮ ವರ್ಗದ ಕುಟುಂಬದವರು ಎಂಥೆಂಥ ಆಹಾರ ಪದಾರ್ಥವನ್ನು ಊಟಮಾಡು ತ್ತಿದ್ದಾರೆ, ಆದರಲ್ಲಿ ಯಾವ ಅಂಶ ಕಡಿಮೆ, ಅದರಿಂದ ಆರೋಗ್ಯದ ಮೇಲೆ ಆಗುವ ಪರಿಣಾಮವೇನು, ಅದಕ್ಕಾಗಿ ಅವರು ಮಾಡುವ ವೆಚ್ಚವೆಷ್ಟು, ಎಂಬು ದನ್ನು ತಿಳಿಯಲು ಒಂದು ಪ್ರಶ್ನಾವಳಿಯನ್ನು ತಯಾರಿಸಿ ಜನರಲ್ಲಿ ಹಂಚ

ಲಾಯಿತು.

1959ರಲ್ಲಿ ಆಹಾರ ಪದಾರ್ಥಗಳ ಬೆಲೆಗಳನ್ನು ಕುರಿತು ಪರಿಶೀಲನೆ ಮಾಡಲು ಬಿ. ವಿ. ನಾರಾಯಣರೆಡ್ಡಿಯವರ ಅಧ್ಯಕ್ಷತೆಯಲ್ಲಿ ರಚಿತವಾದ ಸಮಿತಿ ತನ್ನ ವರದಿಯನ್ನು ಸಲ್ಲಿಸಿತು.

ಐದುವರ್ಷಕ್ಕೊಂದು ಬಾರಿ ಕೇಂದ್ರ ಮತ್ತು ರಾಜ್ಯಗಳ ನಡುವೆ ಹಣ ಕಾಸು ವಿಭಾಗವನ್ನು ಕುರಿತು ಸಲಹೆ ಮಾಡಲು ರಾಷ್ಟ್ರಾಧ್ಯಕ್ಷರು ನೇಮಿಸುವ ಸಮಿತಿಗೆ ಗೋಖಲೆ ಸಂಸ್ಥೆ ತನ್ನ ಅಭಿಪ್ರಾಯಗಳನ್ನು ತಿಳಿಸುತ್ತಲೇ ಬಂದಿದೆ. ಸರಕಾರಗಳ ಖರ್ಚು ತಗ್ಗಬೇಕು, ಅವರು ಮಾಡುವ ಸಾಲಗಳಿಗೆ ಶಾಸನ ಸಂಸ್ಥೆಗಳು ಒಂದು ಮಿತಿಯನ್ನು ಗೊತ್ತುಮಾಡಬೇಕು, ಯೋಜನಾ ಆಯೋಗವು ರಾಜ್ಯಗಳಿಗೆ ಕೊಡುವ ಹಣದ ಮೊತ್ತವೂ ವಿತ್ತ ಆಯೋಗದ ಪರಿಶೀಲನೆಯೊಳಗೆ ಬರಬೇಕು, ಸಾರ್ವಜನಿಕ ಖರ್ಚಿನ ಬಗೆಯನ್ನು ಅನವರತ ಅಧ್ಯಯನ ಮಾಡಿ ಎಚ್ಚರಿಕೆ ಹೇಳಲು ಒಂದು ಪ್ರತ್ಯೇಕ ಸಮಿತಿಯಿರಬೇಕು — ಈ ಮುಂತಾದ ಸಲಹೆಗಳನ್ನು ಆ ಸಮಿತಿ ಮಾಡಿದೆ. ಇದರಲ್ಲಿ ಆಸಕ್ತಿವಹಿಸಿ ಸಮಿತಿಯ ಅಧ್ಯಕ್ಷರಾಗಿದ್ದವರು ಎನ್. ಮಾಧವರಾಯರು.

ಫೆಬ್ರವರಿ 1959ರಲ್ಲಿ ಚನ್ನಪಟ್ಟಣದಲ್ಲಿ ಗೋಖಲೆ ಸಂಸ್ಥೆಯೊಂದು ಪ್ರಾರಂಭವಾಯಿತು. ಅದರ ಉದ್ಘಾಟನೆಯನ್ನು ನೆರವೇರಿಸುತ್ತ ಡಿ ವಿ ಜಿ: "ಪ್ರಥಮವಾಗಿ ಶಾಖೆಯಲ್ಲಿ ಪ್ರತಿ ಭಾನುವಾರ ಯಾವುದಾದರೂ ನಮ್ಮ ಗ್ರಂಥಗಳನ್ನು ಓದಿ ವಿಚಾರವಿನಿಮಯ ಮಾಡಬೇಕೆಂದೂ, 15 ದಿವಸ ಅಥವಾ ತಿಂಗಳಿಗೊಮ್ಮೆ ಪ್ರಾಪಂಚಿಕ ವ್ಯವಹಾರ ವಿಚಾರಗಳಲ್ಲಿ ನುರಿತ ಹಿರಿಯ ಭಾಷಣಕಾರರಿಂದ ಭಾಷಣ ಏರ್ಪಡಿಸಬೇಕೆಂದೂ, ಹದಿನೈದು ದಿನಕ್ಕೊಮ್ಮೆ ಊರಿನ ಭಾಗಗಳನ್ನು ಸಂದರ್ಶಿಸಿ ಅಲ್ಲಿರುವ ಪೌರರ ಕಷ್ಟ ನಿಷ್ಠೂರಗಳನ್ನು ಪುರಸಭೆಗೆ ತಿಳಿಸಬೇಕೆಂದೂ" ಹೇಳಿದರು. ಆ ಶಾಖೆ ವಿ. ವೆಂಕಟಪ್ಪನವರು ಮತ್ತು ಕೆ.ಆರ್. ಗೋಪಾಲಯ್ಯಂಗಾರ್ಯರ ಶ್ರದ್ಧೋತ್ಸಾಹಗಳಿಂದ ಹಲವಾರು ವರ್ಷಗಳು ಕೆಲಸ ಮಾಡಿತು. ಹಾಗೆಯೇ ಬೆಂಗಳೂರಿನ ಮಲ್ಲೇಶ್ವರದಲ್ಲೂ ಗೋಖಲೆ ಸಂಸ್ಥೆಯ ಶಾಖೆಯೊಂದು ಹೆಚ್. ರಂಗಾಚಾರ್ಯರ ನೇತೃತ್ವದಲ್ಲಿ ನಡೆಯಿತು. ಈಗ ಎಸ್. ಜಿ. ರಾಮಚಂದ್ರ ಅವರು ಅದರಲ್ಲಿ ಆಸಕ್ತಿ ವಹಿಸಿ ನಡಸಿಕೊಂಡು ಹೋಗುತ್ತಿದ್ದಾರೆ.

ಪತ್ರಿಕೆಯಿಲ್ಲದೆ ಪ್ರಕಟನೆಗಳಿಲ್ಲದೆ ಡಿ ವಿ ಜಿ ಇಲ್ಲ. ಗೋಖಲೆ ಸಂಸ್ಥೆಯ ಅಂಗವಾಗಿ ಅವರು ಜೀವನಪರ್ಯಂತ 'ಪಬ್ಲಿಕ್ ಅಫೇರ್ಸ್' ಎಂಬ ಇಂಗ್ಲಿಷ್

ಪತ್ರಿಕೆಯನ್ನು ನಡಸುತ್ತಿದ್ದರು. ಕೆಲವು ಕಾಲ 'ಸಾರ್ವಜನಿಕ' ಎಂಬ ಕನ್ನಡ ಪತ್ರಿಕೆಯೂ ಬರುತ್ತಿತ್ತು. "Public Affairs Pamphlets" ಎಂದು ಇಂಗ್ಲಿಷಿನಲ್ಲೂ 'ಜನೋಪಯುಕ್ತ ಗ್ರಂಥಮಾಲೆ' ಎಂದು ಕನ್ನಡದಲ್ಲೂ ಸಂಸ್ಥೆಯಲ್ಲಾದ ಉಪನ್ಯಾಸಗಳು ಪ್ರಕಟವಾಗಿವೆ.

ಸಂಸ್ಥೆಯ ಮಿತ್ರವರ್ಗವನ್ನೂ ಸದಸ್ಯವರ್ಗವನ್ನೂ ಹೆಚ್ಚಿಸುವುದರಲ್ಲೇ ಗಮನವಿಟ್ಟಿದ್ದವರು ಡಿ ವಿ ಜಿ. ಆದಕ್ಕೆ ಸದಸ್ಯರು ಕರ್ನಾಟಕದಲ್ಲೇ ಅಲ್ಲದೆ ದೇಶದ ಎಲ್ಲೆಡೆಯೂ ಎಲ್ಲ ಬಗೆಯ ಜನವೂ ಇದ್ದಾರೆ.

ಆದಕ್ಕೆ ಬಂದ ಸಹಾಯವೂ ಧಾರಾಳವಾದದ್ದೇ. 1956ರಲ್ಲಿ ಕಟ್ಟಡ ಕಟ್ಟಲು ಹಣ ಸಾಲದಾದಾಗ ಸಹಾಯಕ್ಕೆ ಬಂದವರು ಎಂ.ಎಸ್. ಸುಬ್ಬುಲಕ್ಷ್ಮಿಯವರು ಮತ್ತು ಟಿ. ಸದಾಶಿವಂ ಅವರು. 13–4–1958ರಲ್ಲಿ ಸುಬ್ಬುಲಕ್ಷ್ಮಿಯವರ ಸಹಾಯಾರ್ಥ ಸಂಗೀತ ಕಛೇರಿಯಿಂದ 20,000 ರೂಪಾಯಿಗಳಷ್ಟು ಸಂಸ್ಥೆಗೆ ಬಂತು. 1965ರಲ್ಲಿ ಡಿ ವಿ ಜಿ ಒಂದು 5,000 ರೂಪಾಯಿಗಳು ತಮಗೆ ಬಂದರೆ ತಾವು ಸಂಸ್ಥೆಯ ಕೆಲಸವನ್ನು ನಿಶ್ಚಿಂತೆಯಿಂದ ನಡಸುವುದಾಗಿ ಹೇಳಿದಾಗ ಸದಾಶಿವಂ ಅವರು "ಏನು ಗುಂಡಪ್ಪಾ, ನಿಮಗೆ ಹಣ ಕೇಳಲೂ ಬರುವುದಿಲ್ಲವಲ್ಲ! 50,000 ರೂಪಾಯಿ ಕೇಳಬೇಕು. ಪ್ರಯತ್ನಪಡೋಣ" ಎಂದು ಹೇಳಿ, ಸಂಸ್ಥೆಯ "ಜೂಬಿಲಿ" ಉತ್ಸವವನ್ನು ವಿಜೃಂಭಣೆಯಿಂದ ಆಚರಿಸಿ, 50,000 ರೂಪಾಯಿಗಳಿಗಿಂತ ಹೆಚ್ಚಾಗಿಯೇ ಸಂಸ್ಥೆಗೆ ಕೊಟ್ಟರು. ಆ ಉತ್ಸವಕ್ಕೆ ಅಧ್ಯಕ್ಷತೆ ವಹಿಸಿದ್ದ ಶ್ರೀ ಜಯಚಾಮರಾಜ ಒಡೆಯರವರು ಗೋಖಲೆ ಸಂಸ್ಥೆಯೆಂದರೆ ಗುಂಡಪ್ಪನವರು, ಗುಂಡಪ್ಪನವರೆಂದರೆ ಗೋಖಲೆ ಸಂಸ್ಥೆ ಎಂದು ಹೇಳಿ "Dr. Gundappa's singleness of purpose and determination, his clarity of vision, his sincerity and his inimitable gift of logic and expression have all been given in abundant measure for the development of the Institute" ಎಂದು ಗೋಖಲೆ ಸಂಸ್ಥೆಗಾಗಿ ಡಿ ವಿ ಜಿ ಪಡುತ್ತಿರುವ ಶ್ರಮವನ್ನು ಪ್ರಶಂಸಿದ್ದೇ ಅಲ್ಲದೆ ಸಂಸ್ಥೆಗೆ ಐದುಸಾವಿರ ರೂಪಾಯಿಗಳನ್ನು ಕೊಟ್ಟರು.

ಡಿ ವಿ ಜಿ ಯವರಲ್ಲಿ ತಮಗಿದ್ದ ಭಕ್ತಿ ವಿಶ್ವಾಸಗಳ ದೆಸೆಯಿಂದ ಎಂ.ವಿ. ಕೃಷ್ಣಮೂರ್ತಿಯವರು ಅವಿರತವಾಗಿ ಶ್ರಮಿಸಿ 1970ರಲ್ಲಿ ಡಿ ವಿ ಜಿ ಯವರಿಗೆ ದೇಶದ ಮಹಾಜನರಿಂದ 1 ಲಕ್ಷ ರೂಪಾಯಿಗಳ ನಿಧಿಯನ್ನು ಕೊಡಿಸುವುದಕ್ಕೆ ಕಾರಣರಾದರು. ಆ ಹಣವೆಲ್ಲವನ್ನೂ ಡಿ ವಿ ಜಿ ಗೋಖಲೆ ಸಂಸ್ಥೆಗೇ ಕೊಟ್ಟು

ಬಿಟ್ಟರು. 18-1-1970ರಂದು ಬೆಂಗಳೂರಿನ ಪುಟ್ಟಣಶೆಟ್ಟರ ನಗರಭವನ ದಲ್ಲಿ ನಡೆದ ಸಮಾರಂಭ, ಸಂಜೆ ಅಲ್ಲೇ ಆದ ಸುಬ್ಬುಲಕ್ಷ್ಮಿಯವರ ಸಂಗೀತ, ಬೆಂಗಳೂರಿನಲ್ಲೇ ಅವಿಸ್ಮರಣೀಯವಾದ ಉತ್ಸವಗಳು. ಆಗ ಬಂದ ಹಣದಿಂದ ಡಿ ವಿ ಜಿ ಯವರ ಉಪಯೋಗಕ್ಕಾಗಿ, ಸಂಸ್ಥೆಗಾಗಿ, ಅವರು ಒಂದು 'ಕಾರ'ನ್ನು ಕೊಂಡುಕೊಳ್ಳಬೇಕೆಂದು ಎಂ. ವಿ. ಕೃಷ್ಣಮೂರ್ತಿಯವರು ಸಲಹೆ ಮಾಡಲು, ತಮಗೆ ಜಟಕಾವೋ ಆಟೋರಿಕ್ಷಾವೋ ಇರುವವರೆಗೂ ಬೇರೆ ವಾಹನ ಬೇಕಿಲ್ಲ ವೆಂದು ಡಿ ವಿ ಜಿ ನಿರಾಕರಿಸಿಬಿಟ್ಟರು.

ಹೀಗೆ ದಿನದ 24 ಘಂಟೆಗಳೂ, ತಿಂಗಳಿನ ಮೂವತ್ತು ದಿವಸಗಳೂ ವರ್ಷದ 365 ದಿನಗಳೂ ಡಿ ವಿ ಜಿ ಯವರು ಚಿಂತಿಸುತ್ತಿದ್ದ ಏಕೈಕ ವಿಷಯ ಗೋಖಲೆ ಸಂಸ್ಥೆಯ ಕರ್ತವ್ಯ, ಅದರ ಬೆಳವಣಿಗೆ, ಅದಕ್ಕೆ ಜನದ ಬೆಂಬಲವನ್ನು ಸಂಪಾದಿಸುವುದು, ಅದನ್ನು ದೇಶದ ಕೆಲಸಗಳಿಗೆ ಉಪಯೋಗವನ್ನಾಗಿ ಮಾಡು ವುದೇ ಆಗಿತ್ತು. ಅವರ ಬುದ್ಧಿಶಕ್ತಿ, ದೇಹಬಲ, ಅವರ ಸ್ನೇಹ, ಪ್ರಭಾವ, ಅವರ ಹಣ, ಅವರ ಗ್ರಂಥಗಳು, ಅವರ ಅಮೂಲ್ಯವಾದ ಕಾಲ, ಅವರ ಚಿಂತನೆ — ಸರ್ವಸ್ವವನ್ನೂ ಅವರು ಗೋಖಲೆ ಸಂಸ್ಥೆಗೇ ಧಾರೆಯೆರೆದರು.

ತಮ್ಮನ್ನು ಕಾಣಲು ಬಂದವರನ್ನು ಗೋಖಲೆ ಸಂಸ್ಥೆಗೂ ಭೇಟಿ ಕೊಡಬೇಕೆಂದು ಹೇಳುತ್ತಿದ್ದುದರ ಜೊತೆಗೆ ಅಲ್ಲಿ ಉಪನ್ಯಾಸ ಕೊಡಲು, ಸಂಸ್ಥೆಯ ಸದಸ್ಯರನ್ನು ಪರಿಚಯ ಮಾಡಿಕೊಳ್ಳಲು ಆಹ್ವಾನಿಸುತ್ತಿದ್ದರು. ಸಂಸ್ಥೆಯ ಸದಸ್ಯರನ್ನು ಉಪನ್ಯಾಸ ಮುಂತಾದ ಎಲ್ಲ ಕಾರ್ಯಕ್ರಮಗಳಿಗೂ ತಪ್ಪದೆ ಬರಬೇಕೆಂದು ನಿರ್ಬಂಧಪಡಿಸುತ್ತಿದ್ದರು. ಒಮ್ಮೆ ವಿ. ಶ್ರೀಕಂಠಯ್ಯ ಎಂಬ ಸ್ನೇಹಿತರನ್ನು ಕುರಿತು "ನೀನು ಯಾವಾಗಲಾದರೊಮ್ಮೆ ಸಂಸ್ಥೆಗೆ ಬಂದು ಗೋಡೆಯನ್ನಾದರೂ ಮುಟ್ಟಿ ಇದು ನನಗೆ ಸೇರಿದ್ದು ಎಂದು ಹೇಳಿ ಯಾದರೂ ಹೋಗು" ಎಂದು ಹೇಳಿದರು.

ಹೀಗೆ ಒಂದು ಮಗುವನ್ನು ಪ್ರೀತಿಯಿಂದ ಜಾಗರೂಕತೆಯಿಂದ ಅಕ್ಕರೆಯಿಂದ ಬೆಳೆಸುವಂತೆ ಡಿ ವಿ ಜಿ ಸಂಸ್ಥೆಯನ್ನು ಬೆಳೆಸಿದರು.

1950ರಲ್ಲಿ 15ನೆಯ ಆಗಸ್ಟ್ ಸ್ವಾತಂತ್ರ್ಯೋತ್ಸವದ ದಿನ. ಆಗ ಶಾಸನ ಸಭೆಯ ಅಧ್ಯಕ್ಷರಾಗಿದ್ದ ವಿ. ವೆಂಕಟಪ್ಪನವರು ಹೇಳಿದ ಮಾತುಗಳು ಗಮನಾರ್ಹವಾಗಿವೆ.

"ನಮಗೆ ಸ್ವರಾಜ್ಯ ಲಭಿಸಿದುದಕ್ಕೆ ಬಹಳ ಮುಂಚಿತವಾಗಿಯೇ— ಇದನ್ನೂ ಅವರ ಮುಂಗಾಣ್ಕೆ ಎನ್ನಲೆ, ಕುಶಾಗ್ರ ಬುದ್ಧಿಯೆನ್ನಲೆ ?-ಶ್ರೀಮಾ

ಡಿ. ವಿ. ಗುಂಡಪ್ಪನವರು ಪ್ರಜಾಪ್ರಭುತ್ವದ ನಾಗರಿಕ ಹಕ್ಕು ಬಾಧ್ಯತೆಗಳನ್ನು ಸೂಕ್ತರೀತಿಯಲ್ಲಿ ನಮ್ಮ ಜನ ಉಪಯೋಗಿಸಿಕೊಳ್ಳಬೇಕೆಂಬ ವಿಚಾರಕ್ಕೆ ಗಮನ ಕೊಟ್ಟಿದ್ದರು. ಸಾರ್ವಜನಿಕರೂ ಮುಖಂಡರೂ ಶಾಸನ ಸಭೆಗಳ ಸದಸ್ಯರಾದ ಪ್ರತಿನಿಧಿಗಳೂ ಶಾಸನ ಸಭೆಗಳು ವಹಿಸಿಕೊಟ್ಟ ಅಧಿಕಾರದಂತೆ ಕರ್ತವ್ಯವನ್ನು ನಿರ್ವಹಿಸುವ ಸಚಿವ ಮಂಡಲಿಯವರೂ—ಮನಸ್ಸಿಗೆ ಎಷ್ಟೇ ಹಿತಕರವಾಗಿದ್ದರೂ—ಕೇವಲ ನೂತನವಾದ ಒಂದು ಪರಿಸ್ಥಿತಿಯಲ್ಲಿ ಮುಂದೆ ಪ್ರಜಾಪ್ರಭುತ್ವ ಸಂಸ್ಥೆಗಳನ್ನು ನಡೆಸಲು ಅಸಮರ್ಥರಾಗುವ ಸನ್ನಿವೇಶ ವುಂಟಾಗಬಹುದೆಂದು ಗುಂಡಪ್ಪನವರು ಅಷ್ಟು ಹಿಂದೆಯೇ ಭಾವಿಸಿದ್ದರು. ಪ್ರತಿಯೊಬ್ಬರೂ ತಮ್ಮ ಪಾಡಿಗೆ ಬಂದ ಕೆಲಸದಲ್ಲಿ ತಮ್ಮ ಕರ್ತವ್ಯವನ್ನು ನಿರ್ವಹಿಸುವುದಕ್ಕೆ ಅವಶ್ಯವಾದ ತರಬೇತನ್ನೂ ಸಿದ್ಧತೆಯನ್ನೂ ಪಡೆಯುವುದು ಅಗತ್ಯವೆಂದೆಣಿಸಿದ್ದರು. ಈ ಸಾರ್ವಜನಿಕ ವಿಚಾರ ಸಂಸ್ಥೆಯು ಏರ್ಪಟ್ಟಾಗ ನಮ್ಮ ದೇಶಕ್ಕೆ ಸ್ವಾತಂತ್ರ್ಯವು ಲಭಿಸುವುದು ಇನ್ನೂ ಬಹು ದೂರವೆಂಬಂತೆ ಇತ್ತು. ಅಷ್ಟು ಮುಂಚಿತವಾಗಿ ರೂಪಿತವಾದ ಈ ಸಂಸ್ಥೆಯ ಧ್ಯೇಯುಗಳನ್ನೂ ಉದ್ದೇಶಗಳನ್ನೂ ಇಂದು ಓದಿ ನೋಡಿದರೆ, ಅವುಗಳನ್ನು ರೂಪಿಸಿದವರ ಮುಂದಾಲೋಚನೆಯೂ ಸಾಮರ್ಥ್ಯವೂ ಎಷ್ಟು ಅದ್ಭುತವಾದುದೆಂಬುದು ತಿಳಿದುಬರುತ್ತದೆ."

ಜೀವ ಹಸನಾಗುವುದಕ್ಕೆ ಸಾಹಿತ್ಯ ವ್ಯಾಸಂಗ, ಜೀವ ವಿಸ್ತರಣಾಭ್ಯಾಸಕ್ಕೆ ಸಾರ್ವಜನಿಕ ವಿಚಾರ, ವಿಚಾರ ಪ್ರಚೋದಕ ಶಕ್ತಿಗಾಗಿ ವಿಜ್ಞಾನ, ಜೀವೋ ತ್ಕರ್ಷಕ್ಕಾಗಿ ತತ್ತ್ವಾಲೋಚನೆ,—ಹೀಗೆ ಈ ಸಂಸ್ಥೆ ವ್ಯಕ್ತಿ ಮನುಷ್ಯನ ಹಿತಕ್ಕಾಗಿ, ದೇಶದ ಹಿತಕ್ಕಾಗಿ ಕೆಲಸ ಮಾಡುವಂತೆ ನಿಯೋಜಿಸಿದ್ದಾರೆ ಡಿ ವಿ ಜಿ.

ಡಿ ವಿ ಜಿ ಯವರ ಕವಿದೃಷ್ಟಿ

1908 ರಿಂದ 1975 ರ ವರೆಗೆ ಡಿ ವಿ ಜಿಯವರ ಬರವಣಿಗೆ—ಇಂಗ್ಲಿಷಿನಲ್ಲಿ, ಕನ್ನಡದಲ್ಲಿ, ಸಂಸ್ಕೃತದಲ್ಲಿ—ಅನವರತವಾಗಿ ಅವಿಶ್ರಾಂತವಾಗಿ ಸಾಗಿ ಬಂದಿದೆ.

ಅವರು 'ಕರ್ನಾಟಕ' 'ಇಂಡಿಯನ್ ರೆವ್ಯೂ ಆಫ್ ರೆವ್ಯೂಸ್' ಮತ್ತು 'ಪಬ್ಲಿಕ್ ಅಫೇರ್ಸ್' ಪತ್ರಿಕೆಗಳಲ್ಲಿ ಇಂಗ್ಲಿಷಿನಲ್ಲಿ, ಸಾಹಿತ್ಯದಮಟ್ಟಕ್ಕೆ ಬರುವ, ಅನೇಕ ವಿಷಯಗಳನ್ನು ಕುರಿತ ಲೇಖನಗಳನ್ನು ಬರೆದಿದ್ದಾರೆ. ಕವಿಗಳನ್ನು ಕುರಿತು, ರಾಜಕೀಯವನ್ನು ಕುರಿತ, ಪ್ರಜಾಪ್ರಮುಖರನ್ನು ಕುರಿತು, ಸಮಾಜ, ರಾಜಕೀಯ ಸುಧಾರಣೆಗಳನ್ನು ಕುರಿತು ಬರೆದಿದ್ದಾರೆ. ಅವರು ಸಿದ್ಧಿಸಿಕೊಂಡಿದ್ದ ಇಂಗ್ಲಿಷಿನ ಶೈಲಿ ಎಷ್ಟು ಓಜಸ್ವಿಯಾದದ್ದು, ಪರಿಣಾಮಕಾರಿಯಾದದ್ದು ಮನೋಜ್ಞವಾದದ್ದು ಎಂಬುದು ಈ ಹಿಂದೆ ಉದ್ಧರಿಸಿರುವ ಭಾಗಗಳಿಂದ ತಿಳಿದುಬಂದಿರಬಹುದು. ಅವರ ಇಂಗ್ಲಿಷನ್ನು ಕುರಿತು ಎಸ್. ಎಂ. ಫ್ರೇಸರ್ ಮಿರ್ಜಾರವರಿಗೆ ಬರೆದ ಪತ್ರದಲ್ಲಿ 'How well D. V. Gundappa (who ever he may be) writes' ಎಂದಿದ್ದಾರೆ. ಅವರ ಇಂಗ್ಲಿಷ್ ಬರಹಗಳ ಒಂದು ಸಂಕಲನ ಬಹು ಉಪಯೋಗವಾಗುವುದರಲ್ಲಿ ಸಂದೇಹವಿಲ್ಲ.

ಕನ್ನಡದಲ್ಲಿ ಡಿ ವಿ ಜಿ 'ಸುಮತಿ ಗ್ರಂಥ ಮಾಲೆ'ಯನ್ನು ಪ್ರಾರಂಭಿಸಿದ್ದನ್ನು ಆಗಲೇ ನೋಡಿದ್ದೇವೆ. ಅನಂತರ 1925 ರ ವರೆಗೆ ಅವರಿಂದ ಬಂದ ಗ್ರಂಥಗಳು, 'ವಸಂತ ಕುಸುಮಾಂಜಲಿ' ಮತ್ತು 'ನಿವೇದನ' ಪದ್ಯಸಂಗ್ರಹಗಳು, 'ವಿದ್ಯಾರಣ್ಯರು ಮತ್ತು ಅವರ ಸಮಕಾಲೀನರ'ನ್ನು ಕುರಿತ ಮೂರು ಗ್ರಂಥಗಳು. ಇದಾದ ಮೇಲೆ ಸುಮಾರು 18–20 ವರ್ಷಗಳ ಕಾಲ ಪದ್ಯ ಸಾಹಿತ್ಯ ಯಾವುದೂ ಬರಲಿಲ್ಲವೆಂದೇ ಹೇಳಬೇಕು. ಆದರೆ ಅವರು ಆಗಾಗ ಬರೆದ, ಪ್ರಕಟಪಡಿಸದಿದ್ದ, ಕವನಗಳು ಮುಂದೆ 'ಕೇತಕೀ ವನ' ಸಂಗ್ರಹದಲ್ಲಿ ಬಂದಿವೆ. ಆ ಕಾಲದಲ್ಲಿ ಅವರು ಮಾಡಿದ ಮುಖ್ಯವಾದ ಸಾಹಿತ್ಯಕಾರ್ಯ 'ಮ್ಯಾಕ್‌ಬೆತ್' ನಾಟಕದ, ಉಮರನ ರುಬಾಯತ್‌ಗಳ ಭಾಷಾಂತರ, 'ಹ್ಯಾಮ್‌ಲೆಟ್' ನಾಟಕವನ್ನು ಕನ್ನಡಿಸಲು ಪ್ರಾರಂಭ. ಮಿಕ್ಕೆಲ್ಲವೂ ಉಪ

ನ್ಯಾಸಗಳು : 'ಜೀವನ ಸೌಂದರ್ಯ ಮತ್ತು ಸಾಹಿತ್ಯ' ಮತ್ತು 'ಸಾಹಿತ್ಯ ಶಕ್ತಿ' ಇವುಗಳಲ್ಲಿ ಸೇರಿಸಲ್ಪಟ್ಟಿರುವವು.

ಈ ಕಾಲದಲ್ಲಿ ಸಾಹಿತ್ಯ ರಚನೆಯನ್ನು ಕುರಿತು ಚಿಂತಿಸಿ ತಮ್ಮ ಕರ್ತವ್ಯದ ಬಗ್ಗೆ ಒಂದು ತೀರ್ಮಾನಕ್ಕೆ ಬಂದದ್ದೇ ಅವರ ಸಾಹಿತ್ಯ ವಿಶಿಷ್ಟತೆಗೆ ಕಾರಣ ವಾಗಿದ್ದಿರಬಹುದೆಂದು ತೋರುತ್ತದೆ.

"ನಾನು ಮಾಡಿದೆನೆಂಬ ಸಾಹಿತ್ಯ ವಾಸ್ತವವಾಗಿ ನಾನು ಮಾಡಬೇಕು ಎಂದು ಹೊರಟು ಆದದ್ದಲ್ಲ. ಅದು ಹೇಗೋ ಸ್ವಾಭಾವಿಕವಾಗಿ ಆದದ್ದು. ಇಲ್ಲಿ ಸಾಹಿತ್ಯ ಎಂದರೆ ಮನುಷ್ಯನ ಅಂತರಂಗ ಜೀವನಕ್ಕೆ ಸಂಬಂಧಪಟ್ಟದ್ದು. ಅದು ಬಹುಕಾಲ ಸ್ವಾರಸ್ಯವುಳ್ಳದ್ದಾದರೆ ಸಾಹಿತ್ಯಕ್ಕೆ ಸಾಮಗ್ರಿಯಾಗುತ್ತದೆ. ಅನಂತರ ಅದು ಸಾಹಿತ್ಯವಾಗಿ ಉಳಿಯುತ್ತದೆ" ಎಂದು ತಮ್ಮ ಸಾಹಿತ್ಯ ವ್ಯವಸಾಯವನ್ನು ಕುರಿತು ಡಿ ವಿ ಜಿ ವಿವರಣೆ ಕೊಟ್ಟಿದ್ದಾರೆ.

ಅವರು ಇಟ್ಟುಕೊಂಡ ಧ್ಯೇಯ ಇದು : "ಯಾವ ತಿಳಿವಳಿಕೆ ನಮ್ಮ ಜನಕ್ಕಿದ್ದರೆ ಒಳ್ಳೆಯದಾದೀತೆಂದು ನನಗನ್ನಿಸಿತೋ ಅಂಥ ತಿಳಿವಳಿಕೆಯನ್ನು ನಾನು ಸಂಪಾದಿಸಿಕೊಂಡು ಇತರರಿಗೆ ತಿಳಿಯಪಡಿಸಬೇಕೆಂಬುದೂ, ಯಾವ ಒಂದು ಸೊಗಸನ್ನು ನಾನು ಅನುಭವಿಸಿದಾಗ ಅದನ್ನು ಇತರರೂ ಅನುಭವಿಸಿ ಯಾರೆಂದು ನನಗನ್ನಿಸಿತೋ ಅಂಥ ಸೊಗಸನ್ನು ತೋರಿಸುವುದೂ ನನ್ನ ಎಲ್ಲ ಬರವಣಿಗೆಯಲ್ಲೂ ಮಾತಿನಲ್ಲೂ ಇರುವ ತಾತ್ಪರ್ಯ."

ಈ ಮನೋಭಾವದಿಂದ ಅವರು, ಜೀವನ ಸೊಗಸಾಗಬೇಕಾದರೆ, ಹಸ ನಾಗಬೇಕಾದರೆ, ಸಾರ್ಥಕವಾಗಬೇಕಾದರೆ ಏನು ಮಾಡಬೇಕು, ಹೇಗೆ ಜೀವನ ನಡಸಬೇಕು ಎಂಬುದನ್ನು ತಾವು ಹುಡುಕಿಕಂಡುಕೊಂಡು ಇತರರಿಗೆ ತಿಳಿಯ ಹೇಳಿದರು. ಈ ಕಾರಣದಿಂದಲೇ "ಜೀವನ" ಎಂಬ ಮಾತು ಅವರ ಗ್ರಂಥ ಗಳಲ್ಲಿ ಎದ್ದು ಕಾಣುತ್ತದೆ. "ಜೀವನ ಸೌಂದರ್ಯ ಮತ್ತು ಸಾಹಿತ್ಯ" "ಜೀವನ ಧರ್ಮಯೋಗ" "ಬಾಳಿಗೊಂದು ನಂಬಿಕೆ" ಮತ್ತು ಅವರು ನಡಸುತ್ತಿದ್ದ ಪತ್ರಿಕೆಯ ಹೆಸರೂ "ಕರ್ಣಾಟಕ ಜನಜೀವನ ಮತ್ತು ಅರ್ಥಸಾಧಕ ಪತ್ರಿಕೆ."

ಅವರು ಮುಖ್ಯವಾಗಿ ದೇಶಭಕ್ತರು, ಪ್ರಚಾರಕರು. ಅವರು ಸಾರ್ವ ಜನಿಕ ಕ್ಷೇತ್ರಕ್ಕೇ ಹೆಚ್ಚು ಸಮಯ ವಿನಿಯೋಗ ಮಾಡಿದರು ಎಂಬ ಹಿನ್ನೆಲೆ ಯಲ್ಲಿ ನೋಡಿದಾಗ ಸಾಹಿತ್ಯವೆನಿಸಿಕೊಳ್ಳುವಂಥ ಬರವಣಿಗೆ ಇನ್ನೂ ಹೆಚ್ಚಾಗಿ ಅವರಿಂದ ಏಕೆ ಬರಲಿಲ್ಲ ಎಂಬುದು ವ್ಯಕ್ತವಾಗುತ್ತದೆ. ಇನ್ನೂ ಒಂದು ಮಾತು ಹೇಳಬೇಕೆಂದರೆ ಇಷ್ಟು "ಸಾಹಿತ್ಯ"ವಾದರೂ, ಅಂಥ ಸಾರ್ವಜನಿಕ

ಜಂಜಾಟದಲ್ಲಿದ್ದ ವ್ಯಕ್ತಿಯಿಂದ ಹೇಗೆ ಬಂತು ಎಂದು ಆಶ್ಚರ್ಯವೂ ಆಗುತ್ತದೆ. ಆದರಿಂದ ಅವರ ಕಾವ್ಯರಚನಾ ಪ್ರತಿಭೆ ಮತ್ತು ಕಾವ್ಯರಚನಾ ಕುತೂಹಲ ಎಷ್ಟರಮಟ್ಟಿನದು ಎಂದೂ ಅರ್ಥವಾಗುತ್ತದೆ.

'ಕೇತಕೀ ವನ' ಪದ್ಯ ಸಂಗ್ರಹದ ಮುನ್ನುಡಿಯಲ್ಲಿ ಡಿ ವಿ ಜಿ "ನನಗೆ ಓದಲಿಕ್ಕೂ ಯೋಚಿಸಲಿಕ್ಕೂ ಕೊಂಚ-ಕೊಂಚವಾಗಿಯಾದರೂ ಬಿಡುವು ದೊರೆಯುತ್ತಿದ್ದ ಕಾಲವೊಂದಿತ್ತು. ಆ ಕಾಲದಲ್ಲಿ ಆಗಾಗ ಮನಸ್ಸಿಗೆ ಭಾವನೆಗಳು ಬರುತ್ತಿದ್ದದ್ದೂ ಉಂಟು. ಅವು ಬಂದಾಗ ಅವು ಹಾರಿಹೋಗುವುದಕ್ಕೆ ಮುನ್ನ ಅವುಗಳನ್ನು ಆಗ ತೋಚಿದ ಮಾತುಗಳಲ್ಲಿ, ಆಗ ಕೈಗೆ ಸಿಕ್ಕಿದ ಚೀಟಿಗಳಲ್ಲಿ ಗುರುತು ಹಾಕುತ್ತಿದ್ದದ್ದುಂಟು. ಅಂಥ ಚೀಟಿಗಳು ಈ ಪುಸ್ತಕವಾಗಿವೆ" ಎಂದಿದ್ದಾರೆ.

ಸಾರ್ವಜನಿಕ ಜೀವನದ ವ್ಯವಹಾರಗಳು ಅವರ ಪದ್ಯರಚನೆಯ ಕೆಲಸಕ್ಕೆ ಅಡ್ಡಿ ಬಂದಿತೆಂಬುದರಲ್ಲಿ ಸಂದೇಹವಿಲ್ಲ.

ಅರಿವಿನ ಒರೆಗಲ್ಲು ಬರವಣಿಗೆಯಲ್ಲವೆ! ಆದ್ದರಿಂದ ಡಿ ವಿ ಜಿ ತಮ್ಮ ತಿಳಿವಳಿಕೆಯನ್ನು ತಾವೇ ಪರೀಕ್ಷಿಸಿ ನೋಡಿಕೊಳ್ಳಲು ಬರೆಯುತ್ತಿದ್ದರು. ಇದಕ್ಕೆ ಅವರಿಗೆ ಮೇಲುಪಂಕ್ತಿ ಸುರೇಶ್ವರಾಚಾರ್ಯರು 'ನೈಷ್ಕರ್ಮ ಸಿದ್ಧಿ' ಗ್ರಂಥದಲ್ಲಿ ಹೇಳಿರುವ ವಾಕ್ಯ :

"ನ ಖ್ಯಾತಿ ಲಾಭ ಪೂಜಾರ್ಥಂ ಗ್ರಂಥೋಽಸ್ಮಾಭಿ ರುದೀರ್ಯತೇ ।
ಸ್ವಬೋಧ ಪರಿಶುಧ್ಯರ್ಥಂ ಬ್ರಹ್ಮವಿನ್ನಿಕಷಾಷ್ಮಸು ॥

(ಕೀರ್ತಿ ಹಣ, ಬಹುಮಾನ ಮೊದಲಾದ ಪ್ರತಿಫಲಗಳಿಗೋಸ್ಕರ ನಾವು ಈ ಗ್ರಂಥವನ್ನು ಬರೆಯುತ್ತಿಲ್ಲ. ಈ ಗ್ರಂಥದ ವಿಷಯವನ್ನು ಕುರಿತು ನಾವು ತಿಳಿದುಕೊಂಡಿರುವುದು ಸರಿಯಾದ ತಿಳಿವಳಿಕೆಯೆ?—ಎಂಬುದನ್ನು ಬ್ರಹ್ಮವೇತ್ತರ ವಿಮರ್ಶೆಯೆಂಬ ಒರೆಗಲ್ಲಿನಲ್ಲಿ ಸ್ವರ್ಣ ಪರೀಕ್ಷೆ ಮಾಡಿಸಿ ನೋಡುವುದೇ ಇದರ ಉದ್ದೇಶ.)

"ಲೇಖಕನಿಗೆ ಹಿಂದೆ ತೋರದಿದ್ದ ಶಂಕೆಗಳೂ, ಸಂದೇಹಗಳೂ, ಹಾಗೆಯೇ ಹೊಸ ಹೊಸ ಅರ್ಥಗಳೂ ಅಭಿಪ್ರಾಯಗಳೂ, ಲೇಖನಿ ಹಿಡಿದು ಕುಳಿತಾಗ ಅವನಿಗೆ ತೋರಿಬರುತ್ತವೆ. ಅವುಗಳ ಪರ್ಯಾಲೋಚನೆಯಲ್ಲಿ ಅಭಿಪ್ರಾಯಶೋಧನೆಯಾಗುತ್ತದೆ. ಅರ್ಥ ದೃಢಪಡುತ್ತದೆ, ನಿರೂಪಣೆ ಪರಿಷ್ಕೃತವಾಗುತ್ತದೆ"—ಎಂದು ಅವರು ಪುರುಷಸೂಕ್ತ ಗ್ರಂಥದ 'ಅರಿಕೆ'ಯಲ್ಲಿ ಹೇಳಿಕೊಂಡಿದ್ದಾರೆ.

ಶೋಧಿಸಿದ ಸತ್ಯ, ಪರಿಷ್ಕಾರವಾದ ವಿಷಯ— ಇವುಗಳನ್ನು ಹೇಳುವುದು ಸಾರ್ವಜನಿಕ ಜೀವನದಲ್ಲಿದ್ದ ಅವರಿಗೆ ಅಭ್ಯಾಸವಾಗಿ ಹೋಗಿಬಿಟ್ಟಿತ್ತು. ಡಿ ವಿ ಜಿ ಯವರ ಸಾಹಿತ್ಯವನ್ನು ನೋಡುವಾಗ ಈ ವಿಷಯುವನ್ನು ಗಮನ ದಲ್ಲಿಟ್ಟುಕೊಳ್ಳಬೇಕು.

ಸಾರ್ವಜನಿಕ ಜೀವನ ಕಾವ್ಯರಚನೆಗೆ ಅವರಿಗೆ ಹೆಚ್ಚಿನ ಅವಕಾಶ ಕೊಡದಂತೆ ಮಾಡಿದರೂ ಅದು ಅವರ ಜೀವಕ್ಕೆ ಒಂದು ಸಂಸ್ಕಾರವನ್ನು ಒದಗಿಸಿದೆ. ಅದರಿಂದಾಗಿ ಅವರು ಸೃಷ್ಟಿಸಿದ ಸಾಹಿತ್ಯಕ್ಕೆ ಒಂದು ಬನಿ ಬಂದಿರುವುದನ್ನೂ, ಅದರಲ್ಲಿ ಒಂದು ವಿಶಿಷ್ಟತೆ ಇರುವುದನ್ನೂ ನಾವು ಕಾಣ ಬಹುದು. ಈ ಸಂದರ್ಭದಲ್ಲಿ ದೊಡ್ಡರಂಗೇಗೌಡರು ಡಿ ವಿ ಜಿ ಯವರನ್ನು ಕುರಿತ ಪದ್ಯದಲ್ಲಿ ಬರೆದಿರುವ ಈ ಸಾಲುಗಳನ್ನು ನೋಡಬಹುದು.

"ನೂರು ತೊಂದರೆ ನಡುವೆ ನಕ್ಕವರು
ಚಿಂತನೆ ಮನ ಕುದಿದ ಹಾಗೆಲ್ಲ ಮಂಥನದಿಂದ ಅರಳಿದವರು
ಕನಸಿನ ಕಣಿವೆಯಲ್ಲಿ ತೇಲಲಿಲ್ಲ, ಮಣ್ಣಿನ ಮೇಲೆ ನಡೆದರು."

ಫ್ರಾನ್ಸ್‌ದೇಶದ ಚಿಂತನಾ ಪ್ರಚೋದಕನಾದ ವಾಲ್ಟೇರ್ ಮಹನೀಯ ನನ್ನು ಕುರಿತು ಮಾರ್ಲೆ ಹೇಳಿರುವ ಈ ಮಾತುಗಳು ಸಾಹಿತ್ಯಾಭ್ಯಾಸಿಗಳು ಗಮನಿಸಬೇಕಾದಂಥವು— ಡಿ ವಿ ಜಿ ಯವರ ಸಾಹಿತ್ಯಕೃತಿಗಳನ್ನು ನೋಡು ವಾಗ ಸಹ—

"Voltaire's books would not have been the powers they were, but for this constant desire of his to come into the closest contact with the practcial affairs of the world. He who has never left the life of a recluse, drawing an income from the funds and living in a remote garden, construc-ting past, present and future out of his own conscious-ness, is not qualified either to lead mankind safely, or to think on the course of human affairs correctly. Every page of Voltaire has the bracing air of the life of the world in it, and the instinct which led him to seek the society of the conspicuous actors on the great scene was essentially a right one. The book-writer takes good advan-tage of his opportunity to assure men expressly or by implication that he is their true king, and that the sacred

bard is a mightier man than his hero. Voltaire knew better. Though himself perhaps the most puissant man of letters that ever lived, he rated literature as it ought to be rated, below action, not because written speech is less of a force, but because the speculation and criticism of the literature that substantially influences the world, make far less demand than the actual conduct of great affairs on qualities which are not rare in detail, but are amazingly rare in combination—on temper, foresight, solidity, daring—on strength, in a word, strength of intelligence and strength of character. Gibbon rightly amended his phrase, when he described Boethius not as stooping, but rather as rising, from his life of placid meditation to an active share in the imperial business. That he held this sound opinion is quite as plausible an explanation of Voltaire's anxiety to know persons of station and importance, as the current theory that he was of sycophantic nature. Why he asks, are the ancient historians so full of light ? "It is because the writer had to do with public business ; it is because he could be magistrate, priest, soldier ; and because if he could not rise to the highest functions of the state, he had at least to make himself worthy of them."

"ಸಾಹಿತ್ಯವು ಪ್ರಪಂಚದ ಮಹಾಶಕ್ತಿಗಳಲ್ಲಿ ಒಂದು....ಮಳೆ, ಬಿರುಗಾಳಿ, ಭೂಕಂಪಗಳು ಮನುಷ್ಯನ ಹೊರಗಣ ಪ್ರಕೃತಿಶಕ್ತಿಗಳು. ಸಾಹಿತ್ಯವು ಆದರೊಳಗಣ ಸಹಜ ಶಕ್ತಿ. ಅದು ಪೌರುಷದ ಒಂದು ರೂಪ....ವಾಗ್ದೇವಿ ವೀಣೆ ನುಡಿಸಿ ಕಾಳಿಯಿಂದ ಕರವಾಳವನ್ನಾಡಿಸಿಯಾಳು" ಎಂದು ಸಾರ್ವಜನಿಕ ಜೀವನಕ್ಕೂ ಸಾಹಿತ್ಯಕ್ಕೂ ಇರುವ ಸಂಬಂಧವನ್ನು ಅವರು ಒತ್ತಿ ಹೇಳುತ್ತಿದ್ದರು.

ಕಾವ್ಯವು ಏತಕ್ಕೋಸ್ಕರ ? ಎಂಬ ಪ್ರಶ್ನೆಯನ್ನು ಎತ್ತಿ ಪ್ರಾಚೀನರು ಕಾವ್ಯವು ಯಶಸ್ಸು, ಧನಸಂಪಾದನೆ, ಲೋಕವ್ಯವಹಾರ ಜ್ಞಾನ ಮೊದಲಾದುವು ಕಾವ್ಯದ ಉಪಯೋಗವೆಂದು ಹೇಳಿರುವುದನ್ನು ಗಮನಿಸಿ, ಮಹಾ

ಕವಿಯ ವಿಷಯದಲ್ಲಿ ಇದನ್ನು ಒಪ್ಪಿಕೊಳ್ಳಲಾದೀತೆ ? ಎಂಬ ಸಂದೇಹ ವನ್ನು ವ್ಯಕ್ತಪಡಿಸಿ, ಅದಕ್ಕೆ ತಮ್ಮದೇ ಆದ ಉತ್ತರವೊಂದನ್ನು ಡಿ ವಿ ಜಿ ಹೇಳಿದ್ದಾರೆ: "ಸದ್ಯಃ ಪರನಿರ್ವೃತಿಯೇ, ಕಾಂತಾಸಂಮಿತ ಎಂಬವನ್ನು ಕಾವ್ಯದ ಆನುಷಂಗಿಕ ಪ್ರಯೋಜನಗಳೆಂದು ಕೊಂಚ ಅಂಗೀಕರಿಸಬಹುದು. ಒಂದಾನೊಂದು ಕೆಲಸದಿಂದ ಎರಡು ಬಗೆಯ ಪ್ರಯೋಜನಗಳಾಗಬಹುದು. (೧) ಮುಖ್ಯ (೨) ಗೌಣ. ಅಡಿಗೆಯ ಮುಖ್ಯ ಪ್ರಯೋಜನ ಅನ್ನ. ಅಡಿಗೆಯವನು ಒಲೆಯ ಬಿಸಿಯಿಂದ ಚಳಿ ಹೋಗಲಾಡಿಸಿಕೊಳ್ಳುವುದು ಆನುಷಂಗಿಕ. ಊಟ ಮಾಡಿದವನು ಹಸಿವನ್ನು ಹೋಗಲಾಡಿಸಿಕೊಳ್ಳುವುದು ಮುಖ್ಯ. ತನ್ನ ಬಾಯೊಳಗೆ ಘಮಲಿನ ಸುಖ ಅನುಭವಿಸುವುದು, ತೇಗುವುದು, ಅಪಾನಕ್ರಿಯೆಗಳು ಗೌಣ. ಕಾವ್ಯದಿಂದ ನಿರ್ವೃತಿ, ಉಪದೇಶ — ಇವು ವಾಚಕನಿಗೆ ಗೌಣ. ಮುಖ್ಯವಾದದ್ದು ಕವಿಯ ಆತ್ಮಾಭಿವ್ಯಕ್ತಿ, ಆತ್ಮೋಲ್ಲಾಸ. ಕಾವ್ಯರಚನೆ ಕವಿಯ ಸ್ವಭಾವ. ಬೇರೊಬ್ಬರಿಗೋಸ್ಕರವಲ್ಲ. ಆತನ ಕಣ್ಣಿಗೆ ಸುಂದರ ಸನ್ನಿವೇಶ ಕಾಣಿಸಿತು ; ಸುಂದರವಾದ ಯಾವುದೋ ಆಲೋಚನೆ ಮನಸ್ಸಿಗೆ ಬಂತು; ಆ ಸೌಂದರ್ಯಾನುಭವವನ್ನು ಪೂರ್ತಿಗೊಳಿಸಿಕೊಳ್ಳ ಬೇಕೆಂದು ಕವಿತ್ವ ಹೊರಟಿತು. ಇದರಲ್ಲಿ ಮುಖ್ಯಾಂಶ ಆತನ ನೈಜ, ನೈಜ ಮನೋಲ್ಲಾಸ, ಆತನ ಸ್ವತಂತ್ರ ಆತ್ಮಾಭಿವ್ಯಕ್ತಿ, ಸ್ವತಂತ್ರ ಆತ್ಮ ಸಂತೋಷ."

ಹೀಗೆ ವಿಶ್ಲೇಷಣೆ ಮಾಡಿ ಅವರು, ಕಾವ್ಯ ವಿಷಯದ ಮತ್ತು ಕಾವ್ಯ ಸೃಷ್ಟಿಯ ದೃಷ್ಟಿಯಿಂದ ಕವಿಗಳಲ್ಲಿ ಸ್ವಾನುಭೂತಿ ಪ್ರೇರಿತರೆಂದೂ, ಲೋಕ ಸಹಾನುಭೂತಿ ಪ್ರೇರಿತರೆಂದೂ ಎರಡು ಜಾತಿಗಳು ಏರ್ಪಡುತ್ತವೆ ಎಂದು ವಿಭಾಗಮಾಡಿದ್ದಾರೆ. ಮುಂದೆ ಅದಕ್ಕೆ ಹೀಗೆ ವಿವರಣೆ ನೀಡಿದ್ದಾರೆ : "ಮುಖ್ಯ ವಾಗಿ ತಮ್ಮ ಅಂತರಂಗದ ಭಾವವನ್ನು — ಬಾಹ್ಯ ಪ್ರಪಂಚವನ್ನು ಗಣನೆಗೆ ತೆಗೆದುಕೊಳ್ಳದೆ — ಹೊರಪಡಿಸುವವರು ಮೊದಲನೆಯ ಜಾತಿಯವರು. ತಮ್ಮೊಳಗಿನ ಭಕ್ತಿಯನ್ನು ಅಥವಾ ಅನುರಾಗವನ್ನು ಅಥವಾ ವ್ಯಾಕುಲವನ್ನು ಅಥವಾ ಉಲ್ಲಾಸವನ್ನು ಅಥವಾ ಯಾವುದೋ ಒಂದು ಜೀವಿತ ಸಮಸ್ಯೆ ಯನ್ನು — ಮುಖ್ಯವಾಗಿ ತಮ್ಮ ಆತ್ಮಸಂತುಷ್ಟಿಗಾಗಿ, ತಮ್ಮೆದೆಯ ಹೊರೆ ಯನ್ನಿಳಿಸಿಕೊಳ್ಳುವುದಕ್ಕಾಗಿ — ಹಾಡಿಕೊಳ್ಳುವವರು ಇವರು. ತಮ್ಮ ಅಂತ ರಿಕಾನುಭವಗಳೇನೆಂಬುದರ ಸೆಲೆಯನ್ನು ಅಷ್ಟಾಗಿ ತೋರದೆ ಸಕಲ ಮಾನವರ ಅನುಭವಕ್ಕೂ ದೊರೆಯಬಹುದಾದ ಜೀವಿತ ಚಿತ್ರಗಳನ್ನು ಚಿತ್ರಿಸುವವರು ಎರಡನೆಯ ಜಾತಿಯವರು".

ಡಿ ವಿ ಜಿ ಯವರ ಸಾರ್ವಜನಿಕ ಜೀವನ ಅವರನ್ನು ಮೇಲೆ ಹೇಳಿದ ಎರಡನೆಯ ಬಗೆಯ ಕಾವ್ಯಸೃಷ್ಟಿಗೆ ಕೊಂಡೊಯ್ಯಿತು ಎನ್ನಬಹುದು. ಅವರು ಆಂತರಿಕಾನುಭವಗಳನ್ನು ವ್ಯಕ್ತಪಡಿಸುವ ಕವಿತೆಗಳನ್ನು ಬರೆದಿಲ್ಲವೆಂದಲ್ಲ. 'ನಿವೇದನ', 'ಕೇತಕೀ ವನ'ದಲ್ಲಿ ಅಂಥ ಪದ್ಯಗಳನ್ನು ನಾವು ಕಾಣಬಹುದು. ಆದರೆ ಅವರು ಭಾವ ಸಂಸ್ಕಾರವಾದಿಗಳು ಎಂಬುದನ್ನು ಹಿಂದೆ ನೋಡಿದ್ದೇವೆ.

ಹೃದಯಕೊಪ್ಪುವ ಭಾಷೆ ರಾಗ ಲಯ ವಿಸ್ತಾರ ।
ಪದ ಚರ್ಚೆ ಮತ ವಿಚಾರಕೆ ತಕ್ಕ ಭಾಷೆ ॥
ಹೃದಯ ಮತಿ ಸತಿಪತಿಗಳಂತಿರಲು ಯುಕ್ತವದು ।
ಬದುಕು ರಸತರ್ಕೈಕ್ಯ — ಮಂಕುತಿಮ್ಮ ॥

ಡಿ ವಿ ಜಿ ಯವರ ದೃಷ್ಟಿಯಲ್ಲಿ ಕವಿಗೂ ರಾಜಕನಿಗೂ ವ್ಯತ್ಯಾಸವೇನಿಲ್ಲ.

ಪಾರಿಜಾತವ ಕಂಡು ನಿಡುಸುಯ್ವು, ಪದಗಳಿಂ ।
ಶೌರಿಕಥೆಯನು ಹೆಣೆದು ತೃಪ್ತನಹನು ಕವಿ ॥
ಊರಿನುದ್ಯಾನಕದ ತರಿಸಿ ಬೆಳಸುವ ಕಾರ್ಯ- ।
ಧೀರನು ರಾಜ್ಯಕನು — ಮಂಕುತಿಮ್ಮ ॥

ಇದನ್ನು ವಿವರಿಸುತ್ತ ಅವರು :

"ಲೋಕದಲ್ಲಿ ಇಬ್ಬರ ಹಣೆಯ ಬರಹ ಪ್ರತಿನಿತ್ಯದ ಕೊರಗಾಟ : (೧) ಕಲಾಕರ್ಮಿಯದು (೨) ರಾಜ್ಯ ಕರ್ಮಿಯದು.

ರಾಮಣೀಯಕಮೆಂದು ಬಿಸುಸುಯ್ಯಲದು ಕವಿತೆ ।
ಭೂಮಿಗದನೆಟುಕಿಸುವೆನೆಂಬೆಸಕ ರಾಜ್ಯಕತೆ ॥

ಮನೋನಯನವು ಕಂಡ ಲೋಕಹಿತಕಲ್ಪನೆಗೆ ಬಾಹ್ಯರೂಪವನ್ನು ಕೊಡಲು ಸನ್ನಿವೇಶಾನುಕೂಲತೆಯೂ ಮಾನುಷ ಸಾಧನಗಳೂ ಸಂಪೂರ್ಣವಾಗಿ ಒದಗಿಬಂದವೆಂಬ ಸಂತೃಪ್ತಿಯು ರಾಜ್ಯಮಂತ್ರಿಗೆ ದುರ್ಲಭ. ಮನೋಗುಹೆಯಲ್ಲಿರುವ ಜೀವನಸೌಂದರ್ಯದರ್ಶನಕ್ಕೆ ಬಾಹ್ಯರೂಪ ಕೊಡಲು ಶಬ್ದ ಸಾಮಗ್ರಿಯೂ ಪಾಕ ಸಂಧಾನಗಳೂ ಯಥೇಷ್ಟವಾಗಿ ಬಂದವೆಂಬ ಸಂತೋಷ ಕವಿಗೆ ದುರ್ಲಭ. ಇಬ್ಬರಿಗೂ ಒಳಗಿನದು ನವುರು, ಹೊರಗಿನದು ಒರಟು. ಒಳಗಿನದು ಸ್ವಾಧೀನ, ಹೊರಗಿನದು ಪರಾಧೀನ. ಎರಡೂ ಒಂದಕ್ಕೊಂದು ಅನುವಾಗಿ ಹೊಂದಿಕೊಳ್ಳುವುದು ಕಷ್ಟ. ಅವರು ಅಂತರಂಗದಲ್ಲಿ ಆತ್ಮಪರೀಕ್ಷೆಯುಳ್ಳವರಾದರೆ ಅವರಿಗೆ ಅಸಂತೃಪ್ತಿ ತಪ್ಪಿದ್ದಲ್ಲ. ಆದರೆ ಅದು ಪವಿತ್ರವಾದ ಅಸಂತೃಪ್ತಿ. ಅದು ಗುಣ ಚಿಹ್ನೆಯಲ್ಲ".

ಡಿ ವಿ ಜಿ ಯವರ ದೃಷ್ಟಿಯಲ್ಲಿ "ಕಾವ್ಯದಿಂದ ನಮಗೆ ಆಗುವ ಉಪಕಾರಗಳು ಮುಖ್ಯವಾಗಿ ಮೂರು ತೆರದವು.

1) ಅದು ನಮಗೆ ನಮ್ಮಗಳ ಅಂತಃಪ್ರಪಂಚವನ್ನು ತೋರಿಸಿಕೊಡುವ ಕಿಟಕಿ. ಮನುಷ್ಯ ವಿಜ್ಞಾನ ಶಾಸ್ತ್ರದ ಮೂಲಸಾಮಗ್ರಿ ಅದರಲ್ಲಿರುತ್ತದೆ. ಅದು ನಮ್ಮ ಒಳಮೈಯನ್ನು ನಮ್ಮ ಮುಂದೆ ಬಿಚ್ಚಿರಿಸುತ್ತದೆ.

2) ಅದು ಹೃದಯದ ನೀರ್ಗಲ್ಲನ್ನು ಹೊಳೆಯಾಗಿಸಿ ಹರಿಯಿಸುವ ಮತ್ತು ಅಲ್ಲಿಯ ಕೆಸರು ಮಣ್ಣನ್ನು ಗಟ್ಟಿಮಾಡಿ ವಜ್ರವಾಗಿಸುವ ಸೂರ್ಯಪ್ರಭೆ.

3) ಅದು ಒಂದು ಮಹಾತತ್ತ್ವದ ಕಡೆಗೆ ಜೀವವನ್ನು ಕರೆದೆಳೆಯುವ ದಿವ್ಯಧ್ವನಿ. ಅದರಿಂದ ಶ್ರೇಯಃಸ್ವರೂಪದರ್ಶನ."

ಜ್ಞಾನೇಶ್ವರಿಯಲ್ಲಿ ಬರುವ ಒಂದು ಪದ್ಯ ಈ ವಿಷಯವನ್ನೇ ಪ್ರತಿಪಾದಿಸುತ್ತದೆ.

ಲೋಕೀ ಬರವೇ ಕವಿತ್ವ, ಕವಿತ್ವಮಾಜೀ ರಸಿಕತ್ವ ।
ರಸಿಕತ್ವಮಾಜೀ ಪರತತ್ತ್ವ ಸ್ಪರ್ಶ ಜೈಸಾ ॥

(ಜನ ಕವಿಯನ್ನು ಮೆಚ್ಚಿಕೊಳ್ಳುತ್ತಾರೆ. ಸಮಾಜದ ಭಾವನೆಗಳನ್ನು ಅಭಿವ್ಯಕ್ತಗೊಳಿಸುವ ಕವಿ ಇನ್ನೂ ಹೆಚ್ಚು ಮೆಚ್ಚಿಕೆಗೆ ಪಾತ್ರನಾಗುತ್ತಾನೆ. ಪರತತ್ತ್ವವನ್ನು ಮುಟ್ಟುವ ಕವಿಯಾದರೋ ಎಲ್ಲ ಬಗೆಯ ಕವಿಗಳಿಗಿಂತ ಪ್ರಿಯನು.)

(ಡಿ ವಿ ಜಿ ಯವರನ್ನು ಕುರಿತು ಮಾತನಾಡುತ್ತ ಈ ಶ್ಲೋಕದ ಕಡೆ ಗಮನವನ್ನು ಸೆಳೆದವರು ಅಕೌಂಟೆಂಟ್ ಜನರಲ್ ಆದ ಸ. ತ್ರ. ಕೆಂಘೆ ಮಹಾಶಯರು.)

ಪರತತ್ತ್ವವನ್ನು ಕಾವ್ಯವಿಷಯವನ್ನಾಗಿ ತೆಗೆದುಕೊಂಡಿರುವುದು ಡಿ ವಿ ಜಿ ಯವರ ಕಾವ್ಯಗಳ ವಿಶಿಷ್ಟತೆ ಎನ್ನಬಹುದು.

ಆದರೆ ಕಾವ್ಯವಸ್ತುಗಳು ಅನಂತ. ಆದರಲ್ಲೂ ಕಾವ್ಯವೆಂದರೆ ಪ್ರಕೃತಿ ವರ್ಣನೆ, ಪ್ರಕೃತಿ ಉಪಾಸನೆ, ಅದರ ಸೌಂದರ್ಯದ ಬಗ್ಗೆ ಮೆಚ್ಚಿಕೆ. ಆದರೆ ಪ್ರಕೃತಿಯನ್ನು ಕುರಿತ ಡಿ ವಿ ಜಿ ಯವರ ದೃಷ್ಟಿ ಬೇರೆ.

ಪ್ರಕೃತಿಯ ರೀತಿ ಇದು :

ಋತುಚಕ್ರ ತಿರುಗುವುದು, ಕಾಲನೆಪೆ ಮರುಗುವುದು ।
ಮೃತನ ಮಣ್ಣಿಂದ ಹೊಸ ಹುಲ್ಲು ಮೊಳೆಯುವುದು ।
ಕ್ಷಿತಿಗರ್ಭ ಧರಿಸುವಳು ಮತ್ತುದಿಸುವುದು ಜೀವ ।

ಸತತ ಕೃಷಿಯೋ ಪ್ರಕೃತಿ—ಮಂಕುತಿಮ್ಮ ||

ಹೀಗೆ ಒಂದೇ ಸಮನೆ ಸುತ್ತುತ್ತಿರುವ ಪ್ರಕೃತಿಚಕ್ರದಲ್ಲಿ ಮಾನವನ ಹುಟ್ಟು, ಅವನ ಬೆಳವಣಿಗೆ ಒಂದು ಹೊಸ ಘಟನೆ. ಅದೇ ಹೆಚ್ಚು ಸ್ವಾರಸ್ಯವಾದದ್ದು.

ಕ್ಷಿತಿಚಕ್ರ ರವಿಚಕ್ರ ಋತುಚಕ್ರಗಳಿಗಿಹುದು |
ಮಿತವೃತ್ತಿ; ನರನಿಗಂತೆಯೆ ಕರ್ಮನಿಯತಿ ||
ಕ್ಷಿತಿಕಂಪ, ರಾಹು ಕೇತು ಭ್ರಮೆ, ನರಪ್ರಗತಿ |
ಅತಿಚರಿತೆ ಪ್ರಕೃತಿಯಲಿ—ಮಂಕುತಿಮ್ಮ ||

ಅದೂ ಅಲ್ಲದೆ ಪ್ರಕೃತಿ ಕ್ರೂರಿ, ಯಾವುದನ್ನೂ ಕ್ಷಮಿಸುವವಳಲ್ಲ, ಛಲಗಾತಿ.

ಒಲಿದೊಲಿದು ಸಾರುವಳು ಕಣ್ಣೊಳಪ ಬೀರುವಳು |
ಕಿಲಕಿಲನೆ ನಗಿಸುವಳು ಕಚಗುಳಿಗಳಿಕ್ಕಿ ||
ಮಲಗಿನೀಂ ನಿದ್ರಿಸಿರೆ ಕುಳಿಯೊಳಕ್ಕುರುಳಿಪಳು |
ಛಲಗಾತಿಯೋ ಪ್ರಕೃತಿ—ಮರುಳ ಮುನಿಯ ||

ಮೊಟ್ಟೆಗಳನ್ನಿಟ್ಟದನು ತಾನೆ ನುಂಗುವುದಹಿಯು |
ಸೃಷ್ಟಿತಾಯಿಗಮಣಿಸು ತಾಂಪೆತ್ತ ಮಗುವು ||
ಪೆಟ್ಟನಿಂ ಬೆನ್ಮುರಿವವೊಲು ನಿನ್ನ ವೈದಡವಿ |
ತಟ್ಟೆಯುಂ ಸವೆಯಿಪಳು—ಮರುಳಮುನಿಯ ||

ಮಾಥ್ಯೂ ಆರ್ನಾಲ್ಡ್ ಕವಿಯ ಈ ಮಾತುಗಳು ಡಿ ವಿ ಜಿ ಯವರ ಮೇಲೆ ಹೆಚ್ಚು ಪರಿಣಾಮವನ್ನುಂಟು ಮಾಡಿದೆ:

"Nature is cruel, man is sick of blood;
Nature is stubborn, man would fain adore;
Nature is fickle, man hath need of rest;
Nature forgives no debt and fears no grave:
Man would be mild and with safe conscience blest.
Man must begin, know this, where nature ends;
Nature and man can never be fast friends.
Fool, if thou cons't not pass her, rest her slave!"

ಆದ್ದರಿಂದ ಪ್ರಕೃತಿ ಪರೀಕ್ಷೆ, ಪ್ರಕೃತಿ ಪರಿಶೋಧನೆ ಮತ್ತು ಪ್ರಕೃತಿ ಪ್ರತಿಭಟನೆ ಅವರ ಮಾರ್ಗವಾಯಿತು. "ಆ ಮಹಾಶಕ್ತಿಯು ಪ್ರಕೃತಿಕಾರ್ಯ

ರೂಪಗಳಲ್ಲಿಯೂ ಜನಸಮಾಜದ ಅವಿಚಾರವಿಶ್ವಾಸ ಅಂಧಸಂಪ್ರದಾಯ ರೂಪಗಳಲ್ಲಿಯೂ ನಮ್ಮ ಉತ್ತಮದಶ ಸಾಧನೆಗೆ ಅಡ್ಡ ಹಾಕುತ್ತಿದ್ದರೆ ನಾವು ಕೈಕಟ್ಟಿ ಕುಳಿತಿರಬೇಕೆ? ಅಥವಾ ಆ ಮಹಾಶಕ್ತಿಯು ನಮ್ಮ ಸಾಮರ್ಥ್ಯವನ್ನು ಪರೀಕ್ಷಿಸುತ್ತಿರುವುದೆಂದು ಭಾವಿಸಿ ಧೈರ್ಯವನ್ನು ತಾಳಿ, ಸಾಧ್ಯವಾದವಾದ ಯುಕ್ತಿ ಸಾಹಸಗಳಿಂದ ಅದನ್ನು ಎದುರಿಸಬೇಕೆ? ಎದುರಿಸಬೇಕೆನ್ನುತ್ತಾನೆ ಷೆಲ್ಲಿ. ಎದುರಿಸಬೇಕೆಂದರು ಗ್ರೀಕಿನ ಪುರಾತನ ಕವಿಗಳು. ಎದುರಿಸಬೇಕೆಂದು ಪ್ರಯತ್ನಿಸುತ್ತಿದ್ದಾರೆ ಯುರೋಪಿನ ವೈಜ್ಞಾನಿಕರು." ಇದೇ ಡಿ ವಿ ಜಿ ಯವರ ಮನೋಭಾವವೂ ಸಹ.

ನೈಸರ್ಗ ಪೌರುಷಗಳುಭಯ ಸಮರಸಯುಕ್ತಿ ।
ಕೌಶಲದೆ ಜೀವಿತಂ ಸಾರ್ಥಕಂ, ನೀಂ ಶು– ॥
ಶ್ರೂಷಿಸುತ್ತಿನಿತು ನಿಗ್ರಹಿಸಿನಿತು ಪ್ರಕೃತಿಯಂ ।
ದಾಸಿಯಾಗಿಸಿ ಗೆಲ್ಲೊ–ಮರುಳ ಮುನಿಯ ॥
ಪ್ರಕೃತಿಯನು ತಿಳಿ, ತಿಳಿವಿನಿಂ ಪ್ರಕೃತಿಯನು ದಾಟು ।
ವಿಕೃತಿಗೈಯ್ಯುವ ಜಗದಿ ಸಂಸ್ಕೃತಿಯ ಗಳಿಸು ॥
ಸುಕೃತ ಧರ್ಮಂ ಪ್ರಾಕೃತ ದ್ವಂದ್ವಗಳ ಮೀರೆ ।
ಸ್ವಕೃತವೋ ಸ್ವಾತ್ಮಗತಿ–ಮರುಳ ಮುನಿಯ ॥

ಆದ್ದರಿಂದ ಪ್ರಕೃತಿಯ ಸೊಬಗನ್ನು ಕಂಡು ಆನಂದಿಸಿದರೂ ಮೈಮರೆಯುವ ಹಾಗಿಲ್ಲ. ಪ್ರಕೃತಿಯನ್ನು ತಿಳಿದು, ಮೀರಬೇಕು. ಆದ್ದರಿಂದ

ಹೋರಾಡು ಬೀಳ್ವನ್ನವೊಬ್ಬಂಟಿಯಾದೊಡಂ ।
ಧೀರಪಥವನೆ ಬೆದಕು ಸಕಲಸಮಯದೊಳಂ ॥
ದೂರದಲಿ ಗೋಣಗುತ್ತ ಬಾಳ್ವ ಬಾಳ್ಗೇನು ಬೆಲೆ ।
ಹೋರಿ ಸತ್ತ್ವವ ಮೆರೆಸು–ಮಂಕುತಿಮ್ಮ ॥

ಆದ್ದರಿಂದಲೇ ಅವರಿಗೆ ಬುದ್ಧಿ ಪ್ರಧಾನವಾದ ಕಾವ್ಯದಲ್ಲಿಯೇ ಒಲವು: "ಕಾವ್ಯದ ಕುತೂಹಲಜನಕತ್ವ ಅದರಲ್ಲಿಯ ಬುದ್ಧ್ಯಂಶದಿಂದ. ಕಾವ್ಯವನ್ನು ಬರಿಯ ಕಣ್ಣೀರು ಕೇಕೆ ಜೊಲ್ಲುಗಳ ಕೆಸರು ತೊಪ್ಪೆಯಾಗಿಸದೆ, ಅದಕ್ಕೆ ಆಕಾರ ಸ್ಪಷ್ಟತೆಯನ್ನು ಅವಯವ ದೃಢತೆಯನ್ನು ಕೊಡುವ ಗಟ್ಟಿಯೆಲುಬು ಬುದ್ಧಿ. ಬುದ್ಧಿ ಬ್ರಹ್ಮಗಿರಿ; ಕಾವ್ಯ ಕಾವೇರಿ. ಕಾವ್ಯ ಹೃದಯವು ಸಮುದ್ರ; ಅಮೃತ ಮಥನವು ಬುದ್ಧಿ ಮಂದರದಿಂದ."

ಅದೂ ಅಲ್ಲದೆ ಪ್ರಕೃತಿವಿಲಾಸಗಳು ಮಾತ್ರವೇ "ಅಲ್ಲ ಸೌಂದರ್ಯದ

ನೆಲೆ ಮನೆಗಳು. ಮಾನವ ಹೃದಯವು ತಾಳುವ ಆವೇಶಗಳಲ್ಲಿಯೂ, ತರುವ ಅವಸ್ಥೆಗಳಲ್ಲಿಯೂ, ಮಾಡಿಸುವ ಚೇಷ್ಟೆಗಳಲ್ಲಿಯೂ ಸೌಂದರ್ಯವುಂಟು; ಹಾಗೆಯೇ ಅಂತರಾತ್ಮ ಮಹಿಮೆಯಿಂದ ಬುದ್ಧಿಯು ಹೃದಯಕ್ಕೆ ಮಾಡಿಸುವ ಪ್ರತೀಕಾರಗಳೂ, ಹಿಡಿಸುವ ಪ್ರತಿಜ್ಞೆಗಳೂ ಇಡಿಸುವ ದಂಡಗಳೂ ಸೌಂದರ್ಯಾಸ್ಪದಗಳಾದವು. ಹೃದಯ ಸಂಕ್ಷೋಭೆ, ಹೃದಯ ಸಂಯಮನ, ವ್ಯಾಮೋಹ, ವಿವೇಕ, ಆವೇಶ, ಸಮಾಧಿ—ಈ ಪರಿಯ ಹಾರ್ದ ಜೀವನವೇ ಕಾವ್ಯವಸ್ತು" ಎಂಬುದು ಅವರ ಅಭಿಪ್ರಾಯ.

"ಮಾನುಷ ಹೃತ್ಸೌಂದರ್ಯ"ವೇ ಅವರಿಗೆ ಹಿಡಿಸಿದ ಕಾವ್ಯವಸ್ತು. ಹೀಗೆ ಡಿ ವಿ ಜಿ ಯವರು ಸ್ವತಃ ಕವಿ ಸಹಜ ಪ್ರತಿಭೆಯುಳ್ಳವರಾಗಿದ್ದರೂ ಪ್ರಕೃತಿಸೌಂದರ್ಯವನ್ನು ಅನುಭವಿಸಿದವರಾದರೂ ಭಾವಪ್ರಧಾನವಾದ ಸಾಹಿತ್ಯಸೃಷ್ಟಿಗೆ ಹೆಚ್ಚಾಗಿ ಮನಗೊಡಲಿಲ್ಲ. ಅದು ತಮ್ಮ ಕರ್ತವ್ಯವಲ್ಲವೆಂದೂ ಅವರಿಗೆ ಅನ್ನಿಸಿರಬಹುದು. ಎರಡನೆಯದಾಗಿ ಸಾರ್ವಜನಿಕ ಜೀವನದ ರೂಕ್ಷತೆ ಆ ಮನೋಭಾವವನ್ನು ಒಣಗಿಸಿಬಿಟ್ಟಿದ್ದಿರಬಹುದು. ಹೇಗಾದರೂ ಅವರು ಮಾಡಿರುವ ಕೆಲಸ ಇನ್ನೊಂದು ಬಗೆಯದು. ಅದು ಸಾಹಿತ್ಯದ ಶ್ರೇಷ್ಠತೆಯನ್ನು ಅದರ ಉಪಯೋಗವನ್ನು ಜನರಿಗೆ ಎತ್ತಿ ತೋರಿಸುವ ಕೆಲಸ. ಜೀವೋತ್ಕರ್ಷಕ್ಕೆ ಸಾಹಿತ್ಯದಿಂದ ಹೇಗೆ ನೆರವು ಪಡೆಯಬಹುದು, ಕಾವ್ಯದ ಸ್ವಾರಸ್ಯವನ್ನು ಸವಿಯುವುದು ಹೇಗೆ, ರಾಜಕೀಯವನ್ನು ಸಾಹಿತ್ಯದಿಂದ ಹೇಗೆ ಸಹ್ಯವಾಗಿಸಬಹುದು, ಮಹಾಕಾವ್ಯಗಳು ಹೇಗೆ ಜೀವಶೋಧಕಗಳಾದ ಪ್ರಶ್ನೆಗಳನ್ನೆತ್ತಿ ಅವಕ್ಕೆ ಉತ್ತರಗಳನ್ನು ಸೂಚಿಸಿವೆ, ಭಾಷೆಯ ಉಪಯೋಗ ಹೇಗೆ ಮುಂತಾದ ಅನೇಕ ವಿಷಯಗಳನ್ನು ಚರ್ಚಿಸಿ, ಮತ್ತು ವಿವರಿಸುವುದಕ್ಕೆ ತಮ್ಮ ಲೇಖನಿಯನ್ನು ಅವರು ಉಪಯೋಗಿಸಿದ್ದಾರೆ. ತಾವು ಕಂಡುಕೊಂಡ ಜೀವಿತ ಸಿದ್ಧಾಂತವನ್ನು ತಿಳಿಸಲು ಪದ್ಯ ಮಾಧ್ಯಮವನ್ನು ಉಪಯೋಗಿಸಿಕೊಂಡರು.

ಅವರು ತಮ್ಮಲ್ಲಿದ್ದ ಭಾವಗಳನ್ನು ವ್ಯಕ್ತಪಡಿಸಲು ಉಪಯೋಗಿಸಿದ ರೀತಿ ಮತ್ತು ಭಾಷೆಯ ಬಗೆಯೂ ಅವರನ್ನು ಭಾವಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡಲಿಲ್ಲವೆಂಬ ಅಪಾದನೆಗೆ ಒಳಪಡಿಸಿದೆ. ಮುಕ್ತ ಛಂದಸ್ಸಿದಲ್ಲಿ ಕವಿತಾರಚನೆಯ ಸಾಮರ್ಥ್ಯವಿದ್ದರೂ ಅವರಿಗೆ ಕಂದ, ವೃತ್ತ, ಸೀಸ ಪದ್ಯ ಈ ಕಟ್ಟುಪಾಡಿನ ಕವನರಚನೆಯಲ್ಲೇ ಒಲವು.

ಎರಡನೆಯದಾಗಿ ಅವರು ತಮ್ಮ ಕವಿತಾರಚನೆಯಲ್ಲಿ ಉಪಯೋಗಿಸಿದ

ಭಾಷೆ. ಅದನ್ನು ಕುರಿತು ಅವರು ಚಿಂತಿಸಿ ಹೀಗೆಂದಿದ್ದಾರೆ :

"ಇನ್ನು ಮುಂದೆ ಕನ್ನಡದಲ್ಲಿ ಪದ್ಯಗಳನ್ನು ರಚಿಸತಕ್ಕವರು ಹಳಗನ್ನಡದ ರೂಪಗಳನ್ನು ಸಂಪೂರ್ಣವಾಗಿ ಬಿಟ್ಟುಬಿಟ್ಟು, ಎಲ್ಲವನ್ನೂ ಬಳಕೆಯಲ್ಲಿರುವ ಹೊಸಗನ್ನಡ ಮಾತುಗಳಿಂದಲೇ ಬರೆಯಬೇಕೆಂದು ಕೆಲವರು ಹೇಳುವುದುಂಟು. ಜನರಿಗೆ ಸ್ವಲ್ಪವೂ ತಿಳಿಯದ ಹಳಗನ್ನಡದ ಮಾತುಗಳನ್ನು ಕೂಡಿದ ಮಟ್ಟಿಗೂ ಬಿಡಬೇಕೆಂಬುದೇನೋ ಒಪ್ಪತಕ್ಕುದೇ. ಆದರೆ ಸಾಮಾನ್ಯವಾಗಿ ಪರಿಚಯವಿರುವ ಹಳಗನ್ನಡ ಪದರೂಪಗಳಿಗೆ ಬಹಿಷ್ಕಾರ ಹಾಕುವುದರಿಂದ ಯಾರಿಗೆ ಯಾವ ಆದಾಯವು ಆಗಬಹುದೋ ತೋರುವುದಿಲ್ಲ. ಸಾಮಾನ್ಯವಾಗಿ ಅರ್ಥವಾಗುವ ಮಾತುಗಳಿರುವಲ್ಲಿ ಕ್ಲಿಷ್ಟಪದಗಳನ್ನು ಉಪಯೋಗಿಸುವುದರಿಂದ ಬರವಣಿಗೆಯು ಸಾಮಾನ್ಯ ಜನರಿಗೆ ಪ್ರಯೋಜಕವಾಗದೆ ಹೋಗುತ್ತದೆ. ಇದು ಜನರಿಗೂ ಭಾಷೆಗೂ ನಷ್ಟವೇ ಸರಿ. ಆದರೆ ಹಳಗನ್ನಡದ ಪದಗಳು, ಅಥವಾ ಪ್ರತ್ಯಯಗಳು ಸುಲಭವಾಗಿ ಅರ್ಥವಾಗುವುವಾಗಿದ್ದರೆ ಅವುಗಳನ್ನೇಕೆ ಉಪಯೋಗಿಸಬಾರದು ? "ದೇವರು ದೊರೆಯನ್ನು ಕಾಪಾಡಲಿ" ಎಂಬ ವಾಕ್ಯಕ್ಕೆ ಬದಲಾಗಿ "ದೊರೆಯಂ ಸಲಹುಗೆ ದೇವಂ" ಎಂದು ಬರೆದರೆ ಹಳಗನ್ನಡದಂತೆ ಕಾಣುವುದು. ಆದರೆ ಇದರಿಂದ ಅರ್ಥಸ್ಫೂರ್ತಿಗೆ ತಡೆಯಾಗುವುದೆಂದು ಯಾರೂ ಹೇಳಲಾರರು. ಹಳಗನ್ನಡದ ಪದಗಳನ್ನು ಪ್ರತ್ಯಯಗಳನ್ನು ಈಗ ಏಕೆ ಉಪಯೋಗಿಸಬೇಕೆಂದರೆ, ಅವುಗಳನ್ನು ತೊರೆಯುವುದರಿಂದ ಕೆಲವು ನಷ್ಟಗಳುಂಟು. 1) ಈಗ ಇನ್ನೂ ಅಲ್ಪ ಸ್ವಲ್ಪ ರೂಢಿಯಲ್ಲಿರುವ ಹಳೆಯ ಪದಪ್ರಯೋಗಗಳು ಲುಪ್ತವಾದರೆ ಭಾಷೆಯ ವಾಗ್ದಾರಿದ್ರ್ಯವು ಹೆಚ್ಚುವುದು. 2) ಬಹುಕಾಲದ ಉಪಯೋಗದಿಂದ ಆ ಪದಪ್ರತ್ಯಯಗಳಿಗೆ ಒಂದು ವಿಧವಾದ 'ಧ್ವನಿಶಕ್ತಿ' ಅಥವಾ ವ್ಯಂಜಕ ಶಕ್ತಿಯು ಬಂದಿರುವುದು. ಅವುಗಳನ್ನು ಬಿಟ್ಟ ಬರವಣಿಗೆಯಲ್ಲಿ ಈ ಶಕ್ತಿಯಿರುವುದಿಲ್ಲ. ಹೊಸಗನ್ನಡದ ಮಾತುಗಳಿಗೆ ಅಥವಾ ಮಾತಿನ ರೂಪಗಳಿಗೆ ಆ ಶಕ್ತಿಬರುವುದಕ್ಕೆ-ಒಂದು ವೇಳೆ ಅದು ಎಂದಿಗಾದರೂ ಬರುವುದಾದರೆ—ಬಹುಕಾಲ ಹಿಡಿದೀತು. 3) ಹಳಗನ್ನಡ ರೂಪಗಳಿಗೆ ಇರುವ ಆಕರ್ಷಕ ಶಕ್ತಿ ಹೊಸಗನ್ನಡ ರೂಪಗಳಿಗೆ ಇನ್ನೂ ಬಂದಿಲ್ಲ. ಕಾವ್ಯವು ಕೆಲವು ಸಂದರ್ಭಗಳಲ್ಲಿ ಹಳಗನ್ನಡ ರೂಪಗಳಿಂದ ಕಿವಿಗೆ ಇಂಪಾದಂತೆ ಹೊಸಗನ್ನಡ ರೂಪಗಳಿಂದ ಆಗದು. ಹೀಗೆ ವಿಚಾರಮಾಡಿ ನೋಡಿದರೆ ಎಂತಹ ಹಳಗನ್ನಡ ಮಾತುಗಳನ್ನೂ ರೂಪಗಳನ್ನೂ ಉಪಯೋಗಿಸಿದರೆ ಕಾವ್ಯವು ದುರ್ಬೋಧ

ವಾಗುವುದಿಲ್ಲವೋ ಅಂತಹವುಗಳನ್ನು ಧಾರಾಳವಾಗಿ ಉಪಯೋಗಿಸಬಹುದೆಂದು ತೋರುವುದು."

ಈ ತೀರ್ಮಾನದ ಪರಿಣಾಮವಾಗಿ ಅವರ ಪದ್ಯಗಳು ಹಳಗನ್ನಡ ಪದಗಳಿಂದ ಹಳಗನ್ನಡ ಪದಗಳಂತೆ ಕಾಣುವ ಪದಗಳಿಂದ ತುಂಬಿದೆ. ಹಾಗೆಂದ ಮಾತ್ರಕ್ಕೆ ಅವರು ಹಿಂದಿನ ಕವಿಸಮಯಗಳಿಗೆ ಜೋತುಬಿದ್ದವರಲ್ಲ.

ಗದ್ಯಸಾಹಿತ್ಯರಚನೆಯಲ್ಲಾದರೋ ಡಿ ವಿ ಜಿ ಯವರು ಸಾಧಿಸಿರುವ ಶೈಲಿ ಅನ್ಯಾದೃಶವಾದದ್ದು. 19ನೆಯ ಶತಮಾನದ ಕನ್ನಡ ಶೈಲಿ ಅವರ ಪ್ರಾರಂಭದ ಶೈಲಿ ಎಂಬುದನ್ನು ಅವರ 'ಸುಮತಿ ಗ್ರಂಥಮಾಲೆಯ' ಪುಸ್ತಕಗಳಲ್ಲಿ ಕಾಣಬಹುದು. ಅನಂತರ ಅವರ ಗದ್ಯಶೈಲಿ ಪರಿಷ್ಕಾರಪಡಿಸಲ್ಪಟ್ಟು ಒಂದು ಅಪೂರ್ವವಾದ ಸೊಗಸನ್ನು ತಂದುಕೊಂಡಿದೆ.

ವಿ.ಸೀ. ಅವರ "ಪಂಪಾಯಾತ್ರೆ"ಯಲ್ಲಿ ಹಂಪೆಯಲ್ಲಿ ಇವರಿಗೆ ಮಾರ್ಗದರ್ಶಕನಾಗಿದ್ದ ಚೆನ್ನಯ್ಯನಿಗೆ ಯೋಗ್ಯತಾಪತ್ರ ಕೊಡುವ ಪ್ರಸಂಗದಲ್ಲಿ ಡಿ ವಿ ಜಿ ಯವರ ಬರವಣಿಗೆಯ ವಿಷಯ ಬಂದಿದೆ. ಯಜಮಾನರು (ಬೆಳ್ಳಾವೆ ವೆಂಕಟನಾರಣಪ್ಪನವರು) ರಾಯ (ಡಿ ವಿ ಜಿ ಯವ)ರನ್ನು ಬರೆಯಹೇಳಿದರು. ; ಏಕೆಂದರೆ "ಬರವಣಿಗೆಯಲ್ಲಿ ರಾಯರು ನಿಸ್ಸೀಮರು. ಅವರ ಬರವಣಿಗೆಯೆಂದರೆ ಎಂಥ ಪ್ರಬಲರಿಗೂ ಭಯ. ಜಂಘಾಬಲ ಉಡುಗಿ ಹೋಗುತ್ತೆ." ರಾಯರು ಬರೆದುಕೊಟ್ಟರು ; "ಸರಿಯೇನಯ್ಯ, ಇನ್ನೇನಾದರೂ ಬರೆಯಬೇಕೆ?" ಎಂದರು. "ಇನ್ನೇನು ಸ್ವಾಮಿ ಬೇಕು? ಹೀಗೆ ಶಿಫಾರಸು ಬರೆದುಕೊಟ್ಟರೆ ದಗಾಖೋರನಿಗೆ ಕೂಡ ಖಲಾಸೆ ಆಗ್ಹೋಗಿ ಬಿಡುತ್ತೆ" ಎಂದ ಚೆನ್ನಯ್ಯ. ಚೆನ್ನಯ್ಯ ತನಗೆ ತಿಳಿಯದೆಯೇ ಮಹಾಕವಿವಾಕ್ಯವನ್ನೇ ಆಡಿದ್ದ. ಹನುಮಂತನ ಮಾತುಗಾರಿಕೆಯನ್ನು ಕುರಿತು ರಾಮ ಹೀಗೆಂದನೆಂದು ವಾಲ್ಮೀಕಿಗಳು ಹೇಳುತ್ತಾರೆ: "ಕಸ್ಯನಾರಾಧ್ಯತೇ ಚಿತ್ತಮುದ್ಯತಾಸೇರರೇರಪಿ" (ಕತ್ತರಿಸಲು ಕತ್ತಿಯನ್ನೆತ್ತಿದ ಶತ್ರುವಿನ ಚಿತ್ತವನ್ನೂ ಪ್ರಸನ್ನಗೊಳಿಸುವುದು). ಡಿ ವಿ ಜಿ ಯವರ ಶೈಲಿ ಹಾಗೆ ಹೃದಯಹಾರಿಣಿಯಾದದ್ದು.

ಸಾಹಿತ್ಯದ ಉಪಕರಣ ಭಾಷೆ. ಭಾಷೆಯ ಉಪಯೋಗ ಎಷ್ಟು ಖಚಿತವಾಗಿದ್ದರೆ, ಎಷ್ಟು ನವುರಾಗಿದ್ದರೆ, ಎಷ್ಟು ಸಮಯೋಚಿತವಾಗಿದ್ದರೆ, ಸಾಹಿತ್ಯದ ಸೊಗಸೂ ಅಷ್ಟು ಹೆಚ್ಚುತ್ತದೆ. ಇಲ್ಲಿ ಕನ್ನಡಕ್ಕೆ ಬರುವ ಕಷ್ಟ ಯಾವುದೆಂದರೆ ಅದರಲ್ಲಿ ಇರುವ ಇತರ ಭಾಷೆಗಳ ಪದಗಳು. ಎಷ್ಟು ಸಂಸ್ಕೃತವನ್ನು ಉಪಯೋಗಿಸಬೇಕು, ಎಷ್ಟು ಕನ್ನಡವನ್ನು ಉಪಯೋಗಿಸಬೇಕು, ಇತರ

ಭಾಷೆಯ ಪದಗಳನ್ನು ಎಲ್ಲಿಡಬೇಕು, ಹೊಸದಾಗಿ ಬರುವ ರಾಜಕೀಯ, ಕಾನೂನು, ವಿಜ್ಞಾನ ಮುಂತಾದ ವಿಷಯಗಳಿಗೆ ಯಾವ ಮಾತುಗಳನ್ನು ಉಪಯೋಗಿಸಬೇಕು ಎಂಬುದು. ಇಲ್ಲಿ ಡಿ ವಿ ಜಿ ಯವರ ಸಾಧನೆ ಅಸಾಧಾರಣ ವಾದದ್ದು, ಅನುಕರಣೀಯವಾದದ್ದು ಎನ್ನಬಹುದು. 1911ರಲ್ಲಿ ಪ್ರಕಟ ವಾದ ರಂಗಾಚಾರ್ಲು ಜೀವನ ಚರಿತ್ರೆಯಿಂದ ಹಿಡಿದು "ಮೈಸೂರು ದಿವಾನರುಗಳು" ಗ್ರಂಥದಲ್ಲಿ ರಂಗಾಚಾರ್ಲು ಅವರ ವಿಷಯವಾಗಿ ಬರೆದಿರುವ ಲೇಖನದವರೆಗೆ ಅವರ ಗದ್ಯಶೈಲಿ ಬೆಳೆದುಬಂದಿರುವುದನ್ನು ಪರಿಶೀಲಿಸುವುದೇ ಒಂದು ದೊಡ್ಡ ಅಧ್ಯಯನವಾಗುತ್ತದೆ. ಭಾಷೆಯನ್ನು ಉಪಯೋಗಿಸುತ್ತ ಹೋದಂತೆ, ಅನುಭವ ವಿಸ್ತಾರವಾದಂತೆ, ತುಂಬಿ ಬಂದಂತೆ, ಜೀವ ಪಕ್ವ ವಾದಂತೆ, ಭಾಷೆ ಎಷ್ಟು ನೇರವಾಗುತ್ತದೆ, ತಿಳಿಯಾಗುತ್ತದೆ, ಸ್ವಾರಸ್ಯವಾಗು ತ್ತದೆ ಎಂಬುದನ್ನು ಇಲ್ಲಿ ಕಾಣಬಹುದು. ಸಂಸ್ಕೃತವನ್ನು ಕನ್ನಡದ ಜಾಯ ಮಾನಕ್ಕೆ ಅಡ್ಡಿಬಾರದಂತೆ ಹೇಗೆ ಉಪಯೋಗಿಸಬಹುದು ಎಂಬುದನ್ನು ತಿಳಿಯಲು ಡಿ ವಿ ಜಿ ಯವರ ಶೈಲಿ ಒಂದು ಉತ್ತಮವಾದ ಉದಾಹರಣೆ. ರಾಜಕೀಯ, ಅರ್ಥಶಾಸ್ತ್ರ, ಕಾನೂನು, ವೃತ್ತಪತ್ರಿಕೆ ಇವುಗಳಿಗೆ ಸಂಬಂಧ ಪಟ್ಟಂತೆ ವಿಷಯವಿವರಣೆ ಕನ್ನಡದಲ್ಲಿ ಎಷ್ಟು ಚೆನ್ನಾಗಬಹುದು ಎಂದು ತೋರಿಸಿಕೊಟ್ಟವರಲ್ಲಿ ಅವರು ಮುಖ್ಯರು.

ಅವರಿಗೆ ದೊಡ್ಡ ಮಾತುಗಳಲ್ಲಿ ಒಲವುಂಟು. ಟಿ. ಎಸ್. ಇಲಿಯಟ್ ಕವಿ ವಿಮರ್ಶಕ "audatory imagination" ಮತ್ತು "feeling for syllable and rhythm" ಹೇಗೆ ಬರವಣಿಗೆಯ ಸತ್ತ್ವವನ್ನು ಹೆಚ್ಚಿಸುತ್ತದೆ ಎಂಬುದನ್ನು ಹೇಳಿದ್ದಾನೆ. ಹಾಗೆ ಡಿ ವಿ ಜಿ ಯವರು ಪೂರ್ವಕವಿ ಪ್ರಯೋಗ ಗಳನ್ನು ಮಾಡಿದ್ದಾರೆ, ಅಪರೂಪ ಪ್ರಯೋಗಗಳನ್ನು ಮಾಡಿದ್ದಾರೆ, ತಾವೇ ಸಮಾಸ ಪದಗಳನ್ನು ಸೃಷ್ಟಿಸಿಕೊಂಡಿದ್ದಾರೆ. ಅಕ್ಷರಶಕ್ತಿ ಪದಗಳ ಧ್ವನಿ ಸೌಂದರ್ಯ — ಇವು ಶಬ್ದದ ಮಹಿಮೆಯನ್ನು ಹೆಚ್ಚಿಸಿ, ಕಾವ್ಯದ ಪರಿಣಾಮ ವನ್ನು ಹೆಚ್ಚಿಸುತ್ತದೆ ಎಂದು ತಿಳಿದಿದ್ದವರು ಅವರು. ಆದರಿಂದ ಅವರ ಭಾಷೆಯ ಸೊಗಸು ಇಮ್ಮಡಿಯಾಗಿದೆ. ಅವರ ಗದ್ಯಶೈಲಿಯನ್ನು ಅ ನ ಕೃ "The Epic prose" ಎಂದು ಕರೆದಿದ್ದಾರೆ.

ಅವರು ಪದಪ್ರಯೋಗ ಕುಶಲರು. ಒಂದೊಂದು ಮಾತಿನ ಬೆಲೆಯನ್ನೂ ತೂಕವನ್ನೂ ನಿರ್ಣಯಿಸಿಟ್ಟುಕೊಂಡಿದ್ದವರು ಅವರು. ಒಂದು ವಾಕ್ಯದಲ್ಲಿ ಉತ್ತರಾರ್ಧಕ್ಕೂ ಪೂರ್ವಾರ್ಧಕ್ಕೂ ಒಂದು ಸಮತೋಲನವಿರಬೇಕೆಂದು

ಪ್ರಯತ್ನಿಸಿದವರು ಅವರು. ಅವರು ಬರೆದದ್ದು ಹತ್ತಾರು ಬಾರಿ ತಿದ್ದಲ್ಪಡು ತ್ತಿತ್ತು. "ಪದವಿಟ್ಟಳುಪದೊಂದಗ್ಗಳಿಕೆ" ಡಿ ವಿ ಜಿ ಯವರಿಗೆ ಸೇರಿದ್ದಲ್ಲ. ಅವರು ಬರವಣಿಗೆಯಲ್ಲಿ "ನಚ್ಚು". ತಿದ್ದಬೇಕು, ತಿದ್ದಬೇಕು, ತಿದ್ದಬೇಕು ಎಂಬುದೇ ಮಂತ್ರ. ಎಷ್ಟು ಪರಿಪೂರ್ಣತೆ ಸಾಧ್ಯವೋ ಅಷ್ಟನ್ನೂ ಸಾಧಿಸ ಬೇಕೆಂಬುದೇ ಅವರ ಗುರಿ.

ಅವರ ಕಗ್ಗಗಳಲ್ಲಿ ಒಂದೇ ಭಾವನೆಯನ್ನು ಸೂಚಿಸುವ ಎರಡು ಮೂರು ಪದ್ಯಗಳನ್ನು ಕಾಣಬಹುದು. ಅದು ಅವರು ಒಂದೇ ಭಾವನೆಯನ್ನು ವ್ಯಕ್ತ ಪಡಿಸಲು ಬರೆದಿರುವ ಎರಡು ಮೂರು ಮಾದರಿಗಳು. ಇದು ಅವರ ಕಾವ್ಯ ಕರ್ಮಕ್ಕೆ ಒಂದು ಉದಾಹರಣೆ. ಹಾಗೆಯೇ ತಮ್ಮ ಗ್ರಂಥಗಳನ್ನು ಪುನ ರ್ಮುದ್ರಣ ಮಾಡುವ ಅವಕಾಶ ಒದಗಿದಾಗ ಅದನ್ನು ಪುನಃ ತಿದ್ದುತ್ತಿದ್ದದ್ದು ಸಾಮಾನ್ಯ. ಇದಕ್ಕೆ ಉದಾಹರಣೆಯನ್ನು ರಾಜರತ್ನಂ ಅವರು 'ಸ್ವತಂತ್ರ ಭಾರತ ಅಭಿನಂದನ ಸ್ತವ'ದ ಪೀಠಿಕೆಯಲ್ಲಿ ಕೊಟ್ಟಿದ್ದಾರೆ.

ಡಿ ವಿ ಜಿ ಯವರ ಕೆಲವು ವಾಕ್ಯಗಳು, ಪದ ಪುಂಜಗಳು ಅವರ ಶಬ್ದ ಸೃಷ್ಟಿ, ವಾಕ್ಯರಚನಾಕೌಶಲಕ್ಕೆ ಉದಾಹರಣೆಗಳು.

'ಶೀಲ ವಿಶೇಷದಿಂದಾಗುವ ವಾಗ್ವಿಶೇಷವೇ ಶೈಲಿ', 'ಓರಟು ಯಾನವೊ ಭಾಷೆ', 'ಸಮ್ಯಗ್ಜೀವನವೇ ಭಗವದಾರಾಧನೆ', 'ಮುಷ್ಟಿಯು ಗಾತ್ರದಲ್ಲಿಯೂ, ಒಂದು ನ್ಯಾಯವಿರಬಹುದು', 'ರಸವು ಎದೆಯೊಳಗಿನ ಓಡಾಟ', 'ಶಬ್ದಕ್ಕೆ ಅರ್ಥ ಬರುವುದು ನಿಘಂಟಿನಿಂದ, ಭಾವಕ್ಕೆ ಅರ್ಥ ಬರುವುದು ಅಂತರಂಗದ ಅನುಭವದಿಂದ', 'ಕನ್ನಡದಲ್ಲಿ ಸಂಸ್ಕೃತ ಬದುಕಬೇಕು', 'ರಸಿಕನು ಮನೋ ರಾಜ್ಯದ ಪ್ರಜೆ', 'ಮನುಷ್ಯ ಜೀವನವೇ ರಾಜ್ಯಕ್ಕೆ ಆರಾಧ್ಯ ದೈವ', 'ಸರಕಾರವೋ ಪ್ರಾರಬ್ಧವೊ', 'ಆಡಳಿತದಲ್ಲಿ ಸೊಗಸಿಲ್ಲದಿದ್ದರೆ ಶಾಸನ ಗ್ರಂಥದ ಸೊಗಸು ಕಾಗದದ ಹೂವೇ ಸರಿ', 'ವ್ಯಕ್ತಿ ವೈಶಿಷ್ಟ್ಯಕ್ಕೆ ಆದ ನಷ್ಟವು ರಾಷ್ಟ್ರಕ್ಕೆ ತಟ್ಟಿದ ನಷ್ಟ', 'ಪ್ರಜಾಪ್ರಭುತ್ವದಲ್ಲಿ ಆಶೆಗಳು ಬೆಳೆದು ಆತ್ಮ ಸಂಯಮ ಕುಗ್ಗುತ್ತದೆ', 'ಸಮಾನತೆ ಎಂಬುದು ಸ್ವಪ್ರತಿಷ್ಠೆ ಎಂಬುದರ ಹೊರ ಹೊದಿಕೆ', 'ನಿರ್ದಾಕ್ಷಿಣ್ಯವಾದ ವಿಮರ್ಶೆಯೇ ಸಾರ್ವಜನಿಕರು ದೇಶಕ್ಕೆ ಸಲ್ಲಿಸಬಹುದಾದ ಸರ್ವೋತ್ತಮ ಸೇವೆ.', 'ರಾಜ್ಯದ ಬೆನ್ನೆಲುಬು ಪಕ್ಷವಕ್ರಿತವಲ್ಲದ ಮಹಾಜನ' 'ಯಾರು ನ್ಯಾಯವಾದ ಪರಿಷ್ಕೃತಿಗೆ ವಿರೋಧಿಯೋ ಅವನು ಕ್ರಾಂತಿಕಾರನಿಗೆ ಪ್ರೋತ್ಸಾಹ', 'ಇತರಾಧಿಕಾರಭಯ', 'ಜೀವೋತ್ಕರ್ಷ', 'ಜೀವನೊದಾತ್ತತೆ' 'ರೂಪಾಂತರ ಗ್ರಹಣಸಿದ್ಧತೆ', 'ಸನ್ನಿವೇಶ ಸೂಚಕ ಶಕ್ತಿ', 'ರಾಷ್ಟ್ರಕ ಧರ್ಮ

ಭ್ಯಾಸ', 'ಪುಸ್ತಕ ಪಂಡಿತರು', 'ಪ್ರಜಾನ್ಯಾಯಾರ್ಥ', 'ಉತ್ತರ ಭಾರ', 'ಮೋಹಕಿಣ್ವ.'

ಡಿ ವಿ ಜಿ ಯವರ ಬರಹದ ಶೈಲಿಯನ್ನು ಕುರಿತು ಒಮ್ಮೆ ಮಾತನಾಡುತ್ತ ವಿದ್ವಾನ್ ಎನ್. ರಂಗನಾಥಶರ್ಮಾ ಅವರು ಭಾರವಿ ಕವಿಯ ಶೈಲಿಗೆ ಅನ್ವಯಿಸುವ 'ಅರ್ಥಗೌರವ' ಎಂಬ ಗುಣವನ್ನು ಡಿ ವಿ ಜಿ ಯವರಲ್ಲಿಯೂ ಕಾಣಬಹುದು ಎಂದಿದ್ದಾರೆ. 'ಅರ್ಥಗೌರವ' ಎಂದರೇನು ಎಂಬುದಕ್ಕೆ ಭಾರವಿಯೇ ತನ್ನ 'ಕಿರಾತಾರ್ಜುನೀಯ' ಕಾವ್ಯದಲ್ಲಿ ವಿವರಣೆ ನೀಡಿದ್ದಾನೆ ಎಂದು ಅವರು ಆ ಪದ್ಯಗಳನ್ನು ಉದಾಹರಿಸಿ ವಿವರಿಸಿದ್ದಾರೆ :

ಪ್ರಾಸಾದರಮ್ಯಮೋಜಸ್ವಿ ಗರೀಯೋ ಲಾಘವಾನ್ವಿತಮ್ ।
ಸಾಕಾಂಕ್ಷಮನುಪಸ್ಕಾರಂ ವಿಶ್ವಗ್ಗತಿ ನಿರಾಕುಲಮ್ ॥
ನ್ಯಾಯನಿರ್ಣೀತಸಾರತ್ವಾನ್ನಿರಪೇಕ್ಷಮಿವಾಗಮೇ ।
ಅಪ್ರಕಂಪ್ಯತಯಾನ್ಯೇಷಾಮಾಮ್ನಾಯ ವಚನೋಪಮಮ್ ॥
ಅಲಂಘ್ಯತ್ವಾಜ್ಜನೈರನ್ಯೈಃ ಕ್ಷುಭಿತೋದನ್ವದೂರ್ಜಿತಮ್ ।
ಔದಾರ್ಯಾದರ್ಥಸಂಪತ್ತೇಃ ಶಾಂತಂ ಚಿತ್ತಮೃಷೇರಿವ ॥

(11 : 38-40)

(ಪದಗಳು ಸರಳವಾಗಿವೆ, ಸುಲಭವಾಗಿ ಅರ್ಥವಾಗುವ ಹಾಗಿವೆ. ಆದ್ದರಿಂದ ರಮ್ಯವಾಗಿವೆ. ಸಮಾಸ ಪದಗಳಿಂದ ಕೂಡಿ ವೀರ್ಯವತ್ತಾಗಿದೆ. ಆದರೂ ಅಲ್ಲಿ ಶಬ್ದಾಡಂಬರವಿಲ್ಲ. ಎಲ್ಲವೂ ಅರ್ಥಗರ್ಭಿತವಾದ ತೂಕವುಳ್ಳ ಮಾತುಗಳು. ಅದು ವಿಸ್ತರದೋಷರಹಿತವಾದದ್ದು. ಅಂದರೆ ಎಲ್ಲಿ ಒಂದು ಶಬ್ದದಲ್ಲಿ ಹೇಳಬಹುದಾದರೂ ವಿಶದಪಡಿಸಬೇಕಾದ ಸಂದರ್ಭದಲ್ಲಿ ಒಂದು ವಾಕ್ಯದಲ್ಲೂ, ವಿಶದಪಡಿಸಿ ವಿಸ್ತಾರಮಾಡಬೇಕಾದ ಪ್ರಮೇಯವಿಲ್ಲದಿದ್ದಾಗ ಒಂದೇ ಮಾತಿನಲ್ಲೂ ಹೇಳುವ ಔಚಿತ್ಯವಿವೇಕ ಕಾಣುತ್ತದೆ. ಯಾವ ಪದಕ್ಕೆ ಎಲ್ಲಿ ಅನ್ವಯ ಎಂಬುದರ ವಿಚಾರದಲ್ಲಿ ಸಂದೇಹಕ್ಕೆಡೆಯಿಲ್ಲ. ಯಾವ ವಾಕ್ಯದಲ್ಲೂ ವಾಚಕನು ಅಧ್ಯಾಹಾರ ಮಾಡಿಕೊಳ್ಳಬೇಕಾಗಿಲ್ಲ, ವಾಕ್ಯದಲ್ಲಿ ಕಾಣದಿರುವ ಶಬ್ದವನ್ನು ಊಹಿಸಿಕೊಳ್ಳಬೇಕಾಗಿಲ್ಲ. ಹೇಳಬೇಕಾದ ವಿಷಯವೆಲ್ಲ ಸಂಪೂರ್ಣವಾಗಿ ತಿಳಿಯಬರುತ್ತದೆ. ವಾಕ್ಯರಚನೆ ವಿಷಯಪ್ರತಿಪಾದನೆ ಕಲಸುಮೇಲೋಗರವಾಗಿಲ್ಲ. ವಿಷಯಪ್ರತಿಪಾದನೆ ನ್ಯಾಯವಾದ ಯುಕ್ತಿಗಳಿಂದ ನಿಶ್ಚಯಿಸಲ್ಪಟ್ಟಿರುವ ಕಾರಣದಿಂದ ಇತರಾಧಿಕಾರ ಭಯವಿಲ್ಲದೆ ಸ್ವತಂತ್ರವಾಗಿರಬಲ್ಲದ್ದಾಗಿದೆ. ಇವರು ಹೇಳುವ ವಿಷಯಗಳನ್ನು ಇನ್ನೊಬ್ಬರು

ಅದು ಸರಿಯಲ್ಲ ಎಂದು ಅಲ್ಲಾಡಿಸಲಾರನು. ಅನುಮಾನಾದಿಗಳಿಂದ ಬಾಧಿತವಾಗದೆ ಇವೆ. ಆ ಕಾರಣದಿಂದ ವೇದ ವಚನದಂತಿವೆ. ಬೇರೆಯುವರು ಈ ಬರವಣಿಗೆಯನ್ನು ಉತ್ತಮಪಡಿಸಲಾರರು. ಸಮುದ್ರದಂತೆ ಗಂಭೀರವಾದ ಶೈಲಿಯುಳ್ಳದ್ದು. ವಿಪುಲವಾದ ಅರ್ಥ ಸಂಪತ್ತುಳ್ಳದ್ದು. ಋಷಿಗಳ ಹೃದಯದಂತೆ ಶಾಂತವಾಗಿರುವುದು. ಅವರ ಮಾತಿನಿಂದ ಯಾರ ಮನಸ್ಸಿಗೂ ನೋವಾಗದು.

ಹೀಗೆ ಡಿ ವಿ ಜಿ ಯವರಿಗೆ ಬರವಣಿಗೆ ಒಂದು ತಪಸ್ಸಿನ ಫಲ. ಅವರ ಸಾಹಿತ್ಯವನ್ನು ಮನೋರಂಜಕ ಎನ್ನುವುದಕ್ಕಿಂತ ವಿಚಾರ ಪ್ರೇರಕ ಮತ್ತು ಜೀವೋದ್ಧಾರಕ ಎನ್ನಬಹುದು.)

ಡಿ ವಿ ಜಿ ಗ್ರಂಥ ಪರಿಚಯ

ಡಿ ವಿ ಜಿ ಯವರು ಬರೆದ ಗ್ರಂಥಗಳನ್ನು ಕುರಿತು, ಲೇಖನಗಳನ್ನು ಕುರಿತು ಆ ಸಂದರ್ಭಗಳಲ್ಲಿ ಅಲ್ಲಲ್ಲೇ ಪ್ರಸ್ತಾಪಮಾಡಿದ್ದಾಗಿದೆ. ಹಾಗೆ ಪ್ರಸ್ತಾಪಮಾಡದ ಕೆಲವು ಮುಖ್ಯವಾದ ಗ್ರಂಥಗಳನ್ನು ಕುರಿತು ಸ್ಥೂಲವಾದ ಪರಿಚಯ ಈಗ ಮಾಡಿಕೊಳ್ಳೋಣ. ಇದು ಆ ಗ್ರಂಥಗಳ ವಿಮರ್ಶೆಯಲ್ಲ. ಕೇವಲ ಪರಿಚಯ ಮಾಡಿಕೊಡುವ ಒಂದು ಪ್ರಯತ್ನ:

ಪದ್ಯಗ್ರಂಥಗಳು : 1920ರ ಸಮಯಕ್ಕೆ, "ವಸಂತ ಕುಸುಮಾಂಜಲಿ" ಎಂಬ ಕವನ ಸಂಗ್ರಹದ ಕೆಲವು ಪದ್ಯಗಳು ಪ್ರಕಟಗೊಂಡಿದ್ದವೆಂದು, ಆ ಗ್ರಂಥ 1922ರಲ್ಲಿ ಪ್ರಕಟಗೊಂಡಾಗ, ಅದರ ಮುನ್ನುಡಿಯಲ್ಲಿ ಡಿ ವಿ ಜಿ ಹೇಳಿದ್ದಾರೆ. ಅಲ್ಲಿಂದೀಚೆಗೆ ಅವರು ರಚಿಸಿದ ಪದ್ಯಗಳನ್ನು ಸೇರಿಸಿ ಆ ಗ್ರಂಥವನ್ನು ಸೆಂಟ್ರಲ್ ಕಾಲೇಜ್ ಕರ್ನಾಟಕ ಸಂಘವು ಪ್ರಕಟಿಸಿತು. "ವಿಷಯದಲ್ಲಿಯೂ ಶೈಲಿಯಲ್ಲಿಯೂ ಆ ಸಂಗ್ರಹದಲ್ಲಿ ಸೇರಿಸಲ್ಪಟ್ಟ ಕವನಗಳು ಕನ್ನಡ ಪ್ರಪಂಚಕ್ಕೆ ಆಗ ಬರಲಿದ್ದಂತೆ ತೋರಿದ ಹೊಸ ವಸಂತ ಕಾಲದ ಮೊದಲ ಗುರುತಿನ ಮೊಗ್ಗುಗಳಂಥವು" ಎಂದು ಎಣಿಸಿ ಆ ಸಂಗ್ರಹಕ್ಕೆ ಟಿ.ಎಸ್. ವೆಂಕಣಯ್ಯನವರು "ವಸಂತ ಕುಸುಮಾಂಜಲಿ" ಎಂಬ ಹೆಸರನ್ನು ಕೊಟ್ಟರಂತೆ.

ಹಾಗೆಯೇ ಕನ್ನಡ ನಾಡಿನ ಹಲವು ಸುಂದರ ಪ್ರದೇಶಗಳನ್ನು ಕಂಡು ಆ ಸೌಂದರ್ಯದ ದರ್ಶನದಿಂದ ಮನಸ್ಸಿಗಾದ ಒಂದು ಕ್ಷಣದ ಅನುಭವವನ್ನು ಸ್ಥಿರರೂಪದಲ್ಲಿ ಹಿಡಿದಿರಿಸುವ ಪ್ರಯತ್ನ ಸೆಂಟ್ರಲ್ ಕಾಲೇಜ್ ಕರ್ನಾಟಕ ಸಂಘ 1924ರಲ್ಲಿ ಪ್ರಕಟಿಸಿದ 'ನಿವೇದನ' ಎಂಬ ಕವನ ಸಂಗ್ರಹ. "ವನಸುಮ" ಎಂಬ ಹಾಡು, ಅವರ ಜೀವನ ಸಿದ್ಧಾಂತವನ್ನು ಚಿತ್ರಿಸುವ "ದಾರಿಹೋಕರ ಹಾಡು" ಎಂಬ ಕವನ ಇರುವುದು ಈ ಸಂಗ್ರಹದಲ್ಲಿಯೇ.

"ಕುಮಾರವ್ಯಾಸ ದರ್ಶನ" ಎಂಬುದು 14 ಪದ್ಯಗಳ ಷಟ್ಪದಿ ಕಾವ್ಯ. 1925-26ರಲ್ಲಿ ಡಿ ವಿ ಜಿ ಗದುಗಿಗೆ ಹೋದಾಗ ಬರೆದಿಟ್ಟದ್ದು 1950ರಲ್ಲಿ 'ಕನ್ನಡನುಡಿ'ಯಲ್ಲಿ ಅಚ್ಚಾಗಿ ಪುಟ್ಟ ಪುಸ್ತಕವಾಗಿ ಬಂದಿದೆ. ಅದರಲ್ಲಿ ಕುಮಾರವ್ಯಾಸನ ಕವಿತಾಸಾಮರ್ಥ್ಯವನ್ನು ಕೊಂಡಾಡುವ ವ್ಯಾಜದಲ್ಲಿ ಅವನ ಕೃತಿಯ ವಿಮರ್ಶೆಯೂ ನಡೆದಿದೆ.

ಗಾಂಧಿಯವರನ್ನು ಕುರಿತು ಡಿ ವಿ ಜಿ ಯವರು ಬರೆದ ಪದ್ಯ 'ಸಾಧು ಗಾಂಧಿ' ಕನ್ನಡದಲ್ಲಿ ಗಾಂಧಿಯವರನ್ನು ಕುರಿತು ಬರೆದ ಮೊದಮೊದಲ ಪದ್ಯಗಳಲ್ಲೊಂದು ಎಂದು ಹೇಳಬಹುದು. ಅದು 'ವಸಂತ ಕುಸುಮಾಂಜಲಿ'ಯಲ್ಲಿ ಸೇರಿಸಲ್ಪಟ್ಟಿದೆ.

ಅನಂತರ 1943ರ ಫೆಬ್ರವರಿ–ಮಾರ್ಚಿಯಲ್ಲಿ ಗಾಂಧಿಯವರು ಉಪವಾಸ ವ್ರತ ಕೈಗೊಂಡಾಗ ದೇಶವೇ ತಲ್ಲಣಿಸಿತು. ಅವರು ಉಪವಾಸವನ್ನು ಮುಗಿಸಿದಾಗ ಡಿ ವಿ ಜಿ ಯವರು ಅದಕ್ಕಾಗಿ ಕೆಲವು ಪದ್ಯಗಳಲ್ಲಿ ಭಗವಂತನಿಗೆ ಧನ್ಯವಾದವನ್ನು ಸಮರ್ಪಿಸಿದ್ದಾರೆ. (ಮಾರ್ಚ್ 3, 1943).

1947ರಲ್ಲಿ ದೇಶ ಸ್ವತಂತ್ರವಾದಾಗ ರಚಿಸಿದ "ಸ್ವತಂತ್ರ ಭಾರತ ಅಭಿನಂದನ ಸ್ತವ"ದಲ್ಲಿ ಗಾಂಧಿಯವರನ್ನು ಸ್ಮರಿಸಿಕೊಂಡಿದ್ದಾರೆ.

ಆ ದೀವಿಗೆ ನಂದಿ ಹೋದಾಗ 24 ಪದ್ಯಗಳನ್ನು ರಚಿಸಿ ಗಾಂಧಿಯವರಿಗೆ ಅಂಜಲಿಯನ್ನು ಸಮರ್ಪಿಸಿದ್ದಾರೆ. (30–1–1948).

ಇವೆಲ್ಲವೂ "ಮಹಾತ್ಮಗಾಂಧಿ: ಜ್ಞಾಪಕ ಪದ್ಯ ಸಂಗ್ರಹ"ದಲ್ಲಿ ಸೇರಿಸಲ್ಪಟ್ಟಿದೆ.

ಗಾಂಧಿಯವರು "ದೈವ ಸಂಪನ್ಮಾರ್ಗದರ್ಶಕ"ರು, "ಜೀವಿಸಿಯೆ ಮುಕ್ತನಾಗಿದ್ದ"ವರು, ಆತನು "ಜೀವಿಸಿರಲ್ ಜೀವಿತಮೆಮಗಾದರಾರ್ಹಮೆನಿಸಿತು," ಅವರ ವಿಜಯಾಖ್ಯಾನವು "ನರವೃತ್ತದ ವಿಸ್ತರದೊಳ್ ನಿರುಪಮು," "ಅನವಧಿ ಜಗದಂತರಾತ್ಮ ವಿಭುಸಾಕ್ಷಿಯುಮಂ." ಎಂದು ಅನೇಕ ವಿಧವಾಗಿ ಡಿ ವಿ ಜಿ ಕೊಂಡಾಡಿದ್ದಾರೆ. ಗಾಂಧಿಯವರ ಉಪದೇಶ ಇಲ್ಲಿ ಪದ್ಯರೂಪದ ಸೂತ್ರಗಳಾಗಿ ಬಂದಿದೆ.

'ನಿವೇದನ' ಪದ್ಯ ಸಂಗ್ರಹದಲ್ಲಿ ಬೇಲೂರು ಶಿಲಾಬಾಲಿಕೆಯರನ್ನು ಕುರಿತು ಬರೆದಿರುವ ಕವನದ ವಿಸ್ತೃತ ರೂಪ "ಅಂತಃಪುರಗೀತೆ". 1950ರಲ್ಲಿ ಬಂದ ಈ ಗ್ರಂಥ ಕನ್ನಡ ಭಾಷೆಯಲ್ಲೇ ಅಪೂರ್ವವಾದ ಮುದ್ರಣ ಸೌಂದರ್ಯದೊಂದಿಗೆ ಪ್ರಕಟವಾಗಿದೆ ಎಂದು ರಸಿಕರು ಮೆಚ್ಚಿಕೊಂಡಿದ್ದಾರೆ.

ಬೇಲೂರಿನ ಚೆನ್ನಕೇಶವನ ಅಂತಃಪುರದ ಸೊಗಸಿನ ಒಂದು ಕ್ಷಣವನ್ನು ಶಿಲ್ಪಿ ಕಲ್ಲಿನಲ್ಲಿ ಕಡೆದಿಟ್ಟಿದ್ದಾನೆ. ಆ ಸೊಗಸಿನ ಸಂಪೂರ್ಣ ಅನುಭವ ನಮಗಾಗಬೇಕಾದರೆ ಆ ನೃತ್ಯಗಾತಿಯರ ಭಾವವನ್ನು ನಾವು ಅರಿತುಕೊಳ್ಳಬೇಕು.

ಈ ಸಂದರ್ಭದಲ್ಲಿ ವರ್ಡ್ಸ್‌ವರ್ತ್ ಕವಿಯ ಒಂದು ಪದ್ಯ ಜ್ಞಾಪಕಕ್ಕೆ ಬರುತ್ತದೆ.

Yes ; thou art fair, Yet be not moved
To scorn the declaration
That sometimes I in thee have loved
My fancy's own creation,

Imagination needs must stir;
Dear Maid, this truth believe
Minds that have nothing to confer
Find little to perceive.

ಯಾವ ಕಲಾಕೃತಿಯೇ ಆಗಲಿ ಅದರಲ್ಲಿರುವ ಸೌಂದರ್ಯ, ಅದರಲ್ಲಿರುವ ಸ್ವಾರಸ್ಯ ನಮಗೆ ಸಿಗಬೇಕಾದರೆ ನಮ್ಮ ದೃಷ್ಟಿಯನ್ನು ಅದಕ್ಕೆ ಸಿದ್ಧಪಡಿಸಿಕೊಳ್ಳಬೇಕು. ಹಾಗಿಲ್ಲದಿದ್ದರೆ ಅದರ ಸೊಗಸು ನಮಗೆ ಸಂಪೂರ್ಣವಾಗಿ ದೊರೆಯಲಾರದು.

ಹೀಗೆ ಆ ಶಿಲ್ಪಿಯ ಭಾವವನ್ನು ಅರಿತುಕೊಳ್ಳಲು ಬೇಕಾದ ದಿವ್ಯಮನೋಚಕ್ಷುಸ್ಸನ್ನು ಈ ಗ್ರಂಥದಲ್ಲಿ ಡಿ ವಿ ಜಿ ಯವರು ನಮಗೆ ಒದಗಿಸಿದ್ದಾರೆ. ಮನುಷ್ಯಸ್ವಭಾವದ ಮೂಲಗುಣಗಳನ್ನು ಒಂದೊಂದು ಮದನಿಕಾ ವಿಗ್ರಹದಲ್ಲಿ ಕಂಡು, ಆ ಮದನಿಕೆಯ ಭಾವವನ್ನು ಕುರಿತು ಪ್ರಶ್ನೆಗಳನ್ನು ಕೇಳಿದ್ದಾರೆ ಕವಿ.

ಇಲ್ಲಿ ಸೌಂದರ್ಯದ ಮೀಮಾಂಸೆಯಿದೆ, ಶೃಂಗಾರದ ಮೀಮಾಂಸೆಯಿದೆ. ಒರಟು ಯಾನವಾದ ಭಾಷೆ ತನ್ನ ಪರಿಪೂರ್ಣತೆಗಾಗಿ ಹೇಗೆ ಗಾನ ಮತ್ತು ಅಭಿನಯವನ್ನು ಅಪೇಕ್ಷಿಸುತ್ತದೆ ಎಂಬುದರ ವಿಮರ್ಶೆಯಿದೆ. ಸನಾತನ ವೇದಾಂತತತ್ತ್ವದ ನಿರೂಪಣೆಯಿದೆ. ಹೀಗೆ ಡಿ ವಿ ಜಿ ಯವರು ತಮ್ಮ ಜೀವಿತ ಸಿದ್ಧಾಂತವನ್ನು ಬಹು ಮನೋಜ್ಞವಾಗಿ ನಿರೂಪಿಸಿದ್ದಾರೆ ಈ ಗ್ರಂಥದಲ್ಲಿ.

"ಗೀತಶಾಕುಂತಲ" ಎಂಬ ಅವರ ಗ್ರಂಥವಾದರೋ ಕಾಲಿದಾಸ ಕವಿಯ ಶಾಕುಂತಲ ನಾಟಕದ ಕೆಲವು ಸರಸ ಸಂದರ್ಭಗಳ ಕನ್ನಡ ಗೀತ ರೂಪಾಂತರ. ಶಾಕುಂತಲ ನಾಟಕವು ಹೇಗೆ ಧರ್ಮ ಪ್ರತಿಪಾದಕವಾದದ್ದು ಎಂಬುದನ್ನು ವಿವರಿಸುವ ಒಂದು ಪ್ರಸ್ತಾವನೆಯೂ ಇಲ್ಲಿದೆ.

ಹಿಂದೆ ಎಂದೋ ರಚಿಸಿ ಮರೆತುಹೋಗಿದ್ದ 95 ಕವನಗಳನ್ನು ಡಿ ವಿ ಜಿ 'ಕೇತಕೀವನ' ಎಂಬ ಕವನ ಸಂಕಲನದಲ್ಲಿ 1973 ರಲ್ಲಿ ಪ್ರಕಟಿಸಿದರು. ಇದು ಭಾವನಾಪ್ರಧಾನವಾದ ಕವನಗಳ ಸಂಕಲನ. ಇದರಲ್ಲಿ ಶೃಂಗಾರವಿದೆ; ಪ್ರಕೃತಿ ವರ್ಣನೆಯಿದೆ, ತತ್ತ್ವವಿವೇಚನೆಯಿದೆ.

ಡಿ ವಿ ಜಿ ಪಟ್ಟ, ಕಂಡ, ಕೇಳಿದ, ಮನಸ್ಸಿನ ತುಮುಲಗಳ, ಕ್ಷೋಭೆಯ ವರ್ಣನೆ ಇಲ್ಲಿ ಬಂದಿದೆ ಎನ್ನಬಹುದು. ಇವು ಅವರ ಮನಸ್ಸಿನಲ್ಲಿದ್ದು ಅವರ ಮನಸ್ಸನ್ನು ಉಲ್ಲೋಲಕಲ್ಲೋಲ ಮಾಡಿತೆಂಬುದು ಅವರ ಮಾನವತೆಯ ಗುರುತಾಗಿ ಕಾಣುತ್ತದೆ. ಆದರೆ ಅವರು ಅದನ್ನು ಮೀರಿದರೂ ಅದರ ಸೊಗಸನ್ನ ಕಂಡರೂ ಆದರಲ್ಲಿ ಮೈಮರೆಯಲಿಲ್ಲ ಎಂಬುದೂ ಇಲ್ಲಿ ಗಮನಿಸಬೇಕಾದ ಸಂಗತಿ.

ಬಹು ಗಾಢವಾದ ಭಾವಗಳನ್ನು ವರ್ಣಿಸುವ ಈ ಪದ್ಯಸಂಕಲನ ಡಿ ವಿ ಜಿ ಯವರ ಬೆಳವಣಿಗೆಯ ಒಂದು ಹಂತವನ್ನು ಗುರುತಿಸುತ್ತದೆ.

ಗದ್ಯಗ್ರಂಥಗಳು : 1932 ರಲ್ಲಿ ಪ್ರಕಟವಾದ "ಜೀವನ ಸೌಂದರ್ಯ ಮತ್ತು ಸಾಹಿತ್ಯ" ಮತ್ತು 1950 ರಲ್ಲಿ ಪ್ರಕಟವಾದ "ಸಾಹಿತ್ಯಶಕ್ತಿ" ಎಂಬ ಗ್ರಂಥಗಳು ಅವರ ಗದ್ಯಗ್ರಂಥಗಳಲ್ಲಿ ಮುಖ್ಯವಾದವು. ಇವುಗಳಲ್ಲಿ ಬಹು ತೇಕ ಲೇಖನಗಳು ಅವರು ಸಾಹಿತ್ಯಪರಿಷತ್ತು ಮತ್ತು ಸೆಂಟ್ರಲ್ ಕಾಲೇಜ್ ಕರ್ಣಾಟಕ ಸಂಘ ಇವುಗಳಲ್ಲಿ ಮಾಡಿದ ಉಪನ್ಯಾಸಗಳು. ಒಂದೆರಡು ಲೇಖನಗಳು ಪ್ರಬುದ್ಧ ಕರ್ಣಾಟಕದಲ್ಲಿ ಪ್ರಕಟವಾದವು. ಕಾವ್ಯ, ಭಾಷೆ, ಸೌಂದರ್ಯ ಇವುಗಳಿಗೂ ಜನ ಜೀವನಕ್ಕೂ, ಜೀವನದ ಭಾಗವಾದ ರಾಜ ಕೀಯ, ವಿಜ್ಞಾನ ಇವುಗಳಿಗೂ ಇರುವ ಸಂಬಂಧವನ್ನು ಕೂಲಂಕಶವಾಗಿ ಪಾಂಡಿತ್ಯ ಪೂರ್ಣವಾಗಿ ಮಾಡಿರುವ ಚರ್ಚೆ ಇಲ್ಲಿದೆ. ಕಾವ್ಯವೆಂದರೇನು, ಕಾವ್ಯವನ್ನು ಏಕೆ ಓದಬೇಕು, ಜೀವನದಲ್ಲಿ ರಾಷ್ಟ್ರಕಧರ್ಮಾಚರಣೆಯಲ್ಲಿ ಅದರ ಅನ್ವಯ ಹೇಗೆ ಮುಂತಾದ ವಿಷಯಗಳು ಇಲ್ಲಿವೆ.

'ಕಾವ್ಯ ಸ್ವಾರಸ್ಯ' ಎಂಬ ಅವರ ಗ್ರಂಥದಲ್ಲಿ "ಸಾಹಿತ್ಯ" ಎಂಬ ಪದಕ್ಕೆ ಉಪನಿಷತ್ತಿನ ಮಾರ್ಗದ ವಿವರಣೆಕೊಟ್ಟಿರುವುದು ಕುತೂಹಲಕಾರಿಯಾಗಿದೆ.

ವಿದ್ಯಾರಣ್ಯರು: ಡಿ ವಿ ಜಿ ಯವರು ವಿದ್ಯಾರಣ್ಯರ ಸಂಬಂಧವಾಗಿ ಬರೆದ ಗ್ರಂಥಗಳು ಮೂರು : "ಶ್ರೀ ವಿದ್ಯಾರಣ್ಯರು ಮತ್ತು ಅವರ ಕಾಲ," "ವಿದ್ಯಾರಣ್ಯರು ಮತ್ತು ಅವರ ಸಮಕಾಲೀನರು" ಮತ್ತು "ವಿದ್ಯಾರಣ್ಯ ವಿಜಯ" ಎಂಬ ನಾಟಕ.

"ಶ್ರೀ ವಿದ್ಯಾರಣ್ಯರು ಮತ್ತು ಅವರ ಕಾಲ"ವನ್ನು ಮೊದಲು ಓದಿ ಸಂತೋಷಿಸಿ ಅದನ್ನು ಜುಲೈ 1920 ಮತ್ತು ಏಪ್ರಿಲ್ 1922ರ ಪರಿಷತ್ಪತ್ರಿಕೆ ಯಲ್ಲಿ ಪ್ರಕಟಪಡಿಸಿದವರು ಬೆಳ್ಳಾವೆ ವೆಂಕಟನಾರಣಪ್ಪನವರು.

"ಆರು ಶತಾಬ್ದಗಳ ಹಿಂದೆ ಆರ್ಯಧರ್ಮವನ್ನು ಭೂಮುಖದಿಂದ

ತೊಡೆದುಹಾಕಲೆಂದು ಬಂದ ಮಹಮದೀಯ ಮಹಾಪ್ರವಾಹಕ್ಕೆ ಅಡ್ಡಗಟ್ಟೆ ಹಾಕಿ ಅದನ್ನು ತಡೆದು, ಸ್ವಸಾಮರ್ಥ್ಯದಿಂದ ನಿಲ್ಲುವ ಶಕ್ತಿಯನ್ನು ಹಿಂದೂ ಸಮಾಜಕ್ಕುಂಟುಮಾಡಿಕೊಟ್ಟು, ವೇದಭಾಷ್ಯಾದ್ಯನೇಕ ಗ್ರಂಥ ನಿರ್ಮಾಪಕರಾಗಿ, ವೈದಿಕ ಲೌಕಿಕ ಧರ್ಮಸಮನ್ವಯ ಪ್ರವರ್ತಕರಾಗಿ, ಕರ್ನಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯರೆಂದು ಹೆಸರ್ಗೊಂಡವರು" ವಿದ್ಯಾರಣ್ಯರು. "ಆ ಮಹಾಮಹಿಮರ ಹೆಸರು ಹಿಂದೂಗಳ ಮತಾಚಾರ ಚರಿತ್ರೆಯಲ್ಲಿ ಹೇಗೋ, ಅವರ ರಾಜಕೀಯ ಚರಿತ್ರೆಯಲ್ಲಿಯೂ ಹಾಗೆ ಸರ್ವ ಸನ್ಮಾನ್ಯವಾಗಿ ಶಾಶ್ವತವಾಗಿ ಬೆಳಗುತ್ತಿರುವುದು. ಅವರು ವೇದಶಾಸ್ತ್ರಜ್ಞರಾಗಿದ್ದಂತೆಯೇ ರಾಜ್ಯತಂತ್ರಜ್ಞರಾಗಿಯೂ ಇದ್ದರು; ಧರ್ಮಾಭಿಮಾನಿಗಳಾಗಿದ್ದಂತೆಯೇ ದೇಶಾಭಿಮಾನಿಗಳಾಗಿಯೂ ಇದ್ದರು. ಅಂತಹವರು ಆಗ ಹುಟ್ಟದೆ ಇದ್ದಿದ್ದರೆ ಹಿಂದೂ ಸಮಾಜದ ಗತಿ ಏನಾಗಿರುತ್ತಿತ್ತೆಂಬುದನ್ನು ಊಹಿಸುವುದೂ ಕಷ್ಟದ ಕೆಲಸ."

ವಿದ್ಯಾರಣ್ಯರ ಚರಿತ್ರೆ ಲೌಕಿಕ ವೈದಿಕ ಸಮನ್ವಯಕ್ಕೆ ಹೇಗೆ ಆದರ್ಶವಾಗಿ ಕಂಡಿತೋ, ಹಾಗೆಯೇ ದೇಶಭಕ್ತಿಗೂ ಆದರ್ಶವಾಗಿ ಕಂಡಿತು ಡಿ ವಿ ಜಿ ಯವರಿಗೆ. ವಿದ್ಯಾರಣ್ಯರು ಯಾರು, ಅವರ ಮಾತಪಿತೃಗಳು, ಸೋದರರು, ಗುರುವರ್ಗ, ಅವರು ಮಾಡಿದ ಕೆಲಸ, ಅವರ ಅವತಾರದ ಕಾಲದ ಸ್ಥಿತಿ— ಇವೆಲ್ಲ ಆ ಲೇಖನದಲ್ಲಿದೆ.

ಈ ಚರಿತ್ರೆ ಡಿ ವಿ ಜಿ ಯವರ ಸಂಶೋಧನ ಸಾಮರ್ಥ್ಯಕ್ಕೆ ಉದಾಹರಣೆಯಾಗಿದೆ.

ಜನವರಿ 1922ರ ಹೊತ್ತಿಗೆ ಕರ್ನಾಟಕ ವಿದ್ಯಾವರ್ಧಕ ಸಂಘದ ವಿಜಯ ವಿದ್ಯಾರಣ್ಯ ಸಂಚಿಕೆಯಲ್ಲಿ ಪಂಡಿತ ಭೀಮಾಜೀ ಜೀವಾಜೀ ಹುಲಿಕವಿಯವರು ಬರೆದ "ಶ್ರೀ ವಿದ್ಯಾರಣ್ಯಸ್ವಾಮಿಗಳು" ಗ್ರಂಥ ಪ್ರಕಟವಾಯಿತು. ಅದರಲ್ಲಿ ಡಿ ವಿ ಜಿ ಯವರ ಪ್ರಬಂಧದ ಬಹುಭಾಗಗಳು ಪಂಡಿತ ಹುಲಿಕವಿಗಳವರ ಸ್ವಂತ ಬರವಣಿಗೆಯೋ ಎಂಬಂತೆ ಅಚ್ಚಾಗಿದ್ದವು. ಇದನ್ನು ಕಂಡ ಡಿ ವಿ ಜಿ ಪರಿಷತ್ಪತ್ರಿಕೆಯ ಕಾರ್ಯದರ್ಶಿಯವರಿಗೊಂದು ಪತ್ರ ಬರೆದು "ತಮ್ಮ ಪತ್ರಿಕೆಯಲ್ಲಿ ಮುದ್ರಿತವಾದ ಲೇಖನಗಳನ್ನು ಈ ರೀತಿ ಇತರರು ಉಪಯೋಗಿಸಿಕೊಳ್ಳುತ್ತ ಬಂದರೆ, ತಮ್ಮನ್ನಾಶ್ರಯಿಸಿರುವ ನನ್ನಂತಹ ಬಡ ಲೇಖಕರಿಗೆ ತಕ್ಕ ಪ್ರತಿಫಲ ದೊರೆತಂತಾಗುವುದೆ?" ಎಂದು ಕೇಳಿದ್ದಾರೆ. (ಸಾಹಿತ್ಯಪರಿಷತ್ಪತ್ರಿಕೆ ಜನವರಿ 1922) ಪಂಡಿತರ ಗ್ರಂಥವನ್ನು ಅದೇ ಸಂಚಿಕೆಯಲ್ಲಿ ವಿಮರ್ಶಿಮಾಡಿದ

ಟಿ.ಎಸ್. ವೆಂಕಣ್ಣಯ್ಯನವರು "ಪಂಡಿತ ಹುಲಿಕವಿಗಳು ಮ॥ ಗುಂಡಪ್ಪನವರ ಲೇಖನದಿಂದ, ಕೃತಜ್ಞತಾ ಸೂಚನೆಯಿಲ್ಲದೆ ಎಷ್ಟು ಮಾತ್ರ ಎತ್ತಿಕೊಂಡಿರುವರು ಎಂಬುದಕ್ಕೆ" ಸುಮಾರು 23 ಉದಾಹರಣೆಗಳನ್ನು ಕೊಟ್ಟು, "ಇದನ್ನು ಚೌರ್ಯವೆಂದು ಕರೆದರೆ ಕಠಿನೋಕ್ತಿಯೆಂದೆನ್ನುವರೊ ? ಬೇರೆ ಯಾವ ಹೆಸರಿನಿಂದಲಾದರೂ ಕರೆಯೋಣವೆಂದರೆ ಅಂತಹ ಪದವಾವುದೂ ನಮಗೆ ತೋರದು," ಎಂದು ಹೇಳಿದ್ದಾರೆ.

"ಒಂದು ದೇಶವನ್ನು ಅಥವಾ ಒಂದು ಜನಾಂಗವನ್ನು ಮುಂದಕ್ಕೆ ತರಲು ಪಂಡಿತನೂ ದೇಶಾಭಿಮಾನಿಯೂ ಆದ ಮಾರ್ಗದರ್ಶಕನು ಮಾತ್ರ ಇದ್ದರೆ ಸಾಲದು. ಆತನು ತೋರುವ ದಾರಿಯಲ್ಲಿ ನಡೆಯುವಂತೆ ದೇಶದ ಸಾಮಾನ್ಯ ಜನರನ್ನು ಪ್ರೋತ್ಸಾಹಪಡಿಸಿ ಪ್ರೇರಿಸಲು ಅನೇಕ ಮಂದಿ ಉಪೋದ್ಬಲಕರ್ತರೂ ಇರಬೇಕು. ಸಮಾಜದಲ್ಲಿ ಗಣ್ಯರಾಗಿಯೂ ಅನುಸರಣೀಯರಾಗಿಯೂ ಇರತಕ್ಕ ಪ್ರಮುಖ ಜನರಲ್ಲಿ ಒಬ್ಬನ ವಿನಾ ಉಳಿದವರು ದೇಶ ವಾತ್ಸಲ್ಯವಿಲ್ಲದವರಾಗಿ, ಪ್ರಜಾಭಿಮಾನವನ್ನು ತೊರೆದು, ಸಮಾಜ ವಿಷಯದಲ್ಲಿ ಉದಾಸೀನರಾಗಿದ್ದರೆ, ಆ ಒಬ್ಬನು ಮಾತ್ರವೇ ಪಡುವ ಪ್ರಯಾಸವು ಅವನೆಷ್ಟು ಸಮರ್ಥನಾದರೂ ಸಾರ್ಥಕವಾಗಲಾರದು." ಹೀಗೆ "ವಿಜಯ ನಗರ ಪ್ರತಿಷ್ಠೆಯ ಸಮಾರಂಭವು ಒಬ್ಬ ವ್ಯಕ್ತಿಯನ್ನು ಮಾತ್ರವೇ ಅವಲಂಬಿಸಿದ್ದುದಾಗದೆ ಬಹು ಮಂದಿಯ ಆಶ್ರಯದಿಂದ ಬೆಳೆಯಿತು. ದೇಶ ಕಾರ್ಯದಲ್ಲಿ ಒಬ್ಬಂಟಿಗರಾಗಿಯೂ ಸಹಾಯ ಶೂನ್ಯರಾಗಿಯೂ ಕ್ಲೇಶಪಡಬೇಕಾದ ಸಂದರ್ಭವು ವಿದ್ಯಾರಣ್ಯ ಸ್ವಾಮಿಗಳವರಿಗೆ ಎಷ್ಟು ಮಾತ್ರವೂ ಒದಗಿರಲಿಲ್ಲ. ಅವರು ಕೈಗೊಂಡಿದ್ದ ಮಹಾವ್ಯವಸಾಯದಲ್ಲಿ ನೆಲವನ್ನು ಉತ್ತು ಸರಿಪಡಿಸಿಕೊಡುವುದಕ್ಕೂ ಪೈರಿಗೆ ನೀರು ಕಟ್ಟಿ ಕಳೆ ತೆಗೆಯುವುದಕ್ಕೂ ತಕ್ಕಷ್ಟು ಮಂದಿ ಸಾಹ್ಯ ಕರ್ತರು ಸಿದ್ಧರಾಗಿದ್ದರು." ಅಂಥವರಲ್ಲಿ ಮುಖ್ಯರಾದವರಲ್ಲಿ ಶ್ರೀವಿದ್ಯಾತೀರ್ಥರು, ಶ್ರೀಭಾರತೀ ಕೃಷ್ಣ ತೀರ್ಥರು, ಶ್ರೀ ಶಂಕರಾನಂದರು, ಶ್ರೀ ಶ್ರೀಕಂಠನಾಥರು ವಿದ್ಯಾರಣ್ಯರ ಗುರುವರ್ಗಕ್ಕೆ ಸೇರಿದವರು. ಸಾಯಣಾಚಾರ್ಯರು, ಭೋಗನಾಥರು ಸೋದರ ವರ್ಗಕ್ಕೆ ಸೇರಿದವರು. ಇವರ ಚರಿತ್ರೆ, ಅವರ ಗ್ರಂಥಗಳ ವಿಮರ್ಶೆ "ವಿದ್ಯಾರಣ್ಯರ ಸಮಕಾಲೀನರು" ಗ್ರಂಥದ ವಿಷಯ. ಇದರ ಬಹುಭಾಗವನ್ನು ಮೊದಲು 'ಪ್ರಬುದ್ಧ ಕರ್ನಾಟಕ' ದಲ್ಲಿ ಪ್ರಕಟಿಸಿದವರು ಎ.ಆರ್. ಕೃಷ್ಣಶಾಸ್ತ್ರಿಗಳವರು. ಈ ಗ್ರಂಥವೂ ಡಿ ವಿ ಜಿ ಯವರು ವಿಷಯ ಸಂಗ್ರಹಣೆಗೆ ಪಟ್ಟಿರುವ ಶ್ರಮವನ್ನೂ, ಅದನ್ನು ನಿರೂಪಿಸಿ

ರುವ ಸೊಗಸನ್ನೂ ಎತ್ತಿ ತೋರಿಸುವುದಾಗಿದೆ. ಗ್ರಂಥದಲ್ಲಿ ಆ ಮಹಾಪುರುಷರ ಗ್ರಂಥಗಳಿಂದ ಸ್ವಾರಸ್ಯವಾದ ಭಾಗಗಳನ್ನು ಎತ್ತಿ ಕೊಟ್ಟಿರುವುದು ತುಂಬ ಉಪಯೋಗಕರವಾಗಿದೆ.

ವಿದ್ಯಾರಣ್ಯರನ್ನು ಕುರಿತು, ಡಿ ವಿ ಜಿ ಯವರು ಬರೆದ ಮೇಲೆ, ಅನೇಕ ಗ್ರಂಥಗಳು ಬಂದಿವೆ. "ವಿದ್ಯಾರಣ್ಯ" ರೆಂಬವರು ಇರಲೇ ಇಲ್ಲ ಎಂದು ಹೇಳು ವವರೆಗೂ ವಾದ ಹೋಗಿದೆ. ವಿದ್ಯಾರಣ್ಯರನ್ನು ಕುರಿತು ಇನ್ನೊಂದು ಗ್ರಂಥ ವನ್ನು ಬರೆಯುವ ಉದ್ದೇಶದಿಂದ ವಿಷಯ ಮತ್ತು ಗ್ರಂಥ ಸಂಗ್ರಹ ಮಾಡಿ ಕೊಂಡಿದ್ದರು ಡಿ ವಿ ಜಿ. ಆ ಗ್ರಂಥವನ್ನು ತಾವು ಬರೆಯಬೇಕೆಂಬ ಮಹ ದಾಸೆಯೂ ಇತ್ತು. ಆದರೆ ದೇಶದ ದುರದೃಷ್ಟದಿಂದ ಅವರ ಆಸೆ ಈಡೇರಲಿಲ್ಲ.

ವಿದ್ಯಾರಣ್ಯರನ್ನು ಕುರಿತ ಡಿ ವಿ ಜಿ ಯವರ ಇನ್ನೊಂದು ಗ್ರಂಥ "ವಿದ್ಯಾರಣ್ಯ ವಿಜಯ" ನಾಟಕ. ಅದನ್ನು ಕುರಿತು "ಶ್ರೀಮಾನ್ ಗುಂಡಪ್ಪ ನವರು ವಿಜಯ ನಗರದ ಸ್ಥಾಪನೆಯ ಚರಿತ್ರೆಯನ್ನು 'ವಿದ್ಯಾರಣ್ಯ ವಿಜಯ' ಎಂಬ ನಾಟಕದಲ್ಲಿ ಚಿತ್ರಿಸಿದ್ದಾರೆ. ಇದು ಎಲ್ಲ ನಾಟಕಗಳಂತೆ ಒಂದು ಸನ್ನಿ ವೇಶವನ್ನು ಕುರಿತು ಒಂದು ಕಥೆಯನ್ನು ವಿವರಿಸುವ ದೃಶ್ಯಗ್ರಂಥವಲ್ಲ. ಇದರ ಚಿತ್ರ ವಿಸ್ತಾರವಾದ ಪಟದ ಮೇಲೆ ಚರಿತ್ರೆಯ ದೃಷ್ಟಿಯಿಂದ ಬರೆಯಲ್ಪಟ್ಟಿದೆ. ಸಾಹಿತ್ಯದಲ್ಲಿ ಇದೂ ಒಂದು ಹೊಸರೀತಿ" ಎಂದಿದ್ದಾರೆ ಮಾಸ್ತಿಯವರು (ಆರಂಭದ ಆಂಗ್ಲ ಸಾಹಿತ್ಯ ಮತ್ತು ನಮ್ಮ ಹೊಸ ಸಾಹಿತ್ಯದ ಆರಂಭ). ಇನ್ನೊಂದು ಕಡೆ ಮಾಸ್ತಿಯವರು, ಈ ನಾಟಕವನ್ನು ಡಿ ವಿ ಜಿ ತಮಗೆ ಓದಿ ಹೇಳಿದ್ದರೆಂಬುದನ್ನು ಜ್ಞಾಪಿಸಿಕೊಳ್ಳುತ್ತ "ಗ್ರಂಥದ ಆರಂಭದಲ್ಲಿ ಬರುವ ತಾಯಿ ಮಗನ ಸಂವಾದದ ಭಾಗ, ಶ್ರೀರಂಗದ ದೇವಾಲಯವನ್ನು ಕಾಪಾಡಿ ಕೊಳ್ಳಲು ಆ ವೈಷ್ಣವರು ಯತ್ನಿಸಿದ್ದರ ವರ್ಣನೆಯ ಭಾಗ, ದಳಪತಿ ಗೋಪಣ್ಣ ನವರನ್ನು ಗೌರವಿಸಿದ ಕ್ರಮದ ವರ್ಣನೆಯ ಭಾಗ ಇವು ನನಗೆ ತುಂಬಾ ಮೆಚ್ಚಿಕೆಯಾದುವು. ಗುಂಡಪ್ಪನವರಿಗೆ ನಾನು ನನ್ನ ಸಂತೋಷವನ್ನು ಬಾಯಿ ಬಿಟ್ಟು ಹೇಳಿದೆನು" ಎಂದು ಹೇಳಿದ್ದಾರೆ. (ಸಾಹಿತ್ಯ ಪ್ರೇರಣೆ.)

"ಉಪನ್ಯಾಸದ ರೀತಿಯಲ್ಲಿ ಸಮರ್ಪಕವಾಗಿ ಬಣ್ಣಿಸಲಾಗದ ಐತಿಹಾಸಿಕ ತತ್ತ್ವಗಳು ಕೆಲವುಂಟು. ಅವುಗಳನ್ನು ಕಾವ್ಯದ ರೀತಿಯಲ್ಲಿ ಜನದ ಊಹಾ ಶಕ್ತಿಗೆ ಗೋಚರಪಡಿಸಬಹುದು. ಈ ನಂಬಿಕೆಯಿಂದ ವಿದ್ಯಾರಣ್ಯರ ಕಾರ್ಯ ರೀತಿಯನ್ನು ತೋರಿಸಲು ಒಂದು 'ನಾಟಕ' ಅಥವಾ ದೃಶ್ಯಪ್ರಕರಣವನ್ನು ಬರೆದಿರುವೆನು" ಎಂದಿದ್ದಾರೆ ಡಿ ವಿ ಜಿ. ಮತ್ತು "ಈ ಕೃತಿಯು ದೃಶ್ಯಕಾವ್ಯದ

ರೂಪವನ್ನು ಧರಿಸಿದ್ದರೂ ಇದನ್ನು 'ನಾಟಕ' ಅಥವಾ 'ರೂಪಕ' ಎಂದು ಆ ಪದಗಳ ವಿಶೇಷಾರ್ಥದಲ್ಲಿ ಕರೆಯಬಹುದೋ ಇಲ್ಲವೋ ಎಂಬ ವಿಷಯದಲ್ಲಿ ಲೇಖಕನಿಗೇ ಸಂದೇಹವುಂಟು. ಈ ಪ್ರಬಂಧವು ಒಂದು ರಾಜ್ಯದ ಕಥೆ..... ಇದರಲ್ಲಿರಬಹುದಾದ ರಸವೂ ಇತರ ನಾಟಕಗಳಲ್ಲಿರುವಷ್ಟು ಮಟ್ಟಿಗೆ ಇಲ್ಲದೆ ಇರಬಹುದು. ಇದು ಒಂದು ಬರಿಯ ದೃಶ್ಯ ಚಿತ್ರಗಳ ಪರಂಪರೆ."

ಎ.ಆರ್. ಕೃಷ್ಣ ಶಾಸ್ತ್ರಿಗಳು ಇದನ್ನು ವಿಮರ್ಶಿಸುತ್ತ "ಇದರಲ್ಲಿ ನಾಟಕಕ್ಕೆ ಉಚಿತವಾದ ಅನೇಕ ಸನ್ನಿವೇಶಗಳಿವೆ. ಪಾತ್ರಪ್ರತಿಪಾದನಕ್ರಮ ದಲ್ಲಿ ಕಣ್ಣಿಗೆ ಬೀಳುವಂಥ ವಿಶೇಷಾಂಶವೇನೂ ಇಲ್ಲ. ಈ ಗ್ರಂಥದಲ್ಲಿ ವ್ಯಕ್ತಿ ಪ್ರಾಶಸ್ತ್ಯವಿದ್ದಿದ್ದರೆ ಈ ಅಂಶಕ್ಕೆ ಇನ್ನೂ ಹೆಚ್ಚಾಗಿ ಗಮನ ಕೊಡುತ್ತಿದ್ದರೆಂದು ತೋರುತ್ತದೆ. ಆದರೆ 'ಇದು ವ್ಯಕ್ತಿಯ ಅಥವಾ ವ್ಯಕ್ತಿಗಳ ಕಥೆಯಲ್ಲ.— "ರಾಜ್ಯದ ಕಥೆ." ಇದರಲ್ಲಿ ಬರುವ ಪದ್ಯ ಭಾಗಗಳು ಕೆಲವು ಕಡೆ ಸಣ್ಣ ಖಂಡ ಕಾವ್ಯಗಳಾಗುವಷ್ಟು ದೊಡ್ಡವಾಗಿವೆ. ವ್ಯಾಸಸ್ತುತಿ, ರಂಗಸ್ತುತಿ ಇವು ವಿಷಯಕ್ಕೆ ತಕ್ಕಂತೆ ಗಂಭೀರವಾಗಿಯೂ ಭಕ್ತಿಪೂರ್ವಕವಾಗಿಯೂ ಇವೆ. ಭಾಷೆಯು ಶುದ್ಧವಾಗಿದೆ ಎಂದು ಹೇಳಬೇಕಾಗಿಲ್ಲ."

"ಇನ್ನು ಫಲಶ್ರುತಿ. ವಿದ್ಯಾರಣ್ಯರು ನಮ್ಮವರು; ಕರ್ಣಾಟಕ ರಾಜ್ಯ ಸ್ಥಾಪಕರು; ಕರ್ಣಾಟಕ ದೇಶೋದ್ಧಾರಕರು; ಆದ್ದರಿಂದ ಅವರ ಚರಿತ್ರೆ ಯನ್ನು ಓದುವುದು ಕನ್ನಡಿಗರೆಲ್ಲರಿಗೂ ಶ್ರೇಯಸ್ಸು. ಈ ಭಕ್ತಿಭಾವವಿಲ್ಲದೆ ಪ್ರಕೃತ ಗ್ರಂಥವನ್ನು ಓದಿದರೆ ಮತಾಭಿಮಾನವಿಲ್ಲದೆ ಮಣಿಮಂಜರಿಯನ್ನು ಓದಿದಂತೆ ಆಗುತ್ತದೆ"—ಎಂದಿದ್ದಾರೆ.

25–2–1927ರಂದು ಕರ್ಣಾಟಕ ಸಂಘದ ಉತ್ಸವದಂದು "ವಿದ್ಯಾರಣ್ಯ ವಿಜಯ" ನಾಟಕವು ಅಭಿನಯಿಸಲ್ಪಟ್ಟಿತು. ಅದನ್ನು ಕುರಿತು "Vidyaranya Vijaya staged. Didn't stay to see the representation on the stage, for fear that it may go bad. The make-up did'nt look quite good" ಎಂದು ಟಿಪ್ಪಣಿ ಮಾಡಿಕೊಂಡಿದ್ದಾರೆ ಡಿ ವಿ ಜಿ. ಮಾರನೆಯ ದಿನದ ಟಿಪ್ಪಣಿ: "Karnataka Sangha Social at 5 p m. B. M. S. was there. Very cordial and nice. He said he wanted to see me yesterday evening after the staging of Vidyaranya and tell me how he felt thrilled. It was more than he could bear– the pathos, he said. The power of the style was so great. Perhaps it is so. Who knows?"

ಪರೀಕ್ಷಣಂ ಗ್ರಂಥಗಳು : 'ಶ್ರೀರಾಮ ಪರೀಕ್ಷಣಂ' ಮತ್ತು 'ಶ್ರೀಕೃಷ್ಣ ಪರೀಕ್ಷಣಂ' ಎಂಬ ಗ್ರಂಥಗಳು ಪದ್ಯ ಕಾವ್ಯ ರೂಪವಾದ, ಕಾವ್ಯ ವಿಮರ್ಶಾ ಗ್ರಂಥಗಳು, ವ್ಯಕ್ತಿ ಚಾರಿತ್ರ ವಿಮರ್ಶಾ ಗ್ರಂಥಗಳು ಎಂದು ಹೇಳಬಹುದು. ಶ್ರೀರಾಮ ಶ್ರೀಕೃಷ್ಣರು ಸನಾತನ ಧರ್ಮದ, ಭಾರತೀಯ ಸಂಸ್ಕೃತಿಯ ಮೂರ್ತ ಸ್ವರೂಪರು. ಅವರನ್ನು 'ದೇವರು' ಎಂದು ಭಾವಿಸಿ ಪೂಜಿಸುವುದು ನಮ್ಮಲ್ಲಿ ನಡೆದುಕೊಂಡು ಬಂದಿರುವ ಸಂಪ್ರದಾಯ. ಆದರೆ ಅವರ ನಡವಳಿಕೆಯನ್ನು ಒಂದು ಆದರ್ಶವನ್ನಾಗಿ ತಿಳಿದು ಅದರಂತೆ ನಡೆಯಲು ಪ್ರಯತ್ನಿಸುವುದು ಅವರಿಗೆ ನಾವು ತೋರಿಸುವ ಭಕ್ತಿಗಿಂತ ಹೆಚ್ಚು ಪರಿಣಾಮಕಾರಿಯಾದದ್ದು. ಇದಕ್ಕಾಗಿ ಅವರ ನಡವಳಿಕೆಗಳ ಹಿಂದೆ ಇರುವ ಅವರ ತತ್ತ್ವ ದೃಷ್ಟಿಯನ್ನು, ಅವರ ಮನೋಗತವನ್ನು ತಿಳಿಯುವುದು ಅವಶ್ಯವಾಗುತ್ತದೆ. ಈ ಕೆಲಸವನ್ನು ಮಾಡಿದ್ದಾರೆ ಈ ಪರೀಕ್ಷಣ ಗ್ರಂಥಗಳಲ್ಲಿ ಡಿ ವಿ ಜಿ ಯವರು.

ವಾಲ್ಮೀಕಿ ಮಹರ್ಷಿಗಳ ಶ್ರೀರಾಮ ತಾನು ಮಾಡಿದ ಅನೇಕ ಕೆಲಸಗಳಿಗೆ ಕಾರಣಗಳನ್ನು ಕೇಳಿದ್ದರೆ ಅವನು ಏನು ಹೇಳುತ್ತಿದ್ದನು ಎಂಬುದನ್ನು ಹೇಳುವ ಪ್ರಯತ್ನ ಇದು. ಇದು ಕೇವಲ ಊಹಾಪೋಹಗಳಿಂದ ಭರ್ತಿ ಮಾಡಿದ ಗ್ರಂಥವಲ್ಲ. ಶ್ರೀಮದ್ರಾಮಾಯಣವನ್ನೇ ಆಧಾರವಾಗಿಟ್ಟುಕೊಂಡು, ಯೋಗವಾಸಿಷ್ಠ ಮುಂತಾದ ವೇದಾಂತ ಗ್ರಂಥಗಳ ಸಹಾಯವನ್ನು ಪಡೆದು ನಿರೂಪಿಸಿದ ಗ್ರಂಥ. ಡಿ ವಿ ಜಿ ಯವರು ಒಂದು ಕಡೆ "ಈಗ ಕಥೆ ಕವಿತ್ವ ಮೊದಲಾದ ಭಾವಾವೇಶ ಪ್ರಧಾನವಾದ ಕೃತಿಗಳೇ ಹೆಚ್ಚಾಗಿವೆ. ಇನ್ನು ಮುಂದೆ ಬುದ್ಧಿ ಕಾರ್ಯ ಪ್ರಧಾನವಾದ ಗ್ರಂಥಗಳು ಹೆಚ್ಚಬೇಕು. ಭಾವಾವೇಶದಿಂದ ಬುದ್ಧಿಗೆ ಪ್ರೇರಣೆಯಾಗುವಂತಿರಬೇಕು. ಬುದ್ಧಿ ಪ್ರೇರಣೆಯಿಂದ ಭಾವಾವೇಶವುಂಟಾಗಬೇಕು" ಎಂದಿದ್ದಾರೆ. ಶ್ರೀರಾಮನ ಆದರ್ಶ ನಮಗೆ ಜೀವನದಲ್ಲಿ ಉಪಯೋಗಕ್ಕೆ ಬರಬೇಕಾದರೆ ಬುದ್ಧಿಕಾರ್ಯ ಅಗತ್ಯ. ಶ್ರೀರಾಮನು ವೇದಾಂತ ತತ್ತ್ವವನ್ನು ಹೇಗೆ ಕಂಡ, ತನಗೆ ಎದುರಾದ ಧರ್ಮಸಂಕಟದ ಸಂದರ್ಭಗಳಲ್ಲಿ ಆ ತತ್ತ್ವವನ್ನು ಹೇಗೆ ಅನುಷ್ಠಾನಕ್ಕೆ ತಂದ, ಅದನ್ನು ನಾವು ಹೇಗೆ ಅನುಸರಿಸಬಹುದು ಎಂಬುದು ಈ ಗ್ರಂಥದಿಂದ ನಮಗೆ ತಿಳಿದು ಬರುತ್ತದೆ.

ಶ್ರೀರಾಮ ಶ್ರೀಕೃಷ್ಣ ಚರಿತ್ರೆಗಳಲ್ಲಿ ಅನೇಕ ತೊಡಕಿನ ಸಂದರ್ಭಗಳು ವಿದ್ವಾಂಸರನ್ನು ಲಾಗಾಯಿತಿನಿಂದಲೂ ಕಾಡುತ್ತಲೇ ಇವೆ. ಅದಕ್ಕೆ ಸಮಾಧಾನ ಹೇಳುವ ಪ್ರಯತ್ನವನ್ನು ಡಿ ವಿ ಜಿ ಇಲ್ಲಿ ಮಾಡಿದ್ದಾರೆ. ಆದರೆ ಆ ಸಮಸ್ಯೆ

ಗಳನ್ನು ತಾನು ಬಿಡಿಸಿಬಿಟ್ಟಿದ್ದೇನೆಂಬ ಭ್ರಾಂತಿ ಡಿ ವಿ ಜಿ ಯವರಿಗಿರಲಿಲ್ಲ. ಆ ಮಹಾವ್ಯಕ್ತಿಗಳನ್ನು ಹೇಗೆ ನೋಡಬೇಕು ಎಂಬುದಕ್ಕೆ ಸಹಾಯಮಾಡುವ ಗ್ರಂಥಗಳು ಇವು.

"ನಮ್ಮ ಪುರಾಣೇತಿಹಾಸಗಳ ಬಹುಪ್ರಕರಣಗಳಲ್ಲಿ ಸಮ್ಯಗ್ಜೀವನ ಪ್ರಶ್ನೆಗೆ ಸಂಬಂಧಪಟ್ಟಂತೆ ಬಹುಬೆಲೆಯುಳ್ಳ ತತ್ತ್ವಗಳೂ ಭಾವನೆಗಳೂ ಅಡ ಗಿರುತ್ತವೆಂದು ನನಗೆ ನಂಬಿಕೆ ಬಂದಿದೆ. ಆದರೆ ಆ ಸೂಕ್ಷ್ಮ ತತ್ತ್ವಗಳನ್ನು ಗ್ರಹಿಸುವುದಕ್ಕೂ ಅವುಗಳನ್ನು ಸಮಂಜಸವೆನಿಸುವಂತೆ ವಿವರಣೆ ಮಾಡು ವುದಕ್ಕೂ ಆ ಪ್ರಯತ್ನ ಮಾಡುವವನಿಗೆ ವಿಶೇಷವಾದ ಅಂತರ್ದೃಷ್ಟಿಯೂ ವಿಶಾಲವಾದ ಲೋಕಾನುಭವವೂ ಆವಶ್ಯವಾಗುತ್ತವೆ. ಇಂಥ ಅಂತ ರ್ಬೋಧೆಯ ಸಂಪತ್ತೂ ಆಳವಾದ ಅನುಭವದ ಸಂಪತ್ತೂ ನನ್ನ ಪಾಲಿಗೆ ಬಂದಿಲ್ಲ. ಆ ಸಂಪತ್ತನ್ನು ಪಡೆದಿರುವ ಮಹನೀಯರು ನಮ್ಮ ಧರ್ಮಸಾಹಿತ್ಯ ವನ್ನು ವಿಮರ್ಶನ ದೃಷ್ಟಿಯಿಂದ ನೋಡಿ ಅದರಲ್ಲಿ ಪ್ರಕೃತ ಲೋಕಕ್ಕೆ ಅನ್ವಯ ವಾಗುವ ತತ್ತ್ವಗಳನ್ನು ಮೇಲಕ್ಕೆತ್ತಿ ನಮ್ಮ ಜೀವನ ಅರ್ಥಪರಿಪುಷ್ಟವಾಗು ವಂತೆ ಮಾಡಿಯಾರೆಂದು ನಾನು ಸದಾ ಮೊರೆಯಿಡುತ್ತೇನೆ."

"ಶ್ರೀರಾಮಕಥೆ–ಶ್ರೀಕೃಷ್ಣಕಥೆಗಳಲ್ಲಿಯ ಕೆಲವು ಪ್ರಕರಣಗಳ ಸೂಕ್ಷ್ಮ ಪರಿಶೀಲನೆಯು ಜೀವನ ತತ್ತ್ವ ವಿಚಾರಗಳಿಗೆ ಪ್ರಯೋಜನವಾದೀತೆಂದು ನನಗೆ ಬಹು ಕಾಲದಿಂದಲೂ ಅನ್ನಿಸಿದೆ."

"ಶ್ರೀರಾಮವೃತ್ತಾಂತ ವಿಚಾರದಲ್ಲಿ ನನಗೆ ತೋರಿಬಂದ ತತ್ತ್ವಗಳನ್ನು ಭಾವನೆಗಳನ್ನು "ಶ್ರೀರಾಮಪರೀಕ್ಷಣಂ" ಎಂಬ ಹೆಸರಿನಿಂದ ಯಥಾಶಕ್ತಿ ನಿರೂಪಿಸಿದ್ದಾಗಿದೆ." ಎಂದು "ಶ್ರೀರಾಮಪರೀಕ್ಷಣಂ" ಗ್ರಂಥದ ಉದ್ದೇಶವನ್ನು ಡಿ ವಿ ಜಿ ವಿವರಿಸಿದ್ದಾರೆ.

ಶ್ರೀರಾಮಪರೀಕ್ಷಣಂ ಇದುವರೆಗೆ ಮೂರು ಮುದ್ರಣಗಳನ್ನು ಕಂಡಿದೆ. ಅದನ್ನು ಕುರಿತು ಜಿ.ಪಿ.ರಾಜರತ್ನಂ ಅವರು ಹೇಳಿರುವ ಮಾತು ಅದರ ಚರಿತ್ರೆ ಯನ್ನು ತಿಳಿಸುತ್ತದೆ :

"'ಶ್ರೀರಾಮಪರೀಕ್ಷಣ'ದ ಮೊದಲನೆಯ ಆವೃತ್ತಿಯಲ್ಲಿ (1945) ಅಹಲ್ಯೆ, ತಾರೆ, ಮಂಡೋದರಿ, ಸೀತೆ, ಲೋಕಜನ, ಹನುಮಂತ ಇವರ ಪ್ರಶ್ನೆ ಗಳಿವೆ. ಇವು ಆಯಾ ಪ್ರಕರಣಕ್ಕೆ ತಕ್ಕಂತೆ ರಾಮನ ಮನಸ್ಸಿನಲ್ಲಿ ಉದ್ಭವಿಸಿದ ಪ್ರಶ್ನೆಗಳೂ ಹೌದು, ರಾಮನನ್ನು ಕುರಿತು ಆತನ ಸಮಕಾಲೀನರು ಕೇಳಿದ ಪ್ರಶ್ನೆಗಳೂ ಹೌದು, ಶ್ರೀಮದ್ರಾಮಾಯಣವನ್ನು ಕುರಿತು ವಿಚಾರ ಮಾಡು

ಪವರೆಲ್ಲರೂ ಸರ್ವಕಾಲಕ್ಕೂ ಕೇಳಿಕೊಳ್ಳುವ ಪ್ರಶ್ನೆಗಳೂ ಹೌದು." "ಇಲ್ಲಿನ ಆರು ಪ್ರಶ್ನೆಗಳೂ ಬಿಡಿಬಿಡಿಯಾಗಿದ್ದರೂ ಅವೆಲ್ಲವೂ ಒಂದೇ ಒಂದು ಸಕಲವಾದ ಮಹಾಪ್ರಶ್ನೆಯ ಆರು ಅಂಗಗಳಿದ್ದ ಹಾಗೆ. ಸಾರ್ಥಕವಾದ ಬದುಕನ್ನು ಬದುಕಬೇಕು—ಎನ್ನುವವರಿಗೆ ಆದರ್ಶವಾದ ನಂಬಿಕೆ ಯಾವುದು? ಆದರ್ಶವಾದ ನಡವಳಿಕೆ ಯಾವುದು? ಎಂಬುದೇ ಇದರೊಳಗಿನ ಮಹಾಪ್ರಶ್ನೆ."

"ಶ್ರೀರಾಮಪರೀಕ್ಷಣದ ಎರಡನೆಯ ಆವೃತ್ತಿಯಲ್ಲಿ (1957) ನಾಲ್ಕು ಹೊಸ ಅಂಶ ಬಂದು ಹೊಂದಿಕೊಂಡಿವೆ; ಮೊದಲಿನದಕ್ಕೆ ಪೂರಕವಾಗಿವೆ".

"ಅಹಲ್ಯೆಯ ಉದ್ಧಾರ, ವಾಲಿಯ ವಧೆ, ರಾವಣನ ವಧೆ, ಸೀತೆಯ ಪರಿತ್ಯಾಗ ಇವುಗಳನ್ನು ಕುರಿತ ಪ್ರಶ್ನೆಗಳ ಜೊತೆಗೆ ಶಂಬೂಕನ ವಧೆಯ ಪ್ರಕರಣದಲ್ಲಿ ರಾಮನು ಯಾವ ಧರ್ಮಸೂಕ್ಷ್ಮದ ಆಧಾರದಿಂದ ತನ್ನ ಕರ್ತವ್ಯದಲ್ಲಿ ಕೃತಕೃತ್ಯನಾದನು ಎಂಬುದರ ವಿವೇಚನೆಯಿದೆ, 'ಲಕ್ಷ್ಮಣನ ಪ್ರಶ್ನೆ'ಯಲ್ಲಿ. ಇದಾದರೂ ರಾಮಾಯಣ ಪ್ರಕಟವಾದ ಕಾಲದಿಂದಲೂ ವಿಚಾರಪರರನ್ನು ತಿವಿದು ತಿವಿದು ಉತ್ತರವೇನೆಂದು ಕೇಳುತ್ತಿರುವ ಪ್ರಶ್ನೆ."

"ಡಿ ವಿ ಜಿ ಯವರ ಬರವಣಿಗೆಯಲ್ಲಿ ಒಂದು ವಿಶೇಷ–ಪುಸ್ತಕಕ್ಕೆ 'ಆಯುರ್ದಾನ' ಲಭಿಸಿದಂತೆಲ್ಲ ಹೊಸ ಹೊಸ ಅಂಶ ಸೇರಿ ಪುಸ್ತಕ ಬೆಳೆಯುತ್ತದೆ. 1966ರಲ್ಲಿ ಪ್ರಕಟವಾದ ಮೂರನೆಯ ಆವೃತ್ತಿಯಲ್ಲಿ—, ೧. ಅಹಲ್ಯೆಯ ಪ್ರಶ್ನೆಯ ಪರಿಸಮಾಪನ ಭಾಗದಲ್ಲಿ ಅಹಲ್ಯಾ ಗೌತಮರ ಮಗನಾದ ಶತಾನಂದನಿಗೆ ಸಂಬಂಧಿಸಿದ ಕಥಾಂಶವೊಂದನ್ನು ಹೊಸದಾಗಿ ಸೇರಿಸಿದ್ದಾರೆ. ೨. 'ವಾಲ್ಮೀಕಿ ವ್ಯಾಸವಂದನಂ' ಎಂಬ ಹೊಸ ಗೀತೆಯೊಂದನ್ನು ಸೇರಿಸಿದ್ದಾರೆ. ಮತ್ತು ೩. ಗ್ರಂಥಕ್ಕೆ ಅನುಬಂಧವಾಗಿರುವ 'ರಾಜನ ಜೀವನದಲ್ಲಿ ಜನ ವಾಕ್ಯದ ಸ್ಥಾನ' ಎಂಬಲ್ಲಿ ಈಗ ಒಂದು ಪ್ರಾಚೀನೋದಾಹರಣೆಯನ್ನು ಹೊಸದಾಗಿ ಸೇರಿಸಿ ಪುನರ್ವಿಲೇಖನ ಮಾಡಿದ್ದಾರೆ."

ರಾಜರತ್ನಂ; "ಗುಂಡಪ್ಪನವರ ಕೃತಿಗಳನ್ನು ಓದುತ್ತಿರುವಾಗ ನನಗೆ ಅನೇಕ ಕಡೆ 'ನಾನು ಹೇಳಬೇಕೆಂದು ಬಯಸುತ್ತಿದ್ದುದನ್ನು ಇವರು ಎಷ್ಟು ಸೊಗದಸ್ತಾಗಿ ಹೇಳಿದ್ದಾರೆ' ಎನ್ನಿಸಿದೆ. ಇನ್ನೂ ಕೆಲವು ಕಡೆ ಅದನ್ನು ಅವರು ಬರೆದರು ಎಂಬುದು ಮರೆತುಹೋಗಿ ಅದು ನಾನೇ ಬರೆದದ್ದು ಎನ್ನುವ ಮಟ್ಟಿಗೆ ಮನಸ್ಸು ಅದರಲ್ಲಿ ಕರಗಿ ಹೋಗುತ್ತದೆ. ಹೀಗೆ ನನ್ನನ್ನು ತನ್ನಲ್ಲಿ ಕರಗಿಸಿಕೊಂಡ ಪುಸ್ತಕ 'ಶ್ರೀರಾಮಪರೀಕ್ಷಣಂ'" ಎಂದು ಹೇಳಿ, "ನಾನು ಏನು ತಿಳಿದುಕೊಂಡಿದ್ದೇನೆಯೋ ಅದನ್ನು ತಾವೂ ತಿಳಿಯಬೇಕೆಂದು ಅಪೇಕ್ಷೆ ಪಡುವವರಿಗೆ

ಅದನ್ನು ನಿರ್ವಂಚನೆಯಾಗಿ ತಿಳಿಸಬೇಕಾದದ್ದು ನನ್ನ ಕರ್ತವ್ಯವೆಂದುಕೊಂಡಿದ್ದೇನೆ" ಎಂಬ ಆದರ್ಶಪಾಲನೆಗಾಗಿ, "ಡಿ ವಿ ಜಿ ಯವರು ಚಿತ್ರಿಸಿರುವ ಶ್ರೀರಾಮಚಂದ್ರಪ್ರಭು" ಎಂಬ ಗ್ರಂಥವನ್ನು ರಚಿಸಿ, "ಶ್ರೀರಾಮ ಪರೀಕ್ಷಣಂ" ಗ್ರಂಥಕ್ಕೆ ವಿವರಣೆ ನೀಡಿದ್ದಾರೆ; ಆ ಮೂಲ ಗ್ರಂಥವನ್ನು ತಾವಾಗಿಯೇ ಓದಿಕೊಳ್ಳಲು ಆಗದೆ ಕ್ಲೇಶ ಪಡುವವರಿಗೆ ಸಹಾಯವನ್ನು ಒದಗಿಸಿದ್ದಾರೆ.

"ಶ್ರೀ ಕೃಷ್ಣ ಪರೀಕ್ಷಣಂ" ಗ್ರಂಥ ಶ್ರೀಕೃಷ್ಣ ತತ್ತ್ವವೆಂಬುದು ಒಂದು ರಹಸ್ಯವೆಂದು ಅಂಗೀಕರಿಸಿ ಆ ರಹಸ್ಯವನ್ನು ಬಿಡಿಸಿ ಹೇಳಲು ಪ್ರಯತ್ನಿಸುವ ಗ್ರಂಥ. ಶ್ರೀ ಕೃಷ್ಣಾವತಾರದ ಅನೇಕ ಘಟನೆಗಳನ್ನು ವಿಶ್ಲೇಷಿಸಿ ಶ್ರೀಕೃಷ್ಣನು ನಡೆದುಕೊಂಡ ರೀತಿ ಒಬ್ಬ ವೈದ್ಯನ ರೀತಿ ಎಂದು ಇಲ್ಲಿ ವಿವರಿಸಲ್ಪಟ್ಟಿದೆ. ಇಲ್ಲಿ ಗದ್ಯ ಲೇಖನಗಳಿವೆ, ಮನೋಹರವಾದ ಗೀತಗಳಿವೆ, ಕವನಗಳಿವೆ.

"ಅತ್ಯಂತ ರಹಸ್ಯವಾಗಿರುವ ಬ್ರಹ್ಮಚೈತನ್ಯದ ಕಾರ್ಯದಶೆಯಾದ ಈಶ್ವರಯೋಗದ ಒಂದು ವಿಶೇಷ ಲೀಲಾ ವಿಭೂತಿಯನ್ನು ಲೋಕಕ್ಕೆ ತಿಳಿಯಪಡಿಸುವ ಸಾಧನವು ಭಾಗವತಕಾರನ ಶ್ರೀಕೃಷ್ಣಚರಿತೆ — ಎಂದು ನನಗನ್ನಿಸುತ್ತದೆ"

ಒಟ್ಟಿನಲ್ಲಿ ಡಿ ವಿ ಜಿ ಯವರ ಅಭಿಪ್ರಾಯ ಇದು :

ಆವಾವ ಜೀವಕಾವುದು ।
ಭಾವುಕವೋ ಗುರಿಯದೇನೊ ದಾರಿಯದೆಂತೋ ॥
ದೈವಿಕ ರಹಸ್ಯತಂತ್ರವ ।
ಗೋವಿಂದನವೋಲದಾರು ಬೋಧಿಸಬಲ್ಲರ್ ॥

ಸಂಸ್ಕೃತಿ: ಕಲ್ಚರ್ ಎಂಬ ಇಂಗ್ಲಿಷ್ ಶಬ್ದವು ನಾನಾ ಜನಾಂಗ ಸಂಸ್ಥೆಗಳು, ವಿವಾಹಾದಿ ಕುಲಪದ್ಧತಿಗಳು ಗೃಹನಿರ್ವಾಹಕ ನೀತಿ ಮೊದಲಾದ ಜೀವನ ಕ್ರಮಗಳನ್ನು ಸೂಚಿಸುವುದಾಗಿದೆ. ಹಾಗೆಯೇ 'ಬೆಳೆಸುವುದು' ಎಂಬ ಅರ್ಥದಲ್ಲಿಯೂ (ಉದಾ : ಅಗ್ರಿಕಲ್ಚರ್, ಹಾರ್ಟಿಕಲ್ಚರ್) ಅದರ ಬಳಕೆಯಿದೆ. ಆದರೆ ಮನಸ್ಸಿನ ಮೇಲ್ಮೆ, ಅಂತರಂಗ ಸಂಸ್ಕಾರ ಎಂಬ ಅರ್ಥದಲ್ಲಿಯೂ ಅದು ಪ್ರಚಾರಕ್ಕೆ ಬಂದಿದೆ. ಜೀವನ ಸೌಂದರ್ಯದಲ್ಲಿ ಉದ್ದೇಶವುಳ್ಳ ಡಿ ವಿ ಜಿ ಯವರು ಸಂಸ್ಕೃತಿಯನ್ನು ಅಂತರಂಗ ಸಂಸ್ಕಾರ ಎಂಬ ಅರ್ಥದಲ್ಲಿ ಕಂಡು ನಮ್ಮ ಜೀವನದಲ್ಲಿ ಅದಕ್ಕಿರುವ ಸ್ಥಾನವನ್ನು ವಿವರಿಸಿದ್ದಾರೆ. ಸಾರ್ವಜನಿಕ ಜೀವನದಲ್ಲಿದ್ದ ಅವರಿಗೆ ಲೋಕಸಂಪರ್ಕದಿಂದಲೇ ಸಂಸ್ಕೃತಿ ಹುಟ್ಟತಕ್ಕದ್ದು ಮತ್ತು ಅದು ಲೋಕ ಜೀವನಕ್ಕೆ ಬೇಕೇಬೇಕಾದದ್ದು ಎಂದು ಮುಂದಟ್ಟಾಗಿತ್ತು.

ಆದರೂ ವ್ಯಕ್ತಿಯೇ ಸಂಸ್ಕೃತಿಯ ಮೂಲ. ಸಂಸ್ಕೃತಿ ಜೀವನಕ್ಕೆ ಸೌಮ್ಯ ಕಾಂತಿಯನ್ನು ತರುವ ಬೆಳಕು. ಅದು ಲೋಕಸ್ನೇಹಪ್ರಧಾನವಾದ ಸ್ವಧರ್ಮ ಪ್ರಕಾಶ. ಅದು ಸಾಹಿತ್ಯ ಪರಾಮರ್ಶೆಯ ಮತ್ತು ಲೋಕಾನುಭವ ವಿವೇಕದ ದಾಂಪತ್ಯದಿಂದ ಜನಿಸುವ ಒಂದಾನೊಂದು ಸಕಲ ಸಮಾಧಾನಕರವಾದ ಶೀಲ ಸೌಭಾಗ್ಯ. ಅದು ಜೀವನದ ನಾನಾ ವಿಷಯಗಳ, ನಾನಾ ಧ್ಯೇಯಗಳ, ನಾನಾ ತತ್ತ್ವಗಳ, ನಾನಾ ಧರ್ಮಗಳ—ಮೌಲ್ಯ ತಾರತಮ್ಯ ಜ್ಞಾನದಿಂದಾದ ಸಮನ್ವಯ ಸ್ವಾರಸ್ಯ. ಅದೇ ನಯ ವಿನಯ ಮರ್ಯಾದೆ — ಇದೇ ಅವರು ಸಂಸ್ಕೃತಿಯನ್ನು ಕುರಿತು ಇಟ್ಟುಕೊಂಡಿದ್ದ ನಂಬಿಕೆ.

ಹೀಗೆ ಜೀವನಕ್ಕೆ ಸೌಂದರ್ಯವನ್ನು ತರುವ, ಸ್ವಾರಸ್ಯವನ್ನು ತರುವ ತತ್ತ್ವದ, ಮತ್ತು ಅದಕ್ಕೆ ಹೊಂದಿಕೊಂಡೇ ಇರುವ ಸತ್ಯ, ಧರ್ಮ, ಪ್ರಗತಿ, ಪುರುಷಾರ್ಥ ಮುಂತಾದ ವಿಚಾರಗಳನ್ನು ತಿಳಿಸುವುದು ಸಂಸ್ಕೃತಿ ಎಂಬ ಗ್ರಂಥ. “ಆತ್ಮವರ್ಧನದಲ್ಲೂ ಊರ್ಧ್ವಗಮನದಲ್ಲೂ ಶ್ರದ್ಧಾಸಕ್ತಿಗಳನ್ನು ಉಳ್ಳವರಿಗೆ ಈ ಪುಸ್ತಕವು ಪುಷ್ಟಿ ತುಷ್ಟಿಗಳನ್ನು ಒದಗಿಸುವ ರಸಕವಳದ ಅಕ್ಷಯವಾದ ಬುತ್ತಿ” ಎಂದಿದ್ದಾರೆ ಶ್ರೀ ರಾಜರತ್ನಂ ಅವರು ಈ ಗ್ರಂಥವನ್ನು ಕುರಿತು.

ಮೃತ್ಯು-ಸತ್ಯ-ಜೀವನ: ಮೃತ್ಯುವು ಆಡಳಿತಗಾರನಾಗಿರುವಲ್ಲಿ ಜೀವನ ಗೋಳಿಡದೆ ಏನು ಮಾಡೀತು? — ಇದೇ ವೇದಾಂತ ಮತವೆಂಬ ಭ್ರಾಂತಿಯಿಂದ ನಮ್ಮ ಜನ ಆತ್ಮವಿಶ್ವಾಸವನ್ನು ಕಳೆದುಕೊಂಡು ಪರದ ಚಿಂತನೆಯಲ್ಲಿದ್ದ ಸ್ಥಿತಿಯನ್ನು ಕಂಡರು ಡಿ ವಿ ಜಿ ಯವರು. ಆದರೆ ವೇದಾಂತ, ಜೀವನೋತ್ಸಾಹವನ್ನು ಉಪದೇಶಿಸುತ್ತದೆಯೆಂಬುದನ್ನು ಕಂಡ ಅವರು ಪಾಶ್ಚಾತ್ಯ ಸಾಹಿತ್ಯದ ಅಭಿಪ್ರಾಯವನ್ನೂ ಪರಿಶೀಲಿಸಿದರು. ಅಲ್ಲಿ ಅವರಿಗೆ ಪುರಾತನರಲ್ಲಿಯೂ ಈಚೀಚಿನವರಲ್ಲಿಯೂ ಪ್ರಮುಖರಾಗಿ ಕಂಡುಬಂದ ಮೂರು ಕವಿತತ್ತ್ವಜ್ಞರು: ಲುಕ್ರೀಷಸ್, ಫಿಟ್ಸ್‌ಗೆರಲ್ಡ್‌ನು ಕಾಣಿಸಿದ ಉಮರ್ ಮತ್ತು ರಾಬರ್ಟ್ ಬ್ರೌನಿಂಗ್. ಈ ಲೋಕದ ಒಗಟನ್ನು ಕಂಡ, ಅನಿಶ್ಚಿತತೆಯನ್ನು ಕಂಡ, ಮೃತ್ಯುವಿನ ಅನಿವಾರ್ಯತೆಯನ್ನು ಕಂಡ ಅವರೂ ಪರಿತಪಿಸಿದವರೇ. ಅವರಲ್ಲಿ ಉಮರನ ಕಾವ್ಯವಾದರೋ “ರಸಿಕ ಪ್ರಪಂಚದಲ್ಲಿ—ಗುಲಾಬಿಯ ವರ್ಣ ಪೇಶಲತೆ, ಮಲ್ಲಿಗೆಯ ಸೌರಭ, ಜಾಜಿಯ ಸೌಕುಮಾರ್ಯ — ಇವೆಲ್ಲವನ್ನೂ ಸೇರಿಸಿಕೊಂಡಿರುವ ಒಂದು ದಿವ್ಯ ಪುಷ್ಪಗುಚ್ಛ”ದಂತೆ ಅವರಿಗೆ ಕಂಡುಬಂತು. ದೊರೆತಷ್ಟು ಸುಖ ಸಾಮಗ್ರಿಯನ್ನು ಭೋಗಿಸಿ ಸುಖದಿಂದಿರು ಎನ್ನುತ್ತಾನೆ ಉಮರ್. ಈ ಉಪದೇಶ ಡಿ ವಿ ಜಿ ಯವರಿಗೆ ಹಿಡಿಸಿತು. ಹೀಗೆ

ತಮ್ಮ ಮನಸ್ಸಿಗೆ ಸಂತೋಷವನ್ನು ತಂದ ಉಮರನ ಕಾವ್ಯವನ್ನು ಅವರು ಪದ್ಯ ರೂಪದಲ್ಲಿ ಕನ್ನಡಕ್ಕೆ ತಂದಿದ್ದಾರೆ. ಅದಕ್ಕೆ ಪೀಠಿಕೆಯಾಗಿ ಫಿಟ್ಸ್‌ಗೆರಲ್ಡನ ಉಮರನ ವೃತ್ತಾಂತ, ಉಮರ್, ಲುಕ್ರೀಷಸ್, ಬ್ರೌನಿಂಗ್ ಇವರ ಸಿದ್ಧಾಂತ ನಿರೂಪಣೆ, ಅವುಗಳೊಂದಿಗೆ ವೇದಾಂತ ಮತದ ಪರಾಮರ್ಶೆ ಎಲ್ಲ ಇವೆ.

ಉಮರನ ಒಸಗೆಯೊಂದಿಗೇ ನೋಡಬೇಕಾದ ಗ್ರಂಥ "ಶೃಂಗಾರ ಮಂಗಳಂ". ಪುರಾತನ ಗ್ರೀಕರು ತಮಗೆ ಪ್ರಿಯರೂ ಪೂಜ್ಯರೂ ಆಗಿದ್ದವರ ಚಿತಾಭಸ್ಮವನ್ನು ಹೊರಮೈಯಲ್ಲಿ ಲಾವಣ್ಯ ರೇಖಾ ಚಿತ್ರಗಳುಳ್ಳ ಸ್ಮಾರಕ ಕರಂಡದಲ್ಲಿ ತೆಗೆದಿರಿಸಿಕೊಳ್ಳುತ್ತಿದ್ದರಂತೆ. ಅಂಥ ಒಂದು ಕರಂಡವನ್ನು ನೋಡಿದ ಇಂಗ್ಲಿಷಿನ ಕವಿ ಕೀಟ್ಸ್ ಅದನ್ನು ಕುರಿತು ಒಂದು ಪದ್ಯವನ್ನು ರಚಿಸಿದ. ಅಲ್ಲಿ ಬರುವ

"Beauty is Truth, Truth Beauty—That is all
Ye know on earth and all ye need to know"

ಎಂಬ ಸಾಲುಗಳು ಪ್ರಖ್ಯಾತವಾದವು. ಅದರ ಭಾವವನ್ನೇ ಡಿ ವಿ ಜಿ ಯವರು 'ಬೇಲೂರಿನ ಶಿಲಾಬಾಲಿಕೆಯರು' ಎಂಬ ಕವನದಲ್ಲಿ—

"ಸೌಂದರ್ಯವೇ ವಿಶ್ವತತ್ತ್ವವಾ ಪರತತ್ತ್ವ
ಭಾಸವೇ ಸೌಂದರ್ಯಂ"

—ಎಂದು ಹೇಳಿದರು.

ಈ ಮಾತುಗಳ ಅಂತರ್ಭಾವವೇನು ? ಸತ್ಯ, ಸೌಂದರ್ಯ, ಮೃತ್ಯು ಇವುಗಳ ಅನ್ಯೋನ್ಯ ಸಂಬಂಧವೇನು ? ಜೀವನದಲ್ಲಿ ಇವುಗಳ ಅನ್ವಯ ಹೇಗೆ ಎಂಬುದರ ಚರ್ಚೆ ಕವನ ರೂಪದಲ್ಲಿ, ಗದ್ಯ ರೂಪದಲ್ಲಿ "ಶೃಂಗಾರ ಮಂಗಳಂ" ಗ್ರಂಥದಲ್ಲಿ ಬಂದಿದೆ. ಇಲ್ಲಿಯೂ ವೇದಾಂತ ಮತದ ಪ್ರತಿಪಾದನೆಯಿದೆ. ಷೇಕ್ಸ್‌ಪಿಯರ್ ಕವಿಯ "ದಿ ಫೀನಿಕ್ಸ್ ಅಂಡ್ ದಿ ಟರ್ಟಲ್" ಎಂಬ ಕವಿತೆಯ ಸೊಗಸಾದ ಭಾಷಾಂತರವಿದೆ.

"ಸತ್ಯದ ಸತ್ಯವು ಪರಮಾತ್ಮ. ವಿಶ್ವಕರ್ತನ ಒಳಮೈ ಸತ್ಯ, ಹೊರಮೈ ಸೌಂದರ್ಯ. ಇದು ಜೀವನ ಧರ್ಮಕ್ಕೆ ಮೂಲಾಧಾರ. ಜೀವನವಿಲ್ಲದಿದ್ದಲ್ಲಿ ಮೃತ್ಯುವಿರಬೇಕಾದದ್ದೇ ಇಲ್ಲ. ಮೃತ್ಯುವಿಲ್ಲದಿದ್ದರೆ ಜೀವನಕ್ಕೆ ನವೀಕರಣ ವಿರದು. ಯಮನಿಗೆ ಊಟವಿಡುವವನು ಕಾಮ. ಮೃತ್ಯು ಬದುಕಿನ ನೆರಳು. ಆದರೂ ಅದೂ ಉಂಟು. ಹೀಗೆ ಈ ಸತ್ಯವನ್ನು ಮರೆಯದೆ ಸೌಂದರ್ಯವನ್ನು ಭುಜಿಸುವಾತನು ಸುಕೃತ ಜೀವಿ" ಎಂಬುದು ಇಲ್ಲಿಯ ಸಿದ್ಧಾಂತ.

ಈ ವಿಷಯವನ್ನೇ ಕುರಿತು ಡಿ ವಿ ಜಿ Beauty and Truth (ಸತ್ಯ ಮತ್ತು ಸೌಂದರ್ಯ) ಎಂಬ ಇಂಗ್ಲಿಷ್ ಲೇಖನವೊಂದನ್ನು (ಸ್ವರಾಜ್ಯ 1967) ಬರೆದಿದ್ದಾರೆ.

ಕಗ್ಗಗಳೆರಡು : 'ಮಂಕುತಿಮ್ಮನ ಕಗ್ಗ' ಹೊಸಗನ್ನಡ ಸಾಹಿತ್ಯದಲ್ಲಿ ಬಹುಜನಪ್ರಿಯವಾದ ಗ್ರಂಥಗಳಲ್ಲೊಂದು. ಅದಕ್ಕೆ ಬರೆದ ಆರಿಕೆಯಲ್ಲಿ ಡಿ ವಿ ಜಿ ಯವರು, "ಇದು ಪ್ರಸಿದ್ಧರನ್ನೂ ಪುಷ್ಟರನ್ನೂ ಉದ್ದೇಶಿಸಿದ್ದಲ್ಲ. ಬಹು ಸಾಮಾನ್ಯರಾದವರ ಮನೆಯ ಬೆಳಕಿಗೆ ಇದು ಒಂದು ತೊಟ್ಟನಷ್ಟು ಎಣ್ಣೆ ಯಂತಾದರೆ ನನಗೆ ತೃಪ್ತಿ" ಎಂದಿದ್ದಾರೆ. ಅವರ ಆಸೆಯಂತೆಯೇ ಇದು ಸಾಮಾನ್ಯ ಜನರ ಮನ ಮುಟ್ಟಿದೆ. ಅವರ ಜೀವನಕ್ಕೆ ಒಂದು ದಾರಿ ದೀಪವನ್ನೊದಗಿಸಿದೆ.

1943 ರಲ್ಲಿ, ಎರಡನೆಯ ಮಹಾಯುದ್ಧದ ಸಮಯದಲ್ಲಿ, ಕಗ್ಗ ಮೊದಲು ಕರ್ನಾಟಕ ಪ್ರಕಟನಾಲಯದಿಂದಲೇ ಪ್ರಕಟವಾಯಿತು. 945 ಪದ್ಯಗಳುಳ್ಳ ಈ ಕಗ್ಗದ ಸಂಪಾದಕರು ಡಿ ವಿ ಗುಂಡಪ್ಪ ಎಂದು ಮೊದಲ ನೆಯ ಮುದ್ರಣದಲ್ಲಿ ಕಾಣಿಸಿದ್ದರೂ ಎರಡನೆಯ ಮುದ್ರಣದ ಹೊತ್ತಿಗೆ ಈ ಸಂಪಾದಕತ್ವವು ಮರೆಯಾಗಿ ಗ್ರಂಥಕರ್ತರ ಹೆಸರು ಡಿ ವಿ ಜಿ ಎಂದೇ ಆಯಿತು. ಎರಡನೆಯ ಮುದ್ರಣದಲ್ಲಿ ಅರ್ಥಕೋಶ ಟಿಪ್ಪಣಿ ಮುಂತಾದ ಸಹಾಯವನ್ನೊದಗಿಸಿದ್ದಾರೆ ಶ್ರೀ ಜಿ. ಪಿ ರಾಜರತ್ನಂ ಅವರು. ಕಗ್ಗ ಏಳೆಂಟು ಬಾರಿ ಪ್ರಕಟಗೊಂಡಿದೆ. ಡಿ ವಿ ಜಿ ಶತಮಾನೋತ್ಸವದ ಸಂದರ್ಭದಲ್ಲಿ ಗೋಖಲೆ ಸಂಸ್ಥೆಯೇ ಒಂದು ಮುದ್ರಣವನ್ನು ಹೊರತಂದಿದೆ. ಮತ್ತು ಡಿ ವಿ ಜಿ ಯವರ ಆಸೆಯನ್ನು ನೆರವೇರಿಸಲೋ ಎಂಬಂತೆ ಅದನ್ನು ಬಹು ಸುಲಭ ಬೆಲೆಗೆ ಕೊಟ್ಟಿದೆ. ಕಗ್ಗ 80 ಸಾವಿರ ಪ್ರತಿಗಳಿಗಿಂತಲೂ ಹೆಚ್ಚಾಗಿ ಖರ್ಚಾಗಿರಬಹುದು.

ಜ್ಞಾನಪೀಠ ಪ್ರಶಸ್ತಿಯು ಸ್ಥಾಪಿಸಲ್ಪಟ್ಟಾಗ ಅದಕ್ಕಾಗಿ ಗಮನಿಸಲ್ಪಟ್ಟ ಮೊದಲನೆಯ ಗ್ರಂಥಗಳಲ್ಲಿ ಇದೂ ಒಂದು. ಏನೇನೋ ಕಾರಣಗಳಿಂದ ಇದಕ್ಕೆ ಸಲ್ಲಬೇಕಾದ ಗೌರವ ಸಲ್ಲಲಿಲ್ಲ. ಅದು ಬೇರೆ ಕಥೆ (ಮಾಸ್ತಿಯವರ 'ವಿಚಾರ' ಗ್ರಂಥದಲ್ಲಿ ಅವರು ಇದನ್ನು ಕುರಿತು 'ಕನ್ನಡ ಪ್ರಭ'ದಲ್ಲಿ ಬರೆದಿದ್ದ ಲೇಖನವಿದೆ).

ಕಗ್ಗ ಅಂಕಿತವಾಗಿರುವುದು ಡಿ ವಿ ಜಿ ಯವರ ಜೀವಕ್ಕೆ ಬಹುಹತ್ತಿರ ವಾಗಿದ್ದ ಶ್ರೀಮಾನ್ ಟಿ. ಎಸ್. ವೆಂಕಣ್ಣಯ್ಯ ಮತ್ತು ಶ್ರೀ ಮೋಕ್ಷಗುಂಡಂ

ಕೃಷ್ಣಮೂರ್ತಿಯವರಿಗೆ.

ಸರಳ ರಗಳೆಯಲ್ಲಿ ಹೇಳಿರುವ, ಕಗ್ಗಕ್ಕೆ ಪೀಠಿಕೆಯಾಗಿ ಬರುವ ಕಥೆ, ಹಳ್ಳಿಯೊಂದರಲ್ಲಿದ್ದ ತಿಮ್ಮ ಗುರುವಿನ ಕಥೆ. ಆತ ಸ್ಕೂಲ್‌ಮೇಷ್ಟರು. ಲೋಕದ ವಿಚಾರದಲ್ಲಿ ಗೌರವವನ್ನು ಹೊಂದಿದ್ದ, ತನ್ನ ಕರ್ತವ್ಯವನ್ನು ಸಂತೋಷದಿಂದ ನಿರ್ವಹಿಸುತ್ತಿದ್ದ, ಉಪಶಾಂತನೊಬ್ಬನ ಕಥೆ ಅದು. ತಿಮ್ಮ ಅಂಟಿಸಿಕೊಂಡಿದ್ದ ಬಂಧುಗಳು ಇಬ್ಬರೇ : ಒಬ್ಬಳು ತಾಯಿ, ಇನ್ನೊಬ್ಬನು ಸೋದರಳಿಯ ಸೋಮಿ. ತಾಯಿಯು ಕಣ್ಣು ಮುಚ್ಚಿದಳು. ಸೋಮಿ 'ಹರೆಯವಾಂತ' ಮೇಲೆ ಅವನ ಎದೆ ಹಗುರವಾಯಿತು. ಮುಂದೆ ಆತ್ಮಸೇವೆಗಾಗಿ ಪುಣ್ಯಯಾತ್ರೆ ನಡೆಸಲು ಆತ ಕಣ್ಮರೆಯಾಗುತ್ತಾನೆ. ಭಾವನಿಗೆ (ಸೋಮಿಯ ತಂದೆಗೆ) ಬರೆದ ಪತ್ರದಲ್ಲಿ ತಾನು ಏನೋ ಬರೆದಿಟ್ಟಿದ್ದ ಕಡತವೊಂದು ತನ್ನ ಮನೆಯ ಗೂಡಿನಲ್ಲಿರುವುದೆಂದೂ ಅದನ್ನು ಬೇಕಾದರೆ ಸೋಮಿ ತೆಗೆದುಕೊಳ್ಳಲಿ ಎಂದೂ ಸೂಚಿಸಿರುತ್ತಾನೆ. ಪ್ರೀತಿಯ ಸೋದರಳಿಯ ಆ ಕಡತದಲ್ಲಿ ಕಂಡನು "ಬಾಳ್ಗೆ ಸಲುವ ತತ್ತ್ವಮಥಿತವ." ಅದೇ "ಮಂಕುತಿಮ್ಮನ ಕಗ್ಗ."

ಈ ಪೀಠಿಕೆ ಇಂದಿನ ಕಥನಕಾವ್ಯಗಳಲ್ಲಿ ಉತ್ತಮ ಶ್ರೇಣಿಗೆ ಸೇರಿದ್ದು. ಕಗ್ಗದ ವಿಷಯಕ್ಕೆ ಮುದ್ದಾದ ಪೀಠಿಕೆ.

ಕಗ್ಗದ ಉದ್ದೇಶ ಕಗ್ಗದ 934 ನೆಯ ಪದ್ಯದಿಂದ 940 ನೆಯ ಪದ್ಯದವರೆಗಿನ ಪದ್ಯಗಳಲ್ಲಿ ವಿವರಿಸಲ್ಪಟ್ಟಿದೆ.

"ವಿಶದವಾದೊಂದು ಜೀವನ ದರ್ಶನವನುಸುರಿಕೊಳೆ ತನ್ನ ಮನಸಿಗೆ ತಾನೆ ಬಗೆದು ಹೊಸೆದೆನೀ ಕಗ್ಗವನು." ಇದಕ್ಕೆ ಆಧಾರ : ಗ್ರಂಥ ಮತ್ತು ಅನುಭವಗಳಿಂದ ಆರಿಸಿದ 'ನಿಸದ'. ಇದನ್ನು ಹೇಳಿದವನು ಕವಿಯಲ್ಲ, ವಿಜ್ಞಾನಿಯಲ್ಲ ಬರಿ ತಾರಾಡಿ. ಆದರೂ ತನ್ನ ಅರಿವಿಗೆ ಎಟುಕುವಂಥ ಒಂದು ಆತ್ಮನಯವನ್ನು ಹವಣಿಸಿಕೊಂಡಿದ್ದಾನೆ.

ಹೃದಯದ ಇಂಗಿತವನ್ನು ವ್ಯಕ್ತಪಡಿಸಲು ರಾಗ ತಾಳದ ಕಟ್ಟು ಚೆನ್ನು. ಲೌಕಿಕವಾದ ತತ್ತ್ವವನ್ನು ತಿಳಿಸುವುದಕ್ಕಾದರೋ ಗದ್ಯ ಅಚ್ಚುಕಟ್ಟಾದ ಸಾಧನೆ. ಆದರೆ ಈ ಕಗ್ಗವಾದರೋ ನೆಲವನ್ನು ಬಿಟ್ಟು ಮೇಲೇಳಲು ಪ್ರಯತ್ನಿಸುತ್ತಿದೆ, ಆದರೆ ಅದು ಬಾನನ್ನು ಮುಟ್ಟದು. ಆದ್ದರಿಂದ ಗದ್ಯ ಗೀತಗಳೆರಡರ ಮಧ್ಯದ ಒಂದು ಮಾರ್ಗವನ್ನು ಅದು ಹಿಡಿಯಬೇಕಾಯಿತು. ಮತ್ತು "ಕವನ ನೆನಪಿಗೆ ಸುಲಭ."

ಲೋಕದ ಉಗ್ರಾಣದಲ್ಲಿ ಈಗಾಗಲೇ ಜ್ಞಾನಿಗಳು ಹೇಳಿರುವ ನೂರಾರು

ಮತಗಳಿವೆ. ಒಂದೊಂದು ರೋಗಕ್ಕೆ ಒಂದೊಂದು ಓಷಧಿ ವನಸ್ಪತಿಗಳು ವಿಧಿಸಲ್ಪಡುವಂತೆ ನಮ್ಮ ನಮ್ಮ ಜೀವಕ್ಕೆ ಬೇಕಾದ ಅನುವನ್ನು ನಾವು ಜಾಣತನದಿಂದ ಆರಿತುಕೊಳ್ಳಬೇಕು. ತನಗೆ ಸರಿಯೆಂದು ತೋರಿದ ಜೀವನ ವಿಧಾನವನ್ನು, ಇತರರಿಗೂ ಅದು ಉಪಯೋಗಕ್ಕೆ ಬರಬಹುದೇನೋ ಎಂಬ ನಂಬಿಕೆಯಿಂದ, ವಿವರಿಸಿದ್ದಾರೆ ಕವಿ.

ಸಂಪ್ರದಾಯದಂತೆ ಶ್ರೀಕಾರದಿಂದ ಕಗ್ಗ ಪ್ರಾರಂಭವಾದರೂ ಕಗ್ಗದ ಪ್ರಾರ್ಥನೆ ಕಗ್ಗದ ವಿಷಯವನ್ನೇ ಸೂಚಿಸುವುದಾಗಿದೆ. ತಾವು ಕಾಣದಿದ್ದರೂ ಒಂದು ಇದೆ ಎಂದು ಯಾವುದನ್ನು ಜನ ನಂಬಿದೆಯೋ ಆ ವಿಚಿತ್ರಕೆ ನಮಿಸು; ಯಾವುದೋ ಒಂದು ಇದೆಯಂತೆ, ಆ ವಿಶೇಷಕ್ಕೆ ಮಣಿ; ಇಹುದೋ ಇಲ್ಲವೋ ಎಂದು ತಿಳಿಯಗೊಡದೆ, ಒಂದು ವಸ್ತು ನಿಜಮಹಿಮೆಯಿಂದ ಜಗವಾಗಿ, ಜೀವವೇಷದಲಿ ವಿಹರಿಪುದು, ಅದು ಒಳ್ಳಿತು (ಅಂದರೆ ಅದು ಇದೆ ಎಂಬುದಾದರೆ, ಅದು ಮಾಡುವ ಕೆಲಸವೂ ಒಳ್ಳೆಯದು) ಎಂದು ನಿಶ್ಚಯವಾದರೆ ಆ ಗಹನತತ್ತ್ವಕ್ಕೆ ಶರಣು. ಇಲ್ಲಿ ನಿಶ್ಚಯದ ಸುದ್ದಿಯಿಲ್ಲ; ನಿಸದವಾದರೆ ನಮಿಸು. ಇದು ಅಜ್ಞೇಯತಾವಾದಿಯೊಬ್ಬನ ಪ್ರಾರ್ಥನೆಯಂತಿದೆ.

ಕಗ್ಗ ಒಂದು ಅನ್ವೇಷಣ ಕಾವ್ಯ. ಜೀವ ತತ್ತ್ವದ, ಜೀವ ರಹಸ್ಯದ ಅನ್ವೇಷಣೆ. ಜೀವನೋತ್ಸಾಹಮಾರ್ಗದ ಅನ್ವೇಷಣೆ. ಇಲ್ಲಿ ನಡೆಯುವುದು ಜೀವ ಜೀವನದ ವಿಮರ್ಶೆ. ಇದು ಯಾವ ಒಂದು ಮತವನ್ನೂ ಪ್ರತಿಪಾದಿಸಲು ಹೊರಟಿಲ್ಲ. ಕವಿಯ ಅನುಭವದ ಫಲವೇ ಕಗ್ಗದ ಸಿದ್ಧಾಂತ. ಕವಿ ನಮ್ಮನ್ನು ಕೈಹಿಡಿದು ಹೆಜ್ಜೆಹೆಜ್ಜೆಯಾಗಿ, ನಮ್ಮಲ್ಲೇಳಬಹುದಾದ, ನಮಗೆ ತೋರಬೇಕಾದ ಆದರೆ ನಮ್ಮ ಬುದ್ಧಿಶಕ್ತಿಯ ಮಿತಿಯಿಂದಾಗಿ ನಮಗೆ ತೋರದೆ ಹೋಗಬಹುದಾದ ಪ್ರಶ್ನೆಗಳಿಗೆ ಉತ್ತರಗಳನ್ನು ಸಮಾಧಾನಗಳನ್ನು ಹೇಳುತ್ತ ಮುಂದೆ ಕರೆದೊಯ್ಯುತ್ತಾರೆ. ಡಾಂಟೆ ಕವಿಯನ್ನು ಬಿಯಟ್ರೈಸ್ ಎಂಬ ಸ್ವರ್ಗ ಕನ್ಯೆ ಆವನನ್ನು ಹಲವು ಲೋಕಗಳಿಗೆ ಕರೆದೊಯ್ದು ಕಡೆಗೆ ಪರಮಪದಕ್ಕೆ ತಲುಪಿಸುವಂತೆ ಜಿಜ್ಞಾಸುವಾದವನನ್ನು ಜೀವಸಾರ್ಥಕ್ಯ ಮಾರ್ಗವನ್ನು ಕಾಣಬೇಕೆಂದಿರುವವನನ್ನು ಜೀವನವ ಸುಮವೆನಿಪ ಯತ್ನದಲಿ ತೊಡಗಿಸುತ್ತದೆ ಕಗ್ಗ. ಇದು ಕೇವಲ ಬಿಡಿ ಪದ್ಯಗಳ ಸಂಕಲನವಲ್ಲ, ಸುಭಾಷಿತಗಳ ಮಾಲೆಯಲ್ಲ. ಒಂದು ಜೀವನ ಸಿದ್ಧಾಂತವನ್ನು ಬಿಡಿಸಿ ಬಿಡಿಸಿ ತೋರಿಸುವ ಗ್ರಂಥ. ಜೀವನವನ್ನು ಸಾರ್ಥಕಪಡಿಸಿಕೊಳ್ಳುವುದು ಹೇಗೆ ಎಂಬ ಉದ್ದೇಶ ಅನುಸ್ಯೂತ

ವಾಗಿ ಬಂದಿದೆ ಈ ಗ್ರಂಥದಲ್ಲಿ.

ಇಲ್ಲಿಯುವರೆಗೆ ಡಿ ವಿ ಜಿ ಯುವರ ಜೀವನವನ್ನು ಕಂಡ ನಮಗೆ ಈ ಗ್ರಂಥವನ್ನು ಅವರು ರಚಿಸಿದ್ದು ಆಶ್ಚರ್ಯವನ್ನುಂಟುಮಾಡಲಾರದು. ಏಕೆಂದರೆ ಅವರು ತಮ್ಮ ಸಾರ್ವಜನಿಕ ಜೀವನವನ್ನು, ವೈಯಕ್ತಿಕ ಜೀವನವನ್ನು ಪ್ರಾರಂಭಿಸಿದ ತರುಣದಲ್ಲೇ ಜೀವನದ ಅರ್ಥವನ್ನು ಕುರಿತು ಒಂದು ತೀರ್ಮಾನಕ್ಕೆ ಬಂದು ಅದಕ್ಕೆ ಅನುಸಾರವಾದ ಜೀವನದ ಒಂದು ನಕ್ಷೆಯನ್ನು ಹಾಕಿಕೊಂಡು ಅದರಂತೆ ನಡೆಯಲು ಹೇಗೆ ಹೆಣಗಾಡಿದರು ಎಂಬುದನ್ನು ನೋಡಿದ್ದೇವೆ. ಅವರು ಮಾಡಿಕೊಂಡ ತೀರ್ಮಾನ ಕಗ್ಗದಲ್ಲಿ ಕಂಡುಬರುತ್ತದೆ. ಅದು ಎಷ್ಟು ಮಟ್ಟಿಗೆ ಸಾಧನಯೋಗ್ಯವಾದದ್ದು, ಸರಿಯಾದದ್ದು ಎಂಬುದು ಅವರ ಜೀವನದಲ್ಲಿ ರುಜುವಾತಿಗೆ ಬಂದಿದೆ. ತಾವು ಪ್ರಯೋಗದಿಂದ ಕಂಡುಕೊಂಡ ವಿಷಯವನ್ನು ಸರಿಯಾದುದೆಂದು ತಿಳಿದು ಅದನ್ನು ಕಗ್ಗದಲ್ಲಿ ವಿವರಿಸಿದ್ದಾರೆ.

ಇದನ್ನು ಕಾವ್ಯವೆನ್ನಿ, ಬಿಡಿ. ಕಗ್ಗದ ಕವಿಯ ಗುರಿ ಕಾವ್ಯರಚನೆಯಲ್ಲ. ದೈವ ಸಂಪನ್ಮಾರ್ಗದರ್ಶನ, ಜೀವನ ಸಾರ್ಥಕ್ಯದರ್ಶನ. ಅದರಲ್ಲಿ ಅವರು ಸಫಲರಾಗಿದ್ದಾರೆ ಎಂಬುದರಲ್ಲಿ ಸಂದೇಹವಿಲ್ಲ.

ಕಗ್ಗದ 4ನೆಯ ಪದ್ಯದಿಂದ 42ನೆಯ ಪದ್ಯದವರೆಗೆ ಪ್ರಶ್ನೆಗಳ ಒಂದು ರಾಶಿಯೇ ಇದೆ. ಏನು ಜೀವನದರ್ಥ? ಏನು ಪ್ರಪಂಚಾರ್ಥ? ಎಂಬ ಎಲ್ಲ ಚಿಂತನಶೀಲರ ಮನಸ್ಸಿನಲ್ಲೂ ಹುಟ್ಟುವ ಪ್ರಶ್ನೆಗಳಿಂದ ಪ್ರಾರಂಭವಾಗುತ್ತದೆ ಕಗ್ಗದ ಅನ್ವೇಷಣೆ.

ತತ್ತ್ವವಿಚಾರದಲ್ಲಿ ಸಂದೆಯವೆ ನಮಗೆ ಗತಿಯೋ ಎನ್ನುವಷ್ಟರ ಮಟ್ಟಿಗೆ ನಿರಾಸೆ ಜೀವನದಲ್ಲಿ ನಮಗೆ ಎದುರಾಗುತ್ತದೆ. ವೈಯಕ್ತಿಕ ಜೀವನದಲ್ಲಾದರೂ,

> ಇಂಗಿತಜ್ಞಾನವಿಲ್ಲದ ಬಂಧು ಪರಿವಾರ ।
> ಹಂಗಿಸುವ ಛಲವುಳ್ಳ ಸತಿಪುತ್ರ ಸಖರು ॥ ಅದರಿಂದ
>
> ನೋಡು ನೋಡುತ ಲೋಕ ಸಹವಾಸ ಸಾಕಹುದು ।
> ಹೊಟ್ಟೆಯೊಂದರ ರಗಳೆಸಾಲದೆಂದೇನೋ ವಿಧಿ ।
> ಹೊಟ್ಟೆಕಿಚ್ಚಿನ ಕಿಡಿಯ ನೆಟ್ಟಿಹನು ನರನೊಳ್ ॥ ಅದೂ ಅಲ್ಲದೆ,

ಬೆದಕಾಟ ಬದುಕೆಲ್ಲ; ಚಣಚಣವು ಹೊಸ ಹಸಿವು ।
ಅದಕಾಗಿ ಇದಕಾಗಿ ಮತ್ತೊಂದಕಾಗಿ ॥
ಅಧಿಕಾರ ಸಿರಿ ಸೊಗಸು ಕೀರ್ತಿಗಳ ನೆನೆದು ಮನ ॥
ಕುದಿಯುತಿಹುದಾವಗಂ.... । ಅವು ಸಿಗದಾಗ

ಹಾಳು ಹಾಳು ಎಲ್ಲ ಬಾಳ್, ಎನಿಸುತ್ತದೆ. ಮತ್ತು "ಎನ್ನ ಬೇಡಿಕೆ ನಷ್ಟವೆಂತಹುದು ದೇವನಿರೆ?" "ಎನಗೆ ಸುಖವಿಲ್ಲವದರಿಂ ದೇವನಿರನ್" ಎನಿಸುವುದೂ ಉಂಟು.

ಹೀಗೆ ಜೀವ ಕಂಗೆಟ್ಟು ಹೋಗುವುದು ನಮ್ಮೆಲ್ಲರ ಅನುಭವದಲ್ಲಿರುವ ಸಂಗತಿ. ಇದಕ್ಕೆ ಪರಿಹಾರವೇನು? ಇದಕ್ಕೆ ನಮ್ಮ ಬುದ್ಧಿಯೇ ದಾರಿ ತೋರಿಸಬೇಕು ಎನ್ನುತ್ತದೆ ಕಗ್ಗ.

ಚಿತ್ತದನುಭವ ಭಾವ ಸಂಭಾವನೆಗಳೆಲ್ಲ ।
ಬತ್ತವದನು ವಿಚಾರಯುಕ್ತಿಗಳು ಕುಟ್ಟೆ ॥
ತತ್ತ್ವ ತಂಡುಲ ದೊರೆಗುವುದು ವಿವೇಚಿತ ತತ್ತ್ವ ।
ನಿತ್ಯಭೋಜನ ನಮಗೆ—ಮಂಕುತಿಮ್ಮ ॥

ಅದೂ ಅಲ್ಲದೆ ಆ ತತ್ತ್ವದೃಷ್ಟಿಯೇ ಜೀವಿತ ವ್ಯಾಪಾರಕ್ಕೆ ಮೂಲಧನ.

ಪರಮ ಲಾಭವ ಗಳಿಸೆ ಜೀವಿತವ್ಯಾಪಾರ- ।
ಕಿರಬೇಕು ಮೂಲಧನವದು ತತ್ತ್ವದೃಷ್ಟಿ ॥
ಚಿರಲಾಭ ಜಗದಾತ್ಮ ಲೀಲಾವಿಹಾರಸುಖ ।
ಧರೆಯ ಸುಖ ಮೇಲ್‌ಬಡ್ಡಿ—ಮಂಕುತಿಮ್ಮ ॥

ಹೀಗೆಂದು ಹೇಳಿ ಕಗ್ಗ ಮೂಲಧನವನ್ನೊದಗಿಸಿ, ಲಾಭ ಮತ್ತು ಮೇಲ್ಬಡ್ಡಿಯನ್ನು ಪಡೆಯುವ ಮಾರ್ಗವನ್ನು ತೋರಿಸುತ್ತದೆ.

ಜೀವನವದೊಂದು ಕಲೆ; ಕಲೆಯ ಕಲಿಸುವುದೆಂತು? ।
ಸಾವಿರ ನಿಯಮ ಯುಕ್ತಿಗಳನೊರೆದೊಡೆಯುಂ ॥
ಆವುದೋ ಕುಶಲತೆಯದೊಂದಿರದೆ ಜಯವಿರದು ।
ಆ ವಿವರ ನಿನ್ನೊಳಗೆ—ಮಂಕುತಿಮ್ಮ ॥

ಎಂದು ಹೇಳಿದರೂ ಆ ವಿವರವನ್ನು ಪಡೆಯುವ ಕುಶಲತೆಯನ್ನು ಹೇಳಿಕೊಡುತ್ತದೆ.

ಕಗ್ಗ ಹೇಳುವ ತತ್ತ್ವ ಯಾವುದು ?

ಮೇಲೆ ಕೆಳಗೊಳಗೆ ಬಳಿ ಸುತ್ತಲೆತ್ತೆತ್ತಲುಂ ।
ಮೂಲೆಮೂಲೆಯಲಿ ವಿದ್ಯುಲ್ಲಹರಿಯೊಂದು ॥
ಧೂಲಿಕಣ ಭೂಗೋಳ ರವಿ ಚಂದ್ರ ತಾರೆಗಳ ।
ಚಾಲಿಪುದು ಬಿಡು ಕೊಡದೆ—ಮಂಕುತಿಮ್ಮ ॥

ಆ ಪರಸತ್ತ್ವವು,

ಬಹುವಾಗಲೆಳಸಿ ತಾನೊಬ್ಬಂಟಿ ಬೊಮ್ಮ ನಿಜ ।
ಮಹಿಮೆಯಿಂ ಸೃಜಿಸಿ ವಿಶ್ವವನಲ್ಲಿ ನೆಲಸಿ ॥
ವಹಿಸಿ ಜೀವತೆಯ ಮಾಯೆಯ ಸರಸವಿರಸದಲಿ ।
ವಿಹರಿಪನು ನಿರ್ಲಿಪ್ತ !—ಮಂಕುತಿಮ್ಮ ॥

ಕಗ್ಗ ಹೇಳುತ್ತದೆ, ಈ ತತ್ತ್ವ,

ಸುಳಿವುದಾಗೀಗಳದು ಸೂಕ್ಷ್ಮಾನುಭವಗಳಲಿ ।
ತಿಳಿವುನದೆ ನೋಳ್ಪರ್ಗೆ.... । ಮತ್ತು
ಫಲವಿಲ್ಲ ಕಾರ್ಯಕಾರಣವಾದದಿಂ ತತ್ತ್ವ ।
ಸಿಲುಕದೆಮ್ಮಯ ತರ್ಕಕರ್ಕಶಾಂಕುಶಕೆ ॥

ಹೀಗೆ ಈ ಸೃಷ್ಟಿಯೆಲ್ಲ ಬೊಮ್ಮನ ಆಟ ಎಂಬ ತತ್ತ್ವದೃಷ್ಟಿಯ ಮೇಲೆ ನಿಂತಿದೆ ಕಗ್ಗದ ಕಟ್ಟಡ. ಇಲ್ಲಿ ನಮ್ಮ ಕರ್ತವ್ಯವೇನು ?

ವಕ್ರಋಜುಮಿಶ್ರ ಜಗವದರ ಶೋಧನೆ ಧರ್ಮ ।
ಪ್ರಾಕೃತಧ್ವನಿಮಿಶ್ರವದರಡುಗೆ ರಾಗ ॥
ವ್ಯಾಕೃತದಿನವ್ಯಾಕೃತಾದಿಸತ್ತ್ವಕೆ ನಿನ್ನ ।
ಜಾಗೃತಿಪ ಮತಿ ಧರ್ಮ—ಮಂಕುತಿಮ್ಮ ॥

ಎಲ್ಲವೂ ಅದೇ ಆಗಿರುವಾಗ ತಾನು ಬೇರೆಯೆಂದು ತಿಳಿಯುವುದೇ ನಮ್ಮೆಲ್ಲ ದುರಿತಗಳಿಗೂ ಕಾರಣ.

ಜೀವಕಾರಣಮೂಲ ಗೂಢವಾಗಿರ್ದೊಡಂ ।
ಧೀವಿಕಾಸದ ಬೆಳಕನಾದನಿತು ಗಳಿಸಿ ॥
ಕೈವಲ್ಯಪಥವನರಸುತ ಯಾತ್ರಿಸಲೆಬೇಕು ।
ದೀವಿಗೆಯು ಮತಿಯೊಂದೆ—ಮಂಕುತಿಮ್ಮ ॥ ಮತ್ತು

ವ್ಯರ್ಥವೀ ಜೀವನದ ಬಡಿದಾಟವೆನ್ನದಿರು ।
ಅರ್ಥವಹುದದು ನಿನಗೆ ಪೂರ್ಣದರ್ಶನದಿಂ ॥

ಈ ಪೂರ್ಣದರ್ಶನಕ್ಕೆ ಕಗ್ಗ ತೋರುವ ದಾರಿ ವಿಶಿಷ್ಟವಾದದ್ದು.

ವಿಸ್ತಾರದಲಿ ಬಾಳು, ವೈಶಾಲ್ಯದಿಂ ಬಾಳು ।
ಕತ್ತಲೆಯ ಮೊಡಕು ಮೂಲೆಗಳ ಸೇರದಿರು ॥
ಭಾಸ್ಕರನನುಗ್ರಹವೆ ನೂತ್ನ ಜೀವನ ಸತ್ತ್ವ ।

ಹೀಗೆ ಬಾಳಿದವನಿಗೆ ಮೃತ್ಯುವೂ ಅಲ್ಪ. ವಿಸ್ತಾರದಲಿ ಬಾಳುವುದು ಹೇಗೆ ?

ಕೊಳದಿ ನೀಂ ಮೀವಂದು ತೆರೆಯೆದ್ದು ಹರಡುತ್ತೆ ।
ವಲಯವಲಯಗಳಾಗಿ ಸಾರುವುದು ದಡಕೆ ॥
ಅಲೆಗಳಾ ತೆರದಿ ನಿನ್ನಾತ್ಮದಿಂ ಪರಿಪರಿದು ।
ಕಲೆತುಕೊಳ್ಳಲಿ ಜಗದಿ—ಮಂಕುತಿಮ್ಮ ॥

ವಹಿಸು ಕೆಲ ಭಾರಗಳ ; ಸಹಿಸು ಕೆಲ ನೋವುಗಳ ।
ಪ್ರಹರಿಸರಿಗಳನನಿತು ಯುಕ್ತಗಳನರಿತು ॥

ಇಲ್ಲಿ ಮುಖ್ಯವಾದದ್ದು ತನ್ನ ಸಣ್ಣತನವನ್ನು ಮರೆತು ದೊಡ್ಡದರೊಡನೆ ಸೇರುವುದು.

ನಾನು ನಾನೇ ನಾನೆನುತ್ತೆ ಕಿರಿಕೊಡದ ನೀರ್ ।
ಗಾನಗೈಯ್ವುದು ಹೆಮ್ಮೆಯಿಂ ಕಡಲ ಮರೆತು ॥
ನೂನದಿಂದೆಲ್ಲವೆನುವಬ್ಧಿಯೊಳಗದನಿರಿಸೆ ।
ಮೌನವದು ಮಣ್ಕರಗಿ–ಮಂಕುತಿಮ್ಮ ॥

ಈ ಸಂದರ್ಭದಲ್ಲಿ ಬರ್ಟ್ರಾಂಡ್ ರಸೆಲ್ ಮಹಾಶಯನ ಈ ಮಾತುಗಳು ಜ್ಞಾಪಕಕ್ಕೆ ಬರುತ್ತವೆ :

"A successful old age is easiest for those who have strong impersonal interests involving appropriate activities." "As far as fear of death is concerned the best way to overcome it—so at least it seems to me—is to make your interest gradually wider and more impersonal, until bit by bit the walls of the ego recede and your life becomes increasingly merged in universal life."

ಇಲ್ಲಿ, ಬಾಳುವುದು ಮುಖ್ಯ. ಪುರುಷಪ್ರಯತ್ನ ಮುಖ್ಯ.

ಹೋರಾಡು ಬೀಳ್ವನ್ನವೊಬ್ಬೊಂಟಿಯಾದೊಡಂ ।
ಧೀರಪಥವನೆ ಬೆದಕು ಸಕಲಸಮಯದೊಳಂ ॥
ದೂರದಲಿ ಗೊಣಗುತ್ತ ಬಾಳ್ವ ಬಾಳ್ಗೇನು ಬೆಲೆ ? ।
ಹೋರಿ ಸತ್ತ್ವವ ಮೆರಸು—ಮಂಕುತಿಮ್ಮ ॥

ಸೋಲು ಬಂದಾಗ, ನಿರಾಸೆ ಎದುರಾದಾಗ, ಫಲವೇನು ಹೆಣಗಾಡಿ ಎನಿಸುತ್ತದೆ. ಆದರೆ :

ಜಟ್ಟಿ ಕಾಳಗದಿ ಗೆಲ್ಲದೊಡೆ ಗರಡಿಯ ಸಾಮು ।
ಪಟ್ಟುವರಸೆಗಳೆಲ್ಲ ವಿಫಲವೆನ್ನುವೆಯೇಂ ॥
ಮುಟ್ಟಿ ನೋಡವನ ಮೈಕಟ್ಟು ಕಬ್ಬಿಣ ಗಟ್ಟಿ ।
ಗಟ್ಟಿತನ ಗರಡಿ ಫಲ—ಮಂಕುತಿಮ್ಮ ॥ ಮತ್ತು

ಪರಬೊಮ್ಮನಾ ವಿಧಿಯ ನೇಮಿಸಿಹುದೇತಕೆನೆ ।
ನರಜಾತಿ ಸಾನುಭೂತಿಯ ಕಲಿಯಲೆಂದು ॥ ಮತ್ತು

ಅಹುದು ಬಾಳ್ ಭಂಡತನವಿಹದಿ ಬಾಳ್ ಮುಗಿಯುವೊಡೆ ।
ಕಹಿಯೊಗರು ಕಾಯಿ, ಮಿಡಿತನದೊಳದು ಮುಗಿಯೆ ॥
ಸಿಹಿಯಹುದು ಕಾಯಿ ಹಣ್ಣಾಗೆ, ಜೀವಿತವಂತು ।
ಮಹಿಮೆಗೊಳುವುದು ಮಾಗೆ—ಮಂಕುತಿಮ್ಮ ॥

ಈ ಮಾಗುವಿಕೆಗೆ ದಾರಿ ಜೀವನವೇ. ಆದ್ದರಿಂದ

ಗೌರವಿಸು ಜೀವನವ, ಗೌರವಿಸು ಚೇತನವ ।
ಆರದೋ ಜಗವೆಂದು ಭೇದವೆಣಿಸದಿರು ॥
ಹೋರುವುದೆ ಜೀವನ ಸಮೃದ್ಧಿಗೋಸುಗ ನಿನಗೆ ।
ದಾರಿಯಾತ್ಮೋನ್ನತಿಗೆ—ಮಂಕುತಿಮ್ಮ ॥ —ಎನ್ನುತ್ತದೆ ಕಗ್ಗ.

ಹೀಗೆ ಕಗ್ಗದ ಸಂದೇಶ ಚೆನ್ನಾಗಿ ಬಾಳಬೇಕು ಎಂಬುದೇ. ಆದರೆ ಮನಸ್ಸಿನಲ್ಲಿ ಇರಬೇಕಾದ ಎರಡು ಅಂಶಗಳನ್ನು ಅದು ಸೂಚಿಸುತ್ತದೆ. ಪುರುಷ ಪ್ರಯತ್ನ ಎಷ್ಟಾದರೂ,

ಜೀವನವ್ಯಾಪಾರ ಮೂವರೊಟ್ಟುವಿಚಾರ ।
ಭಾವಿಪೊಡೆ ನೀನು, ಜಗ, ಇನ್ನೊಂದದೃಷ್ಟ ॥
ಆವಗಂ ಮೂರನೆಯ ಭಾಗಸ್ಥನಿಚ್ಛೆ ಬಲ ।
ಈ ವಿವರವರಿಯೆ ಸುಖ—ಮಂಕುತಿಮ್ಮ ॥ ಮತ್ತು

ಜೀವನದ ಮೂಲ ಮೇಲಿಹುದು ಪರಮೋರ್ಧ್ವದಲಿ ।
ತೀವಿರ್ಪುದದು ಕೆಳಗೆ ನಮ್ಮ ಲೋಕದಲಿ ॥
ನಾವದರ ಕಡ್ಡಿ ಯೆಲೆ, ಚಿಗುರುವೆವು, ಬಾಡುವೆವು ।
ಸಾವು ಮರಕೇನಿಲ್ಲ—ಮಂಕುತಿಮ್ಮ ॥ ಮತ್ತು

ಪುರುಷಬುದ್ಧಿಯೆ ಸಾಕು ವರಸಿದ್ಧಿಗೆಂದಲ್ಲ ।
ಪರಮೇಶಕರುಣೆಯನವಶ್ಯವೆಂದಲ್ಲ ॥
ಚರಣ ನಡೆವನಿತು ಕಣ್ಣರಿವನಿತು ದೂರ ನೀಂ ।
ಚರಿಸದಿರೆ ಲೋಪವಲ ?—ಮಂಕುತಿಮ್ಮ ॥

ಆದ್ದರಿಂದ :

ಹೊರಗೆ ಲೋಕಾಸಕ್ತಿಯೊಳಗೆ ಸಕಲ ವಿರಕ್ತಿ ।
ಹೊರಗೆ ಕಾರ್ಯಧ್ಯಾನವೊಳಗುದಾಸೀನ ॥
ಹೊರಗೆ ಸಂಸ್ಕೃತಿಭಾರವೊಳಗದರ ತಾತ್ಸಾರ ।
ಪರಯೋಗಮಾರ್ಗವಿದು—ಮಂಕುತಿಮ್ಮ ॥

ಹೀಗೆ ಕಗ್ಗ ಜೀವನ ವ್ಯಾಪಾರದಲ್ಲಿ ಲಾಭವನ್ನು ಗಳಿಸಿಕೊಳ್ಳುವುದು ಹೇಗೆ, ಮೇಲ್ಬಡ್ಡಿಯನ್ನು ಪಡೆಯುವುದು ಹೇಗೆ ಎಂದು ತೋರಿಸುತ್ತದೆ.

ಸ್ಥೂಲವಾಗಿ ಇದು ಕಗ್ಗದ ಉಪದೇಶ. ಸೌಂದರ್ಯ, ದುಃಖ, ಕೆಡುಕು, ಬದಲಾವಣೆ, ಪ್ರಗತಿ, ಮುಂತಾದ ಅನೇಕ ವಿಚಾರಗಳ ಚರ್ಚೆ ಕಗ್ಗದಲ್ಲಿದೆ. ಆದರೆ ಅವುಗಳಿಗೆ ಆಧಿಪಾಯವಾದದ್ದು ಮೇಲೆ ಸೂಚಿಸಿರುವ ಕಗ್ಗದ ಸಿದ್ಧಾಂತ.

ಒಟ್ಟಿನಲ್ಲಿ, "ನಿಸದವಾದೊಡೆ ನವಿಸು" ಎಂದು ಪ್ರಾರಂಭವಾದ ಕಗ್ಗ,

"ಬೊಮ್ಮನೆಲ್ಲರನಾಳ್ವನಿಹನೆನಿಸುವ ನೆನಪಿನಲಿ ।
ನೆಮ್ಮದಿಯ ಪಡೆಗೆ ಜನ" —ಎಂದು ಹೇಳಿ,

ಶರಣುವೊಗು ಜೀವನರಹಸ್ಯದಲಿ ಸತ್ತ್ವದಲಿ ।
ಶರಣು ಜೀವನವ ಸುಮವೆನಿಪ ಯತ್ನದಲಿ ॥
ಶರಣಂತರಾತ್ಮಗಂಭೀರಪ್ರಶಾಂತಿಯಲಿ ।
ಶರಣು ವಿಶ್ವಾತ್ಮದಲಿ—ಮಂಕುತಿಮ್ಮ ॥

ಎಂದು ಮಂಗಳಾಶಾಸನ ಮಾಡುತ್ತದೆ.

ಅನೇಕ ವೇದಾಂತ ಗ್ರಂಥಗಳು ಗುರು-ಶಿಷ್ಯರ ಸಂವಾದ ರೂಪದಲ್ಲಿರುತ್ತವೆ.

ಶಿಷ್ಯ ಗುರುವಿನ ತತ್ತ್ವನಿರೂಪಣೆಯನ್ನು ಆಲಿಸಿ, ಅದರಿಂದ ಆನಂದವನ್ನು ಅನುಭವಿಸುವ ವರ್ಣನೆ ಅಂಥ ಗ್ರಂಥಗಳ ಕೊನೆಯಲ್ಲಿ ಬರುವುದುಂಟು. ಹಾಗೆ ಕಗ್ಗದ ಮಂಕುತಿಮ್ಮ ನಮಗೆ ತತ್ತ್ವನಿರೂಪಣೆ ಮಾಡುತ್ತಾನೆ. ಮರುಳ ಮುನಿಯ ತಾನು ತಿಳಿದ ತತ್ತ್ವವನ್ನೂ, ಅದರಿಂದ ತಾನು ಲೋಕವನ್ನು ಕಾಣುವ ರೀತಿಯನ್ನೂ, ಅದರಿಂದ ಆದ ಆನಂದವನ್ನೂ ವಿವರಿಸುತ್ತಾನೆ. ಡಿ ವಿ ಜಿ ಯವರು ತಮ್ಮ ಕೊನೆಯ ವರ್ಷಗಳಲ್ಲಿ ಗುರುತು ಮಾಡಿಟ್ಟುಕೊಂಡಿದ್ದ ಪದ್ಯಗಳು ಮರುಳ ಮುನಿಯನ ಕಗ್ಗದಲ್ಲಿ ಬಂದಿವೆ. ಆ ಪದ್ಯಗಳ ರಾಶಿಯನ್ನು ವಿಂಗಡಿಸಿ, ಅದಕ್ಕೆ ಒಂದು ರೂಪಕೊಟ್ಟು ಸಂಪಾದಿಸಿ ಕೊಟ್ಟಿದ್ದಾರೆ ಡಿ ವಿ ಜಿ ಯವರ ಹೃದಯವನ್ನು ಬಲ್ಲ ವಿದ್ವಾನ್ ಎನ್. ರಂಗನಾಥ ಶರ್ಮಾ ಅವರು.

ರಾಜ್ಯಶಾಸ್ತ್ರ : 1923 – ಬ್ರಜೇಂದ್ರನಾಥ ಶೀಲರ ರಾಜಕೀಯ ಸುಧಾರಣೆಗಳ ವರದಿ ಬಂದ ಕಾಲ. ಆ ಸಂದರ್ಭದಲ್ಲಿ ಮಹಾಜನಕ್ಕೆ ಹೊಸ ಹಕ್ಕುಗಳು ಬರುವಾಗ ಅದನ್ನು ಚಲಾಯಿಸಲು ಬೇಕಾದ ತಿಳಿವಳಿಕೆಯನ್ನು ಕೊಡಲು ಡಿ ವಿ ಜಿ ಯವರು ರಾಜ್ಯಶಾಸ್ತ್ರವನ್ನು ಕುರಿತು ಕೆಲವು ಲೇಖನಗಳನ್ನು "ಕರ್ನಾಟಕ ಜನಜೀವನ ಮತ್ತು ಅರ್ಥಸಾರ್ಥಕ ಪತ್ರಿಕೆ"ಯಲ್ಲಿ ಬರೆದರು. ಇದಕ್ಕೆ ಪ್ರೋತ್ಸಾಹ ಸಿಕ್ಕಿದ್ದು ಒಂದು ಕಡೆ ಮಿರ್ಜಾ ಸಾಹೇಬರು ಮತ್ತು ಹಂಜಾ ಹುಸೇನ್ ಅವರಿಂದ. ಇದನ್ನು ಕುರಿತು ಡಿ ವಿ ಜಿ "ಕನ್ನಡದಲ್ಲಿ ಒಂದು ರಾಜ್ಯಶಾಸ್ತ್ರಸಂಗ್ರಹವನ್ನು ಬರೆಯುವ ಯೋಚನೆ ನನ್ನ ಮನಸ್ಸಿಗೆ ಬಂದು ಸುಮಾರು ಮುವ್ವತ್ತು ವರ್ಷಗಳಾದವು. 1923ರಲ್ಲಿ ನಾನು ಪ್ರಕಟಿಸುತ್ತಿದ್ದ ಒಂದು ಮಾಸಪತ್ರಿಕೆಯಲ್ಲಿ ಆ ವಿಷಯದ ಕೆಲವು ಪ್ರಬಂಧಗಳನ್ನು ಪ್ರಕಟಪಡಿಸಿದೆ. ಶ್ರೀ ಬಿ.ಎಂ. ಶ್ರೀಕಂಠಯ್ಯನವರು ಮೊದಲಾದ ಕೆಲಮಂದಿ

ಸನ್ಮಾನ್ಯ ಮಿತ್ರರು ಅದನ್ನು ಮೆಚ್ಚಿಕೊಂಡಿದ್ದರು. ಆಗ ಆ ಲೇಖನಗಳಿಗೆ ದೇವರಾಜ ಬಹದ್ದೂರ್ ಬಹುಮಾನವೂ ದೊರೆಯಿತು. ಆದರೆ ಕಟ್ಟಡಕ್ಕೆ ತಳಹದಿ ಹಾಕುತ್ತಿದ್ದಷ್ಟರಲ್ಲಿಯೇ ಗಾರೆ ಮುಗಿಯಿತು, ಕರಣೆ ಮುರಿಯಿತು," ಎಂದು ವಿವರಿಸಿದ್ದಾರೆ.

ಅನಂತರ ದೇಶ ಸ್ವಾತಂತ್ರ್ಯಾಂದೋಳನದ ಹುರುಪಿನಲ್ಲಿದ್ದಾಗ ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯನ್ನು ಶ್ರೀ ಭೀಮಯ್ಯ ಎಂಬುವರು ಸ್ವಾತಂತ್ರ್ಯ ಬಂದರೆ ಏನು ಅನುಕೂಲ ಮುಂತಾದ ಪ್ರಶ್ನೆಗಳನ್ನು ಕೇಳಿದರು. ಅದಕ್ಕೆ ಉತ್ತರ ಕೊಡುವ ಭಾರವನ್ನು ಸಮಿತಿಯವರು ಡಿ ವಿ ಜಿ ಯವರಿಗೆ ಒಪ್ಪಿಸಿದರು. ಹಾಗೆ ಉತ್ತರ ರೂಪವಾಗಿ ಬಂದವು ಮೂರು ಚಿಕ್ಕ ಲಘು ಪುಸ್ತಕಗಳು: "ಸ್ವರಾಜ್ಯ ಅಂದರೆ ಏನು?" (1944), "ರಾಜ್ಯದ ರಚನೆ" (1944), "ಸ್ವಾತಂತ್ರ್ಯ ಬಂದರೆ ಏನು ಅನುಕೂಲ" (1945).

ಹೀಗೆ 1923 ರಲ್ಲಿ ಬರೆದದ್ದೂ, 1944-45 ರಲ್ಲಿ ಬರೆದದ್ದೂ, ಇವುಗಳ ಜೊತೆಗೆ ಅನೇಕ ಅಂಶಗಳು ಸೇರಿ 1951 ರಲ್ಲಿ 'ರಾಜ್ಯಶಾಸ್ತ್ರ' ಗ್ರಂಥ ಪ್ರಕಟವಾಯಿತು. ಅನಂತರ "ಸಂಪದ್ವ್ಯವಸ್ಥೆ" ಮುಂತಾದ ಕೆಲವು ಅಂಶಗಳಿಂದ ಕೂಡಿ ಗ್ರಂಥ 1973 ರಲ್ಲಿ ಎರಡನೆಯ ಮುದ್ರಣವನ್ನು ಕಂಡಿತು.

ಈ ಗ್ರಂಥದಲ್ಲಿ ಎರಡು ಭಾಗಗಳನ್ನು ನಾವು ಸ್ಫುಟವಾಗಿ ಕಾಣಬಹುದು. ಸ್ವಾತಂತ್ರ್ಯ ಬಂದರೆ ಅನುಕೂಲವೇನು, ಸ್ವರಾಜ್ಯವೆಂದರೇನು ಜವಾಬ್ದಾರಿ ಸರಕಾರ ಅಥವಾ ಉತ್ತರ ಬದ್ಧ ರಾಜ್ಯ ಎಂದರೇನು, ಪ್ರಜೆಯ ಕರ್ತವ್ಯವೇನು, ರಾಜ್ಯ ನಿಬಂಧನೆ ಎಂದರೇನು, ಅದರ ಅಂಗಗಳಾವುವು ಮುಂತಾದ ಎಲ್ಲ ವಿಷಯಗಳನ್ನು ಕುರಿತು ಡಿ ವಿ ಜಿ ಮೊದಲು ಬರೆದರು. ಆದರೆ 1973 ರಲ್ಲಿ ಅದನ್ನು ಪುನಃ ನೋಡಿದಾಗ ಅವರಿಗೆ ಅನ್ನಿಸಿದ್ದೇನು?

"ಸ್ವಾತಂತ್ರ್ಯದಿಂದ ಎಷ್ಟೋ ಅಸೌಕರ್ಯಗಳು ತೊಲಗಿ ಸೌಕರ್ಯಗಳು ದೊರೆಯಬಹುದೆಂದು ಪುಸ್ತಕದಲ್ಲಿ ಹೇಳಿದೆಯಷ್ಟೆ. ಅದು ಎಷ್ಟು ಮಾತ್ರ ನಡೆದಿದೆ?"

"ಪ್ರಜಾರಾಜ್ಯದಿಂದ ಇಂಥಿಂಥ ಅನಿಷ್ಟಗಳು ತೊಲಗಿ ಜನಕ್ಕೆ ಇಂಥಿಂಥ ಸೌಕರ್ಯಗಳು ಬರುತ್ತದೆಂದು ಈ ಪುಸ್ತಕದಲ್ಲಿ ಹೇಳಿದೆ. ಇಂಥಿಂಥ ಜನರನ್ನು ಪ್ರತಿನಿಧಿಯನ್ನಾಗಿ ಆರಿಸಿದರೆ ಆ ಪ್ರಜಾಸಭೆಯಿಂದ ಇಂಥಿಂಥ ಪ್ರಯೋಜನವೆಂದು ಹೇಳಿದೆ."

"ಈಗ 1973 ರಲ್ಲಿ ನಿಮ್ಮ ಪುಸ್ತಕದ ಸೂತ್ರಗಳು ಎಷ್ಟೆಷ್ಟು ಮಾತ್ರ ನಿಜವಾಗಿವೆ?—ಎಂದು ಯಾರಾದರೂ ಕೇಳಿದರೆ ನಾವು ಹೇಳಬಹುದಾದ ಪ್ರತ್ಯುತ್ತರ ನಮ್ಮನ್ನು ಕೇಳುವವರಿಗೆ ಅಷ್ಟೇನೂ ತೃಪ್ತಿಯನ್ನುಂಟು ಮಾಡಲಾರದು. ನಮಗೆ ಎದೆಯ ಒಳಗಡೆ ನೆಮ್ಮದಿ ಕಾಣಲಾರದು. ಈ ಅತೃಪ್ತಿಗೆ ಕಾರಣ ನಮ್ಮ ಜನದ ಅಸಿದ್ಧತೆ."

ಹಾಗಾದರೆ ಸಿದ್ಧತೆ ಹೇಗೆ ಆಗಬೇಕು?—ಎಂದು ತಿಳಿಸುವ ಗ್ರಂಥ "ರಾಜ್ಯಶಾಸ್ತ್ರ." ಇದು ರಾಜ್ಯಶಾಸ್ತ್ರ ವಿದ್ಯಾರ್ಥಿಗಾಗಿ ಮಾತ್ರ ಬರೆದದ್ದಲ್ಲ. "ರಾಜ್ಯಶಾಸ್ತ್ರದ ವಿಷಯ ನಮ್ಮ ಜನಕ್ಕೆ ಹೊಸದೂ ಅಪರಿಚಿತವೂ ಆದದ್ದಾದರೂ ವಿಷಯವನ್ನು ಖಚಿತವಾಗಿಯೂ ಸ್ಪಷ್ಟವಾಗಿಯೂ, ಅನುಭವೋಕ್ತಿಗಳಿಂದ ಸ್ವಾರಸ್ಯವುಳ್ಳದ್ದಾಗಿಯೂ ಬಹು ಸಾಮಾನ್ಯ ಜನರಿಗಾಗಿ ಬರೆದ ಗ್ರಂಥವಿದು" ಎಂದು ಅವರೇ ಹೇಳಿದ್ದಾರೆ.

ಈ ಗ್ರಂಥ ತಿಳಿಸುವ ಕೆಲವು ವಿಷಯಗಳನ್ನು ಮಾತ್ರ ಇಲ್ಲಿ ಸೂಚಿಸಬಹುದು: "ರಾಜ್ಯವೆಂಬುದು ಕುಟುಂಬದಂತೆ ಒಂದು ಧರ್ಮಕ್ಷೇತ್ರ. ಮನುಷ್ಯನ ಅಹಂಭಾವವನ್ನು ಸವೆಯಿಸಿ, ಅಂತಃಕರಣವನ್ನು ವಿಸ್ತಾರ ಪಡಿಸಲು ಸಂಸಾರ ಹೇಗೆ ಒಂದು ಸಾಧನವೋ ರಾಜ್ಯವೂ ಹಾಗೆ ಒಂದು ಸಾಧನ. ಗೃಹಾಭಿಮಾನದಂತೆ ದೇಶಾಭಿಮಾನವೂ ಹೃದಯ ಪರಿಪಾಕಕ್ಕೆ ಅವಕಾಶವುಂಟುಮಾಡಬಲ್ಲುದು. ನಮ್ಮಲ್ಲಿ ಎಲ್ಲ ಧರ್ಮಾನುಷ್ಠಾನಗಳೂ "ಪಾಪಕ್ಷಯಾರ್ಥ"ವಾಗಿ ತಾನೆ? ರಾಷ್ಟ್ರಕತ್ವವೂ ಹಾಗೆ ಆತ್ಮಸಂಸ್ಕಾರ ರೂಪದಲ್ಲಿ ಉಪಕಾರವಾಗತಕ್ಕದ್ದು."

"ರಾಜದಂಡ ಹುಟ್ಟಿದ್ದು ಮನುಷ್ಯನಿಗೆ ಮನುಷ್ಯನ ವಿಷಯದಲ್ಲಿರುವ ಹೆದರಿಕೆಯಿಂದ. ರಾಜ್ಯ ನಿಬಂಧನೆಯಾದದ್ದೂ ಮನುಷ್ಯನಿಗೆ ಮನುಷ್ಯನಲ್ಲಿರುವ ಅಪನಂಬಿಕೆಯಿಂದ. ಮನುಷ್ಯರು ಅನ್ಯೋನ್ಯ ಸಹವಾಸದಲ್ಲಿರಬೇಕಾಗಿ ಬಂದ ಮೇಲೆ, ಒಬ್ಬನನ್ನೊಬ್ಬನು ನಂಬದಿದ್ದರೆ ಬದುಕು ಸಾಗದು; ಪೂರ್ತಿ ನಂಬುವುದೆಂದರೆ ವಂಚನೆಯ ಶಂಕೆ. ಹೀಗೆ ನಂಬಿಕೆ–ಅಪನಂಬಿಕೆಗಳ ಬೆರಕೆಯೇ ರಾಜ್ಯ ಸಂಬಂಧಗಳ ಒಳ ತಿರುಳು. ಎಲ್ಲಿಯೂ ನಂಬಿಕೆಯಿಲ್ಲದಿಲ್ಲ. ಎಲ್ಲಿಯೂ ನಂಬಿಕೆ ನೂರಕ್ಕೆ ನೂರರಷ್ಟಿಲ್ಲ. ಅರ್ಧಮರ್ಧ ವಿಶ್ವಾಸದ್ದು ರಾಜ್ಯಾಂಗಗಳ ಅನ್ಯೋನ್ಯ ವರ್ತನೆ. ಅಧಿಕಾರ ಕೊಡಬೇಕು, ವಿಚಾರಣೆ ಇಡಬೇಕು. ಸ್ವಾತಂತ್ರ್ಯ ಕೊಡಬೇಕು; ನಿಯಂತ್ರಣಕ್ಕೆ ಸಿಕ್ಕಿಸಬೇಕು. ಈ ತೆರನಾದದ್ದು ರಾಜ್ಯ ನಿಬಂಧನೆಯ ಅಂತಸ್ತತ್ತ್ವ."

"ಸಾರ್ವಜನಿಕ ಕಾರ್ಯಕ್ಕೆಂದು ಮುಂದೆ ಬರುವವರ ಮನಸ್ಸುಗಳಲ್ಲಿ ಪ್ರತ್ಯಕ್ಷವಾಗಲ್ಲದಿದ್ದರೆ ಪರೋಕ್ಷವಾಗಿಯಾದರೂ, ಸಮೀಪದಲ್ಲಿ ಅಲ್ಲದಿದ್ದರೆ ದೂರವಾಗಿಯಾದರೂ, ಸ್ವಪ್ರಯೋಜನದ ನಿರೀಕ್ಷಣೆ ಅಷ್ಟೋ ಇಷ್ಟೋ ಇರುವುದು ಅಸ್ವಾಭಾವಿಕವಲ್ಲ. ಆದರೆ ಎಲ್ಲಿ ಅವರು ನೂರಕ್ಕೆ ನೂರು ಮಂದಿಯೂ ಅಂಥವರೇ ಆಗಿದ್ದಾರೆಯೋ ಆ ದೇಶ ತೀರ ಬಡದೇಶವೆನ್ನಬೇಕು. ಸ್ವಾಭಾವಿಕವಾದ ಆಶಾ ಪ್ರವೃತ್ತಿಯ ಮಟ್ಟದಿಂದ ಮೇಲೇರಿ ನಡೆಯಬಲ್ಲವರು ದೇಶದ ನೂರರಲ್ಲಿ ಹತ್ತು ಮಂದಿಯಾದರೂ ಎಲ್ಲಿ ದೊರೆಯುತ್ತಾರೆಯೋ ಅದೇ ಪ್ರಜಾರಾಜ್ಯವನ್ನು ಅನರ್ಥದಿಂದ ಉಳಿಸಿಕೊಳ್ಳಬಲ್ಲ ದೇಶ.

ಕೆಲವರ ವೈರಾಗ್ಯ
ಎಲ್ಲರಿಗೂ ಭಾಗ್ಯ

—ಎನಿಸುವುದು ಇಂಥ ಸಂದರ್ಭದಲ್ಲಿ. ಅಧಿಕಾರವಿರಕ್ತರ ಸಂಖ್ಯೆ ಸಮಾಜದಲ್ಲಿ ಎಷ್ಟು ಹೆಚ್ಚಾಗಿರುತ್ತದೆಯೋ ಅದಕ್ಕೆ ಕ್ಷೇಮ ಅಷ್ಟು ಹೆಚ್ಚಾಗುತ್ತದೆ."

"ನಮ್ಮ ದೇಶದಲ್ಲಿ ಪಕ್ಷಾತೀತವಾಗಿರಬೇಕಾದ ರಾಷ್ಟ್ರಕರು ಪಕ್ಷಾವಲಂಬಿಗಳಾಗಿರುವುದರಿಂದಲೂ, ಅದಕ್ಕಿಂತ ಹೆಚ್ಚಾಗಿ ಅವರು ರಾಜಕೀಯ ವಿಷಯದಲ್ಲಿ ಉದಾಸೀನರಾಗಿರುವುದರಿಂದಲೂ ಪ್ರಜಾರಾಜ್ಯಕ್ಕೆ ಅಪಾಯ ತಂದವರಾಗುತ್ತಾರೆಂದು ಹೇಳುವುದು ನಿರಾಧಾರವಾದ ಶಂಕೆಯೆನಿಸದು. ಸ್ವತಂತ್ರ ಮಹಾಜನರ ಧರ್ಮಸ್ಫೂರ್ತಿಯೂ ಕರ್ತವ್ಯ ಜಾಗರೂಕತೆಯೂ ಎಷ್ಟು ಮಾತ್ರ ಪಕ್ಷ ಪ್ರತಿಪಕ್ಷಗಳನ್ನೂ ಮಂತ್ರಿ ಪ್ರತ್ಯರ್ಥಿಗಳನ್ನೂ ನ್ಯಾಯಮಾರ್ಗದಲ್ಲಿ ನಿಲ್ಲಿಸಲು ಶಕ್ತವಾದೀತೋ ಅಷ್ಟು ಮಾತ್ರ ಭಾಗ್ಯವೇ ದೇಶಕ್ಕಿರುವ ಪ್ರಾಪ್ತಿ" "ದೇಶದ ಸಾರ್ವಜನಿಕರೆಲ್ಲರೂ ರಾಜಕೀಯದ ಕಸಬುದಾರರಾಗಬೇಕಾದದ್ದಿಲ್ಲ."

"ರಾಜಕೀಯದಲ್ಲಿಯೂ ಅನಿಷ್ಟಗಳು ಹೇಗೋ ಬಂದು ಒದಗುತ್ತವೆ.... ಒಂದಿಷ್ಟು ಕಷ್ಟ ಬಂದೇ ಬರುತ್ತದೆ. ಹಾಗಾದಾಗ ರಾಜ್ಯನಿಬಂಧನೆಯನ್ನಾಗಲಿ ರಾಜ್ಯಮನಸ್ಥೆಯನ್ನಾಗಲಿ ದೂಷಿಸಿ ಎಲ್ಲವನ್ನೂ ಬುಡಮಟ್ಟ ಬದಲಾಯಿಸುತ್ತೇನೆಂದು ಹೊರಡುವುದು ಕ್ಷೇಮವಾಗದು.... ರಾಜಕೀಯದಿಂದ ಬರುವ ಕೆಲವು ಕಷ್ಟಗಳನ್ನು ಸಹಿಸಬೇಕು. ಮಾತನಾಡಿದರೆ 'ಬಂದ್', ಮಾತನಾಡಿದರೆ 'ಘೇರಾವ್', ಮಿಸುಕಿದರೆ 'ಸತ್ಯಾಗ್ರಹ'— ಈ ರೀತಿಯಾಗಿ ಜನಕ್ಷೋಭೆ ಮಾಡುವುದರಿಂದ ಯಾವ ಪ್ರಯೋಜನವೂ ದೊರೆಯಲಾರದು. ದೊಂಬಿ ಧಾಳಿ

ಯಿಂದ ಬಂದ ಪ್ರಯೋಜನ ಕ್ಷಣಮಾತ್ರದ್ದು. ಉತ್ತರ ಕ್ಷಣದಲ್ಲಿ ಯಾರಿಗೂ ಇಷ್ಟವಲ್ಲದ ಪ್ರತಿಕ್ರಿಯೆ (Reaction) ತಲೆದೋರುವುದು ಖಂಡಿತ. ಆದದ್ದರಿಂದ ಇಂಥ ನಿರ್ಬಂಥ ಪ್ರಧಾನವಾದ ಚಳವಳಿ ಒಳ್ಳೆಯದಲ್ಲ."

"ದೇಶದ ಪಕ್ಷ ಕಕ್ಷಿಗಳಲ್ಲಿ ಸೇರಿಕೊಂಡಿರುವ ಸಾರ್ವಜನಿಕರು ಬಹು ಮಟ್ಟಿಗೆ ರಾಜಕೀಯವನ್ನೇ ತಮ್ಮ ಕಸಬನ್ನಾಗಿ ಮಾಡಿಕೊಂಡಿರುವವರು. ಆದರಲ್ಲಿ ಬಹು ಮಂದಿಗೆ ರಾಜಕೀಯವೇ....ಮುಖ್ಯ ಜೀವನೋಪಾಯ. ದೇಶದ ಸಾರ್ವಜನಿಕರೆಲ್ಲರೂ ರಾಜಕೀಯದ ಕಸಬುದಾರರಾಗಬೇಕಾದದ್ದಿಲ್ಲ. ರಾಷ್ಟ್ರಕ ಧರ್ಮ ಬೆಳೆದಿರುವ ದೇಶಗಳಲ್ಲಿ ಹಾಗೆ ಇಲ್ಲವೂ ಇಲ್ಲ. ಅನ್ನ ವಸ್ತ್ರ ಸಂಪಾದನೆಗಾಗಿ ಬೇರೆ ವೃತ್ತಿಯನ್ನಿರಿಸಿಕೊಂಡು, ಕೇವಲ ಸಾರ್ವಜನಿಕ ಹಿತದೃಷ್ಟಿಯಿಂದ ರಾಜಕೀಯಕ್ಕೆ ಕೈ ಹಚ್ಚುವವರೆಲ್ಲ ನಿಷ್ಪಾಕ್ಷಿತ ರಾಜ್ಯಸ್ಥರೇ. ಅಂಥವರ ಸ್ವತಂತ್ರ ಪೋಷಣೆಯಿಂದ ಬೆಳೆಯಬೇಕಾದದ್ದು ನಮ್ಮ ರಾಜಕೀಯ.

"ಬಹು ದಿನದ ಊಟವಿಲ್ಲದೆ ಹಸಿದಿರುವವನು ಔತಣದೆಲೆಯ ಮುಂದೆ ಕುಳಿತಾಗ ಹೇಗೆ ಆತುರದಿಂದ ಪಕಪಕನೆ ಬುಕ್ಕುತ್ತಾನೆಯೋ ನಮ್ಮ ಸಾರ್ವಜನಿಕರು ಹಾಗೆ ಅಧಿಕಾರಾವಕಾಶದ ದರ್ಶನವಾದೊಡನೆ ಬಾಯಿಬಿಟ್ಟು ಬುಕ್ಕಲಾರಂಭಿಸಿದರೆ ಆಶ್ಚರ್ಯವಲ್ಲ. ಪ್ರಜಾರಾಜ್ಯ ಪದ್ಧತಿಗೆ ಪ್ರಜಾಪ್ರತಿನಿಧಿಗಳ ಅಧಿಕಾರಾತುರತೆಯೇ ಯಮಭಟನಾಗುತ್ತದೆ.

"ಜಗಳಗಂಟಿತನವೂ ಚಿತಾವಣೆಗಾರಿಕೆಯೂ ಕೆಲವರಿಗೆ ಹುಟ್ಟುಗುಣಗಳಾಗಿ ಬಂದಿರುತ್ತವೆ. ಇಂಥವರು ರಾಜಕೀಯಕ್ಕೆ ಬಂದರೆ ಐಕಮತ್ಯವು ದುರ್ಲಭವಾಗುತ್ತದೆ. ರಾಜಕೀಯದಲ್ಲಿ ಭೇದಪ್ರವೃತ್ತಿಯೂ ಕಲಹ ಪ್ರವೃತ್ತಿಯೂ ಸ್ವಾಭಾವಿಕವಾಗಿ ಆಗುತ್ತವೆ. ಅವುಗಳನ್ನು ಮಿತಿಮೀರಿಸದೆ ಸ್ವಾಧೀನದಲ್ಲಿರಿಸಿಕೊಳ್ಳುವಷ್ಟರ ಮಟ್ಟಿಗೆ ಐಕಮತ್ಯ ಸೌಜನ್ಯ ಪ್ರೀತಿಗಳು ರಾಷ್ಟ್ರಕಜನದಲ್ಲಿರಬೇಕು.

"ವಿಚಾರಣೆಯ ಭಯವಿಲ್ಲದ ಅಧಿಕಾರವು ಉಪ್ಪುಸಾಲದೆ ಹೋದ ಊರುಗಾಯಂತೆ ಹುಳುಗಳ ತೌರುಮನೆಯಾದೀತು. ಅಧಿಕಾರ ಪ್ರಯೋಗಕ್ಕೆ ವಿಚಾರಣೆಯ ಭಯವೇ ಮೈಗಾವಲು."

ಹೀಗೆ ರಾಜ್ಯಶಾಸ್ತ್ರಗ್ರಂಥ ಡಿ ವಿ ಜಿ ಯವರ ರಾಜಕೀಯ ದರ್ಶನವನ್ನು ಪ್ರತಿಬಿಂಬಿಸುವ ಗ್ರಂಥ, ಪ್ರತಿಯೊಬ್ಬ ರಾಷ್ಟ್ರಕನಿಗೂ ಮಾರ್ಗದರ್ಶಕವಾದ ಗ್ರಂಥ, ಪ್ರಜಾರಾಜ್ಯಕ್ಕಿರುವ ಅಪಾಯಗಳನ್ನು ನಿರ್ಭಯವಾಗಿ ತಿಳಿಸುವ ಗ್ರಂಥ, ಅಂಥ ಅಪಾಯದಿಂದ ದೇಶವನ್ನು ರಕ್ಷಿಸುವ ದಾರಿಯನ್ನು ತೋರಿ

ಸುವ ಗ್ರಂಥ.

ಇದರೊಂದಿಗೇ ನೋಡಬೇಕಾದ ಇನ್ನೆರಡು ಗ್ರಂಥಗಳು "ರಾಜ್ಯಾಂಗ ತತ್ತ್ವಗಳು" ಮತ್ತು "ಸಾರ್ವಜನಿಕರಲ್ಲಿ ಸಾತ್ವಿಕ" ಗ್ರಂಥಗಳು.

"ರಾಜ್ಯಾಂಗ ತತ್ತ್ವಗಳು" ಗ್ರಂಥ, ರಾಜ್ಯಮೀಮಾಂಸೆಯ ಬೆಳವಣಿಗೆಯನ್ನು, ರಾಜ್ಯವನ್ನು ಕುರಿತು ಪಾಶ್ಚಾತ್ಯ ಮತ್ತು ಭಾರತೀಯ ಮತಗಳನ್ನು ವಿವರಿಸುವ ಗ್ರಂಥ. ರಾಜ್ಯ ವ್ಯವಸ್ಥೆಯ ವಿಧಾನಗಳು, ರಾಜ್ಯ ಯಂತ್ರದ ರಚನೆ, ಅದರ ನಿರ್ವಾಹ, ಅಧ್ಯಕ್ಷನ ಸ್ಥಾನ, ಪ್ರಜಾತಂತ್ರದ ಅವಶ್ಯಕತೆ ಮುಂತಾದ ವಿಚಾರಗಳನ್ನು ವಿವರಿಸುವ ಗ್ರಂಥ ಅದು. "ಪ್ರಜಾರಾಜ್ಯಕ್ಕಿರುವ ಮೊದಲನೆಯ ಶತ್ರುವು ಪ್ರಜೆಯ ಅಶಿಕ್ಷೆ"; ಆದ್ದರಿಂದ "ರಾಜ್ಯವು ಕ್ಷೇಮದಲ್ಲಿರಬೇಕಾದರೆ ಪ್ರಜೆ ತನಗೆ ತಾನೇ ಹೆದರಿಕೊಳ್ಳಬೇಕು. ತನ್ನ ಯೋಗ್ಯತೆಯಲ್ಲಿರುವ ನ್ಯೂನತೆಗಳನ್ನು ತನ್ನ ಸಾಮರ್ಥ್ಯಕ್ಕಿರುವ ಪರಿಮಿತಿಗಳನ್ನು ಪ್ರಜೆ ಸರ್ವದಾ ನೆನಪಿನಲ್ಲಿರಿಸಿಕೊಂಡು ನಡೆಯಬೇಕು." ಇದೂ ರಾಷ್ಟ್ರಕ ಧರ್ಮವನ್ನು ಪ್ರತಿಪಾದಿಸುವ ಗ್ರಂಥ.

ಮಾಸ್ತಿಯವರು ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ತಮ್ಮ ಮಾತಾಪಿತೃಗಳ ನೆನಪಿಗಾಗಿ ಕೊಟ್ಟಿರುವ ದತ್ತಿಯ ಆಶ್ರಯದಲ್ಲಿ ಕೊಟ್ಟ ಉಪನ್ಯಾಸದ ಪುಸ್ತಕರೂಪ "ಸಾರ್ವಜನಿಕದಲ್ಲಿ ಸಾತ್ತ್ವಿಕ". ಇಂದಿನ ರಾಜಕೀಯ ಸ್ಥಿತಿಯ ಪರಿಶೀಲನೆ ಮಾಡಿ ಡಿ ವಿ ಜಿ ಯವರು ನಮ್ಮಲ್ಲಿ ನೆಮ್ಮದಿಯ ಪ್ರವೃತ್ತಿ ಬೆಳೆಯಬೇಕು, ಸಮಾಧಾನ ಮಾರ್ಗದಲ್ಲಿ ನಾವು ಹೋಗಬೇಕು. ಇದಕ್ಕೆ ಸಾತ್ತ್ವಿಕ ಮನೋಭಾವವುಳ್ಳ ರಾಷ್ಟ್ರಕರ ಸಂಖ್ಯೆ ಹೆಚ್ಚಬೇಕು ಎಂದು ಪ್ರತಿಪಾದಿಸಿದ್ದಾರೆ. ಸ್ವಾತಂತ್ರ್ಯಾನಂತರದ ರಾಜಕೀಯ ವಾತಾವರಣವನ್ನು ಕಂಡು ಅವರು ಮಾಡಿಕೊಂಡಿದ್ದ ತೀರ್ಮಾನ ಇದು. "ಕಳೆದ ಇಪ್ಪತ್ತು ಮೂವತ್ತು ವರ್ಷಗಳಲ್ಲಿ ನಮಗಾಗಿರುವ ತಯಾರಿ ಗದ್ದಲದ ಕಾಲದ್ದು. ಆಗಿನ ನಾಯಕರು ಬ್ರಿಟಿಷರನ್ನು ಹೊರಗಟ್ಟುವ ಚಳುವಳಿಯಲ್ಲಿ ಅನುಭವ ಪಡೆದವರು. ಈಗ ನಮಗೆ ಬೇಕಾದವರು ಇರುವುದನ್ನು ಸರಿಪಡಿಸುವ ಸಮರ್ಥರು. ಹಳೆಯ ಮನೆಯನ್ನು ಒಡೆದು ಹಾಕುವುದರಲ್ಲಿ ನಿರತರಾಗಿ ನಿಪುಣರಾದವರು ಹೊಸ ಮನೆಯನ್ನು ಕಟ್ಟುವುದರಲ್ಲಿಯೂ ಅಷ್ಟೇ ಸಮರ್ಥರೆಂದು ಯಾರೂ ಭರವಸೆ ಹೇಳಲಾರರು. ನಮ್ಮ ಅನುಭವ ಹಾಗೆ ಹೇಳುತ್ತಿಲ್ಲ. ಅದಲ್ಲದೆ ಈ ಇಪ್ಪತ್ತೈದು ಮೂವತ್ತು ವರ್ಷಗಳಲ್ಲಿ ಪ್ರಪಂಚದ ಎಲ್ಲ ದೇಶಗಳಲ್ಲಿಯೂ ಪರಿಸ್ಥಿತಿಗಳು ತಲೆಕೆಳಗಾಗುತ್ತಿವೆ. ಈ ವೈಪರೀತ್ಯದಿಂದ

ಭರತಭೂಮಿಯು ಊನಪಡದಂತೆ ಕಾಪಾಡಬೇಕಾದದ್ದು, ಭಾರತ ಜನದ ಆಧ್ಯಾತ್ಮಿಕ ಸಂಸ್ಕೃತಿಯನ್ನು ಉಳಿಸಬೇಕಾದದ್ದು, ಭಾರತದ ಸಾತ್ತ್ವಿಕ ಶಾಂತಿಯು ಜಗತ್ತಿನಲ್ಲಿ ಹರಡಿ ಸಮಸ್ತ ಜನಜನಾಂಗಗಳನ್ನೂ ಹರಸುವಂತೆ ಮಾಡಬೇಕಾದದ್ದು ನಮಗಿರುವ ಕರ್ತವ್ಯ."

ಪ್ರಜಾರಾಜ್ಯದ ಇಂದಿನ ರೂಪವನ್ನು ಡಿ ವಿ ಜಿ ಹೀಗೆ ವರ್ಣಿಸಿದ್ದಾರೆ :

"ಪ್ರಜಾರಾಜ್ಯ ವ್ಯವಸ್ಥೆ ಸರಳವಾದ ಏರ್ಪಾಟಲ್ಲ. ಅದು ಬಹಳ ತೊಡಕಿನದು. ಸ್ವಭಾವ ಜನಕ್ಕೆ ಏನು ಹೇಳುತ್ತದೆ? "ನೀನು ಹಾಯಾಗಿರು; ಕಾಲು ಚಾಚಿಕೊಂಡು ಮಲಗಿರು; ಯಾವುದೆಲ್ಲಾದರೂ ಹೋಗಲಿ. ನಿನ್ನ ನೆಮ್ಮದಿ ನಿನ್ನದು"— ಹೀಗೆನ್ನುತ್ತದೆ ಮನುಷ್ಯ ಸ್ವಭಾವ.

"ಪ್ರಜಾರಾಜ್ಯವಾದರೋ— "ಏಳು, ಎದ್ದೇಳು ನೀನು ಸುಮ್ಮನಿರಬೇಡ. ಇನ್ನೊಬ್ಬರನ್ನು ಸುಮ್ಮನೆ ಬಿಡಬೇಡ. ಇಲ್ಲಿ ಕೆದಕು, ಅಲ್ಲಿ ಬೆದಕು. ಇದು ಚೆನ್ನಿಲ್ಲವೆಂದು ಬೊಬ್ಬೆಯಿಡು. ಅದು ಬೇಡವೆಂದು ರಂಪುಮಾಡು. ಗುಲ್ಲೆಬ್ಬಿಸು, ನೀನು ನಿದ್ದೆ ಮಾಡಬೇಡ. ಇನ್ನೊಬ್ಬರಿಗೆ ನಿದ್ದೆ ಕೊಡಬೇಡ; ಇದು ಪ್ರಜಾರಾಜ್ಯದ ಉಪದೇಶ. ನಿತ್ಯರಗಳೆ ಅದರ ಜೀವನ. ಗದ್ದಲ ಮಾಡದಿದ್ದರೆ ಗಂಜಿ ಹುಟ್ಟದು.

"ಅದೂ ಹೆಚ್ಚಿನ ಮಾತೇ. ಈಗ ಗದ್ದಲ ಕೇಳುವವರು ಯಾರು? ರಾಜನಿಲ್ಲ. ರಾಜಸ್ಥಾನದಲ್ಲಿ ನಾವು ಇರಿಸಿಕೊಂಡಿರುವ "ಅಧ್ಯಕ್ಷತೆ" ಎಂಬುದು ಅಧಿಕಾರವಿಲ್ಲದ ಆಕಾರ. ಮಂತ್ರಿ ಎಂಬಾತನು ಬುಡಭದ್ರವಿಲ್ಲದ ಪರದಾಡಿ. ಅವನು (ಒಬ್ಬರಿಬ್ಬರ ಹೊರತು) ಪಕ್ಷದ ಪುಡಾರಿಗಳ ಕೈತುತ್ತಿಗೆ ಬಾಯಿ ಬಿಟ್ಟುಕೊಂಡಿರುವವನು. ಅವನಿಗೆ ಸರಕಾರದಲ್ಲಿ ಸ್ಥಿರಪಟ್ಟವೇನೂ ಇಲ್ಲ. ಇನ್ನು ಕಾಯಂ ಕಾರುಬಾರಿಗಳೋ ಎಂದರೆ ಅವರಿಗೇನು ಬೇಕಾಗಿದೆ? ಅವರ ಕೈ ಎಲ್ಲಿ ಸಾಗುತ್ತದೆ; ಪ್ರತಿನಿಧಿ ಪುಡಾರಿಗಳ ಕೈಬೆರಳುಗಳು ಎಲ್ಲೆಲ್ಲೂ ಕೆದಕಿ ಎಲ್ಲವನ್ನೂ ಅಲ್ಲಾಡಿಸುತ್ತಿವೆ.

"ಅಭ್ಯಾಸ ಬಲದಿಂದ ಎಷ್ಟು ಮಾಡಬೇಕೆನ್ನಿಸುತ್ತದೆಯೋ, ಎಷ್ಟನ್ನು ಮಾಡದೆ ನಿರ್ವಾಹವಾಗದೋ ಅಷ್ಟನ್ನು ಮಾತ್ರ ನೋಡಿಕೊಂಡು ಕಾರುಬಾರಿಗಳು ತೃಪ್ತರಾಗುತ್ತಾರೆ. ಮಂತ್ರಿಗಳನ್ನು ತಿದ್ದಬಲ್ಲವರು ಅವರಲ್ಲವಲ್ಲ! ಹೀಗಿರುವಲ್ಲಿ ದೂರು ಕೇಳುವವರು ಯಾರು? ಬಿದ್ದವ್ವನ್ನು ಎತ್ತುವವರು ಯಾರು?

"ಇಂಥಾ ಅನಾಯಕ ಪರಿಸ್ಥಿತಿಯಲ್ಲಿಯೇ ಏಕೈಕ ನಾಯಕ ಪ್ರತಿಷ್ಠೆಗೆ

ಅವಕಾಶ. ಅಂಥಾ ವಿಪರೀತ ದಶೆ ಈ ದೇಶದ ಹಣೆಯಬರಹದಲ್ಲುಂಟೋ ಹೇಗೋ! ಭವಿಷ್ಯವನ್ನು ಕಾಣಬಲ್ಲವರಿಲ್ಲ. ಆದರೆ ಭವಿಷ್ಯವನ್ನು ಚಿಂತಿಸಿ ಮುಂಜಾಗ್ರತೆಯಿಂದ ನಡೆದುಕೊಳ್ಳುವುದು ಮನುಷ್ಯ ವಿವೇಕ.

"ವಿಮರ್ಶನ ಶೀಲವೂ ಜಾಗರೂಕವೂ ಆದ ಪ್ರಜಾಭಿಪ್ರಾಯವು ಧೃಢವಾಗಿಯೂ ನಿರ್ದಾಕ್ಷಿಣ್ಯವಾಗಿಯೂ ಎದ್ದು ನಿಂತ ಹೊರತು ನಮ್ಮ ರಾಜಕೀಯ ಚೊಕ್ಕಟವಾಗುವ ಆಶೆಯಿರದು." ಅಂಥ ಪ್ರಯತ್ನದಲ್ಲಿ ಸಹಾಯಮಾಡುವುದಕ್ಕಾಗಿ ಸಮಕಾಲೀನ ರಾಜಕೀಯ ವಿಷಯಗಳನ್ನು ಕುರಿತು ಬರೆದದ್ದು "ರಾಜಕೀಯ ಪ್ರಸಂಗಳು" ಎಂಬ ಎರಡು ಸಂಕಲನಗಳು; "ರಾಜ್ಯಶಾಸ್ತ್ರ" ಮತ್ತು "ರಾಜ್ಯಾಂಗ ತತ್ತ್ವಗಳು" ಗ್ರಂಥಗಳಿಗೆ ಪೂರಕವಾದದ್ದು ಈ ಎರಡು ಸಂಕಲನಗಳು.

ವೇದಾಂತ ಗ್ರಂಥಗಳು : ಡಿ ವಿ ಜಿ ಯವರು ಈಶಾವಾಸ್ಯೋಪನಿಷತ್ತಿಗೆ ಕನ್ನಡದಲ್ಲಿ ವ್ಯಾಖ್ಯಾನವನ್ನು ಬರೆದಿದ್ದರೂ ಅವರ ಒಲವು ಇದ್ದದ್ದು ತೈತ್ತಿರೀಯ ಉಪನಿಷತ್ತಿನ ಕಡೆಗೆ. ಅವರು ಬರೆದುಕೊಂಡಿರುವ ಟಿಪ್ಪಣಿಯಲ್ಲಿ ಉಪನಿಷತ್ತುಗಳಲ್ಲಿ ಪರಮ ಸುಂದರವಾದದ್ದು ತೈತ್ತಿರೀಯ ಎಂದಿದ್ದಾರೆ. ಅದಕ್ಕೆ ಕಾರಣಗಳನ್ನು ಹೀಗೆ ಗುರುತು ಮಾಡಿಕೊಂಡಿದ್ದಾರೆ;

ಗಾನ : ಶ್ರವಣ ಮೋಹಕ
ಪದ : ಅರ್ಥಪುಷ್ಟಿ ಪರಿಪ್ಲುತಿ
ಉಪಮಾ : ಭಾವೋದ್ಭಾಸಕ
ಶೈಲಿ : ಮನೋರಂಜಕ

ಅವರು ಇತರ ಉಪನಿಷತ್ತುಗಳನ್ನು ಕುರಿತು ಮಾಡಿಕೊಂಡಿರುವ ಟಿಪ್ಪಣಿ ಬೋಧಪ್ರದವಾಗಿದೆ.

ಈಶ = ವಿಧಿವಾಕ್ಯ : ಕುರ್ವನ್ನೇವೇಹ, ಭಸ್ಮಾಂತ, ಕ್ರತೋಸ್ಮರ
ಕೇನ = ದರ್ಪಧ್ವಂಸಕ : ನಾಹಂಮನ್ಯೇ, ನಶಶಾಕ
ಕಠ = ಭಯ, ವಿಸ್ಮಯ, ಮೃತ್ಯು, ಅಗ್ನಿ
ಪ್ರಶ್ನ = ಕುತೂಹಲ, ಸೈನ್ಸ್ ವಿಜ್ಞಾನೀಯ
ಮುಂಡ = ಸಂನ್ಯಾಸ
ಮಾಂಡೂಕ್ಯ = ಪ್ರತೀಕೋಪಾಸನಾ
ತೈತ್ತಿರೀಯ = ಜೀವನ ಪರಿಪೋಷಕ

ಇದನ್ನು ಕುರಿತು ಅವರು ವಿಸ್ತಾರವಾಗಿ ಬರೆಯಲು ಅವಕಾಶವಾಗದೆ ಇದ್ದದ್ದು ನಮ್ಮ ದುರದೃಷ್ಟ.

ಆದರೂ ವೇದಾಂತ ತತ್ತ್ವವನ್ನು ನಿರೂಪಿಸುವ ಮೂರು ಗ್ರಂಥಗಳನ್ನು ಅವರು ಕನ್ನಡಕ್ಕೆ ತಂದಿದ್ದಾರೆ. 1) ಪುರುಷ ಸೂಕ್ತ 2) ಈಶೋಪನಿಷತ್ತು ಮತ್ತು 3) ಶ್ರೀಮದ್ಭಗವದ್ಗೀತೆ.

'ಪುರುಷ ಸೂಕ್ತ' ವೇದದ ಸಾರಭೂತವಾದ ಭಾಗ. ಚರಾಚರ ಪ್ರಪಂಚದಲ್ಲಿ ಅಂತರ್ಯಾಮಿಯಾಗಿದ್ದುಕೊಂಡು ಜೀವಲೀಲೆಯಲ್ಲಿ ನಮಗೆ ಗೋಚರವಾಗಿರುವ ಪರಮಾತ್ಮ ವಸ್ತುವನ್ನು ಕುರಿತ ಪ್ರಮಾಣವಾಕ್ಯವೇ ಪುರುಷ ಸೂಕ್ತ. ಇಲ್ಲಿ ಜಗತ್ಸೃಷ್ಟಿಯನ್ನು ಒಂದು ಯಜ್ಞಕ್ಕೆ ಹೋಲಿಸಿದೆ. ಜಗದಾದಿಯಲ್ಲಿ ದೇವತೆಗಳು ವಿರಾಟ್ಪುರುಷನ ದೇಹ ಸಾಮಗ್ರಿಯಾದ ಪಂಚಭೂತಗಳನ್ನೇ ವಿಧವಿಧವಾಗಿ ಸಂಯೋಜಿಸಿ ತಾವು ಸೃಷ್ಟಿಯನ್ನು ಮುಂಬರಿಸಿದಂತೆ ತೋರುತ್ತಾರೆ. ಮನುಷ್ಯನಿಗೆ ಪ್ರಕೃತಿಯು ಮೂಲಸಾಮಗ್ರಿ; ಪ್ರಕೃತಿಗೆ ವಿರಾಟ್ಪುರುಷನೇ ಮೂಲಸಾಮಗ್ರಿ. ನಿರಾಕಾರವೂ ನಿಷ್ಕ್ರಿಯವೂ ಆದ ಪರಬ್ರಹ್ಮಸತ್ತ್ವವು ತನ್ನ ಅನಂತಾದ್ಭುತ ಶಕ್ತಿಯ ಅಂಶ ಲೀಲಾಮಾತ್ರದಿಂದ ವಿರಾಡ್ರೂಪವನ್ನು ಧರಿಸಿದ್ದು ಪೂರ್ವಸೃಷ್ಟಿ. ಆ ವಿರಾಟ್ಪುರುಷನ ನಾನಾ ಶಕ್ತಿಗಳು ತಮ್ಮ ತಮ್ಮ ಕಾರ್ಯ ವಿಶೇಷಗಳಿಂದ ಉತ್ಪತ್ತಿಮಾಡಿಸುತ್ತಿರುವ ಲೋಕವೆಲ್ಲ ಉತ್ತರಸೃಷ್ಟಿ. ಈ ಉತ್ತರ ಸೃಷ್ಟಿಯನ್ನು 'ಪುರುಷಸೂಕ್ತ' ಯಜ್ಞಕ್ಕೆ ಹೋಲಿಸಿದೆ.

ಈ ಗ್ರಂಥದಲ್ಲಿ ಪುರುಷಸೂಕ್ತವ್ಯಾಖ್ಯಾನಕ್ಕೆ ಪೀಠಿಕೆಯಾಗಿ ವೇದ ವಾಙ್ಮಯವನ್ನು ಕುರಿತ ವಿವರಣೆಯಿದೆ, ಅದಕ್ಕೆ ಅಧಿಕಾರಿ ಯಾರು, ಮುಂತಾದ ವಿಷಯಗಳಿವೆ. ಅನಂತರ ಸೂಕ್ತದ ತಾತ್ಪರ್ಯ ಸಂಗ್ರಹ, ಸೂಕ್ತಾನುವಾದಪದ್ಯರೂಪ ಎಲ್ಲ ಇವೆ. ಅನುಬಂಧದಲ್ಲಿ ಪುರುಷಸೂಕ್ತದಿಂದ ಉತ್ಪನ್ನವಾಗುವ ಹಲವು ಪ್ರಶ್ನೆಗಳ ಚರ್ಚೆಯಿದೆ.

ಇಲ್ಲಿ ಡಿ ವಿ ಜಿ ಯವರು ಹೇಳಿರುವ ಒಂದೆರಡು ವಿಷಯಗಳು ಗಮನಾರ್ಹವಾದವು : "ಪುರುಷಸೂಕ್ತದ ಮಹಿಮೆಯನ್ನನುಭವಿಸ ಬಯಸುವವರು ಅದರ ತಾತ್ಪರ್ಯಾರ್ಥಗಳನ್ನು ಗ್ರಹಿಸಿ ಮನನ ಮಾಡಬೇಕು. ವಾಚ್ಯಾರ್ಥವನ್ನು ಬದಿಗಿರಿಸಿ ಧ್ವನಿತಾರ್ಥವನ್ನು ದೃಢಪಡಿಸಿಕೊಳ್ಳಬೇಕು. ಇದು ಬುದ್ಧಿಯ ಊಹನ ಕಲ್ಪನ ಸಾಮರ್ಥ್ಯಗಳ ಪ್ರಯತ್ನವನ್ನು ಬಯಸುತ್ತದೆ. ಹೀಗೆ ಸಂಪಾದಿಸಿದ ತತ್ತ್ವಾರ್ಥಜ್ಞಾನವು ಮನನದಿಂದ ನಮ್ಮ ಸ್ವಭಾವಕ್ಕೆ

ಕ್ರಮೇಣ ಅಂತರ್ಗತವಾಗುತ್ತದೆ. ಆದರಿಂದ ತತ್ತ್ವದ ಜೀವನಾನುಸಂಧಾನ. ಈ ಅನುಸಂಧಾನದಿಂದ ಧರ್ಮದರ್ಶನ. ಧರ್ಮಾಭ್ಯಾಸದಿಂದ ಶ್ರೇಯಃ ಪ್ರಾಪ್ತಿ."

"ಮಂತ್ರದ ಮಹಿಮೆ ಅದರ ಅಕ್ಷರದಲ್ಲಿಲ್ಲ. ನಮ್ಮ ಮನನದಲ್ಲಿ. ಮಂತ್ರಾಕ್ಷರಗಳು ನಿಮಿತ್ತಮಾತ್ರ. ಅಕ್ಕಿಯನ್ನು ಅನ್ನವಾಗಿಸುವುದು ಪಾತ್ರೆಯಲ್ಲ. ಬೆಂಕಿಯುರಿ. ಮಂತ್ರದಿಂದ ತತ್ತ್ವದರ್ಶನವನ್ನು ಉಂಟಾಗಿಸುವುದು ಮನಸ್ಸಿನ ಕಾವು. ಅದೇ ಶ್ರದ್ಧೆ, ಅದೇ ತಪಸ್ಸು."

"ಪ್ರವೃತ್ತಿ, ನಿವೃತ್ತಿಗಳೆರಡರ ಸಮನ್ವಯವನ್ನು ಬೋಧಿಸಿರುವುದೇ, ಈಶೋಪನಿಷತ್ತಿನ ವಿಶೇಷ ಗುಣ. ಬದುಕಬೇಕು, ಭೋಗವೇ ದೊಡ್ಡದೆಂದು ಕೊಳ್ಳದೆ ಬದುಕಬೇಕು— ಈಶ್ವರ ಸೇವೆಗಾಗಿ ಬದುಕಬೇಕು ; ಲೋಕಕಾರ್ಯಗಳನ್ನು ಮಾಡಬೇಕು ; ಸ್ವಾರ್ಥದ ಸೋಂಕಿಲ್ಲದೆ ಮಾಡಬೇಕು. ಸಂತೋಷ ಪಡಬೇಕು ; ಅಹಂಕಾರ ಮಮಕಾರಗಳನ್ನು ದೂರ ಮಾಡಿ ಸಂತೋಷ ಪಡಬೇಕು. ಪ್ರವೃತ್ತಿಯಿಲ್ಲದೆ— ಲೌಕಿಕ ಜೀವನವಿಲ್ಲದೆ— ಅಂತರಂಗ ಶೋಧನೆಯಿಲ್ಲ. ಅಂತರಂಗ ಶೋಧನೆಯಿಲ್ಲದೆ ನಿವೃತ್ತಿಗೆ— ಸಂನ್ಯಾಸಕ್ಕೆ— ಸಾರ್ಥಕ್ಯವಿಲ್ಲ. ಅಂಥ ಪರಿಶುದ್ಧ ನಿವೃತ್ತಿಮೂಲಕವಲ್ಲದೆ ತತ್ತ್ವಸಾಕ್ಷಾತ್ಕಾರವಿಲ್ಲ. ತತ್ತ್ವಸಾಕ್ಷಾತ್ಕಾರವಿಲ್ಲದೆ ಮನುಷ್ಯನಿಗೆ ಲೋಕ ಜೀವನದ ದ್ವಂದ್ವ ಜಾರಿಕೆಯಿಂದ ಬಿಡುಗಡೆಯಿಲ್ಲ. ಲೋಕಾಸಕ್ತಿ, ಸ್ವಾರ್ಥ ವಿರಕ್ತಿಗಳೆರಡನ್ನೂ ಜೋಡಿಗೂಡಿಸಿ ಬಾಳಬಲ್ಲವನೇ ಯೋಗಿ. ಆತನನ್ನು ಯಾವ ದೋಷವೂ ಯಾವ ದುಃಖವೂ ಮುಟ್ಟದು." ಇದು ಡಿ ವಿ ಜಿ ಯವರು ಕಂಡ ಈಶೋಪನಿಷತ್ತಿನ ಬೋಧನೆ.

ಈ ಉಪನಿಷತ್ತಿನಲ್ಲಿ ಬರುವ "ವಿದ್ಯೆ, ಅವಿದ್ಯೆ; ಸಂಭೂತಿ, ಅಸಂಭೂತಿ" ಎಂಬ ಪದಗಳು ಅಭಿಪ್ರಾಯ ಭೇದಗಳಿಗೆ ಪೂರ್ವಕಾಲದಿಂದಲೂ ಎಡೆಗೊಟ್ಟಿವೆ. ಆ ಉಪನಿಷತ್ತಿನ 11ನೆಯ ಮತ್ತು 14ನೆಯ ಮಂತ್ರಗಳಿಗೆ ಡಿ ವಿ ಜಿ ಯವರು ಕೊಟ್ಟಿರುವ ಅರ್ಥವನ್ನು ನೋಡಿದರೆ ಅವರ ಮನೋಗತ ವಿಶದಪಡುತ್ತದೆ.

"ಯಾರಾದರೆ ವಿದ್ಯೆ ಅವಿದ್ಯೆಗಳೆರಡನ್ನೂ ಒಟ್ಟುಗೂಡಿಸಿ (ಅವುಗಳ ಅನ್ಯೋನ್ಯ ಸಂಬಂಧವನ್ನು) ತಿಳಿದುಕೊಂಡಿರುತ್ತಾನೋ ಅವನು ಅವಿದ್ಯೆಯ ದ್ವಾರಾ, ಎಂದರೆ ಪ್ರವೃತ್ತಿ ಧರ್ಮವಾದ ಗೃಹಸ್ಥಾಶ್ರಮ ಸಂಸ್ಕಾರ ರೂಪದ ಕರ್ಮ ಮಾರ್ಗದಿಂದ, ಮೃತ್ಯುವನ್ನು— ಎಂದರೆ ಮರ್ತ್ಯವಾದ ಈ ಪ್ರಪಂಚದ

ಮಾಯಾ ದ್ವಂದ್ವಗಳನ್ನು – ದಾಟಿ, ವಿದ್ಯೆಯ ದ್ವಾರಾ – ಎಂದರೆ ನಿವೃತ್ತಿ ಧರ್ಮವಾದ ವಿರಕ್ತಿ ಸಂಸ್ಕಾರ ರೂಪದ ಜ್ಞಾನಮಾರ್ಗದಿಂದ ಅಮೃತವನ್ನು— ಎಂದರೆ ನಾಶರಹಿತವಾದ ಪರಮಾತ್ಮವಸ್ತುವನ್ನು ಸೇರುತ್ತಾನೆ."

"ಯಾರಾದರೆ ಸಂಭೂತಿ (ಬ್ರಹ್ಮ), ವಿನಾಶ (ಜಗತ್ತು) ಗಳೆರಡನ್ನೂ ಒಟ್ಟುಗೂಡಿಸಿ (ಅವುಗಳ ಅನ್ಯೋನ್ಯ ಸಂಬಂಧವನ್ನು) ನೋಡಿರುತ್ತಾನೋ ಅವನು ವಿನಾಶದ ಎಂದರೆ ಜಗಜ್ಜೀವನದ ಮೂಲಕ, ಅರ್ಥಾತ್ ಲೋಕ ಸಂಪರ್ಕ ಸಂಸ್ಕಾರದಿಂದ – ಮೃತ್ಯುವನ್ನು, ಎಂದರೆ, ಜಗನ್ಮಾಯೆಯನ್ನು, ದಾಟಿ, ಸಂಭೂತಿಯಿಂದ – ಎಂದರೆ ಬ್ರಹ್ಮಸ್ವರೂಪ ದರ್ಶನದಿಂದ ಅಮೃತ ವನ್ನು, ಎಂದರೆ ನಾಶರಹಿತವಾದ ಆ ಪರಮಾತ್ಮವಸ್ತುವನ್ನು, ಸೇರುತ್ತಾನೆ."

ಇಲ್ಲಿ ಡಿ ವಿ ಜಿ, ಶಂಕರಭಗವತ್ಪಾದರು ಮಾಡಿರುವ ಅರ್ಥಕ್ಕೆ ಭಿನ್ನವಾದ ಅರ್ಥವನ್ನು ಹೇಳುವ ಸಾಹಸ ಮಾಡಿದ್ದಾರೆ. ಶಂಕರಭಗವತ್ಪಾದರು ಸಂಭೂತಿ ಎಂದರೆ ಸೃಷ್ಟಿಯಲ್ಲಿ ಪ್ರಥಮನಾದ ಹಿರಣ್ಯಗರ್ಭನೆಂಬ ಕಾರ್ಯಬ್ರಹ್ಮನೆಂದೂ ಅಸಂಭೂತಿಯೆಂದರೆ ಪ್ರಕೃತಿಯೆಂದೂ ಅರ್ಥ ಹೇಳಿದ್ದಾರೆ. ಆದರೆ ಡಿ ವಿ ಜಿ ಸಂಭೂತಿ ಎಂಬ ಮಾತಿಗೆ ಬ್ರಹ್ಮವಸ್ತು ಎಂಬ ಅರ್ಥ ಹೇಳಿದ್ದಾರೆ. ಆ ಅರ್ಥಕ್ಕೆ ಅವರು ಪ್ರಾಚೀನ ವ್ಯಾಖ್ಯಾನಗಳಲ್ಲಿ ಸಮರ್ಥನೆಯನ್ನು ಕಂಡು ಕೊಂಡಿದ್ದಾರೆ. "ಇಲ್ಲಿ ನಾವು ಮಾಡಿರುವ ಅರ್ಥವು ಬೇರೆಯ ಬಗೆಯದಾದರೂ ಅದು ತಾತ್ಪರ್ಯದಲ್ಲಿ ಶಂಕರರ ಅರ್ಥಕ್ಕೆ ವಿರುದ್ಧವಾಗಿಲ್ಲ" ಎಂದು ಹೇಳಿದ್ದಾರೆ.

ಹೀಗೆ ವಿಷಯವನ್ನು ಸ್ವತಂತ್ರವಾಗಿ ಆಲೋಚಿಸಿ ತಮ್ಮದೇ ಆದ ವ್ಯಾಖ್ಯಾವನ್ನು ಮಾಡಿರುವುದು ಗಮನಿಸಬೇಕಾದ ಸಂಗತಿ.

ಗೋಖಲೆ ಸಂಸ್ಥೆಯ ವ್ಯಾಸಂಗ ಗೋಷ್ಠಿಯಲ್ಲಿ ಪ್ರತಿ ಭಾನುವಾರವೂ 5-6-1960ರಿಂದ 22-7-1962ರವರೆಗೆ ಡಿ ವಿ ಜಿ ಯವರು ಭಗವದ್ಗೀತೆಯ ಪಾಠ ಹೇಳಿದರು. ಆದಾದಮೇಲೆ ಪ್ರತಿ ಭಾನುವಾರ 26-8-1962ರಿಂದ 8-5-1963ರ ವರೆಗೆ ಒಂದೊಂದು ಅಧ್ಯಾಯವನ್ನೂ ತೆಗೆದುಕೊಂಡು ಮುಖ್ಯಾಂಶಗಳಿಗೆ ಗಮನಕೊಟ್ಟು ಗ್ರಂಥವನ್ನು ಪುನರಾವರ್ತನೆ ಮಾಡಿ ಪಾಠ ಹೇಳಿದರು. ಎರಡನೆಯ ಸಲ ಆದ ಪಾಠವನ್ನು 'ಟೇಪ್' ಮಾಡಿಸಿ ಕೊಂಡು ಅದನ್ನು ಬರಹಕ್ಕೆ ತಂದವರು ಎಸ್.ಆರ್. ರಾಮಸ್ವಾಮಿ. ಅನಂತರ ಅದು 'ಪ್ರಜಾಮತ' ಪತ್ರಿಕೆಯಲ್ಲಿ 17-2-1963ರಿಂದ 5-7-1964ರವರೆಗೆ ಪ್ರಕಟವಾಯಿತು. ಆ ಪ್ರಕಟನೆಯೇ 'ಶ್ರೀಮದ್ಭಗವದ್ಗೀತಾ ತಾತ್ಪರ್ಯ ಅಥವಾ ಜೀವನಧರ್ಮಯೋಗ' ಎಂಬ ಗ್ರಂಥವಾಗಿ ಬಂದು ಮಹಾಜನರ

ಮೆಚ್ಚಿಕೆಯನ್ನು ಪಡೆಯಿತು.

ಪೂರ್ವಿಕರು ಭಗವದ್ಗೀತೆಯನ್ನು ಮೋಕ್ಷಶಾಸ್ತ್ರವೆಂದರು. ಡಿ ವಿ ಜಿ
ಯವರಿಗೆ ಅದು ಜೀವನ ಶಾಸ್ತ್ರವೂ ಹೌದು. "ಗೀತೆಯ ಮಹೋಪದೇಶ
ವೆಂದರೆ ಜೀವನದಲ್ಲಿ ಗೌರವ. ಜೀವನವು ಬ್ರಹ್ಮಚೈತನ್ಯದ ಒಂದುಲೀಲೆ.
ಯಾವ ಪ್ರಾಣಿಯಾದರೂ, ಎಂಥ ಪ್ರಾಣಿಯಾದರೂ ಅದರ ಅಂತರಂಗದ
ಅಂತರಾಳದಲ್ಲಿ ಪರಬ್ರಹ್ಮಶಕ್ತಿಯ ಚೇತನಾಂಶವಿರುತ್ತದೆ. ಇದನ್ನು ನಾವು
ಗ್ರಹಿಸಿ ಜೀವನ ಕಾರ್ಯಗಳನ್ನು ಶ್ರದ್ಧೆಯಿಂದಲೂ ದಕ್ಷತೆಯಿಂದಲೂ
ನಿರ್ವಹಿಸಬೇಕಾದದ್ದು ಕರ್ತವ್ಯ. ಜೀವನವನ್ನು ತುಚ್ಛವೆನ್ನತಕ್ಕದ್ದಲ್ಲ. ಅದು
ಒಂದು ಶ್ರೇಯೋವಕಾಶ ಮತ್ತು ಮಹಾಕರ್ತವ್ಯ. ಅದು ನಮ್ಮ ಆದರಣೆಗೂ
ಸೇವೆಗೂ ಅರ್ಹವಾದದ್ದು. ಸ್ವಧರ್ಮದಲ್ಲಿ ಪವಿತ್ರ ಬುದ್ಧಿಯಿಂದಲೂ ಪಾರ
ಮಾರ್ಥಿಕ ಶ್ರದ್ಧೆಯಿಂದಲೂ ತೊಡಗಬೇಕಾದದ್ದು. ಸಮ್ಯಗ್ಜೀವನವೇ
ಭಗವತಾರಾಧನೆ."

"ಜೀವನ ಕ್ರಿಯೆಯಲ್ಲಿ ತತ್ತ್ವವನ್ನೇ ಸರ್ವದಾ ದೃಷ್ಟಿಯಲ್ಲಿರಿಸಿಕೊಂಡು
ನಡೆಯುವುದೇ ಅನುಸಂಧಾನ. ಅದೇ ಧರ್ಮಾಭ್ಯಾಸ, ಧರ್ಮದಲ್ಲಿ ಮುಖ್ಯ
ವಾದ ಲಕ್ಷಣಗಳು ನಾಲ್ಕು: (1) ಭಗವನ್ಮಹಿಮಾಸ್ಮರಣೆ, (2) ಸ್ವಾಹಂಕಾರ
ವಿಸರ್ಜನೆ (3) ಮಮಕಾರ ಕೃಶೀಕರಣ, (4) ಸ್ವಗುಣಶಕ್ತಿಗಳ ಪರಾರ್ಥ
ವಿನಿಯೋಗ. ಈ ಧರ್ಮವು ಕುಟುಂಬಧರ್ಮ, ಕುಲಧರ್ಮ ಜನಪದಧರ್ಮ
ಮೊದಲಾದ ಅನೇಕ ರೂಪಗಳನ್ನು ತಾಳುತ್ತದೆ. ಈ ನಾನಾ ಧರ್ಮರೂಪ
ಗಳಲ್ಲಿಯೂ ಗೀತಾನುಷ್ಠಾನ ನಡೆದರೆ ಆಗ ಯತ್ಕಿಂಚಿತ್ತಾಗಿ ಭಗವತ್ಸ್ವ
ರೂಪದ ದೂರದರ್ಶನ." "ಗೀತಾನುವರ್ತನೆಯಿಂದ ಜೀವಿಗೆ ಜಗದ್ಭಾರವು ಲಘು
ವಾಗುತ್ತದೆ. ತತ್ತ್ವವಿವೇಕದಿಂದ ನಾನಾ ಲೋಕವಸ್ತುಗಳ ಯಥಾರ್ಥ
ಯೋಗ್ಯತೆ ಮನಸ್ಸಿಗೆ ಗೊತ್ತಾಗಿ ಅವುಗಳ ಮೌಲ್ಯ ತಾರತಮ್ಯವು ನಿರ್ಣೀತ
ವಾಗುತ್ತದೆ. ಅದೇ ಮೋಹಭ್ರಾಂತಿ ನಿವಾರಣೆ. ಜೀವನದ ಅರ್ಥವೇನು, ಪರ
ಮಾರ್ಥ ಯಾವುದು, ಕರ್ತವ್ಯಾಕರ್ತವ್ಯಗಳೆಂಥವು—ಇವೇ ಮೊದಲಾದ ಪ್ರಶ್ನೆ
ಗಳು ಬಗೆಹರಿದು ನಿರ್ಮಲ ಜೀವನ ಮಾರ್ಗ ಕಾಣಬರುತ್ತದೆ. ಅದೇ ಮನಃ
ಪ್ರಸನ್ನತೆ, ಅದೇ ಜೀವನದ ಕಷ್ಟಸಂಕಟಗಳ ಪರಿಹಾರ; ಆಗ ಶಾಂತಿ. ಅದೇ
ಗೀತಾನುಷ್ಠಾನದ ಫಲ."

"ಮನುಷ್ಯನಿಗಿರುವ ಜ್ಞಾನಸಾಧನಗಳಲ್ಲಿ ಪರತತ್ತ್ವಕ್ಕೆ ಅತ್ಯಂತ ಸಮೀಪ
ವಾದದ್ದು ಬುದ್ಧಿ. ಅದು ಸರಿಯಾಗಿ ಕಾರ್ಯ ನಡೆಸದೆ ಹೋದರೆ ಬಾವಿಯಿಂದ

ನೀರು ಸೇದುವ ಹಗ್ಗ ಕುಣಿಕೆಯಿಲ್ಲದ್ದಾದಂತೆ. ಬುದ್ಧಿಕ್ರಿಯೆ ಇಲ್ಲದೆ ತತ್ತ್ವಲಾಭವಾಗದು. ಬುದ್ಧಿ ಸರಿಯಾಗಿ ನಡೆಯುವುದೆಂದರೆ ಏನು ? ಅದು ತತ್ತ್ವದ ಕಡೆಗೆ ಮುಖಮಾಡಿಕೊಂಡಿರುವುದು-ತತ್ತ್ವವನ್ನು ಕಾಣ ಬೇಕೆಂಬ ದೃಢಸಂಕಲ್ಪದಿಂದ ನಡೆಯುವುದು. ಅದೇ ಶ್ರದ್ಧೆ. ಹಾಗೆ ಮಾಡದೆ ತತ್ತ್ವದ ಕಡೆಗೆ ಬೆನ್ನು ತಿರುಗಿಸಿದರೆ ಬುದ್ಧಿ ನಮಗೆ ಸಹಾಯ ಮಾಡುವುದಕ್ಕೆ ಪ್ರತಿಯಾಗಿ ವಿಘಾತವನ್ನೇ ಮಾಡೀತು. ಬುದ್ಧಿಯು ಶಾಸ್ತ್ರದ ಮುಖ್ಯ ತಾತ್ಪರ್ಯವನ್ನು ದೃಷ್ಟಿಯಲ್ಲಿರಿಸಿಕೊಂಡು ಕೆಲಸಮಾಡತಕ್ಕದ್ದೆಂಬುದು ಸೂತ್ರ. ಶಾಸ್ತ್ರದ ಮುಖ್ಯ ವಿಷಯವು ಇಂದ್ರಿಯಾತೀತವಾದದ್ದು—ಅಲೌಕಿಕವಾದದ್ದು. ಮೂಲ ವಿಷಯಜ್ಞಾನಕ್ಕೆ ಶಾಸ್ತ್ರವನ್ನು ಬಿಟ್ಟರೆ ನಮಗೆ ಅನ್ಯಥಾಗತಿಯಿಲ್ಲ. ಆದದ್ದರಿಂದ ಶಾಸ್ತ್ರವಾಕ್ಯವು ಅನಿವಾರ್ಯ. ಆದರೆ ವಾಕ್ಯಾರ್ಥವು ಬುದ್ಧಿಯ ಪರಿಶ್ರಮವಿಲ್ಲದೆ ಅಲಭ್ಯ."

"ಸಂಸ್ಕೃತ ಭಾಷೆಯಲ್ಲಿ ಶ್ಲೋಕರೂಪದಲ್ಲಿ ಹೇಳಿರುವುದೆಲ್ಲ ಶಾಸ್ತ್ರವೆಂದು ಭಾವಿಸಬಾರದು. ಯಾವುದು ಮಹರ್ಷಿವಚನವೆಂದು ಅನೂಚಾನವಾಗಿ ಬಂದಿದೆಯೋ ಅದು ಮಾತ್ರ ಶಾಸ್ತ್ರ. ಮಿಕ್ಕದ್ದಕ್ಕೆ ಆ ಪ್ರಮಾಣ ಗೌರವವಿಲ್ಲ. ಶಾಸ್ತ್ರಕ್ಕೆ ವಿಧೇಯನಾಗಿರಬೇಕೆಂಬುದು ಸರಿ. ಆದರೆ ನಿಜವಾದ ಶಾಸ್ತ್ರವಾಕ್ಯ ಯಾವುದು, ಚಾಟುವಾಕ್ಯ ಯಾವುದು—ಇದನ್ನು ಮೊದಲು ವಿಚಾರ ಮಾಡಬೇಕು. ವೇದ ಗ್ರಂಥದಲ್ಲಿಯೇ ಪ್ರಮಾಣ ತಾರತಮ್ಯಕ್ಕೆ ಅವಕಾಶವುಂಟು. ಅದರಲ್ಲಿಯು ಪ್ರಬಲತಮ ಪ್ರಮಾಣಗಳನ್ನು ಗೊತ್ತುಮಾಡಿಕೊಂಡು ಮಿಕ್ಕವುಗಳನ್ನು ಆ ಪರಮ ಪ್ರಮಾಣದಿಂದ ನೋಡಬೇಕು. ಹೀಗೆ ಶಾಸ್ತ್ರ ವಿಧೇಯತೆಯೂ ಬುದ್ಧಿಯ ಪರಿಶ್ರಮವನ್ನಪೇಕ್ಷಿಸುತ್ತದೆ."

"ತರ್ಕವು ಒಂದು ಗೊತ್ತಾದ ವಿಷಯವನ್ನು ಕುರಿತದ್ದಾಗಿರುತ್ತದೆ. ವಿಷಯಸಾಮಗ್ರಿಯಿಲ್ಲದ ಶೂನ್ಯಸ್ಥಾನದಲ್ಲಿ ತರ್ಕಕ್ಕೆ ಕಾರಣವಿರದು. ಯಾವ ಅಭಿಪ್ರಾಯವನ್ನು ಅಥವಾ ಸಂಗತಿಯನ್ನು ಹೇಳುವ ವಾಕ್ಯವು ತರ್ಕವಿಚಾರಕ್ಕೆ ವಿಷಯವಾಗುತ್ತದೆಯೋ ಅದು ಪ್ರಾರಂಭ ಪ್ರತಿಜ್ಞೆ. ಅದು ಅಸ್ತ್ಯರ್ಥಕ (Positive) ವಾಕ್ಯವಾಗಬಹುದು; ನಾಸ್ತ್ಯರ್ಥಕ (Negative) ವಾಕ್ಯವಾಗಬಹುದು. ಯಾವುದಾದರೂ ಅದು ಒಂದು ನಿಷ್ಕರ್ಷೆಯಾದ ಅಭಿಪ್ರಾಯವನ್ನು ತಿಳಿಸುವುದಾಗಿರಬೇಕು. ಇಂಥಾ ಪ್ರಾರಂಭ ಪ್ರತಿಜ್ಞೆ (Hypothesis) ನಮ್ಮ ಮುಂದೆ ಬಂದಾಗ ನಾವು ಅದನ್ನು ಬಗೆ ಬಗೆಯ ಕೋನಗಳಿಂದ ನೋಡಿ ಬಗೆ ಬಗೆಯ ಪ್ರಶ್ನೆಗಳನ್ನು ಕೇಳುತ್ತೇವೆ. ನಮ್ಮ ಅನು

ಭವ ಯುಕ್ತಿಗಳಿಂದ ಅದನ್ನು ಚರ್ಚಿಸುತ್ತೇವೆ. ಈ ನಾನಾ ಪರೀಕ್ಷೆಗಳಿಗೆ ಆ ಪ್ರಾರಂಭ ಪ್ರತಿಜ್ಞೆಯು ಸಮಾಧಾನ ಕೊಟ್ಟು ನಿಂತರೆ ಆದು ಸಿದ್ಧಾಂತ ವೆನಿಸುತ್ತದೆ."

"ವೇದ ವಿಶ್ವಾಸಿಗರು ಬ್ರಹ್ಮಪ್ರತಿಪಾದಕ ವಾಕ್ಯಗಳನ್ನು ಸ್ವತಃ ಪ್ರಮಾಣ ಎಂದು ಗ್ರಹಿಸುತ್ತಾರೆ. ಇತರರು ಅದನ್ನು ಅರ್ಥಾಪತ್ತಿಯೆಂದು ಅಂಗೀಕರಿಸಿದರೂ ಅದು ಅವರಿಗೆ ಪ್ರಯೋಜಕವಾಗುತ್ತದೆ. ಯಾವ ಒಂದು ಪ್ರತಿಜ್ಞೆಯನ್ನು ಆಧಾರವಾಕ್ಯವಾಗಿ ಅಂಗೀಕರಿಸಿದ ಪಕ್ಷದಲ್ಲಿ ಪ್ರಸಕ್ತ ವಿಷಯ ವನ್ನು ಕುರಿತ ಎಲ್ಲ ಪ್ರಶ್ನೆಗಳಿಗೂ ಅದರಿಂದ ಸಮಂಜಸವಾದ ಉತ್ತರಗಳನ್ನು ಒದಗಿಸಲಾಗುತ್ತದೆಯೋ ಮತ್ತು ಆ ಆಧಾರವಾಕ್ಯ ಇಲ್ಲದಲ್ಲಿ ಮಿಕ್ಕೆಲ್ಲ ಪ್ರಶ್ನೆ ಗಳಿಗೂ ಸಮಂಜಸವಾದ ಉತ್ತರವಿಲ್ಲದೆ ಹೋಗುತ್ತದೆಯೋ, ಆ ಆಧಾರ ಪ್ರತಿಜ್ಞೆಯೇ ಅರ್ಥಾಪತ್ತಿ. ಇದನ್ನೇ ಇಂಗ್ಲಿಷಿನಲ್ಲಿ ಹೈಪಾತೆಸಿಸ್ (Hypo-thesis) ಎನ್ನುವುದು"

"ವೇದ ವೇದಾಂತಗಳು ಹೇಳುವ ಬ್ರಹ್ಮ ವಿಷಯಕ ವಾಕ್ಯಗಳನ್ನು ನಾವು ಅಂಗೀಕರಿಸಿದ್ದಾದರೆ ಜಗತ್ತು ಜೀವ ಮೊದಲಾದ ವಿಚಾರಗಳಲ್ಲಿ ನಾವು ಕೇಳುವ ಎಲ್ಲ ಪ್ರಶ್ನೆಗಳಿಗೂ ಸುಸಂಬದ್ಧವಾದ ಉತ್ತರಗಳು ದೊರೆ ಯುತ್ತವೆ. ಆದದ್ದರಿಂದ ವೇದವನ್ನು ನಾವು "ದಿ ಗ್ರೇಟ್ ಹೈಪಾತೆಸಿಸ್" ಮಹಾ ಅರ್ಥಾಪತ್ತಿ ಪ್ರತಿಜ್ಞೆಯೆಂದು ಗ್ರಹಿಸಬಹುದು. ಈ ಕಾರಣದಿಂದಲೇ ಪರಬ್ರಹ್ಮ ತತ್ತ್ವವು ಎಲ್ಲ ವಿಚಾರಗಳಿಗೂ ಮೂಲತತ್ತ್ವವಾಗುತ್ತದೆ."

"ಶ್ರದ್ಧೆಯೆಂದರೆ ನಂಬಿಕೆ; ಆದರೆ ಕುರುಡು ನಂಬಿಕೆಯಲ್ಲ. ತಾಯಿ ಕೊಟ್ಟ ತಿಂಡಿಯನ್ನು ಮಗು ಎಂಥ ನಂಬಿಕೆಯಿಂದ ತಿನ್ನುತ್ತದೆಯೋ, ವೈದ್ಯ ಕೊಟ್ಟ ಔಷಧಿಯನ್ನು ರೋಗಿ ಎಂಥ ನಂಬಿಕೆಯಿಂದ ಸೇವಿಸುತ್ತಾನೋ ಅಂಥ ನಂಬಿಕೆಯೇ ವಿಶ್ವಾಸ. ತಾಯಿ ಕೊಟ್ಟದ್ದು ರುಚಿಸದೆ ಹೋದರೆ ಮಗು ಅದನ್ನು ಬಿಸಾಟು ಬೇರೆ ತಿಂಡಿ ಕೇಳುತ್ತದೆ. ವೈದ್ಯ ಕೊಟ್ಟ ಔಷಧಿಯಿಂದ ಗುಣ ತೋರದೆ ಹೋದರೆ ರೋಗಿ ಅದನ್ನು ವೈದ್ಯನಿಗೆ ಹೇಳಿಕೊಂಡು ಪುಕಾರು ಮಾಡುತ್ತಾನೆ. ಹೀಗೆ ಅನುಭವದಿಂದ ಪರೀಕ್ಷೆ ನಡಸುವ ಸ್ವಾತಂತ್ರ್ಯ ಮಗುವಿಗೂ ರೋಗಿಗೂ ಉಂಟೇ ಉಂಟು. ಅದರಂತೆ ನಾವು ಗುರುವಾಕ್ಯ ಶಾಸ್ತ್ರವಾಕ್ಯಗಳಲ್ಲಿ ಇಡಬೇಕಾದ ಶ್ರದ್ಧೆ ಸ್ವತಂತ್ರ ವಿಚಾರಕ್ಕೆ ವಿರೋಧಿ ಯಾದದ್ದಲ್ಲ. ಅದು ನಮ್ಮ ಯುಕ್ತ್ಯನುಭವಗಳಿಗೆ ಒಳಪಟ್ಟದ್ದಾಗಿಯೇ ಇರುತ್ತದೆ. ಮೊದಲು ಪರೀಕ್ಷೆ, ಆಮೇಲೆ ವಿಶ್ವಾಸ ಎಂಬುದು ಲೋಕ

ವ್ಯವಹಾರದಲ್ಲಿ ರೂಢಿಯಾದ ನೀತಿ. ಆತ್ಮ ಜೀವ ಧರ್ಮ — ಇವು ಅಲೌಕಿಕ ವಿಷಯಗಳು. ಆದದ್ದರಿಂದ ಅಲ್ಲಿ ಮೊದಲು ವಿಶ್ವಾಸ, ಆಮೇಲೆ ಅನುಭವ ಪೂರ್ವಕ ವಿಮರ್ಶೆ —ಇದು ನೀತಿ."

"ಈ ಪ್ರಸಂಗದಲ್ಲಿ ಯುಕ್ತವಾದ ಮಾತು ಇನ್ನೂ ಒಂದಿದೆ. ಅದು ಈ ಶಾಸ್ತ್ರಕ್ಕೂ ಲೌಕಿಕ ಶಾಸ್ತ್ರಗಳಿಗೂ ಸ್ವರೂಪದಲ್ಲಿರುವ ಭೇದವನ್ನು ಕುರಿತದ್ದು. ಗಣಿತ, ಭೌತವಿಜ್ಞಾನ, ರಸಾಯನ ವಿಜ್ಞಾನ ಮೊದಲಾದ ಶಾಸ್ತ್ರಗಳು ಕೇವಲ ಬುದ್ಧಿಶಕ್ತಿಗೆ ಸಾಧ್ಯವಾದವು. ಲೌಕಿಕ ವಸ್ತುಗಳು ಇಂದ್ರಿಯಗೋಚರವಾದವು. ಅವುಗಳು ಪ್ರತ್ಯಕ್ಷ ಪ್ರಮಾಣಕ್ಕೂ ಅನುಮಾನ ಪ್ರಮಾಣಕ್ಕೂ ಸಿಕ್ಕುತ್ತವೆ. ಆತ್ಮವೆಂಬುದು ಅತೀತ ವಸ್ತು; ಅದು ನಮ್ಮ ಕೈಯ ಹಿಡಿತಕ್ಕೂ ಅಳತೆಗೂ ಸಿಕ್ಕತಕ್ಕದ್ದಲ್ಲ. ಆದದ್ದರಿಂದ ಅದನ್ನು ನಾವು ಕಂಡುಕೊಳ್ಳಬೇಕಾದರೆ ವೇದಶಾಸ್ತ್ರರೂಪವಾದ ಆಪ್ತವಾಕ್ಯವೊಂದೇ ಇರುವ ಪ್ರಮಾಣ. ಅದನ್ನು ನಂಬವೆಂದರೆ ನಮಗೆ ಬೇರೆ ದಾರಿಯೇ ಇಲ್ಲ."

"ಸಮದರ್ಶನ ಎಂದರೇನು ? ಹಸು, ಆನೆ ಎರಡಕ್ಕೂ ಒಂದೇ ಆಹಾರ ಹಾಕಿದರೆ ಅದು ಸಮತೆಯೆ ? ನಮ್ಮ ಕಾಲದಲ್ಲಿ ಈ 'ಸಮ' ಎನ್ನುವುದು ಅತ್ಯಂತ ದುರುಪಯೋಗವಾಗಿರುವ ಪದ. ರಾಜಕೀಯಸ್ಥರು ಅದನ್ನು ಪದೇ ಪದೇ ಉಪಯೋಗಿಸುತ್ತಾರೆ. ಅದರ ಅರ್ಥ ತಿಳಿಯದೆಯೋ, ತಪ್ಪಾಗಿ ತಿಳಿದೋ ಬಳಸುವುದು ಅಪರೂಪವೇನಲ್ಲ. ಸಮತೆ ಎಂದರೆ ಯಾವ ಯಾವ ಜೀವಕ್ಕೆ ಯಾವದು ಹಿತವೋ ಅದನ್ನು ಒದಗಿಸುವುದು."

"ಅಂತಸ್ಸಮತೆ, ಬಹಿಸ್ತಾರತಮ್ಯ — ಇವು ಲೋಕಹಿತ ಸೂತ್ರದ ಎರಡು ಭಾಗಗಳು. ಮನಸ್ಸಿನೊಳಗಡೆ ಎಲ್ಲರೂ ಸಮಾನರೆಂಬ ಭಾವನೆ ಇಲ್ಲದ ಪಕ್ಷದಲ್ಲಿ ಅಂಥವನ ಹೊರನಡವಳಿಕೆ ಪಕ್ಷಪಾತವುಳ್ಳದ್ದಾಗಿ ಕೆಲವರಿಗೆ ಉಪಕಾರಕವಾಗಿ ಇನ್ನು ಕೆಲವರಿಗೆ ಅಪಕಾರಕವಾಗಿ ಪರಿಣಮಿಸುತ್ತದೆ. ಸಾಮಾನ್ಯವಾಗಿ ನಮ್ಮೆಲ್ಲರ ಒಳ್ಳೆಯತನವೂ ಈ ರೀತಿಯದೇ. ಅದರಿಂದ ಕೆಲವರಿಗೇನೋ ಒಳ್ಳೆಯದಾಗಬಹುದು. ಅದರ ಜೊತೆಯಲ್ಲಿಯೇ ಇನ್ನೆಷ್ಟೋ ಮಂದಿಗೆ ಕೆಡುಕೇ ಆಗಬಹುದು. ಈ ಹೆಚ್ಚು ಕಡಮೆಗಳಿಲ್ಲದೆ ಒಳ್ಳೆಯತನ ಕಾರ್ಯರೂಪಕ್ಕೆ ಬರಬೇಕಾದರೆ ಮನಸ್ಸಿನೊಳಗಡೆ ಸರ್ವಸಮಭಾವನೆ ದೃಢವಾಗಿರಬೇಕು. ಆದರೆ ನಮ್ಮೊಳಗಿನ ಆ ಸರ್ವ ಸಮತ್ವ ಸಫಲವಾಗಬೇಕಾದರೆ ಅದು ನಮ್ಮ ಹೊರಗಣ ಜನದ ಸಂದರ್ಭ ಭೇದಗಳನ್ನು ಗಣನೆಗೆ ತೆಗೆದುಕೊಳ್ಳಬೇಕು. ಇದೇ ತಾರತಮ್ಯ. ಮನೆಯಲ್ಲಿ ತಾಯಾದವಳು ತನ್ನ

ನಾಲ್ವರು ಮಕ್ಕಳಲ್ಲಿಯೂ ಸಮಾನವಾದ ಪ್ರೀತಿಯನ್ನಿಟ್ಟಿದ್ದರೂ ಆಕೆ ಮಾಡುವ ಆರೈಕೆ ಆ ಮಕ್ಕಳ ವಯಸ್ತಾರತಮ್ಯವನ್ನೂ ಆರೋಗ್ಯ ತಾರತಮ್ಯವನ್ನೂ ಅನುಸರಿಸಿ ನಡೆಯುತ್ತದೆ. ಹೀಗೆ ತಾರತಮ್ಯ ನೋಡದೆ ಆಕೆ ಬಾಹ್ಯ ಸಾಮ್ಯ ವನ್ನು ಪಟ್ಟುಹಿಡಿದು ಹದಿನಾರು ವರ್ಷದವನಿಗೆ ಕೊಡುವ ತಿಂಡಿಯನ್ನು ಹದಿನಾರು ತಿಂಗಳವನಿಗೆ ಕೊಟ್ಟರೆ ಅದು ಹಿತವಾಗುವುದು ಹೋಗಿ ತದ್ವಿರುದ್ಧವೇ ಆಗುತ್ತದೆಯಷ್ಟೆ? ಆದದ್ದರಿಂದ ನಮ್ಮ ಲೋಕದಲ್ಲಿ ಸಮತ್ವ ಸಮತ್ವ ಎಂದು ಕೂಗಾಡುವ ರಾಜಕೀಯಸ್ಥರು ತಾರತಮ್ಯ ತತ್ತ್ವಕ್ಕೂ ನಮ್ಮ ಜೀವನದಲ್ಲಿ ಒಂದು ಜಾಗ ಉಂಟೆಂಬುದನ್ನು ಚೆನ್ನಾಗಿ ಮನಸ್ಸಿಗೆ ತಂದು ಕೊಳ್ಳಬೇಕು. ತಾರತಮ್ಯದಿಂದ ಅನ್ಯಾಯವಾಗುವ ಸಂದರ್ಭಗಳಿಲ್ಲವೆಂದು ಯಾರೂ ಹೇಳರು. ಆದರೆ ಆ ಅನ್ಯಾಯಕ್ಕೆ ಕಾರಣ ಬಹಿಸ್ತಾರತಮ್ಯವಲ್ಲ ಅಂತಸ್ತಾರತಮ್ಯ. ಅಂತರ್ಭಾವದಲ್ಲಿ ಸಮತೆ, ಬಹಿಷ್ಕ್ರಿಯೆಯಲ್ಲಿ ತಾರತಮ್ಯ ವಿವೇಕ. ಇವೆರಡೂ ಪರಸ್ಪರ ಸಾರ್ಥಕಕಾರಿಗಳಾದ ಸೂತ್ರಗಳು."

"ವರ್ಣವ್ಯವಸ್ಥೆ ಕರ್ಮವ್ಯವಸ್ಥೆಗಳಲ್ಲಿ ಒಂದು ತಾರತಮ್ಯಭಾವನೆ ಕಾಣುತ್ತದೆ. ಬ್ರಾಹ್ಮಣನು ಮುಖ, ಕ್ಷತ್ರಿಯನು ಭುಜ, ವೈಶ್ಯನು ಕುಕ್ಷಿ, ಶೂದ್ರನು ಪಾದ — ಈ ವಿಧವಾದ ರೂಪವರ್ಣನೆ ತಕರಾರಿಗೆ ಕಾರಣವಾಗಿದೆ. ಆ ತಕರಾರು ಅವಿಚಾರದಿಂದ ಹುಟ್ಟಿದ್ದು. ಸಮಾಜದೃಷ್ಟಿಯಿಂದ ಎಲ್ಲ ಕರ್ಮಗಳೂ ಸಮಾನ ಹಿತಕಾರಿಗಳೇ. ಇಲ್ಲಿ ಧ್ಯೇಯವೇನು? ಮೊದಲು, ವ್ಯಷ್ಟಿ ಮನುಷ್ಯನಲ್ಲಿರುವ ತ್ರಿಗುಣಮಲ ಸವೆಯಬೇಕೆಂಬುದು; ಎರಡನೆಯ ದಾಗಿ, ಅವನಲ್ಲಿರುವ ಶಕ್ತಿಯೋಗ್ಯತೆ ವಿಕಸಿತವಾಗಬೇಕೆಂಬುದು; ಮೂರನೆಯ ದಾಗಿ ಈ ಎರಡು ಉದ್ದೇಶಗಳೂ ಸಾಗಬೇಕಾದರೆ ಅದಕ್ಕೆ ಲೋಕ ಸಂಪರ್ಕವೇ ಸಾಧನಭೂಮಿಯೆಂಬುದು; ನಾಲ್ಕನೆಯದಾಗಿ ಅವನ ಗುಣಶಕ್ತಿಗಳ ಅಭಿವ್ಯಕ್ತಿ ಯಿಂದ ಲೋಕಕ್ಕೆ ಪ್ರಯೋಜನವಾಗಬೇಕೆಂಬುದು. ಹೀಗೆ ವ್ಯಷ್ಟಿ ಜೀವನದ ಉತ್ಕರ್ಷ."

ಈ ಗ್ರಂಥವನ್ನು ಕುರಿತು ಡಿ. ಎಲ್. ನರಸಿಂಹಾಚಾರ್ಯರು ಡಿ ವಿ ಜಿ ಯವರಿಗೆ ಒಂದು ಪತ್ರ ಬರೆದಿದ್ದಾರೆ.

"ಪರಮ ಪೂಜ್ಯರಾದ ಶ್ರೀಮಾನ್ ಡಿ. ವಿ. ಗುಂಡಪ್ಪನವರ ಸನ್ನಿಧಾನ ದಲ್ಲಿ ನಮಸ್ಕಾರ ಪೂರ್ವಕ ವಿಜ್ಞಾಪನೆಗಳು.

ಈಗ ಕೆಲವು ವಾರಗಳ ಹಿಂದೆ ಶ್ರೀ ಕೂಡಲಿ ಚಿದಂಬರಂ ಅವರು ನಿಮ್ಮಿಂದ ರಚಿತವಾದ ಶ್ರೀಮದ್ಭಗವದ್ಗೀತಾ ತಾತ್ಪರ್ಯ ಅಥವಾ ಜೀವನ

ಧರ್ಮಯೋಗವೆಂಬ ಗ್ರಂಥದ ಒಂದು ಪ್ರತಿಯನ್ನು ಕಳಿಸಿಕೊಟ್ಟಿರು. ಇದನ್ನು ಓದಲು ತೊಡಗಿದ್ದೇ ತಡ ನನ್ನನ್ನು ಸಂಪೂರ್ಣವಾಗಿ ಅದು ತನ್ನೊಳಕ್ಕೆ ಸೆಳೆದುಕೊಂಡುಬಿಟ್ಟಿತು. ಈಗಿನ ಕಾಲದ ಲೌಕಿಕ ದೃಷ್ಟಿಗೆ ಪ್ರಧಾನತೆಯನ್ನು ಕೊಟ್ಟು ಅದಕ್ಕನುಸಾರವಾಗಿ ಶ್ರೀಮದ್ಭಗವದ್ಗೀತೆಯ ಸಂದೇಶ ಸಾಮಾನ್ಯ ವ್ಯಕ್ತಿಯೊಬ್ಬನ ಜೀವನವನ್ನು ಹಸನಾಗಿಸಲು ಹೇಗೆ ಸಹಾಯಕವೆಂಬುದನ್ನು ಗ್ರಂಥದಲ್ಲಿ ಸವಿಸ್ತಾರವಾಗಿ ಪ್ರತಿಪಾದಿಸಿದೆ. ಶ್ರೀಮದಾಚಾರ್ಯರುಗಳು ಇದುವರೆಗೆ ರಚಿಸಿರುವ ಭಗವದ್ಗೀತಾ ಭಾಷ್ಯಗಳಲ್ಲಿ ಕಾಣದಿರುವ ಈ ನೂತನ ದೃಷ್ಟಿಯಿಂದ ಹೊಮ್ಮಿ ಬಂದಿರುವ ನಿಮ್ಮ ಭಾಷ್ಯ ಅವರ ಭಾಷ್ಯಗಳಷ್ಟು ಬೆಲೆಯುಳ್ಳದ್ದೆಂದು ನನಗೆ ತೋರುತ್ತದೆ. ನಮ್ಮ ಕಾಲದ ಸಾಮಾನ್ಯ ಪ್ರಜೆ ಭಗವದ್ಗೀತೆಯೆಂಬ ಕಾಮಧೇನುವಿನಿಂದ ಯಾವ ಪೋಷಣೆಯನ್ನು ಪಡೆಯಬಹುದೆಂಬ ವಿಷಯ ಇಲ್ಲಿ ಸುಸ್ಪಷ್ಟವಾಗಿ ವಿವೃತವಾಗಿದೆ. ಶೈಲಿ ಸುಲಭವಾಗಿದ್ದರೂ ಸತ್ವಮಯವಾಗಿ ಗಂಭೀರವಾಗಿದೆ. ಈ ನಿಮ್ಮ ಉಪನ್ಯಾಸಗಳು ನವೀನ ವಿನ್ಯಾಸಗಳಾಗಿವೆ. ಈ ಮಹಾಗ್ರಂಥದ ಪಠನ ಚಿಂತನೆಗಳಿಂದ ನಮ್ಮ ಜನಜೀವನ ಮಹತ್ವಕ್ಕೇರುವುದರಲ್ಲಿ ಸಂದೇಹವಿಲ್ಲ. ಇಂಥ ಗ್ರಂಥರತ್ನವೊಂದನ್ನು ಕನ್ನಡ ನಾಡಿಗೆ ದಾನ ಮಾಡಿರುವ ನೀವು ಧನ್ಯ ಜೀವಿಗಳು.”

ಈ ಗ್ರಂಥದ ಪ್ರತಿಯೊಂದು ಪ್ರಕರಣದ ಆದಿಯಲ್ಲೂ ಅಂತ್ಯದಲ್ಲೂ ಪ್ರಕರಣದ ಸಾರಾಂಶವನ್ನು ಪದ್ಯರೂಪದಲ್ಲಿ ಕೊಟ್ಟಿರುವುದು ಒಂದು ವಿಶೇಷ. “ಈ ರೀತಿಯಾದ ಪದ್ಯಬಂಧಗಳ ರಚನೆಯಿಂದ ಈ ಗ್ರಂಥದಲ್ಲಿ ಗೀತೆಯ ಜ್ಞಾಪಕ ರೂಪವೊಂದನ್ನು ಒದಗಿಸಿದಂತಾಗಿದೆ.....ಇಲ್ಲಿಯ ಕವನಗಳು ಗೀತೆಯ ಅರ್ಥವನ್ನು ನೆನೆಯುವುದಕ್ಕೆ ಸೌಲಭ್ಯವನ್ನು ಒದಗಿಸಿದೆ” ಎಂದಿದ್ದಾರೆ ರಾಜರತ್ನಂ ಅವರು.

“ಮಾನವನ ನಾಗರಿಕತೆಯಲ್ಲಿ ಅತ್ಯಂತ ಪ್ರಭಾವವುಳ್ಳ ಸಂಗತಿಯೆಂದರೆ ಮತ—ದೇವರ ವಿಷಯವಾದ ಮತ. ಮಾನವನನ್ನು ಅತ್ಯಂತ ಪ್ರಾಕೃತ ದಶೆಯಿಂದ ಸಂಸ್ಕೃತ ದಶೆಗೆ ತಂದಿರುವುದು ಮತದ ಪ್ರಭಾವ. ಜನರನ್ನು ನೀತಿಮಾರ್ಗದಲ್ಲಿ ಬೆಳೆಸಿ ತಂದಿರುವುದು ಭಗವಂತನ ಬಗೆಗೆ ಭಯ ಮತ್ತು ಪ್ರೀತಿ. ಆದದ್ದರಿಂದ ದೇವರಿಲ್ಲದೆ ಮನುಷ್ಯ ಬದುಕಲಾರನೆನಿಸುತ್ತದೆ. ದೇವರ ಬೆಂಬಲ ಮನುಷ್ಯನಿಗೆ ಯಾವಾಗಲೂ ಬೇಕಾಗಿದೆ.” ಹೀಗೆಂದಿದ್ದಾರೆ ಡಿ ವಿ ಜಿ ‘ದೇವರು’ ಎಂಬ ಪುಟ್ಟ ಪುಸ್ತಕದ ಪ್ರಸ್ತಾವನೆಯಲ್ಲಿ.

ಪಾಶ್ಚಾತ್ಯ ತತ್ತ್ವಚಿಂತನೆಯನ್ನು ಹಿಂಸಿಸಿರುವ ಸಮಸ್ಯೆ ಇದು ಎನ್ನುತ್ತಾನೆ ಎ. ಎನ್. ವೈಟ್‌ಹೆಡ್: "Consider the line and half of poetry in which Euripides compresses the main philosophical problems which have tortured European thought from his day to the present—'Zeus, whether thou art Compulsion of Nature or Intelligence of Mankind, to thee I prayed."

ನಮ್ಮ ಕವಿಗಳನ್ನೂ ಈ ಪ್ರಶ್ನೆ ಕಾಡದೆ ಬಿಟ್ಟಿಲ್ಲ.

ಇಲ್ಲದೊಂದಕೆ ಹೆಸರನಿತ್ತು ಕರೆಯುವೆವೊ
ಇಲ್ಲದಿರೆ ಮಾನವನ ಸುಗುಣವೇ ದೈವವೊ
ಎಲ್ಲಿಗೂ ಹರಿಯದಿಹ ಸಂಶಯವೆ ಕೊನೆಯೊ !

(ಕಸ್ಮೈ ದೇವಾಯ ? —ವಿ. ಸೀ.)

ನಿದ್ದೆಮಾಡುತಿಹರು ಹಲವು ದೇವತೆಗಳೆಲ್ಲ
ಬಿದ್ದವರು ಕಲ್ಲಾಗಿ ಕೆಲವರಿಹರು ;
ಕ್ಲೀಬತನದಲಿ ಮರೆತು ತಮ್ಮ ಪೌರುಷವನೆಲ್ಲ
ಸತ್ತೆಹೋದಂತಿಹರು ಮತ್ತುಳಿದವರು

(ಇಂದಿನ ದೇವರು: ಕುವೆಂಪು)

ದೇವರ ಬಯಸುವ ಜನರ ಪ್ರಯತ್ನವು
ಕತ್ತಲು ಮನೆಯಲಿ ಇಲ್ಲದ ಒಡವೆಯು
ಹುಡುಕುವ ಕುರುಡರ ಸಾಹಸ ಸಹಜವು

(ಶಿವರಾಮ ಕಾರಂತ)

"ಇದರ (ದೇವರು ಎಂಬುದರ) ವಿಷಯ ನನ್ನ ಮನಸ್ಸಿನಲ್ಲಿ ಬಹುದಿನಗಳಿಂದ ಮಿಡಿಯುತ್ತಿದ್ದದ್ದು" ಎಂದು ದೇವರು ಗ್ರಂಥದ ಮುನ್ನುಡಿಯಲ್ಲಿ ಡಿ ವಿ ಜಿ ಬರೆದಿದ್ದಾರೆ. "ವಸಂತ ಕುಸುಮಾಂಜಲಿ"ಯಲ್ಲಿ "ದೇವರೆಲ್ಲಿ" ಎಂಬ ಪದ್ಯದಿಂದ ಪ್ರಾರಂಭವಾದ ಅವರ ಅನ್ವೇಷಣೆ, "ಸಂದೇಹ ಸೂಕ್ತ"ದಲ್ಲಿ ಪ್ರಶ್ನಾವಳಿಯಾಗಿ ಮುಂದುವರಿಯುತ್ತದೆ. "ಕಗ್ಗ"ದಲ್ಲೂ ಅವರು ಈ ಪ್ರಶ್ನೆಯನ್ನೆತ್ತಿದ್ದಾರೆ :

ದೇವರೆಂಬುದದೇನು ಕಗ್ಗತ್ತಲೆಯು ಗವಿಯೆ ? ।
ನಾವರಿಯಲಾರದೆಲ್ಲದರೊಟ್ಟು ಹೆಸರೆ ? ॥
ಕಾವನೋರ್ವನಿರಲ್ಕೆ ಜಗದ ಕಥೆಯೇಕಿಂತು ? ।
ಸಾವು ಹುಟ್ಟುಗಳೇನು ? —ಮಂಕುತಿಮ್ಮ ॥

ಅನ್ವೇಷಣೆಯ ಫಲವಾಗಿ, ಚಿಂತನೆಯ ಫಲವಾಗಿ ಅವರು ಕಂಡು ಕೊಂಡ ಸತ್ಯ ಇದು :

ಮಣಿಮಂತ್ರತಂತ್ರ ಸಿದ್ಧಿಗಳ ಸಾಕ್ಷ್ಯಗಳೇಕೆ ।
ಮನಗಾಣಿಸಲು ನಿನಗೆ ದೈವದದ್ಭುತವ ? ॥
ಮನುಜರೊಳಗಾಗಾಗ ತೋರ್ಪಮಹನೀಯಗುಣ ।
ವನುವಾದ ಬೊಮ್ಮನದು—ಮಂಕುತಿಮ್ಮ ॥

ನಕ್ಷತ್ರ ಮಂಡಲದಿನಾಚೆಯಿಂದೊಂದು ದನಿ ।
ವಕ್ಷೋಗುಹಾಂತರದಿನೊಂದು ದನಿಯಿಂತೀ ॥
ಸಾಕ್ಷಿದ್ವಯವು ನಿನ್ನೊಳೊಂದುಗೂಡಿದೊಡದೇ ।
ಪ್ರೇಕ್ಷೆ ಪರಬೊಮ್ಮನದು—ಮಂಕುತಿಮ್ಮ ॥

'ದೇವರ' ವಿಚಾರವಾದ ಚರ್ಚೆ 'ಜೀವನ ಸೌಂದರ್ಯ ಮತ್ತು ಸಾಹಿತ್ಯ' 'ಉಮರನ ಒಸಗೆ' 'ಭಗವದ್ಗೀತಾ ತಾತ್ಪರ್ಯ' ಮುಂತಾದ ಗ್ರಂಥಗಳಲ್ಲಿಯೂ ಬರುತ್ತದೆ.

ಆದರೂ 'ದೇವರು' ಎಂಬುದರ ವಿಷಯವಾಗಿ ತಮ್ಮ ಚಿಂತನೆಯ ಫಲ ವನ್ನು ಒಂದು ಕಡೆ ಹೇಳಬೇಕೆನಿಸಿತು ಅವರಿಗೆ, ಅವರು 'ಮಾರ್ಥಾ ಹಾಸ್ಪೆಟಲ್' ನಲ್ಲಿ ಕೆಲವು ದಿನಗಳಿದ್ದಾಗ. ಸನಾತನ ಧರ್ಮವೂ ವೇದ ಧರ್ಮವೂ ದೇವರು ಎಂದರೆ ಏನೆಂದು ತಿಳಿಸುತ್ತದೆ ಎಂದು ವಿವರಿಸ ಹೊರಟರು ಡಿ ವಿ ಜಿ. ಅದೇ 'ದೇವರು' ಎಂಬ ಗ್ರಂಥ. ದೇವರಲ್ಲಿ ನಂಬಿಕೆಯಿಲ್ಲದಿರುವವರನ್ನು ದೇವರಲ್ಲಿ ನಂಬಿಕೆಯುಂಟಾಗುವಂತೆ ಮಾಡಿಬಿಡಬಲ್ಲದ್ದಲ್ಲ ಆ ಗ್ರಂಥ. ಅನೀಶ್ವರ ವಾದಕ್ಕೆ ಪ್ರತ್ಯುತ್ತರ ಉಂಟು ; ಆ ನಂಬಿಕೆಯಿಂದ ಜೀವನಕ್ಕೆ ನೆಮ್ಮದಿಯುಂಟು, ಸಾರ್ಥಕತೆಯುಂಟು ಎಂದು ತೋರಿಸುವುದು ಆ ಗ್ರಂಥದ ಉದ್ದೇಶ. ಮತ್ತು ದೇವರಲ್ಲಿ ನಂಬಿಕೆಯಿರುವವರು ದೇವರನ್ನು ಕುರಿತು ಏನು ತಿಳಿಯಬೇಕು ಎಂದು ವಿವರಿಸುವ ಗ್ರಂಥ ಅದು. ಡಿ ವಿ ಜಿ ಯವರ ದೃಷ್ಟಿಯಲ್ಲಿ :

ಅವಾವುದೊಳಿತೊ ನಿನಗದು ।
ಜೀವಹಿತಕ್ಕಾವುದಹುದೋ ಸತ್ಯಂ ನಿತ್ಯಂ ॥
ಆ ವಸ್ತುವೆ ಆ ಸತ್ತ್ವವೆ ।
ದೇವಂ ಜಗದೀಶನಾತ್ಮ ತತ್ತ್ವಂ ಬ್ರಹ್ಮಂ ॥

"ದೇವರು ಇದ್ದಾನೆ" ಎಂಬುದು ಡಿ ವಿ ಜಿ ಯವರಿಗೆ ಆದಿಪ್ರಜ್ಞೆ, ಮೂಲಪ್ರಜ್ಞೆ ಮಾತ್ರವಲ್ಲ, ಅಗ್ರಪ್ರಜ್ಞೆ. ಅದು ಅವರಿಗೆ ಆಮೂಲಾಗ್ರವಾದ ಅಂತ್ಯಪ್ರಜ್ಞೆಯೂ ಆಗಿತ್ತು" ಎಂದಿದ್ದಾರೆ ರಾಜರತ್ನಂ.

"ಋತ, ಸತ್ಯ, ಧರ್ಮ : ಇವುಗಳ ಅನ್ಯೋನ್ಯ ಸಂಬಂಧಗಳು" ಎಂಬ ಗ್ರಂಥ ಚಿಕ್ಕದಾದರೂ ಬಹು ಅಪೂರ್ವವಾದದ್ದು.

"ದೇವರು ಎಂಬ ಮಹಾ ಚೈತನ್ಯದಲ್ಲಿರುವ ಮೂಲ ನಂಬಿಕೆಯೇ ಋತ. ಋತದಿಂದ ಸತ್ಯದ ವಿವೇಚನೆ, ಸತ್ಯಾನುಸರಣೆಯಿಂದ ಹೊರಡುವ ಕ್ರಿಯೆಯೇ ಧರ್ಮ. ಆತ್ಮೋದ್ಧಾರಕ್ಕೂ ಜಗತ್ತಿನ ಹಿತಸಾಧನೆಗೂ ಸಾಧಕವಾದ ವರ್ತನೆಯೇ ಧರ್ಮ" ಎಂದಿದ್ದಾರೆ ಡಿ ವಿ ಜಿ ಆ ಪುಸ್ತಕದ ಪೀಠಿಕೆಯಲ್ಲಿ.

ಈ ಮೂರು ಪದಗಳೂ ಸನಾತನ ಧರ್ಮದ ತತ್ತ್ವದ ಅಡಿಗಲ್ಲುಗಳೆಂದರೆ ಅತಿಶಯೋಕ್ತಿಯಲ್ಲ. ಆ ಪದಗಳ ಅರ್ಥವೇನು, ವ್ಯಾಪ್ತಿಯೇನು, ಜೀವನದಲ್ಲಿ ಅವುಗಳ ಅನ್ವಯ ಹೇಗೆ ಎಂದು ವಿಸ್ತಾರವಾಗಿ ಆಳವಾಗಿ ವಿವೇಚಿಸುವ ತತ್ತ್ವ-ಗ್ರಂಥ ಅದು.

ಆಧುನಿಕ ಜೀವನದ ಸಾರಾಂಶವನ್ನು ಆಲ್ಡಸ್ ಹಕ್ಸ್ಲಿ ಮಹಾಶಯನು ತನ್ನ ಒಂದು ಕಥೆಯಲ್ಲಿ (The Genius and The Goddess) ಹೀಗೆ ವಿವರಿಸಿದ್ದಾನೆ : "Empty, swept and garnished. Empty of God, swept clean of common manhood and garnished like a Christmas tree, with glittering notions. And seven other devils, worse even than stupidity and sentimentality, had moved in and taken possession."

ಆ್ಯಲ್ವಿನ್ ಟಾಫ್ಲರ್ ಎಂಬ ಚಿಂತಕನೊಬ್ಬ ಆಧುನಿಕ ಮಾನವನ ಸಂಕಟ ಪರಿಸ್ಥಿತಿಯನ್ನು "ದಿ ಥರ್ಡ್ ವೇವ್" ಎಂಬ ಗ್ರಂಥದಲ್ಲಿ ಹೀಗೆ ವಿವರಿಸಿದ್ದಾನೆ:

Individuals need life structure. A life lacking in comprehensive structure is an aimless wreck. The absence of structure breeds break down. Structure provides relatively

fixed points of reference we need.

To this loss of order we must also add the loss of meaning. The feeling that our lives "count" comes from healthy relationships with the surrounding society — from family, corporation, church or political movement. It also depends on being able to see ourselves as part of a larger, even cosmic, scheme of things.

The sudden shift of social ground rules today, the smudging of roles, status distinctions and lines of authority, the immersion in blip culture and above all the break up of the great thought system, have shattered the world image most of us carry in our skulls In consequence, most people surveying the world around them today see only chaos. They sufffer a sense of personal powerlessness and pointlessness."

ಹೀಗೆ ಬಾಳಿಗೆ ಒಂದು ಗುರಿಯನ್ನು ಕಾಣದೆ ಅರ್ಥವನ್ನು ಕಾಣದೆ ಜನ ತತ್ತರಿಸುತ್ತಿದೆ.

ಗುರಿಯೇಂ ಜೀವನಕದು ಬರಿ ।
ಪರದಾಟವೊ ಮನಸು ಬೇಡುವಿಂದ್ರಿಯ ಸುಖವೋ ॥
ಸಿರಿತನವೋ ದೊರೆತನವೋ ।
ಸೆರೆಮನೆಯೋ ತಿರುಕನುಂಡ ಕನಸಕಣವೋ ॥

ಡಿ ವಿ ಜಿ ಯವರು ಮೊದಲಿನಿಂದಲೂ ಚಿಂತಿಸುತ್ತಿದ್ದ ಪ್ರಶ್ನೆ ಅದು. ಅದಕ್ಕೆ ಅವರು ಕಂಡುಕೊಂಡ ಉತ್ತರ "ಬಾಳಿಗೊಂದು ನಂಬಿಕೆ" ಎಂಬುದೆ.

ಶ್ರದ್ಧಾಳುತೆ ಜೀವನದೋಳ್ ।
ಯುದ್ಧೋತ್ಸುಕ ಧೈರ್ಯಮಹಿತವಾಹಿನಿಯೋಳ್ ॥
ನಿರ್ದ್ವಂದ್ವತೆ ಫಲಗತಿಯೋಳ್ ।
ಹಾರ್ದತೆ ಸಂಸೃಷ್ಟಲೋಕ ಸಹಭಾಗಿತೆಯೋಳ್ ॥

ಇದೇ ಅವರು ವಿವಿಧ ರೀತಿಯಲ್ಲಿ ವಿವರಿಸಿರುವ ಅವರ ಜೀವನ ಸಿದ್ಧಾಂತ. ಇದರ ವಿವರಣೆಯೇ ಮೈಸೂರು ವಯಸ್ಕರ ಶಿಕ್ಷಣ ಸಮಿತಿಯಿಂದ 1950 ರಲ್ಲಿ ಮೊದಲು ಪ್ರಕಟವಾದ 'ಬಾಳಿಗೊಂದು ನಂಬಿಕೆ' ಎಂಬ ಪುಟ್ಟ ಪುಸ್ತಕ. ಹೊಸದಾಗಿ ಓದು ಕಲಿತ ವಯಸ್ಕರಿಗಾಗಿ ಬರೆದ ಆ ಗ್ರಂಥ ಮೊದಲು ಪ್ರಕಟ

ವಾದಾಗ, ಸಮಿತಿಯ ಅಧ್ಯಕ್ಷರು, ಟಿ. ಮಾದಯ್ಯ ಗೌಡರು ತಮ್ಮ 'ಅರಿಕೆ' ಯಲ್ಲಿ "ಜನರ ಅಂತಶ್ಶಕ್ತಿ ಹೆಚ್ಚಿ ಅವರ ಮುಖಗಳಲ್ಲಿ ಸ್ವಾತಂತ್ರ್ಯದ ಹೊಸ ಕಳೆ ಎದ್ದು ಕಾಣಬೇಕಾದರೆ ತಮ್ಮ ಬಾಳನ್ನು ದೊಡ್ಡದು ಮಾಡಿಕೊಳ್ಳಲು ಅವರಿಗೆ ಆಸೆ ಬೇಕು, ಬಾಳಿನಲ್ಲಿ ಹಿರಿಯ ನಂಬಿಕೆ ಬೇಕು. ಅಂಥ ಒಂದು ನಂಬಿಕೆ ಯನ್ನು ಡಿ ವಿ ಗುಂಡಪ್ಪನವರ ಈ ಪುಸ್ತಕ ಕೊಡಬಲ್ಲುದು" ಎಂದಿದ್ದಾರೆ. ಡಿ ವಿ ಜಿ ಯವರು "ನಮ್ಮ ಬದುಕು ಚೆನ್ನಾಗಿ ಸಾಗಿ ಸಾರ್ಥಕವಾಗಬೇಕಾದರೆ ನಮಗೆ ಒಂದು ಒಳ್ಳೆಯ ಗುರಿಯ ತಿಳಿವಳಿಕೆಯೂ, ಆ ಗುರಿಯನ್ನು ಮುಟ್ಟಿಸ ಬಲ್ಲ ದಾರಿಯ ತಿಳಿವಳಿಕೆಯೂ ಇರಬೇಕು. ಅಂಥ ಜೀವನಯಾತ್ರೆಯ ನಕಾಶೆ ಯೊಂದನ್ನು ಗುರುತು ಮಾಡಲು ಈ ಲೇಖನದಲ್ಲಿ ಯತ್ನಿಸಿದೆ" ಎಂದು ತಮ್ಮ ಉದ್ದೇಶವನ್ನು ವಿವರಿಸಿದ್ದಾರೆ.

"ಕ್ಷುದ್ರದೇವತೆಗಳು ತೊಲಗಿದರೆ ಮಹಾದೇವನು ಪ್ರತ್ಯಕ್ಷನಾಗುತ್ತಾನೆ. ಅಬದ್ಧ ನಂಬಿಕೆಗಳನ್ನು ನಾವು ತೊಲಗಿಸಿದರೆ ಕ್ಷೇಮಕರವಾದ ತಿಳಿವಳಿಕೆ ನಮಗೆ ಬರುತ್ತದೆ. ಆದದ್ದರಿಂದ ನಾವು ಮೊದಲು ನಮ್ಮ ನಮ್ಮ ಮನಸ್ಸು ಗಳನ್ನು ಪರೀಕ್ಷಿಸಿ ಅಲ್ಲಿರುವ ಕಸ ಕೊಳೆಗಳನ್ನು ತೆಗೆದು ಹಾಕಬೇಕು. ನಿರಾ ಧಾರವಾದ ಭಯಗಳನ್ನು ನೀಗಿ ಕಳೆಯಬೇಕು. ಪ್ರಾಚೀನ ಕರ್ಮ, ದೈವ, ವಿಧಿ, ಅದೃಷ್ಟ—ಇಂಥಾ ಮಾತುಗಳನ್ನು ಕೊಂಚ ಮರೆತು, ಜಗತ್ತೇ ಪ್ರತ್ಯಕ್ಷ ದೈವ, ಪೌರುಷವೇ ದೇವರು ನಮಗೆ ನಿಯಮಿಸಿರುವ ಕರ್ತವ್ಯ, ಆತ್ಮವಿಸ್ತಾರವೇ ಪರಮ ವಿಜಯ—ಇಂಥಾ ವಾಕ್ಯಗಳನ್ನು ನಾವು ಸ್ಮರಣೆ ಮಾಡಬೇಕು". ಬಾಳಿಗೊಂದು ನಂಬಿಕೆ ಏಕೆ ಬೇಕು, ಅದನ್ನು ಕಂಡುಕೊಳ್ಳು ವುದು ಹೇಗೆ, ವಿಜ್ಞಾನ ರಾಜಕೀಯ ಸಾಹಿತ್ಯ ಮುಂತಾದುವಕ್ಕೂ ಈ ನಂಬಿಕೆಗೂ ಇರುವ ಸಂಬಂಧವೇನು ಎಂದು ವಿವರಿಸುವ ಗ್ರಂಥ ಇದು.

ಷೇಕ್ಸ್‌ಪಿಯರ್ : ಷೇಕ್ಸ್‌ಪಿಯರ್ ಮಹಾ ಕವಿಯ "ಮ್ಯಾಕ್ ಬೆತ್" ಎಂಬ ನಾಟಕವನ್ನು ಡಿ ವಿ ಜಿ ಯವರು ಕನ್ನಡಕ್ಕೆ ತಂದಿದ್ದಾರೆ. ಇಂಗ್ಲೀಷಿನಲ್ಲಿ ಅದನ್ನು ಓದದವರು, ಈ ಭಾಷಾಂತರವನ್ನು ಓದಿದರೇ ಸಾಕು; ಮೂಲವನ್ನು ಓದಲಿಲ್ಲವಲ್ಲಾ ಎಂದು ಕೊರಗಬೇಕಾಗಿಲ್ಲ.

28-1-1943 ರಲ್ಲಿ ಬೆಂಗಳೂರು ಆಕಾಶವಾಣಿಯವರು ಈ ನಾಟಕದ ಮೊದಲ ಎರಡಂಕಗಳನ್ನು ಅಭಿನಯಿಸಿದರು. ಪುನಃ 12-6-60 ರಲ್ಲಿ ಆ ನಾಟಕ ಆಕಾಶವಾಣಿಯಲ್ಲಿ ಬಂತು.

ಷೇಕ್ಸ್‌ಪಿಯರ್ ಮಹಾಕವಿಯ ನಾನೂರನೆಯ ಜಯಂತ್ಯುತ್ಸವದ

ಸಂದರ್ಭದಲ್ಲಿ ದೆಹಲಿಯ ಕನ್ನಡ ಭಾರತಿ ಸಂಸ್ಥೆಯು ಡಿ ವಿ ಜಿ ಯವರ "ಮ್ಯಾಕ್‌ಬೆತ್" ನಾಟಕವನ್ನು ಅಕ್ಟೋಬರ್ 1964 ರಲ್ಲಿ ಅಭಿನಯಿಸಿ ರಸಿಕರ ಮೆಚ್ಚುಗೆಯನ್ನು ಸಂಪಾದಿಸಿಕೊಂಡಿತು. ಆಗ ಪ್ರಕಟಪಡಿಸಿದ ಒಂದು ಜ್ಞಾಪಕ ಸಂಚಿಕೆ ಡಿ ವಿ ಜಿ ಯವರ ಭಾಷಾಂತರವನ್ನು ಕುರಿತು "The translation, a match to the original, is still the most satisfying of all—some sixty or more—translations of Shakespeare's work in Kannada"—ಎಂದು ಬರೆಯಿತು.

ಆ ಸಂದರ್ಭದಲ್ಲಿಯೇ ದೆಹಲಿಯ ಕನ್ನಡ ಭಾರತಿಯವರು ಹೊರತರ ಬೇಕೆಂದಿದ್ದ ಲೇಖನ ಸಂಕಲನಕ್ಕೆ ಡಿ ವಿ ಜಿ 'ಷೇಕ್ಸ್‌ಪಿಯರಿಗೆ ನಮಸ್ಕಾರ' ಎಂಬ ಲೇಖನವನ್ನು ಬರೆದು ಕೊಟ್ಟರು. ಆ ಸಂಕಲನದ ಸಂಪಾದಕರು ಡಿ ವಿ ಜಿ ಯವರ ಲೇಖನದ ಹೆಸರನ್ನೇ ಆ ಪ್ರಬಂಧಸಂಕಲನಕ್ಕೂ ಕೊಟ್ಟಿದ್ದಾರೆ. ಷೇಕ್ಸ್‌ಪಿಯರ್‌ನ ನಾಟಕಗಳ ಹಿರಿಮೆಯನ್ನೂ ಸ್ವಾರಸ್ಯವನ್ನೂ ಡಿ ವಿ ಜಿ ಒಂದು ನಾಟಕದ ಮೂಲಕ ವಿವರಿಸಿದ್ದಾರೆ. ಆ ಲೇಖನವನ್ನು ಡಿ ವಿ ಜಿ ಯವರ 'ಕಾವ್ಯ ಸ್ವಾರಸ್ಯ' ಗ್ರಂಥದಲ್ಲಿ ನೋಡಬಹುದು.

ಷೇಕ್ಸ್‌ಪಿಯರಿನ ಇನ್ನೊಂದು ನಾಟಕದಲ್ಲಿ ಬರುವ ಗಲಭೆಯ ಪ್ರಕರಣವನ್ನು 'ಜಾಕ್‌ಕೇಡ್' ಎಂಬ ಹೆಸರಿನಲ್ಲಿ ಡಿ ವಿ ಜಿ ಕನ್ನಡಕ್ಕೆ ತಂದಿದ್ದಾರೆ.

'ಹ್ಯಾಮ್ಲೆಟ್' ನಾಟಕವನ್ನು ಭಾಷಾಂತರಿಸಲು ಪ್ರಾರಂಭಿಸಿದ್ದರೂ, ಏನೋ ಕಾರಣದಿಂದ ಅವರು ಅದನ್ನು ಮುಂದುವರಿಸಲಿಲ್ಲ.

ಮುನ್ನುಡಿಗಳು : ಡಿ ವಿ ಜಿ ಹಲವಾರು ಗ್ರಂಥಗಳಿಗೆ ಮುನ್ನುಡಿಗಳನ್ನು ಬರೆದಿದ್ದಾರೆ. ಅವರು ಬರೆದ ಪತ್ರಗಳೇ ಮುನ್ನುಡಿಗಳಾಗಿರುವುದೂ ಉಂಟು. ಆದರೆ ಅವರ ಮುನ್ನುಡಿಗಳಲ್ಲೆಲ್ಲಾ ಬಹು ಮುಖ್ಯವಾದದ್ದು ಅವರು ವಿದ್ವಾನ್ ಎನ್. ರಂಗನಾಥ ಶರ್ಮಾರವರು ಕನ್ನಡಕ್ಕೆ ತಂದಿರುವ ಶ್ರೀಮದ್ರಾಮಾಯಣ ಗ್ರಂಥದ ಏಳು ಕಾಂಡಗಳಿಗೂ ಬರೆದಿರುವ ಮುನ್ನುಡಿಗಳು. ಅಲ್ಲಿ ಅವರು ಶ್ರೀಮದ್ರಾಮಾಯಣದ ಸ್ವಾರಸ್ಯ ಭಾಗಗಳನ್ನು ಎತ್ತಿ ತೋರಿಸಿದ್ದಾರೆ. ಡಿ ವಿ ಜಿ ಯವರ ಕಾವ್ಯ ಮೀಮಾಂಸೆಯನ್ನೂ ಅಲ್ಲಿ ಕಾಣಬಹುದು. ಸಾಮಾನ್ಯ ಜನಕ್ಕೆ ಕಾವ್ಯ ಕುತೂಹಲವನ್ನು ಉಂಟು ಮಾಡಬಲ್ಲ ಬರವಣಿಗೆ ಅದು.

ಸಂಸ್ಕೃತದಲ್ಲಿ ಪದ್ಯ : ಡಿ ವಿ ಜಿ ಸಂಸ್ಕೃತದಲ್ಲೂ ಪದ್ಯಗಳನ್ನು ಬರೆದಿದ್ದಾರೆ. ಗೋಖಲೆ ಸಂಸ್ಥೆಯ ನೂತನ ಗೃಹಪ್ರವೇಶೋತ್ಸವ ಸಂದರ್ಭ

ದಲ್ಲಿ ಅವರ ಧ್ಯೇಯಗಳನ್ನು ವಿವರಿಸುವ ಶ್ಲೋಕಮಾಲಿಕೆ, ಭಗವದ್ಗೀತಾ ತಾತ್ಪರ್ಯ ಗ್ರಂಥಕ್ಕೆ ಪೀಠಿಕಾರೂಪವಾಗಿ ಬರೆದಿರುವ ಶ್ಲೋಕಗಳು ಮತ್ತು ಭಗವದ್ಗೀತಾ–ರಾಮ ಕಥಾ ಸಮನ್ವಯ ಪದ್ಯಮಾಲಿಕೆ.

ನಾಟಕಗಳು : ಡಿ ವಿ ಜಿ ನಾಟಕಗಳನ್ನೂ ಬರೆದಿದ್ದಾರೆ. 'ಕನಕಾಲುಕಾ' ಎಂಬುದು ಟೆನಿಸನ್ ಕವಿಯ 'ದಿ ಕಪ್' ಎಂಬ ನಾಟಕದ ರೂಪಾಂತರ. 'ತಿಲೋತ್ತಮೆ', ಮತ್ತು 'ಪರಶುರಾಮ' ಸ್ವತಂತ್ರ ಕೃತಿಗಳು. ಸಮಕಾಲೀನ ರಾಜಕೀಯ ಪರಿಸ್ಥಿತಿಯನ್ನು ಲೇವಡಿ ಮಾಡುವ ನಾಟಕ "ಗರ್ದಭ ವಿಜಯ." ಲಾವಣಿ 'ಮಹಾಚುನಾವಣೆ'.

ಜ್ಞಾಪಕ ಚಿತ್ರಶಾಲೆ: ಅವರು ತಮ್ಮ ಜೀವನದ ಕೊನೆಯ ದಶಕಗಳಲ್ಲಿ ಬರೆದ ಜ್ಞಾಪಕ ಚಿತ್ರ ಶಾಲೆಯ ಎಂಟು ಸಂಪುಟಗಳು ಕರ್ನಾಟಕದ, ಅದರಲ್ಲೂ ಹಿಂದಿನ ಮೈಸೂರು ಸಂಸ್ಥಾನದ, ಚರಿತ್ರೆಯನ್ನು ಸಿಂಹಾವಲೋಕನ ಕ್ರಮದಿಂದ ನೋಡುತ್ತದೆ ಎಂದು ಹೇಳಬಹುದು. ಇಲ್ಲಿ ಘಟನೆಗಳಿಗಿಂತ ಘಟನೆಗಳಿಗೆ ಕಾರಣರಾದ ವ್ಯಕ್ತಿಗಳೇ ಮುಖ್ಯ. ಎಂಥ ವ್ಯಕ್ತಿಗಳಿದ್ದರೆ ದೇಶ ದೊಡ್ಡದಾಗಿಸುತ್ತದೆ, ಜೀವನದ ಸ್ವಾರಸ್ಯವನ್ನು ಅವರು ಹೇಗೆ ಕಂಡರು, ಸುಸಂಸ್ಕೃತರು ಯಾರು, ಅವರು ಹೇಗೆ ಬಾಳಿದರು, ಯಾವ ನಡವಳಿಕೆ ಚೆನ್ನ, ಮುಂತಾದ ಅನೇಕ ವಿಚಾರಗಳು ಅಲ್ಲಿ ಬಂದಿವೆ. ದಿವಾನರುಗಳಿಂದ ಹಿಡಿದು ಬಡ ಮುರಗೆಲಸದವನವರೆಗೂ ಸಮಾಜದ ಎಲ್ಲ ವಿಧದ ವ್ಯಕ್ತಿಗಳ ಚಿತ್ರಣ ಕಣ್ಣಿಗೆ ಕಟ್ಟಿದಂತೆ ಅಲ್ಲಿ ಮೂಡಿ ಬಂದಿದೆ. ವಿದ್ವಾಂಸರು, ಉಪಾಧ್ಯಾಯರು, ಪಂಡಿತರು, ಸಂಗೀತಗಾರರು, ನಾಟ್ಯದವರು, ಸಾರ್ವಜನಿಕ ಕರ್ತರು, ವೈದ್ಯರು, ವಕೀಲರು, ಅವಧೂತರು, ಮಠಾಧಿಪತಿಗಳು ಇವರೆಲ್ಲ ಅಲ್ಲಿ ಬರುತ್ತಾರೆ. ಡಿ ವಿ ಜಿ ಯವರ ಜೀವನಾನುಭವ, ಜನಾನುಭವ ಎಷ್ಟು ವಿಸ್ತಾರವಾದದ್ದು, ಅವರು ತಮ್ಮ ಜೀವನ ಸಿದ್ಧಾಂತವನ್ನು ನಿರ್ಣಯಿಸಿಕೊಳ್ಳುವುದರಲ್ಲಿ ಹೇಗೆ ಎಲ್ಲ ಕಡೆಯಿಂದ ಅಭಿಪ್ರಾಯಗಳನ್ನು ಸಂಗ್ರಹಿಸಿಕೊಂಡರು, ಅವರ ಗುಣ ಗ್ರಹಣ ಶಕ್ತಿ ಎಂಥಾದ್ದು ಎಂಬುದನ್ನು ನಾವು ಈ ಚಿತ್ರಗಳಿಂದ ಊಹಿಸಿಕೊಳ್ಳಬಹುದು. ಅಲ್ಲಿ ರಾಜಕೀಯವಿದೆ, ಕಾವ್ಯಮೀಮಾಂಸೆಯಿದೆ, ಹಾಸ್ಯವಿದೆ, ವೇದಾಂತವಿದೆ, ವ್ಯಕ್ತಿ ಚಿತ್ರಣವಿದೆ, ಹೃದಯವನ್ನು ಕಲಕುವ ಸಂದರ್ಭಗಳ ವರ್ಣನೆಯಿದೆ, ರಸಿಕ ಜೀವನದ, ವಿರಕ್ತ ಜೀವನದ ಚಿತ್ರಣವಿದೆ— ಹೀಗೆ ಒಂದು ಜೀವಕ್ಕೆ ಸಂಸ್ಕಾರ ನೀಡುವ ಎಲ್ಲ ವಿಷಯಗಳೂ ಅಲ್ಲಿವೆ.

ಮನಸ್ಸಿನಲ್ಲಿ ಯಾವ ಕಹಿಯನ್ನೂ ಇಟ್ಟುಕೊಂಡ ಮನೋಭಾವ ಇಲ್ಲಿ

ಕಾಣಬರುವುದಿಲ್ಲ. ಜೀವನದಲ್ಲಿ ಕಹಿಯಿಲ್ಲವೆಂದಲ್ಲ. ಅದನ್ನು ತಿರುಗಿ ವರ್ಣಿಸುವುದರಲ್ಲಿ ಡಿ ವಿ ಜಿ ಯವರಿಗೆ ಉಪಯೋಗ ಕಾಣಲಿಲ್ಲ.

ದೇಶದ ಅನೇಕ ಮಹನೀಯರುರನ್ನು ವಿದ್ವಾಂಸರನ್ನು ರಸಿಕರನ್ನು ವಿರಕ್ತರನ್ನು ವರ್ಣಿಸಿದ ತರುವಾಯ, ಜ್ಞಾಪಕ ಚಿತ್ರಶಾಲೆಯ ಎಂಟನೆಯ ಸಂಪುಟದಲ್ಲಿ ಕೊನೆಯ ಪ್ರಕರಣವಾಗಿ ಬರುವುದು, "ಹೃದಯ ಸೌಂದರ್ಯ ಒಂದು ಮಧುರ ಸ್ಮೃತಿ." ಮಹಾರಾಜರ, ದಿವಾನರುಗಳ, ಇತರ ಐಶ್ವರ್ಯವಂತರ ವಿದ್ವಾಂಸರ ಜೀವನದ ಸೊಗಸನ್ನೂ ವಿಲಾಸಗಳನ್ನೂ ಕಂಡು ಕೇಳಿದ್ದ ಡಿ ವಿ ಜಿ ಆನಂದಾನುಭವವನ್ನು ಅನುಭವಿಸಿದ್ದು ಒಂದು ಬಡ ಮುದುಕ ಮುದುಕಿಯರ ಅನ್ಯೋನ್ಯ ಪ್ರೀತಿಯನ್ನು ಕಂಡು. ಈ ಚಿತ್ರ ಡಿ ವಿ ಜಿ ಯವರ ಸ್ಮೃತಿಗಳಿಗೆ ಶಿಖರ ಪ್ರಾಯವಾಗಿದೆ, ಮತ್ತು ಜೀವನದ ಸಾರವನ್ನು ಅವರು ಎಲ್ಲಿ ಕಂಡರು ಎಂಬುದನ್ನು ಸೂಚಿಸುತ್ತದೆ. "ಪ್ರೀತಿಯೇ ಸೌಂದರ್ಯ; ಪ್ರೀತಿ ಸಾಲದೆ ಹೋದಲ್ಲಿ ಆಭರಣ ಅಲಂಕಾರಗಳು ಐಶ್ವರ್ಯಗಳು ಬರಿಯ ಭಾರ. ಪ್ರೀತಿಯೇ ಸೌಂದರ್ಯ; ಪ್ರೀತಿಯೇ ಐಶ್ವರ್ಯ. ಪ್ರೀತಿಯೆಂದರೆ ಹೃದಯ ವಿಕಾಸ". ಅದೇ ಉಪನಿಷತ್ತುಗಳು ಘೋಷಿಸುವ ಆನಂದಾನುಭವಕ್ಕೆ ದಾರಿ.

ಆನಂದವೇ ಬ್ರಹ್ಮವೆಂದು ನೀನರಿಯೈ ।
ಆನಂದದಿಂದ ಪುಟ್ಟಿಹುದೆಲ್ಲಮುಲ್ತೇ ।
ಆನಂದದಿಂ ಪುಟ್ಟಿದೆಲ್ಲಮುಂ ಬಾಳುಗುಂ ।
ಆನಂದವನೆ ಕುರಿತು ಪೋಗುತಲಿ ಪುಗುಗುಂ ॥

ಲೋಕೋ ಭಿನ್ನರುಚಿಃ

ಆಧುನಿಕ ಕನ್ನಡ ಸಾಹಿತ್ಯ ಪ್ರವರ್ತಕರಲ್ಲಿ ಒಬ್ಬರು ಡಿ ವಿ ಜಿ ಯವರು. 19ನೆಯ ಶತಮಾನದ ಸಾಹಿತ್ಯಕ್ಕೂ 20ನೆಯ ಶತಮಾನದ ಸಾಹಿತ್ಯಕ್ಕೂ ಒಂದು ಸೇತುವೆಯಂತಿದ್ದಾರೆ ಎಂದರೂ ಸಲ್ಲುತ್ತದೆ. ಆದ್ದರಿಂದ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅವರ ಸ್ಥಾನ ಮುಖ್ಯವಾದದ್ದು, ವಿಶಿಷ್ಟವಾದದ್ದು. ಅವರನ್ನು ಸಾಹಿತ್ಯ ಚರಿತ್ರಕಾರರು ಮತ್ತು, ವಿಮರ್ಶಕರು ಮರೆಯುವಂತಿಲ್ಲ. ಅವರ ಕೃತಿಗಳನ್ನು ಕುರಿತು ಕೆಲವು ವಿದ್ವಾಂಸರು ಹೇಳಿರುವ ಮಾತುಗಳನ್ನು ಈ ಮುಂದೆ ನೋಡಬಹುದು :

"ರಾಜಕೀಯ ಹಾಗೂ ಸಾಹಿತ್ಯ ಇವು ಎರಡೂ ಪರಸ್ಪರ ಪೋಷಿತ ವಾಗಿವೆ. ಜೀವನದ ಕಲ್ಯಾಣವೇ ಎರಡಕ್ಕೂ ಗುರಿ. ಆದುದರಿಂದ ರಾಜಕೀಯ ಬೇರೆ ಸಾಹಿತ್ಯ ಬೇರೆ ಎನ್ನುವುದರಲ್ಲಿ ಯಾವ ಸತ್ಯಾಂಶವೂ ಇಲ್ಲ. ಮಹಾಸಾಹಿತಿ ಗಳು ಮಹಾ ರಾಜಕಾರಣಿಗಳಾದ ಉದಾಹರಣೆಗಳು ಸಾಕಷ್ಟು ಇವೆ. ಇಂಗ್ಲೆಂಡದ ಚರ್ಚಿಲ್, ಕನ್ನಡದ ಡಿ ವಿ ಜಿ–ಉದಾಹರಣೆಗೆ ಈ ಎರಡು ಹೆಸರು ಹೇಳಿದರೆ ಸಾಕು."— ಏಪ್ರಿಲ್ 1972ರಲ್ಲಿ ಸೊಲ್ಲಾಪುರದಲ್ಲಿ ನಡೆದ ಹೊರನಾಡ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಾಹಿತ್ಯ ಗೋಷ್ಠಿಯ ಅಧ್ಯಕ್ಷ ಭಾಷಣ ಮಾಡುತ್ತಾ ಕೃಷ್ಣಮೂರ್ತಿ ಪುರಾಣಿಕರು ಹೇಳಿದ ಮಾತುಗಳು. (ಕನ್ನಡ ನುಡಿ—1-5-1972)

ಡಾ॥ ಕೆ. ಕೃಷ್ಣಮೂರ್ತಿಯವರು : "Sri D V Gundappa's standard of classical beauty is almost Arnoldian, and to this day his work **Jeevana Soundarya Mattu Sahitya** and **Sahitya Sakti** represent some of the best Kannada thought we have on fundamental criticism." (The State of Literary Criticism in Kannada : in 'Kannada Studies' January 1965)

"ಡಿ ವಿ ಜಿ ಕನ್ನಡದ ಕೆಲವೇ ಮೇಧಾವಿಗಳಲ್ಲೊಬ್ಬರಾಗಿದ್ದಾರೆ. ಸಾಹಿತ್ಯವಲ್ಲದೆ ತತ್ತ್ವಜ್ಞಾನ, ರಾಜಕಾರಣ, ಸಮಾಜಶಾಸ್ತ್ರಗಳೂ ಇವರ ಮೆಚ್ಚಿಕೆಯ ವಿಷಯಗಳಾಗಿವೆ. ಆದ್ದರಿಂದ ಆಯಾ ಕ್ಷೇತ್ರಗಳಲ್ಲಿಯ ತಿಳಿವಳಿಕೆ ಯನ್ನು ಅವರ ಸಾಹಿತ್ಯ ವಿಮರ್ಶೆಯಲ್ಲೂ ತಂದರು. ರಾಜಕೀಯದಲ್ಲಿ ಇವರು

ಗೋಖಲೆ ಸಂಪ್ರದಾಯದವರಾದ್ದರಿಂದ ಶಿಕ್ಷಣ ಮನುಷ್ಯನ ಸಂಸ್ಕೃತಿಗೆ ಅವಶ್ಯವಾದ ಸಾಧನವೆಂದು ನಂಬಿದವರು. ಸಾಹಿತ್ಯ ಕೂಡ ಇವರಿಗೆ ಶಿಕ್ಷಣದ ಒಂದು ಅಂಗವಾಗಿದೆ. ಸಾಹಿತ್ಯದಲ್ಲಿಯಂತೆ ವಿಮರ್ಶೆಯಲ್ಲಿಯೂ ಇವರದು ಮಾರ್ಗ ಸಂಪ್ರದಾಯ. (classicism)ವಾಗಿದೆ. ಸಾಹಿತ್ಯದ ಸ್ವರೂಪವನ್ನು ಕುರಿತು ಇವರು ಕೊಟ್ಟಿರುವ ವಿವೇಚನೆಯೆಲ್ಲ ಈ ಬಗೆಯದಾಗಿದೆ. ....ಅದನ್ನು ಕಾವ್ಯ ಶಾಸ್ತ್ರವೆಂದು ಕರೆಯಬಹುದು. ....ಅದು ಕೇವಲ ಸುಸಂಗತವಾದ ಶಾಸ್ತ್ರವಾಗಿರುವುದರಿಂದ ಅದಕ್ಕೆ ಕ್ರಿಯಾಶೀಲತೆ ಇರುವುದಿಲ್ಲ. ಡಿ ವಿ ಜಿ ಯವರ ವಿಮರ್ಶೆ ಕೇವಲ ಶಾಸ್ತ್ರವಾಗಿಯೇ ಇದೆ. ಅದಕ್ಕೆ ಕಾರಣ ಅದು ಯಾವ ಜೀವಂತ ಸಾಹಿತ್ಯದೊಂದಿಗೂ ಸಂಬಂಧವನ್ನಿಟ್ಟುಕೊಂಡಿಲ್ಲವೆಂಬುದೇ ಆಗಿದೆ. ....ಜೀವನಾನುಭವವಿಲ್ಲದ ಸಾಹಿತ್ಯದಂತೆ ಸಾಹಿತ್ಯಾನುಭವವಿಲ್ಲದ ವಿಮರ್ಶೆ ಹೊಸ ಸತ್ಯಗಳನ್ನು ಗೋಚರಿಸಲಾರದು. ....ಡಿ ವಿ ಜಿ ಯವರು ಯಾವ ಸಾಹಿತ್ಯವನ್ನಾದರೂ ತಳಹದಿಗಿಟ್ಟುಕೊಂಡಿದ್ದರೆ ಈ ತತ್ತ್ವಗಳೆಲ್ಲ ಅರ್ಥಪೂರ್ಣವಾಗುತ್ತಿದ್ದುವು. ಈಗ ಅವು ಕೇವಲ ಅಮೂರ್ತವಾಗಿ ಉಳಿದಿವೆ. ಅವರು ಪ್ರಾಯೋಗಿಕ ವಿಮರ್ಶೆಯನ್ನು ಬರೆದಿದ್ದಾರೆ. 'ಉಮರನ ಒಸಗೆ' ಹಾಗೂ 'ಮಾಕ್‌ಬೆತ್' ನಾಟಕಗಳಿಗೆ ಬರೆದ ಮುನ್ನುಡಿಗಳು, ಅಲ್ಲದೆ ಬೇರೆಯವರ ಗ್ರಂಥಗಳಿಗೆ ಬರೆದ ಮುನ್ನುಡಿಗಳು ಅವರ ವಿಮರ್ಶಕ ಪ್ರತಿಭೆಗೆ ಸಾಕ್ಷಿಯಾಗಿವೆ. ಕನ್ನಡದಲ್ಲಿ ಅಂಥ ಬೆಲೆಯುಳ್ಳ ಲೇಖನಗಳು ಅಪರೂಪವೆಂದೇ ಹೇಳಬಹುದು. ಆದರೆ ಆ ಲೇಖನಗಳಿಗೂ ಈ ತತ್ತ್ವಗಳಿಗೂ ಜೀವಂತವಾದ ಸಂಬಂಧವಿಲ್ಲ.

"ಆದರೆ ಒಂದು ಮಾತು ಮಾತ್ರ ನಿಜ. ಡಿ ವಿ ಜಿ ಯವರ ವಿಮರ್ಶೆಯ ಸ್ವರೂಪ ತಾತ್ವಿಕವಾದದ್ದು. ಉತ್ತಮ ಕಾವ್ಯ ಮನುಷ್ಯನ ಅಂತರಂಗದ ಮೇಲೆ ಯಾವ ಪ್ರಭಾವವನ್ನು ಬೀರಬಹುದು, ಅದನ್ನು ವಿವೇಚನ ಶಕ್ತಿಯುಳ್ಳವನು ಹೇಗೆ ತನ್ನ ಲಾಭಕ್ಕೆ ತಿರುಗಿಸಿಕೊಳ್ಳಬಹುದೆಂಬುದರ ಬಗ್ಗೆ ಅವರ ಆಲೋಚಗಳೆಲ್ಲ ಗಂಭೀರವಾಗಿವೆ. ಅವುಗಳಿಂದ ಪ್ರಯೋಜನವಿಲ್ಲದೆಯೂ ಇಲ್ಲ. ಸಾಹಿತ್ಯದ ಭಾವಾತಿರೇಕ, ಉತ್ಸಾಹಾತಿರೇಕಗಳನ್ನು ಇಂಥ ವಿಮರ್ಶೆಯಿಂದ ಸರಿಪಡಿಸಬಹುದಾಗಿದೆ. ಹೊಸತನದ ಉತ್ಸಾಹದಲ್ಲಿ ಪ್ರಯೋಗಗಳ ಹಂಬಲದಲ್ಲಿ ಅಥವಾ ವೈಚಾರಿಕ ವಿಪ್ಲವಗಳಲ್ಲಿ ಒಮ್ಮೊಮ್ಮೆ ಸಾಹಿತ್ಯ ತನ್ನ ಮೂಲ ಸ್ವರೂಪವನ್ನು ಮರೆತುಬಿಡುತ್ತದೆ. ಅಂಥ ಹೊತ್ತಿನಲ್ಲೆಲ್ಲ ಸಾಹಿತ್ಯದ ಮೂಲಭೂತವಾದ, ಸಾರ್ವಕಾಲಿಕವಾದ ತತ್ತ್ವಗಳ ಅನುಸಂಧಾನ ನಡೆಯಬೇಕಾ

ದದ್ದು ಅವಶ್ಯವಾಗಿದೆ. ಈ ಸಂದರ್ಭದಲ್ಲಿ ಇನ್ನೊಂದು ಮಾತನ್ನೂ ಹೇಳಿ ಬಿಡಬಹುದಾಗಿದೆ. ಸಮರ್ಥವಾದ ಗದ್ಯಶೈಲಿಯ ಉದಾಹರಣೆಗಳೆಂದು ಡಿ ವಿ ಜಿ ಯವರ ಲೇಖನಗಳು ಬಹುಕಾಲ ಉಳಿಯಬಲ್ಲವುಗಳಾಗಿವೆ. ಸ್ಪಷ್ಟ ವಾದ, ತಿಳಿಯಾದ ವಿಚಾರಸರಣಿ, ಯುಕ್ತವಾದ ಖಚಿತವಾದ ಪರಿಭಾಷೆ, ಸುಂದರವಾದ ದೃಷ್ಟಾಂತಗಳು ಇವುಗಳಿಂದ ಕಂಗೊಳಿಸುವ ಅವರ ಲೇಖನ ಗಳೆಲ್ಲ ಸತ್ವಯುತವಾಗಿವೆ. ಮಿತಭಾಷೆ ಅವರ ಶೈಲಿಯ ಮುಖ್ಯ ಲಕ್ಷಣ ವಾಗಿದೆಯಲ್ಲದೆ, ವಿಮರ್ಶೆಯ ಸಾಮತಿಗಳು (Critical generalisations) ವಿಪುಲವಾಗಿ ದೊರೆಯುವದು ಅವರೊಬ್ಬರಲ್ಲಿಯೇ ಎಂದು ಹೇಳಿದರೆ ತಪ್ಪಾಗ ಲಾರದು." — ಎಂದು 'ನಡೆದು ಬಂದ ದಾರಿ' ಯ ಮೂರನೆಯ ಸಂಪುಟ ತಿಳಿಸುತ್ತದೆ.

"ಡಿ ವಿ ಜಿ ನಮ್ಮ ಧೀಮಂತ ಕವಿಗಳಲ್ಲೊಬ್ಬರಾಗಿದ್ದಾರೆ. ಇವರ 'ನಿವೇದನೆ' ಯಂಥ ಮೊದಲಿನ ಸಂಗ್ರಹದಲ್ಲಿಯ ಕವಿತೆಗಳು ಹಳೆಯ ಜಾಡನ್ನು ಹಿಡಿದು ಬರೆದವುಗಳಾಗಿವೆ. ಡಿ ವಿ ಜಿ ಯವರು ಪ್ರಮುಖವಾಗಿ ಮೇಧಾವಿ ಗಳು. 'ವನಸುಮ' ದಂಥ ಭಕ್ತಿಗೀತಗಳಲ್ಲಿ ಕೂಡ ಬುದ್ಧಿಗ್ರಾಹ್ಯವಾದ ಅನುಭವವನ್ನು ಮಾತ್ರ ನೋಡುತ್ತೇವೆ. ಆದರೆ ಹೀಗಿದ್ದೂ 'ಮಂಕುತಿಮ್ಮನ ಕಗ್ಗ' ವೊಂದನ್ನು ಬಿಟ್ಟರೆ ಉಳಿದ ಯಾವ ಕವಿತೆಯಲ್ಲಿಯೂ ಅವರು ಒಂದು ಮಹತ್ವ ವಿಚಾರ ಪ್ರಣಾಲಿಯನ್ನು ಹೇಳುವ ಪ್ರಯತ್ನ ಮಾಡಲಿಲ್ಲ. 'ಬೇಲೂರಿನ ಶಿಲಾಬಾಲಿಕೆಯರು' ಎಂಬ ಕವಿತೆ ಸೌಂದರ್ಯ ಮೀಮಾಂಸೆ ಯನ್ನು ಹೇಳ ಹೊರಟದ್ದು. ಆದರೆ 'ಶ್ರುತಗಾನಮಭಿರಾಮಮಾದೊಡ ಶ್ರುತಗಾನ ಮಭಿರಾಮ ತರಮಪ್ಪುದು" ಎಂಬ ಸಾಲನ್ನು ಓದಿದಾಗ ಮೊದಲಿನ ವಾಗ್ವೈಭವವೆಲ್ಲ ವ್ಯರ್ಥವಾಯಿತಲ್ಲ ಎಂದೆನಿಸುತ್ತದೆ. ಇಡೀ ಕವಿತೆಯೇ ಕಾವ್ಯೋದ್ದೇಶವನ್ನು ಪ್ರಕಟಿಸಲು ಜನ್ಮತಾಳಿದಂತಿರಬೇಕು. ಕೀಟ್ಸ್ ಕವಿಯ ಆ ತತ್ತ್ವವನ್ನು ಹೇಳಲು ಗ್ರೀಸದ ಸಂಗಮರವರಿ ಪಾತ್ರೆಯಿರುವಾಗ ಬೇಲೂರಿನ ಶಿಲಾಬಾಲಿಕೆಯರೇಕೆ ಬೇಕೋ ತಿಳಿಯದಾಗುತ್ತದೆ. 'ಉಮರನ ಒಸಗೆ' ಡಿ ವಿ ಜಿ ಯವರ ಇನ್ನೊಂದು ಬುದ್ಧಿವಂತಿಕೆಯ ಪ್ರಯತ್ನ. ಅದರ ಸತ್ವಪೂರ್ಣವಾದ ಪೀಠಿಕೆಯನ್ನೋದಿ ಆಮೇಲೆ ಕಾವ್ಯವನ್ನೋದಿದಾಗ ನಿರಾಶೆ ಯಾಗುತ್ತದೆ. ಉಮರ್ ಖಯ್ಯಾಮ್ ತತ್ತ್ವಜ್ಞಾನಿಯಾಗಿದ್ದಂತೆಯೇ ಕವಿಯೂ ಆಗಿದ್ದನೆನ್ನುವ ಮಾತನ್ನು ಡಿ ವಿ ಜಿ ಯವರ ವಿಮರ್ಶೆ ಒಪ್ಪಿದರೂ, ಅವರ ಭಾಷಾಂತರ ಆ ಕಾವ್ಯವನ್ನು ಹಿಡಿಯಲಿಲ್ಲ. 'ಮಂಕುತಿಮ್ಮನ ಕಗ್ಗ'ದಲ್ಲಿ

ಡಿ ವಿ ಜಿ ಯವರು ತಮ್ಮ ಜೀವನದ ವಿಚಾರ ಅನುಭವಗಳನ್ನು ಎರಕ ಹೊಯ್ದಿದ್ದಾರೆ. ಆ ದೃಷ್ಟಿಯಿಂದ ಅದು ಮಹತ್ವಪೂರ್ಣವಾಗಿದೆ. ಇಡೀ ಕಾವ್ಯ ಸುಭಾಷಿತಗಳ ಭಾಂಡಾರವಾಗಿದೆ. ಜೀವನ, ನಿಸರ್ಗ, ರಾಜಕಾರಣ, ದೈವಲೀಲೆ, ಬದುಕಿನ ವಿಷಮತೆ, ಸೌಂದರ್ಯ ದರ್ಶನ ಹೀಗೆ ಅನೇಕ ವಿಚಾರಗಳು ರೂಪ ತಾಳಿವೆ. ಆದರೆ ಇಲ್ಲಿಯೂ ಅದೇ ತೊಂದರೆ ಉದ್ಭವಿಸುತ್ತದೆ. ವಿಚಾರಗಳು ಒಮ್ಮೊಮ್ಮೆ ಕಾವ್ಯವಾಗಿ ಮೂಡುವುದಿಲ್ಲ. ಕೆಲವು ಉಪಮೆ ರೂಪಕಗಳು ಬಹಳ ಉಚಿತವಾಗಿವೆ; ವಾದಸರಣಿಗೂ ತಲೆದೂಗುವಂತಾಗುತ್ತದೆ; ವಿಚಾರಗಳು ಸ್ಫುಟವಾಗಿವೆ. ಆದರೆ ಇವೆಲ್ಲ ಅವಸ್ಥಾಂತರವನ್ನು ಪಡೆಯುವದಿಲ್ಲ. ಕೊನೆಯದಾಗಿ ಡಿ ವಿ ಜಿ ಯವರ "ಅಂತಃಪುರ ಗೀತಗಳು" ಬೇಲೂರಿನ ಶಿಲಾಬಾಲಿಕೆಯರ ಹಾಗೂ ಚೆನ್ನಕೇಶವ ದೇವಾಲಯದ ವರ್ಣನೆಯ ಗೀತಗಳಾಗಿವೆ. ಕಾವ್ಯದ ರಚನೆ ಜಯದೇವನ 'ಗೀತ ಗೋವಿಂದ'ದಂತೆ ಗೀತ ಪ್ರಬಂಧವಾಗಿದೆ. ಆದರೆ ಕವನಗಳು ಭಾವೋದ್ದೀಪನ ಮಾಡುವದಿಲ್ಲ. ಶಾಸ್ತ್ರ ಶುದ್ಧವಾದ ಲಯ ಹಾಗೂ ಲಲಿತ ಭಾಷೆಗಳು ಮಾತ್ರ ಮನಸೆಳೆಯುತ್ತವೆ."

—"ನಡೆದು ಬಂದ ದಾರಿ"ಯ ಎರಡನೆಯ ಸಂಪುಟ ಹೇಳುವ ಮಾತುಗಳು ಇವು.

ರಂ ಶ್ರೀ ಮುಗಳಿಯವರು: "ಕನ್ನಡ ವಿಮರ್ಶೆಗೆ ಶಾಸ್ತ್ರೀಯ ತಳಹದಿಯನ್ನು ಹಾಕಿಕೊಟ್ಟ ಗ್ರಂಥಗಳಲ್ಲಿ ಡಿ ವಿ ಜಿ ಯವರ 'ಜೀವನ ಸೌಂದರ್ಯ ಮತ್ತು ಸಾಹಿತ್ಯ' ಇದಕ್ಕೆ ಅಗ್ರಸ್ಥಾನ ಸಲ್ಲಬೇಕು. ಬೇರೆಬೇರೆ ಉಪನ್ಯಾಸಗಳು ಒಟ್ಟುಸೇರಿ ಈ ಗ್ರಂಥದಲ್ಲಿ ಪ್ರಕಟವಾಗಿದ್ದರೂ ಪೂರ್ವ–ಪಶ್ಚಿಮ ದೃಷ್ಟಿಕೋನಗಳನ್ನು ಅರಿತುಕೊಂಡ ಸಂಸ್ಕೃತ ಮನವು ವಿಮರ್ಶೆಯ ವಿಷಯಗಳನ್ನು ನಿರ್ದಿಷ್ಟವಾಗಿ ಕಂಡುಹಿಡಿಯಲು ಇಲ್ಲಿ ಪ್ರಯತ್ನಿಸಿರುತ್ತದೆ. ಹೊಸ ಕಾಲಕ್ಕೆ ಅನುಸರಿಸಿ ಸಾಹಿತ್ಯ ಮತ್ತು ವಿಜ್ಞಾನ, ಸಾಹಿತ್ಯ ಮತ್ತು ಜನಜೀವನ ಈ ವಿಷಯವಾಗಿ ಇಲ್ಲಿ ವಿಸ್ತಾರವಾದ ಪ್ರಬಂಧಗಳಿವೆ. ಸೌಂದರ್ಯದ ಸ್ವರೂಪವನ್ನು ವಿವರವಾಗಿ ಚರ್ಚಿಸಿರುವ 'ಸೌಂದರ್ಯ ಸಂಹಿತೆ' ಎಂಬ ಲೇಖನವು ಕನ್ನಡಕ್ಕೆ ಮೊದಲನೆಯದಾಗಿ ಇಲ್ಲಿ ಬಂದಿದೆ" ಎಂದು "ಕನ್ನಡ ನುಡಿಯ" "ಬೆಳ್ಳಿಯ ಸಂಚಿಕೆ"ಯಲ್ಲಿ ಬರೆದರು.

"ತಮ್ಮ ವಿಚಾರ ಮಂಥನದಿಂದ ಹುಟ್ಟಿದ ಒಂದು ಹೊಸ ಶಕ್ತಿಯನ್ನು, ಹೊಸ ಬೆಳಕನ್ನು ಸಾಹಿತ್ಯದ ಮೇಲೆ ಚೆಲ್ಲುವಂತಿದ್ದರೆ ಮಾತ್ರ ಶ್ರೀ ಡಿ ವಿ ಜಿ ಯವರು ಲೇಖನಿಯನ್ನು ಕೈಗೆ ತೆಗೆದುಕೊಂಡಾರು. ಚರ್ವಿತ ಚರ್ವಣವಾಗಲಿ,

ಎರವಲು ತಂದು ತೇಪೆ ಹಚ್ಚುವ ಕೆಲಸವಾಗಲಿ ಆ ಚೈತನ್ಯಕ್ಕೆ ಒಗ್ಗತಕ್ಕದ್ದಲ್ಲ" ಎಂದು ಎಸ್. ರಂಗನಾಥ ಶರ್ಮಾ ಅವರು ಅಭಿಪ್ರಾಯಪಟ್ಟಿದ್ದಾರೆ.

"ಶ್ರೀ ಗುಂಡಪ್ಪನವರು ತಾತ್ತ್ವಿಕ ವಿವೇಚನೆಯ ದೃಷ್ಟಿಯಿಂದ ಗಣ್ಯರಾದ ಕವಿ. ಅವರ 'ಮಂಕುತಿಮ್ಮನ ಕಗ್ಗ' ಕನ್ನಡದಲ್ಲಿ ಅತಿ ವಿಶಿಷ್ಟವಾದ ತಾತ್ತ್ವಿಕ ಚಿಂತನಕೃತಿ. ಹಾಗೆಯೇ ಅವರ 'ಶ್ರೀರಾಮ ಪರೀಕ್ಷಣಂ' ಬೌದ್ಧಿಕವಾದ ಕೃತಿ. ರಾಮಾಯಣವನ್ನು ಅರಿತುಕೊಳ್ಳಲು ಇವರ ಈ ಕೃತಿಯ ತತ್ತ್ವದೃಷ್ಟಿ ಸಹಾಯಕವೂ ಆಗುತ್ತದೆ. ಆದರೆ ಈ ತಾತ್ತ್ವಿಕತೆ ಬುದ್ಧಿಪ್ರಧಾನವಾದದ್ದು ಎಂಬುದನ್ನು ಮರೆಯುವಂತಿಲ್ಲ. ಅಹಲ್ಯೆಯ ಪ್ರಶ್ನೆ ಎನ್ನುವ ಭಾಗವನ್ನು ಶ್ರೀ ಪು. ತಿ. ನರಸಿಂಹಚಾರ್ಯರ 'ಅಹಲ್ಯೆ' ಗೀತ ನಾಟಕದ ಜೊತೆಯಲ್ಲಿ ಹೋಲಿಸಿ ನೋಡಿದರೆ ಈ ಅಂಶ ತಿಳಿಯುತ್ತದೆ. ರಾಮಪಾದಸ್ಪರ್ಶದಿಂದ ವಿಮೋಚನೆಗೊಂಡ ಅಹಲ್ಯೆಪಡುವ ಸೂಕ್ಷ್ಮತಮ, ತೀವ್ರತಮವಾದ ಆನಂದ ವನ್ನೂ ಗಾಳಿಯಾಗಲೆಯುವ ಪರಿತಾಪದಗ್ಧ ಅಹಲ್ಯೆಯ ಕಟ್ಟಳಲನ್ನೂ ಅಹಲ್ಯೆ ಗೀತ ನಾಟಕ ಮರ್ಮಸ್ಪರ್ಶಿಯಾಗಿ ಚಿತ್ರಿಸಿದೆ. 'ನೆನೆದೆಡೆ ಮೈಲಿಗೆ ಯಾದನೆ' ಎಂದು ಕಟ್ಟಳಲುವ ಗೀತರೂಪಕದ ಅಹಲ್ಯೆ ಬಿಡುಗಡೆಗೊಂಡು ಶ್ರೀರಾಮನನ್ನೂ, ಪ್ರಸನ್ನ ಮನಸ್ಕನಾದ ತನ್ನ ಪತಿಯನ್ನೂ ಕಂಡಾಗ ಹಾಡುವ ಹೃದಯ ಸ್ಪರ್ಶಿಯಾದ ಸರ್ವೇಂದ್ರಿಯ ಸ್ಪರ್ಶಿಯಾದ ಹಾಡು ಹೀಗಿದೆ:

ಬಯಸುವೆನಾ ಗಂಗೆಯ ತೆರ ಪದದಿ ಕರಿಗಿ ಹರಿಯೆ
ಇಲ್ಲದಿರಲು ಹಗುರವಾಗಿ ಕಂಪಿನಂತೆ ಸರಿಯೆ.
ಮೈಯೆ ಭಾರ ಮನವೆ ಭಾರ ಬದುಕೆ ಭಾರವೆಂಬ
ಆಸರೆಯೆ ಬೇಡದಂಥ ನಲವೆ ನನ್ನ ತುಂಬ.

ಆದರೆ ಶ್ರೀರಾಮಪರೀಕ್ಷಣದ ಅಹಲ್ಯೆ ಆ ಗಳಿಗೆಯಲ್ಲೇ, ಆ ಆನಂದ ಮುಹೂರ್ತದಲ್ಲೇ ನ್ಯಾಯವಾದಿಯಾಗುತ್ತಾಳೆ. ತನ್ನ ಪತನಕ್ಕೆ ಕಾರಣ ವನ್ನು ವಿಶ್ಲೇಷಿಸುತ್ತಾ, ಒಂದರ್ಥದಲ್ಲಿ ಪ್ರತಿಪಾದನೆ ಮಾಡಿಕೊಳ್ಳುವುದು ಎಂಥ ರಸಾಭಾಸ ತತ್ತ್ವಾಭಾಸ ಪ್ರಸಂಗ.

ಡಿ ವಿ ಜಿ ಯವರಿಗೆ ನ್ಯಾಯವಿದರ ಕುಶಾಗ್ರಬುದ್ಧಿಯಿದೆ; ವಾದ ಪ್ರತಿ ವಾದನ ಶಕ್ತಿಯಿದೆ. ಇದನ್ನು 'ಶ್ರೀರಾಮ ಪರೀಕ್ಷಣಂ' ಕೃತಿಗಿಂತ ಹೆಚ್ಚಾಗಿ 'ಮಂಕುತಿಮ್ಮನ ಕಗ್ಗ'ದಲ್ಲಿ ಕಾಣಬಹುದು. ಈ ಗ್ರಂಥ ಒಂದೇ ನಿಟ್ಟಿನಿಂದ ಓದಿದ ಯಾರನ್ನೂ ದಿಗಿಲು ಪಡಿಸುವ ಸಾಮರ್ಥ್ಯವುಳ್ಳದ್ದು. ಶ್ರೀ ಕುವೆಂಪು

ಅಂತಹವರೂ ಇದರ ವಿಸ್ತೃತ ತತ್ತ್ವಕ್ಕೆ ಬೆಕ್ಕಸಗೊಂಡುದುಂಟು. ಈ ಅಚ್ಚರಿ ಯಾರಿಗೂ ಸಹಜ. ಆದರೆ ಸಾವಧಾನದ ವಿಮರ್ಶೆಗೆ ಬೆಕ್ಕಸ ಬಾಡುವು ದುಂಟು. ಈ ಕೃತಿಯಲ್ಲಿ ಬರುವ ತತ್ತ್ವದೃಷ್ಟಿಯ ಹರಹು ಶ್ಲಾಘ್ಯವಾದದ್ದು. ಒಂದೊಂದು ತತ್ತ್ವದೃಷ್ಟಿಗೂ ಒಂದೊಂದು ಪದ್ಯ ಮೈಗೊಟ್ಟಿದೆ. ಆದರೆ ಈ ತತ್ತ್ವ ಅನುಭವದ ಹೋರಾಟದ ಫಲವಾಗಿ ಬರುತ್ತದೆಯೇ, ಅಥವಾ ಪೂರ್ವನಿರ್ಣಯವಾಗಿ ಬರುತ್ತದೆಯೆ, ಗಮನಿಸಬೇಕು. ಹರಿದಾಸರು ತಮ್ಮ ಹಾಡುಗಳ ಪಲ್ಲವಿಯಲ್ಲಿ ಒಂದು ತತ್ತ್ವವನ್ನು ಅಥವಾ ಅನುಭವವನ್ನು ನಿರೂಪಿಸಿ ಆಮೇಲೆ ಅದನ್ನು ಮುಂದಿನ ಪಂಕ್ತಿಗಳಲ್ಲಿ ಪ್ರತಿಪಾದಿಸುವ ರೀತಿ ಯನ್ನಿಲ್ಲಿ ನೆನೆದುಕೊಳ್ಳಬೇಕು. ಈ ದೃಷ್ಟಿಯಿಂದಲೂ ವಚನಕಾರರು ಬೇರಾಗಿ ನಿಲ್ಲುತ್ತಾರೆ. ಅವರಲ್ಲಿ ವ್ಯಕ್ತವಾಗುವ ತತ್ತ್ವ ಸಾಮಾನ್ಯವಾಗಿ ಅನುಭವ ಮಥಿತವಾಗಿ ಬೆಣ್ಣೆಗೊಂಡು ಬರುತ್ತದೆ. ಸರ್ವಜ್ಞನಂತಹವನಲ್ಲೂ ಈ ವಚನಕಾರರ ಗುಣ ಅಷ್ಟಾಗಿ ದೃಢವಾಗಿ ಕಾಣುವುದಿಲ್ಲ. ಮಂಕು ತಿಮ್ಮನ ಕಗ್ಗದ ಬಗ್ಗೆಯಾದರೂ ಬೇರೆಂದು ಹೇಳಬರುವುದಿಲ್ಲ. ಇಷ್ಟೆಲ್ಲ ತತ್ತ್ವವ್ಯಾಪ್ತಿಯುಳ್ಳ ಕವಿಯ ಸ್ವಂತ ದರ್ಶನವಾದರೂ ಏನು ಎಂಬ ಪ್ರಶ್ನೆ ಬರುತ್ತದೆ. ಅದನ್ನು ಈ ಕೃತಿಯಲ್ಲಿ ತಿಳಿಯುವುದು ಕಷ್ಟ. ಹಾಗಾದರೆ ಅವರ ದೃಷ್ಟಿಯನ್ನು ಅನಂತಮುಖಿಯೆಂದು ಒಪ್ಪಿಕೊಳ್ಳಬೇಕಾಗುತ್ತದೆ. ಆದರೆ ಹಾಗೆ ಒಪ್ಪಿಕೊಳ್ಳುವುದು ಅಸಾಧುವಾಗುತ್ತದೆ. ಕವಿಯ ದೃಷ್ಟಿ ಕೇವಲ ಜೀವದೇಹ ಸಂಬಂಧವಾದದ್ದೇ ಅಲ್ಲ. ಅದು ಅವನ ಸಾಮಾಜಿಕ ರಾಜಕೀಯ ದೃಷ್ಟಿಯಲ್ಲೂ ಸಪ್ರಮಾಣದಲ್ಲಿ ವ್ಯಕ್ತವಾಗುತ್ತದೆ. ಅಲ್ಲಿ ಅವುಗಳ ವಿಸಂಗತಿಯಿದ್ದರೆ ಕವಿಯ ತಾತ್ತ್ವಿಕತೆಯಲ್ಲೆ ವಿಸಂಗತಿಯಿದೆ ಎನ್ನಬೇಕು. ಪಾರಲೌಕಿಕ ತತ್ತ್ವಸ್ತರದಲ್ಲಿ ತಾತ್ತ್ವಿಕವಾಗಿ ನಿರೀಶ್ವರವಾದಿಯಾದವನು ವಾಸ್ತವ ತತ್ತ್ವ ಚಿಂತನೆಯಲ್ಲಿ ರಾಜಕೀಯವಾಗಿ ರಾಜಭಕ್ತನಾಗಿದ್ದರೆ, ಅದ್ವೈತಿಯಾಗಿಯೂ ಜಾತಿಭೇದಗಳನ್ನು, ವರ್ಗಭೇದಗಳನ್ನು ಪ್ರತಿಪಾದಿಸು ವುದಾದರೆ ಆಗ ಅಂತಹ ಕವಿಯ ತಾತ್ತ್ವಿಕ ದೃಷ್ಟಿ ಅಖಂಡವಾದದ್ದಲ್ಲ ಎಂದು ತೀರ್ಮಾನಿಸಬೇಕಾಗುತ್ತದೆ. ಡಿ ವಿ ಜಿ ಯವರು ರಾಜಕೀಯವಾಗಿ ಪ್ರಜಾ ಪ್ರಭುತ್ವ ವೇಗವನ್ನು ಒಪ್ಪಿಕೊಳ್ಳಲು ಸಿದ್ಧರಿಲ್ಲ. ಸಾಮಾಜಿಕವಾಗಿ ಜಾತಿ ವರ್ಗ ಭೇದಗಳನ್ನೂ ದೃಢವಾಗಿ ಪ್ರತಿಪಾದಿಸುತ್ತಾರೆ. ಇಂತಹವರ ತಾತ್ತ್ವಿಕತೆ ಎಷ್ಟು ಅನಂತಮುಖಿಯಾದದ್ದು ಅಖಂಡವಾದದ್ದು ನಿರ್ಮಮ ಭಾವದಿಂದ ವಿವೇಚಿಸಬೇಕು. ಬಡಾವಣೆಯಲ್ಲಿ ಭಾರೀ ಸೌಧವನ್ನು ಆಧುನಿಕವಾಗಿ

ಕಟ್ಟಿಸಿಯೂ ಹಳೆಯ ಅಗ್ರಹಾರದ ಪಿತ್ರಾರ್ಜಿತವಾದ ಮನೆಯಲ್ಲೇ ವಾಸಿಸಿದ್ದರೆ ತಪ್ಪೇನೂ ಅಲ್ಲ! ಹೀಗೆನ್ನುವುದರಿಂದ ಕೃತಿಕಾರರ ವೈಯಕ್ತಿಕ ಜೀವನ ವನ್ನೇನೂ ಗಮನಿಸುವ ಅಶಿಷ್ಟ ಉದ್ಧಟತನಕ್ಕೆ ಕೈಹಾಕಿದಂತಾಗುವುದಿಲ್ಲ. ಆಲೋಚನೆಯ ಮಟ್ಟದಲ್ಲಿ,— ಪಾರಮಾರ್ಥಿಕ, ರಾಜಕೀಯ, ಸಾಮಾಜಿಕ ಆಲೋಚನೆಗಳ ಮಟ್ಟದಲ್ಲಿ — ವಿಸಂಗತಿ ಇರಬಾರದೆಂದಷ್ಟೆ ನನ್ನ ಕಳಕಳಿ: ಈ ಆಲೋಚನೆಯ ನಿಜ ಜೀವನದ ನಂಬಿಕೆಗಳಿಗೂ ಏನೆಂಥ ವಿಸಂಗತಿ ಇದ್ದರೂ ಅದು ನನ್ನ ವಿವೇಚನೆಯ ವಸ್ತುವಲ್ಲ."

— ಇದು ಶ್ರೀ "ಸುಜನಾ" ಅವರು "ತಾತ್ತ್ವಿಕ ಹಿನ್ನೆಲೆ : ನವೋದಯ ಕಾವ್ಯದಲ್ಲಿ" ಎಂಬ ಲೇಖನದಲ್ಲಿ ಹೇಳಿರುವ ಮಾತುಗಳು;"ಹೊಸಗನ್ನಡ ಕಾವ್ಯದ ಎರಡು ಮಾರ್ಗಗಳು" ಎಂಬ ಗ್ರಂಥದಲ್ಲಿ.

'ಹೊಸಗನ್ನಡ ಸಾಹಿತ್ಯ' ಎಂಬ ಗ್ರಂಥದಲ್ಲಿ ಎಲ್. ಎಸ್. ಶೇಷಗಿರಿ ರಾಯರು : "ಡಿ ವಿ ಜಿ ಯವರದು ಸಮರ್ಪಣ ಭಾವ. ಜೀವನವನ್ನು ಪರಮಾತ್ಮನ ಪ್ರಸಾದವೆಂದು ಸ್ವೀಕರಿಸಿದರು ಅವರು. (ಅವರ ವೈಯಕ್ತಿಕ ಜೀವನದಲ್ಲಿ ಬಡತನವನ್ನೂ ಕಷ್ಟವನ್ನೂ ಕಂಡಿದ್ದರು ಅವರು.) ಪ್ರಕಾಂಡಪಂಡಿತ ರಾಗಿದ್ದ ಅವರಿಗೆ ಹಿಂದಿನ ವೃತ್ತಗಳಲ್ಲಿ, ಕಂದ ಸೀಸ ಪದ್ಯಗಳಲ್ಲಿ ಒಲವು. ಡಿ ವಿ ಜಿ ಯವರ ಅತ್ಯಂತ ಜನಪ್ರಿಯ ಕೃತಿ 'ಮಂಕುತಿಮ್ಮನ ಕಗ್ಗ'. ಜೀವನ ವನ್ನು ಕುರಿತು ಇಷ್ಟು ಮುಖವಾದ, ಆವೇಶ ರಹಿತವಾದ ಚಿಂತನೆ ಒಂದೇ ಆಧುನಿಕ ಕನ್ನಡ ಕಾವ್ಯದಲ್ಲಿ ಲಭ್ಯವಾಗುವುದಿಲ್ಲ....ಇಲ್ಲಿನ ಚಿಂತನೆ, ಕೃತಿಯಲ್ಲಿ ರೂಪಗೊಂಡ ಅನುಭವದಿಂದ, ಜೀವನದ ಒತ್ತಡ-ಘರ್ಷಣೆಗಳಿಂದ ಮೂಡಿ ಬಂದುದಲ್ಲ ಎಂಬುದು ನಿಜ" ಎಂದು ಹೇಳಿ, ಅದೇ ಗ್ರಂಥದಲ್ಲಿ "ಒಬ್ಬ ವ್ಯಕ್ತಿ ಯನ್ನು ಕುರಿತು ಬರೆಯುವಾಗ ಭಾಷೆಯಲ್ಲಿ ಎಷ್ಟು ಲವಲವಿಕೆ ಮೂರ್ತತೆ, ಸ್ಫುಟತ್ವ ಇರಬಹುದು, ಕೆಲವೇ ವಾಕ್ಯಗಳಲ್ಲಿ ಇಡೀ ವ್ಯಕ್ತಿತ್ವವನ್ನು ಹೇಗೆ ಸೆರೆಹಿಡಿಯಬಹುದು" ಎಂಬುದಕ್ಕೆ ನಿದರ್ಶನವಾಗಿ, ಇಂದಿನ ಜೀವನ ಚರಿತ್ರೆಯ ಪ್ರಕಾರದಲ್ಲಿ ಕನ್ನಡ ಗದ್ಯ ಎಂತಹ ಕಳೆಯನ್ನೂ ಸ್ಫುಟತ್ವವನ್ನೂ ಪ್ರಸನ್ನತೆ ಯನ್ನೂ ಸಾಧಿಸಿದೆ ಎಂಬುದಕ್ಕೆ ನಿದರ್ಶನವಾಗಿ, ಡಿ ವಿ ಜಿ ಅಚ್ಯುತರಾಯ ರನ್ನು ಕುರಿತು ಹೇಳಿರುವ ವಾಕ್ಯಗಳನ್ನು ಉದಾಹರಿಸಿದ್ದಾರೆ.

ಕವಿಗಳು ಜಗತ್ತಿನ ಅನಭಿಷಿಕ್ತ ಪ್ರಭುಗಳು ಎಂದು ಹೇಳಿ, "ಸಾಹಿತ್ಯ ದಲ್ಲಿರುವ ಈ ಶಕ್ತಿಯನ್ನು ಕಂಡುಕೊಳ್ಳುವವರೆಗೂ ಕವಿಯಿಂದ ಏನೂ ಕೆಲಸವಾಗಲಾರದು. ಸಾಹಿತ್ಯದಲ್ಲಿರುವ ಶಕ್ತಿಯನ್ನು ಕಂಡುಕೊಳ್ಳುವುದಕ್ಕೆ

ಮುಂಚೆ ಕನಿಯಾಗಲಿಚ್ಛಿಸುವವನು, ತನ್ನ ಶಕ್ತಿಯನ್ನು ತಾನು ಕಂಡುಕೊಳ್ಳು ವುದವಶ್ಯಕ." 'ಜಗದ ಪೊಗಳಿಕೆಗೆ ಬಾಯ್' ಬಿಡದಿದ್ದರೂ ವನಸುಮದಲಿರು ವಂತೆ ಎನ್ನ ಜೀವನವನನುಗೊಳಿಸು ಹೇ ದೇವಾ "ಎಂದು ಪ್ರಾರ್ಥಿಸುವ ಕಾಲ ಆಗಿಹೋಯಿತು" ಎಂದಿದ್ದಾರೆ 'ಸಾಹಿತ್ಯ ಮತ್ತು ಜೀವನ' (1944) ಗ್ರಂಥದಲ್ಲಿ. ಅ. ನ. ಕೃ. ಅವರು ಡಿ ವಿ ಜಿ ಯವರ ಕೃತಿಗಳನ್ನು ಕುರಿತು ಹೇಳಿರುವ ಇನ್ನೂ ಕೆಲವು ಮಾತುಗಳನ್ನು ನೋಡೋಣ :

'ಗುಂಡಪ್ಪನವರ ಮತ್ತು ಆಲೂರ ವೆಂಕಟರಾಯರ ಕ್ಷಾತ್ರಗದ್ಯ. ಇವ ರಿಬ್ಬರ ಶೈಲಿ ಪರ್ವತ ಧಾರೆಯಂತೆ. ಅದು ಬರುವ ರಭಸಕ್ಕೆ ಹೃದಯ ಝಲ್ಲೆನ್ನುತ್ತದೆ. ಏನದು ರುದ್ರ ಸೌಂದರ್ಯ, ಏನದು ಘನ ಗಾಂಭೀರ್ಯ.' (ನನ್ನನ್ನು ನಾನೇ ಕಂಡೆ 1944).

"ಹಿಂದೆ ಪರಿಷತ್ತು ತಾನೇ ಈ (ಹಿಂದೀ) ಸಮಸ್ಯೆಯನ್ನು ಹುಟ್ಟಿಹಾಕಿತು. ಆಗ ಪರಿಷತ್ತಿನ ಉಪಾಧ್ಯಕ್ಷರಾಗಿದ್ದ ಶ್ರೀ ಡಿ. ವಿ. ಗುಂಡಪ್ಪನವರೂ ಪರಿಷ ತ್ಪತ್ರಿಕೆಯ ಸಂಪಾದಕರಾಗಿದ್ದ ಪ್ರೊ. ಎ. ಆರ್. ಕೃಷ್ಣಶಾಸ್ತ್ರಿಗಳೂ ಗಂಡು ಗಲಿಗಳಂತೆ ಕಾದಿದರು" (ನನ್ನನ್ನು ನಾನೇ ಕಂಡೆ).

"ಕನ್ನಡ ಸಂಸ್ಥೆಗಳು ಎಚ್ಚರಗೊಳ್ಳಬೇಕು. ಶ್ರೀ ಡಿ ವಿ ಗುಂಡಪ್ಪ ನವರು ಹೇಳಿದಂತೆ ಉತ್ಸಾಹ ಯುಗ ಮುಗಿಯಿತು. ಇದು ಕಾರ್ಯದೀಕ್ಷಾ ಯುಗ." (ನನ್ನನ್ನು ನಾನೇ ಕಂಡೆ).

" 'ವಿನೂತನ ಕವಿತೆ' ಯಾಗಿದ್ದ ಭಾವಗೀತೆಗೆ ಅತ್ಯವಶ್ಯವಾಗಿ ಬೇಕಾ ಗಿದ್ದ ಪಾಂಡಿತ್ಯದ ಹಿನ್ನೆಲೆ, ಭಾವಪುಷ್ಟಿ, ಅಭಿವ್ಯಕ್ತಿ ಕೌಶಲ್ಯ, ಛಂದೋ ಪ್ರಯೋಗ ಪ್ರಾವೀಣ್ಯತೆಗಳನ್ನೊದಗಿಸಿ ಕೊಟ್ಟವರು ಶ್ರೀ ಡಿ ವಿ ಗುಂಡಪ್ಪ ನವರು. ಇವರ 'ನಿವೇದನ' ಕೇವಲ ಕಾವ್ಯವಲ್ಲ. ಕವಿಗಳ ಕಾವ್ಯ. ಮಹಾ ಕಾವ್ಯದ ಅನೇಕ ಲಕ್ಷಣಗಳನ್ನೊಳಗೊಂಡಿರುವ ಈ ಸಣ್ಣ ಕೃತಿ ಕನ್ನಡ ಕಾವ್ಯ ಪ್ರಪಂಚದ ಒಂದು ಮೈಲಿಗಲ್ಲು. ಜೀವನದ ಸಮಸ್ತ ಆವಿಷ್ಕಾರವನ್ನು ಸುಪ್ತ ಹಾಗೂ ವ್ಯಕ್ತ ಸೌಂದರ್ಯವನ್ನೂ ಮಾನವನ ಹೃದಯಾಂತರಾಳದಲ್ಲಿ ನೆಲ ಸಿರುವ ಭಕ್ತಿಭಾವವನ್ನೂ ಕವಿ ಅನ್ಯಾದೃಶವಾಗಿ ವರ್ಣಿಸಿದ್ದಾರೆ. ಅವರ 'ಮಂಕುತಿಮ್ಮನ ಕಗ್ಗ' ಈ ಶತಮಾನದ ಅಮರ ಕೃತಿ. ಅನೇಕ ಜನ್ಮಗಳ ಅನುಭವ, ಪರಿಪಕ್ವ ವಿಚಾರಸರಣಿ, ಧ್ವನಿಪ್ರಧಾನವಾದ ನುಡಿ ಜಾಣ್ಮೆ, ಜೀವನದ ಸರ್ವದೋಷಗಳನ್ನರಿತು ಅದನ್ನು ಕೆಚ್ಚಿನಿಂದ ಎದುರಿಸಬಲ್ಲ ಧೀಶಕ್ತಿ ಈ ಮಹಾಕಾವ್ಯದಲ್ಲಿ ಲಾಸ್ಯವಾಡುತ್ತಿದೆ" (ಸಾಹಿತ್ಯ ಸಮಾರಾಧನ 1959).

'ಜೀವನ ಸೌಂದರ್ಯ ಮತ್ತು ಸಾಹಿತ್ಯ' ಗ್ರಂಥವನ್ನು ಪ್ರಕಟಿಸಿ ಶ್ರೀಮಾನ್ ಡಿ. ವಿ. ಗುಂಡಪ್ಪನವರು ಕನ್ನಡಿಗರಿಗೆ ಮಹೋಪಕಾರ ಮಾಡಿದ್ದಾರೆ. ಉಪಕಾರದ ಜತೆಗೆ ಅಂಜಿಕೆಯನ್ನೂ ಹುಟ್ಟಿಸಿದ್ದಾರೆ. ಸಾಹಿತ್ಯ ವಿಮರ್ಶೆ ಇಷ್ಟು ಕಠಿಣವಾದುದೇ—ಸಾಹಿತ್ಯ ವಿಮರ್ಶೆ ಮಾಡುವುದಕ್ಕೆ ಇಂತಹ ಪಾಂಡಿತ್ಯ, ವಾದಸರಣಿ, ತೂಕ ಬೇಕೇ—ಎಂದು ವಿಚಾರ ಮಾಡುವಂತೆ ಮಾಡಿದ್ದಾರೆ. ವಿಮರ್ಶೆಗೆ ಕೈ ಹಾಕುವವರು ಆ ಗ್ರಂಥವನ್ನು ಹಲವು ಸಾರಿ ಓದುವುದೊಳ್ಳೆಯದು."

"ಶ್ರೀ ಡಿ. ವಿ. ಗುಂಡಪ್ಪನವರು ತೋರಿದ ದಾರಿ ಹಿರಿಯ ದಾರಿ. ಅವರ ನೋಟದ ನಿಲುವು ಬಹಳ ಎತ್ತರದ್ದು. ಅದಕ್ಕೇ ಕನ್ನಡಿಗರು ಅವರ ಮಾರ್ಗವನ್ನು ಅನುಸರಿಸುವ ಪ್ರಯಾಸಕಾರ್ಯಕ್ಕೆ ಕೈ ಹಾಕಲಿಲ್ಲ."

"ಕನ್ನಡ ಸಾಹಿತ್ಯ ಏತಕ್ಕೆ ಸಾಕಷ್ಟು ಬೆಳೆದಿಲ್ಲ ಎಂದು ವಿವೇಚಿಸಿದರೆ ಹೊಳೆಯುವ ಸತ್ಯ 'ಶ್ರೀ ಗುಂಡಪ್ಪನವರಂಥ ವಿಮರ್ಶಕರು ಹೆಚ್ಚು ಬಂದಿಲ್ಲ' ವೆಂದು. ಎಲ್ಲಿ ಯೋಗ್ಯ ವಿಮರ್ಶೆ ಬೆಳೆಯುವುದೋ ಅಲ್ಲಿ ಉತ್ತಮ ಸಾಹಿತ್ಯ ಬೆಳೆಯುತ್ತದೆ. ನಿದರ್ಶನ ಬೇಕೆನ್ನುವವರು ಫ್ರೆಂಚ್ ಸಾಹಿತ್ಯ ಪರಾಮರ್ಶಿಸಿ ನೋಡಲಿ" (ಪೊರಕೆ : ಹದಿನಾರು ಹರಟೆಗಳು 1946).

'ಷೇಕ್ಸ್‌ಪಿಯರಿಗೆ ನಮಸ್ಕಾರ' ಗ್ರಂಥವನ್ನು 'ಕರ್ನಾಟಕ ಭಾರತಿ' (ಏಪ್ರಿಲ್ 1969) ಯಲ್ಲಿ ವಿಮರ್ಶೆಮಾಡುತ್ತ ಹಾ. ಮಾ. ನಾಯಕ ಅವರು "ಗ್ರಂಥಕ್ಕೆ ಹೆಸರು ಕೊಟ್ಟಿರುವ ಡಿ ವಿ ಜಿ ಅವರ ಲೇಖನ 'ಷೇಕ್ಸ್‌ಪಿಯರಿಗೆ ನಮಸ್ಕಾರ' ಮೊದಲನೆಯದು. ಇದರ ಮೊದಲನೆಯ ಭಾಗ ಸಾಹಿತ್ಯದ ಮಹತ್ವವನ್ನು ತಿಳಿಸುವ ನಾಟಕ. ಲೋಕದ ಮಹಾನಾಟಕಕಾರನಿಗೆ ನಾಟಕದ ಮೂಲಕವೇ ಗೌರವ ಸೂಚಿಸಲು ಡಿ ವಿ ಜಿ ದೃಢ ನಿರ್ಧಾರ ಮಾಡಿಕೊಂಡಂತೆ ಕಾಣುತ್ತದೆ. ಅವರು ಹೇಳಬಯಸಿದ ವಿಚಾರಕ್ಕೆ ಈ ಪೂರ್ವಪೀಠಿಕೆ ಅನವಶ್ಯಕ ಮಾತ್ರವಲ್ಲ, ಬಾಲಿಶವಾಗಿಯೂ ಕಾಣುತ್ತದೆ. ಅವರ 'ಜೀವನ ಸೌಂದರ್ಯ ಮತ್ತು ಸಾಹಿತ್ಯ' ಹಾಗೂ 'ಸಾಹಿತ್ಯ ಶಕ್ತಿ'ಗಳನ್ನು ಬಲ್ಲವರಿಗೆ ಇಲ್ಲಿ ಏನೂ ಇಲ್ಲ. ಕಾವ್ಯವು ಜೀವನ ಪರಾಮರ್ಶೆ, ಅದರಿಂದ ಜೀವದ ಉದ್ಧಾರ. ಅದು ಧರ್ಮಪ್ರಚೋದನೆ ಮಾಡುತ್ತದೆ. ಅದು ನೀತಿಸಾರ, 'ಷೇಕ್ಸ್‌ಪಿಯರ್ ಕವಿಯಿಂದ ನಮಗೆ ಆಗುವ ಉಪಕಾರ ಇಂಥಾದ್ದು' ಅಷ್ಟೆ."

ಆ ಗ್ರಂಥದಲ್ಲಿ (ಬೇರೊಬ್ಬರು) ಷೇಕ್ಸ್‌ಪಿಯರನ್ನು ಭಾಷಾಂತರಿಸಿರುವ ವಿಷಯವನ್ನು ಕುರಿತು ಹೇಳುತ್ತ ಅವರು : "ಇಲ್ಲಿ Out, out, brief

candle" ಎಂಬ ಮಾತುಗಳನ್ನು 'ಆರು,ಆರು, ಸಂಕ್ಷಿಪ್ತ ಮೊಂಬತ್ತಿಯೆ' ಎಂದು ಅನುವಾದಿಸಿರುವುದಂತೂ ಅತ್ಯಂತ ಹಾಸ್ಯಾಸ್ಪದವಾಗಿ ತೋರುತ್ತದೆ. ಮಾತುಗಳ ಬಳಕೆಯಲ್ಲಿ, ಸಂಯಮವಿಲ್ಲವೆಂಬ ಆಪಾದನೆಗೆ ಒಳಗಾಗಿರುವ ತಲೆಮಾರಿನ ಲೇಖಕರ ಗುಂಪಿಗೆ ಸೇರಿರುವ ಡಿ ವಿ ಜಿ ಅವರು ಇದೇ ಮಾತುಗಳನ್ನು ಹೀಗೆ ಅನುವಾದಿಸಿದ್ದಾರೆ.

"ನಂದು, ನಂದಲೆ ಸಣ್ಣ ಮಯಣ ಬತ್ತಿಯ ಸೊಡರೆ" (ಡಿ ವಿ ಜಿ ಮ್ಯಾಕ್‌ಬೆತ್ ಪು. 167) 'ಸಂಕ್ಷಿಪ್ತ ಮೊಂಬತ್ತಿ'ಗೂ 'ಸಣ್ಣ ಮಯಣ ಬತ್ತಿಯ ಸೊಡರಿ'ಗೂ ಇರುವ ವ್ಯತ್ಯಾಸವನ್ನು ಕುರಿತು ವ್ಯಾಖ್ಯೆ ಮಾಡುವ ಅಗತ್ಯವಿಲ್ಲ."—ಎಂದಿದ್ದಾರೆ.

ಡಿ ವಿ ಜಿ ಯವರ ಬರವಣಿಗೆಯನ್ನು ಕುರಿತು ಮಾಸ್ತಿಯವರ ಅಭಿಪ್ರಾಯ ಇದು: "ಶ್ರೀಮಾನ್ ದೇವನಹಳ್ಳಿ ಗುಂಡಪ್ಪನವರು ಎರಡು ಪದ್ಯ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಇವುಗಳಿಂದ ಇವರು ಹಳೆಯ ಹೊಸಸಂಪ್ರದಾಯಗಳ ಮಧ್ಯೆ ನಡೆಯುತ್ತಿದಾರೆಂದು ಕಾಣುತ್ತದೆ. ಇವರು ವೃತ್ತ ಕಂದಗಳನ್ನು ಪೂರ್ವದ ಕವಿಗಳಂತೆ ಬರೆಯಬಲ್ಲರು. ಸಂಸ್ಕೃತದಲ್ಲಿ ಒಳ್ಳೆಯ ಪಾಂಡಿತ್ಯವನ್ನು ಪಡೆದಿದ್ದಾರೆ. ಆದರೂ ಇವರಿಗೂ ಮನಸ್ಸು ಹೊಸ ರೀತಿಯ ವೃತ್ತಗಳ ಕಡೆ ಒಲಿಯುತ್ತದೆ. ಇವರು ಮಾಡಿರುವ ಕೆಲವು ಭಾಷಾಂತರಗಳೂ ಶ್ರೀಮಾನ್ ಶ್ರೀಕಂಠಯ್ಯನವರ ಭಾಷಾಂತರಗಳಂತೆ ಸ್ವತಂತ್ರ ಕವನಗಳಂತೆ ಕಾಣುತ್ತವೆ. ಇದರ ಕಾರಣ ಇವರಲ್ಲಿರುವ ಸಹಜ ಕವಿತಾಶಕ್ತಿ. ಈ ಶಕ್ತಿ ಇವರು ತೆಗೆದುಕೊಂಡ ಯಾವುದೇ ವಿಷಯಕ್ಕೂ ಕನ್ನಡದಲ್ಲಿ ಕವಿತೆಯ ಕಳೆಯನ್ನು ಕೊಡುತ್ತದೆ. ವೃತ್ತ, ಕಂದ, ಸೀಸಪದ್ಯಗಳಲ್ಲಿ ಬರೆದಾಗಲೂ ಇವರ ಕವಿತೆ ಸುಖವನ್ನು ಕೊಡುತ್ತದೆ. ಏಕೆಂದರೆ ಇವರ ಭಾವನೆ ಕೇವಲ ಕವಿಸಮಯದಿಂದ ಸ್ಫೂರ್ತಿಪಡೆದದ್ದಲ್ಲ. ವೃತ್ತ ಕಂದಗಳನ್ನು ಬಿಟ್ಟು ಬರೆದಾಗಲಂತೂ ಸಹಜವಾದ ಈ ಶಕ್ತಿಯೂ ವಿಸ್ತಾರವಾದ ಇವರ ಶಬ್ದಕೋಶವೂ ಇವರ ಕವಿತೆಗೆ ಒಂದು ಪ್ರವಾಹದ ರೂಪವನ್ನು ಕೊಡುತ್ತದೆ. ಕಾವೇರಿಯನ್ನು ವರ್ಣಿಸಿರುವ ಇವರ ಪದ್ಯವನ್ನು ಅನೇಕರು ಓದಿದಾರೆ.

"ಈ ಪದ್ಯವನ್ನು ನೋಡಿದರೆ ಗುಂಡಪ್ಪನವರು ಮಾತಿಗಾಗಿ ಹುಡುಕುವವರಲ್ಲವೆಂದು ಸ್ಪಷ್ಟವಾಗುತ್ತದೆ. ಇವರು ಕವನಕ್ಕೆ ಕುಳಿತರೆ ಇವರ ಪಕ್ಕದಲ್ಲಿ ಮಾತುಗಳ ಸಂತೆಯೊಂದು ನೆರೆದು ಒಂದೊಂದು ಮಾತೂ ನನ್ನನ್ನು ತೆಗೆದುಕೋ ನನ್ನನ್ನು ತೆಗೆದುಕೋ ಎಂದು ಇವರನ್ನು ಭಾಧಿಸುತ್ತದೆ ಎಂದು ತೋರುತ್ತದೆ.

ಇಷ್ಟು ಒತ್ತಾಗಿ ಬರುವ ಮಾತುಗಳಲ್ಲಿ ತಮ್ಮ ಅರ್ಥಕ್ಕೆ ಸರಿಯಾದ ಇನ್ನು ಯಾವುದೂ ಅಲ್ಲದ ಆ ಒಂದು ಮಾತನ್ನು ಆರಿಸಿಕೊಳ್ಳುವುದೂ ಇವರಿಗೆ ಬರುತ್ತದೆ. ಭಾವ ಬರಿಯ ವರ್ಣನೆಯದಲ್ಲದೆ ಹೃದಯದ ಆಳದಿಂದ ಬರುವ ಸಂದರ್ಭದಲ್ಲಿಯೂ ಇದೇ ಶಬ್ದಕೋಶದ ಐಶ್ವರ್ಯವೂ ಪದೌಚಿತ್ಯವೂ ಇವರ ಕವಿತೆಯಲ್ಲಿ ಒಂದು ವಿಲಕ್ಷಣ ಸೌಂದರ್ಯವನ್ನು ತರುತ್ತವೆ. ಇದಕ್ಕೆ ಉದಾಹರಣೆ "ಅರೆ ಮೂಕನಾಗಿಹೆನು" ಎಂದು ಮೊದಲಾಗುವ ಇವರ ಗೀತೆ. ಮಾನವ ಹೃದಯದ ಮೂಕ ಅಳಲಿಗೆ ಇದಕ್ಕಿಂತ ಚೆನ್ನಾಗಿ ರೂಪು ಬಂದಿರುವುದು ಪ್ರಾಯಶಃ ಎಲ್ಲಿಯೂ ಇರಲಾರದು" (ಆರಂಭದ ಆಂಗ್ಲ ಸಾಹಿತ್ಯ ಮತ್ತು ನಮ್ಮ ಹೊಸ ಸಾಹಿತ್ಯದ ಆರಂಭ).

"ಡಿ ವಿ ಜಿ ಯವರ ಸಾಹಿತ್ಯ ಕೃತಿಗಳು: ಒಂದು ಅಧ್ಯಯನ"(1988)ಎಂಬ ಗ್ರಂಥದಲ್ಲಿ ಡಿ ವಿ ಜಿ ಯವರ ಕೃತಿಗಳನ್ನು ವಿಸ್ತಾರವಾಗಿ ಅವಲೋಕನ ಮಾಡಿರುವ ಗುಂಡ್ಮಿ ಚಂದ್ರಶೇಖರ ಐತಾಳರು "ಕಾಡಿನಲ್ಲಿ ಸ್ವಚ್ಛಂದವಾಗಿ ವಿಹರಿಸುವ ಸಲಗದ ಶೈಲಿ ಡಿ ವಿ ಜಿ ಅವರದು. ಯಾರ ಅಂಕೆಶಂಕೆಗಳೂ ಅದಕ್ಕಿಲ್ಲ. ಅದು ನಡೆದಲ್ಲೆಲ್ಲ ಒಂದೊಂದು ಮಾರ್ಗನಿರ್ಮಾಣ. "ಆನೆ ನಡೆದುದೇ ಬೀದಿ" ಎಂಬಂತೆ ಡಿ ವಿ ಜಿ ಬರೆದುದೆಲ್ಲ ಬಂಗಾರವಾಯಿತು. ಏಕಾಂಗವೀರರಾಗಿ, ಅಸಹಾಯ ಶೂರರಾಗಿ ಸಾಹಿತ್ಯ ವ್ಯವಸಾಯ ಮಾಡಿದರು. ಎಲ್ಲದರಲ್ಲಿಯೂ ಅವರದು ಧೀರ ಗಂಭೀರ ಗತಿ. ಒಂದು ರೀತಿಯ ನಿರ್ಲಿಪ್ತತೆ, ಪರಿವ್ರಾಜಕ ಮನೋಭಾವ. ಹಳೆಯದನ್ನು ಎಷ್ಟು ಸಮರ್ಥವಾಗಿ ಹೇಳಬಲ್ಲರೋ ಅಷ್ಟೇ ಸಮರ್ಥವಾಗಿ ಹೊಸದನ್ನು ಹೇಳಬಲ್ಲರು ಎಂಬುದನ್ನು 'ಕೇತಕೀವನ' ಎಂಬ ಕವನ ಸಂಕಲನದಲ್ಲಿ ಆಶ್ಚರ್ಯಕರವೆಂಬಂತೆ ಪ್ರದರ್ಶಿಸಿದ್ದಾರೆ. ಡಿ ವಿ ಜಿ ಯವರು ತಮ್ಮ ಮೂರು ಸಾಹಿತ್ಯ ವಿಮರ್ಶೆಯ ಕೃತಿಗಳಲ್ಲಿ ಪ್ರತಿಪಾದಿಸಿರುವ ವಿಷಯಗಳು ಬರಿಯ ಶಾಸ್ತ್ರದ ಗೊಡ್ಡು ನಿಯಮಗಳಲ್ಲ. ಶಾಸ್ತ್ರಸೂತ್ರಗಳು. ಅಲ್ಲಲ್ಲಿ ದಾರಿ ತಪ್ಪದಂತೆ ಕೈಮರಗಳಾಗುತ್ತವೆ. ಮಾರ್ಗದರ್ಶಕಗಳಾಗುತ್ತವೆ. ಡಿ ವಿ ಜಿ ಯವರು ತಮ್ಮ ಕೃತಿಗಳಲ್ಲಿ ಕೆಲವು ಕ್ಲಿಷ್ಟವಾದ ಶಬ್ದಗಳನ್ನು ಪ್ರಯೋಗಿಸಿದ್ದಾರೆ. ಅವು ಕಷ್ಟವಾಗಿರಬೇಕೆಂದಲ್ಲ. ಆ ಮಾತುಗಳನ್ನು ಬಿಟ್ಟರೆ ಬೇರೆ ಮಾತುಗಳಿಗೆ ಆ ಶಕ್ತಿ ಇಲ್ಲ ಎಂಬುದಕ್ಕಾಗಿ ಆ ಪ್ರಯೋಗಗಳು."— ಎಂದು ಅಭಿಪ್ರಾಯ ಪಟ್ಟಿದ್ದಾರೆ.

ವ್ಯಕ್ತಿತ್ವ : ಸ್ನೇಹಿತರು ಕಂಡಂತೆ

10.11.1944 ರ "ಕನ್ನಡ ನುಡಿ" ಯಲ್ಲಿ ದ. ಕೃ. ಭಾರದ್ವಾಜರು "ಕನ್ನಡ ನುಡಿ ಭಕ್ತರು" ಲೇಖನ ಮಾಲೆಯಲ್ಲಿ "ಶ್ರೀಮಾನ್ ಡಿ ವಿ ಗುಂಡಪ್ಪನವರು" ಎಂಬ, ಡಿ ವಿ ಜಿ ಯವರ ಜೀವನವನ್ನು ಕುರಿತ, ಒಂದು ಲೇಖನವನ್ನು ಬರೆದಿದ್ದರು. ಅದರಲ್ಲಿ "ವಿಲಾಯತಿ, ಅಮೆರಿಕಾ ಮೊದಲಾದ ದೇಶಗಳಲ್ಲಿ ಅವರು ಜನಿಸಿದ್ದರೆ, ಪ್ರಧಾನಮಂತ್ರಿಗಳ ಸ್ಥಾನವನ್ನಲಂಕರಿಸಿ, ಅವರ ಜೀವನ ಚರಿತ್ರೆಯ ಸಾವಿರಾರು ಪ್ರತಿಗಳು ದೇಶಾಂತರಗಳಲ್ಲಿ ಗುಡುಗಾಡಬಹುದಾಗಿತ್ತು" ಎಂದು ಬರೆದಿದ್ದರು. ಮತ್ತು "ಆಧುನಿಕ ವಿಜ್ಞಾನ ಶಿಕ್ಷಣ ಮೊದಲುಗೊಂಡು ವೇದ ಉಪನಿಷತ್ತು ಭಗವದ್ಗೀತೆ ಮೊದಲಾದ ಎಲ್ಲವುಗಳ ವಿಚಾರಗಳನ್ನು ಮಥಿಸಿ, ಸಾರವನ್ನುಹೀರಿ, ಅಮರತ್ವವನ್ನೀಯುವ ಅಮೃತಸಾಗರದಲ್ಲಿ ನಿಂತು, ಶ್ರೀಶಂಕರಾಚಾರ್ಯರ "ಪ್ರಾಪ್ತೇ ಸನ್ನಿಹಿತೇ ಮರಣೇ ನಹಿ ನಹಿ ರಕ್ಷತಿ ಡುಕೃಂಕರಣೆ" ಎಂಬ ಚರ್ಪಟ ಪಂಜರಿಯಂತೆ ಕ್ಷಣಿಕ ವೈಭವವನ್ನು ಮೆಚ್ಚಿರುವ "ಮಂಕುತಿಮ್ಮ" ಗಳ ಮುಂದೆ ಹಲವಾರು ಜೀವನ ಸಮಸ್ಯೆಗಳನ್ನು ಬೋಧಿಸಿರುವರು. ಕಳೆದೊಂದು ಶತಮಾನದಲ್ಲಿ ಮುದ್ದಣನ 'ರಾಮಾಶ್ವಮೇಧ'ದ ರಸಗಬ್ಬ, "ಮಂಕುತಿಮ್ಮನ ಕಗ್ಗ"ದ ಬಾಳುಗಬ್ಬದಿಂದ ಒಂದು ಬಗೆಯ ಕ್ರಾಂತಿಯೇ ಆಗಿರುವುದೆಂದರೆ ಅತಿಶಯೋಕ್ತಿಯಾಗದು" ಎಂದಿದ್ದರು.

ಈ "ಪ್ರಶಂಸೋಪನ್ಯಾಸ" ವನ್ನು ಕಂಡ ಡಿ ವಿ ಜಿ ಯವರು "ಕನ್ನಡ ನುಡಿ" ಯ ಸಂಪಾದಕರಿಗೆ ಪತ್ರವೊಂದನ್ನು ಬರೆದು (17.11.1944), ಕನ್ನಡ ಪುನರುಜ್ಜೀವನಕ್ಕೆ ಇಂಥ ಅತಿಶಯವಾದ ವ್ಯಕ್ತಿ ಪ್ರಶಂಸೆಯಿಂದ ಲಾಭವುಂಟೆ ? ಎಂಬ ಪ್ರಶ್ನೆಯನ್ನೆತ್ತಿ, ಬದುಕಿರುವ ವ್ಯಕ್ತಿಗಳ ಅತಿ ಪ್ರಶಂಸೆ ಅವರ ಸಮೀಪ ಮಿತ್ರರಿಂದ ಆಗುವುದು ಅನಾವಶ್ಯಕ ಮಾತ್ರವೇ ಅಲ್ಲ ಹಾನಿಕರ, ಎಂದು ತಾವು ಮಾಡಿಕೊಂಡಿದ್ದ ಸಿದ್ಧಾಂತವನ್ನು ಅವರಿಗೆ ತಿಳಿಸಿ, ಭಾರದ್ವಾಜರ ಲೇಖನವನ್ನು ಪ್ರಕಟಿಸುವುದಕ್ಕೆ ಮುಂಚೆ ತಮ್ಮನ್ನು ಒಂದು ಮಾತು ಕೇಳಬೇಕಾಗಿತ್ತೆಂದು ತಮ್ಮ ಕೊರತೆಯನ್ನು ನಿವೇದಿಸಿಕೊಂಡಿದ್ದಾರೆ. ಈ ಘಟನೆ ಡಿ ವಿ ಜಿ ಯವರನ್ನು ತಿಳಿದವರು ಅವರನ್ನು ಕುರಿತು ಇಟ್ಟುಕೊಂಡಿದ್ದ ಅಭಿಪ್ರಾಯವನ್ನು ಹೇಗೆ ತಿಳಿಸುತ್ತದೆಯೋ ಹಾಗೆಯೇ ಡಿ ವಿ ಜಿ ಯವರು

ಪಾಲಿಸಿಕೊಂಡು ಬಂದಿದ್ದ ಜೀವನ ಸಿದ್ಧಾಂತವನ್ನೂ ತಿಳಿಸುತ್ತದೆ.

ಅವರು "ತಮ್ಮಷ್ಟಕ್ಕಾಗಿ ಇದ್ದದ್ರಲ್ಲಾಯಾಗಿ" ಇದ್ದು ಕೊಳ್ಳಬೇಕೆಂದು ಆಶೆ ಪಟ್ಟವರು, "ತಾನೆಲೆಯ ಪಿಂತಿರ್ದು, ದೀನತೆಯ ತೋರಿ, ಅಭಿಮಾನವನು ತೊರೆದು, ಕೃತಕೃತ್ಯತೆಯ"ನು ಪಡೆಯಲಿಚ್ಛಿಸಿದವರು, "ಉಪಕಾರಿ ನಾನು ಎನ್ನುಪಕೃತಿಯು ಜಗಕೆಂಬ ವಿಪರೀತ ಮತಿಯನುಳಿದು" "ನೈಜವಮಾದೊಳ್ಪಿನಿಂ" ಬಾಳಿದವರು. ಅಧಿಕಾರಕ್ಕಾಗಲಿ, ಪದವಿಗಾಗಲಿ, ಪ್ರಶಸ್ತಿಗಾಗಲಿ ಆಶೆಪಟ್ಟವರಲ್ಲ. ಆದರೆ ಸಾರ್ವಜನಿಕ ಜೀವನದಲ್ಲಿದ್ದ ಮೇಲೆ ಜನ ಇಂಥವರನ್ನು ಕಂಡಾಗ ತನ್ನ ಮೆಚ್ಚಿಕೆಯನ್ನು ತೋರಿಸುವುದಲ್ಲೇನಾಶ್ಚರ್ಯ ?

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆ ಇಂಗ್ಲಿಷಿನಲ್ಲಿ ಪ್ರಾರಂಭಿಸಿದ ಗ್ರಂಥಮಾಲೆಯಲ್ಲಿ ಡಿ ವಿ ಜಿ ಯವರನ್ನು ಕುರಿತ ಗ್ರಂಥವೊಂದನ್ನು ಪ್ರಕಟಿಸುವ ಯೋಚನೆಯಲ್ಲಿದ್ದಿತು. ಆಗ ನಡೆದ ಸಂದರ್ಭವನ್ನು ಹಾ. ಮಾ. ನಾಯಕರು 22.3.87 ರ 'ಪ್ರಜಾವಾಣಿ'ಯಲ್ಲಿ ಹೀಗೆ ಹೇಳಿದ್ದಾರೆ: "ಈ ಪುಸ್ತಕ ಸಿದ್ಧತೆಯ ಹಂತದಲ್ಲಿದ್ದಾಗ ಅದರ ಪ್ರಕಟಣೆಯನ್ನು ನಿಲ್ಲಿಸುವ ವ್ಯವಸ್ಥೆಮಾಡಬೇಕೆಂದು ಕೋರಿ ಗುಂಡಪ್ಪನವರು ವಿಶ್ವವಿದ್ಯಾನಿಲಯದ ಕುಲಪತಿಗಳಿಗೆ ಒಂದು ಕಾಗದ ಬರೆದರು. ತಮ್ಮನ್ನು ಕುರಿತು ಒಂದು ಪುಸ್ತಕ ಪ್ರಕಟವಾಗುವುದು ಅವರಿಗೆ ಇಷ್ಟವಿರಲಿಲ್ಲ. ಕುಲಪತಿಗಳು ಕಾಗದವನ್ನು ಮಾಲೆಯ ಸಂಪಾದಕನಾದ ನನ್ನ ಕಡೆ ಕಳುಹಿಸಿದರು. ನಾನು ಉತ್ತರಿಸಿದೆ: "ಗುಂಡಪ್ಪನವರು ಅವರ ಸಾಹಿತ್ಯ ನಾಡಿನ ಸೊತ್ತು. ಅದನ್ನು ಕುರಿತು ಬರೆಯಬಾರದು ಎಂದು ಹೇಳಲು ಅವರಿಗೆ ಅಧಿಕಾರವಿಲ್ಲ. ಈ ಪುಸ್ತಕ ಪ್ರಕಟಿಸಲು ನಮಗೆ ಅವರ ಅನುಮತಿ ಅಗತ್ಯವಿಲ್ಲ." ಆಗ ಪ್ರಕಟವಾದದ್ದು ವಿ. ಸೀ ಅವರ 'ಡಿ ವಿ ಗುಂಡಪ್ಪ' ಎಂಬ ಇಂಗ್ಲಿಷ್ ಗ್ರಂಥ.

ರಾಜರತ್ನಂ ಅವರೂ ಡಿ ವಿ ಜಿ ಯವರನ್ನು ಕುರಿತು ಬರೆಯಲು ಪ್ರಯತ್ನಿಸಿದರಂತೆ. ಅವರಿಗೂ ಡಿ ವಿ ಜಿ ಯವರದೇ ಅಡ್ಡಿ. ಆದರೂ ಡಿ ವಿ ಜಿ ಯವರನ್ನು ಕುರಿತು ಲೇಖನಗಳು ಬಂದಿವೆ. ಅವುಗಳಲ್ಲಿ ಡಿ ವಿ ಜಿ ಯವರನ್ನು ಇತರರು ಹೇಗೆ ಕಂಡರು ಮತ್ತು ಅವರು ಸಮಕಾಲೀನರನ್ನು ಕಂಡದ್ದು ಹೇಗೆ ಎಂದು ನೋಡಿದಾಗ ಅವರ ವ್ಯಕ್ತಿತ್ವದ ಅನೇಕ ಅಂಶಗಳು ಎದ್ದು ಕಾಣುತ್ತವೆ.

ಮೈಸೂರಿನ 'ಸಂಪದಭ್ಯುದಯ ಪತ್ರಿಕೆ' 29-8-1928 ರ ಸಂಚಿಕೆಯಲ್ಲಿ, ಡಿ ವಿ ಜಿ ಯವರನ್ನು ಕುರಿತು : "ಮ|| ಡಿ ವಿ ಗುಂಡಪ್ಪನವರು

ಇಂಗ್ಲಿಷಿನಲ್ಲಿ ಮಾತ್ರವೇ ಅಲ್ಲದೆ ಸಂಸ್ಕೃತದಲ್ಲಿಯೂ ಕನ್ನಡದಲ್ಲಿಯೂ ಒಳ್ಳೆಯ ಪಾಂಡಿತ್ಯವನ್ನು ಸಂಪಾದಿಸಿಕೊಂಡಿರುವವರು....ಇವರ ಲೋಕವ್ಯವಹಾರ ಜ್ಞಾನವು ಇವರ ಪಾಂಡಿತ್ಯಕ್ಕಿಂತಲೂ ಅಧಿಕವಾಗಿರುವುದು. ಇವೆಲ್ಲಕ್ಕಿಂತಲೂ ಉತ್ತಮವಾದ ಒಂದು ಗುಣಾತಿಶಯ ಇವರಲ್ಲಿ ಇರುವುದು. ಇದೇ ಋಜು ಮಾರ್ಗಾಲಂಬನೆ. ಸತ್ಯಕ್ಕೂ ಧರ್ಮಕ್ಕೂ ವಿರೋಧವಾಗಿ ನಡೆಯಬಾರದೆಂಬ ಸಂಕಲ್ಪವು ಇವರಲ್ಲಿ ರೂಢಮೂಲವಾಗಿ ಇರುವುದು. ಹೊನ್ನು, ಹೆಣ್ಣು, ಮಣ್ಣುಗಳ ಮೇಲಿನ ಆಸೆಯು ಇವರಿಗೆ ಲೇಶವೂ ಇರುವುದಿಲ್ಲ. ಸಾಲಮನ್ ಎಂಬ ಪ್ರಭುವರೇಣ್ಯರು "Give me neither poverty nor riches" ಎಂಬುದಾಗಿ ದೇವರನ್ನು ಪ್ರಾರ್ಥನೆ ಮಾಡಿದರು. ಅದಕ್ಕೆ ಅರ್ಥವೇನೆಂದರೆ "ದೇವರೆ, ನನಗೆ ಐಶ್ವರ್ಯವೂ ಬೇಡ, ದಾರಿದ್ರ್ಯವೂ ಬೇಡ. ಆಗುವ ಹಾನಿಗಳು ದಾರಿದ್ರ್ಯದಿಂದ ಉಂಟಾಗುವುವು. ಇವೆರಡೂ ಪಾಪ ಕರ್ಮಗಳಿಗೆ ಹೇತುಗಳಾಗುವುವು. ಆದ್ದರಿಂದ ಇವೆರಡನ್ನೂ ನನಗೆ ಇಲ್ಲದಂತೆ ಮಾಡು," ಎಂದು ಅವನು ಪ್ರಾರ್ಥಿಸಿದನು. ಈ ಪ್ರಾರ್ಥನೆಯು ಮ|| ಡಿ. ವಿ. ಗುಂಡಪ್ಪನವರ ಅನುಷ್ಠಾನದಲ್ಲಿರುವುದು. ಈ ಪ್ರಾರ್ಥನೆಯನ್ನು ದೇವರು ಇವರಿಗೆ ಅನುಗ್ರಹಿಸಿರುವನು." ಎಂದು ಪ್ರಶಂಸಿಸಿದೆ.

ಕನ್ನಡದ ಪುನರುಜ್ಜೀವನದ ಕಾಲ ಡಿ ವಿ ಜಿ ಯವರ ಕಾಲ. ಅದಕ್ಕಾಗಿ ದುಡಿದವರಲ್ಲಿ ಬಹುಮಂದಿಯ—ಎಲ್ಲರ ಎಂದೇ ಹೇಳಬಹುದೇನೋ—ಪರಿಚಯ ಡಿ ವಿ ಜಿ ಯವರಿಗಿತ್ತು. ಪೂರ್ವಸೂರಿಗಳಾದ ಎಸ್. ಜಿ. ನರಸಿಂಹಾಚಾರ್ಯರು, ಎಂ. ಎ. ರಾಮಾನುಜ ಅಯ್ಯಂಗಾರ್ಯರು, ಚ. ವಾಸುದೇವಯ್ಯನವರು, ಬಿ. ಎಂ. ಶ್ರೀಕಂಠಯ್ಯನವರು, ಆರ್. ನರಸಿಂಹಾಚಾರ್ಯರು, ಬೆಳ್ಳಾವೆ ವೆಂಕಟನಾರಣಪ್ಪನವರು, ನಂಗಪುರಂ ವೆಂಕಟೇಶ ಅಯ್ಯಂಗಾರ್ಯರು, ಕಡಬದ ನಂಜುಂಡ ಶಾಸ್ತ್ರಿಗಳು, ತೋಗೆರೆ ನಂಜುಂಡ ಶಾಸ್ತ್ರಿಗಳು, ಎಂ. ಎಸ್. ಪುಟ್ಟಣ್ಣನವರು, ಗೋವಿಂದ ಪೈ ಅವರು, ಪಂಜೇ ಮಂಗೇಶರಾಯರು, ಉಳ್ಳಾಳ ಮಂಗೇಶರಾಯರು, ಉಗ್ರಾಣ ಮಂಗೇಶರಾಯರು, ದೇಶಪಾಂಡೆ ಹನುಮಂತರಾಯರು, ಕಡಬ ರಾಘವೇಂದ್ರರಾಯರು, ಆಲೂರ ವೆಂಕಟರಾಯರು, ಮಹದೇವಶಾಸ್ತ್ರಿ ಪ್ರಭಾಕರಶಾಸ್ತ್ರಿ ಪೂಜಾರರು, ಮುದವೀಡಕರ್ ಕೃಷ್ಣರಾಯರು, ಹುಯಿಲಗೋಳ ನಾರಾಯಣರಾಯರು, ದೇಶಪಾಂಡೆ ಗಂಗಾಧರ ರಾಯರು, ಕೌಜಲಗಿ ಶ್ರೀನಿವಾಸರಾಯರು— ಇವರೆಲ್ಲರಿಗೂ ಇದ್ದ ಸಾಹಿತ್ಯೋತ್ಸಾಹವನ್ನು ಡಿ ವಿ ಜಿ ಕೊಂಡಾಡಿದ್ದಾರೆ. ಈ ಸಾಹಿತ್ಯ ವ್ಯಕ್ತಿಗಳ

ಸಾಮಾನ್ಯ ಲಕ್ಷಣಗಳನ್ನು ಹೀಗೆ ಸಂಗ್ರಹಿಸಿ ಹೇಳಿದ್ದಾರೆ. ಅವರಲ್ಲಿ ಇವರು ಕಂಡದ್ದು :

1) 'ಭಯ ವಿನಯಗಳು ; ಸಾಹಿತ್ಯ ಎಂದರೆ ಗೌರವವುಳ್ಳ ಕಾರ್ಯ. 'ನಾನು ದೊಡ್ಡ ಕೆಲಸಕ್ಕೆ ಹೊರಟಿದ್ದೇನೆ. ಎಲ್ಲಿ ತಪ್ಪಿಯೇನೋ ! ಎಲ್ಲಿ ವೈಲಿಗೆಯಾದೀತೋ ಎಲ್ಲಿ ಏನು ಪ್ರಮಾದ ನಡೆದೀತೋ" ಎಂಬ ಎಚ್ಚರಿಕೆ.

2) ಅವರು ಬಿರುದು ಪ್ರಶಸ್ತಿಗಳಿಗೆ ಬಾಯಿಬಿಟ್ಟವರಲ್ಲ. ತಮ್ಮ ಅಂತರಂಗದಲ್ಲಿ ದೊಡ್ಡದಾಗಿಯೋ ಚಿಕ್ಕದಾಗಿಯೋ ಒಂದು ಬೆಳಕನ್ನು ಕಂಡರು. ಅದರ ಪ್ರಯೋಜನ ಎಲ್ಲರಿಗೂ ಆಗಲಿ ಎಂಬುದೇ ಅವರ ತಾತ್ಪರ್ಯ.

3) ಲೇಖನ ವೃತ್ತಿ ದ್ರವ್ಯ ಸಂಪಾದನೆಗೆ ದಾರಿ ಎಂದು ಅವರು ಹೊರಟವರಲ್ಲ. ಬೇರೆ ಉದ್ಯೋಗದಿಂದ ಜೀವಿಕೆ ಸಂಪಾದಿಸಿಕೊಂಡು ಬಂದಷ್ಟರಿಂದ ಸಂತೃಪ್ತರಾಗಿದ್ದವರು ಆ ಜನ.

4) ಸಾಹಿತ್ಯಕಾರ್ಯ ಒಂದು ತಪಸ್ಸೆಂದು ಅದಕ್ಕಾಗಿ ದುಡಿಯುತ್ತಿದ್ದರು.

5) ವಿಷಯ ಗಾಂಭೀರ್ಯದಲ್ಲಿಯೂ ಪ್ರತಿಪಾದನೆಯ ಔಚಿತ್ಯದಲ್ಲಿಯೂ ಲೇಖನ ಶೈಲಿಯ ಓಜಸ್ಸಿನಲ್ಲಿಯೂ ಯಾವುದೋ ಒಂದು ಆದರ್ಶವನ್ನು ಮುಟ್ಟಲು ಬಹುವಾಗಿ ಪ್ರಯತ್ನಿಸುತ್ತಿದ್ದರು.

ಹಾಗೆಯೇ ಆಧುನಿಕ, ಸಮಕಾಲೀನ ಸಾಹಿತಿಗಳನ್ನು ವಿಶ್ವಾಸದಿಂದ ಕಂಡು ಪ್ರೋತ್ಸಾಹಿಸಿದವರು ಡಿ ವಿ ಜಿ. ಇಂದಿನ ಕಾವ್ಯವನ್ನು ಕುರಿತು ಅವರು : "ನೂತನ ಕಾವ್ಯಗಳು ಕನ್ನಡದ ಸಹಜ ಗುಣವನ್ನು ತೋರಿಸುತ್ತಿವೆ ; ಇಷ್ಟೇ ಅಲ್ಲ. ದೇಶದ ತಾತ್ಕಾಲಿಕ ಮನೋವೃತ್ತಿಯನ್ನು ಪ್ರತಿಫಲಿಸುತ್ತಿವೆ. ಅವು ಸ್ವಾನುಭವಜನಿತಗಳಾಗಿ "ಹ್ಲಾದಮಯಿ"ಗಳಾಗಿವೆ. ಅವುಗಳಲ್ಲಿ ಕೆಲವಾದರೂ ಚಿರಕಾಲ ಬಾಳುವ ಜೀವಕಳೆಯನ್ನು ತೋರುತ್ತಿವೆ. ಇದು ಉಪಚಾರೋಕ್ತಿಯಲ್ಲ, ನನ್ನ ಮನಸ್ಸಿನಲ್ಲಿರುವ ನಂಬಿಕೆ" ಎಂದಿದ್ದಾರೆ.

ಅವರು ಕೆ. ಎಸ್. ನರಸಿಂಹಸ್ವಾಮಿಯವರ "ಮೈಸೂರು ಮಲ್ಲಿಗೆ" ಗ್ರಂಥಕ್ಕೆ, ಕೆ. ವಿ. ಪುಟ್ಟಪ್ಪನವರ "ವಿವೇಕಾನಂದ" ಗ್ರಂಥಕ್ಕೆ, ಬರೆದಿರುವ ಮುನ್ನುಡಿಗಳನ್ನು ನೋಡಿದರೆ ಈ ಅಭಿಪ್ರಾಯ ವಿಶದ ಪಡುತ್ತದೆ.

ಈ ಸಂದರ್ಭದಲ್ಲಿ ಕೆ. ವಿ. ಪುಟ್ಟಪ್ಪನವರು ಡಿ ವಿ ಜಿ ಯವರಿಗೆ 2-7-1931ರಂದು ಬರೆದಿರುವ ಒಂದು ಪತ್ರವನ್ನು ಉದಾಹರಿಸಬಹುದು :

"ಶ್ರೀಮಾನ್ ಡಿ. ವಿ. ಗುಂಡಪ್ಪನವರಿಗೆ,

ಅಳುಕಿ ಅಳುಕಿ ತಮಗೆ ಈ ಕಾಗದ ಬರೆಯುತ್ತಿದ್ದೇನೆ, ಏಕೆಂದರೆ

ಅನೇಕ ರಾಜಕೀಯ ಮೊದಲಾದ ಕಾರ್ಯಗಳ ಇಡಕು ತೊಡಕುಗಳಲ್ಲಿ ಸಿಕ್ಕ ತಮ್ಮಂಥವರಿಗೆ ಪುರಸತ್ತು ಸಿಗುವುದು ಕಷ್ಟ. ನಾನು ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆಯೊಂದನ್ನು ಬರೆದಿದ್ದೇನೆ. ಅದು ಈಗಾಗಲೇ ಸಂಪೂರ್ಣವಾಗಿ ಅಚ್ಚಾಗಿದೆ. ಅದಕ್ಕೆ ತಾವು ಒಂದು ಮುನ್ನುಡಿ ಬರೆಯುವಿರಾದರೆ ನನಗೊಂದು ಹೆಚ್ಚಿಗೆಯೆಂದು ಭಾವಿಸುತ್ತೇನೆ. ಹಿರಿಯರ ಆಶೀರ್ವಾದವಂತೂ ನಿಃಸಂದೇಹ ವಾಗಿ ದೊರಕಿತೆಂದು ತಿಳಿಯುತ್ತೇನೆ. ತಾವು ಉತ್ಕೃಷ್ಟ ಜೀವನ ಚರಿತ್ರೆ ಗಳನ್ನು ಬರೆದವರು. ಮೊದಲು ಬರೆದವರು. ಆದ್ದರಿಂದ ನನ್ನ ಈ ಸಾಧಾರಣ ಪ್ರಥಮ ಪ್ರಯತ್ನವು ತಮ್ಮ ಮುನ್ನುಡಿಯೊಡನೆ ಕನ್ನಡಿಗರ ಕೈಸೇರುವುದರಲ್ಲಿ ಔಚಿತ್ಯವಿದೆ. ಅರ್ಥವಿದೆ.

ತಾವು ಒಪ್ಪುವಿರಾದರೆ ದಯವಿಟ್ಟು ಪತ್ರದ ಮೂಲಕ ಶೀಘ್ರವಾಗಿ ತಿಳಿಸಬೇಕೆಂದು ಪ್ರಾರ್ಥನೆ. ಒಡನೆಯೆ ತಮಗೆ ಪುಸ್ತಕವು ತಲಪುವಂತೆ ಪ್ರಯತ್ನಿಸುತ್ತೇನೆ.

ಇಂತೀ ತಮ್ಮ
ಕೆ. ವಿ. ಪುಟ್ಟಪ್ಪ''

ಡಿ ವಿ ಜಿ ಯವರ ಜೀವನದ ಒಂದು ಮುಖ್ಯ ಭಾಗ ಸ್ನೇಹ.

ಸಕ್ತುಮಿವ ತಿತಉನಾ ಪುನನ್ತೋ ।
ಯತ್ರಧೀರಾ ಮನಸಾ ವಾಚಮಕ್ರತ ॥
ಅತ್ರಾ ಸಖಾಯಃ ಸಖ್ಯಾನಿ ಜಾನತೇ ।
ಭದ್ರೈಷಾಂ ಲಕ್ಷ್ಮೀರ್ನಿಹಿತಾಧಿ ವಾಚಿ ॥

(ಹಿಷ್ಟವನು ಜರಡಿಯೊಳಗಾಡಿ ಶೋಧಿಸುವಂತೆ
ಎಲ್ಲಿ ಧೀರರ್ ಮನದೆ ಮಾತ ಶೋಧಿಪರೋ
ಅಲ್ಲಿ ಗೆಳೆಯರ್ ನಿಜದಿ ಗೆಳೆತನವ ಕಾಣುವರು
ಆ ವಾಕ್ಕಿನಲಿ ಲಕ್ಷ್ಮಿ ಮಂಗಳಗಳಿಹುವು)

(ಡಿ ವಿ ಜಿ ಯವರ ಅನುವಾದ)

— ಎನ್ನುತ್ತದೆ ಋಗ್ವೇದ. ಅಂಥ ಧೀರರು ಡಿ ವಿ ಜಿ. ಅವರ ಮಾತು, ಅವರ ನಡವಳಿಕೆ ಅವರಿಗೆ ಅನೇಕ ಸ್ನೇಹಿತರನ್ನು ತಂದಿತು.

ಅವರ ಮಾತಿಗೆ ಉದಾಹರಣೆಯಾಗಿ, ಹುಯಿಲಗೋಳ ನಾರಾಯಣ ರಾಯರು 22-8-1946ರಲ್ಲಿ ಬರೆದ ಪತ್ರವನ್ನು ಉದಾಹರಿಸಬಹುದು :

"ತಮ್ಮ ತಾ॥ 19-8-1946ನೆಯ ಪೋಸ್ಟ್ ಕಾರ್ಡು ತಲ್ಪಿತು. ಆದನ್ನು ಓದಿ ನೋಡಿ ನಾನು ಇನ್ನೂ ತಮ್ಮಂಥ ವಿದ್ವಾಂಸರ ನೆನಪಿನಲ್ಲಿ ಇರುವೆನಲ್ಲಾ ಎಂದು ತುಂಬಾ ಸಂತೋಷವಾಗಿ ನಲಿದಾಡಿದೆನು. ನನ್ನ ಕುಟುಂಬದಲ್ಲಿ ಈಗ ಸೌಖ್ಯವಿಲ್ಲ. 5 ತಿಂಗಳ ಹಿಂದೆ 15 ವರ್ಷದ ಗಂಡು ಮಗನು ತೀರಿಕೊಂಡನು. 3 ತಿಂಗಳ ಹಿಂದೆ 12 ವರ್ಷದ ಹೆಣ್ಣುಮಗಳು ತೀರಿಕೊಂಡಳು. ಮುಂದೆ 15 ದಿವಸಕ್ಕೆ ನನ್ನ ಹೆಂಡತಿಯು ತೀರಿಕೊಂಡಳು. ಈಗ 25 ದಿವಸಗಳ ಹಿಂದೆ 3 ವರ್ಷದ ಮೊಮ್ಮಗನು ತೀರಿಕೊಂಡನು. ಹೀಗಾಗಿ ಸೌಖ್ಯವಿಲ್ಲ. ಆದರೂ ತಮ್ಮ ಕಾಗದವನ್ನು ಓದಿ ಅವೆಲ್ಲವೂ ಮರೆತು ಹೋಯಿತು. ತಮ್ಮಂಥವರು ನನ್ನನ್ನು ಮರೆತಿಲ್ಲವಲ್ಲಾ ಎಂಬುದೊಂದು ಆನಂದ. "ಉದಯವಾಗಲಿ" ಎಂಬ ಗೀತೆಗೆ ತಮ್ಮಂಥವರು ವಿಶ್ವಾಸದಿಂದ ಆಸರೆ ಕೊಟ್ಟುದಕ್ಕೆ ಅದು ಎಲ್ಲೆಡೆಯೂ ಹೇಳಲ್ಪಡುತ್ತದೆ" ಎಂದು ಅವರು ಡಿ ವಿ ಜಿ ಯವರ ಪತ್ರದಿಂದ ತಮಗಾದ ಸಮಾಧಾನವನ್ನು ಹೇಳಿಕೊಂಡಿದ್ದಾರೆ.

ಡಿ ವಿ ಜಿ ಯವರ ಜೀವಕ್ಕೆ ಹತ್ತಿರವಾಗಿದ್ದವರು ವೆಂಕಣ್ಣಯ್ಯ, ವಾಜ ಪೇಯಂ ವೆಂಕಟಸುಬ್ಬಯ್ಯ ಮತ್ತು ಮೋಕ್ಷಗೊಂಡಂ ಕೃಷ್ಣಮೂರ್ತಿಯವರು. ಇವರುಗಳು ಕಣ್ಮರೆಯಾದದ್ದು 24-4-1939, 31-12-1939, 2-3-1940 ರಲ್ಲಿ. ಈ ಸಂದರ್ಭದಲ್ಲಿ ಅವರಲ್ಲಾದ ವ್ಯಥೆಯನ್ನು ಅವರು ಮದ ರಾಸಿನ ಟಿ. ಆರ್. ವೆಂಕಟರಾಮಾ ಶಾಸ್ತ್ರಿಗಳಿಗೆ ಹೀಗೆ ಹೇಳಿಕೊಂಡಿದ್ದಾರೆ. (12-3-1950) :

"Krishnamurthy was among the very dearest of friends to me. Our friendship was of more than 30 years. He shared life with me, influenced me and was influenced, and in a hundred ways lightened the burden of existence for me. Lonely ever in a sense, I feel I am now lonelier than ever in the world. Venkanniya, the Kannada Professor whom you did not know. Venkatasubbaiya of the S I Society and now Krishnamurthy, all three my most intimate friends, and each a giver of blessing in his own way, have passed away in quick succession and I am reminded of the verse of Bhukkunda.

ಭಟ್ಟೈರ್ನಷ್ಟೋ ಭಾರವಿಂಶ್ಚಾಪಿ ನಷ್ಟಃ
ಭಿಕ್ಷುರ್ನಷ್ಟೋ ಭೀಮಸೇನೋಪಿ ನಷ್ಟಃ
ಭುಕ್ಕುಂಡೋಽಹಂ ಭೂಪತಿಸ್ತ್ವಂ ಹಿ ರಾಜನ್
ಭಭ್ಬಾವಳ್ಯಾಂ ಅಂತಕಸ್ಸನ್ನಿವಿಷ್ಟಃ

Not that I am afraid of receiving the order to march. But till the marching order's come the world cannot hereafter be to me the same place that it has been."

ಸಾರ್ವಜನಿಕ ಜೀವನ ಡಿ ವಿ ಜಿ ಯವರನ್ನು ಅನೇಕರ ಹತ್ತಿರ ತಂದಿತು. ಅವರಲ್ಲಿ ಕೆಲವರನ್ನು ಡಿ ವಿ ವಿ ಜಿ ತುಂಬ ಮೆಚ್ಚಿಕೊಂಡರು.

ಅವರಲ್ಲೊಬ್ಬರು ಸರ್. ಕೆ. ಪಿ. ಪುಟ್ಟಣ್ಣಶೆಟ್ಟರು. ಅವರನ್ನು ಕುರಿತು ಡಿ ವಿ ಜಿ : "ಸಾರ್ವಜನಿಕ ಜೀವನದಲ್ಲಿ ಪುಟ್ಟಣ್ಣಶೆಟ್ಟರವರು ಅನುಸರಿಸಿದ್ದ ನೀತಿಯನ್ನು ಜನದ ಜ್ಞಾಪಕಕ್ಕೆ ತರುವುದು ಈಗ ಅವಶ್ಯವೆಂದು ತೋರುತ್ತದೆ.

ನೀಚಾಃ ಕಲಹಮಿಚ್ಛನ್ತಿ, ಸಂಧಿಮಿಚ್ಛನ್ತಿ ಸಾಧವಃ ||

ಪುಟ್ಟಣ್ಣಶೆಟ್ಟರವರು ಜನವನ್ನು ಒಂದು ಗೂಡಿಸುವುದರಲ್ಲಿ ತಾತ್ಪರ್ಯವುಳ್ಳವರು, ಜನರನ್ನು ಒಡೆದು ಸಂತೋಷಪಡುವವರಲ್ಲ. ಅಂಥ ಸಾರ್ವಜನಿಕರನ್ನು ಈಗ ನಾನು ಒಬ್ಬರನ್ನೂ ಕಾಣೆ" ಎಂದಿದ್ದಾರೆ. ಅಂಥವರ ವಿಶ್ವಾಸ ಗೌರವಗಳಿಗೆ ಪಾತ್ರರಾಗಿದ್ದರು ಡಿ ವಿ ಜಿ.

ಮೈಸೂರಿನ ರಾಜಕೀಯ ಜೀವನದಲ್ಲಿ ಹೋರಾಡಿ ನೊಂದ ವೆಂಕಟಕೃಷ್ಣಯ್ಯನವರನ್ನು ಡಿ ವಿ ಜಿ "ಜೋನಿ ಬೆಲ್ಲದ ಗುಡಾಣ," "ಪಂಕ್ತಿ ಪಾವನರು" ಎಂದಿದ್ದಾರೆ, ಅವರನ್ನು ಬೇಕಾದವರು ಬೇಕಾದಂತೆ ಕಿತ್ತು ತಿಂದರಂತೆ. ವೆಂಕಟಕೃಷ್ಣಯ್ಯನವರದು ಸಮಸ್ತ ಲೋಕವೂ ಸ್ವಂತ ಕುಟುಂಬವೆಂಬಂತೆಯೇ ಎಣಿಕೆ ಎಂದು ಹೇಳಿದ್ದಾರೆ.

ಮದರಾಸಿನ ಪ್ರಖ್ಯಾತ ವಕೀಲರುಗಳು ಪಿ. ಎಸ್. ಶಿವಸ್ವಾಮಿ ಅಯ್ಯರ್, ಟಿ. ಆರ್. ವೆಂಕಟರಾಮಾಶಾಸ್ತ್ರಿಗಳು, ಹಿಂದೂ ಪತ್ರಿಕೆಯ ಎನ್. ರಘುನಾಥ ಅಯ್ಯರ್, ಸಂಸ್ಕೃತ ಪ್ರಕಾಂಡ ಪಂಡಿತರಾದ ವಿ. ರಾಘವನ್ ಮುಂತಾದ ಮಹನೀಯರ ನಿಕಟ ಪರಿಚಯವಿತ್ತು ಡಿ ವಿ ಜಿ ಯವರಿಗೆ, ಹಾಗೆಯೇ ಬೊಂಬಾಯಿನ ಮಹಾಮಹೋಪಾಧ್ಯಾಯ ಪಿ ವಿ ಕಾಣೆ, ಸರ್ವೆಂಟ್ಸ್ ಆಫ್ ಇಂಡಿಯಾ ಸಂಸ್ಥೆಯ ಸದಸ್ಯರು, ಡಾ|| ಎಸ್. ರಾಧಾಕೃಷ್ಣ, ಟಿ. ಪ್ರಕಾಶಂ, ಪಟ್ಟಾಭಿ ಸೀತಾರಾಮಯ್ಯ ಮುಂತಾದ ಮುಖಂಡರು,

ಗಾಂಧಿಯವರ ನಿಕಟವರ್ತಿಗಳಾಗಿದ್ದ ಮಹದೇವ್ ದೇಸಾಯಿ, ಪ್ಯಾರೆಲಾಲ್ ಮುಂತಾದವರ ಪರಿಚಯವಿತ್ತು.

ಡಿ ವಿ ಜಿ ಮೆಚ್ಚಿಕೊಂಡಿದ್ದ ಇನ್ನೊಬ್ಬ ಮಹನೀಯರು ಚ. ವಾಸುದೇವಯ್ಯನವರು. 12.12.1937 ರಲ್ಲಿ ಮಲ್ಲೇಶ್ವರದ ಕರ್ಣಾಟಕ ಸಂಘದವರು ಚ. ವಾಸುದೇವಯ್ಯನವರನ್ನು ಬರಮಾಡಿಕೊಂಡು ಅವರಿಗೊಂದು ಮಾನಪತ್ರವನ್ನು ಅರ್ಪಿಸಿ ಅವರ ಭಾವಚಿತ್ರವೊಂದನ್ನು ಅನಾವರಣಮಾಡಿಸಿದರು. ಆಗ ಮಾತನಾಡಿದ ಡಿ ವಿ ಜಿ, ಭಗವದ್ಗೀತೆಯಲ್ಲಿ (12 : 13–14; 18 : 19) ವಿವರಿಸಿರುವಂತೆ ವಾಸುದೇವಯ್ಯನವರು ಸಮಸ್ತ ಸದ್ಗುಣ ಭರಿತರಾಗಿ ಸರ್ವರಿಗೂ ಆದರ್ಶಪ್ರಾಯರಾಗಿರುವರು ಎಂದರು. ಉತ್ತರ ಭಾಷಣವನ್ನು ಮಾಡಿದ ವಾಸುದೇವಯ್ಯನವರು "ಮಾ|| ರಾ|| ಗುಂಡಪ್ಪನವರು ವಿದ್ವಾಂಸರಾದರೂ ಮತ್ಸರಗ್ರಸ್ತರಲ್ಲ; ಗ್ರಂಥಗಳನ್ನು ಸಮಾಲೋಚನೆ ಮಾಡುವುದರಲ್ಲಿ ಛಿದ್ರಾನ್ವೇಷಿಗಳಲ್ಲ; ಗುಣಗ್ರಾಹಿಗಳು. ನನ್ನ ಪುಸ್ತಕಗಳ ವಿಷಯದಲ್ಲಿ ಅವರು ನನ್ನನ್ನು ಪ್ರಶಂಸೆಮಾಡಿರುವುದು ಅವರ ಸೌಜನ್ಯಕ್ಕೆ ನಿದರ್ಶನವಾಗಿರುವುದು" ಎಂದರು.

ಅವರಲ್ಲಿ ಯಾವ ವಿಷಯದಲ್ಲೂ ಮುಚ್ಚುಮರೆಯಿಲ್ಲ. ಪ್ರಾಮಾಣಿಕವಾದ ಮಾತಿಗೆ ಅವರು ಶಂ. ಬಾ. ಜೋಶಿಯವರಿಗೆ (1.12.1944)ರಲ್ಲಿ ಬರೆದ ಪತ್ರ ಉದಾಹರಣೆ: "ಕನ್ನಡಭಾಷೆಗೆ ಬಲಪುಷ್ಟಿ ತರುವ ದಾರಿ ಯಾವುದೆಂದು ಬಹು ಆಲೋಚನೆ ನಡೆಸಿರುವುದು ನಿಮ್ಮ 'ನುಡಿಯುಜೀವಾಳ' ದಿಂದ ವಿಶದವಾಗುತ್ತದೆ. ಆದರೆ ಭಾಷೆಯ ಶೈಲಿಯನ್ನು ಉತ್ತಮ ಪಡಿಸಲು ಎರಡು ದಾರಿ ಹೆಚ್ಚು ಪ್ರಯೋಜಕವಾಗುತ್ತದೆ: (1) ಈಗ ಜನರಂಜಕವಾಗಿರುವ ಒಂದು ಗ್ರಂಥವನ್ನು ತೆಗೆದುಕೊಂಡು ಅದರಲ್ಲಿರುವ ದುರ್ಬಲಪ್ರಯೋಗಗಳನ್ನು ಎತ್ತಿ ತೋರಿಸಿ ಹೇಗೆ ತಿದ್ದಿ ಬರೆದರೆ ಉತ್ತಮವಾದೀತೆಂಬುದನ್ನು ನಿದರ್ಶನಪಡಿಸುವುದು, (2) ತಮಗೆ ಉತ್ತಮವೆಂದು ತೋರುವ ಶೈಲಿಯಲ್ಲಿ ಹೊಸದಾಗಿ ಜನರಂಜಕ ವಿಷಯವಾಗಿ ಒಂದು ಗ್ರಂಥವನ್ನು ತಾವೇ ಬರೆಯುವುದು. ಮುಖ್ಯವಾಗಿ ಲಕ್ಷಣ ಗ್ರಂಥಕ್ಕಿಂತ ಲಕ್ಷ್ಯಗ್ರಂಥ ಮೊದಲು ಬೇಕೆಂಬುದು ನನ್ನ ಅಪೇಕ್ಷೆ."

ಶಂಬಾ ಜೋಷಿಯವರು ಕಳುಹಿಸಿದ ಗ್ರಂಥಗಳನ್ನು ಓದಿ ಅವರ ಅಭಿಪ್ರಾಯಗಳು ಒಪ್ಪಿಗೆಯಾಗದೆ ಹೋದಾಗ ಹೀಗೆ ಅವರಿಗೆ ಪತ್ರಬರೆದರಂತೆ: (ಇದು ಪತ್ರದ ನಕಲಲ್ಲ ಜೋಶಿಯವರು ಬರೆದಿರುವ ಪತ್ರದ ಸಾರಾಂಶ:) "ಜೋಶಿ,

ಇನ್ನು ಮೇಲೆ ನಿನ್ನ ಪ್ರಕಟನೆ ಕಳಿಸುವ ಶ್ರಮ ಪಡಬೇಡ. ನಮ್ಮಿಬ್ಬರ ಸಂಶೋಧನದ ಭೂಮಿಕೆಯೇ ಬೇರೆ ಬೇರೆ ಇದೆ. ನೀನು ನಮ್ಮ ಶ್ರದ್ಧೆಯ ಯುಕ್ತಾಯುಕ್ತತೆಯನ್ನೇ ಪ್ರಶ್ನಿಸಿ ವಿಮರ್ಶಿಸ ತೊಡಗಿದ ವ್ಯಕ್ತಿ. ನಾನೋ ನಮ್ಮ ಪುರಾತನ ಪರಂಪರೆಯೇ, ಪಾವನ, ಪರಮಶ್ರೇಷ್ಠ ಎಂಬ ಶ್ರದ್ಧೆ ದೃಢ ಪಡುವ ದೃಷ್ಟಿಯಿಂದ ವಿಚಾರ ವಿಮರ್ಶನ ನಡಸಿದವನು. ಆದ ಕಾರಣ ನಾವಿಬ್ಬರೂ ಹೊರಟಿರುವ ದಿಕ್ಕೇ ಬೇರೆ.” “ಡಿ ವಿ ಜಿ ಬರೆದ ಪ್ರಾಮಾಣಿಕ ಪ್ರಾಂಜಲ ಭಾವದ ಪತ್ರವು ನನ್ನನ್ನು ಬೆರಗುಗೊಳಿಸಿತು. ನನ್ನನ್ನೇ ನನ್ನ ಪುನರ್ವಿಮರ್ಶೆಗೆ ಹಚ್ಚಿತು”— ಎಂದು ಈ ಪ್ರಕರಣವನ್ನು ಜೋಷಿಯವರು 14.10.75 ರಲ್ಲಿ ‘ಸಂಯುಕ್ತ ಕರ್ನಾಟಕ’ ಪತ್ರಿಕೆಗೆ ಬರೆದ ಪತ್ರದಲ್ಲಿ ಜ್ಞಾಪಿಸಿ ಕೊಂಡಿದ್ದಾರೆ.

ಅವರು ವಿದ್ವಾಂಸರಿಗೆ ಉತ್ತೇಜನ ಕೊಡುತ್ತಿದ್ದದ್ದಕ್ಕೆ ಉದಾಹರಣೆ ಯಾಗಿ ಬಿಂದೂ ರಾಯರ ಒಂದು ಪತ್ರವನ್ನು ಉದಾಹರಿಸಬಹುದು.

‘ಶ್ರೀರಾಮಪರೀಕ್ಷಣಂ’ ಗ್ರಂಥದ ಭಾಗಗಳನ್ನು ಯಾವ ರಾಗಗಳಲ್ಲಿ ಓದ ಬಹುದು, ಅವುಗಳ ಭಾವವನ್ನು ತಿಳಿಯದ ಹೊರತು ಅವುಗಳನ್ನು ವಾಚನ ಮಾಡುವುದು ಹೇಗೆ ಕಷ್ಟವಾಗುತ್ತದೆ ಎಂದು ತಿಳಿಸುತ್ತ ಸಂ.ಗೋ. ಬಿಂದೂ ರಾಯರು 10.2.46 ರಲ್ಲಿ ಬರೆದ ಪತ್ರ: “ನಾನು ಸಾಹಿತಿಯಲ್ಲ. ಸಂಗೀತ ವನ್ನೂ ಅಭ್ಯಾಸಮಾಡಿದವನಲ್ಲ. ಷಟ್ಪದಿ ಕಾವ್ಯವನ್ನು ಹೇಗೋ ಸ್ವಗೋಷ್ಠಿ ಯಲ್ಲಿ ಮಾತ್ರ ಓದುತ್ತಿದ್ದೆನು. 1926ರಲ್ಲಿ ಬೆಂಗಳೂರಿನಲ್ಲಿ ರಾಮೇಶ್ವರ ದೇವಸ್ಥಾನದಲ್ಲಿ ಐದು ವಾಚನಗಳನ್ನು ಬಹಿರಂಗವಾಗಿ ಓದಿಸಿ ಆ ವಾಚನ ಕ್ರಮವು ಒಂದು ದೊಡ್ಡ ಕಲೆಯೆಂಬುದನ್ನು ಜನರಿಗೆ ತೋರಿಸಿ ಆ ಕಲಾ ಪ್ರಪಂಚದಲ್ಲಿ ನನಗೊಂದು ಸ್ಥಾನ ಕಲ್ಪಿಸಿಕೊಟ್ಟವರು ದಿವಂಗತರಾದ ನನ್ನ ಪರಮಮಿತ್ರರಾದ ಶ್ರೀಮಾನ್ ವೆಂಕಣ್ಣಯ್ಯನವರು. ಆ ಸಮಯದಲ್ಲಿ ನನಗೆ ಭಂಗಾರದ ಪದಕ ಕೊಟ್ಟಾಗ ನಾನು ಬಹಿರಂಗವಾಗಿ ಓದುವ ಹಾಗೆ ಮಾಡಿ ದುದು ತಮ್ಮ ಸಲಹೆಯಂತೆ ಎಂದು ಅವರು ಹೇಳಿದುದು ಈಗ ಹೇಳಿದಂತೆ ಆಗುತ್ತಿದೆ. ನನಗೆ ಗಮಕಿ ಸ್ಥಾನ ದೊರಕಿದುದು ತಮ್ಮಿಂದ ಮತ್ತು ಶ್ರೀಮಾನ್ ವೆಂಕಣ್ಣಯ್ಯನವರಿಂದ.”

ಕರ್ನಾಟಕದ ಏಕೀಕರಣಕ್ಕೆ ಎಂದರೆ ಮೈಸೂರು ಅದರಲ್ಲಿ ಸೇರಿಕೊಳ್ಳು ವುದಕ್ಕೆ ಡಿ ವಿ ಜಿ ಯವರು ವಿರೋಧವನ್ನು ವ್ಯಕ್ತಪಡಿಸಿದ್ದರೂ, ಏಕೀಕರಣದ ಪರವಾಗಿ ಕೃಷ್ಣಕುಮಾರ್ ಕಲ್ಲೂರರು ಗೋಖಲೆ ಸಂಸ್ಥೆಯಲ್ಲಿ 10–1–49

ರಲ್ಲಿ ಉಪನ್ಯಾಸ ಮಾಡಿದಾಗ, ಕಲ್ಲೂರರು ಏಕೀಕರಣ ಪ್ರಶ್ನೆಯನ್ನು ಕೇವಲ ಅಭಿಮಾನೋತ್ಸಾಹ ದೃಷ್ಟಿಯಿಂದ ನೋಡದೆ ಶಾಸ್ತ್ರೀಯವಾಗಿ ಸಂಖ್ಯಾ ವಿಜ್ಞಾನ ದೃಷ್ಟಿಯಿಂದ ನೋಡಿ ಕನ್ನಡ ಪ್ರಾಂತ ರಚನೆಯಾಗಬೇಕಾದುದರ ಆವಶ್ಯಕತೆಯನ್ನು ಕಂಡುಕೊಂಡವರೆಂದೂ, ಹೀಗೆ ಒಂದು ಸಾರ್ವಜನಿಕ ಪ್ರಶ್ನೆಯನ್ನು ಶಾಸ್ತ್ರೀಯವಾಗಿ ಅಭ್ಯಾಸಮಾಡುವ ಜನ ದೇಶದಲ್ಲಿ ಹೆಚ್ಚ ಬೇಕೆಂದೂ, ಗೋಖಲೆ ಸಂಸ್ಥೆಯ ಉದ್ದೇಶವಾದರೂ ಈ ಬಗೆಯ ಅಭ್ಯಾಸ ವನ್ನು ಪ್ರೋತ್ಸಾಹಿಸುವುದೇ ಆಗಿದೆಯೆಂದೂ ಡಿ ವಿ ಜಿ ಹೇಳಿದರು.

ಮದರಾಸಿನ ಪ್ರಸಿದ್ಧ ವಕೀಲರಾದ ಟಿ. ಆರ್. ವೆಂಕಟರಾಮಾ ಶಾಸ್ತ್ರಿ ಗಳು ಡಿ ವಿ ಜಿ ಯವರ ವಿಶ್ವಾಸವನ್ನು ಸಂಪಾದಿಸಿಕೊಂಡಿದ್ದ ಮಹನೀಯರು. ಭಾರತದ ರಾಜಕೀಯ, ವೇದಾಂತ, ಧರ್ಮಶಾಸ್ತ್ರ, ವ್ಯಕ್ತಿಗುಣ, ಕಾವ್ಯ ಮುಂತಾದ ಎಲ್ಲ ವಿಷಯಗಳಲ್ಲಿಯೂ ಅವರಲ್ಲಿ ವಿಚಾರ ವಿನಿಮಯವಾಗು ತ್ತಿತ್ತು. ಅವರು ಕಾಲವಾದಾಗ ತಮಗಾಗಿರುವ ವೈಯಕ್ತಿಕ ನಷ್ಟವನ್ನು ಡಿ ವಿ ಜಿ ಹೇಳಿಕೊಂಡಿದ್ದಾರೆ.

"May I not say my loss is as great as yours? For over thirty years he filled a large place in my life. Particularly after the death of Srinivasa Sastrigal he became part of my moral and spiritual treasure. In all moments of significance to me, I turned to him for guidence or approval ; and when I could not get it, I felt I was about to make a mistake and took the warning. Whenever I wrote or said anything I asked myself habitually—what will Sastrigal say of this? It is snch a support and strength I have lost." (ಡಿ ವಿ ಜಿ ಅವರ ಮಕ್ಕಳಿಗೆ 3-7-1953 ರಲ್ಲಿ ಬರೆದ ಪತ್ರ).

ಡಿ ವಿ ಜಿ ಯವರನ್ನು ಬಹಳಕಾಲದಿಂದ ಬಲ್ಲ, ಅವರೊಡನೆ ಗೋಖಲೆ ಸಂಸ್ಥೆಯನ್ನು ಸ್ಥಾಪಿಸಲು ನೆರವಾದ, ಸ್ನೇಹಿತರಾಗಿದ್ದ ಕೆ. ಸಂಪದ್ಗಿರಿ ರಾಯರು ಡಿ ವಿ ಜಿ ಯವರನ್ನು ಹೀಗೆ ಚಿತ್ರಿಸಿದ್ದಾರೆ.

'D V. G. is a walking directory with interesting information about men (and women) who made any mark in old Mysore during the last 60-70 years in public life,

in the learned professions or in arts and letters. His anecdotage, which has nothing to do with dotage which has not yet cast any shadow on him, is inexhaustible. This covers not only the public activities of these people but their private lives, their peccadilloes and philanderings. In regaling the latter, in particular, he can evince a Rabelaisian gusto, swooping down from the sublime to the ridiculous with amazing ease, making his hearers, who are not prudes by a long way, feel thoroughly embarrassed. Of course, all this is reserved for intimate circles of friends when he is in a going mood. His repertoire, in fact, is so varied and abundant, from real anecdotes, to poetic tags in Sanskrit, Telugu, and Kannada, the *ne plus ultra* in ribaldry and unprintability, that a distinguished friend had long ago awarded a Doctorate on him for this attainment of his.

This capacity to soar and delve in rapid sequence, and not to take himself too seriously has saved him from conceit and vanity, and made him thoroughly human and companionable, equally at home with the high and mighty and the ignorant and humble."

ಶಿವರಾಮ ಕಾರಂತರು ಡಿ ವಿ ಜಿ ಯವರ ಬಹು ಹಳೆಯ ಮಿತ್ರರಲ್ಲೊಬ್ಬರು. ಅವರಿಬ್ಬರ ನಡುವೆ ಪತ್ರ ವ್ಯವಹಾರ ನಡೆಯುತ್ತಿದ್ದುದುಂಟು. ಅವರು ಬೆಂಗಳೂರಿಗೆ ಬಂದಾಗ ಇವರನ್ನು ಕಾಣುತ್ತಿದ್ದುದೂ ಉಂಟು. ಅವರ ಒತ್ತಾಯಕ್ಕೆ ಇವರು ಪುತ್ತೂರಿನ ಪ್ರವಾಸ ಕೈಗೊಂಡರು. ಡಿ ವಿ ಜಿ ಯವರನ್ನು ಕುರಿತು ಕಾರಂತರು ನಾಲ್ಕಾರು ಕಡೆ ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿ ಎರಡು ಗ್ರಂಥಗಳಲ್ಲಿ ಹೇಳಿರುವ ಮಾತುಗಳು ಇವು : "ಡಿ. ವಿ. ಗುಂಡಪ್ಪನವರಂಥ ಮಿತ್ರರಲ್ಲಿ ಯಾವ ವಿಷಯವನ್ನೂ ನಾನು ಚರ್ಚಿಸಬಹುದು. ಅನುಭವ, ವಿದ್ವತ್ತು, ಹಿರಿತನ—ಮೂರೂ ಅವರಲ್ಲಿ ಸೇರಿವೆ. ಕನ್ನಡ ಜನ, ಅವರನ್ನು ಪಡೆದು, ಅವರ ಉಪಯೋಗವನ್ನು ಮಾಡಿಕೊಳ್ಳದಿದ್ದಾರಲ್ಲ ಎಂದು ವ್ಯಸನವಾಗುತ್ತದೆ." (ಹುಚ್ಚು ಮನಸ್ಸಿನ ಹತ್ತು ಮುಖಗಳು)

ಇನ್ನೊಂದು ಕಡೆ: "ಡಿ ವಿ ಗುಂಡಪ್ಪನವರ ಪರಿಚಯವೂ ನನಗೆ ಸೀತಾ ರಾಮಯ್ಯನವರಿಂದಲೇ ದೊರಕಿದ್ದಿರಬೇಕು. ಇವರು ಪ್ರಸಿದ್ಧಿಯಲ್ಲಿ ವಯಸ್ಸಿನಲ್ಲಿ ನನಗಿಂತ ಎಷ್ಟೋ ಹಿರಿಯರು. ಅವರು ನನ್ನನ್ನು ಸಲುಗೆಯಿಂದ ಮಾತನಾಡಿಸುತ್ತಿದ್ದರೂ, ಆ ಸಲುಗೆಯನ್ನು ನಾನು ನಿರ್ವಹಿಸುವುದಕ್ಕೆ ಅಳುಕನ್ನು ಉಳಿಸಿದ್ದಾರೆ. ಅಭಿಮಾನ, ಆದರ, ಸ್ಥಾನೋನ್ನತಿಗಳು ಕಾಣಿಸಿದಾಗಲೂ ನನ್ನ ಅಭಿಪ್ರಾಯಗಳ ದಿಟ್ಟತನಕ್ಕೆ ಹೆಚ್ಚಿನ ಅವಕಾಶ ಕೊಟ್ಟ ಹಿರಿಯರೆಂದರೆ ಡಿ ವಿ ಗುಂಡಪ್ಪನವರು. ಅವರು ಕಾಲವಾದ ಮೇಲೆ ನನಗೆ ಅವರ ನೆನಪು ಮತ್ತಷ್ಟು ಹೆಚ್ಚಾಗಿ ಬರುತ್ತಿದೆ. ಅವರು ಬೆಂಗಳೂರಿನ ಹಳೆಗಾಲದ ನಾಗರಿಕ ಜೀವನದಲ್ಲಿ ತುಂಬ ಗೌರವ ಗಳಿಸಿದವರು. ನಾಗರಿಕರಿಗೆ ಬುದ್ಧಿ ಚುರುಕು ಹುಟ್ಟಿಸಲೆಂದು ಗೋಖಲೆ ವಿಚಾರ ಸಂಸ್ಥೆಯನ್ನು ಸ್ಥಾಪಿಸಿ ನಡೆಯಿಸಿದರು. ಅದಕ್ಕಿಂತ ಪೂರ್ವದಲ್ಲಿ ಕೆಲವು ವರ್ಷ ಸಾಹಿತ್ಯ ಪರಿಷತ್ತಿನ ಮಾರ್ಗದರ್ಶಕರಾಗಿದ್ದುದುಂಟು. ಅವರನ್ನು ತಿಳಿಯದ ಸಮಕಾಲೀನ ಪಂಡಿತರೇ ಕಡಿಮೆ. ನನ್ನ ಎಟುಕಿಗೆ ದೂರ ಇರಬೇಕಾಗಿದ್ದ ಅವರು, ನನಗೆ ತಿಳಿಯದಂತೆ ಹತ್ತಿರವಾಗುತ್ತ ಬಂದುದು ಒಂದು ಸೋಜಿಗದ ಸಂಗತಿ. ಭಾಷಾಪಾಂಡಿತ್ಯ, ಶಾಸ್ತ್ರಪಾಂಡಿತ್ಯ, ರಾಜನೀತಿಗಳ ಕುರಿತು ವಿಶಾಲವಾದ ತಿಳಿವು, ಪ್ರಚಲಿತ ರಾಜಕೀಯವನ್ನು ಕುರಿತು ವಿಮರ್ಶಕ ಬುದ್ಧಿ ಅವರದ್ದಿತ್ತು. ಹತ್ತಿರ ಬಂದವರೊಡನೆ, ಅದರಲ್ಲಿಯೂ ಸ್ನೇಹಿತರೊಡನೆ ತಡೆಯಿಲ್ಲದೆ ಮಾತನಾಡುವ ಸ್ವಭಾವ ಅವರದು. 'ಇದು ತಪ್ಪು, ಇದು ಸರಿ' ಎಂದು ಯಾರೊಡನೆಯೂ ಯಾವ ದಾಕ್ಷಿಣ್ಯವೂ ಇಲ್ಲದೆ ಹೇಳಬಲ್ಲರು. ತಮ್ಮ ಮೈಸೂರು ಪ್ರಾಂತ ಪ್ರತ್ಯೇಕವಾಗಿ ಉಳಿಯಬೇಕು ಎಂಬ ಹಂಬಲ ಅವರದಿತ್ತು. ಅದೇ ಕಾಲಕ್ಕೆ 'ಕರ್ನಾಟಕ ಒಂದಾಗಬೇಕು' ಎಂಬ ಹಟ ನನ್ನದಿತ್ತು. ಹಿಂದೂ ಧರ್ಮ ಶಾಸ್ತ್ರಗಳನ್ನು ಅರಗಿಸಿಕೊಂಡವರು ಅವರು. ಅವರ ಧಾರ್ಮಿಕ ವಿಚಾರ ಸರಣಿ ಸಾಂಪ್ರದಾಯಿಕವಾದ ವಿಚಾರಸರಣಿಯೆನ್ನಬೇಕು. ಅಂಥಾ ವಿಷಯಗಳಲ್ಲಿ ನನ್ನ ಮನಸ್ಸು ಅವರ ವಾದಸರಣಿಗಳನ್ನು ಒಪ್ಪದು ಎಂಬುದು ಅವರಿಗೂ ಗೊತ್ತಿತ್ತು. ಹಾಗಿದ್ದರೂ, ನಾವು ಜತೆಗೂಡಿ ನಮ್ಮ ಸಾಮಾಜಿಕ ಜೀವನವನ್ನು ಕುರಿತು ವೀಕ್ಷಿಸುವಾಗಲೆಲ್ಲ—ಅವರ ಭಾವನೆಗಳಿಗೂ ನನ್ನ ಭಾವನೆಗಳಿಗೂ ಹೆಚ್ಚಿನ ಅಂತರ ಇರುತ್ತಿರಲಿಲ್ಲ. ಗುಂಡಪ್ಪನವರ ಮತ್ತೊಂದು ದೊಡ್ಡ ಗುಣವೆಂದರೆ ತಾವು ಅಭಿಮಾನ ಇರಿಸಿಕೊಂಡ ಮಿತ್ರರ ವಿಷಯದಲ್ಲಿ, ಅವರ ಸಂಸಾರದ ವಿಷಯದಲ್ಲಿ, ಕಷ್ಟಸುಖಗಳ ವಿಷಯದಲ್ಲಿ ಅವರಿಗೆ ಅಳಿಯ

ಲಾರದ ನೆನಪು. ನಾನು ಎಂದಾದರೂ ಪುತ್ತೂರಿಂದ ಬೆಂಗಳೂರಿನಲ್ಲಿರುವ ಅವರನ್ನು ಕಾಣಲು ಹೋದರೆ ದಕ್ಷಿಣ ಕನ್ನಡದ ಪಂಜೆಯವರೋ ಗೋವಿಂದ ಪೈಗಳೋ ಏನು ಮಾಡುತ್ತಿದ್ದಾರೆಂದು ಅವರಿಗೆ ತಿಳಿಸಲೇಬೇಕು. ಪುತ್ತೂರಿನ ಶ್ಯಾಮಶಾಸ್ತ್ರಿಗಳು ಹೇಗೆ ಇದ್ದಾರೆ ? ಶಂಭುಶರ್ಮರು ಹೇಗಿದ್ದಾರೆ ? ಮೊಳಹಳ್ಳಿ ಶಿವರಾಯರು ಹೇಗಿದ್ದಾರೆ ? ಎಂದು ತಪ್ಪದೇ ಅವರು ಕೇಳುತ್ತಾರೆ. ಅಂಥ ಪ್ರಶ್ನೆಗಳಿಗೆ ತಕ್ಕ ಉತ್ತರ ಹೇಳದಿದ್ದರೆ ಅವರಿಗೆ ಸಮಾಧಾನವಾಗದು. ಅವರ ವಿಷಯದಲ್ಲಿ ನಾನು ಕಂಡುಕೊಂಡ ಒಂದು ಭ್ರಮೆಯೋ, ಸತ್ಯವೋ ಎಂದರೆ ನಮ್ಮ ಉಭಯತರಿಗೂ ಪರಿಚಿತರಾದ ಯಾವನೊಬ್ಬ ವ್ಯಕ್ತಿಯ ವಿಚಾರವನ್ನೇ ತೆಗೆಯಲಿ, ಯಾವ ವಿಷಯವನ್ನೇ ತೆಗೆಯಲಿ, 'ಇದು ಜಳ್ಳು', 'ಇದು ತುಂಬಿದ್ದು' ಎಂದು ಆ ಕ್ಷಣವೇ ಗುರುತಿಸಿ ಹೇಳಬಲ್ಲ ಶಕ್ತಿ ಅವರಿಗಿತ್ತು. ನಾನು ಪ್ರಯಾಸದಿಂದ, ದೀರ್ಘ ಅನುಭವದಿಂದ ಕಂಡುಕೊಂಡ ಕೆಲವು ನಿರ್ಣಯಗಳನ್ನು ಅವರು ಥಟ್ಟನೆ ನೋಡಿದೊಡನೆಯೇ ಹೇಳಬಲ್ಲರು ಅನಿಸುವಂತಿರುತ್ತದೆ. ತಮ್ಮ ಕುತೂಹಲಕ್ಕೆ ಸಿಕ್ಕಿದ, ಅಥವಾ ಪರಿಚಯಕ್ಕೆ ಬಂದ ವ್ಯಕ್ತಿಗಳ ಗುಣ, ಯೋಗ್ಯತೆ, ತೂಕಗಳನ್ನು ಅಳೆಯುವುದರಲ್ಲಿ ಅವರ ಒಲವು ಬಲು ತೀಕ್ಷ್ಣ. ಭಾರತ ದೇಶದ ಹೆಡ್ಡರೂ ಬುದ್ಧಿವಂತರೂ ತಲೆಯ ಮೇಲೆ ಹೊತ್ತು ಆರಾಧಿಸುವ ವ್ಯಕ್ತಿಗಳ ಪ್ರಸ್ತಾಪ ಬಂದರೆ ಅವರು 'ನಿಮ್ಮ ಈ ಉತ್ಸವ ಮೂರ್ತಿಗೆ ಮಣ್ಣಿನ ಕಾಲಿದ್ದುದು ನಿಮಗೆ ಗೊತ್ತೇ ಆಗಲಿಲ್ಲವೇ ?' ಎಂದು ಕೇಳಿಯಾರು. ಹಾಗೆಂದು ತೂಕವಿಲ್ಲದವರನ್ನೂ, ಅವರಿಗೆ ಅಪಚಾರ ವೆಸಗಿದವರನ್ನೂ ಕುರಿತು ಮಾತನಾಡುವ ಪ್ರಸಂಗ ಬಂದಾಗ, ಅವರ ಗುಣ ಶೀಲಗಳನ್ನು ರೂಪಿಸಿದ ಪರಿಸ್ಥಿತಿಯನ್ನೂ ಬಣ್ಣಿಸಿ ಅನುತಾಪದಿಂದ ತಿಳಿಸುತ್ತಾರೆ: "ಪಾಪ, ಇಂಥದೆಲ್ಲ ಸಂಭವಿಸಿ ಆ ವ್ಯಕ್ತಿಯ ಬಾಳು ಕೆಟ್ಟಿತು," ಎಂದು ಹೇಳಿ ಸಮಾಧಾನ ಹೇಳುತ್ತಾರೆ. ಪ್ರಾಯಶಃ ಅವರ 'ಮಂಕುತಿಮ್ಮನ ಕಗ್ಗ' ಎಂಬುದು ಜೀವನವನ್ನು ತೀರ ಆಳವಾಗಿ ಅಭ್ಯಸಿಸಿದ ಬದುಕಿನ ಫಲ ಎನ್ನಬೇಕು." (ಸ್ಮೃತಿ ಪಟಲದಿಂದ : ಸಂಪುಟ 3)

ಭಾರತವು ಸ್ವತಂತ್ರವಾದಾಗ, ಅದಕ್ಕೆ ಸಂದೇಶವೊಂದನ್ನು ಕೇಳಿದಾಗ, ಪ್ರಖ್ಯಾತ ಪಂಡಿತೋತ್ತಮರಾದ ಆನಂದ ಕುಮಾರಸ್ವಾಮಿಯವರು "Be yourself. Follow Mahatma Gandhi, Bharatan Kumarappa, D. V. Gundappa, Abul Kalam Azad, Abdul Gaffar khan and Ramana Maharshi" ಎಂಬ ಸಂದೇಶವಿತ್ತರು. ಈ ವಿಚಾರವನ್ನು ಡಿ ವಿ ಜಿ

ಯಾರೊಡನೆಯೂ ಪ್ರಸ್ತಾಪಿಸುತ್ತಿರಲಿಲ್ಲ. ಯಾರಾದರೂ ಈ ವಿಚಾರವನ್ನೆತ್ತಿದರೆ ಸಂಕೋಚಪಟ್ಟುಕೊಳ್ಳುತ್ತಿದ್ದರು. ತಮಗೆ ಆನಂದ ಕುಮಾರಸ್ವಾಮಿಯವರೊಡನೆ ಸಂಪರ್ಕವಿರಲಿಲ್ಲವೆಂದೂ, ಅವರಿಗೆ ತಮ್ಮ ತತ್ತ್ವಾನ್ವೇಷಣೆಯ ವಿಷಯ ಹೇಗೆ ತಿಳಿಯಿತೆಂಬುದು ತಮಗೆ ಆಶ್ಚರ್ಯವನ್ನುಂಟುಮಾಡಿದೆ ಎಂದೂ ಸ್ನೇಹಿತರೊಬ್ಬರಿಗೆ ಪತ್ರ ಬರೆದಿದ್ದಾರೆ.
ಆದರೆ :

ಯಥಾ ಸಂಪುಷ್ಪಿತಸ್ಯ ಪುಷ್ಪಸ್ಯ ದೂರಾತ್ ಗಂಧೋ ವಾತಿ
ತಥಾ ಪುಣ್ಯಸ್ಯ ಕರ್ಮಣಃ ದೂರಾತ್ ಗಂಧೋ ವಾತಿ

ಎಂಬ ಮಾತೇ ಇಲ್ಲವೇನು ?

ರಾಜಾಜಿಯವರು "Sri Gundappa is a remarkable person entirely self-made and totally independent of any assistance from University or College, yet far superior in attainments to anyone who has had the brightest university career. His untiring efforts to produce a well-informed elite for political and social work have had their reward. After the success of the non-co-operation campaign a special effort was needed to make people see that good politics called for a great deal of information and correct thinking over and above jail going. Sri Gundappa has helped greatly in that direction" ಎಂದಿದ್ದಾರೆ.

ಒಂದು ಸಲ ಕೈಲಾಸಂ, ರಾಜರತ್ನಂ ಅವರನ್ನು "ಗುಡ್ ಓಲ್ಡ್ ಗಾಡ್ ವಿಲ್ಲಿಂಗ್ ಹೇಗಿದ್ದಾರೆ, ಜಿ.ಪಿ?" ಎಂದು ಕೇಳಿದರಂತೆ. ಅರ್ಥವಾಗದೆ ರಾಜರತ್ನಂ 'ಯಾರು ಸರ್?' ಎಂದರಂತೆ. 'ಇನ್ ಯಾರು? ಗಾಡ್ ವಿಲ್ಲಿಂಗ್ ಗುಂಡಪ್ಪ' ಎಂದರು ಕೈಲಾಸಂ. ಗಾಡ್ ವಿಲ್ಲಿಂಗ್ ಬಾಬ್ತು ರಾಜರತ್ನಂ ಅವರಿಗೆ ಅರ್ಥವಾಗದೆ ಕೈಲಾಸಂ ಅವರನ್ನೇ ಕೇಳಿಬಿಟ್ಟರಂತೆ. ಅವರು "ಅಯ್ಯೋ, ನೀನು ಡಿಕ್ಷ್‌ನರೀನೇ ನೋಡೊಲ್ವೆ ಮಗು, ಮನೇಲಿ ಹೋಗಿನೋಡು. ಡಿ ವಿ ಅಂದರೆ ಏನು ಅಂತ" ಎಂಬ ಅವರ ಸಲಹೆಯಂತೆ ಮನೆಗೆ ಹೋಗಿ ನೋಡಿದರಂತೆ. ಡಿ ವಿ ಎಂದರೆ Deo Volente, ಎಂದರೆ god willing ಎಂದು ನಿಘಂಟು ಹೇಳಿತು. ರಾಜರತ್ನಂ ಹೇಳುತ್ತಾರೆ: "ಡಿ ವಿ ಜಿ ಯವರ ಮಾತುಗಳನ್ನು ಬರಹಗಳನ್ನು ಜ್ಞಾಪಿಸಿಕೊಂಡೆ. ಕೈಲಾಸಂ ಹೇಳಿದ್ದು ಅರ್ಥವಾಯಿತು. ಗುಂಡಪ್ಪನವರ ಇನಿಷಿಯಲ್ಸ್ ಎಷ್ಟು ಉಚಿತ, ಎಷ್ಟು ಅರ್ಥಪೂರ್ಣ ಎಂಬುದರ

ಅರಿವಾಯಿತು."

ಹಾಗೆಯೇ ನ್ಯಾಶನಲ್ ಕಾಲೇಜಿನ ಉಪಾಧ್ಯಾಯರಾಗಿದ್ದ ಕೆ. ಎಲ್. ಸುಬ್ಬರಾಯರಿಗೆ ಡಿ ವಿ ಜಿ: ಡೊಳ್ಳು ಹೊಟ್ಟೆ ವಿದ್ಯಾಗಣಪ.

ಅವರ ಸ್ನೇಹ ವಿಶ್ವಾಸಗಳು ಸಾಹಿತಿಗಳಿಗೆ ಅಧಿಕಾರಿಗಳಿಗೆ ದೊಡ್ಡ ಮನುಷ್ಯರಿಗೇ ಸೀಮಿತವಾಗಿರಲಿಲ್ಲ. ಸಮಾಜದ ಎಲ್ಲ ಬಗೆಯ ಜನರೂ ಅವರಲ್ಲಿಗೆ ಬರುತ್ತಿದ್ದರು. ಎಲ್ಲರಿಗೂ ಅವರವರಿಗೆ ತಕ್ಕಂತೆ, ಅವರವರಿಗೆ ಸಮಾಧಾನವಾಗುವಂತೆ ಡಿ ವಿ ಜಿ ನಡೆದುಕೊಳ್ಳುತ್ತಿದ್ದುದರಿಂದ ಅವರ ಬಳಿ ಬಂದವರು ತಮ್ಮನ್ನು ಡಿ ವಿ ಜಿ ಒಂದು ವಿಧವಾಗಿ ಸ್ಪೆಶಲ್ ಆಗಿಯೇ ನಡೆಸಿಕೊಂಡರು ಎಂದು ತಿಳಿದುಕೊಳ್ಳುತ್ತಿದ್ದರು. ಇದರಲ್ಲಿ ಯಾವ ವಿಧವಾದ ಬೂಟಾಟಿಕೆಯಿರಲಿಲ್ಲ. ಅವರು ಎಲ್ಲರಲ್ಲಿಯೂ ಬ್ರಹ್ಮವಸ್ತುವನ್ನೇ ಕಾಣುವ ಅಭ್ಯಾಸ ಮಾಡಿಕೊಂಡದ್ದರಿಂದ ಅವರಿಗೆ ಈ ಸಮದರ್ಶನ ಕಷ್ಟವಾಗಿರಲಿಲ್ಲ.

ಬೇಲೂರು ಶ್ರೀನಿವಾಸ ಅಯ್ಯಂಗಾರ್, ಬಾಟನಿ ಪ್ರಾಧ್ಯಾಪಕರಾಗಿದ್ದ ಸಂಪತ್ಕುಮಾರನ್, ಮೋಕ್ಷಗುಂಡಂ ಕೃಷ್ಣಮೂರ್ತಿ ಇವರೊಡನೆ ಸೇರಿದಾಗ ಮಾಡುತ್ತಿದ್ದ ಚೇಷ್ಟೆಗೆ, ಆಡುತ್ತಿದ್ದ ಮಾತಿಗೆ ಎಲ್ಲೆಯಿರಲಿಲ್ಲ. ಹಾಗೆಯೇ ನೇತ್ರತಜ್ಞರಾದ ಬಿ. ಕೆ. ನಾರಾಯಣರಾಯರೊಡನೆ ಇರುವಾಗ, ಗಾಂಭೀರ್ಯ. ಬಸವನಗುಡಿಯ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನದ ಹಿಂಬದಿಯಲ್ಲಿ ಒಂದು ಕಲ್ಲು ಬಂಡೆಯ ಮೇಲೆ ಸೇರುತ್ತಿದ್ದ ಮಿತ್ರಗೋಷ್ಠಿ ಬಸವನಗುಡಿಯಲ್ಲಿ ಜನಪ್ರಸಿದ್ಧವಾಗಿತ್ತು. ನಿಟ್ಟೂರು ಶ್ರೀನಿವಾಸರಾಯರು, ಎಂ. ಪಿ. ಸೋಮಶೇಖರರಾಯರು, ಇಂಗ್ಲಿಷ್ ಪ್ರೊಫೆಸರ್ ಕೆ. ಅನಂತರಾಮಯ್ಯನವರು, ಪಿ. ಶ್ರೀನಿವಾಸರಾಯರು, ವಿ. ಸೀತಾರಾಮಯ್ಯನವರು ಮುಂತಾದವರು ಸೇರುತ್ತಿದ್ದ ಆ ಗೋಷ್ಠಿಯಲ್ಲಿ ಚರ್ಚೆಗೆ ಬರದ ವಿಷಯವೇ ಇರಲಿಲ್ಲ. ಜ್ಞಾಪಕ ಚಿತ್ರಶಾಲೆಯ ಅನೇಕ ಪ್ರಸಂಗಗಳು ಅಲ್ಲಿ ಹೇಳಲ್ಪಟ್ಟವೇ.

ಸಂಗೀತವೆಂದಾಗ ವಾಸುದೇವಾಚಾರ್ಯರು, ನಾರಾಯಣಸ್ವಾಮಿ ಭಾಗವತರು, ಚಿಂತನಪಲ್ಲಿ ವೆಂಕಟರಾಯರು, ವೀಣೆ ರಾಜಾರಾಯರು ಇವರಲ್ಲಿ ಚರ್ಚೆ ವಿನೋದ ಸಂಗೀತಗೋಷ್ಠಿ. ಅವರು ಸಂಗೀತವನ್ನು ಸವಿಯುತ್ತಿದ್ದ ರೀತಿಯೇ ನೋಡಲು ಒಂದು ಸೊಗಸು. ತಾಳಕ್ಕೆ ರಾಗಕ್ಕೆ ತಕ್ಕಂತೆ ಕೈಯಲ್ಲಿ ಅಭಿನಯ ತೋರುತ್ತ ಅಷ್ಟು ತನ್ಮಯರಾಗಿ ಸಂಗೀತವನ್ನು ಆಲಿಸುತ್ತಿದ್ದರು.

ಡಿ ವಿ ಜಿ ಸಿನಿಮಾಗಳಿಗೂ ಹೋಗುತ್ತಿದ್ದದ್ದುಂಟು. ಶ್ರೀನಿವಾಸ ಶಾಸ್ತ್ರಿಗಳೊಡನೆ ಇತರ ಮಿತ್ರರೊಡನೆ ಕಂಟೋನ್ಮೆಂಟಿನ ಸಿನಿಮಾಗಳು, ಹಾಗೆಯೇ

ಗಾಯನ ಸಮಾಜದಲ್ಲಿ ಸಂಗೀತ ಕಛೇರಿಗಳು.

ಅವರು ವಿದ್ವತ್ ಪಕ್ಷಪಾತಿಗಳು. ಪಂಡಿತರಿಗೆ ಹೆಚ್ಚಾದ ಗೌರವ. ವೈದಿಕರಿಗೆ ಅವರ ತಕ್ಕ ಗೌರವ. ವೈದಿಕರು ಬಂದಾಗ ಒಂದು ಹನಸ್ಸು ಹೇಳಿಸಿ, ದಕ್ಷಿಣೆ ತಾಂಬೂಲಗಳನ್ನು ಅವರಿಗೆ ಸಲ್ಲಿಸಲೇ ಬೇಕು.

ಆದರೆ ಡಿ ವಿ ಜಿ ಯವರು ತಮ್ಮನ್ನು ಪಂಡಿತರೆಂದೋ ವಿದ್ವಾಂಸರೆಂದೋ ತಿಳಿದುಕೊಂಡಿದ್ದವರಲ್ಲ. ತಮ್ಮ ಜ್ಞಾನದಲ್ಲಿ ಅನೇಕ ನ್ಯೂನತೆಗಳಿವೆಯೆಂದೂ, ಅದಕ್ಕೆ ಕಾರಣ ತಮಗೆ ಕ್ರಮಬದ್ಧವಾದ ಓದು ಇಲ್ಲದುದೇ ಎಂದೂ ಅವರು ಹೇಳಿಕೊಂಡಿದ್ದಾರೆ.

ಆದರೆ ವಾಸ್ತವವಾಗಿ ಅವರಿಗಿದ್ದ ಪಾಂಡಿತ್ಯ ಅಸಾಧಾರಣವಾದದ್ದು—ವಿಸ್ತಾರವಾದದ್ದು, ಆಳವಾದದ್ದು. ಅವರ ಬುದ್ಧಿಯೂ ಅಷ್ಟೇ ನಿಶಿತವಾದದ್ದು. ಇದೆಲ್ಲವನ್ನೂ ಕಂಡೇ ವಿ. ಸೀ. ಅವರು ಒಂದು ಕಡೆ "Whose is easily the most massive intellect in our literary scene" ಎಂದು ಹೇಳಿದ್ದಾರೆ.

ಬಹಳ ಚಿಕ್ಕಂದಿನಿಂದಲೇ ಪ್ರಾರಂಭವಾದ ಅವರ ಓದು ತಡೆಯಿಲ್ಲದೆ ಮುಂದುವರೆಯಿತು. ತಾವಾಗಿ ಕೊಂಡುಕೊಂಡ ಪುಸ್ತಕಗಳ ಜೊತೆಗೆ ಸ್ನೇಹಿತರು ಕೊಟ್ಟ ಪುಸ್ತಕಗಳ ಜೊತೆಗೆ, ಮೈಸೂರು ವಿಶ್ವವಿದ್ಯಾನಿಲಯ, ಬೆಂಗಳೂರು ಪಬ್ಲಿಕ್ ಲೈಬ್ರರಿ, ಶಾಸನಸಭೆ, ಬ್ರಿಟಿಷ್ ಕೌನ್ಸಿಲ್ ಮುಂತಾದ ಸಂಸ್ಥೆಗಳಲ್ಲಿದ್ದ ಗ್ರಂಥಗಳನ್ನು ಪರಿಶೀಲಿಸಿದ್ದರು.

ವೇದವಾಙ್ಮಯ, ಇಂಗ್ಲಿಷ್, ಕನ್ನಡ, ಸಂಸ್ಕೃತ, ತೆಲುಗು ಈ ಭಾಷೆಗಳಲ್ಲಿನ ಮಹಾಕಾವ್ಯಗಳು, ಗದ್ಯಪದ್ಯಗ್ರಂಥಗಳು, ಅಲಂಕಾರ, ವ್ಯಾಕರಣ, ಛಂದಸ್ಸು ಇವಕ್ಕೆ ಸಂಬಂಧಪಟ್ಟವು. ರಾಜಕೀಯ, ಶಾಸನಶಾಸ್ತ್ರ, ಅರ್ಥಶಾಸ್ತ್ರ, ಚರಿತ್ರೆ, ತತ್ತ್ವ, ಪತ್ರಿಕೋದ್ಯಮ ಮುಂತಾದ ಶಾಸ್ತ್ರಗಳಿಗೆ ಸಂಬಂಧಪಟ್ಟ ಗ್ರಂಥಗಳು ಅವರ ಅಧ್ಯಯನಕ್ಕೆ ಒಳಗಾದವು. ಆ ಶಾಸ್ತ್ರಗಳಿಗೆ ಸಂಬಂಧಪಟ್ಟ ಪ್ರೌಢ ವಿದ್ಯಾರ್ಥಿಯೊಬ್ಬನು, ಆ ಶಾಸ್ತ್ರಗಳಲ್ಲಿಯ ವಿದ್ವಾಂಸನೊಬ್ಬನು ಓದಿರಬಹುದಾದ ಗ್ರಂಥಗಳೆಲ್ಲದರ ಪರಿಚಯವಿತ್ತು ಅವರಿಗೆ. ರ್‍ಯಾಷನಲಿಸ್ಟ್ ಪ್ರೆಸ್ ಅಸೋಸಿಯೇಷನ್ ಪ್ರಕಟಿಸಿದ ಗ್ರಂಥಗಳು, ಬರ್‍ಟ್ರಂಡ್ ರಸೆಲ್, ಹಕ್ಸ್‌ಲೆ, ಇಂಗರ್ ಸಾಲ್, ವೆಲ್ಸ್ ಮುಂತಾದವರ ಗ್ರಂಥಗಳನ್ನೂ ವಿಜ್ಞಾನಗ್ರಂಥಗಳನ್ನೂ ಅವರು ಕುತೂಹಲದಿಂದ ನೋಡಿದ್ದರು.

ಅವರ ಜ್ಞಾಪಕಶಕ್ತಿಯೂ ಹಾಗೆಯೇ ವಿಸ್ಮಯಕಾರಿಯಾದದ್ದು.

ಎಂದೋ ಎಲ್ಲೋ ಕೇಳಿದ ಶ್ಲೋಕ, ಪದ್ಯ, ಹಾಡು ಎಲ್ಲ ಸಮಯೋಚಿತವಾಗಿ ಅವರಿಂದ ಬರುತ್ತಿದ್ದುವು. ಇಷ್ಟು ದೊಡ್ಡ ಸಂಗ್ರಹ ಇವರಿಗೆ ಹೇಗೆ ಸಾಧ್ಯವಾಯಿತು ಎಂದು ಆ ಭಾಷೆಗಳ ಪಂಡಿತರೇ ಆಶ್ಚರ್ಯಪಡುತ್ತಿದ್ದದ್ದುಂಟು. ಋಗ್ವೇದದ ಪ್ರಾಧ್ಯಾಪಕರೊಬ್ಬರು "ನಿಜ, ನಾನೇನೋ ಋಗ್ವೇದ ಘನಾಂತ ಅಧ್ಯಯನ ಮಾಡಿದ್ದೇನೆ, ಈಗ ಅಧ್ಯಾಪನ ಮಾಡುತ್ತಿದ್ದೇನೆ. ಆದರೆ ಗುಂಡಪ್ಪನವರ ಎದುರಿಗೆ ನಿಂತು ಮಾತನಾಡುವುದೆಂದರೆ ಎದೆ ಅಳುಕುತ್ತದೆ" ಎಂದಿದ್ದರು.

ಈ ಪಾಂಡಿತ್ಯ ಅವರಿಗೆ ಅನೇಕ ವಿದ್ವಾಂಸರ ಗೌರವವನ್ನೂ ವಿಶ್ವಾಸವನ್ನೂ ಸಂಪಾದಿಸಿಕೊಟ್ಟಿತ್ತು. ಹಾಗೆಯೇ ತಮಗೆ ಸಂದೇಹ ಬಂದ ಸಮಯದಲ್ಲಿ ತಮಗೆ ಮಾಹಿತಿಗಳು ದೊರೆಯದ ಸಮಯದಲ್ಲಿ ಆ ವಿಷಯವನ್ನು ಕುರಿತ ತಜ್ಞರನ್ನು ಕೇಳಲು ಅವರು ಹಿಂಜರಿಯುತ್ತಿರಲಿಲ್ಲ.

ಅವರ ಇನ್ನೊಂದು ಗುಣ,ವಿಶಾಲ ಮನೋಭಾವ ಮತ್ತು ಇಂಗಿತಜ್ಞತೆ. ಯಾವ ಸಮಸ್ಯೆಗೂ ತಾವು ಹೊಂದಿದ್ದ ಅಭಿಪ್ರಾಯಕ್ಕಿಂತ ಬೇರೆಯದೊಂದುಂಟು ಎಂದು ತಿಳಿದಿದ್ದವರು ಅವರು. ಆದ್ದರಿಂದ ಒಂದು ನಿರ್ಣಯಕ್ಕೆ ಬರುವ ಮೊದಲು ಇತರ ಅಭಿಪ್ರಾಯಗಳನ್ನೂ ಕೇಳಬೇಕೆಂಬ ಮನೋಭಾವ ವಿದ್ದವರು. ಇಂಗಿತಜ್ಞತೆಗೆ ಉದಾಹರಣೆಯೆಂದರೆ ಅವರು ಪತ್ರಗಳಲ್ಲಿ ಕೊನೆಯ ಪಂಕ್ತಿಯಲ್ಲಿ ಬರೆಯುತ್ತಿದ್ದ ಈ ವಾಕ್ಯ: "Please do not trouble yourself to send a reply." ತ್ರಿವೇಣಿಯ ರಾಮಕೋಟೀಶ್ವರ ರಾಯರು ತಾವು ರಾಜಾಜಿಯವರನ್ನು ಕಂಡ (ಮಾರ್ಚ್ 1952) ವಿಷಯವನ್ನು ಕುರಿತು ಡಿ ವಿ ಜಿ ಯವರಿಗೆ ಬರೆಯುತ್ತಾ "About your article he said 'I find Gundappa adopting the Vaishnavic attitude of Grace, Surrender and Delight.' He wanted me to write to you that he was somewhat busy. "But Gundappa will understand. In one of his letters he tells me that I need not trouble to send a reply. I particularly appreciate that portion of his letter. It shows he understands the difficulties of others," ಎಂದಿದ್ದರು.

ಪ್ರಾಮಾಣಿಕವಾಗಿ ಅಭಿಪ್ರಾಯವನ್ನು ವ್ಯಕ್ತಪಡಿಸುವುದನ್ನು ಹೇಗೆ ತಪ್ಪಿಸಿಕೊಳ್ಳುತ್ತಾರೆ ಎಂಬುದೂ ಅವರಿಗೆ ತಿಳಿಯುತ್ತಿತ್ತು. ಅದಕ್ಕೆ ಉದಾಹರಣೆಯಾಗಿ ಒಂದು ನಿದರ್ಶನವನ್ನು ಕೊಡಬಹುದು. ಮಂತ್ರಿಮಹೋದಯ

ರೊಬ್ಬರಿಗೆ 'ರಾಜ್ಯಶಾಸ್ತ್ರ' ಗ್ರಂಥವೊಂದನ್ನು ಕಳುಹಿಸಿದಾಗ ಅವರ ಆಪ್ತ ಕಾರ್ಯದರ್ಶಿ: "I write to acknowledge the receipt of your book "Rajya Shastra" which you very kindly sent to the Hon'ble Sri .. Please accept the thanks of Sri....." ಎಂಬ ಪತ್ರ ಬರೆದರು. ಅದರ ಮೇಲೆ ಡಿ ವಿ ಜಿ "This mode of dealing with the matter saves the recipient of the book the trouble of reading it and the embarrassment of expressing an opinion," ಎಂಬ ಟಿಪ್ಪಣಿ ಮಾಡಿಕೊಂಡಿದ್ದಾರೆ.

ಡಿ ವಿ ಜಿ ಯವರು ಎಲ್ಲ ಜನಗಳ ಗೌರವಕ್ಕೆ ಪಾತ್ರರಾಗಿದ್ದರು. ಅವರ ಅಭಿಪ್ರಾಯಗಳನ್ನು ಅಂಗೀಕರಿಸದಿದ್ದವರೂ ಸಹ ಅವರಲ್ಲಿ ಗೌರವವನ್ನಿಟ್ಟಿದ್ದದ್ದು ಒಂದು ವಿಶೇಷ. ಉದಾಹರಣೆಗೆ ಪ್ರಗತಿಶೀಲ ಸಾಹಿತ್ಯ ಪ್ರವರ್ತಕರಾದ ಅ. ನ. ಕೃಷ್ಣರಾಯರು ತಮ್ಮ ಒಂದು ಪತ್ರದಲ್ಲಿ (1-10-1943) "My pugnacious optimism does not permit me to consider you as 'old' or as "played out." I solicit your kind indulgence in re-affirming my previous statement and asking for more—more-of your epic prose" ಎಂದು ಬರೆದಿದ್ದಾರೆ.

"ತಾನು ಕಂಡಿರುವ ಒಂದು ನ್ಯೂನತೆ" ಎಂದು ವಿ. ಸೀ ಅವರು ಡಿ ವಿ ಜಿ ಯವರನ್ನು ಕುರಿತು ಬರೆಯುತ್ತಾ ('ಮಹನೀಯರು' ಗ್ರಂಥದಲ್ಲಿ) "ಅವರ ಬಳಿಗೆ ಹೆಚ್ಚಾಗಿ ಬರುವುದು ಸರಕಾರದ ವಿರೋಧ ಪಕ್ಷಗಳು, ವಿಶ್ರಾಂತಿ ಪಡೆದವರು, ಬೇಸೆ ಪಟ್ಟವರು, ಅಸಮಾಧಾನವಿರುವವರು—ಅತಿಯಾಗಿ ಬಂದು ಬಂದು, ವಿರೋಧ ಪಕ್ಷಗಳ ಮಾತೇ ಅತಿಯಾಗಿ ಅವರ ಕಿವಿಗೆ ಬೀಳುತ್ತದೆ. ತುಂಬ ಗಣ್ಯರು ಎನ್ನಿಸಿಕೊಂಡರು — ಮೋಟಾರ್ ಕಾರ್, ಬ್ಯಾಂಕ್ ಅಕೌಂಟ್ ಇರುವ ಜನ—ಅವರ ಮನೆಗೆ ಹೋಗಿ ತಮಗೆ ಮಾತ್ರ ಗೊತ್ತಿರುವ ವಿಷಯಗಳನ್ನು ತಮ್ಮ ನಿಲುವಿನ ಸ್ಥಾಪನೆಗಾಗಿ ಧಾರಾಳವಾಗಿ ನೆರಹುವುದರಿಂದ ಈ ಅಂಶವೇ ಅವರ ಮನಸ್ಸನ್ನು ತುಂಬುವ ಅವಕಾಶ ಹೆಚ್ಚು. ಯಾರ ಯಾರ ಯೋಗ್ಯತೆ ಎಂಥದು, ಚರಿತ್ರೆ ಎಂಥದು ಎಂಬುದು ಅವರಿಗೆ ಚೆನ್ನಾಗಿ ಗೊತ್ತು. ಆದರೂ ಬಿಟ್ಟದಂತೆ ಏರಿ ಬೀಳುವ ಈ ಅತೃಪ್ತಿ, ಭಂಗ, ಮೂದಲೆ, ಆಕ್ಷೇಪಣಾಕಾಂಡ, ಅಸಮಾಧಾನ, ಅವರ ಅಭಿಪ್ರಾಯಗಳನ್ನು ತೀಕ್ಷ್ಣವಾಗಿ ಮಾರ್ಪಡಿಸಬಲ್ಲದ್ದು. ಅವರಂಥ ಸತ್ತ್ವವಿಲ್ಲದವರು ಇಂಥಲ್ಲಿ ಬರಿಯ

ವ್ಯಾಕ್ಯೂಯಮ್ ಕ್ಲೀನರಂತೆ ಆಗಿಬಿಡುತ್ತಾರೆ" ಎಂದಿದ್ದಾರೆ.

ಅದಕ್ಕೆ ಅವರೇ 'D. V. Gundappa' ಎಂಬ ಗ್ರಂಥದಲ್ಲಿ ಉತ್ತರವನ್ನೂ ಹೇಳಿಬಿಟ್ಟಿದ್ದಾರೆ "This brings him to the position of a critic of Government. i. e. in opposition—for that becomes the duty of a citizen or his representative to offer comments on policy, procedure and movements. D V G has kept his character and work open 'so much in the sunlight that he will not hold against them in paltry, winking tapers of excuses, and promises.' One consequence of this has unfortunately been that all disgruntled people get access to such men and they get more of the marred side of things than the achievements. A lesser man than D V G can be definitely warped by the weight of such information by becoming so much a depository of the opposite side of cases. That he has been healthful, a sport and constructive in his outlook and attitude, in his assessments and judgements and gives a hearing to and offers wholesome advice to every sort of person has made him a true Rashtraka."

ಈ ಅಭಿಪ್ರಾಯಕ್ಕೆ ಪೂರಕವಾಗಿ ಒಂದು ಮಾತು ಹೇಳಬಹುದೇನೋ. ಡಿ ವಿ ಜಿ ಯವರು ಲಾಗಾಯಿತಿನಿಂದಲೂ ಅಪೋಸಿಷನ್ (ವಿರೋಧ ಪಕ್ಷ) ದಲ್ಲಿದ್ದವರೇ. ಅನೇಕವೇಳೆ ಏಕಾಕಿಯಾದ ವಿರೋಧಪಕ್ಷಿಯಾಗಿದ್ದರು. ಆದರೆ ಹಿಂದಿನ ರಾಜ್ಯ ಕ್ರಮದಲ್ಲಿ ಅವರ ವಿರೋಧಾಭಿಪ್ರಾಯವೂ ಒಂದು ಮನ್ನಣೆ ಪಡೆಯುತ್ತಿತ್ತು. ಸ್ವತಂತ್ರ ಭಾರತದಲ್ಲಿ ಸರಕಾರದವರು ತಮ್ಮ 'ಸ್ವಯಂ ಪ್ರಭೆ'ಯಲ್ಲೇ ಮುಳುಗಿ ಹೋಗಿದ್ದುದರಿಂದ ಇತರರ ಅಭಿಪ್ರಾಯಕ್ಕೆ ಮನ್ನಣೆ ಸಿಗುವುದೇ ಕಷ್ಟವಾಯಿತು. ಹಾಗೆ ಡಿ ವಿ ಜಿ ಯವರ ಮಾತು ಹೊಸ ಅರಸರಿಗೆ ಕೇಳಿಸಲಿಲ್ಲ.

ಡಿ ವಿ ಜಿ ಯವರಿಗೆ ಊಟ ತಿಂಡಿಗಳ ವಿಷಯದಲ್ಲಿ ಅಭಿರುಚಿ ಹೆಚ್ಚು. ವೇದಾಂತವಾಗಲಿ, ರಾಜ್ಯಶಾಸ್ತ್ರವಾಗಲಿ, ವ್ಯಕ್ತಿಚಿತ್ರಣವಾಗಲಿ ಯಾವ ವಿಷಯ ವಾದರೂ ಆಗಲಿ; ಅಲ್ಲಿ ಊಟದ ತಿಂಡಿ ತಿನಿಸುಗಳ ವಿಷಯ ಹೇಗೋ ನುಸುಳಿ ಕೊಂಡು ಬಂದು ಬಿಡುತ್ತದೆ.

ನೀರಧಿಬ್ರಹ್ಮ, ನೀರ್ಗಲ್ ಜೀವವೆನುತೊಂದು ।
ಕ್ಷೀರವದು, ಘೃತವಿದದರೊಳಗೆನ್ನುತೊಂದು ॥
ಕೀರು ಪರಮಾನ್ನವದು, ದ್ರಾಕ್ಷಿಯಿದೆನುತ್ತೊಂದು ।
ಮೂರಿಂತು ಮತವಿವರ—ಮಂಕುತಿಮ್ಮ ॥

ಬೆಂದ ಬೇಳೆಗೆ ಬೆರೆಸಿದುಪ್ಪಿನಿಂದಡುಗೆ ರುಚಿ ।
ಮುಂದುಪ್ಪು ಬಳಿಕ ಬೇಳೆಯಿನಡುಗೆಯಹುದೆ ? ॥
ಮಂದಿಮನೆಗಳ ಸೆಕೆಗೆ ಮೆತುಗೊಳದೊರಟುಜೀವ- ।
ಕಂದೀತೆ ವೇದಾಂತ — ಮರುಳ ಮುನಿಯ ॥

ಜೇನು ಕಪ್ಪುರ ಕೇಸರಗಳು ಪಾಲಿನೊಳು ।
ಲೀನ ವಿಶದಗಳಾಗಿ ನಿರಹಮಹ ಸ್ವಾರ್ಥಂ ॥
ಜ್ಞಾನಿ ಹಿತಕರನಿಹನು ಲೋಕಕ್ಕೆ ನಿಃಸ್ವಾರ್ಥ ।
ಲೀನ ವಿಶದದ ಬಾಳು — ಮರುಳ ಮುನಿಯ ॥

"ಕಾವ್ಯವೆಂಬುದು ಕೀರು ; ರಸ ಅದರ ಹಾಲು ; ಮನನ ಅದರಲ್ಲಿ ದ್ರಾಕ್ಷಿ"

"ಒಂದೊಂದು ಪದ್ಯವನ್ನೂ-ಪೆಪ್ಪರ್‌ಮೆಂಟನ್ನು, ಒಂದು ಸಲಕ್ಕೆ ಒಂದನ್ನೇ ಬಾಯಲ್ಲಿರಿಸಿಕೊಂಡು ಸಾವಕಾಶವಾಗಿ ಚಪ್ಪರಿಸಿ ನೀರೂರಿಸಿಕೊಳ್ಳು ವಂತೆ-ಸಾವಧಾನವಾಗಿ ಸವಿದರೆ ಪ್ರಯೋಜನ ಸಂಪೂರ್ಣವಾಗಿ ದೊರೆತೀತು"

"ಕೇಸರಿ ಪಚ್ಚಕರ್ಪೂರವಿಲ್ಲದೆಯೇ ಹಸಿವಾಗುತ್ತದೆ. ಆದರೆ ರಸಿಕ ಭೋಜನಕ್ಕೆ ಪರಿಮಳ ಬೇಕು. ಗಬಗಬನೆ ತುರುಕುವುದು ಭೋಜನವಲ್ಲ. ರಸಿಕತೆಯ ವಿಷಯ ಬೇರೆ."

ಡಿ ವಿ ಜಿ ಯವರದು ಮೊದಮೊದಲಿಗೆ ಸಾಧಾರಣವಾದ ಮೈಕಟ್ಟು. ಎತ್ತರವೂ ಅಲ್ಲ,ಅಷ್ಟು ಗಿಡ್ಡೂ ಅಲ್ಲ. ಆದರೆ 1939ರಲ್ಲಿ ಟೈಫಾಯ್ಡ್ ಕಾಯಿಲೆ ಯಿಂದ ಮಲಗಿದ ಮೇಲೆ ಅವರ ದೇಹ ಸ್ಥೂಲವಾಯಿತು. ಮೊದಲಿನಿಂದಲೂ ಶೀತಕ್ಕೆ ಬಲಿಯಾದ ಆರೋಗ್ಯ. ನೆಗಡಿಯ ಅನೇಕ ಹಂತಗಳನ್ನು ವಿನೋದ ವಾಗಿ ಅವರು ವರ್ಣಿಸುತ್ತಿದ್ದದ್ದುಂಟು. ಇದರೊಡನೆ ಮೂಲವ್ಯಾಧಿಯ ಬೇನೆ ಬೇರೆ. ಆದರೂ ಅವರ ಜೀರ್ಣಶಕ್ತಿ ಅಸಾಮಾನ್ಯವಾದದ್ದು.

ಇದಾವುದೂ ಅವರ ಚಟುಪಟಿಕೆಗೆ ಅಡ್ಡಿ ಬರಲಿಲ್ಲ. ಔಷಧಿ ತೆಗೆದು ಕೊಳ್ಳಬೇಕಾದದ್ದು, ಕೆಲಸ ಮುಂದುವರಿಸಬೇಕಾದದ್ದು. ಮೊದಲಿಗೆ ರಿಲ್ಲೈ

ಯನ್ಸ್‌ನ ಗುಂಡಣ್ಣನವರೇ ಅವರಿಗೆ ವೈದ್ಯರು. ಬಸವನಗುಡಿಗೆ ಬಂದ ಮೇಲೆ ಡಾ॥ ಕೆ. ಎಸ್. ಶ್ರೀನಿವಾಸಮೂರ್ತಿಯವರು. ಇದರ ಮಧ್ಯೆ ಆಯುರ್ವೇದದ ಚೂರ್ಣಗಳೂ ಪುಡಿಗಳ ಚಿಕಿತ್ಸೆಯೂ ನಡೆಯುತ್ತಿತ್ತು. ಶುಂಠಿ, ಮೆಣಸುಗಳ ಆರೋಗ್ಯಕಾರಕ ಗುಣದಲ್ಲಿ ಅವರಿಗೆ ಅಪಾರವಾದ ನಂಬಿಕೆ.

ಅವರಿಗೆ ಬಟ್ಟೆಬರೆಗಳು ಚೆನ್ನಾದವೇ ಆಗಿರಬೇಕು. ಕಚ್ಚೆಪಂಚೆಯುಡುತ್ತಿದ್ದರು. ಮೇಲೆ ಕೋಟು, ಉತ್ತರೀಯ. ಮೊದಮೊದಲಿಗೆ ರುಮಾಲು, ಅನಂತರ ಟೋಪಿ. ಎಲ್ಲವೂ ಉತ್ತಮ ದರ್ಜೆಯವೇ. ಅವರು ಎಲ್ಲಿದ್ದರೂ ಎತ್ತಿ ಕಾಣುತ್ತಿದ್ದ ವ್ಯಕ್ತಿ. Commanding Presence ಎನ್ನುತ್ತಾರಲ್ಲ ಹಾಗೆ.

ಅವರು ಪತ್ರವ್ಯವಹಾರಕ್ಕೆ ಉಪಯೋಗಿಸುತ್ತಿದ್ದ ಕಾಗದ, ಲಕೋಟೆ, ಇಂಕು ಮತ್ತು ಇತರ ಉಪಕರಣಗಳು ಶ್ರೇಷ್ಠ ದರ್ಜೆಯವು. ತಮ್ಮ ಸಾಹಿತ್ಯದ ಬರವಣಿಗೆಗೆ, ಇಟ್ಟುಕೊಂಡಿದ್ದ ಡೈರಿ ಎಲ್ಲ 'ಫಸ್ಟ್‌ಕ್ಲಾಸ್'.

ಬೆಂಗಳೂರಿಗೆ ಬಂದ ತರುಣದಲ್ಲಿಯೇ ಒಂದು ಸೈಕಲ್ ಕೊಂಡುಕೊಂಡಿದ್ದರು. ಅನಂತರ 27-2-1934 ರಲ್ಲಿ "Journey to Mysore by my own car, Ist time" ಎಂದು ಬರೆದಿದ್ದಾರೆ. ಕೊನೆಯ ವರ್ಷಗಳಲ್ಲಿ ಜಟಕಾದಲ್ಲಿ ಹೋಗುವುದೇ ಒಂದು ಖುಷಿ—ಜಟಕಾ ಸಾಬಿಯನ್ನು ಮಾತನಾಡಿಸಿಕೊಳ್ಳುತ್ತಾ ಪ್ರಯಾಣ.

ಅವರ ಜೀವನ ಹೇಗೆ ನಡೆಯುತ್ತಿತ್ತು ಎಂಬುದರ ವಿಷಯ ಯಾರಿಗೂ ತಿಳಿದಿರಲಿಲ್ಲ. "Not on one occasion have I been able to hear him speack about his own life or to moan, groan or whine which he despised" ಎಂದಿದ್ದಾರೆ ವಿ. ಸೀ.

ವಿ. ಸೀ. ಅವರು ಹೇಳಿರುವ ಈ ಮಾತುಗಳು ಡಿ ವಿ ಜಿ ಯವರ ವ್ಯಕ್ತಿತ್ವವನ್ನು ಅವರ ಸಾಹಿತ್ಯ ಕಾರ್ಯವನ್ನು ಬಹು ಚೆನ್ನಾಗಿ ಚಿತ್ರಿಸುತ್ತದೆ. "A wisdom of life oversees all things else and therefore his literature becomes a vehicle of it. His prose and verse and criticism bear the weight and character of his personality. Much the largest part of all this is naturally the prose of life given to understanding, reason, judgement, to criticism and morality in a large sense of the term and has therefore been the item in expression in his literary work

which makes it look expository, intellectual and didactic. A person like him shies off from the 'undisciplined squads of emotion,' exhibitions of feeling, rank and personal self-expression where a self may be absent. The range of his sensibility, compassion and tolerance of life combined with a playfulness, gaiety and humourousness of behaviour and the loud guffawas of laughter in the enjoyment of the lighter and more playful sides of his life are unexpressed in his poetry."

ಇದು ಬಹುತೇಕ ನಿಜ. ಆದರೆ ಅವರ ಜ್ಞಾಪಕ ಚಿತ್ರಶಾಲೆಯ ಸಂಪುಟಗಳಲ್ಲಿ ಅವರ ಹಾಸ್ಯ, ಅನುಕಂಪೆ, ಮುಂತಾದವುಗಳನ್ನು ಕಾಣ ಬಹುದು.

ತಮ್ಮ ಗೋಳನ್ನು ಹಂಚುವುದರಲ್ಲಿ ಅವರಿಗೆ ನಂಬಿಕೆಯಿರಲಿಲ್ಲ. ಆದರೆ ಅವರ ಬಳಿ ತಮ್ಮ ಸುಖ ದುಃಖಗಳನ್ನು ಹೇಳಿಕೊಳ್ಳಲು ಬಂದವರಿಗೆ ಸಮಾಧಾನದ ಮಾತುಗಳನ್ನಾಡುತ್ತಿದ್ದರು. ಹೀಗಾಗಿ ಲೋಕದ ಸುಖ ದುಃಖಗಳನ್ನು ಕಂಡವರು ಅವರು.

ಡಿ ವಿ ಜಿ ಯವರ ಧ್ವನಿಯನ್ನು ಕುರಿತು ಹೇಳಬೇಕು. ಅದು ದೊಡ್ಡ ಗಂಟಲೇ. ಪಿ.ಎಸ್. ಶಿವಸ್ವಾಮಿ ಅಯ್ಯರ್ ಅವರು ಡಿ ವಿ ಜಿ ಯವರ ತಾಯಿ ಅವರಿಗೆ ಮಣಗಟ್ಟಲೆ ಗೋರೋಚನವನ್ನು ಕೊಟ್ಟಿರಬೇಕೆಂದು ಹಾಸ್ಯಮಾಡುತ್ತಿದ್ದರಂತೆ. ಅವರು ಮಾತನಾಡುತ್ತಿದ್ದರೆ ಅದು ಬಹು ದೂರ ಕೇಳಿಬರುತ್ತಿತ್ತು. ಹಾಗೆಯೇ ಅವರ ಕಾವ್ಯ ಗಾಯನವೂ ಸಹ. ಕೆಲವು ಸಲ ತಾಳ ಹಾಕಿಕೊಂಡು ಹಾಡುತ್ತಿದ್ದದ್ದೂ ಉಂಟು.

ಅವರ ಇನ್ನೊಂದು ಮುಖ್ಯ ಗುಣವೆಂದರೆ ತಾವು ಯಾವುದಾದರೊಂದನ್ನು ಕಂಡು ಕೇಳಿ ಸವಿದು ಓದಿ ಸಂತೋಷಪಟ್ಟರೆ ಆ ವಿಷಯವನ್ನು ಸಂಬಂಧ ಪಟ್ಟವರಿಗೆ ತಿಳಿಸುವ ದೊಡ್ಡ ಗುಣ. ಕೂಡಲೆ, ತಡಮಾಡದೆ ತಿಳಿಸುವ ಗುಣ. ರಾತ್ರಿ ಎಷ್ಟು ಹೊತ್ತೇ ಆಗಲಿ ತಮಗಾದ ಸಂತೋಷವನ್ನು ಉಚಿತವಾದ ರೀತಿಯಲ್ಲಿ, ಯಾವ ವಿಧವಾದ reservation ಇಲ್ಲದೆ ಹೃತ್ಪೂರ್ವಕವಾಗಿ ಹೇಳುವ ಗುಣ ಅವರದು. ಇದರಿಂದ ಆ ಪತ್ರವನ್ನು ಪಡೆದವರಿಗೆ ಆಗುವ ಸಂತೋಷವನ್ನು ವರ್ಣಿಸುವುದು ಹೇಗೆ?

ಡಿ ವಿ ಜಿ ಯವರನ್ನು ಕುರಿತು ಅವರೊಡನೆ ಕೆಲಸ ಮಾಡಿದವರು

ಅವರನ್ನು ಬಹು ಕಾಲ ಕಂಡವರು ಏನು ಹೇಳುತ್ತಾರೆ ಎಂಬುದನ್ನು ನೋಡಿದರೆ ಅವರ ವ್ಯಕ್ತಿತ್ವದ ಅರಿವಾಗಬಹುದು.

"ಡಿ ವಿ ಜಿ ಯವರನ್ನು ನೋಡಿದಾಗಲೆಲ್ಲ ನನಗೆ ಬೆಟ್ಟದ ಮೇಲಿನ ದೇವಸ್ಥಾನ ನೆನಪಾಗುತ್ತಿತ್ತು. ನೋಡಿದರೆ ದೂರ; ಹತ್ತಿರ ಹೋಗಬೇಕಾದರೆ ಶ್ರಮ, ಎರಡೂ ಉಂಟು. ಆದರೆ ಹೋಗಿ ಬಂದಾಗ ಮನಸ್ಸು ಹಗುರ, ಪ್ರಸನ್ನ." (ಜಿ. ವೆಂಕಟಸುಬ್ಬಯ್ಯನವರು.)

"ಅವರ ಹತ್ತಿರ ಕೆಲಸ ಮಾಡುವವರಿಗೆ ಕಣ್ಣಲ್ಲಿ ನೀರು ಬಂದು ಬಿಡುತ್ತಿತ್ತು. ತಾವು ದುಡಿಯುತ್ತಿದ್ದುದರಿಂದ ದೊಡ್ಡ ಕೆಲಸ ಮಾಡುವವರಾದ್ದರಿಂದ ಹಾಗೆ ತಾವು ಯಾವ ಯೋಚನೆಯೂ ಇಲ್ಲದೆ ಕೆಲಸ ಮಾಡುತ್ತಿದ್ದರು.... Full Throated ease ಎನ್ನುತ್ತೇವಲ್ಲ ಹಾಗೆ ನಗುವ ಜನ ಈಗ ಕಡಮೆ. ಆ ಜೀವನ ಶ್ರದ್ಧೆ, ಉತ್ಸಾಹ, ಧರ್ಮಶ್ರದ್ಧೆ, ಕಡಿಮೆ" (ವಿ.ಸೀ)

'ಡಿ ವಿ ಜಿ ಯವರು, ಗಾಂಧಿಯವರು 'ದೈವ ಸಂಪನ್ಮಾರ್ಗದರ್ಶಕ' ಎಂದು ಕರೆದಿದ್ದಾರೆ. ಡಿ ವಿ ಜಿ ಅವರು ತಾವೂ ನನ್ನ ಪಾಲಿಗೆ ದೈವ ಸಂಪನ್ಮಾರ್ಗದರ್ಶಕರೇ.' (ಜಿ. ಪಿ. ರಾಜರತ್ನಂ)

"ಅವರು ಎಲ್ಲ ಕೆಲಸಗಳನ್ನೂ ಕರ್ತವ್ಯ ಕರ್ಮವಾಗಿ ಮಾಡುತ್ತಿದ್ದರು. ಎಂಥ ಚಿಕ್ಕ ಕೆಲಸವಾದರೂ ಅದು ಅಚ್ಚುಕಟ್ಟಾಗಿರಬೇಕು. ಪಡಪೋಶಿ ಕೆಲಸವೆಂದರೆ ಅವರಿಗೆ ಆಗದು. ಲಕ್ಕೋಟೆಯ ಮೇಲೆ ವಿಳಾಸ ಬರೆದರೆ Legible ಆಗಿ ಸ್ಫುಟಾಕ್ಷರಗಳಲ್ಲಿ ಬರೆಯಬೇಕು. ಊರಿನ ಹೆಸರನ್ನು ಕೆಂಪು ಶಾಯಿಯಲ್ಲಿ Underline ಮಾಡಬೇಕು. ಪತ್ರವ್ಯವಹಾರದ ಭಾಷೆ, ಸಮಿತಿ ಸಭೆಗಳ ನಿರ್ಣಯಗಳು ಮತ್ತು ವರದಿಗಳ ಭಾಷೆ ಎಲ್ಲವೂ ನಿರ್ದುಷ್ಟವಾಗಿರಬೇಕು. ಸುಮ್ಮನೆ Yours sincerely ಎಂದು ಬರೆದರೆ ತಪ್ಪು. I am yours sincerely ಎಂದು ಬರೆಯತಕ್ಕದ್ದು. ಎರಡು ಮೂರು ಹಾಳೆಗಳನ್ನು ಸೇರಿಸಿ ಗುಂಡು ಸೂಜಿ ಚುಚ್ಚುವಾಗ, ಲಕ್ಕೋಟೆ ಓಡೆದು ಪತ್ರ ಓದುವವರ ಕೈಗೆ ಅದು ಚುಚ್ಚದಂತೆ ಚುಚ್ಚಬೇಕು. ಗೋಂದನ್ನು ಬಳಿಯಲು ಕೂರ್ಚವನ್ನೇ ಉಪಯೋಗಿಸಬೇಕು, ಬೆರಳನ್ನಲ್ಲ. ಅಂಚೆಚೀಟಿ ಅಂಟಿಸಲು ಸಣ್ಣ ಪಾತ್ರೆಯಲ್ಲಿ ಯಾವಾಗಲೂ ನೀರಿರಬೇಕು. 'ಯೋಗಃ ಕರ್ಮಸು ಕೌಶಲಂ' ಇದು ಅವರು ನಮಗೆ ಕಲಿಸಿಕೊಟ್ಟ ಪಾಠ. ಸಣ್ಣ ಪುಟ್ಟ ವಿಚಾರಗಳಲ್ಲಿ ಈ ದೃಷ್ಟಿ ಇದ್ದರೆ ದೊಡ್ಡ ವಿಚಾರಗಳಲ್ಲಿ ಅದು ಕುದುರುತ್ತದೆ. ಸಣ್ಣ ವಿಚಾರ ದೊಡ್ಡ ವಿಚಾರ ಎಲ್ಲಕ್ಕೂ ಒಂದೇ ಬೆಲೆ. ಈ ದೃಷ್ಟಿಯಿಂದ ಅವರು ಬಾಳುವೆ

ನಡೆಸಿದ್ದರಿಂದ ಅದು ಸಮಗ್ರವಾಯಿತು." (ಎಂ. ವಿ. ಸೀತಾರಾಮಯ್ಯ)

"ಎದುರಿನಲ್ಲಿ ಶ್ರೀ ಗುಂಡಪ್ಪನವರನ್ನಿಟ್ಟುಕೊಂಡು ಹಾಡಿದ ಬಾರಿಸಿದ ಅನುಭವವಿರುವ ಕಲೆಗಾರರು ಈಗ ಅಂಥ ಸಹೃದಯ ರಸಿಕ ಆದ ಇನ್ನೊಬ್ಬ ಶ್ರೋತನನ್ನು ಹುಡುಕುತ್ತಲೇ ಇರಬೇಕಾಗಿದೆ." (ರಾಳ್ಳಪಲ್ಲಿ ಅನಂತ ಕೃಷ್ಣ ಶರ್ಮ)

"The somewhat heavy figure but with beaming smiles and clarion voice extending greetings to everyone known" (K. Chandrasekharan)

ಗೋಖಲೆ ಸಂಸ್ಥೆಯ ಚಿಕ್ಕ ವಯಸ್ಸಿನ ನಾವೆಲ್ಲ ಅವರಿಗೆ "ಹುಡುಗರು." ನಮಗೆ ಅವರು ಹೇಳಿ ಕೊಡದ ವಿದ್ಯೆಯಿಲ್ಲ. ಸಂತೋಷ ಪಡಲು ನಾಚಿಕೆ ಪಡಬಾರದು. ಮಾಡಬೇಕಾದ ಕೆಲಸವನ್ನು ಮುತುವರ್ಜಿಯಿಂದ, ದಕ್ಷತೆ ಯಿಂದ, ಎಲ್ಲಿ ತಪ್ಪಾಗಿಬಿಡುತ್ತದೋ ಎಂಬ ಎಚ್ಚರಿಕೆಯಿಂದ, ಮಾಡಬೇಕು. ಹಾಗೆಯೇ ತಪ್ಪಾದರೆ ಬೈಸಿಕೊಳ್ಳಲೂಬೇಕು. ಕಾವ್ಯವನ್ನು ಹೇಗೆ ಓದ ಬೇಕು, ಪ್ರತಿ ಅಕ್ಷರಕ್ಕೂ ಮಾತಿಗೂ ಹೇಗೆ ಮಾರ್ಯಾದೆ ಸಲ್ಲಬೇಕು, ಎಲ್ಲವನ್ನೂ ನಮಗೆ ತಿಳಿಸಿದವರು ಅವರು. "Your education has been grossly neglected" ಎಂದು ಲೇವಡಿ ಮಾಡುತ್ತ ನಿಘಂಟುವನ್ನು ನೋಡು ವುದರಿಂದ ಹಿಡಿದು ಪರತತ್ತ್ವದ ವಿಷಯದವರೆಗೂ ಎಲ್ಲವನ್ನೂ ತಿಳಿಸು ತ್ತಿದ್ದರು.

ಹೀಗೆ ಜೀವನದಲ್ಲಿ ಇಷ್ಟು ಶ್ರದ್ಧೆ ತೋರಿಸಿದವರನ್ನು, ರಸಿಕರನ್ನು, ರಾಜಕೀಯದಲ್ಲಿ ಮುಳುಗಿದ್ದವರನ್ನು ವಿರಕ್ತರೆಂದು ಕರೆಯುವುದು ಹೇಗೆ?

ಅವರು ಅಧಿಕಾರಕ್ಕಾಗಲಿ ಅಥವಾ ಹಣಕ್ಕಾಗಲಿ ಆಸೆಪಡಲಿಲ್ಲವೆಂಬುದು ಅನೇಕ ಸಂದರ್ಭದಲ್ಲಿ ವ್ಯಕ್ತವಾಗಿದೆ. ಆದರೆ ಅದಷ್ಟೇ ಅವರನ್ನು ವಿರಕ್ತ ರನ್ನಾಗಿಸಲಿಲ್ಲ.

ಭಗವದ್ಗೀತೆಯ ಶಂಕರಭಾಷ್ಯದಲ್ಲಿ (IV-II) "ನ ಹಿ ಏಕಸ್ಯ ಮುಮು ಕ್ಷುತ್ವಂ ಫಲಾರ್ಥಿತ್ವಂ ಚ ಯುಗಪತ್ ಸಂಭವತಿ" (ಒಬ್ಬರಿಗೇ ಒಂದೇ ಸಲ ಮುಮುಕ್ಷುತ್ವವೂ ಫಲಾಪೇಕ್ಷೆಯೂ ಸಂಭವಿಸುವುದಿಲ್ಲ.) ಎಂಬ ಮಾತು ಬರುತ್ತದೆ. ಇದೇ ಅಭಿಪ್ರಾಯವನ್ನೇ ಪಾಶ್ಚಾತ್ಯ ಅರ್ಥಶಾಸ್ತ್ರಜ್ಞನೊಬ್ಬ ಹೀಗೆ ಹೇಳಿದ್ದಾನೆ:

"Puritanism had filled life with the spirit of a creed which made secular success a sign of eternal salvation."

ಇದು ಡಿ ವಿ ಜಿ ಯವರ ಅಂತರಂಗದಲ್ಲಿ ಇಳಿದು ಹೋಗಿದ್ದ ವಿಚಾರ.

"ಉಲ್ಲಾಸವನ್ನು ತೊರೆಯದ ವಿರಕ್ತಿ; ಪ್ರಯತ್ನವನ್ನು ಬಿಡದ ವಿರಕ್ತಿ; ಲಂಪಟತೆಯಾಗದ ಜೀವನೋಲ್ಲಾಸ; ಕರ್ತವ್ಯವನ್ನು ಮರೆಯದ ಜೀವನೋಲ್ಲಾಸ; ಆಶಾಪಾಶವಾಗದ ಕಾರ್ಯಾಸಕ್ತಿ, ಇಂದಿನ ಸೋಲು ನಾಳಿನ ಗೆಲುವಿಗೆ ಹಾದಿಯೆಂಬ ಕಾರ್ಯಾಸಕ್ತಿ—ಇವು ದೊಡ್ಡ ಜ್ಞಾನಮಾರ್ಗದ ಮುಖ್ಯ ಲಕ್ಷ್ಯಗಳೆಂದು ನಾನು ತಿಳಿದುಕೊಂಡಿದ್ದೇನೆ. ತಪೋವನದಲ್ಲಿ ಆನೆಯೂ ಸಿಂಹವೂ ಸ್ನೇಹಿತರಾಗಿ ಬದುಕುವಂತೆ, ಜ್ಞಾನಿಯಲ್ಲಿ ಆಸಕ್ತಿಯೂ ವಿರಕ್ತಿಯೂ ಸ್ನೇಹದಿಂದಿರುವುವು. ಈ ಉದ್ಯಮ ಉಪಶಾಂತಿಗಳ—ಈ ಪ್ರವೃತ್ತಿ-ನಿವೃತ್ತಿಗಳ ಸಾಮರಸ್ಯವೇ ಗೀತಾಚಾರ್ಯರು ಹೊಗಳಿರುವ ಯೋಗ ಕೌಶಲ. ಅದೇ ನಮಗೆ ಆದರ್ಶ. ಅದೇ ಪರಮ ಧ್ಯೇಯ. ನಮ್ಮ ಹೆಜ್ಜೆಯೊಂದು ವೇಳೆ ಸ್ವಲ್ಪ ಕುಂಟಿದರೂ ನಮ್ಮ ಕಣ್ಣು ಯಾವಾಗಲೂ ಆ ಕಡೆಯಿರಬೇಕು."

ಈ ಧ್ಯೇಯದಂತೆ ಜೀವನವನ್ನು ನಡಸಿದವರು ಡಿ ವಿ ಜಿ. ವಿರಕ್ತಿ ಅವರ ಅಂತರಂಗದ ಸತ್ತ್ವ. ಹೊರಗಡೆಗಾದರೋ ಜೀವನದ ಎಲ್ಲ ಭಾಗಗಳಲ್ಲಿಯೂ ಆಸಕ್ತಿ ತೋರಿಸಿದವರು ಅವರು. ಅದರ ಚರಿತ್ರೆಯನ್ನೇ ನಾವು ಈ ಹಿಂದಿನ ಪುಟಗಳಲ್ಲಿ ಕಂಡದ್ದು.

ಲೋಕವ್ಯವಹಾರದಲ್ಲಿ ಆಸಕ್ತಿ ಹೊಂದಿದ್ದರೂ ಅವರು ಅದನ್ನು ಜೀವಕ್ಕೆ ಒಂದು ಸಂಸ್ಕಾರವೆಂದು ಗಣಿಸಿದ್ದವರು. ಜೀವನದ ಗುರಿ ಆತ್ಮದರ್ಶನ. ಆ ಗುರಿಯನ್ನು ಮರೆಯದೆ ಜೀವನವನ್ನು ನಡಸಿದವರು ಅವರು.

ಧಾರುಣಿಯ ನಡಿಗೆಯಲಿ ಮೇರುವಿನ ಗುರಿಯಿರಲಿ |
ಮೇರುವನು ಮರೆತಂದೆ ನಾರಕಕೆ ದಾರಿ ||
ದೂರವಾದೊಡದೇನು ? ಕಾಲು ಕುಂಟಿರಲೇನು ? |
ಊರ ನೆನಪೇ ಬಲವೊ—ಮಂಕುತಿಮ್ಮ ||

ಹಾಗೆಂದು ಅವರು ಮೋಕ್ಷಕ್ಕಾಗಿ ಆತುರಪಟ್ಟವರೂ ಅಲ್ಲ.

ಮೋಕ್ಷದಾಶೆಯೊಳಮತ್ಯಾತುರತೆಯೊಳಿತಲ್ಲ ।
ಶಿಕ್ಷೆ ಬಹುಕಾಲ ನಡೆಯದೆ ಮೋಕ್ಷವಿಲ್ಲ ॥
ಲಕ್ಷ್ಯೆ ತಪ್ಪದೆ ಚರಿಸು ಸಾಮಾನ್ಯಧರ್ಮಗಳ ।
ಮೋಕ್ಷ ಸ್ವತಸ್ಸಿದ್ಧ—ಮಂಕುತಿಮ್ಮ ॥

ಆದ್ದರಿಂದ

ಜಗದ ಕಲ್ಯಾಣದೊಳಗಾತ್ಮಕಲ್ಯಾಣವನು ।
ಜಗದ ಬೀದಿಗಳೊಳು ನಿಜಾತ್ಮಯಾತ್ರೆಯನು ॥
ಜಗದ ಜೀವಿತದಿ ನಿಜ ಜೀವಿತದ ಪೂರ್ತಿಯನು ।
ಬಗೆಯಲರಿತವನೆ ಸುಖಿ—ಮಂಕುತಿಮ್ಮ ॥

ಅಂಥ ಸುಖಿ ಡಿ ವಿ ಜಿ. ಆದರೆ,

ಬಿಟ್ಟೆನೆಲ್ಲವನೆಂಬ ಹೃದಯ ಶೋಷಣೆ ಬೇಡ ।
ಕಟ್ಟಿಕೊಳ್ಳುವ ಶಿರಃಪೀಡೆಯುಂ ಬೇಡ ॥
ತೊಟ್ಟು ನಿರಹಂಕೃತಿಯ ಕವಚವನು ನೀಂ ಪೋರು ।
ಮುಟ್ಟದಿಳೆಯುಸಿ ನಿನ್ನ—ಮಂಕುತಿಮ್ಮ ॥

—ಎಂದೂ ಅರಿತಿದ್ದವರು.

ನಿರಹಂಕೃತಿಯ ಕವಚವನ್ನು ತೊಟ್ಟು, ಕಾಷಾಯವನುಡದಿಹ ಯತಿಯಾಗಿ ಬಾಳಿದವರು ಡಿ ವಿ ಜಿ. ಆದರೆ ಭಗವಂತನ ರೂಪವೇ ಆದ ಲೋಕ ಜೀವನದಲ್ಲಿ ಸಮರ್ಥವಾಗಿ ಪಾಲುಗೊಳ್ಳುವ ರಾಷ್ಟ್ರಕ ಧರ್ಮವನ್ನು ಬೋಧಿಸಿದವರೂ ಅವರು. ಆದ್ದರಿಂದಲೇ ಅವರು ಬ್ರಹ್ಮ ಪತ್ತನ ಭಿಕ್ಷುಕ, ವಿರಕ್ತ ರಾಷ್ಟ್ರಕ.

ಸಂಕೀರ್ಣ ವಿಷಯಗಳು

ಡಿ ವಿ ಜಿ ಯವರ ಹೆಸರನ್ನೆತ್ತಿದಾಗ 'ಮಂಕುತಿಮ್ಮನ ಕಗ್ಗ'ದೊಂದಿಗೇ ಮನಸ್ಸಿಗೆ ಬರುವ ಕೆಲವು ವಿಷಯಗಳೆಂದರೆ, ಅವರು ಕರ್ನಾಟಕದ ಏಕೀಕರಣಕ್ಕೆ ವಿರೋಧವನ್ನು ವ್ಯಕ್ತಪಡಿಸಿದ್ದು, ವರ್ಣಾಶ್ರಮ ವ್ಯವಸ್ಥೆಯಲ್ಲಿ ಅವರ ನಂಬಿಕೆ ಮುಂತಾದವು. ಈ ವಿಚಾರಗಳಲ್ಲಿ ಡಿ ವಿ ಜಿ ಯವರ ನಿಲುವೇನು ?— ಎಂಬುದನ್ನು, ಅವರ ಮಾತುಗಳಲ್ಲೇ, ಕೊಡಲಾಗಿದೆ :

ವರ್ಣವ್ಯವಸ್ಥೆ : ಜಾತಿ ವ್ಯವಸ್ಥೆಯನ್ನು ಕುರಿತು ಹೇಳಬೇಕಾದ ವಿಶೇಷಾಂಶ ಒಂದಿದೆ. ನಮ್ಮ ಕಾಲದ ಸುಧಾರಕರು (Reformers) ಜಾತಿ ನಿಯಮವು ಸಮಾನ ತತ್ತ್ವಕ್ಕೆ ವಿರೋಧಿಯಾದದ್ದು, ಆದದ್ದರಿಂದ ಅದು ದೋಷ—ಎಂದು ವಾದಿಸುತ್ತಾರೆ. ಗೀತಾಚಾರ್ಯರ ಮತವು ಸಮಾನತ್ವವನ್ನು ಬೋಧಿಸುವುದೇ ಆದರೂ ಆ ಸಮಾನತ್ವವು ಪ್ರಯೋಗಕ್ರಮದಿಂದ ಜೀವಹಿತದಲ್ಲಿ ಪರ್ಯಾವಸಾನವಾಗಬೇಕೆಂಬುದು ಅಂತರಂಗ. ವರ್ಣವ್ಯವಸ್ಥೆಯಲ್ಲಿ ಇರುವ ಮುಖ್ಯ ತಾತ್ಪರ್ಯವು ವ್ಯಷ್ಟಿಮನುಷ್ಯನು ತನ್ನ ಜನ್ಮದ ಉಪಾಧಿಗಳನ್ನು ಸಮಸ್ತರ ಸೇವೆಯಲ್ಲಿ ಸವೆಯಿಸಬೇಕೆಂಬುದು. ವ್ಯಷ್ಟಿಯ ಉತ್ಕರ್ಷವು ಮುಖ್ಯವಾದದ್ದು ನಿಜ, ಆದರೆ ಆ ಉತ್ಕರ್ಷವು ಬರಿಯ ತೋರಿಕೆಯ ಉತ್ಕರ್ಷವಾಗದೆ ವಾಸ್ತವವಾದ ಉತ್ಕರ್ಷವಾಗಬೇಕಾದರೆ ಅದು ಸಮಷ್ಟಿಯ ಅತ್ಯಂತ ಪ್ರಯೋಜನದಲ್ಲಿ ಪೂರಯಿಸಬೇಕು. ಸಮಷ್ಟಿಲೋಕದ ಅತ್ಯಂತ ಪ್ರಯೋಜನದಲ್ಲಿ ಉತ್ಕರ್ಷವನ್ನು ಸಾಧಿಸಬೇಕೆಂಬುದು ವರ್ಣತತ್ತ್ವದ ಆಧಾರತತ್ತ್ವ. ಆ ಅತ್ಯಂತ ಪ್ರಯೋಜನಕ್ಕೆ ಒದಗತಕ್ಕವು ಸ್ವಾಭಾವಿಕವಾದ ಗುಣಕರ್ಮ ಶಕ್ತಿಗಳು.

ಜಾತಿಯ ಪಂಗಡ ಒಳಪಂಗಡಗಳಲ್ಲಿ ಮನುಷ್ಯನಿಗೆ ಒಂದು ಆತ್ಮೀಯತೆಯ ಭಾವವುಂಟಾಗುತ್ತದೆ. "ನಾನು," "ನನ್ನವರು" ಎಂಬ ಅಭಿಮಾನ ವುಂಟಾಗುತ್ತದೆ. ಈ ಆಪ್ತತೆ ಮಮತೆಗಳೇ ಎಲ್ಲ ಜೀವನೋತ್ಸಾಹಕ್ಕೂ ಮೂಲಪ್ರೇರಕಗಳು. ಜಾತಿ ಪಂಗಡ ತಪ್ಪಾದರೆ 'ಭಾರತೀಯತೆ' ಎನ್ನುವುದೇನು ? ಅವೂ ಮನುಷ್ಯ ವರ್ಗದ ವಿಭಾಗಗಳೇ. ಕೇವಲ ತತ್ತ್ವದೃಷ್ಟಿಯಿಂದ ಕೆಳಗೆ ನೆಲ ಮೇಲೆ ಆಕಾಶ ಇವೆರಡೇ ಮನುಷ್ಯನಿಗಿರುವ ಮೇರೆಗಳು.

ಅವೆರಡನ್ನೂ ನೋಡಿ ಮನೆ ಕಟ್ಟಿಕೊಳ್ಳದೆ ಬಟ್ಟಬಯಲಿನಲ್ಲಿ ಬದುಕುವವನು ಯಾರು? ದೇಹದ ವಾಸಕ್ಕೆ ಮನೆ ಹೇಗೋ ನೆರೆಹೊರೆ ಹೇಗೋ ಮನಸ್ಸಿನ ವಾಸಕ್ಕೆ ಜಾತಿ ಹಾಗೆ, ಬಂಧು ಮಂಡಳಿ ಹಾಗೆ. ಸರ್ವತ್ರ ಸಮದರ್ಶನವು ಪೂರ್ಣಜ್ಞಾನಿಯ ವೃತ್ತಿ. ಕುಲ ಗೃಹ ಸಮಾಜಗಳು ಇನ್ನೂ ಜ್ಞಾನವನ್ನು ಸಂಪಾದಿಸುತ್ತಿರುವವನಿಗೆ ಬೇಕಾಗಿರುವ ಸಾಧನಗಳು.

ಈ ಹೊತ್ತು ನಮ್ಮ ಮನಸ್ಸನ್ನು ಕಲಕುತ್ತಿರುವುದು ಜಾತಿವರ್ಣಗಳ ಭೇದದ ಏರ್ಪಾಟಲ್ಲ. ಆ ಭೇದದಲ್ಲಿರುವ ಉಚ್ಚನೀಚಗಳೆಂಬ ಅಸಮಾನತೆಯ ಏರ್ಪಾಟು....ಇನ್ನೊಂದು ಜಾತಿಯವರು ತಮಗಿಂತ ಕೀಳೆಂಬುದೊಂದು ಅಸಮಾನತೆಯ ಅಭಿಮಾನಕಾರಣ.

ಬ್ರಾಹ್ಮಣರು ತಾವೂ ಮನುಷ್ಯ ಮಾತ್ರದವರು; ಆದ ಕಾರಣ ಮನುಷ್ಯ ಸಾಮಾನ್ಯವಾದ ದೋಷಗಳು ತಮಗೂ ತಪ್ಪಿದುವಲ್ಲ ಎಂಬುದನ್ನು ಮರೆಯಬಾರದು. ಎಂದು ಅವರು 'ಭೂಸುರ' ಎಂಬ ವಿಶೇಷಣ ಪದವನ್ನು ತಮ್ಮ ವಿಷಯದಲ್ಲಿ ಯಥಾರ್ಥವಾಚಕವೆಂದು ತಿಳಿದುಕೊಳ್ಳಲಾರಂಭಿಸಿದರೊ ಅಂದು ಅವರು ಜಾರಿದರು. ಚಿಕ್ಕನಾಯಕನ ಹಳ್ಳಿಯ ಬೆಳ್ಳಿಯು ಬಟ್ಟಲಿನ ಬೆಳ್ಳಿ ಹೇಗೋ (ಡಚ್ ಗೋಲ್ಡ್) ಗುನ್ನಾಂಪಟ್ಟಿಯ ಅಥವಾ ಕಾಕಿ ಬಂಗಾರದ ಬಂಗಾರ ಎಷ್ಟು ಮಾತ್ರದ್ದೋ ನಮ್ಮ ಕಾಲದಲ್ಲಿ ಭೂಮಿಯ ಮೇಲಿನ ಸುರತ್ವವೂ ಅಷ್ಟೇ ಮಾತ್ರದ್ದು. ಬ್ರಾಹ್ಮಣರಿಗೆ ಅಧಿಕಾರ ಬೇಡವೆ? ಬಲ ಬೇಡವೇ? ಐಶ್ವರ್ಯ ಬೇಡವೆ? ಅಟ್ಟಹಾಸ ಬೇಡವೆ? ಹೊಗಳಿಕೆ ಬೇಡವೆ? ಭೋಗ ಬೇಡವೆ? ಬ್ರಾಹಣೇತರರಿಗೆ ಬೇಕಾದ ಯಾವುದು ಬ್ರಾಹ್ಮಣರಿಗೆ ಬೇಡವಾಗಿದೆ? ಬ್ರಾಹ್ಮಣೇತರರು ಅನುಸರಿಸುವ ಯಾವ ಸಾಧನೋಪಾಯವನ್ನು ಬ್ರಾಹ್ಮಣರು ಅನುಸರಿಸದೆ ಬಿಡುವವರಾಗಿದ್ದಾರೆ? ಶಾಸ್ತ್ರಪುರಾಣಗಳಲ್ಲಿ ಕಾಣಲಾಗುವ ಬ್ರಾಹ್ಮಣನ ವೈರಾಗ್ಯ, ಧರ್ಮಶ್ರದ್ಧೆ, ವ್ರತನಿಷ್ಠೆಗಳು ಯಾವ ಬ್ರಾಹ್ಮಣನಲ್ಲಿ ಈ ಹೊತ್ತು ಉಳಿದಿವೆಯೋ ಅವನಿಗೆ ನಮ್ಮ ಈ ರಾಜಕೀಯದ ತರ್ಕ ಸಂಬಂಧಪಡತಕ್ಕದ್ದೇ ಅಲ್ಲ. ಲೋಕದ ಸಂಪತ್ತು ಬಹುಮಾನಗಳಲ್ಲಿ ಭಾಗಬೇಕೆನ್ನುವ ಬ್ರಾಹ್ಮಣರು ಲೋಕದ ಗುದ್ದಾಟಕ್ಕೆ ಸಿದ್ಧರಾಗಿರಲೇಬೇಕು. ಗುದ್ದಾಟದಲ್ಲಿ ಒಂದು ನ್ಯಾಯವಿಲ್ಲವೆ?—ಎಂದರೆ, ಅದಕ್ಕೆ ಲೋಕ ಕೊಡುವ ಉತ್ತರ ನಾನಾವಿಧವಾಗಿರುತ್ತದೆ. ಸಂಖ್ಯಾಧಿಕ್ಯದಲ್ಲಿಯೂ ಒಂದು ನ್ಯಾಯವುಂಟು. ಮುಷ್ಟಿಯ ಗಾತ್ರದಲ್ಲಿಯೂ ಒಂದು ನ್ಯಾಯವಿರಬಹುದು.

"ಶ್ರೀ ಬಿ. ಪಿ. ರಾಧಾಕೃಷ್ಣ ಅವರು ಒಂದು ದೊಡ್ಡ ಮಾತನ್ನು ಹೇಳಿದ್ದಾರೆ; ಯಾವ ಜನಾಂಗದವರೂ ನಾವು ಹಿಂದುಳಿದವರು ಎಂಬ ನೆನೆಪನ್ನೇ ಮುಂದುಮಾಡಿಕೊಂಡು ಉದ್ಯೋಗ ಲಾಭಗಳಿಗಾಗಿ ಮುಂದೆ ಬರುವವರಾಗಬಾರದು. ನಾವು ಹಿಂದುಳಿದವರು ಎಂದು ಹೇಳಿಕೊಳ್ಳಲು ಜನ ನಾಚುವಂಥ ಸ್ಥಿತಿ ಬೇಗ ಬರಬೇಕು. ಎಲ್ಲರೂ—ನಮ್ಮ ಯೋಗ್ಯತೆಗೆ ತಕ್ಕಂತೆ ನಮಗೆ ಉದ್ಯೋಗ ಬರಲಿ—ಎಂದು ಕೇಳುವವರಾಗಬೇಕು."

ಸರಕಾರದ ಉದ್ಯೋಗಗಳೂ ಅಧಿಕಾರ ಪದವಿಗಳೂ ದೇಶಸಮಸ್ತಕ್ಕೂ ಸೇರಿದವು. ಆ ಉದ್ಯೋಗ ಪದವಿಗಳ ಕರ್ತವ್ಯ ನಿರ್ವಾಹದಲ್ಲಿ ತೋರುವ ವಿಚಕ್ಷಣೆ ಅವಿಚಕ್ಷಣೆಗಳ ಫಲಾಫಲಗಳನ್ನು ದೇಶೀಯರೆಲ್ಲರೂ ಅನುಭವಿಸಬೇಕಾಗುತ್ತದೆ. ಆದ ಕಾರಣ ಅಧಿಕಾರಗಳ ಹಂಚಿಕೆಯಲ್ಲಿ ಯಾವ ಯಾವ ಜಾತಿಗೆ ಎಷ್ಟೆಷ್ಟು ಸೇರಿತು ಎಂಬ ಪ್ರಶ್ನೆ ಎಷ್ಟೇ ನ್ಯಾಯವಾದದ್ದಾದರೂ, ಅದಕ್ಕಿಂತ ಮುಖ್ಯವಾದದ್ದು ದೇಶಕಾರ್ಯಗಳ ನಿರ್ವಾಹ ಹೇಗೆ ಸಾಗುತ್ತಿದೆ ಎಂಬುದು. ಬ್ರಾಹ್ಮಣೇತರರ ಹಿತ ಹಕ್ಕುಗಳ ಊರ್ಜಿತವಾಗಬೇಕೆಂಬುದು ಎಲ್ಲರೂ ಒಪ್ಪುವ ತತ್ತ್ವವೇ ಸರಿ. ಆದರೆ ಬೇರೆ ಬೇರೆ ಜಾತಿ ಕೋಮುಗಳ ಹಕ್ಕು ಹಿತಗಳ ಯೋಚನೆಯಲ್ಲಿ ದೇಶಕಾರ್ಯದ ವಿಚಕ್ಷಣೆ ಕೆಡುವ ಹಾಗಿದ್ದಲ್ಲಿ, ನಮ್ಮ ಮೊದಲನೆಯ ಗಮನ ಕಾರ್ಯದಕ್ಷತೆಯ ಕಡೆಗೆ ಹೋಗಬೇಕಲ್ಲವೆ ?........ಜಾತಿ ವಿಜಾತಿಗಳಿಗಿಂತ ಭಿನ್ನವಾದ ಸಾರ್ವಜನಿಕ ದೃಷ್ಟಿಯೊಂದು ಉಂಟೆ ? ಇಲ್ಲವೆ ? ಸಾರ್ವಜನಿಕಕ್ಕೆ ನಾವು ಸಲ್ಲಿಸಬೇಕಾದ ನ್ಯಾಯವೊಂದು ಉಂಟೆ ? ಇಲ್ಲವೆ ?

"ಒಟ್ಟಿನ ಮೇಲೆ ಈ ತೊಡಕಿನ ತರ್ಕವೆಲ್ಲ ಸರಕಾರಿ ಉದ್ಯೋಗಗಳ ಕಾರಣದಿಂದ ಉತ್ಪನ್ನವಾದದ್ದು. ಪ್ರಗತಿ ತತ್ಪರವಾದ ಜನ ಜೀವನದಲ್ಲಿ ಸರಕಾರಿ ಉದ್ಯೋಗಗಳ ವಿಚಾರ ಬಹಳ ಮೇಲ್ಮಟ್ಟದ ಪ್ರಸಂಗವೇನೂ ಅಲ್ಲ. ದೇಶದಲ್ಲಿ ಕೃಷಿ ಯಂತ್ರ ಕಾರ್ಖಾನೆ ವಾಣಿಜ್ಯಗಳು ಬೆಳೆದು, ಜನ ಏಳಿಗೆ ಪಡೆದು ಖಾಸಗಿ ಉದ್ಯೋಗಗಳು ಪ್ರವರ್ಧಮಾನವಾದಂತೆಲ್ಲ ಸರಕಾರಿ ಚಾಕರಿಗಳ ಆಕರ್ಷಣೆ ಕಡಮೆಯಾಗಿ ಜಾತಿ ಭೇದಗಳ ಕಲಹಕ್ಕೆ ಮೂಲ ಕಾರಣವನ್ನು ಒದಗಿಸುತ್ತಿರುವ ಇಂದಿನ ಸಂದರ್ಭ ಇಲ್ಲದಾಗಬಹುದು."

"ಸರಕಾರಿ ಚಾಕರಿಗಳ ಜಗಳಕ್ಕೂ ಬ್ರಾಹ್ಮಣ ಬ್ರಾಹ್ಮಣೇತರ ವಿವಾದಕ್ಕೂ ನಾನು ಇದುವರೆಗೂ ಕೂಡಿದಮಟ್ಟಿಗೂ ದೂರವಾಗಿ ನಿಂತಿದ್ದೇನೆ"

ಗುಣಭೇದ ಶಕ್ತಿಭೇದಾಂಗೀಕಾರದ ಆಧಾರದ ಮೇಲೆ — ತಜ್ಜನ್ಯವಾದ

ವಿವಿಧತಾ ಪ್ರಯೋಜನ ಗಣನೆಯ ಆಧಾರದ ಮೇಲೆ ನಿಂತಿದ್ದದ್ದು ನಮ್ಮ ದೇಶದ ಹಿಂದೂ ಯುಗದ ವರ್ಣಾಶ್ರಮ ವ್ಯವಸ್ಥೆ. .... ಆ ಚಾತುರ್ವರ್ಣ್ಯದ ವ್ಯವಸ್ಥೆ ಇಂದಿನ ಸಂದರ್ಭಗಳಿಗೆ ಯಥಾವತ್ತಾಗಿ ಹೊಂದದಿರಬಹುದು. ಸಾವಿರ ವರ್ಷಗಳ ಹಿಂದೆ ಇದ್ದ ಸ್ಥಿತಿಯನ್ನು ಈಗ ಹಿಂದಕ್ಕೆ ತರೋಣವೆಂಬುದು ಕಾರ್ಯಸಾಧ್ಯವಿಲ್ಲದ ಮಾತಿರಬಹುದು. ಆದರೆ ಆ ವ್ಯವಸ್ಥೆಯ ಅಂತಸ್ಸತ್ತ್ವವೇನೆಂಬುದನ್ನು ಆಗ್ರಹವಿಲ್ಲದ ಬುದ್ಧಿಯಿಂದ ಕಂಡುಕೊಳ್ಳುವುದು ಯುಕ್ತವಾಗಿದೆ.

ಭಾಷಾವಾರು ಪ್ರಾಂತರಚನೆ : ಭಾಷಾವಾರು ಪ್ರಾಂತರಚನೆಗಾಗಿ ರಚಿತವಾಗಿದ್ದ ಸಮಿತಿಗೆ ಡಿ ವಿ ಜಿ ಯವರು ಕೊಟ್ಟಿದ್ದ ಟಿಪ್ಪಣಿಯ ಮುಖ್ಯಾಂಶಗಳು ಇವು :

The kinship of language is not the only bond that a people care for. There are other kinds of affinity that they hold equally dear; and each of these may ask that it may be made the basis of a separate State. For instance: Religion may demand that there be a Saiva State and a Vaishnava State, a Jaina State and a Jungama State. Caste may demand that there be a Kshatriya State and a Vaishya State, a Vokkaliga State and a Lingayat State; dietry may demand a Vegetarian State and a Meatarian State, Rice eaters' State and a Wheat eaters' State.

It is plain that such single sided and segregative bonds of sympathy cannot each by itself suffice as the basis of a separate State if the life of the people should be as efficient and rich and as full as it could possibly be. Other factors such as geographical features, association of history, conditions of economic progress and facility of administration must also have a share in the making of a State. Language can have no greater claim than any of the other sources of fellow feeling.

Change should not be made except where it is inevitably necessary for the welfare of a linguistic group (or of any other similar group). The existing arrangements must be left to

remain undisturbed wherever possible. More disturbance than is really unavoidable can only lead to confusion and disorder in both government and public relations.

It is strange that in the Democratic Republic of India people were transferred like goods and chattels from one ownership to another without even the courtesy of consulting the public of the two States concerned (when transferring Bellary to Mysore).

Mysore should be preserved as it was before the addition of Bellary — neither increased in size nor decreased in order to meet Andhra's claim for its Telugu tracts. These tracts (in the Kolar, Bangalore and Tumkur border taluks) have indeed become thoroughly assimilated to Kannada during the last sixty years or more.

Meddling with the shape and composition of Mysore will unsettle certain long-settled dispositions of the population and open the doar to new and more confusing conflicts of a communal nature.

As it is, Mysore is a compact political unit with well established traditions of its own in administration and public policy. It has a creditable record of industrial progress. It has an independent system of taxation and public revenue. Culturally it has developed a cosmopolitan pattern in which the elements of Tamil and Telugu and Marathi and Urdu and Persian have combined with Kannada; and Sanskrit and English have played a seminal part in the development of Kannada literature. In music and other fine arts too, Mysore has built up a liberal tradition drawing sustenance from the great schools of South India. In the realm of literary and artistic culture, Mysore may well claim to hold a unique position.

Except for the one tie of language, Mysore and the other Kannada territories like North and South Kanara on

one side and Dharwar and Bijapur on another have never lived together as members of an inter-related community or State. Their Governments have been different for several hundred years. Their social and cultural **milieu** has consequently been always different. And even in respect of language, their community is confined to the literary aspect of it; because the spoken form is masked by dailectical variations of diction and idiom. That social nexus which is formed by ties of marriage and family relationships between people of one part of the country and those of another is not a common phenomenon. Even habits of food and fashions in dress are noticeably different. In educational equipment and cultural preferences the average Mysorean is nearer to a man of Madras than to a man of Belgaum or Bijapur. This is the work of course of history. And what is important is that it is a present fact. It is a fact not merely of externals, but also of psychology. He must be a bold man who would predict success to a course of action adopted in defiance of the facts of popular psychology. A forced integration, far from unifying, may only produce new complexes and problems in a series without end.

ದೋಷ : ಪಾಪವೆಂದು ನಾವು ಸಾಮಾನ್ಯವಾಗಿ ಯಾವುದನ್ನು ಕರೆಯುತ್ತೇವೋ ಅದು ನಿಜವಾಗಿ ಅಜ್ಞಾನಕಾರ್ಯ; ಯಾವುದನ್ನು ದೋಷವೆನ್ನುತ್ತೇವೋ ಅದು ದೌರ್ಬಲ್ಯ. ಸಾಮಾನ್ಯವಾಗಿ ಪ್ರತಿಯೊಬ್ಬ ಮನುಷ್ಯನ ಸ್ವಭಾವ ಸಂಪತ್ತಿನಲ್ಲಿಯೂ ಯಾವುದಾದರೊಂದಂಶ ಹೆಚ್ಚು, ಒಂದು ಕಡಮೆ, ಇದ್ದೇ ಇರುತ್ತದೆ. ನಮ್ಮ ದೇಹದ ಮತ್ತು ಅಂತರಂಗದ ರಚನೆಯಲ್ಲಿಯೇ ಸೃಷ್ಟಿಕರ್ತನು ಕೆಲವು ನ್ಯೂನತೆಗಳನ್ನು ಕೆಲವು ಅತಿರೇಕಗಳನ್ನು ಅಡಗಿಸಿಟ್ಟಿರುತ್ತಾನೆ. ಹೀಗೆ ಹುಟ್ಟಿದೊಡನೆಯೇ ಬರುವ ನಮ್ಮ ಬಡತನಗಳೂ ಕೊಬ್ಬುಬ್ಬರಗಳೂ ಈ ಪ್ರಪಂಚದ ಸಾನ್ನಿಧ್ಯದಲ್ಲಿ ಪ್ರಕಟಪಡುತ್ತವೆ. ಜಿಹ್ವಾರಸಿಕತೆಯೂ ಜೀರ್ಣಶಕ್ತಿಯೂ ಹೆಚ್ಚಾಗಿರುವ ಮನುಷ್ಯನಿಗೆ ಭಕ್ಷ್ಯದರ್ಶನವಾದ ಕೂಡಲೇ ತನ್ನ ಮನಸ್ಸಿನ ಮೇಲೆ ದರ್ಪ ಕಡಮೆಯಾಗುತ್ತದೆ. ನಮ್ಮೊಳಗಿರುವ ಒಂದು ಇಂದ್ರಿಯಶಕ್ತಿಯನ್ನು ಲೋಕವು ಕೆಣಕಿ ಎಬ್ಬಿಸು

ತ್ತದೆ; ಅದೇ ಆಶೆ. ಆ ಆಶೆಯನ್ನು ಅದುಮಿಡುವ ಶಕ್ತಿ ಮನಸ್ಸಿಗೆ ಇಲ್ಲದೆ ಹೋಗುತ್ತದೆ; ಅದೇ ದೋಷ. ಸಾಮಾನ್ಯವಾಗಿ ಎಚ್ಚರಿಕೆಯಿಂದಲೂ ಜಾಣತನದಿಂದಲೂ ನಡೆದುಕೊಳ್ಳುತ್ತಿರುವ ಮನುಷ್ಯನನ್ನು ಒಂದು ಆಶೆಯು ಹಿಡಿದುಕೊಂಡಾಗ ಅವನು ಭ್ರಾಂತನಾಗಿ ಪ್ರಮಾದ ಮಾಡುತ್ತಾನೆ. ಅವನೊಳಗೆ ಸಾಧಾರಣವಾಗಿ ನಿದ್ರಿಸುತ್ತಿರುವ ಒಂದು ಆಕಾಂಕ್ಷೆಯನ್ನು, ಒಂದು ವ್ಯಾಮೋಹವನ್ನು, ಒಂದು ಪಕ್ಷಪಾತವನ್ನು ಅವನಿಗೊದಗುವ ಒಂದಾನೊಂದು ಸನ್ನಿವೇಶವು ಎಬ್ಬಿಸಿ ಉದ್ರೇಕಪಡಿಸುತ್ತದೆ; ಆಗ ಅವನು ಬೇರೊಬ್ಬ ಮನುಷ್ಯನಾಗುತ್ತಾನೆ. ಸಾಧಾರಣವಾಗಿ ಅವನಿಂದ ಹೊರಬೀಳದ ಮಾತೂ ನಡವಳಿಕೆಯೂ ಅವನು ಆಶಾವಶನಾದಾಗ ಅವನಿಂದ ಹೊರಟು ಬರುತ್ತವೆ. ಎಂದರೆ, ಆಶೆಯು ಅವನ ಜ್ಞಾನಕ್ಕೆ ಕಣ್ಣು ಕಟ್ಟುತ್ತದೆ, ಅವನ ಸದ್ಗುಣಕ್ಕೆ ಗಂಟಲು ಹಿಡಿಯುತ್ತದೆ. ಅದೇ ದೌರ್ಬಲ್ಯದ ಸ್ಥಿತಿ. ಮನುಷ್ಯ ಸ್ವಭಾವದ ಲೋಪ ವಕ್ರಗಳು ಹೀಗೆ ಕೆಲಸ ಮಾಡುವುವಾದ್ದರಿಂದ, ದೋಷಿಯೆನಿಸಿದವನ ವಿಷಯದಲ್ಲಿ ಇತರರಿಂದ ಸಲ್ಲಬೇಕಾದುದು ಕ್ರೋಧವಲ್ಲ, ಕನಿಕರ. ಕನಿಕರವೆಂದರೆ ಮೆಚ್ಚಿಕೆಯಲ್ಲ. ದೋಷವು ವರ್ಜ್ಯವೇ ಸರಿ. ಆದರೆ ದೋಷದ ಮೂಲ ಕಾರಣವಿರುವುದೆಲ್ಲಿ ?—ಎಂಬುದನ್ನು ವಿಚಾರ ಮಾಡಲು ನ್ಯಾಯಶೀಲನು ಮರೆಯಲಾರನು. "ದೋಷಿಯೆಂಬವನಿಗಿರುವ ಸುಖಯೋಗ್ಯತೆ, ಅವನಿಗಿರುವ ಅನುಭವ ಶಕ್ತಿ, ಅವನ ಮನಸ್ಸಿನ ಅಭಿರುಚಿ, ನನಗೆ ಇದ್ದಿದ್ದರೆ ಅವನಿಗೊದಗಿದ್ದ ಸನ್ನಿವೇಶದಲ್ಲಿ ನಾನೂ ಅವನಂತೆ ನಡೆಯುತ್ತಿರಲಿಲ್ಲವೆ ? ಇಲ್ಲವೆಂಬುದು ಖಂಡಿತವೆ ?" — ಎಂದು ನ್ಯಾಯಶೀಲನು ಕೇಳಿಕೊಳ್ಳದೆ ಇರನು. ಇಂಥಾ ಆತ್ಮಾನುಸಂಧಾನದಿಂದ ಹುಟ್ಟುವುದು ಕನಿಕರ. ಆಶೆಯೆಂಬುದು ಮನುಷ್ಯನಲ್ಲಿ ಅಂತರ್ಗತವಾಗಿರತಕ್ಕದ್ದು ; ಎಷ್ಟೋ ಮಾನುಷ ಸಂದರ್ಭಗಳಲ್ಲಿ ಅದರ ಪ್ರತಾಪವು ಅನಿವಾರ್ಯವಾಗುತ್ತದೆ. ಮನುಷ್ಯನ ಪೂರ್ವಾರ್ಜಿತ, ಅವನ ವಂಶಗುಣ, ಅವನ ವಿದ್ಯೆ ಸಂಸ್ಕಾರಗಳು, ಅವನಿಗೆ ಅದೃಷ್ಟವು ತಂದೊದಗಿಸುವ ಪ್ರೇರಣೆ ಸಹಾಯಗಳು, ಅವನಿಗೆ ಸಮಾಜವು ಒದಗಿಸಿಕೊಡುವ ನೆವ ಒತ್ತಾಸೆಗಳು — ಇವೆಲ್ಲವೂ ಅವನ ಆಶಾವಿಷ್ಟತೆಗೆ, ಅವನ ದೋಷವೆಂಬ ನಡವಳಿಕೆಗೆ ಪ್ರಥಮ ಕಾರಣಗಳಾಗಿರುತ್ತವೆ. ಹೀಗೆ ಸೂಕ್ಷ್ಮವನ್ನು ನೋಡಿದರೆ ಮನುಷ್ಯನು ತನ್ನ ಜೀವಮಾನದ ಉತ್ಕಟ ಸನ್ನಿವೇಶಗಳಲ್ಲಿ, ಎಷ್ಟು ಮಾತ್ರವೂ ಸ್ವತಂತ್ರನಲ್ಲದೆ ತನ್ನ ಸ್ವಭಾವಕ್ಕೂ, ಸಮಾಜಕ್ಕೂ, ಅದೃಷ್ಟಕ್ಕೂ, ದಾಸನಾಗಿ, ಬಂದೀವಾನನಾಗಿ ನಡೆದುಕೊಳ್ಳು

ತ್ತಾನೆಂದು ತೋರಿ ಬರುತ್ತದೆ. ಈ ಜಗತ್ಪ್ರತ್ರಿಮವನ್ನು — ಮಾನವ ಪ್ರಕೃತಿಯ ಈ ಕೊರತೆ ಕೊಂಕುಗಳನ್ನು — ಈ ಆಶೆಯ ಅನಿವಾರ್ಯತೆಯನ್ನು — ಈ ದೋಷದ ಅಪರಿಹಾರ್ಯತೆಯನ್ನು — ನಮ್ಮ ಕಣ್ಣಮುಂದೆ ತೋರಿಸುವುದು ಕಾವ್ಯ. ಕಾವ್ಯವು ಅದನ್ನು ಬಣ್ಣಿಸಿ ವಾಚಕನಲ್ಲಿ ಮರುಕ ಹುಟ್ಟಿಸುತ್ತದೆ. ಹಾಗೆ ಅವನ ಗರ್ವವನ್ನು ಕರಗಿಸುತ್ತದೆ. "ನಮ್ಮ ಬಾಳು ಇಷ್ಟೇಯೆ? ನಮ್ಮ ದರ್ಪ ಪರಾಕ್ರಮಗಳು ಇಷ್ಟೇಯೆ?" ಎಂದೆನಿಸುತ್ತದೆ. ಹೀಗೆಂದುಕೊಂಡು ಅವನು ನಮ್ರನೂ ಕ್ಷಮಾವಂತನೂ ಆಗುತ್ತಾನೆ. ಇದೇ ಹೃದಯಮಥನ".

"ನಮ್ಮ ಕಣ್ಣಿಗೆ ಕಾಣುವ ಮನುಷ್ಯ ದೇಹದಲ್ಲಿ, ಕಣ್ಣಿಗೆ ಕಾಣದಂತೆ ಹುಲಿಯ ಹಲ್ಲೂ ತೋಳದ ಹೊಟ್ಟೆಯೂ ಇರುತ್ತವೆ. ಅದಕ್ಕೆ ಯಾರೂ ರುಚಿ ತೋರಿಸಬಾರದು. ಹುಲಿ ಒಂದು ಸಲ ಮನುಷ್ಯರಕ್ತವನ್ನು ಸವಿದಮೇಲೆ, ಆ ಸವಿಯ ಹಂಬಲು ಅದನ್ನು ಎಂದೆಂದಿಗೂ ಬಿಡುವುದಿಲ್ಲವಂತೆ. ನಮ್ಮ ಹಸಿವುಗಳೂ ಹಾಗೆಯೇ. ಯಾರಲ್ಲಿ ಹಸಿವು ಮೊದಲಾಗುವುದಿಲ್ಲವೋ ಅವನು ಪುಣ್ಯಶಾಲಿ. ಅದು ಮೊದಲಾದಮೇಲೆ ಕಡೆಗಾಣುವುದು ಹಸಿದವನ ಜೊತೆಯಲ್ಲಿಯೇ. ಅದನ್ನು ಅಷ್ಟರೊಳಗೇ ಹಿಡಿದು ತಡೆಯಬೇಕೆನ್ನುವುದು ಒಳ್ಳೆಯವರಾಡುವ ಮಾತು. ಅದು ನಡೆಯುವ ಮಾತು ಹೌದೋ, ಅಲ್ಲವೋ, ಮ್ಯಾಕ್‌ಬೆತನನ್ನು ಕೇಳಿನೋಡಬೇಕು".

ಮತವಿಚಾರ : ಶಿವರಾಮ ಕಾರಂತರ ಒತ್ತಾಯಕ್ಕೆ ಮಣಿದು ಡಿ ವಿ ಜಿ ಅಕ್ಟೋಬರ್ 1940ರಲ್ಲಿ ಪುತ್ತೂರು ಕಡೆ ಪ್ರವಾಸ ಕೈಗೊಂಡು ಅಲ್ಲಿ ದಸರಾ ಹಬ್ಬದ ಕಾರ್ಯಕ್ರಮಗಳಲ್ಲಿ ಪಾಲುಗೊಂಡರು. ಆಗ ಅವರು ಅಲ್ಲಿ 'ಮತ'ವನ್ನು ಕುರಿತು ಮಾಡಿದ ಉಪನ್ಯಾಸ ವಿಚಾರಪ್ರಚೋದಕವಾದದ್ದು. "ಕನ್ನಡ ನುಡಿ" (1.11.40) ಅದನ್ನು ಹೀಗೆ ವರದಿ ಮಾಡಿದೆ: "ಮತವೆಂದರೆ ಅಭಿಪ್ರಾಯ. ಈ ಜಗತ್ತಿನ ಮತ್ತು ಆದರ ಕರ್ತನ ವಿಷಯವಾಗಿ ನಮಗಿರುವ ನಂಬಿಕೆ ಮತ್ತು ಅದನ್ನು ಅನುಸರಿಸಿಕೊಂಡಿರುವ ನಮ್ಮ ನಡವಳಿಕೆ. ಭಯ, ಆಶ್ಚರ್ಯ ಅಥವಾ ವಿಸ್ಮಯ ಆರ್ತತೆ ಮೋಹ ಇವು ದೇವರ ಇರುವಿಕೆಯ ನಂಬಿಕೆಗೆ ತಳಹದಿ. ಆದರೆ ಅವನು ದಯಾಮಯನು ಎಂದು ಹೇಳುವುದಕ್ಕೆ ಸಾಕಷ್ಟು ಕಾರಣಗಳಿಲ್ಲ. ಮತಕ್ಕಿಂತ ವಿಸ್ತಾರವಾದದ್ದು ಮನುಷ್ಯ ಜೀವನ. ಯಾವ ಮತವೂ ಜೀವನದಷ್ಟು ವ್ಯಾಪ್ತಿ ಪಡೆಯಲಿಲ್ಲ. ಆದ್ದರಿಂದಲೇ ಯಾವ ಮತವೂ ಆಯಾ ಮತಸ್ಥರಿಗೆ ಕೂಡ ಪೂರ್ಣತೃಪ್ತಿಯನ್ನು ಕೊಟ್ಟಿಲ್ಲ.

ಗಾಯತ್ರಿ ಮಂತ್ರದ ಅರ್ಥವನ್ನು ನೋಡಿ. ಆ ಮಂತ್ರದಲ್ಲಿ ಸಂಪತ್ತು ಕೊಡು, ಕಷ್ಟ ನಿವಾರಣೆ ಮಾಡು ಎಂಬ ಪ್ರಾರ್ಥನೆಯಿಲ್ಲ. ನಮ್ಮ ಬುದ್ಧಿಯನ್ನು ಪ್ರಚೋದಿಸು ಎನ್ನುವುದು ಅಲ್ಲಿಯ ಪ್ರಾರ್ಥನೆ. ಇದೇ ಮತದ ಪರಮಾರ್ಥ. ಮತಧರ್ಮಗಳು ಕಾಲಕ್ರಮವಾಗಿ ಕಾಲಾನುಗುಣವಾಗಿ ಬದಲಾವಣೆಯಾಗ ಬೇಕಾದವು. ಇದಕ್ಕೆ ನಮ್ಮ ಸ್ಮೃತಿಗಳಲ್ಲಿ ಆಧಾರವಿದೆ. ನಮ್ಮ ಜೀವನ ಬೆಳೆಯುತ್ತಿರುವಂತೆ, ಭೌತಶಾಸ್ತ್ರ ಮುಂತಾದ ಶಾಸ್ತ್ರಗಳು ಬೆಳೆಯುತ್ತಿರುವಂತೆ, ನಮ್ಮ ಮತಕ್ಕೆ ಆಧಾರ ಶಾಸ್ತ್ರಗಳೂ ಬೆಳೆಯಬೇಕು. ಪ್ರಾಜ್ಞರು, ಧರ್ಮ ಸೂಕ್ಷ್ಮಜ್ಞರು ಇದನ್ನು ಮಾಡಬೇಕು. ನಮ್ಮ ಜೀವನ ತುಂಬಬೇಕಾದರೆ ಮತದ ಜೊತೆಗೆ ಸಾಹಿತ್ಯ ಬೇಕು. ಅಲ್ಲದೆ ವಿಜ್ಞಾನದ ಸಹಾಯ ಬೇಕು. ತಿಳಿವಳಿಕೆಯಿಂದ ಹುಟ್ಟಿದ ಮತ, ಜಿಜ್ಞಾಸೆಯಿಂದ ಹುಟ್ಟಿದ ಮತ, ಬೇಕಾದದ್ದು. ಅದು ನಿಜವಾದ ಮತ.

"ಪರಮಶಿವನನ್ನು ಧ್ಯಾನಿಸುವುದೆಂದರೆ ಮೂರ್ತಿ ಒಂದನ್ನು ಧ್ಯಾನಿಸುವು ದೆಂದು ಅರ್ಥವಲ್ಲ. ಲೋಕಕಲ್ಯಾಣವನ್ನು ಚಿಂತಿಸು, ಅದರಲ್ಲಿ ಉದ್ಯಮ ಶೀಲನಾಗು ಎಂದು. ಲೋಕಸಂಗ್ರಹವೇ ಪರಮಜ್ಞಾನಿಯ ಮತ. ಆದ್ದರಿಂದ ಮತದ ವಿಷಯದಲ್ಲಿ ಅಂಧಶ್ರದ್ಧೆಯನ್ನು ಕಡಮೆ ಮಾಡಿ ವಿಚಾರಪರತೆಯನ್ನು ಬೆಳಸಬೇಕು."

ಆರ್. ಕಾನ್ರಾಡ್ ಎಂಬವರಿಗೆ 26-2-1953ರಲ್ಲಿ ಡಿ ವಿ ಜಿ ಯವರು ಬರೆದಿರುವ ಪತ್ರ ಅವರ ಅಂತರಂಗವನ್ನು ಬಿಚ್ಚಿ ತೋರಿಸುವುದಾಗಿದೆ. ಅದರ ಮುಖ್ಯಾಂಶಗಳು ಇವು :

"ಅಧ್ಯಾತ್ಮ ತತ್ತ್ವವು ಒಳಗಣ ಅನುಭವದ ವಿಷಯ — ವಾದ ವಿವಾದ ಗಳಿಂದ ಅದು ಗೊತ್ತಾಗತಕ್ಕದ್ದಲ್ಲ. ನಿಮಗೆ ಸದ್ಯಕ್ಕೆ ದ್ವೈತ ಮತವೇ ಯುಕ್ತವೆಂದು ತೋರಿರುವ ಪಕ್ಷದಲ್ಲಿ ಅದನ್ನೇ ನೀವು ಅವಲಂಬಿಸಿ ಏಕೆ ಅಂತರನುಭವವನ್ನು ಸಂಪಾದಿಸಿಕೊಳ್ಳಬಾರದು ? ದ್ವೈತವೋ ಅದ್ವೈತವೋ ಯಾವುದೋ ಒಂದು ಸಿದ್ಧಾಂತ ಅನುಭವಕ್ಕೆ ಬಂದ ಮೇಲೆ ಅದರ ಸೂಚನೆ ಯಂತೆ ಮುಂದಿನ ಬೆಳವಣಿಗೆ.

"ನನ್ನನ್ನು "ಅದ್ವೈತ ಸಿದ್ಧಾಂತದ ಕಡೆಗೆ ಒಲವುಳ್ಳವನೆಂದು" ತಾವು ಊಹಿಸಿರುವುದಾಗಿ ಬರೆದಿದ್ದೀರಿ. ನಾನು ಅದ್ವೈತಿಯೋ ದ್ವೈತಿಯೋ ನನಗೆ ತಿಳಿಯದು. ನಾನು ಅನುಭವವನ್ನು ಹುಡುಕುತ್ತಿದ್ದೇನೆ. ನನ್ನ ಆ ಹುಡುಕುವಿಕೆ ಇನ್ನೂ ಮುಗಿದಿಲ್ಲ.

"ಜಗನ್ಮಿಥ್ಯೆಯೆಂದರೆ ಜಗತ್ತು ಅತ್ಯಂತ ಸತ್ಯವಲ್ಲ – ಪರಬ್ರಹ್ಮದಷ್ಟು ಸತ್ಯವಲ್ಲ – ಕೇವಲ ಸತ್ಯವಲ್ಲ, ಎಂದು ಅರ್ಥ. ಬ್ರಹ್ಮ ಶಾಶ್ವತ, ಬ್ರಹ್ಮದೊಡನೆ ಹೋಲಿಸಿದರೆ ಜಗತ್ತು ಅಶಾಶ್ವತ. ಬ್ರಾಹ್ಮಿಕ ಸತ್ಯಕ್ಕಿಂತ ಕೆಳಮಟ್ಟದ ಸತ್ಯತ್ವ ಜಗತ್ತಿಗೆ ಉಂಟೆಂಬುದನ್ನು ಯಾರೂ ಇಲ್ಲವೆನ್ನುವುದಿಲ್ಲ.

"ಅದ್ವೈತಿಯ ಪೂಜೆ ಪುರಸ್ಕಾರಗಳು ಒಂದು ಸಾಧನೆ, ಸಿದ್ಧಿಯಲ್ಲ. ಸಾಧಕಾವಸ್ಥೆಯಲ್ಲಿ ಒಳಗಿನದನ್ನು ಹೊರಗಿನದರೊಡನೆ ಬೆರಸಿ ಒಂದುಗೂಡಿಸುವ ವಿಧಾನವೇ ಪೂಜೆ. ಸಾಧಕನು ಈ ಸಾಧನೆಯಲ್ಲಿ ಉತ್ತೀರ್ಣನಾದಾಗ ಸಿದ್ಧನೆನ್ನಿಸಿಕೊಳ್ಳುತ್ತಾನೆ. ಪೂಜೆಯೆಂಬುದು ಐಕ್ಯಾನುಸಂಧಾನದ ರೀತಿ—ಜೀವಾತ್ಮವನ್ನು ವಿಶ್ವಾತ್ಮದಲ್ಲಿ ಬೆರೆಸುವ ರೀತಿ. ಹೀಗೆ ಸಾಧನೆಯಲ್ಲಿ ದ್ವೈತ; ಸಿದ್ಧಿಯಲ್ಲಿ ಅದ್ವೈತ.

"ಮಾಯೆಯೆಂಬುದು ಬ್ರಹ್ಮವಸ್ತುವಿನ ಪ್ರಕಾಶ, ಅಥವಾ ಚೈತನ್ಯ ಚೇಷ್ಟೆ. ಆ ಮಾಯೆಯ ಪ್ರಭಾವದಿಂದ ಬ್ರಹ್ಮವಸ್ತುವು ಮೊದಲು ಜೀವವಾಗಿ ಆಮೇಲೆ ಜೀವಾವಸ್ಥೆಯಲ್ಲಿ ತನ್ನ ನಿಜ ಸ್ವರೂಪವನ್ನು ಮರೆತು ದಿಗ್ಭ್ರಮೆ ಹೊಂದುತ್ತದೆ—ಒಂದೊಂದು ಸಲ ನಮ್ಮ ನಾಲಗೆಯನ್ನು ನಾವೇ ಕಚ್ಚಿಕೊಳ್ಳುವಂತೆ, ಅಥವಾ ನಮ್ಮ ನಮ್ಮ ನೆರಳ ಸುಳಿತದಿಂದ ನಾವೇ ಭಯಪಡುವಂತೆ. ಜಗತ್ತೆಂಬುದು ಬ್ರಹ್ಮವಸ್ತುವು ಸ್ವಶಕ್ತಿಯಾದ ಮಾಯೆಯೊಡನೆ ಆಟವಾಡುತ್ತ ಅದಕ್ಕೆ ಮರುಳಾಗಿ ಸ್ವೈಮರೆತಿರುವ ಲೀಲಾವಿಕಾರ.

"ಪುಣ್ಯಪಾಪಗಳ ಲೆಕ್ಕ ಜೀವಸ್ಥಿತಿಗೆ—ಎಂದರೆ ಬ್ರಹ್ಮಾಂಶ ರೂಪದ ಭ್ರಾಂತಸ್ಥಿತಿಗೆ ಸೇರಿದ್ದು. ಎದುವರೆಗೂ ಜೀವಕ್ಕೆ ತಾನು ಜೀವ ಮಾತ್ರವೆಂಬ, ಮತ್ತು ಬ್ರಹ್ಮವಸ್ತುವಿನಿಂದ ಬೇರೆಯೆಂಬ ಭ್ರಮೆಯುಂಟೋ ಅದುವರೆಗೂ—ಮತ್ತು ಅವರೆಗೆ ಮಾತ್ರ—ಪುಣ್ಯಪಾಪಗಳೂ, ಎಲ್ಲ ದ್ವಂದ್ವಗಳೂ ಉಂಟು; ದೇಹೋಪಾಧಿಗಳಿಂದ ಅತೀತನಾದವನ ಪಾಲಿಗೆ ಜಗತ್ತು ಹೇಗೆ ಕೃತಕವೋ ಪುಣ್ಯ ಪಾಪಗಳೂ ಹಾಗೆಯೇ.

"ನೀವು 'ಘೋರ ಪಾಪ' ಎಂದು ಬರೆದಿದ್ದೀರಿ, ಈ ಘೋರ ಅಘೋರಗಳು ನಿಮ್ಮ ದೃಷ್ಟಿಗೆ ಉಂಟಾಗತಕ್ಕವು, ಬ್ರಹ್ಮದೃಷ್ಟಿಯಲ್ಲಿ ಅವು ಇಲ್ಲ. ಸಮುದ್ರ ನಿಮಗೆ ಘೋರ; ಅದರಲ್ಲಿಯ ಮೀನಿಗೆ ಅಘೋರ. ಅರಣ್ಯ ನಿಮಗೆ ಘೋರ; ಅದರಲ್ಲಿಯೇ ಹುಟ್ಟಿ ಬದುಕುವ ಹುಲಿಗೆ ಅಘೋರ. ಈಗಿನ ಕಾಲದ ತಾತ್ತ್ವಿಕರು ಈ ಒಳ್ಳೆಯದು-ಕೆಟ್ಟದ್ದು ಎಂಬ ಒಂದು ಪ್ರಶ್ನೆಯನ್ನು ಮಹಾ ಗಾಂಡೀವವೆಂದು ಎತ್ತುತ್ತಾರೆ. ಅದರಲ್ಲಿ ಹಿಂದೆ ಯಾರಿಗೂ ತಿಳಿಯ

ದಿದ್ದ ಹೊಸ ಅಂಶವೇನೂ ಇಲ್ಲ. ಘೋರಾಘೋರಗಳು ಜಗತ್ತಿನ ಭಾಗ, ಬ್ರಹ್ಮ ಭಾಗವಲ್ಲ. ಆ ದ್ವಂದ್ವವಿಲ್ಲದೆ ಜಗತ್ತಿಲ್ಲ. ಮನುಷ್ಯ ಎಂದು ದ್ವಂದ್ವಾತೀತನಾಗುತ್ತಾನೋ ಅಂದು ಅವನಿಗೆ ಜಗನ್ಮಿಥ್ಯಾತ್ವವೂ ಬ್ರಹ್ಮಸತ್ಯತ್ವವೂ ಸ್ವಾನುಭೂತಗಳಾಗುತ್ತವೆ.

"ಜಗತ್ತಿಗೆ ಒಂದು ಜಾತಿಯ ಸತ್ಯತ್ವವುಂಟು. ಅದು ವ್ಯವಹಾರ ಸತ್ಯ. ದೇಹವಿರುವವರೆಗೂ ಜಗತ್ತುಂಟು. ಆದದ್ದರಿಂದ ಜಗದ್ವ್ಯಾಪಾರವು ದೇಹಿಗೆ ಅನಿವಾರ್ಯವಾದದ್ದು. ಆದರೂ ಈ ಅನಿವಾರ್ಯ ವ್ಯಾಪಾರದಲ್ಲಿ ಅವನು ಪರಮಾರ್ಥ ಸತ್ಯವನ್ನು ಮರೆಯಬಾರದು. ಅಂಥಾ ಬ್ರಹ್ಮಾನುಸ್ಮರಣ ಪೂರ್ವಕವಾದ ಲೋಕ ವ್ಯವಹಾರವೇ ಧರ್ಮವೆಂಬುದು. ಕಾಶೀಯಾತ್ರೆ ಹೊರಟವನು ಮಾರ್ಗವಶಾತ್ ಸಿಕ್ಕಿದ ಒಂದಾನೊಂದು ಊರಿನಲ್ಲಿ ಆಹಾರ ನಿದ್ರೆಗಳನ್ನು ಮಾಡಿಕೊಂಡಿದ್ದರೂ ಅವನ ಗಮನ ಕಾಶಿಯ ಮೇಲೆ ಹೇಗೆ ಇರುತ್ತದೆಯೋ ಹಾಗೆ ತತ್ತ್ವದರ್ಶಿಯಾದವನು ಲೋಕವ್ಯವಹಾರದಲ್ಲಿ, ಅದು ತಾತ್ಕಾಲಿಕ ಮಾತ್ರದ್ದೆಂಬ ಧ್ಯಾನವನ್ನು ಕ್ಷಣೇ ಕ್ಷಣೇ ಮನಸ್ಸಿನಲ್ಲಿ ಇರಿಸಿಕೊಂಡು ನಡೆಯುತ್ತಿರುತ್ತಾನೆ. ದಾರಿಯ ಸೊಟ್ಟು ನೇರಗಳು, ನುಣುಪು ಕಡಿದುಗಳು, ನಡೆಯುವವನಿಗೆ. ನಡಿಗೆ ಮುಗಿದು ಮನೆ ಸೇರಿದವನಿಗೆ ದಾರಿಯ ಕಷ್ಟ ಸುಲಭಗಳ ಚಿಂತೆಯಿರದು.

"ಸ್ವಪ್ನ ವಿಷಯವನ್ನು ಎತ್ತಿದ್ದೀರಿ. ಸ್ವಪ್ನಕ್ಕೂ ಒಂದು ಮಟ್ಟದ ಸತ್ಯತ್ವವುಂಟು. ಅದು ಜಗತ್ತಿನ ಸತ್ಯತ್ವಕ್ಕಿಂತ ಕೆಳಮಟ್ಟದ್ದು. ಜಾಗ್ರದವಸ್ಥೆಯಲ್ಲಿ ನೀವು ಒಂದು ಸಲ ಮಾಡಿಕೊಂಡ ಅನುಭವವನ್ನು ಮತ್ತೊಂದು ಸಲ ಮಾಡಿಕೊಳ್ಳಲಾದೀತು. ಸ್ವಪ್ನದಲ್ಲಿ ಅದು ಸಾಧ್ಯವಲ್ಲ. ಇಲ್ಲಿ ಸ್ವಪ್ನವೆಂದರೆ ಏನೆಂಬುದನ್ನು ಮನಸ್ಸಿಗೆ ವಿಶದ ಪಡಿಸಿಕೊಳ್ಳಬೇಕು. ಮುಂದೆ ಆಗುವ ಶುಭಾಶುಭಗಳ ಸೂಚನೆ ಸ್ವಪ್ನಗಳಲ್ಲುಂಟೆಂದು ಕೆಲವರು ಹೇಳುತ್ತಾರೆ. ಆದರೆ ಅದು ನಮಗೆ ಇಲ್ಲಿ ಪ್ರಸ್ತುತವಲ್ಲ. ಇನ್ನು ಕೆಲವು ಸ್ವಪ್ನಗಳಲ್ಲಿ ಆಗುವ ಅನುಭವಗಳು ಜಾಗ್ರದವಸ್ಥೆಗೆ ಸಂಬಂಧಪಟ್ಟ ದೇಹಾವಯವಗಳ ಮೇಲೆ ಪರಿಣಾಮ ಮಾಡುವುದುಂಟು. ಆ ಸ್ಥೂಲ ದೇಹ ಪರಿಣಾಮಗಳೂ ಇಲ್ಲಿ ನಮಗೆ ಪ್ರಕೃತವಲ್ಲ, ಇಲ್ಲಿ ಪ್ರಕೃತವಾದದ್ದು ಸ್ವಪ್ನದ ಅನುಭವ ಕ್ಷಣಿಕ ಮಾತ್ರದ್ದು ಎಂಬುದಷ್ಟೇ, ಮತ್ತು ಸ್ವಪ್ನದಲ್ಲಿ ಮನಸ್ಸೆಂಬ ಒಂದೇ ವಸ್ತು ನಾಲ್ಕಾರು ಬಿಂಬ ಪ್ರತಿಬಿಂಬ ರೂಪಗಳನ್ನು ತಾಳುತ್ತದೆ. ಒಂದೇ ಒಂದಾಗಿದ್ದದ್ದು ಕನಸಿನಲ್ಲಿ ಎರಡೋ ಮೂರೋ ನಾಲ್ಕೋ ಕೃತಕಾಕಾರಗಳಾಗುತ್ತವೆ

—ಏಕತ್ವದಿಂದ ನಾನಾತ್ವ—ಎಂದು ತೋರಿಸುವುದಷ್ಟೇ ಸ್ವಪ್ನೋಪಮಾನದ ತಾತ್ಪರ್ಯ. ಸ್ವಪ್ನಪ್ರಪಂಚದಲ್ಲಿ ಮನೋವಸ್ತುವಿನ ಏಕತ್ವ ಸತ್ಯ, ನಾನಾತ್ವ ಮಿಥ್ಯೆ; ಹಾಗೆಯೇ ಅಧ್ಯಾತ್ಮದಲ್ಲಿ ಬ್ರಹ್ಮವಸ್ತುವಿನ ಏಕತ್ವ ಸತ್ಯ, ಜಗದ್ರೂಪದ ನಾನಾತ್ಮ ಮಿಥ್ಯೆ."

ಸಮಾಜ ಪರಿಷ್ಕರಣೆ : ನಮ್ಮ ಸಮಾಜದಲ್ಲಿ ಬೇಕಾದಷ್ಟು ಲೋಪಗಳಿವೆ, ಅನ್ಯಾಯಗಳಿವೆ. ದುಗುಡ ದುಃಖಗಳಿವೆ, ಇವುಗಳನ್ನು ಹೋಗಲಾಡಿಸುವುದು ಹೇಗೆ ? ಈ ಸಮಾಜ ಸ್ಥಿತಿಯು ಹೀಗೆಯೇ ಇರಬೇಕೆ ? ಇದನ್ನು ಪರಿಷ್ಕರಿಸೋಣವೆ ?—ಎಂದು ಪಾಶ್ಚಾತ್ಯರು ನಿಷ್ಪಕ್ಷಪಾತವಾಗಿ ನಿರ್ದಾಕ್ಷಿಣ್ಯವಾಗಿ ವಿಚಾರ ಮಾಡುತ್ತಾರೆ. ಆದರೆ ನಮ್ಮಲ್ಲಿ ಸಾಮಾಜಿಕ ದುಃಖವು ಎಷ್ಟು ಪ್ರಬಲವಾಗಿದ್ದರೂ ನಿವಾರಣೋಪಾಯ ಮಾತ್ರ ನಡೆಯುವುದಿಲ್ಲ........ವಿಚಾರಕ್ಕೆ ಹೊರಟರೆ ನಮ್ಮ ಶಾಸ್ತ್ರ ಏನಾಗಿ ಬಿಡುತ್ತದೆಯೋ ? ಎಂದು ನಮಗೆ ಹೆದರಿಕೆ.... ನಮ್ಮ ಸ್ವತಂತ್ರ ವಿಚಾರದಿಂದ ಸಾಮಾಜಿಕ ಸ್ಥಿತಿಗಳನ್ನು ಧರ್ಮಪ್ರಕಾರಗಳನ್ನು ಪರಿಶೀಲಿಸಿ ನೋಡಿ, ಅವು ನಮಗೆ ಅನುಕೂಲಗಳಾಗುವಂತೆ ಪರಿಷ್ಕರಿಸಿಕೊಳ್ಳುವುದಕ್ಕೆ ಪ್ರಯತ್ನ ಪಡಬೇಕು.... ಸ್ವತಂತ್ರ ವಿಚಾರ ಬುದ್ಧಿಯಿಲ್ಲದೆ ಕಾವ್ಯವನ್ನು ಬರೆದರೆ ಅದು ಹಳಸಲಾಗುತ್ತದೆ. ಬೆಳಗಾಗ ಮಾಡಿಟ್ಟ ಕಾಫಿಯನ್ನು ಸಂಜೆಯಲ್ಲಿ ಬಿಸಿಮಾಡಿಕೊಟ್ಟ ಹಾಗಾಗುತ್ತದೆ.

ಬೇರೆ ಮತಗಳಿಗೆ ಸೇರಿಕೊಂಡವರನ್ನು ಪುನಃ ಹಿಂದೂ ಮತಕ್ಕೆ ಸೇರಿಸುವುದರ ವಿಷಯದಲ್ಲಿ ಕಂಚಿಯ ಶಂಕರಾಚಾರ್ಯ ಸ್ವಾಮಿಗಳು ಹೊರಡಿಸಿದ ಶ್ರೀಮುಖವನ್ನು ಕುರಿತು "The rescript is, if I may say so, in the great tradition of Sri Vidyaranya Swamigal of six hundred years ago. It represents the authentic voice of the Sanatana Dharma of the Rishis and it is the revival of that spirit that can once again build up the disintegrating Hindu Society and endow it with vitality and vigour so necessary for it in order that it can be of service to the rest of the world in these troubled times" ಎಂದು ಕುಂಭಕೋಣದ ಮಠದ ಅಧಿಕಾರಿಗಳಿಗೆ 29-10-46 ರಂದು ಬರೆದರು.

ಬದಲಾವಣೆ : ದೇಹಶುದ್ಧಿ ನಡೆಯದೆ ಹೋದರೆ ಆರೋಗ್ಯ ಕೆಡು

ತ್ತದೆ. ಅಪಾಯ ಬರುತ್ತದೆ. ರಾಜ್ಯಕ್ಕೂ ಹಾಗೆಯೇ ಸಮಾಜಕ್ಕೂ ಹಾಗೆಯೆ. ಆಗಾಗ ಶೋಧನೆ ನಡೆಯುತ್ತಿರಬೇಕು. ಈ ಪರಿಶುದ್ಧಿಕಾರ್ಯವೇ ಬದಲಾವಣೆ. ಬದಲಾವಣೆಯನ್ನು ಇಷ್ಟದಿಂದ ನೋಡಬೇಕಾದದ್ದು. ಆದರೆ ಜಾಗರೂಕತೆಯನ್ನೂ ವಿವೇಕವನ್ನೂ ಕೂಡಿರಬೇಕಾದದ್ದು.

ಪದೇ ಪದೇ ಬದಲಾವಣೆ ನಡಸುವುದು ಒಳ್ಳೆಯದಲ್ಲವೆಂದು ನನ್ನ ಅಭಿಪ್ರಾಯ. ಗಿಡ ಚೆನ್ನಾಗಿ ಬೆಳೆಯಬೇಕೆನ್ನುವವರು ವಾರ ವಾರವೂ ಅದನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಬದಲಾಯಿಸುತ್ತಿರುವುದಿಲ್ಲ. ಒಂದು ಸಲ ಚೆನ್ನಾಗಿ ಯೋಚನೆ ಮಾಡಿ ಒಂದು ಏರ್ಪಾಟನ್ನು ಜಾರಿಗೆ ತರಬೇಕು; ತಂದ ಬಳಿಕ ಹತ್ತಿಪ್ಪತ್ತು ವರ್ಷವಾದರೂ ಅದನ್ನು ಸ್ಥಿರವಾಗಿ ನಿಲ್ಲಿಸಿ ಅದು ತನ್ನ ಗುಣವನ್ನು ಚೆನ್ನಾಗಿ ತೋರಿಸಲು ಅವಕಾಶ ಕೊಡಬೇಕು. ಅಷ್ಟರಲ್ಲೀ ದೋಷಗಳೇನಾದರೂ ಒಂದೆರಡು ಕಾಣಬಂದರೂ, ಅವು ಸಾಮಾನ್ಯವಾದುಂಥವಾದರೆ. ಸಹಿಸಬೇಕೇ ಹೊರತು ಆತುರ ಪಟ್ಟು ವ್ಯತ್ಯಾಸ ಮಾಡಬಾರದು. ಪರಾಮರ್ಶೆ ಸಂತತವಾಗಿರಬೇಕು. ಬದಲಾವಣೆ ಮಾತ್ರ ತೀರ ಅವಶ್ಯವಾದಾಗ.

ರಾಜಕೀಯದಲ್ಲೂ.... ಅನಿಷ್ಟಗಳು ಹೇಗೋ ಬಂದು ಒದಗುತ್ತವೆ. ಒಂದಿಷ್ಟು ಕಷ್ಟ ಬರಲೇ ಬರುತ್ತದೆ. ಹಾಗಾದಾಗ ರಾಜ್ಯ ನಿಬಂಧನೆಯನ್ನಾಗಲಿ ರಾಜ್ಯವ್ಯವಸ್ಥೆಯನ್ನಾಗಲಿ ದೂಷಿಸಿ ಎಲ್ಲವನ್ನೂ ಬುಡಮುಟ್ಟ ಬದಲಾಯಿಸುತ್ತೇನೆಂದು ಹೊರಡುವುದು ಕ್ಷೇಮವಾಗದು.

ರಾಜಕೀಯ : ಅವರ ಕೊನೆಯ ವರ್ಷಗಳಲ್ಲಿ ಡಿ ವಿ ಜಿ ಯವರನ್ನು ಕಾಡುತ್ತಿದ್ದ ವ್ಯಸನವೆಂದರೆ ನಮ್ಮ ದೇಶದ ರಾಜಕೀಯ ಪರಿಸ್ಥಿತಿ. ನಮ್ಮ ಪುಸ್ತಕ ಪಂಡಿತರು ನಮ್ಮ ಜನಕ್ಕೆ ಸುಲಭವಾಗದಿರುವ ರಾಜ್ಯಪದ್ಧತಿಯನ್ನು ಅನುಭವದ ಆಧಾರವಿಲ್ಲದೆ ಎದೆಗಪ್ಪಿಕೊಂಡಿದ್ದಾರೆ. ಅದು ಪ್ರಜಾಪ್ರಭುತ್ವವನ್ನು ಮೆಟ್ಟಿ ಪಾರ್ಟಿ ರಾಜ್ಯಕ್ಕೆ ಎಡೆಗೊಟ್ಟಿದೆ. ಕೃತ್ರಿಮದ ಪ್ರಜಾಭಿಮಾನಿಗಳ ದಾಂಧಲೆ ಹೆಚ್ಚಾಗಿದೆ. ವರ್ಷದ ಮುನ್ನೂರ ಅರವತ್ತೈದು ದಿನವೂ ಬೆಳಿಗ್ಗೆ ಸಂಜೆ ಮೂರು ಹೊತ್ತೂ ಸರಕಾರವೆಂಬ ಸಂಸ್ಥೆಯನ್ನು ಪರೀಕ್ಷಿಸಿ ನೋಡುತ್ತ ಅದರ ಕೊಳಕನ್ನು ಒರಸುತ್ತ ಅದರ ಸೊಟ್ಟುಪಟ್ಟುಗಳನ್ನು ತಿದ್ದುತ್ತ ಇರುವುದೇ ಪ್ರಜೆಗಳ ಕಸಬಾಗಿ ಹೋಗಿದೆ. ಪ್ರಜಾರಾಜ್ಯವೆಂಬುದು ಒಂದು ಕಸವಾಗಿ ಹೋಗಿದೆ. ಇದರಿಂದ ಪೈಪೋಟಿ, ಜಿದ್ದು. ಈ ಮನೋಭಾವ ದೇಶದ ವಾತಾವರಣವನ್ನೇ ಕಲುಷಿತಗೊಳಿಸಿದೆ. ಯಾವುದು ಜನ

ಜೀವನದ ಒಂದು ಭಾಗವಾಗಿರಬೇಕಾದದ್ದೋ, ಯಾವುದು ಒಳ್ಳೆಯ ಜೀವನಕ್ಕೆ ಅನುವು ಮಾಡಿಕೊಡಬೇಕಾದದ್ದೋ ಅದು ಜೀವನವೆಲ್ಲವನ್ನೂ ಆಕ್ರಮಿಸಿ ಕೊಂಡು ಜೀವನದ ಮಿಕ್ಕೆಲ್ಲ ಭಾಗಗಳಿಗೂ ತನ್ನ ವಿಷವನ್ನು ತುಂಬುತ್ತಿದೆ.

ಇದನ್ನು ಸರಿಪಡಿಸುವುದು ಹೇಗೆ? ರಾಜಕೀಯವನ್ನು ಅದರ ಸ್ಥಾನಕ್ಕೆ ಮಿತಿಗೊಳಿಸುವುದು ಹೇಗೆ? ಜನರ ಜೀವನಸ್ಥಿತಿಯನ್ನು ಉತ್ತಮಪಡಿಸು ವುದು ಹೇಗೆ?—ಈ ಮುಂತಾದ ಪ್ರಶ್ನೆಗಳನ್ನು ಅವರು ಚಿಂತಿಸಿ 'ಸಾರ್ವ ಜನಿಕ' ಎಂಬ ಗೋಖಲೆ ಸಂಸ್ಥೆಯ ಪತ್ರಿಕೆಯಲ್ಲಿ ಬರೆಯುತ್ತಿದ್ದರು.

ಮುಖ್ಯವಾಗಿ ಅವರದು ಸಮಾಧಾನ ಮಾರ್ಗ, ಒಪ್ಪಂದದ ಮಾರ್ಗ. ಕೇಂದ್ರದಲ್ಲಿ ಎಲ್ಲ ಪಕ್ಷಗಳೂ ಸೇರಿದ ಒಂದು ರಾಷ್ಟ್ರೀಯ ಸರಕಾರ ರಚಿತ ವಾಗಬೇಕು ಎಂದು ಬಯಸುತ್ತಿದ್ದರು.

ವಿದ್ಯಾಭ್ಯಾಸ : ಅಂದಿನ ವಿದ್ಯಾಭ್ಯಾಸ ಕ್ರಮವನ್ನು ಕುರಿತು ಡಿ ವಿ ಜಿ ಯವರು ಹೇಳಿರುವ ಮಾತುಗಳು ಗಮನಾರ್ಹವಾದದ್ದು. ಅವರು ಹೇಳುತ್ತಾರೆ :

"(1) ಆಗಿನ ಪಾಠ ಯೋಜನೆ, ಪಾಠಕ್ರಮಗಳು ಚೆನ್ನಾಗಿದ್ದುವು. ಅವುಗಳಲ್ಲಿ ಯಾವ ದೋಷವೂ ಇರಲಿಲ್ಲ.

(2) ಓದಿನಿಂದ ಪೂರ್ತಿ ಪ್ರಯೋಜನ ಪಡೆಯಬೇಕಾದರೆ ಅದು ಗೊತ್ತಾದ ಕ್ರಮದಲ್ಲಿ ಅನುಸ್ಯೂತವಾಗಿ ಅಲ್ಲಲ್ಲಿ ಬಿರುಕು ಬಿಡದೆ ನಡೆಯಬೇಕು.

ನಮ್ಮ ದೇಶಾಭಿಮಾನದ ಅವಸರದಲ್ಲಿ, ಅದರಲ್ಲೂ ಕಾಂಗ್ರೆಸ್ ನಾಯಕರ ಧೋರಣೆಯಲ್ಲಿ ಬ್ರಿಟಿಷ್ ಸರಕಾರ ಈ ದೇಶದಲ್ಲಿ ಪ್ರಚಾರಮಾಡಿದ ವಿದ್ಯಾ ಪದ್ಧತಿಯಲ್ಲಿ ದೋಷಾರೋಪಣೆ ಮಾಡುವುದು ಸಾಮಾನ್ಯವಾಗಿತ್ತು. ಈಗಲೂ ಈ ದೋಷಾರೋಪಣೆಯ ಜಾಡು ಉಳಿದಿದೆ. "ಬ್ರಿಟಿಷರಿಗೆ ಬೇಕಾಗಿದ್ದದ್ದು ಕಾರಕೂನ ಸಿಬ್ಬಂದಿ. ಅವರು ಸ್ಥಾಪಿಸಿದ ವಿಶ್ವವಿದ್ಯಾನಿಲಯಗಳೂ ಕಾಲೇಜು ಗಳೂ ಕಾರಕೂನ ತಯಾರಿಕೆಯ ಕಾರ್ಖಾನೆಗಳು. ಗುಮಾಸ್ತರಿಗಿಂತ ಮೇಲ್ಮಟ್ಟದ ವಿದ್ಯಾಪ್ರಚಾರಕ್ಕೆ ಬ್ರಿಟಿಷರು ಮನಸ್ಸಿಲ್ಲದವರಾಗಿದ್ದರು. ಹೆಚ್ಚು ವಿದ್ಯೆಯಿಂದ ಇಂಡಿಯದ ಜನ ಪ್ರಗತಿಶೀಲರಾಗಿ ಎಲ್ಲಿ ತಮಗೆ ಸರಿಸಮಾನಸ್ಥ ರಾದಾರೋ ಎಂಬ ಭೀತಿ ಬ್ರಿಟಿಷ್ ಜನಕ್ಕೆ ಇತ್ತು. ಆದದ್ದರಿಂದ ಅವರ ವಿದ್ಯಾಭ್ಯಾಸದಲ್ಲಿ ಅನೇಕ ಲೋಪಗಳು ನಡೆದುಕೊಂಡು ಬಂದವು". — ಹೀಗೆಂಬುದು ಕೆಲವು ಕಾಲ ನಮ್ಮ ರಾಜಕೀಯಸ್ಥರ ದೊಡ್ಡ ಆಕ್ಷೇಪಣೆ ಯಾಗಿತ್ತು. ಬ್ರಿಟಿಷರು ನಮ್ಮ ದೇಶ ಭಾಷೆಗಳನ್ನು ತುಳಿದು ಹಾಕಿದರು. ಆದದ್ದರಿಂದ ನಮ್ಮ ಭಾಷಣಕರ್ತರಿಗೆ ಇಂಗ್ಲಿಷ್ ಹೊರತು ತಮ್ಮ ಸ್ವಭಾಷೆ

ಯಲ್ಲಿ ಉಪನ್ಯಾಸ ಮಾಡುವುದು ಅಸಾಧ್ಯವಾಯಿತಂತೆ. ಹೀಗೆ ನನ್ನ ರಾಜಕೀಯ ಸ್ನೇಹಿತರು ವಾದ ಮಾಡಿದ್ದನ್ನು ನಾನು ನಾಲ್ಕಾರು ಸಲ ಕೇಳಿದ್ದೇನೆ. ಈ ವಾದವನ್ನು ನಾನು ಎಷ್ಟು ಮಾತ್ರವೂ ಒಪ್ಪಲಾರೆ." "ಇಂದಿನ ವಿದ್ಯಾಭ್ಯಾಸ ತುಂಡು ತುಣುಕುಗಳ ರಾಶಿಯಾಗಿದೆ."

ಗೃಹಕೃತ್ಯ ; ಕೊನೆಯ ದಿನಗಳು

ರಾಜಕಟಾಕ್ಷಮನುಂ ಜನ –।
ತಾಜಲ್ಪ ಶ್ಲಾಘನೆಗಳನುಂ ಗಣಿಸದೆ ನಾಂ ॥
ಭೂಜನನಿಯನೊಮ್ಮನದಿಂ ।
ಪೂಜಿಸುವೆಂ ಸತ್ಯ ಧರ್ಮ ಸಂಯಮವಿಧಿಯಿಂ ॥

—ಎಂಬ ದೇಶಭಕ್ತ ಪ್ರತಿಜ್ಞೆಯನ್ನು ತಾವಾಗಿ ಸ್ವೀಕರಿಸಿಕೊಂಡು

ತನುಸೌಖ್ಯಮೆ ಪಿರಿದೆನ್ನದೆ ।
ಧನದಾಸ್ಯವ ನೀಗಿ ಶುದ್ಧಕರಣತ್ರಯದಿಂ ॥
ಘನಪಥದಿ ನಡೆದ ಸಂತರ –।
ನನುವರ್ತಿಸಿ ತೃಪ್ತಿಪಡೆದು ಧರ್ಮದಿ ನಲಿವೆಂ ॥

—ಎಂದು ಜೀವನವನ್ನು ನಡಸಿದರು ಡಿ ವಿ ಜಿ.

ಆದರೆ ಮನೆಯಲ್ಲಿ ಮಕ್ಕಳು, ಮರಿ, ಮಾತಾಪಿತೃಗಳು, ಸೋದರರು, ಅವರ ಮದುವೆ ಮುಂಜಿಗಳು, ಓದು, ಉದ್ಯೋಗ, ಇವಕ್ಕೆಲ್ಲ ಏನು ಗತಿ ? ಇವುಗಳ ಯೋಚನೆ ಅವರಿಗೂ ತಪ್ಪಲಿಲ್ಲ. ಹಣಕ್ಕಾಗಿ ಹಾತೊರೆಯದಿದ್ದರೂ ಹಣದ ಚಿಂತೆ ಅವರನ್ನು ಸದಾ ಕಾಡುತ್ತಿತ್ತು ಎಂಬುದು ಹಿಂದಿನ ಚರಿತ್ರೆಯಲ್ಲಿ ಸೂಚಿತವಾಗಿದೆ. ವೃತ್ತಪತ್ರಿಕೋದ್ಯೋಗ ಅವರಿಗೆ ತಂದದ್ದು ನಷ್ಟವನ್ನೇ. ದಿವಾನ್ ರಂಗಾಚಾರ್ಲು, ಗೋಖಲೆ, ಜೀವನ ಸೌಂದರ್ಯ ಮತ್ತು ಸಾಹಿತ್ಯ ಮುಂತಾದ ಗ್ರಂಥಗಳು ಪಠ್ಯಪುಸ್ತಕಗಳಾದರೂ ಅದರಿಂದ ಡಿ ವಿ ಜಿ ಯವರಿಗೆ ಆದಾಯವೇನೂ ಬರಲಿಲ್ಲ. ಪಂಡಿತ ಪರೀಕ್ಷೆಗೆ ಪುಸ್ತಕಗಳನ್ನು ಇಟ್ಟಾಗ ಪಂಡಿತರು ಪುಸ್ತಕಗಳನ್ನು ಕೊಂಡುಕೊಳ್ಳದೆ ಬರೆದುಕೊಂಡುಬಿಟ್ಟರಂತೆ. ಅವರಿಗೆ ಜೀವನೋಪಾಯವಾಗಿದ್ದದ್ದು 'ಕರ್ಣಾಟಕ ಪ್ರಕಟನಾಲಯ' ಪುಸ್ತಕದ ಅಂಗಡಿ. ಅಲ್ಲಿ ಪುಸ್ತಕಗಳನ್ನು ತರಿಸಿ ಮಾರಾಟ ಮಾಡುತ್ತಿದ್ದರು. ಅವರು ಪುಸ್ತಕಪ್ರಿಯರ ಅನುಕೂಲಕ್ಕಾಗಿ ತಮ್ಮಲ್ಲಿ ಸಿಗುವ ಪುಸ್ತಕಗಳ ಸೊಗಸಾದ ಪಟ್ಟಿಯನ್ನು ತಯಾರಿಸಿದ್ದಾರೆ. ಮಹಾಜನರ ಅನುಕೂಲಕ್ಕಾಗಿ ಪುಸ್ತಕಗಳನ್ನು ಕುರಿತ ಪುಟ್ಟ ಪತ್ರಿಕೆಯೊಂದನ್ನು ಪ್ರಕಟಿಸುವ ಯೋಚನೆಯೂ ಇತ್ತು. ವಿದೇಶಗಳಿಂದ ಪುಸ್ತಕಗಳನ್ನು ತರಿಸಿ ಮಾರುತ್ತಿದ್ದರು. ಪೆಲಿಕನ್

ಪೆಂಗ್ವಿನ್ ಪುಸ್ತಕಗಳನ್ನು ತರಿಸಿ ಮಾರಾಟ ಮಾಡಿದವರಲ್ಲಿ ಅವರೇ ಮೊದ ಮೊದಲಿಗರು ಎಂದು ವೆಂಕಟಾಚಲಪತಿಯವರು ಜ್ಞಾಪಿಸಿಕೊಳ್ಳುತ್ತಾರೆ.

ತಮ್ಮಿಂದಲೇ ಪುಸ್ತಕ ಪ್ರಕಟಣೆಯಾಗಬೇಕೆಂಬ ಇಚ್ಛೆಯಿಂದ ಮತ್ತು ಜೀವನೋಪಾಯಕ್ಕೆ ಇನ್ನೂ ಅನುಕೂಲವಾಗುವುದೆಂಬ ದೃಷ್ಟಿಯಿಂದ ಪ್ರೆಸ್ಸೊಂದನ್ನು ಕೊಂಡುಕೊಳ್ಳುವ ಪ್ರಯತ್ನ ಮಾಡಿದರು. ಇದಕ್ಕಾಗಿ ಅವರಿಗೆ ಬೇಕಾಗಿದ್ದದ್ದು ಆರು ಸಾವಿರ ರೂಪಾಯಿಗಳು. ತಾವು ಯಾರು ಯಾರನ್ನು ಪೂಜ್ಯಸ್ಥಾನಗಳಲ್ಲಿಟ್ಟಿದ್ದರೋ ಗೌರವಿಸುತ್ತಿದ್ದರೋ ಯಾರು ಯಾರು ಅನೇಕ ಬಾರಿ ಸಹಾಯ ಮಾಡುವ ಮನೋಭಾವವನ್ನು ತೋರಿಸಿದ್ದರೋ ಅವರಲ್ಲಿ ಈ ಹಣಕ್ಕಾಗಿ ಬೇಡಿದರು. ಆದರೆ ಸಹಾಯ ಬರಲಿಲ್ಲ. ಕೊನೆಗೆ ಸರಕಾರದಿಂದ ಆ ಹಣವನ್ನು ಶೇಕಡ 6 ರ ಬಡ್ಡಿಯ ಮೇಲೆ ಸಾಲವಾಗಿ ತೆಗೆದು ಕೊಂಡು ಮುದ್ರಣಾಲಯವನ್ನು ಕೊಂಡುಕೊಂಡರು, ಜೂನ್ 1937 ರಲ್ಲಿ.

ಅಲ್ಲಿ ಪುಸ್ತಕ ಮುದ್ರಣಕ್ಕಾಗಿ, ಪ್ರಕಟನೆಗಾಗಿ ವಿಶ್ವವಿದ್ಯಾನಿಲಯ ವನ್ನು ಸರಕಾರವನ್ನು ಖಾಸಗಿ ಪ್ರಮುಖರನ್ನು ಕೇಳಿಕೊಂಡು ಪ್ರಕಟನಾಲಯ ವನ್ನು ಮುಂದುವರಿಸಿದರು. ಅನೇಕ ಪುಸ್ತಕಗಳಿಗೂ ಅವರು ಪ್ರಕಾಶಕ ರಾದರು.

ಸಂಸಾರ ಬೆಳೆದಂತೆ ಮದುವೆ ಮುಂಜಿಗಳು ಮನೆಯಲ್ಲಿ ನಡೆದವು. ಎರಡನೆಯ ತಮ್ಮಂದಿರಾದ ಡಿ. ವಿ. ರಾಮರಾಯರ ವಿವಾಹ 24-4-36 ರಲ್ಲಿ ನಡೆಯಿತು. ಮೊದಲನೆಯ ಮಗಳು ಮೀನಾಕ್ಷಿ (ತಂಗಮ್ಮ) ಅವರ ಮದುವೆ 19-4-1933 ರಲ್ಲಿ ಇಂಜಿನಿಯರ್ ಆದ ಎಸ್. ಕೃಷ್ಣಸ್ವಾಮಿ ಯವರೊಂದಿಗೆ ನಡೆಯಿತು. ಎರಡನೆಯ ಮಗಳು ಇಂದಿರಮ್ಮ (ತಾಯಿ) ಅವರ ಮದುವೆ 20-6-45 ರಲ್ಲಿ ಅಕೌಂಟ್ಸ್ ಇಲಾಖೆಯಲ್ಲಿದ್ದ ಸತ್ಯ ನಾರಾಯಣ ಅವರೊಡನೆ ನಡೆಯಿತು. ಮಗ ಬಿ. ಜಿ. ಲಕ್ಷ್ಮೀನಾರಾಯಣ ಸ್ವಾಮಿ ಅವರ ಮದುವೆ ವಸಂತ ಅವರೊಡನೆ ನಡೆದದ್ದು 28-10-53 ರಲ್ಲಿ.

ತಮ್ಮ ಬಾಂಧವರಿಗೆ ಅವರು ಮಾಡಿದ ಸಹಾಯವನ್ನು ಕುರಿತು ಇಲ್ಲಿ ಹೇಳುವುದು ಅಪ್ರಸ್ತುತವಾಗಬಹುದು; ಅದು ಅವರವರಿಗೆ ಸೇರಿದ ವಿಷಯ ವಾದದ್ದರಿಂದ. ಅವರ ಮಕ್ಕಳೂ ಸುಖ ದುಃಖವನ್ನು ಕಂಡರು. ಜೀವನೋ ಪಾಯಕ್ಕೆ ಕಷ್ಟವಿಲ್ಲದೆ ತಕ್ಕಮಟ್ಟಿಗೆ ಅನುಕೂಲದಲ್ಲಿದ್ದಾರೆ.

ಡಿ ವಿ ಜಿ ಯವರ ಮಗ ಬಿ. ಜಿ. ಎಲ್. ಸ್ವಾಮಿಯವರನ್ನು ಕುರಿತು ಬಿ. ಪಿ. ರಾಧಾಕೃಷ್ಣ ಅವರು ಸೊಗಸಾದ ಜೀವನ ಚರಿತ್ರೆಯನ್ನು ಬರೆದಿದ್ದಾರೆ.

ತಮ್ಮ ಮಗನ ವಿಷಯದಲ್ಲೂ ಹೆಣ್ಣು ಮಕ್ಕಳ ವಿಷಯದಲ್ಲೂ ಡಿ ವಿ ಜಿ ಯವರಿಗೆ ನಿಜವಾದ ಹೆಮ್ಮೆ. ಮದರಾಸಿನಲ್ಲಿ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಪ್ರಿನ್ಸಿಪಾಲರಾಗಿ ಕೆಲಸ ಮಾಡಿದರು ಸ್ವಾಮಿ. ಬೆಂಗಳೂರಿಗೆ ಬಂದಾಗ ತಂದೆ ಮಕ್ಕಳ ನಡುವೆ ಸಂಗೀತ ಸಾಹಿತ್ಯಗಳನ್ನು ಕುರಿತ ಚರ್ಚೆಗಳೂ ವಿಜ್ಞಾನವನ್ನು ಕುರಿತ ಚರ್ಚೆಗಳೂ ನಡೆಯುತ್ತಿದ್ದುವು.

ಡಿ ವಿ ಜಿ ಯವರ ಮಾತಾಪಿತೃಗಳು ಅವರೊಡನಿರಲು ಬೆಂಗಳೂರಿಗೆ ಬಂದುದನ್ನು ಕುರಿತು ಹಿಂದೆಯೇ ಹೇಳಿದೆ. ಮುಳಬಾಗಲಿನಲ್ಲಿ ಅವರಿದ್ದ ಮನೆಯನ್ನು ಸರಕಾರದವರಿಗೆ 1931 ರಲ್ಲಿ ಮಾರಿಬಿಟ್ಟರು. ತಾತನನ್ನು ಕುರಿತು ಬಿ. ಜಿ. ಎಲ್. ಸ್ವಾಮಿ, "ಪಂಚ ಕಳಸ ಗೋಪುರ"ದಲ್ಲಿ ಬರೆದಿದ್ದಾರೆ. ಡಿ ವಿ ಜಿ ಯವರ ತಂದೆ 14–9–1936 ರಂದೂ ತಾಯಿ 1949ರ ಗೋಕುಲಾಷ್ಟಮಿಯಂದೂ ಕಾಲಾಧೀನರಾದರು. 30–4–1944 ರಲ್ಲಿ ಲಕ್ಷ್ಮೀದೇವಮ್ಮ ದೈವಾಧೀನರಾದರು.

ತಮ್ಮ ಮತ್ತು ತಮ್ಮಂದಿರ ಮಕ್ಕಳ, ಮೊಮ್ಮಕ್ಕಳ ಬೆಳವಣಿಗೆಯಲ್ಲಿ ಓದಿನಲ್ಲಿ ಉದ್ಯೋಗದ ವಿಷಯದಲ್ಲಿ ತುಂಬ ಆಸ್ಥೆ ತೋರಿಸುತ್ತಿದ್ದರು ಡಿ ವಿ ಜಿ. ಉದಾಹರಣೆಗೆ 16–9–65 ರ ಡೈರಿಯಲ್ಲಿಯ ಟಿಪ್ಪಣಿ: "Red letter day for Chandru and me. He rides his own motorbike."

ತಮ್ಮ ಸ್ವಜನದ (ಬೃಹಚ್ಚರಣ) ಪುಣ್ಯ ಕ್ಷೇತ್ರವಾದ ಕಿತ್ತಗಾನಹಳ್ಳಿಯ ಶ್ರೀನಾಗೇಶ್ವರ ಕ್ಷೇತ್ರದ ವಿಷಯದಲ್ಲಿ ಬಹು ಆಸಕ್ತಿಯನ್ನು ತೋರಿಸಿದವರು ಅವರು. ಅಲ್ಲಿ ಶ್ರೀನಿವಾಸ ದೇವರ ಪ್ರತಿಷ್ಠೆಗಾಗಿ "ಡಿ ವಿ ಜಿ ಯವರು ಹೇಗೆ ನನ್ನ ಸಹೋದರರಂತೆ ಈ ಕ್ಷೇತ್ರಸೇವೆಯಲ್ಲಿ ನನ್ನೊಡನೆ ಏಕೀಭವಿಸಿ ಕೆಲಸ ಮಾಡಿದ್ದಾರೆಂದು" ಕೆ. ಪದ್ಮನಾಭಯ್ಯನವರು ಜ್ಞಾಪಿಸಿಕೊಂಡಿದ್ದಾರೆ.

ಮದುವೆ ಮುಂಜಿಗಳಿಗಾಗಿ ಸಾಲ ಮಾಡಬೇಕಾಯಿತು. ಕೊಂಡುಕೊಂಡಿದ್ದ ಸೈಟುಗಳನ್ನು ಮಾರಬೇಕಾಯಿತು. 1936 ರ ಹೊತ್ತಿಗೆ ಅವರು ನಾಗಸಂದ್ರ ರಸ್ತೆಯಲ್ಲಿದ್ದ ಮನೆಯನ್ನು ಕೊಂಡುಕೊಂಡಿದ್ದರು. ಅದನ್ನೂ ಮೂವತ್ತು ಸಾವಿರ ರೂಪಾಯಿಗಳಿಗೆ ಅಡವಿಟ್ಟಿದ್ದರು. 1963 ರಲ್ಲಿ ಹಣ ಕೊಟ್ಟ ಸ್ನೇಹಿತರಿಗೆ ಬರೆದ ಪತ್ರದಲ್ಲಿ "ಈ ಪತ್ರವನ್ನು ದಾಖಲೆಯ ಬಗ್ಗೆ ಬರೆಯುತ್ತಿದ್ದೇನೆ. ಇದು ಹಣದ ಲೇವಾದೇವಿಗೆ ಸಂಬಂಧಪಟ್ಟದ್ದು. ನಿಮ್ಮ ನಮ್ಮ ಸ್ನೇಹ ಎಷ್ಟಿದ್ದರೂ ಲೆಕ್ಕಾಚಾರದ ವಿಚಾರ ನಿಷ್ಕರ್ಷೆಯಾಗಿರತಕ್ಕದ್ದು ಉಚಿತವೆಂದು ಇದನ್ನು ಬರೆಯುತ್ತಿದ್ದೇನೆ," ಎಂದು ಹೇಳಿ ಸಾಲದ ವಿವರ

ವನ್ನು ನವೂದಿಸಿ, "ನನ್ನ ಇಳಿ ದಿವಸದಲ್ಲಿ ಋಣಭಾರವನ್ನಿರಿಸಿಕೊಳ್ಳ ಬಾರದು. ನನಗೆ ಈಗ ಬೇಕಾದದ್ದು ನೆಮ್ಮದಿ, ನಿಶ್ಚಿಂತೆ, ಶಾಂತಿ. ಅದನ್ನು ದೊರಕಿಸಲು ನೀವೂ ಸಹಕರಿಸಬೇಕು" ಎಂದು ಬರೆದಿದ್ದಾರೆ.

ಋಣವ ತೀರಿಸಬೇಕು, ಋಣವ ತೀರಿಸಬೇಕು ।
ಋಣವ ತೀರಿಸುತ ಜಗದಾದಿಸತ್ತ್ವವನು ॥
ಜನದಿ ಕಾಣುತ್ತದರೊಳ್ ಒಂದುಗೂಡಲುಬೇಕು ।
ಮನೆಯೊಳಗೆ ಮಠ ನಿನಗೆ—ಮಂಕುತಿಮ್ಮ ॥

ಅದ್ವೈತ ತತ್ತ್ವದಲ್ಲಿ ನಂಬಿದವರಾದರೂ "ಋಣವ ತೀರಿಸಬೇಕು" ಎಂಬ ಚಿಂತೆ ಅವರನ್ನು ಕಾಡುತ್ತಿತ್ತು. ಅವರಿಗಿದ್ದ ಸ್ವಲ್ಪ ಭೂಮಿಯನ್ನು (ಸ್ನೇಹಿತರಾದ ಸುಬ್ಬನರಸಿಂಹಯ್ಯ ಮತ್ತು ಅಡ್ವೋಕೇಟ್ ಕೆ. ಎಸ್. ವೆಂಕಟಸುಬ್ಬಯ್ಯನವರ ನೆರವಿನಿಂದ) ಮಾರಿ, ಇದ್ದ ಸಾಲವನ್ನು ತೀರಿಸಿ ಬಿಟ್ಟರು.

'ಪ್ರಜಾಮತ'ದಲ್ಲಿ ಅವರ 'ಭಗವದ್ಗೀತಾ ತಾತ್ಪರ್ಯ'ದ ಲೇಖನಗಳು, ಮತ್ತು 'ಜ್ಞಾಪಕ ಚಿತ್ರಶಾಲೆ'ಯ ಲೇಖನಗಳು ಇತರ ಪತ್ರಿಕೆಗಳಲ್ಲಿ ಬರ ಲಾರಂಭಿಸಿದ ಮೇಲೆ ಹಣದ ಮುಗ್ಗಟ್ಟು ಬಹುಭಾಗ ಕಡಿಮೆಯಾಯಿತು. ಈ ಲೇಖನಗಳನ್ನು ಬರೆದುಕೊಂಡು, ಅದನ್ನು ಪ್ರೆಸ್ಸಿಗೆ ಸಿದ್ಧಪಡಿಸಿ, ಪ್ರೂಫ್ ಗಳನ್ನು ತಿದ್ದಿ, ಬೇಕಾದ ಚಿತ್ರಗಳನ್ನು ಸಂಪಾದಿಸಿ ಎಲ್ಲ ವಿಧದಲ್ಲಿಯೂ ಶ್ರದ್ಧೆಯಿಂದ ಪ್ರೀತಿಯಿಂದ ಕೆಲಸಮಾಡಿದವರು ಎಸ್. ಆರ್. ರಾಮಸ್ವಾಮಿ. ರಾಮಸ್ವಾಮಿಯ ಕೆಲಸವೆಂದರೆ ಅಚ್ಚುಕಟ್ಟು ಎಂದು ಮೆಚ್ಚಿಕೊಂಡಿದ್ದರು ಡಿ ವಿ ಜಿ.

ಹೀಗೆ ಹಣದ ಮುಗ್ಗಟ್ಟು ಇದ್ದಾಗಲೇ ದೇವರಾಜ ಅರಸ್ ಮುಖ್ಯ ಮಂತ್ರಿಗಳಾಗಿದ್ದ ಕರ್ನಾಟಕ ಸರಕಾರದವರು ಡಿ ವಿ ಜಿ ಯವರಿಗೆ ಮಾಸಾಶನ ಕೊಡುವ ನಿರ್ಧಾರವನ್ನು ಕೈಗೊಂಡದ್ದು.

ರಾಗಿ ಮುದ್ದೆಯು ನುಂಗಿ ನಲಿದು ಬಾಳ್ವಾತಂಗೆ ।
ಕಾಗೆ ಕದ್ದುಣುವ ಭಕ್ಷ್ಯದ ಕಂಡು ಕರುಬೆ ? ॥
ನೀಗುವುದು ಹಸಿವನ್ ಉಣಿಸೆಂತಪ್ಪುದಾದೊಡಂ ।
ಬಾಗಿಸದಿರಾತ್ಮವನು—ಮಂಕುತಿಮ್ಮ ॥

—ಎಂದು ನಿರ್ಧಾರ ಮಾಡಿಕೊಂಡಿದ್ದ ಡಿ ವಿ ಜಿ, ವೃತ್ತಪತ್ರಿಕೆಗಳಲ್ಲಿ

ಬಂದ ಸುದ್ದಿಯನ್ನು ನೋಡಿ, ಮರುಕ್ಷಣವೇ, ಆ ಮಾಶಾಸನ ತಮಗೆ ಬೇಕಾಗಿಲ್ಲವೆಂದೂ, ಸಾರ್ವಜನಿಕ ಸೇವೆ ಪ್ರತಿಫಲವನ್ನಪೇಕ್ಷಿಸಬಾರದೆಂದೂ ಸರಕಾರ ಅಂಥ ವೆಚ್ಚಗಳಿಗೆ ಹಣವನ್ನು ಉಪಯೋಗಿಸತಕ್ಕದಲ್ಲವೆಂದೂ ಬರೆದುಬಿಟ್ಟರು. "ಇಷ್ಟು ವರ್ಷ ಅಂಬಲಿಯೋ ಗಂಜಿಯೋ ಊಟಮಾಡಿ ಕೊಂಡು ಬದುಕಿದ್ದೇನೆ. ಈಗ ಇವರ ಭಿಕ್ಷೆಗೆ ಕೈ ಒಡ್ಡಬೇಕೆ ?" ಎಂದು ಬಿಟ್ಟರು.

ಪರಿಷತ್ತಿನ ಉಪಾಧ್ಯಕ್ಷ ಪದವಿಯನ್ನು ಬಿಟ್ಟಮೇಲೂ ಅಲ್ಲಿಯ ಅನೇಕ ಸಮಾರಂಭಗಳಲ್ಲಿ ಪಾಲುಗೊಳ್ಳುತ್ತಿದ್ದರು ಡಿ ವಿ ಜಿ.

ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು ಉಪಾಧ್ಯಕ್ಷರಾದಾಗ "ಉಳಿದ ಪ್ರಾಂತಗಳು ಮಾಡಬಹುದಾದ ಕೆಲಸಕ್ಕೆ ಸೂಚನೆ ಕೊಡುವಂತೆ ಮೈಸೂರು ಪ್ರಾಂತದ ನಮ್ಮ ಸಮಿತಿ ಒಂದು ವರ್ಷದ ದಿನ ಪ್ರಾಂತದ ಹತ್ತಾರು ಭಾಗ ಗಳಲ್ಲಿ ಹತ್ತಾರು ಕಾರ್ಯಕ್ರಮಗಳನ್ನು ಏರ್ಪಡಿಸಿತು. ಆ ವರ್ಷ ಪರಿಷತ್ತನ್ನು ಕುರಿತು ಪ್ರಾಂತದ ಒಳಭಾಗದಲ್ಲಿ ಆದಷ್ಟು ಪ್ರಚಾರ ಹಿಂದೆ ಇಪ್ಪತ್ತೆಂಟು ವರ್ಷಗಳಲ್ಲಿ ಎಂದೂ ಆಗಿರಲಿಲ್ಲ. ಇದಕ್ಕೆ ಮುಖ್ಯ ಕಾರಣರಾದವರು ಶ್ರೀ ನಿಟ್ಟೂರು ಶ್ರೀನಿವಾಸರಾವ್" ಎಂದಿದ್ದಾರೆ ಮಾಸ್ತಿಯವರು. ಆ ಕಾರ್ಯ ಕ್ರಮದಲ್ಲಿ ಪಾಲುಗೊಂಡಿದ್ದರು ಡಿ ವಿ ಜಿ.

ಪುನಃ 1948 ರಲ್ಲಿ ನಿಟ್ಟೂರು ಶ್ರೀನಿವಾಸರಾಯರು ಮತ್ತು ಸ್ನೇಹಿತರ ಜೊತೆ ಧಾರವಾಡಕ್ಕೆ 'ನಿಟ್ಟೂರು ಸರ್ಕಸ್'ನ ಭಾಗವಾಗಿ ಪ್ರವಾಸ ಕೈ ಗೊಂಡಿದ್ದರು.

ದೇಶ ಇಬ್ಭಾಗವಾದಾಗ ಪಂಜಾಬಿನಿಂದ ಹೊರಟ ನಿರಾಶ್ರಿತರು ಬೆಂಗ ಳೂರಿಗೂ ಬಂದರು. ಅವರ ಸಹಾಯಾರ್ಥವಾಗಿ ಮಲ್ಲೇಶ್ವರದಲ್ಲಿ ನಡೆದ ಸಮಾರಂಭವೊಂದಕ್ಕೆ (ನವೆಂಬರ್ 1947) ಅಧ್ಯಕ್ಷತೆ ವಹಿಸಿದ್ದ ಡಿ ವಿ ಜಿ ಪಂಜಾಬು ನಿರಾಶ್ರಿತರಿಗೆ ದೇಶದ ಮೂಲೆ ಮೂಲೆಗಳಿಂದಲೂ ಸಹಾಯ ಬರ ಬೇಕೆಂದು ಬಿನ್ನಹ ಮಾಡಿಕೊಂಡರು.

ಜನವರಿ 1948 ರಲ್ಲಿ ಧಾರವಾಡದ ಕರ್ನಾಟಕ ಸಂಘದ ವಾರ್ಷಿಕೋ ತ್ಸವಕ್ಕೆ ಹೋಗಿದ್ದರು. ಅವರನ್ನು ಕುರಿತು ರಂಗನಾಥ ದಿವಾಕರರು "ಅವರು ಸಾಹಿತಿಗಳೂ ಸ್ಥಿತ ಪ್ರಜ್ಞರೂ ಆದವರು. ಅಲ್ಲದೆ ಶಾಂತ ಧೀರರಾದ ಹಲವೇ ವ್ಯಕ್ತಿಗಳಲ್ಲಿ ಅವರೂ ಒಬ್ಬರು. ಅವರು ಅಧಿಕಾರವಾಣಿಯಿಂದ ಇಂದಿನ ಮುಖ್ಯ ಸಮಸ್ಯೆಗಳ ಬಗ್ಗೆ ಹೇಳಬಲ್ಲರು" ಎಂದರು. ಅಧ್ಯಕ್ಷ ಭಾಷಣ

ಮಾಡುತ್ತ ಡಿ ವಿ ಜಿ: "ಕರ್ಣಾಟಕ ಪ್ರತ್ಯೇಕ ಪ್ರಾಂತವಾಗುವುದು ಆವಶ್ಯಕ. ಮೊದಲು ಆಗಬೇಕಾದುದು ಕರ್ಣಾಟಕ ಪ್ರಾಂತಗಳ ಏಕೀಕರಣ. ಅವುಗಳಲ್ಲಿ ಮುಖ್ಯವಾದ ತೊಡಕು ಎಂದರೆ ಮೈಸೂರು. ಆದರೆ ಐಕಮತ್ಯಕ್ಕೆ ಅಡ್ಡಿಯೇಕಾಗಬೇಕು ? ಮಾನವನಿಗೆ ಎರಡು ಉದ್ದೇಶಗಳು ಇರುವುವು. ಜೀವನಾನುಕೂಲತೆ—ಆರ್ಥಿಕ,ಮೊದಲನೆಯದು. ಮತ್ತು ಆತ್ಮೋತ್ಕರ್ಷಣೆ–ಸಾಂಸ್ಕೃತಿಕ, ಎರಡನೆಯದು. ಐಹಿಕ ಆರ್ಥಿಕದೃಷ್ಟಿ, ಮತ್ತು ಆತ್ಮ ಸಂಸ್ಕಾರದ ದೃಷ್ಟಿ. ಆತ್ಮೋನ್ನತಿಗೋಸ್ಕರ ಒಂದಾಗಬೇಕು. ಮೈಸೂರು ಸಂಸ್ಥಾನ ಇದ್ದರೆ ಇದಕ್ಕೆಲ್ಲ ಅಡ್ಡಗಟ್ಟದಂತಾಗುವುದೇ ? ಸಂದರ್ಭ ಇಷ್ಟವಾದರೆ ಆಗಲಿ. ಆದರೆ ಕೊಂಚಕಾಲ ಮೈಸೂರು ಹೊರಗೆ ಉಳಿದರೆ ಉಳಿಯಲಿ. ಆದರೂ ಆರ್ಥಿಕ ಮತ್ತು ಸಾಂಸ್ಕೃತಿಕ ದೃಷ್ಟಿಯಿಂದ ಮೈಸೂರು ಮತ್ತು ಕರ್ನಾಟಕ ಒಂದೇ ಆಗುವುದರಲ್ಲಿ ಸಂದೇಹವಿಲ್ಲ" ಎಂದರು.

12-7-1948 ರಂದು ಮಲ್ಪೆ ಬಂದರ ಸಮಿತಿ ಬೆಂಗಳೂರಿಗೆ ಬಂದಿದ್ದಾಗ ನಡೆದ ಸಭೆಗೆ ಅಧ್ಯಕ್ಷರಾಗಿದ್ದ ಡಿ ವಿ ಜಿ 'ಬಂದರಿನ ಪ್ರಶ್ನೆ ಬರಿಯ ಪ್ರಾಂತೀಯವಲ್ಲ, ರಾಷ್ಟ್ರದ್ದೂ ಆಗಿದೆ. ನಾನೇನಾದರೂ ಬಂದರಿನ ಸಮಿತಿಯಲ್ಲಿದ್ದಿದ್ದರೆ ಮಲ್ಪೆಯ ಪರ ವಾದವನ್ನು ಹೇಗೆ ಅಲಕ್ಷಿಸಲು ಸಾಧ್ಯವಾಗುತ್ತಿತ್ತೋ ಕಾಣೆ. ಮಲ್ಪೆ ಉತ್ಕೃಷ್ಟವಾದ ಬಂದರಾಗುವುದರಲ್ಲಿ ಸಂಶಯವಿಲ್ಲ' ಎಂದರು.

ಮಾಸ್ತಿಯವರ 'ಚೆನ್ನಬಸವ ನಾಯಕ' ಗ್ರಂಥವನ್ನು ಭಾರತದ ಇತರ ಭಾಷೆಗಳಿಗೆ ಅನುವಾದ ಮಾಡಿಸಲು ಒಪ್ಪಿಕೊಂಡಿದ್ದ ಸಾಹಿತ್ಯ ಅಕಾಡಮಿ ತನ್ನ ನಿರ್ಧಾರವನ್ನು ಕೈಬಿಟ್ಟಾಗ ಡಿ ವಿ ಜಿ ಅದನ್ನು ಕುರಿತು ಒಂದು ಹೇಳಿಕೆ ನೀಡಿದರು. ಯಾವುದೋ ಒಂದು ಪಂಗಡಕ್ಕೆ ಇದರಿಂದ ಅಸಮಾಧಾನವಾಯಿತೆಂದು, ಯಾವ ವಿಚಾರಣೆಯೂ ಇಲ್ಲದೆ, ಕೇಂದ್ರ ಅಕಾಡಮಿ ತನ್ನ ನಿರ್ಧಾರವನ್ನು ಬದಲಾಯಿಸಿದ್ದು, ಸಾಹಿತ್ಯ ಲೇಖಕನ ಸ್ವಾತಂತ್ರ್ಯಕ್ಕೇ ಧಕ್ಕೆ ತಂದಿದೆಯೆಂದು ಹೇಳಿದರು (15-2-1959): "In the present case, the Government did not interfere directly with the writer's liberty, but it has approved of the rising of a wall around the light of his vision and in this it has proclaimed its readiness to discountenance certain altogether allowable and even desirable forms of imaginative effort in literature. Is

this doing respect to republican freedom?"

"Here is a signal for lovers of literature all over India to take note of. A screen of gold is as opaque, and can cast a shadow as dark as the iron curtain."

ಇದೇ ಸಮಯದಲ್ಲಿ ಹೇಳಲೇಬೇಕಾದ ಸಂಗತಿಯೊಂದಿದೆ. ಡಿ ವಿ ಜಿ ಕಾಲವಶರಾದಾಗ 'ಪ್ರಜಾವಾಣಿ'ಯ ಸಂಪಾದಕರು ತಮ್ಮ 'ಛೂಬಾಣ'ದಲ್ಲಿ ಇದನ್ನು ನೆನೆಸಿಕೊಂಡಿದ್ದಾರೆ :

'ಅಂತಃಪುರಗೀತೆ' ಮತ್ತು 'ಉಮರನ ಒಸಗೆ'ಗಳಲ್ಲಿ ಡಿ ವಿ ಜಿ ರಸವತ್ತಾದ ಪ್ರಣಯ ಸನ್ನಿವೇಶಗಳನ್ನು ಚಿತ್ರಿಸಿದರಾದರೂ ಆಧುನಿಕ ಸಾಹಿತ್ಯ ದೃಷ್ಟಿಯಲ್ಲಿ ಮಾನವ ಸಹಜವಾದ ರೀತಿಯಲ್ಲಿ ಕವಿಯೊಬ್ಬ ಪ್ರಣಯ ಸನ್ನಿವೇಶಗಳನ್ನು ಚಿತ್ರಿಸಿದಾಗ ಒಂದು ರೀತಿಯ ಮಡಿವಂತಿಕೆಯಿಂದ ಮೂದಲಿಸುವ ಸ್ವಭಾವ ಹೊಂದಿದ್ದವರು. ಹಿಂದೊಮ್ಮೆ 'ಪ್ರಜಾವಾಣಿ'ಯ ದೀಪಾವಳಿ ವಿಶೇಷಾಂಕದಲ್ಲಿ ಗೋಪಾಲಕೃಷ್ಣ ಅಡಿಗರ 'ಪ್ರಾರ್ಥನೆ' ಎಂಬ ಶೀರ್ಷಿಕೆಯಡಿಯಲ್ಲಿ ಮನುಷ್ಯ ಜೀವನದಲ್ಲಿ ಸಿಕ್ಕುವ ಅವಕಾಶಗಳನ್ನು ಮುಷ್ಟಿ ಮೈಥುನದಂತೆ ವ್ಯರ್ಥ ಮಾಡಿಕೊಳ್ಳಬಾರದೆಂಬ ಕವನ ಬರೆದಾಗ ಡಿ ವಿ ಜಿ ಹುಬ್ಬು ಹಾರಿಸಿದ್ದುಂಟು.

"ಆಗ ಶಿಕ್ಷಣಮಂತ್ರಿಯಾಗಿದ್ದ ಡಿ ವಿ ಜಿ ಮಿತ್ರ, ವಿ. ವೆಂಕಟಪ್ಪನವರ ಸೂಚನೆ (ಅಥವಾ ದೂರಿನ) ಮೇಲೆ ನಿಜಲಿಂಗಪ್ಪ ಸರಕಾರದವರು 'ಪ್ರಾರ್ಥನೆ'ಯ ಪೋಸ್ಟ್ ಮಾರ್ಟಮ್ಮಿಗೆ ಒಂದು ಸಮಿತಿ (ಡಿ ವಿ ಜಿ, ವಿ ವಿ, ಎಸ್ವೆನ್) ಯನ್ನು ನೇಮಿಸಿ 'ಪ್ರಜಾವಾಣಿ'ಯ ಸಂಪಾದಕನನ್ನು ಕಟಕಟೆಗೆ ಕರೆದರು. 'ಪ್ರಾರ್ಥನೆ' ಅಶ್ಲೀಲವಾದರೆ ಬೇಲೂರಿನ ಶಿಲಾಬಾಲಿಕೆಯರಿಗೆ ಲಂಗ ಚಡ್ಡಿಗಳನ್ನು ಹೊಲಿಸಬೇಕಾಗುತ್ತಲ್ಲವೆ ಎಂಬ ಪ್ರಶ್ನೆಯನ್ನು 'ಅಪಾದಿತ'ನು ಡಿ ವಿ ಜಿ ಯವರ ಮುಂದೊಡ್ಡುತ್ತಿದ್ದಂತೆ ಸಮಿತಿಯ ಪೋಸ್ಟ್ ಮಾರ್ಟಮ್ ತಾನೇ ಮುಕ್ತಾಯವಾಯಿತು."

ಈ ವಿಚಾರವನ್ನು ಕುರಿತು ಗೋಪಾಲಕೃಷ್ಣ ಅಡಿಗರು ತಮ್ಮ "ಸಮಗ್ರ ಕಾವ್ಯ"ಕ್ಕೆ 'ಮೊದಲ ಮಾತಿ'ನಲ್ಲಿ ಹೀಗೆ ಹೇಳಿದ್ದಾರೆ :

"ನಾನು ಹೊಸರೀತಿಯಲ್ಲಿ ಬರೆಯುತ್ತ ಅದನ್ನು ಜನ ಸ್ವೀಕರಿಸುವಂತೆ ಮಾಡಲು ಹೆಣಗುತ್ತ ಹೋದದ್ದರಿಂದ ಮೊದಮೊದಲು ಭಾರಿ ವಿರೋಧವನ್ನು ಎದುರಿಸಬೇಕಾಯಿತು.

“ಸರಕಾರದಿಂದಲೂ ತಕ್ಕಷ್ಟು ತೊಂದರೆ ಅನುಭವಿಸಬೇಕಾಯಿತು. ‘ಪ್ರಾರ್ಥನೆ’ ಎಂಬ ನನ್ನ ಕವನ ಮೊದಲು ಒಂದು ಕವಿತಾ ಗೋಷ್ಠಿಯಲ್ಲಿ ಓದಿದ್ದು (ದಸರಾ ಕವಿಗೋಷ್ಠಿ ಇರಬೇಕು) ಆಕಾಶವಾಣಿಯಲ್ಲಿ ಪ್ರಸಾರವಾಗಿ ಅನಂತರ ‘ಪ್ರಜಾವಾಣಿ’ಯಲ್ಲಿ ಪ್ರಕಟವಾದಾಗ ಅದು ಅಶ್ಲೀಲವೆಂಬ ಹುಯಿಲೆದ್ದಿತು. ಇದು ವ್ಯಕ್ತಿದ್ವೇಷದಿಂದ ನಡೆದ ಸಂಗತಿಯಲ್ಲ. ಹೊಸ ಕಾವ್ಯದ ಧಾಟಿ ಧೋರಣೆ, ಶಿಲ್ಪ ಇವುಗಳ ಅರ್ಥ ತಿಳಿಯದೆ ಒಂದು ಶಬ್ದ, ಒಂದು ಶಬ್ದ ಸಮುಚ್ಚಯ ಇವು ಅಶ್ಲೀಲವೆಂದು ಸಹಜವಾಗಿಯೇ ಕೋಪ ಗೊಂಡವರ ಪ್ರತಿಕ್ರಿಯೆ. ಆದರೂ ಸರಕಾರಕ್ಕೂ ದೂರು ಸಲ್ಲಿಸಿ ಕ್ರಮ ತೆಗೆದು ಕೊಳ್ಳಬೇಕೆಂದು ಕೇಳಿದ್ದರಂತೆ. ಈ ಸಂದರ್ಭದಲ್ಲಿ ಒಬ್ಬ ದೊಡ್ಡ ಸಾಹಿತಿಗಳೂ (ಅವರು ಈಗ ಇಲ್ಲ) ಹಾಗೆ ತಿಳಿದರೆಂಬುದು ಇಂದಿಗೂ ನನಗೆ ಅತ್ಯಾಶ್ಚರ್ಯದ ಸಂಗತಿ”. ಮುಂದೆ ವಿಷಯವನ್ನು ವಿವರಿಸಿದ ಮೇಲೆ ಸರಕಾರ ತನ್ನ ಫೈಲನ್ನು ಮುಚ್ಚಿತಂತೆ.

1953ರಲ್ಲಿ ಸರಕಾರ ಡಿ ವಿ ಜಿ ಯವರನ್ನು ಕೇಂದ್ರ ಸಾಹಿತ್ಯ ಅಕಾಡಮಿಯ ಕೇಂದ್ರ ಸಮಿತಿಗೆ ಸದಸ್ಯರನ್ನಾಗಿ ನೇಮಿಸಿತು. ‘ಅಕಾಡಮಿ’ ಎಂಬ ಹೆಸರು ಡಿ ವಿ ಜಿ ಯವರಿಗೆ ಒಪ್ಪಲಿಲ್ಲ. ಹಣದ ಪಾರಿತೋಷಕವನ್ನು ಕೊಡುವ ಬದಲು ಲೇಖಕರ ಪುಸ್ತಕಗಳನ್ನು ಕೊಂಡುಕೊಳ್ಳಬೇಕೆಂದು ಡಿ ವಿ ಜಿ ಯವರ ಅಭಿಪ್ರಾಯ. ಕೇವಲ ಸಾಹಿತ್ಯಕೃತಿಗಳನ್ನು ಭಾಷಾಂತರಗೊಳಿಸುವ ಬದಲು, ವಿಜ್ಞಾನ, ಸಮಾಜ ಶಾಸ್ತ್ರ, ಚರಿತ್ರೆ ಮುಂತಾದವುಗಳ ಗ್ರಂಥಗಳ ಅನುವಾದವಾಗಬೇಕು ಎಂಬುದು ಅವರ ಅಭಿಪ್ರಾಯ. ಇವುಗಳು ಅಕಾಡಮಿಗೆ ಒಪ್ಪಿಗೆಯಾಗದೆ ಹೋದಾಗ ಅವರು ಅಲ್ಲಿಂದ ಹೊರ ಬಂದರು.

ಕೊನೆಯ ವರ್ಷಗಳಲ್ಲಿ ಡಿ ವಿ ಜಿ ಅವರಿಗೆ ಪ್ರಶಸ್ತಿಗಳು ಬಂದವು, ಸಾರ್ವಜನಿಕ ಸನ್ಮಾನಗಳಾದುವು. ಡಿ ವಿ ಜಿ ಅವರು ಕೀರ್ತಿಗಾಗಿ ಹಂಬಲಿಸಿ ದವರಲ್ಲ.

ಹೆಸರು ಹೆಸರೆಂಬುದೇಂ ? ಕಸುರು ಬೀಸುವ ಗಾಳಿ ।
ಹಸೆಯೊಂದು ನಿನಗೇಕೆ ಬ್ರಹ್ಮಪುರಿಯೊಳಗೆ ? ॥
ಶಿಶುವಾಗು ನೀಂ ಮನದಿ, ಹಸುವಾಗು, ಸಸಿಯಾಗು ।
ಕಸಬೊರಕೆಯಾಗಿಳೆಗೆ—ಮಂಕುತಿಮ್ಮ ॥

ಅಂದವರು ಅವರು.

ಆದರೆ ಗೋಖಲೆ ಸಂಸ್ಥೆಗಾಗಿ, ಸ್ನೇಹಿತರ ಒತ್ತಾಯದಿಂದ, ಅವರು ಅವಕ್ಕೆ ಒಪ್ಪಬೇಕಾಯಿತು.

ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಕೆ. ಎ. ನಿಕ್ಕಂ ಅವರು ವಿಶ್ವವಿದ್ಯಾನಿಲಯವು ಅವರಿಗೆ ಡಾಕ್ಟರೇಟ್ ಪದವಿ ಕೊಡಲು ನಿರ್ಧರಿಸಿದೆಯೆಂದೂ ಡಿ ವಿ ಜಿ ಒಪ್ಪಿಕೊಳ್ಳಬೇಕೆಂದೂ ಹೇಳಲು ಬಂದರು. ಡಿ ವಿ ಜಿ ಅದನ್ನು ತಿರಸ್ಕರಿಸುವುದರೊಳಗಾಗಿ ಅಲ್ಲಿಗೆ ಬಂದಿದ್ದ ಅವರ ಹಿರಿಯ ಸ್ನೇಹಿತರಾದ ನಾಗೇಶ್ವರ ಅಯ್ಯರ್ : "ಅವರ ಮಾತು ಕೇಳಬೇಡ್ರಿ. ನೀವು ಮುಂದಿನ ಕೆಲಸ ನಡಸಿ" ಎಂದು ಹೇಳಿ ಡಿ ವಿ ಜಿ ಯವರ ಬಾಯಿ ಮುಚ್ಚಿಸಿದರು. ಹೀಗಾಗಿ 25-11-1961ರಂದು ಡಿ ವಿ ಜಿ ಮೈಸೂರು ವಿಶ್ವವಿದ್ಯಾನಿಲಯದ ಡಾಕ್ಟರೇಟ್ ಪಡೆದರು. ಅನೇಕ ವರ್ಷಗಳ ಕಾಲ ಅವರು ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್, ಮತ್ತು ಕೌನ್ಸಿಲ್‌ಗಳಲ್ಲಿ ಸದಸ್ಯರಾಗಿದ್ದರು. ಆ ದಿನಗಳ ಅನುಭವಗಳನ್ನೂ, ಆ ಸದಸ್ಯತ್ವ ದೊರಕಿಸಿಕೊಟ್ಟ ಸ್ನೇಹಗಳನ್ನೂ ಜ್ಞಾಪಿಸಿಕೊಂಡು ತಮ್ಮ ಕೃತಜ್ಞತೆಗಳನ್ನು ಸಲ್ಲಿಸಿದ್ದಾರೆ ಡಿ ವಿ ಜಿ, ಅಂದು ಮಾಡಿದ ಉತ್ತರ-ಭಾಷಣದಲ್ಲಿ.

1965ರ ಹೊತ್ತಿಗೆ ಡಿ ವಿ ಜಿ ಯವರ ಕಣ್ಣಿನಲ್ಲಿ ಪೊರೆ ಬೆಳೆಯುತ್ತಿತ್ತು. ಆ ಪೊರೆಯನ್ನು ತೆಗೆಯಲು ಪೀಠಿಕೆಯಾಗಿ ವೈದ್ಯರು ಹಲ್ಲುಗಳನ್ನು ತೆಗೆಸಬೇಕೆಂದರು. ಎಲ್ಲವೂ ಹೆಚ್. ಕೃಷ್ಣಮೂರ್ತಿಗಳ ನಿರ್ದೇಶದಂತೆ ನಡೆದು 16-6-65ರಂದು ಬಿ. ಕೆ. ನಾರಾಯಣರಾಯರ ಯೂಜಮಾನ್ಯದಲ್ಲಿ ಮಹಮದ್ ಷಫಿ ಮೇಕ್ರಿಯವರೂ ಕೃಷ್ಣಮೂರ್ತಿಯವರೂ ಪೊರೆಯನ್ನು ತೆಗೆದರು. ವೈದ್ಯರು ಡಿ ವಿ ಜಿ ಯವರಿಗೆ ಬಹುಪ್ರಿಯವಾಗಿದ್ದ ಅಭ್ಯಂಜನ ಸ್ನಾನವನ್ನು ನಿಷೇಧಿಸಿದರು, ಮತ್ತು ಓದನ್ನೂ ನಿಲ್ಲಿಸಿಬಿಡಬೇಕೆಂದರು. ವೈದ್ಯರ ಸಲಹೆಯಾದದ್ದರಿಂದ ಡಿ ವಿ ಜಿ ಒಪ್ಪಲೇಬೇಕಾಯಿತು. ಕೆಲವು ತಿಂಗಳುಗಳ ತರುವಾಯ ಕೃಷ್ಣಮೂರ್ತಿಗಳು ಮನೆಗೇ ಬಂದು, ಕಣ್ಣುಗಳನ್ನು ಪರೀಕ್ಷೆ ಮಾಡಿ, ಬೇಕಾದ ಕನ್ನಡಕವನ್ನು ನಿಷ್ಕರ್ಷೆಮಾಡಿಕೊಂಡು, ಒಂದು ಮಧ್ಯಾಹ್ನ ಅವುಗಳನ್ನು ತಂದುಕೊಟ್ಟರು. ಕಣ್ಣುಗಳಿಗೆ ಉಪಕರಣ ಬಂದ ಕೂಡಲೆ ಡಿ ವಿ ಜಿ ಓದಲು ತೆಗೆದುಕೊಂಡ ಗ್ರಂಥ ಸುರೇಶ್ವರಾಚಾರ್ಯರು ಬೃಹದಾರಣ್ಯಕಕ್ಕೆ ಬರೆದಿದ್ದ ವಾರ್ತಿಕ: "ಎಷ್ಟು ಚೆನ್ನಾಗಿ ಬರೆದಿದ್ದಾರಯ್ಯ! ಎಷ್ಟು ದಿನವಾಯಿತು ನೋಡಿ. ಈಗ ಸಂತೋಷವಾಗಿದೆ" ಎಂದು ಅದನ್ನು ಅವಲೋಕಿಸುತ್ತಿದ್ದರು. ಇದರಿಂದ ಅವರ ಒಲವು ಎತ್ತ ಕಡೆ ಎಂಬುದು ತಿಳಿಯುತ್ತದೆ.

ಡಿ ವಿ ಜಿ ಯವರ 'ಶ್ರೀಮದ್ಭಗವದ್ಗೀತಾ ತಾತ್ಪರ್ಯ' ಗ್ರಂಥಕ್ಕೆ 1967ರ ಕೇಂದ್ರ ಸಾಹಿತ್ಯ ಅಕಾಡಮಿಯ ಗೌರವ ದೊರಕಿತು. ಪ್ರಶಸ್ತಿ ಯನ್ನು ಒಪ್ಪಿಕೊಳ್ಳಲು, ಅದರ ಜೊತೆಯಲ್ಲಿ ಬರುವ ಸಂಭಾವನೆಯನ್ನು ತೆಗೆದು ಕೊಳ್ಳಲು ಡಿ ವಿ ಜಿ ತಕರಾರು ಮಾಡಿದರು. ವ್ಯಾಸಂಗ ಗೋಷ್ಠಿಯಲ್ಲಿ ಇದರ ವಿಚಾರ ಬಂದಾಗ ಆರ್. ವಿ. ಪ್ರಭಾಕರರಾಯರು, "ನೀವು ಹಣ ತೆಗೆದುಕೊಳ್ಳದಿದ್ದರೆ ಬೇಡ. ಗೋಖಲೆ ಸಂಸ್ಥೆಗೆ ಅದನ್ನು ಕೊಟ್ಟು ಬಿಡಿ," ಎಂದಾಗ, ಈ ನ್ಯಾಯಕ್ಕೆ ಡಿ ವಿ ಜಿ ಅಂಗೀಕರಿಸಿದರು. ಆ ಹಣದಿಂದಲೇ ಈಗ ರಾಜರತ್ನಂ ಅವರು ಏರ್ಪಡಿಸಿದ 'ಶ್ರೀ ಗಂಧ ಕುಟಿ' ಇರುವ ಕೊಠಡಿ ಕಟ್ಟಲ್ಪಟ್ಟದ್ದು.

ಸನ್ಮಾನಕ್ಕಾಗಿ ಬಹಿರಂಗ ಸಭೆ ಸಮಾರಂಭಗಳಿಗೆ ಸಮ್ಮತಿಸದಿದ್ದ ಡಿ ವಿ ಜಿ ಯವರನ್ನು ಕನ್ನಡ ಸಾಹಿತ್ಯ ಪರಿಷತ್ತು ಅವರ ಮನೆಯಲ್ಲೇ 29. 2. 1968 ರಂದು ಸನ್ಮಾನ ಪತ್ರವನ್ನರ್ಪಿಸಿ ಗೌರವಿಸಿತು. ಕೋಶಾಧಿ ಕಾರಿಗಳಾದ ವರದರಾಜನ್, ಜಿ. ಎಸ್. ಶಿವರುದ್ರಪ್ಪನವರು, ಪಿ. ಶ್ರೀನಿವಾಸ ರಾಯರು ಡಿ ವಿ ಜಿ ಯವರನ್ನು ಕುರಿತು ಮಾತನಾಡಿದರು. ಪರಿಷತ್ತಿನ ಅಧ್ಯಕ್ಷರು ಜಿ. ವೆಂಕಟಸುಬ್ಬಯ್ಯನವರು, ಜೀವನದಲ್ಲಿ ಅನೇಕ ದಾಖಲೆಗಳನ್ನು ಸ್ಥಾಪಿಸಿರುವ ಡಿ ವಿ ಜಿ ಮಾನವನ ಬದುಕಿನಲ್ಲಿ ಅತಿ ಹೆಚ್ಚೆನಿಸಬಹುದಾದಷ್ಟು ದೀರ್ಘಕಾಲ ಬದುಕಿ ಹೊಸ ದಾಖಲೆಯನ್ನು ಸ್ಥಾಪಿಸಬೇಕೆಂದು ಹಾರೈಸಿ ದರು. ಈ ಮಾತುಗಳನ್ನು ಜ್ಞಾಪಿಸಿಕೊಂಡು ಡಿ ವಿ ಜಿ, ವೆಂಕಟಸುಬ್ಬಯ್ಯ, ನವರನ್ನು ದಾಖಲೆ ವೆಂಕಟಸುಬ್ಬಯ್ಯ ಎಂದೇ ಕರೆಯುತ್ತಿದ್ದರು.

ಈ ಸಂದರ್ಭದಲ್ಲಿ ಡಿ ವಿ ಜಿ, ಎ. ಆರ್. ಕೃಷ್ಣಶಾಸ್ತ್ರಿಗಳ ಜೊತೆಯಲ್ಲಿ ಮಾಡಿದ ಕೊನೆಯ ಸಂಭಾಷಣೆಯಲ್ಲಿ, ಅವರು "ನಿಮಗೆ ಒಂದು ಲಕ್ಷ ರೂಪಾಯಿ ಬರಬೇಕಾಗಿತ್ತು, ಇದು ಏನು ಮಹಾ" ಎಂದು ಹೇಳಿದ್ದನ್ನು ಜ್ಞಾಪಿಸಿಕೊಂಡಿದ್ದಾರೆ. (ಕನ್ನಡ ನುಡಿ, ಏಪ್ರಿಲ್–ಮೇ 1968)

ಡಿಸೆಂಬರ್ 1, 1968 ರಂದು ಸಾಹಿತ್ಯ ಅಕಾಡಮಿಯ ಪ್ರಾದೇಶಿಕ ಅಧಿಕಾರಿ ಡಾ|| ಜಾರ್ಜ್ ಅವರು ಡಿ ವಿ ಜಿ ಯವರಿಗೆ ಅಕಾಡಮಿಯ ಪ್ರಶಸ್ತಿಯನ್ನು ಅರ್ಪಿಸಿದರು. ಗೋಖಲೆ ಸಂಸ್ಥೆಯಲ್ಲಿ ನಡೆದ ಸಮಾರಂಭದಲ್ಲಿ ವಿ.ಕೆ. ಗೋಕಾಕ್, ಡಾ|| ರಂ. ಶ್ರೀ ಮುಗಳಿ, ವಿ. ಸೀತಾರಾಮಯ್ಯನವರು ಭಾಗ ವಹಿಸಿದ್ದರು. ಆಗ ಮಾತನಾಡಿದ ಗೋಕಾಕ್ ಅವರು '50–60 ವರ್ಷಗಳ ಹಿಂದೆ ದೇಶವು ಮೂಕವಾಗಿದ್ದಾಗ ಅವರು ಮೊದಲು ಮಾತನಾಡಿದರು. ಧ್ವನಿ ಎತ್ತಿದರು

ಅನಂತರ ಉಳಿದವರಿಗೂ ಮಾತನಾಡಬೇಕೆನ್ನಿಸಿತು. ಕನ್ನಡ ಸಾಹಿತ್ಯದಲ್ಲಿ ಹೊಸ ಬೆಳೆಯುಂಟಾಗಿ, ಹಿಂದಿನ ಸಂಸ್ಕೃತಿ ಪುನರುಜ್ಜೀವನಗೊಂಡು ಇಂದಿನ ಜೀವನದ ಭಾಗವಾಗಿದ್ದರೆ, ಉದಾತ್ತ ಪ್ರವೃತ್ತಿ, ಸೌಂದರ್ಯ ದರ್ಶನಗಳು ಹೊಸ ಜೀವನದಲ್ಲಿ ಪ್ರವೇಶ ಪಡೆದಿದ್ದರೆ, ಆದರೆ ಶ್ರೇಯಸ್ಸು ಡಿ ವಿ ಜಿ ಯವರಿಗೆ ಸಲ್ಲಬೇಕು. ಡಿ ವಿ ಜಿ ಮೊದಲು ಪ್ರೇರಣೆಗೆ ಒಳಗಾದರು. ಅನಂತರ ಪ್ರೇರಕರಲ್ಲಿ ಒಬ್ಬರಾದರು. ಆದಿ ಜಿನರೆನಿಸಿದರು'—ಎಂದರು.

ಅದೇ ಡಿಸೆಂಬರ್ ತಿಂಗಳಿನಲ್ಲಿ ಜಿ. ಪಿ. ರಾಜರತ್ನಂ ಅವರಿಗೆ ಅರವತ್ತು ವರ್ಷಗಳು ತುಂಬಿದ ಸಂದರ್ಭದಲ್ಲಿ ಅವರ ಅಭಿಮಾನಿಗಳು, ಮುಖ್ಯವಾಗಿ ಬಿ ಬಿ ಡಿ ಪವರ್ ಪ್ರೆಸ್ಸಿನ ನರಸಿಂಹಮಲ್ಯರು, ನ್ಯಾಷನಲ್ ಕಾಲೇಜಿನ ಸಭಾಂಗಣದಲ್ಲಿ ಒಂದು ಸಮಾರಂಭವನ್ನು ಏರ್ಪಡಿಸಿದ್ದರು. ಆ ಸಭೆಗೆ ಡಿ ವಿ ಜಿ ಯವರು ಮತ್ತು ಮಾಸ್ತಿಯವರು ಇಬ್ಬರೂ ಅಧ್ಯಕ್ಷರು. ಆಗ ಡಿ ವಿ ಜಿ ಯವರು, ರಾಜರತ್ನಂ ಅವರು ಗಹನವಾದ ವಿಷಯಗಳನ್ನು ಸರಳವಾಗಿ ಹೇಳುವ ಕಲೆಯನ್ನು ಸಾಧಿಸಿದ್ದಾರೆಂದು ಕೊಂಡಾಡಿ ಮಂತ್ರಾಕ್ಷತಾಪೂರ್ವಕ ವಾಗಿ ವೇದೋಕ್ತ ಆಶೀರ್ವಾದ ಮಾಡಿದರು.

ಈ ಕಾಲದಲ್ಲಿಯೇ ಎಂ ವಿ ಕೃಷ್ಣಸ್ವಾಮಿಯವರು ಡಿ ವಿ ಜಿ ಯವರನ್ನು ಒಪ್ಪಿಸಿ ಅವರ ಸಾಕ್ಷ್ಯಚಿತ್ರವೊಂದನ್ನು ತೆಗೆದದ್ದು.

ಗೋಖಲೆ ಸಂಸ್ಥೆ ಬೆಳೆಯುತ್ತಿತ್ತು. ಇನ್ನೂ ಹೆಚ್ಚು ಸ್ಥಳಾವಕಾಶ ಬೇಕಾಯಿತು. ಆಗ ಕಮಿಷನ್ ಎಂಡ್ ಜನರಲ್ ಏಜೆನ್ಸಿಯ ಎಂ. ವಿ. ಕೃಷ್ಣಮೂರ್ತಿಯವರು ಡಿ ವಿ ಜಿ ಯವರ ಹುಟ್ಟು ಹಬ್ಬವನ್ನು ಆಚರಿಸುವ ವ್ಯಾಜದಲ್ಲಿ, ಅನಾರೋಗ್ಯದಿಂದಿದ್ದರೂ, ಸಂಸ್ಥೆಗಾಗಿ ಹಣಸಂಗ್ರಹಕ್ಕೆ ಹೊರಟರು. "ಡಿ ವಿ ಜಿ ಸನ್ಮಾನ ಸಮಿತಿ"ಗೆ ಅಧ್ಯಕ್ಷರು ವಿ. ಎಸ್. ನಟರಾಜನ್ ಅವರು. ಕಾರ್ಯದರ್ಶಿಗಳು ಕೃಷ್ಣಮೂರ್ತಿಗಳ ಮಗ ಎಂ. ಕೆ ಅನಂತ ಸ್ವಾಮಿ ಮತ್ತು ಎಸ್. ಜಿ. ರಾಮಚಂದ್ರ ಅವರು.

ಈ ಸನ್ಮಾನ ಮಹೋತ್ಸವಕ್ಕೆ ಪೀಠಿಕೆಯಾಗಿ (11-1-1970) ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ 200 ನಿಮಿಷಗಳ ಕಾಲ ಮಾಸ್ತಿಯವರ ನಿರ್ದೇಶನದಲ್ಲಿ ಡಿ ವಿ ಜಿ ಯವರನ್ನು ಕುರಿತು ಒಂದು ವಿಚಾರ ಸಂಕಿರಣ ನಡೆಯಿತು. (ಕನ್ನಡ ಪ್ರಭ 12-1-1970) ಪರಿಷದಧ್ಯಕ್ಷರಾಗಿದ್ದ ಜಿ ನಾರಾಯಣ ಅವರು ಸ್ವಾಗತ ವನ್ನು ಕೋರಿ "ಡಿ ವಿ ಜಿ ಯವರು ಕನ್ನಡ ಸಾಹಿತ್ಯದ ಮೇರು ಶಿಖರ" ಎಂದರು. ಅಧ್ಯಕ್ಷರಾದ ಮಾಸ್ತಿಯವರು : "ವಯಸ್ಸಿನಿಂದ ಗುಂಡಪ್ಪನವರು

ನನಗಿಂತ ಎರಡು ಮೂರು ವರ್ಷ ದೊಡ್ಡವರು. ಆದರೆ ಯೋಗ್ಯತೆಯ ದೃಷ್ಟಿಯಿಂದ ಎಷ್ಟು ದೊಡ್ಡವರು ಹೇಳಲಾರೆ. ಕಳೆದ ಐವತ್ತು ವರ್ಷಗಳಿಂದ ಅಣ್ಣ ತಮ್ಮರಂತೆ ಬೆಳೆದು ಬಂದಿದ್ದೇವೆ. ಅಭಿಪ್ರಾಯ ಭೇದ ಬಂದಾಗ ಜಾಣತನದಿಂದ ಅದನ್ನು ಸರಿಪಡಿಸುವ ಅವರ ಸ್ನೇಹಧರ್ಮ ದೊಡ್ಡದು. ಜಗತ್ತಿನ ಕಾವ್ಯರಾಶಿಯೊಳಗೆ ಗುಂಡಪ್ಪನವರು ತಾವೂ ಒಂದು ಕಾವ್ಯವಾಗಿದ್ದಾರೆ. ದೈವ ಅವರ ಜೀವನವನ್ನು ಒಂದು ಕಾವ್ಯವನ್ನಾಗಿ ಮಾಡಿದೆ. ಇದುವರೆಗೆ ದೇಶ ಅವರನ್ನು ಸರಿಯಾಗಿ ಕಾಣಲಿಲ್ಲ. ಅವರಿಗೆ ಯಾರೂ ಎಂದೂ ಉತ್ತೇಜನ ಕೊಡಲಿಲ್ಲ. ಸಹಾಯ ಒದಗಿಸಲಿಲ್ಲ. ಗುಂಡಪ್ಪನವರು ದೇವರೇ ದಿಕ್ಕಾಗಿ ನಡೆದಿದ್ದಾರೆ. ಗೋಖಲೆ ಸಂಸ್ಥೆಯಂತಹ ಸಂಸ್ಥೆಯನ್ನು ಕಟ್ಟಿ ಬೆಳೆಸುವ ಕಾರ್ಯ ಬೇರೆ ಯಾವ ಭೂಪ ಮಾಡಬಲ್ಲ?....ಅವರು ನನ್ನನ್ನು ಅಪ್ಪಿ ಆದರಿಸುತ್ತಾರೆ. ಅಪ್ಪಿ ಬೀಳ್ಕೊಡುತ್ತಾರೆ. ಅವರ ಅಪ್ಪುಗೆ ನನ್ನ ಎದೆಗೆ ಶಕ್ತಿಕೊಡುತ್ತದೆ....ಕನ್ನಡ ಮಾತೆಯ ಕಾಲಿಗೆ ಎರಗಿ, ತಾಯ ಎದೆಯ ಅಪ್ಪುಗೆ ಪಡೆಯಬೇಕೆಂದಾಗ ನಾನು ಅವೆರಡೂ ಸೌಖ್ಯವನ್ನು ಗುಂಡಪ್ಪನವರಲ್ಲಿ ಕಾಣುತ್ತೇನೆ....ಅವರು ಮಾನವತೆಯ ಸುಂದರ ಮಹಾಕಾವ್ಯ" ಎಂದರು.

ಮಾತಿನಿಂದ ಮಿಂಚು ಗುಡುಗುಗಳನ್ನೇ ಮೂಡಿಸಬಲ್ಲ ಮಾತುಗಾರ ಶ್ರೀ ತಿರುಮಲೆ ತಾತಾಚಾರ್ಯ ಶರ್ಮ ಅವರು, ಡಿ ವಿ ಜಿ ಯವರನ್ನು ಕುರಿತು ಮಾತನಾಡುವಾಗ "ತಮಗೆ ಕೈಕಾಲು ನಡುಗುತ್ತದೆ. ಭಾಷಾಪ್ರಭುತ್ವ, ಕಾವ್ಯಾವಲೋಕನದ ಬಯಕೆ, ಲೋಕಜ್ಞಾನ ಮತ್ತು ವಿಚಾರ ಶಕ್ತಿಗಳುಳ್ಳವರು ಮಾತ್ರ ಪತ್ರಕರ್ತರಾಗಬಲ್ಲರು. ಇವುಗಳಿಂದ ಕೂಡಿದ್ದ ಡಿ ವಿ ಜಿ ಜನತೆಯ ವಿಚಾರ ಶಕ್ತಿಗೆ 'ಕೆಣಕು' ಕೊಡಬಲ್ಲ ಪತ್ರಕರ್ತರು. ಡಿ ವಿ ಜಿ ಯವರ ಬರಹದ ಸರಳ ಶಬ್ದಗಳಲ್ಲಿ ಅಡಗಿರುವ ಮೊನಚು ನನಗೆ ತುಂಬಪ್ರಿಯ. ಡಿ ವಿ ಜಿ ಏನೆಲ್ಲ ಆಗಿದ್ದರೂ ಅವರು ಮೊಟ್ಟಮೊದಲು ಪತ್ರಕರ್ತರು. ಆ ವೃತ್ತಿಯಲ್ಲಿ ಅವರು ಪರಿಪೂರ್ಣ ನಿಷ್ಣಾತರು" ಎಂದರು.

"ಬಲಾಬಲಗಳ ಹೋರಾಟಕ್ಕೆ ಎಂದೂ ಪ್ರವೇಶಿಸದ ರಾಜಕಾರಣಿ ಡಿ ವಿ ಜಿ. ಅವರ ಪಾತ್ರ ಚಳವಳಿಗಾರನದಲ್ಲ; ವಿಚಾರ ಪ್ರಚೋದಕನದು. ಡಿ ವಿ ಜಿ ಪತ್ರಕರ್ತರಾಗಿದ್ದರೂ ಸಾಹಿತ್ಯದ ಹವ್ಯಾಸಿಗಳಾಗಿದ್ದರೂ ಅವರು ವಸ್ತುತಃ ಸಾರ್ವಜನಿಕ ಸೇವಕರು. ರಾಜರ ಆಳ್ವಿಕೆಗೆ ಒಳಗಾಗಿದ್ದ ಸಂಸ್ಥಾನಗಳಲ್ಲಿ ಜವಾಬ್ದಾರಿ ಸರಕಾರ ಬೇಕೆಂಬ ಚಿಂತನೆಗೆ ಸ್ಪಷ್ಟ ಸ್ವರೂಪ ಕೊಟ್ಟವರು. ಪ್ರಜಾಸತ್ತೆಯಲ್ಲಿ ಪುರೋಗಾಮಿ ತತ್ತ್ವಗಳನ್ನೇ ಪ್ರತಿಪಾದಿಸಿದವರು" ಎಂದರು

ಕೆ. ಸಂಪದ್ಗಿರಿರಾಯರು.

ಅವರೊಡನೆ ಪರಿಷತ್ತಿನಲ್ಲಿ ಕೆಲವುಕಾಲ ಖಜಾಂಚಿಯಾಗಿ ಕೆಲಸ ಮಾಡಿದ ವಿ. ಸೀತಾರಾಮಯ್ಯನವರು "ಅವರ ಜತೆ ಕೆಲಸಮಾಡುವುದು ಬಹಳ ಕಷ್ಟ. ಕೆಲಸ ಮಾಡಿ ಬದುಕುವುದು ಕಷ್ಟ. ಸಾಮಾಜಿಕ ರಂಗಗಳಲ್ಲಿ, ಸಾರ್ವಜನಿಕ ಸಂಸ್ಥೆಗಳಲ್ಲಿ ಕೆಲಸ ಮಾಡುವ ಕಾರ್ಯಕರ್ತನ ಮನಸ್ಸು ಯಾವ ಹದದಲ್ಲಿರಬೇಕು ಎಷ್ಟು ತೂಕವಾಗಿರಬೇಕು ಎಂಬುದಕ್ಕೆ ಡಿ ವಿ ಜಿ ನಿದರ್ಶನ," ಎಂದು ಹೇಳಿ, ಡಿ ವಿ ಜಿ ಯವರ ಜ್ಞಾನಸಂಪತ್ತು, ವಿಷಯಸಂಗ್ರಹಣ, ಅದಕ್ಕೆ ಬೇಕಾದ ಮನಸ್ಸಿನ ವಿಸ್ತಾರ– ಅವುಗಳನ್ನು ಪರಿಚಯ ಮಾಡಿ ಕೊಡುತ್ತಾ "ಈ ದಿನಗಳಲ್ಲಿ ಡಿ ವಿ ಜಿ ಯವರಂತಹ ದೊಡ್ಡ ಜೀವ ಬೆಳೆಯುವುದಕ್ಕೆ, ಅಂತಹ ಆದರ್ಶ ಕಲ್ಪನೆ ಬೆಳೆಸಿಕೊಳ್ಳುವುದಕ್ಕೆ ವಿದ್ವತ್ತಿಗೆ ತೇಜಸ್ಸಿಗೆ ಅಗತ್ಯವಾದ ಅವಕಾಶ ತಪ್ಪುತ್ತಿದೆ; ವಯಸ್ಸಿನೊಡನೆಯೇ ಬೆಳೆದು ಹೆಮ್ಮರವಾಗಿ ನಿಂತಿರುವ ಡಿ ವಿ ಜಿ ಯವರು ಸೀಮಾಪುರುಷರು" ಎಂದರು.

ಅವರ ಸಾಹಿತ್ಯ ಸೇವೆಯನ್ನು ಶ್ಲಾಘಿಸಿದ ಎಂ. ಮರಿಯಪ್ಪ ಭಟ್ಟರು ಡಿ ವಿ ಜಿ ಯವರ ಹೊರಗಣ್ಣು ಈಗ ಮಂದವಾಗಿರುವುದರಿಂದ ಅವರ ಜ್ಞಾನ ನೇತ್ರ ಮತ್ತಷ್ಟು ಬೆಳಗಿ ನಮಗೆಲ್ಲ ಒಳ್ಳೆಯದನ್ನು ಕೊಡುತ್ತಿರಲಿ ಎಂದರು.

ತತ್ತ್ವಜ್ಞಾನದ ತಳಹದಿಯ ಮೇಲೆಯೇ ಡಿ ವಿ ಜಿ ಯವರ ಎಲ್ಲ ವಿಚಾರಗಳೂ ಮೂಡಿ ಬರುತ್ತಿವೆ. ಹಳೆಯದನ್ನೇ ಹೇಳಿದರೂ, ಹೇಳುವ ರೀತಿಯಲ್ಲಿ ವಿಮರ್ಶನ ಕ್ರಮದಲ್ಲಿ ನವೀನತೆಯನ್ನು ಡಿ ವಿ ಜಿ ಸಾಧಿಸಿದ್ದಾರೆ. ಲೋಕಧರ್ಮವನ್ನು ಮೀರಿದ ಅತಿಧರ್ಮವೊಂದಿದೆ. ಆ ಆತ್ಮನಿವೇದನದ ಹಾದಿಯಲ್ಲಿ ಸಾಗುತ್ತಿದ್ದಾರೆ ಡಿ ವಿ ಜಿ ಎಂದರು ಎನ್. ರಂಗನಾಥಶರ್ಮಾ ಅವರು.

ರಾಜಕಾರಣದಲ್ಲಿ ಇದ್ದೂ ತಮ್ಮ ಸೇವೆಗೆ ಪ್ರತಿಫಲ ಬಯಸದ ತ್ಯಾಗಿ ಎಂದು ಡಿ ವಿ ಜಿ ಯವರನ್ನು ಬಣ್ಣಿಸಿದ ಹಿರಿಯ ರಾಜಕಾರಣಿ ವಿ. ವೆಂಕಟಪ್ಪನವರು ಡಿ ವಿ ಜಿ ತಮಗೆ ಗುರುಸಮಾನರೆಂದರು.

ಪತ್ರಕರ್ತರಾಗಿ ಆರಂಭಿಸಿ ಸಾಹಿತ್ಯಕ್ಷೇತ್ರಕ್ಕೆ ಡಿ ವಿ ಜಿ ಬಂದುದು ಕನ್ನಡಿಗರ ಪುಣ್ಯ ವಿಶೇಷ ಎಂದರು ಹೆಚ್. ವಿ. ಸಾವಿತ್ರಮ್ಮ.

18–1–1970ರಲ್ಲಿ ಬೆಂಗಳೂರಿನ ಪುಟ್ಟಣ್ಣಶೆಟ್ಟಿ ಪುರಭವನದಲ್ಲಿ ನಡೆದ ಒಂದು ಅದ್ಧೂರಿಯ ಸಮಾರಂಭದಲ್ಲಿ ಡಿ ವಿ ಜಿ ಯವರನ್ನು ಸನ್ಮಾನಿಸಿ, ದೇಶದ ಮಹಾಜನ ತುಂಬುಹೃದಯದಿಂದ ಕೊಟ್ಟ ಒಂದು ಲಕ್ಷ ರೂಪಾಯಿಗಳನ್ನು

ಅವರಿಗೆ ಅರ್ಪಿಸಲಾಯಿತು. ಅವರಾದರೋ ಆ ಹಣವೆಲ್ಲವನ್ನೂ ಗೋಖಲೆ ಸಂಸ್ಥೆಗೇ ಕೊಟ್ಟುಬಿಟ್ಟರು.

ಬೆಳಗ್ಗೆ ನಡೆದ ಸಭೆಗೆ ಅಧ್ಯಕ್ಷತೆ ವಹಿಸಿದ್ದ ಮುಖ್ಯಮಂತ್ರಿ ವೀರೇಂದ್ರಪಾಟೀಲರು "ಡಿ ವಿ ಜಿ ಯವರು ಸಮಾಜಕ್ಕೆ ಹೊರೆಯಾಗದ ಸ್ವತ್ತಾಗಿ ಬಾಳಿದ್ದಾರೆ" ಎಂದರು. ಅಂದು ಮಾತನಾಡಿದವರು ರಂಗನಾಥ ದಿವಾಕರ್, ಟ. ಕೆ. ತುಕೋಳ, ಜಿ.ಪಿ. ರಾಜರತ್ನಂ ಮತ್ತು ಜಿ. ನಾರಾಯಣ ಅವರು. ಕಂಚಿಯ ಹಿರಿಯ ಸ್ವಾಮಿಗಳವರು ತಮ್ಮ ಶಿಷ್ಯರ ಮೂಲಕ ಶುಭಾಶಂಸನಗಳನ್ನು ಅನುಗ್ರಹಿಸಿದ್ದರು. ಡಿ ವಿ ಜಿ ಯವರು : ನಮೋಽಸ್ತ್ವನಂತಾಯ ಸಹಸ್ರಮೂರ್ತಯೇ ಸಹಸ್ರಪಾದಾಕ್ಷಿಶಿರೋರುಬಾಹವೇ ಸಹಸ್ರನಾಮ್ನಾಯ ಪುರುಷಾಯ ಶಾಶ್ವತೇ ಸಹಸ್ರಕೋಟಿಯುಗಧಾರಿಣೇ ನಮಃ," ಎಂದು ಸಭೆಗೆ ವಂದಿಸಿ, ದೇಶದ ಸಮಸ್ಯೆಗಳನ್ನು ಸಂಧಾನ-ಸಂವಾದಗಳ ಮೂಲಕ ಬಗೆಹರಿಸಿಕೊಳ್ಳಬೇಕಾದ ಅವಶ್ಯಕತೆಯನ್ನು ವಿವರಿಸಿದರು. ಬೆಳಗಿನ ಸಮಾರಂಭ ಅವಿಸ್ಮರಣೀಯವಾಗಿತ್ತು. ಶಿವಮೊಗ್ಗೆಯಿಂದ, ಮೈಸೂರಿನಿಂದ ಮತ್ತು ಇತರೆಡೆಗಳಿಂದ ಅನೇಕ ಜನ ಸಭೆಗೆ ಬಂದು, ಡಿ ವಿ ಜಿ ಯವರು ಸಂಪಾದಿಸಿಕೊಂಡಿದ್ದ ವಿಶ್ವಾಸ ಎಂಥಾದ್ದು ಎಂಬುದನ್ನು ತೋರಿಸಿದರು. ಸಂಜೆ ಎಂ. ಎಸ್. ಸುಬ್ಬುಲಕ್ಷ್ಮಿಯವರ ಘನವಾದ ಸಂಗೀತ ಏರ್ಪಾಟಾಗಿತ್ತು.

ಬಂದಿದ್ದ ಹಣದಲ್ಲಿ ಸಂಸ್ಥೆಯ ಕೆಲಸಕ್ಕಾಗಿ ಓಡಾಡಲು ಡಿ ವಿ ಜಿ ಒಂದು 'ಕಾರ'ನ್ನು ತೆಗೆದುಕೊಳ್ಳಬಹುದಲ್ಲ, ಎಂಬ ಎಂ. ವಿ. ಕೃಷ್ಣಮೂರ್ತಿಗಳವರ ಸಲಹೆಯನ್ನು ಕೂಡಲೆ ತಿರಸ್ಕರಿಸಿದರು ಡಿ ವಿ ಜಿ. "ನನಗೆ ಜಟಕಾಗಾಡಿ ಇದೆ, ಆಟೋರಿಕ್ಷಾ ಇದೆ. ನನಗೆ ಕಾರ್ ಏಕೆ" ಎಂದುಬಿಟ್ಟರು.

ಆಗಸ್ಟ 1970ರಲ್ಲಿ ಡಿ ವಿ ಜಿ ಯವರು ವಾಸವಾಗಿದ್ದ ನಾಗಸಂದ್ರ ರಸ್ತೆಯನ್ನು ಡಾ|| ಡಿ ವಿ ಗುಂಡಪ್ಪ ರಸ್ತೆಯೆಂದು ಕರೆಯಲು ಬೆಂಗಳೂರು ನಗರ ಕಾರ್ಪೊರೇಷನ್ ನಿರ್ಧರಿಸಿತು. ಇದರಲ್ಲಿ ಮುಖ್ಯಪಾತ್ರ ವಹಿಸಿದ್ದವರು ಆಡಳಿತಾಧಿಕಾರಿಗಳಾಗಿದ್ದ ಎಂ.ಎಸ್. ಶಂಕರರಾಯರು. ಡಿ ವಿ ಜಿ ಯವರು ಇದಕ್ಕೆ ಬಡಪೆಟ್ಟಿಗೆ ಒಪ್ಪಲಿಲ್ಲ. ಆದರೇನು, ಜನದ ನಿರ್ಧಾರವೇ ಗೆದ್ದಿತು.

ಡಿಸೆಂಬರ್ 1970ರಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವದಲ್ಲಿ ಭಾಗವಹಿಸಿದ್ದರು ಡಿ ವಿ ಜಿ. ಕನ್ನಡದ ಹೆಸರಿನಲ್ಲಿ ಹುಟ್ಟಿರುವ ಜನೋತ್ಸಾಹವನ್ನು ಹದಕ್ಕೆ ತರುವುದು ಪರಿಷತ್ತಿನ ಕೆಲಸವೆಂದು ಹೇಳಿ ಅವರು, ಉತ್ಸಾಹದ ಸಂತಾನ ಉದ್ವೇಗ; ಉತ್ಸಾಹ ಇಲ್ಲದಿದ್ದರೆ ಜೀವನವೇ

ಇಲ್ಲ; ಆದರೆ 'ಉತ್ಸಾಹವಿರಬೇಕು, ಉದ್ವೇಗವಿರಬಾರದು' ಎಂಬ ಹಿತವಚನ ವನ್ನು ಹೇಳಿದರು. "ಗ್ರಂಥಗಳ ಸಂಖ್ಯೆ ಹೆಚ್ಚುತ್ತಿದೆ, ಸಾಹಿತ್ಯ ಬೆಳೆಯುತ್ತಿದೆ. ಆದರೆ ಪಾಂಡಿತ್ಯವಲ್ಲ" ಎಂದು ಹೇಳಿ ದಯವಿಟ್ಟು ಜನರಿಗೆ ತಿಳಿಯುವ ಹಾಗೆ ಬರೆಯಿರಿ ಎಂದು ಬೇಡಿಕೊಂಡರು. ಅವರನ್ನು ಸಭೆಗೆ ಬರಮಾಡಿಕೊಂಡದ್ದು ಪರಿಷದಧ್ಯಕ್ಷರಾದ ಜಿ. ನಾರಾಯಣರವರ ಒಳ್ಳೆಯತನ ಮತ್ತು ಅವರ ದಕ್ಷತೆ ಯಲ್ಲಿ ಡಿ ವಿ ಜಿ ಯವರಿಗಿದ್ದ ಮೆಚ್ಚಿಕೆ. ನಾರಾಯಣ ಅವರು ಡಿ ವಿ ಜಿ ಯವರನ್ನು ಬರಮಾಡಿಕೊಳ್ಳುತ್ತ "ಈ ಹಿರಿಯರು ಇಂದು ದಯಮಾಡಿಸಿರು ವುದು ಪರಿಷತ್ತಿನ ಈವರೆಗಿನ ಸೇವೆಯ ಸಂಕೇತ, ಮುಂದಿನ ಸಾಧನೆಗೆ ಶುಭ ಶಕುನ" ಎಂದರು.

ಫೆಬ್ರವರಿ 1972ರಲ್ಲಿ ಡಿ ವಿ ಜಿ ಅಖಿಲ ಕರ್ನಾಟಕ ಪ್ರಥಮ ಗಮಕ ಸಮ್ಮೇಳನವನ್ನು ಉದ್ಘಾಟಿಸಿದರು. ಆಗ ಮಾತನಾಡುತ್ತ "ಈಗ ನೀರಸ ಹೃದಯಗಳ ಸಂಖ್ಯೆಯೇ ಜಾಸ್ತಿಯಾಗುತ್ತಲಿದೆ. ಎಲ್ಲೆಲ್ಲಿ ನೋಡಿದರೂ ಅಶಾಂತಿ, ಕಲಹ, ಗಲಭೆ ಮೊದಲಾದುವುಗಳೇ ಕಂಡುಬರುತ್ತಲಿವೆ. ಆದ್ದರಿಂದ ಈಗ ಜಗತ್ತಿಗೆ ರಸಿಕವರ್ಗದ ಜನ ಬೇಕಾಗಿದೆ" ಎಂದು ಹೇಳಿ, ಬುದ್ಧಿಗೆ ಸಂಸ್ಕಾರ ನೀಡುವ ಕಾವ್ಯವು ಹೃದಯಕ್ಕೆ ಹಿತವನ್ನು ನೀಡುತ್ತದೆ. ಜನಮನ ವನ್ನು ಅರಳಿಸುವ ಕಾವ್ಯದ ಸ್ವಾದವನ್ನು ಒದಗಿಸುವ ಕಾರ್ಯವನ್ನು ಗಮಕಿಯು ಮಾಡಬೇಕಾಗುತ್ತದೆ. ಕವಿಯ ಅಭೀಷ್ಟೆಯನ್ನು ಗಮಕಿಯಾದವನು ಗುರುತಿಸಿ ಅದನ್ನು ಜನಮನಕ್ಕೆ ಮುಟ್ಟಿಸಬೇಕು. ಅರಗಿನಂತಿರುವ ಮನಸ್ಸು ಯಾವ ಎರಕ ಹೊಯ್ದರೂ ಅದರಂತೆ ಆಕಾರ ಪಡೆಯುತ್ತದೆ. ಆದ್ದರಿಂದ ಕಾವ್ಯವನ್ನು ಓದುವುದರಿಂದ, ಅದನ್ನು ಆಲಿಸುವುದರಿಂದ, ಮನಸ್ಸು ಸಂಸ್ಕಾರ ಹೊಂದಿ, ಸನ್ಮಾರ್ಗಪ್ರವೃತ್ತವಾಗುತ್ತದೆ. ಜನದ ಮನಕ್ಕೆ ಮುಟ್ಟಿದಾಗ ಮಾತ್ರ ಕಾವ್ಯದ ರಚನೆ ಸಾರ್ಥಕವಾಗುತ್ತದೆ ಎಂದರು. ಬಿ. ಎಸ್. ಪಾಂಡುರಂಗ ರಾಯರ "ಗಮಕ ಭಗೀರಥರು" ಎಂಬ ಗ್ರಂಥವನ್ನು ಅಂದು ಡಿ ವಿ ಜಿ ಬಿಡುಗಡೆ ಮಾಡಿದರು.

ಜುಲೈ 1972ರಲ್ಲಿ ಮಾಸ್ತಿಯವರಿಗೆ ಪುರಭವನದಲ್ಲಿ ಮಾಡಿದ ಸನ್ಮಾನ ಸಮಾರಂಭಕ್ಕೆ ಅಧ್ಯಕ್ಷತೆ ವಹಿಸಿದ್ದರು ಡಿ ವಿ ಜಿ.

1967 ರಲ್ಲಿ ಮೊದಲಬಾರಿಗೆ ಡಿ ವಿ ಜಿ ಯವರ ಆರೋಗ್ಯ ತುಂಬಾ ಕೆಟ್ಟಿತು. ಅದರಿಂದ ಚೇತರಿಸಿಕೊಂಡ ಮೇಲೆ ಪುನಃ 1973 ರಲ್ಲಿ ಅವರು ಏಳಲಾರದ ಸ್ಥಿತಿಯಲ್ಲಿ ಮಲಗಿಬಿಟ್ಟರು. "ಚಿರಂ ದುಃಖಸ್ಯ ಪಾಪಿಷ್ಠಂ"

(ದುಃಖವನ್ನು ಚಿರಕಾಲ ವಿಲಂಬಿಸುವುದು ಬಹಳ ಕೆಟ್ಟದ್ದು) ಎನ್ನುವುದು ರಾಮಾಯಣದಲ್ಲಿಯ ರಾಮವಾಕ್ಯ. ಆದ್ದರಿಂದ ಇದರ ವಿವರಣೆ ಬೇಡ.

ಆ ಸಮಯದಲ್ಲಿ ಮೊದಲು ಅವರನ್ನು ನೋಡಿಕೊಂಡ ವೈದ್ಯರು ವೆಂಕಟ ಸುಬ್ಬರಾಯರು, ಅನಂತರ ಅವರ ಅಳಿಯ ಎ. ನಾಗರಾಜ್ ಅವರು. ಅವರನ್ನು ತಂದೆಯಂತೆ ಯಾವಾಗಲೂ ನೋಡಿಕೊಳ್ಳುತ್ತಿದ್ದವರು ನೇತ್ರತಜ್ಞರಾದ ಹೆಚ್. ಕೃಷ್ಣಮೂರ್ತಿಯವರು. ಮನೆಯ ವೈದ್ಯರು ಕೆ.ಎಸ್. ಶ್ರೀನಿವಾಸ ಮೂರ್ತಿಯವರು.

ಹಾಸಿಗೆಯ ಮೇಲೆಯೇ ಮಲಗಿದ್ದ ಅವರ ಎಲ್ಲ ಅನುಕೂಲಗಳನ್ನೂ ನೋಡಿಕೊಳ್ಳುತ್ತಿದ್ದವರು ಅವರ ತಮ್ಮ ಡಿ. ವಿ. ರಾಮರಾಯರು, ಅವರ ಕುಟುಂಬ ಶಾರದಮ್ಮನವರು, ಮಗ ಚಂದ್ರಮೌಳಿ ಮತ್ತು ಸೇವಕ ಕರಪಣ್ಣ. ಇವರು ಆ ವರ್ಷಗಳಲ್ಲಿ ಮಾಡಿದ ಸೇವೆ ಅನುಪಮವಾದದ್ದು. ಡಿ ವಿ ಜಿ ಯವರನ್ನು ನೋಡಿಕೊಳ್ಳುವುದೆಂದರೆ ಒಂದು ಹುಲಿಯನ್ನು ಸಾಕಿದಂತೆಯೇ. ಆದರೂ ಇವರೆಲ್ಲ ತಮ್ಮ ಶಕ್ತಿಗೆ ಮೀರಿ ಅವರಿಗೆ ಬೇಕಾದ ಎಲ್ಲ ಕೆಲಸಗಳನ್ನೂ ಮಾಡಿಕೊಡುತ್ತಿದ್ದರು.

ಅವರ ಮನೆಯೇ ಒಂದು ಆಸ್ಥಾನವಾಗಿತ್ತು. ಬೆಂಗಳೂರಿಗೆ ಬಂದಾಗ ಎಂ. ಎಸ್. ಸುಬ್ಬಲಕ್ಷ್ಮಿಯವರು ಬಂದು ಒಂದೆರಡು ಹಾಡುಗಳನ್ನಾದರೂ ಹಾಡುತ್ತಿದ್ದರು. ಹಾಗೆಯೇ ವಿದ್ವಾನ್ ಎಂ. ಡಿ. ರಾಮನಾಥನ್ ಅವರೂ ಬರುತ್ತಿದ್ದರು. ಬಿ. ವಿ .ಕೆ. ಶಾಸ್ತ್ರಿಯವರು ಅಂತಃಪುರಗೀತೆಯ ಗಾನವನ್ನು ಮದರಾಸು ಮ್ಯೂಸಿಕ್ ಅಕಾಡಮಿಯಲ್ಲಿ ಏರ್ಪಡಿಸಿದ್ದರು. ಅದರ ಪುನರಾವೃತ್ತಿ ಡಿ ವಿ ಜಿ ಯವರ ಮನೆಯಲ್ಲೂ ನಡೆಯಿತು (6-2-75). ಹೆಚ್. ವಿ. ಕೃಷ್ಣ ಮೂರ್ತಿ, ಎ. ವೀರಭದ್ರಯ್ಯನವರ ಪಿಟೀಲು, ಎಂ. ವಿ. ಕೃಷ್ಣಸ್ವಾಮಿಯವರ ಸಾಕ್ಷ್ಯಚಿತ್ರಪ್ರದರ್ಶನ ಎಲ್ಲ ಆ ಸಮ್ಮುಖದಲ್ಲಿಯೇ.

ಡಿ ವಿ ಜಿ ಯವರಿಗೆ ಭಾರತ ಸರಕಾರದವರು ಜನವರಿ 1974ರಲ್ಲಿ ಪದ್ಮ ಭೂಷಣ ಪ್ರಶಸ್ತಿಯನ್ನು ಕೊಟ್ಟರು.

2-4-1974 ರಲ್ಲಿ ಕರ್ನಾಟಕ ಸರಕಾರದ ಮುಖ್ಯಮಂತ್ರಿ ದೇವರಾಜ ಅರಸು ಅವರ ಮತ್ತು ಮುಖ್ಯ ಕಾರ್ಯದರ್ಶಿ ಜಿ. ವಿ. ಕೆ. ರಾವ್ ಅವರ ಕೋರಿಕೆಯನ್ನು ಮನ್ನಿಸಿ ಡಿ ವಿ ಜಿ 'ಕರ್ನಾಟಕ ಪ್ರಗತಿ ಪಥ' ಎಂಬ ಗ್ರಂಥ ವನ್ನು ಬಿಡುಗಡೆ ಮಾಡಲು ಒಪ್ಪಿಕೊಂಡು, ಅದಕ್ಕಾಗಿ ವಿಧಾನ ಸೌಧಕ್ಕೆ ಹೋಗಿದ್ದರು.

ತಮ್ಮ ಆಪ್ತ ಸ್ನೇಹಿತರು ಬಿ.ಕೆ. ನಾರಾಯಣರಾಯರು, ಎಂ.ವಿ. ಕೃಷ್ಣ ಮೂರ್ತಿಯವರು, ಕೋದಂಡರಾಯರು (23.7.1975) ಮುಂತಾದವರು ಕಾಲ ವಾದದ್ದು ಅವರನ್ನು ಒಬ್ಬಂಟಿಯನ್ನಾಗಿ ಮಾಡಿತ್ತು. ಆದರೂ ಸಂಸ್ಥೆಯ ಕೆಲಸ ದಲ್ಲಿ 'ಹುಡುಗರ' ಸಹವಾಸದಲ್ಲಿ ಮನಸ್ಸಿನ ಬೇಸರವನ್ನು ಮರೆಯುತ್ತಿದ್ದರು.

ಆಗ ಪಿಡುಗಿನಂತೆ ಬಂದೆರಗಿತು 26.6.1975ರ ತುರ್ತುಪರಿಸ್ಥಿತಿಯ ಘೋಷಣೆ. ಸಾರ್ವಜನಿಕ ಪತ್ರಿಕೆಯ ಮುದ್ರಣಕಾರರಿಗೆ, ರಾಜಕೀಯ ವಿಷಯಗಳನ್ನು ಮುದ್ರಿಸುವ ಮೊದಲು 'ಸೆನ್ಸಾರ್' ಅವರ ಅಪ್ಪಣೆ ಪಡೆಯ ಬೇಕೆಂಬ ಹುಕುಂ ಬಂದಿತು. 'ಬಾಗಿಸದಿರಾತ್ಮವನು' ಎಂಬ ಧ್ಯೇಯದಿಂದ ಬಾಳಿದ ಡಿ ವಿ ಜಿ ಯವರಿಗೆ, ಮಹಾರಾಜರ-ದಿವಾನರ ಕಾಲದಲ್ಲೂ ನಿರ್ಭೀತಿ ಯಿಂದ ತಮ್ಮ ಅಭಿಪ್ರಾಯಗಳನ್ನು ಹೇಳುತ್ತಿದ್ದ ಡಿ ವಿ ಜಿ ಯವರಿಗೆ ಸ್ವತಂತ್ರ ಭಾರತದಲ್ಲಿ ಸ್ವಾತಂತ್ರ್ಯಕ್ಕೆ ಬಂದ ಆಪಾಯ ದೊಡ್ಡ ಆಘಾತವಾಯಿತು. 'ಸಾರ್ವಜನಿಕ' ಪತ್ರಿಕೆ "ವಾಕ್ಯಜ್ಞೋ ವಾಕ್ಯ ಕುಶಲ: ತತೋ ಮೌನ ಮುಪಾಗಮತ್" ಎಂದು ಸಂಪಾದಕೀಯ ಬರೆಯಿತು. ಮಿಕ್ಕ ಜಾಗ ಖಾಲಿ. "ನಮಗಿದ್ದದ್ದು ಬಾಯಿಯೊಂದೇ. ಈಗ ಅದನ್ನೇ ಕಟ್ಟಿಹಾಕಿ ಬಿಟ್ಟರಲ್ಲಾ! ದೇಶದ ಸ್ಥಿತಿ ಹೀಗಾಯಿತಲ್ಲಾ!" ಎಂಬ ಚಿಂತೆ ಅವರನ್ನಾವರಿಸಿತು. ಮುದ್ರಣ ಶಾಲೆಗೆ ಪೋಲಿಸರು ಬಂದಿದ್ದರೆಂಬ ವರ್ತಮಾನವೂ ಬಂತು.

ಕಂಚಿಯ ಹಿರಿಯ ಸ್ವಾಮಿಗಳಾದ ಚಂದ್ರಶೇಖರೇಂದ್ರ ಸರಸ್ವತೀ ಸ್ವಾಮಿಗಳ 80 ನೆಯ ಹುಟ್ಟುಹಬ್ಬದ ಸಂದರ್ಭದಲ್ಲಿ ಅವರ ಭಕ್ತರೊಬ್ಬರು ಒಂದು ದತ್ತಿಯನ್ನು ಕೊಟ್ಟು, ಅದರ ಆಶ್ರಯದಲ್ಲಿ ವರ್ಷಕ್ಕೊಂದು ಬಾರಿ ಅದ್ವೈತ ಸಿದ್ಧಾಂತವು ಜೀವನಕ್ಕೆ ಅನ್ವಯವಾಗುವ ಬಗೆಗೆ ಉಪನ್ಯಾಸವನ್ನು ಏರ್ಪಡಿಸಬೇಕೆಂದು ಏರ್ಪಾಟು ಮಾಡಿದ್ದರು. ಹಿರಿಯ ಸ್ವಾಮಿಗಳ ಸೂಚ ನೆಯ ಮೇರೆಗೆ ಮದರಾಸಿನ ವಕೀಲರಾದ ಟಿ. ವಿ. ವಿಶ್ವನಾಥ ಅಯ್ಯರ್ ಅವರೂ ಹಿಂದೂ ಪತ್ರಿಕೆಯ ಎನ್. ರಘುನಾಥ ಅಯ್ಯರ್ ಅವರೂ ಡಿ ವಿ ಜಿ ಯವರನ್ನು ಕಂಡು ಈ ದತ್ತಿಯ ಮೊದಲನೆಯ ಉಪನ್ಯಾಸವನ್ನು ಮಾಡ ಬೇಕೆಂದು ಪ್ರಾರ್ಥಿಸಿದರು. ತುಂಬ ಅನಾರೋಗ್ಯದಲ್ಲಿದ್ದರೂ ಸ್ವಾಮಿಗಳ ವಿಷಯದಲ್ಲಿ ತಮಗಿದ್ದ ಭಕ್ತ್ಯಭಿಮಾನಗಳ ಕಾರಣದಿಂದ ಡಿ ವಿ ಜಿ ಒಪ್ಪಿ ಕೊಂಡು Advaita: Faith and Practice (ಅದ್ವೈತ ತತ್ತ್ವ ಮತ್ತು ಅನುಷ್ಠಾನ) ಎಂಬ ಉಪನ್ಯಾಸವನ್ನು ತಯಾರಿಸಿದರು. ವೈದ್ಯರು ಬೇಡ ವೆಂದರೂ ಆ ಉಪನ್ಯಾಸವನ್ನು ಕೊಡಲು ಮದರಾಸಿಗೂ ಹೊರಡಲು ಅನು

ವಾಗಿದ್ದರು. ಆದರೆ ಅವರ ಇಚ್ಛೆ ಈಡೇರಲಿಲ್ಲ. ಆಷ್ಟರಲ್ಲಿಯೇ ಅವರು ದೇಹ ವನ್ನೇ ಬಿಟ್ಟರು.

ಡಿ ವಿ ಜಿ ಯವರ ಮೊದಲನೆಯ ಗ್ರಂಥ "Vedanta and Nationalism" ಎಂಬುದನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು. ಅವರ ಕೊನೆಯ ಗ್ರಂಥವೂ ಸಹ ಅದ್ವೈತವನ್ನು ಕುರಿತದ್ದೇ ಎಂಬುದು ಕೇವಲ ಆಕಸ್ಮಿಕವಲ್ಲ ವೆನಿಸುತ್ತದೆ. ಅವರ ಜೀವನ ಅದ್ವೈತ ತತ್ತ್ವದ ಅನುಷ್ಠಾನದ ಉದಾಹರಣೆ. "ಜ್ಞಾನಿನಾ ಚರಿತುಂ ಶಕ್ಯಂ ಸಮ್ಯಗ್ರಾಜ್ಯಾದಿ ಲೌಕಿಕಂ" ಎಂಬ ವಿದ್ಯಾರಣ್ಯ ವಾಕ್ಯದ ವಿವರಣೆ ಅವರ ಜೀವನ.

ಅಕ್ಟೋಬರ್ ಎರಡು, 1975, ಸಂಜೆ ನಮ್ಮ ಸ್ನೇಹಿತರು ಸುಬ್ಬ ರಾಯರೂ ನಾನೂ ಅವರ ಮನೆಗೆ ಸಂಜೆ ಹೋದಾಗ ಅವರು ತಮ್ಮ ಗುರು ಗಳಾದ ವಿರೂಪಾಕ್ಷ ಶಾಸ್ತ್ರಿಗಳವರಿಗೆ ಪತ್ರವೊಂದನ್ನು ಬರೆಸಲು ಪ್ರಾರಂಭಿ ಸಿದರು. ಮಾತು ಸರಿಯಾಗಿ ಹೊರಡಲಿಲ್ಲ. ನಾವಿಬ್ಬರೂ, ಅವರು ಆ ದಿನ ವಿಶ್ರಾಂತಿ ತೆಗೆದುಕೊಳ್ಳಬೇಕೆಂದು ಹೇಳಿ ಹಿಂತಿರುಗಿದೆವು. ಅದೇ ನಾವು ಅವರೊಡನೆ ಮಾತನಾಡಿದ ಕೊನೆಯ ದಿನ. ಅಂದು ರಾತ್ರಿ ಪ್ರಜ್ಞೆ ತಪ್ಪಿತು. ಏಳನೆಯ ತಾರೀಖು ಬೆಳಗ್ಗೆ ಅವರು ಬ್ರಹ್ಮೀಭೂತರಾದರು.

ಸಮಾಚಾರವನ್ನು ಬೇರೆಯವರಿಂದ ಕೇಳಿದ, ರೇಡಿಯೋದಲ್ಲಿ ಕೇಳಿದ ಸಾವಿರಾರು ಜನ, ಅವರ ಮನೆಗೆ ಬಂದರು. ಅಂತ್ಯೇಷ್ಟಿಗಳನ್ನು ಸ್ವಾಮಿಯಿಂದ ಪುರೋಹಿತರಾದ ರಾಮಕೃಷ್ಣ ಶಾಸ್ತ್ರಿಗಳು ಮಾಡಿಸಿದರು.

ಎಲ್ಲರಿಗಮೀಗ ನಮೋ—ಬಂಧುಗಳೆ, ಭಾಗಿಗಳೆ ।
ಉಲ್ಲಾಸವಿತ್ತವರೆ, ಮನವ ತೊಳೆದವರೆ ॥
ಟೊಳ್ಳು ಜಗ, ಸಾಕು ಬಾಳ್,—ಎನಿಸಿ ಗುರುವಾದವರೆ ।
ಕೊಳ್ಳಿರೀ ನಮನವನು—ಮಂಕುತಿಮ್ಮ ॥

"ತಸ್ಯೈವಂ ವಿದುಷೋ ಯಜ್ಞಃ" ಎಂದು ಮೊದಲಾಗುವ ಶ್ರುತಿವಾಕ್ಯ ದಂತೆ, ಜೀವನವನ್ನು ಒಂದು ಯಜ್ಞದಂತೆ ನಡಸಿದವರು ಡಿ ವಿ ಜಿ. ಅವರಿಗೆ ಮರಣವೇ ಅವಭೃತಸ್ನಾನವಾಯಿತು.

ತ್ರ್ಯಂಬಕಂ ಯಜಾಮಹೇ ಸುಗಂಧಿಂ ಪುಷ್ಟಿವರ್ಧನಂ ।
ಉರ್ವಾರುಕಮಿವ ಬಂಧನಾನ್ಮೃತ್ಯೋರ್ಮುಕ್ಷೀಯಮಾಮೃತಾತ್ ॥

ಎಂಬ ಸ್ತೋತ್ರದಂತೆ ಕಳಿತ ಸೋರೆಕಾಯಿ, ಬಳ್ಳಿಯಿಂದ ಕಳಚಿಕೊಳ್ಳು ವಂತೆ, ಪಕ್ವವಾಗಿದ್ದ ಅವರ ಜೀವ ಭೌತ ಶರೀರದಿಂದ ಕಳಚಿಕೊಂಡು

ಬ್ರಹ್ಮದಲ್ಲಿ ಸೇರಿಹೋಯಿತು.

ವೇದಾಂತವಿಜ್ಞಾನ ಸುನಿಶ್ಚಿತಾರ್ಥಾಃ
ಸಂನ್ಯಾಸಯೋಗಾದ್ಯತಯಃ ಶುದ್ಧಸತ್ತ್ವಾಃ ।
ತೇ ಬ್ರಹ್ಮಲೋಕೇಷು ಪರಾಂತಕಾಲೇ
ಪರಾಮೃತಾಃ ಪರಿಮುಚ್ಯಂತಿ ಸರ್ವೇ ॥

ಗೌಂಡ್ಯ ದರ್ಶನ

ಯಾವುದಾದರೂ ಒಂದು ವಿಷಯವನ್ನು ಕುರಿತು ತಮ್ಮದೇ ಆದ ವ್ಯಾಖ್ಯಾನವನ್ನು ಹೇಳಿದಾಗ, ಅದನ್ನು ಕುರಿತು ಕೇಳಿದವರು ಇದು ಯಾವ ಗ್ರಂಥ ದಲ್ಲಿದೆಯೆಂದು ಪ್ರಶ್ನಿಸಿದಾಗ, ಡಿ ವಿ ಜಿ, "ಅದು ಗೌಂಡ್ಯ ವ್ಯಾಖ್ಯಾನದಲ್ಲಿದೆ" ಎನ್ನುತ್ತಿದ್ದದ್ದುಂಟು. ಅಂಥ ವ್ಯಾಖ್ಯಾನ ತಮ್ಮ ಕಣ್ಣಿಗೆ ಬಿದ್ದಿಲ್ಲವೆಂದು ಅವರು ಅಜ್ಞಾನವನ್ನು ಪ್ರದರ್ಶಿಸಿದಾಗ, ಡಿ ವಿ ಜಿ "ಗುಂಡಸ್ಯ ಇದಂ ಗೌಂಡ್ಯಂ, ಇದು ಗುಂಡನ ವ್ಯಾಖ್ಯಾನ" ಎಂದು ವಿವರಣೆ ನೀಡುತ್ತಿದ್ದರು. ಹೀಗೆ ಗುಂಡಪ್ಪನವರ ದರ್ಶನ ಗೌಂಡ್ಯ ದರ್ಶನ.

ನಂಬಿಕೆಯಿಂದಲೂ, ವಿಚಾರದಿಂದಲೂ, ಜೀವನದಲ್ಲಿ ಅನುಸರಣೆ ಯಿಂದಲೂ ಡಿ ವಿ ಜಿ ಅದ್ವೈತಿಗಳು. ಅವರ ಅದ್ವೈತ ಅವರನ್ನು ಲೋಕದಿಂದ ದೂರಮಾಡಲಿಲ್ಲ. ಲೋಕಜೀವನ ಅದ್ವೈತಾನುಭವಕ್ಕೆ ಒಂದು ಮಾರ್ಗ ವಾಗಿ ಕಂಡಿತು ಡಿ ವಿ ಜಿ ಯವರಿಗೆ. ವೈಯಕ್ತಿಕ ಜೀವನ, ಸಮಾಜ ಜೀವನ, ರಾಜ್ಯಜೀವನ, ಇವುಗಳ ಕರ್ತವ್ಯಗಳು; ಶೃಂಗಾರ, ಸ್ನೇಹ, ಸುಖದುಃಖಗಳು— ಎಲ್ಲವೂ ಅದ್ವೈತಾನುಭವಕ್ಕೆ ಬೇಕಾದ ಅಂತರಂಗ ಸಿದ್ಧತೆಯನ್ನು ಒದಗಿಸು ತ್ತವೆಯೆಂದು ಅವರು ನಂಬಿದ್ದರು.

ಮನಸು ಬೆಳೆಯಲಿ ಭುಜಿಸಿ ನೂರು ನೂರನುಭವವ ।
ಹೊನಲು ನೂರೀಬಾಳ ಕಡಲನುಬ್ಬಿಸಲಿ ॥
ತನುಬಂಧ ಕಳಚಿ ಜೀವವಖಂಡಚೇತನದ ।
ಕುಣಿತದಲಿ ಕೂಡಿರಲಿ—ಮಂಕುತಿಮ್ಮ ॥

ಆದ್ದರಿಂದ :

ಇಂದ್ರಿಯಗಳೊಳು ಬಾಳಿ ಜೀವ ಪಕ್ವಂಗೊಳ್ಳ- ।
ಲಿಂದ್ರಿಯಂಗಳ ಮೀರಿ ಮೇಲೇರಿ ಜಾಣಿಂ-॥
ದಿಂದ್ರಿಯಂಗಳನಾಳಿ ಲೋಕವಂ ಸಂತಯಿಪ ।
ಬಂಧು ಜೀವನ್ಮುಕ್ತ—ಮಂಕುತಿಮ್ಮ ॥

ಇದಕ್ಕೆ ಅವರು ತೋರಿಸಿದ ದಾರಿ ಇದು :

ಮೊಳೆವ ಸಸಿಯೊಳು ನಾನು, ತೊಳಗುವಿನನೊಳು ನಾನು ।
ಬೆಳೆವ ಶಿಶುವೊಳು ನಾನು, ಕೆಳೆನೋಟ ನಾನು ॥
ಕಳಕಳಿಸುವೆಲ್ಲಮುಂ ನಾನೆಂದು ಭಾವಿಸುತೆ ।
ಒಳಗೂಡು ವಿಶ್ವದಲಿ—ಮಂಕುತಿಮ್ಮ ॥

ಅದ್ವೈತಾನುಭವಕ್ಕೆ ಹೀಗೆ ಮಾರ್ಗವನ್ನು ತೋರಿಸಿದ್ದಾರೆ ಡಿ ವಿ ಜಿ.

ಅದ್ವೈತ ಸಿದ್ಧಾಂತದ ಚರಿತ್ರೆಯಲ್ಲಿ ಡಿ ವಿ ಜಿ ಯವರಿಗೂ ಒಂದು ಸ್ಥಾನ ದೊರಕಬೇಕು. ವಿಜ್ಞಾನ, ಸಾಹಿತ್ಯ, ರಾಜಕೀಯ ಇವುಗಳನ್ನು ಸೇರಿಸಿ ಜೀವನಕ್ಕೂ ಅದ್ವೈತ ತತ್ತ್ವ ದೃಷ್ಟಿಯ ಪ್ರಾಪ್ತಿಗೂ ಒಂದು ಸೇತುವೆಯನ್ನು ನಿರ್ಮಿಸಿದ ಹಿರಿಮೆ ಅವರಿಗೆ ಸಲ್ಲುತ್ತದೆ. ಅವರ ದರ್ಶನ ಬರಿಯ 'ಥಿಯೋರಿ' ಯಲ್ಲ. ಅದು ಬಾಳನ್ನು ಹಸನಾಗಿಸುವ, ಬಾಳಿಗೆ ಒಂದು ಗುರಿಯನ್ನೂ ನಂಬಿಕೆ ಯನ್ನೂ ಕೊಡುವ ಅದ್ವೈತ ತತ್ತ್ವ ದರ್ಶನಕ್ಕೆ ನಮ್ಮ ಅಂತರಂಗವನ್ನು ಸಿದ್ಧ ಪಡಿಸಿಕೊಳ್ಳಲು ಹೇಳಿಕೊಡುವ ಒಂದು ಮಾರ್ಗ.

ಅದರ ಮುಖ್ಯ ಅಂಶಗಳನ್ನು ಹೀಗೆ ಗುರುತಿಸಬಹುದು.

ಜೀವ ತಾಂ ಬ್ರಹ್ಮೈಶ್ವರ್ಯವದ ಗೌರವಿಸು ।
ಜೀವದಶೆಯುಚ್ಚ ನೀಚಗಳ ನೀನರಿತು ॥
ಜೀವಿತೋದ್ಧೃತಿಯನಾದನಿತಾಗಿಸೆಲ್ಲರ್ಗೆ ।
ಜೀವಸಾಹ್ಯವೆ ಧರ್ಮ—ಮರುಳ ಮುನಿಯ ॥

ಜಗತ್ತು ಸುಳ್ಳಲ್ಲ, "ಜಗನ್ಮಿಥ್ಯಾ" ಸಿದ್ಧಾಂತವು ಬ್ರಹ್ಮದೃಷ್ಟಿಯಿಂದ ಒಪ್ಪಿಗೆ ಪಡೆಯಬಹುದೇ ಹೊರತು ಜೀವನ ದೃಷ್ಟಿಯಿಂದಲ್ಲ. ಜೀವದ ಪಾಲಿಗೆ ಜಗತ್ತು ಸತ್ಯ. ಮನುಷ್ಯನ ಧರ್ಮಾಧರ್ಮಗಳಿಗೂ ಪುಣ್ಯಾಪಾಪ ಗಳಿಗೂ ಅವಕಾಶಗಳನ್ನೂ ಕಾರಣಗಳನ್ನೂ ಸಾಧನಗಳನ್ನೂ ಒದಗಿಸುವುದು ಜಗತ್ತು. ನಮ್ಮ ಜೀವನವನ್ನು ಕೆಣಕಿ, ಕಲಕಿ, ಏರ್ಪಡಿಸಿ, ಮಾರ್ಪಡಿಸಿ, ನಮಗೆ ಶಾಂತಿಯನ್ನೋ ಅಶಾಂತಿಯನ್ನೋ ತರುತ್ತಿರುವುವು ಈ ಲೋಕದ ಸೌಂದರ್ಯ ಸೌಭಾಗ್ಯಗಳು. ಈ ಸೌಂದರ್ಯಗಳು ಆಶೆಗಳನ್ನು ಹುಟ್ಟಿಸಿ, ಆವೇಶಗಳನ್ನು ತಾಳಿಸಿ, ಕ್ಷಣಕ್ಷಣದಲ್ಲಿಯೂ ನಮ್ಮ ಜೀವಕ್ಕೆ ಸಂಸ್ಕಾರಗಳನ್ನು ಮೂಡಿಸುತ್ತಿರುತ್ತವೆ. ಈ ಆಶೆ ಆವೇಶಗಳನ್ನು ಭ್ರಾಂತಿಯೆಂದು ಕರೆವವರು ಕರೆಯಲಿ; ಮೋಹವೆಂದು ಕರೆವವರು ಕರೆಯಲಿ. ಈ ಬಗೆಯ ಹೆಸರುಗಳನ್ನು ಅವಕ್ಕೆ ಕೊಡುವುದರಿಂದ ಅವುಗಳ ಬಲವನ್ನೇನೂ ಕುಗ್ಗಿಸಲಾರೆವು.

ದೇವರೆನುವೊಂದು ಬೇರಿರ್ಪೊಡೇನಿರದೊಡೇನ್ ।
ಜೀವನವೆ ದೈವಮಹಿಮೆಗೆ ಸಾಕ್ಷಿಯಲ್ತೆ ? ॥
ತೀವಿ ಸೌಂದರ್ಯ ಗಾಂಭೀರ್ಯಂಗಳಿಂ ಬಾಳಿ ।
ದೇವ ಸಮನೆನಿಸು ನೀಂ—ಮರುಳ ಮುನಿಯ ॥

ಜೀವನವೇ ನಮಗೆ ದೇವರು ಇರುವನೆಂಬುದಕ್ಕೆ ಸಾಕ್ಷಿ. ಜೀವನವನ್ನು ದೈವ ಮಹಿಮೆಯ ಪ್ರತ್ಯಕ್ಷರೂಪವೆಂದು ನಾವು ಗೌರವಿಸಬೇಕಾದದ್ದು. ಜೀವನವನ್ನು ಅಂದಗೊಳಿಸುವುದೇ ನಾವು ದೇವರಿಗೆ ಸಲ್ಲಿಸುವ ಕೃತಜ್ಞತೆ. ಜೀವನ ಸಮೃದ್ಧಿ, ಜೀವನ ಸಂಸ್ಕಾರ, ಜೀವನ ಸೌಂದರ್ಯ—ಇದೇ ವೇದ ವೇದಾಂತಗಳ ಸಾರ.

ಮನುಷ್ಯನ ಅನುಭವಕ್ಕೂ, ಊಹೆಗೂ, ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಗೋಚರಿಸುವ ವಸ್ತುಗಳಲ್ಲೆಲ್ಲ ಚಕ್ರವರ್ತಿಯಂತೆ ಇರತಕ್ಕದ್ದು ಆತ್ಮವಸ್ತು. ಅದರ ಸಂಪೂರ್ಣ ದರ್ಶನವೇ ಮಾನವನಿಗಾಗುವ ಉತ್ತಮೋತ್ತಮ ಸಿದ್ಧಿ. ಆ ದರ್ಶನಕ್ಕಾಗಿ ಮಾಡುವ ಯಾತ್ರೆಯಿಂದಲೇ ಅವನ ಜೀವನ ಸಾರ್ಥಕವಾಗುತ್ತದೆ. ಆ ಆತ್ಮಸ್ವರೂಪ ದರ್ಶನವು ಬರಿಯ ಬುದ್ಧಿಯ ಕ್ರಿಯೆಯಲ್ಲ. ಅದು ಬುದ್ಧಿಯ ಬೆಳಕಿನಿಂದಲೂ ಹೃದಯ ರಸದಿಂದಲೂ ಉಂಟಾಗುವ ಒಂದು ಅಂತರ್ದೃಷ್ಟಿ.

ಹೃದಯವೊಂದರಿನಲ್ತು ಮೇಧೆಯೊಂದರಿನಲ್ತು ।
ವಿದಿತವಪ್ಪುದು ನಿನಗೆ ತಾರಕದ ತತ್ತ್ವಂ ॥
ಹದದಿನಾ ಸಾಧನೆಗಳೆರಡುಮೊಂದಾಗೆ ಬೆಳ- ।
ಕುದಿಸುವುದು ನಿನ್ನೊಳಗೆ—ಮರುಳ ಮುನಿಯ ॥

ಬುದ್ಧಿಯ ಬೆಳಕನ್ನು ಶಾಸ್ತ್ರವ್ಯಾಸಂಗದಿಂದ ಸಂಪಾದಿಸಬಹುದು. ಹೃದಯದ ಬೆಳಕನ್ನು ಲೋಕ ಜೀವ ಸಂಪರ್ಕದಿಂದ ಸಂಪಾದಿಸಬೇಕೇ ಹೊರತು ಮೂಗು ಹಿಡಿದು ಕೂರುವುದರಿಂದಲ್ಲ.

ನಿರ್ಮಮತೆಯಭ್ಯಾಸಕೆಂದು ಲೋಕದೊಳೆಲ್ಲ ।
ಕರ್ಮಗಳ ಗೆಯ್ವನೆ ಮುಮುಕ್ಷು, ಮಿಕ್ಕ ಜನ ॥
ಧರ್ಮ ಧರ್ಮವೆನುತ್ತೆ ಪೋಷಿಪರಹಂಮತಿಯ ।
ನಿರ್ಮಮತೆಯೇ ಮೋಕ್ಷ—ಮರುಳ ಮುನಿಯ ॥

ಲೋಕದ ಕಷ್ಟಗಳಲ್ಲಿ ಸಹಾನುಭೂತಿಯನ್ನು ಅಭ್ಯಾಸ ಮಾಡಬೇಕು.

ಸಣ್ಣಪುಟ್ಟ ಮಮತೆಗಳಿಗೂ ಸ್ವಾರ್ಥಲಾಭದ ಆಶೆಗೂ ಅವಕಾಶ ಕೊಡದಿರುವ ಯಾವುದಾದರೊಂದು ಸಾರ್ವಜನಿಕ ಕಾರ್ಯದಲ್ಲಿ ನಾವು ಸೇರಿಕೊಂಡು ಭಾಗ ವಹಿಸುವ ಅಭ್ಯಾಸ ಮಾಡಿಕೊಳ್ಳಬೇಕು.

ತತ್ತ್ವಸಾಕ್ಷಾತ್ಕಾರ ಚಿತ್ತಶುದ್ಧಿಯಿನಹುದು ।
ಚಿತ್ತಶೋಧನೆ ಮತಿಚಮತ್ಕಾರವಲ್ಲ ॥
ಬಿತ್ತರದ ಲೋಕಪರಿಪಾಕದಿಂ ಸತ್ಕರ್ಮ ।
ಸಕ್ತಿಯಿಂ ಶುದ್ಧತೆಯೊ—ಮಂಕುತಿಮ್ಮ ॥

ಹೀಗೆ ನಮ್ಮ ಸಣ್ಣತನವನ್ನು ಸವೆಯಿಸಿ ಆತ್ಮವಿಸ್ತಾರ ಮಾಡಿಕೊಳ್ಳ ಬೇಕು.

ನಿತ್ಯಗೃಹಕೃತ್ಯದ ಧಾವಂತದಿಂದ–ಅಶನವಸನ ಸಂಪಾದನೆಯ ಒದ್ದಾಟ ದಿಂದ–ನಾನು, ನನ್ನದುಗಳ ನಿತ್ಯಚಿಂತನೆಯಿಂದ–ದೂರವಾದ, ಬಹು ಜನೋಪ ಯೋಗಿಯಾದ, ಎಷ್ಟೇ ಸಣ್ಣದಾದರೂ ಪರಿಶುದ್ಧವಾದ, ಒಂದು ವ್ರತನಿಷ್ಠೆಯು ಯಾವಾತನನ್ನು ಬಿಡದೆ ಹಿಡಿದಿರುವುದೋ ಆತನೇ ಪರಮ ಧನ್ಯ. ಉತ್ತಮ ಧ್ಯೇಯವು ಜೀವನಕ್ಕೆ ಪಾವನಕರ ಮಾತ್ರವೇ ಅಲ್ಲ, ಪುಷ್ಟಿಕರವೂ ಪೂರ್ಣತಾ ಪ್ರದವೂ ಸಹ ಆಗುತ್ತದೆ. ಆದ್ದರಿಂದ ಒಂದು ಉದಾತ್ತವಾದ ಆದರ್ಶವು ಸರ್ವದಾ ನಮ್ಮ ಹೃದಯಾಂಗಣದಲ್ಲಿ ನಿಂತು ನಮ್ಮ ನಡವಳಿಕೆಯನ್ನು ಅಹಶ್ಶ ರಾತ್ರಿಶ್ಶ ತಿದ್ದುತ್ತಿರಬೇಕು.

ನಾನು ನಾನೇ ನಾನೆಸುತ್ತ ಕಿರಿಕೊಡದ ನೀರ್ ।
ಗಾನಗೈಯ್ಯುವುದು ಹೆಮ್ಮೆಯಿಂ ಕಡಲ ಮರೆತು ॥
ನೂನದಿಂದೆಲ್ಲವೆನುವಬ್ಧಿಯೊಳಗದನಿರಿಸೆ ।
ಮೌನವದು ಮಣ್ಕರಗಿ—ಮಂಕುತಿಮ್ಮ ॥

ಈ ಉದ್ದೇಶ ಎಲ್ಲರಿಗೂ ಒಮ್ಮೆಗೇ ತಿಳಿದುಬಿಡುತ್ತದೆ ಎಂದಲ್ಲ. ಆದರೆ ಗುರಿಯೊಂದು ಗೊತ್ತಾದರೆ ಜೀವ ದೃಢಪಡುತ್ತದೆ. ಆದರಿಂದ ಮನಸ್ಸಿಗೆ ನೆಮ್ಮದಿ. ಅಂಥಾ ಮನಸ್ಸು ಉದ್ದೇಶವನ್ನು ಸಾಧಿಸಿಕೊಳ್ಳಲು ಸಮರ್ಥ ವಾಗುತ್ತದೆ. ಹೀಗೆ ಜೀವನವು ಸಾರ್ಥಕವಾಗಬೇಕಾದರೆ ಮನುಷ್ಯನು ಮಾಡಿ ಕೊಳ್ಳಬೇಕಾದ ಸಿದ್ಧತೆಗಳಲ್ಲಿ ಮೊದಲನೆಯದು ಉದ್ದೇಶ ನಿಷ್ಕರ್ಷೆ. ನಿಷ್ಕರ್ಷೆ ಯಾದಮೇಲೆ ಕಣ್ಣನ್ನು ಒಂದು ಕ್ಷಣ ಎಡಕ್ಕೂ ಇನ್ನೊಂದು ಕ್ಷಣ ಬಲಕ್ಕೂ ತಿರುಗಿಸುತ್ತಿರಬಾರದು. ಕಿವಿಯನ್ನು ಈ ಕಡೆಯವರಿಗೂ ಆ ಕಡೆಯವರಿಗೂ

ಒತ್ತೆಯಿಡಬಾರದು.

ಗುರಿಯೊಂದು ಬೇಕು ಜಗದಡವಿಯಲಿ ಪಥ ಕಾಣೆ ।
ತಿರುತಿರುಗಿ ಬಳಬಳಲಿ ಪಾಳಾಗದಿರೆ ಬಾಳ್ ।
ಸ್ಥಿರಸತ್ಯವಿರಬೇಕು ಬಾಳ್ ಪ್ರದಕ್ಷಿಣವದಕೆ ।
ಅರಸು ನೀನದನುರದಿ—ಮರುಳ ಮುನಿಯ ॥

ಗುರಿ ಎಂಬುದು ಕ್ರಮಕ್ರಮವಾಗಿ ಅರಿವಿಗೆ ಬರತಕ್ಕದ್ದು. ನಾವು ಮನೆಯಲ್ಲಿರುವಾಗ ಬೆಟ್ಟದ ಪಾದ ಗುರಿ. ಆ ಪಾದವನ್ನು ಮುಟ್ಟಿದ ಮೇಲೆ ಶಿಖರ ಗುರಿ. ಶಿಖರಕ್ಕೇರಿದ ಮೇಲೆ ಅಲ್ಲಿ ಕಾಣುವ ಗುಡಿಯ ಗೋಪುರ ಗುರಿ. ಗೋಪುರ ದ್ವಾರ ಸೇರಿದಮೇಲೆ ಗರ್ಭಗೃಹ ಗುರಿ. ಅಲ್ಲಿ ಹೋದ ಮೇಲೆ ದೇವರ ದರ್ಶನ ಗುರಿ. ಹೀಗೆ ಗುರಿಯೆಂಬುದು ಒಂದು ಗುರಿಗಳ ಸಾಲು, ಗುರಿಗಳ ಸೋಪಾನ. ಒಂದು ಮೆಟ್ಟಲನ್ನೇರಿದ ಮೇಲೆ ಅದಕ್ಕಿಂತ ಮೇಲಿನದು ನಮ್ಮನ್ನು ಕರೆಯುತ್ತದೆ. ಅದೇ ಪ್ರಗತಿ. ಇದರಲ್ಲೆಲ್ಲ ಮೊದಲನೆಯ ಮೆಟ್ಟಲನ್ನು ಕಂಡುಕೊಳ್ಳುವುದೇ ದೊಡ್ಡದು. ಯಾವ ದಿಕ್ಕಿಗೆ ನಾವು ಮುಖ ತಿರುಗಿಸಬೇಕು—ಇದೇ ಮುಖ್ಯವಾದ ಪ್ರಶ್ನೆ.

ನಾವು, ನಮ್ಮ ಬುದ್ಧಿಯ ಬೆಳವಣಿಗೆ, ನಮ್ಮ ಇಂದಿನ ಸಂದರ್ಭ, ಇವುಗಳನ್ನು ಮನಸ್ಸಿನಲ್ಲಿರಿಸಿಕೊಂಡು ನಮ್ಮ ದಾರಿಯನ್ನು ನಾವೇ ಕಂಡುಕೊಳ್ಳಬೇಕು. ಅದೂ ಅಲ್ಲದೆ ಯಾವುದೋ ಒಂದೇ ವಾಕ್ಯದಲ್ಲಿ, ಒಂದೇ ಮಾರ್ಗದಿಂದ ಜೀವನವು ಸಾರ್ಥಕವಾಗುವ ದಾರಿಗಳೆಲ್ಲವನ್ನೂ ಕಂಡುಕೊಂಡು ಬಿಡಬಹುದು ಎಂದು ತಿಳಿಯುವುದು ಭ್ರಾಂತಿ. ಇದು ನಿರ್ಧಾರವಾಗುವುದು ಪ್ರತಿಯೊಬ್ಬನ ಮನೋವೃತ್ತಿಯಿಂದ, ಮನಸ್ಸಿನ ಒಲವಿನಿಂದ—ಇದೇ ತಾರತಮ್ಯ ವಿವೇಕ.

ಗುರಿ ಒಂದಿದೆ, ಅದನ್ನು ಸಾಧಿಸಬೇಕಾದದ್ದು ಹೇಗೆ ? ಮುಂತಾದ ವಿವರಗಳು ನಮಗೆ ತಿಳಿದು ಬರುವುದು ಮಹಾಕಾವ್ಯ ವ್ಯಾಸಂಗದಿಂದ, ಮತ್ತು ಸಾರ್ವಜನಿಕ ಕಾರ್ಯಾಸಕ್ತಿಯಿಂದ.

ಅದೂ ಅಲ್ಲದೆ ಈಗ ಬರುತ್ತಿರುವ ಹೊಸ ಪ್ರಜಾಧಿಕಾರದ ಪ್ರವಾಹವು ದೇಶೋಪದ್ರವಕಾರಿಯಾಗದೆ ಕಲ್ಯಾಣಕಾರಕವಾಗಬೇಕಾದರೆ ಪ್ರಜಾಪ್ರತಿನಿಧಿಗಳು ಮಾತ್ರವೇ ಅಲ್ಲ, ಅವರನ್ನಾರಿಸಿ ಆ ಅಧಿಕಾರ ಪಟ್ಟವನ್ನು ಕಟ್ಟುವ ಪ್ರಜಾಜನರೂ ಸಹ ನೀತಿ ಸೂಕ್ಷ್ಮದರ್ಶಿಗಳಾಗಿಯೂ ಉದಾತ್ತ ಹೃದಯ

ರಾಗಿಯೂ ಇರಬೇಕು. ಈ ಸುಸ್ಥಿತಿಯನ್ನುಂಟುಮಾಡಬಲ್ಲ ಶಕ್ತಿಯಿರುವುದು ಉತ್ತಮ ಸಾಹಿತ್ಯಕ್ಕೆ. ಕಲ್ಲೆದೆಯನ್ನು ಕರಗಿಸುವ ಅದ್ಭುತವೂ ಮಣ್ಣೆದೆಯನ್ನು ವಜ್ರವಾಗಿಸುವ ಅದ್ಭುತವೂ ಮಹಾಕಾವ್ಯದ ರಸಕ್ರಿಯೆ. ಈ ಕ್ರಿಯೆ ನಡೆದಲ್ಲದೆ ನಮ್ಮ ಸ್ವಭಾವಗಳು ಪರಿಷ್ಕೃತವಾಗುವ ಬಗೆ ತೋರುವುದಿಲ್ಲ. ಹೀಗೆ ಮಹಾಕಾವ್ಯ ವ್ಯಾಸಂಗ ಜೀವಸಾರ್ಥಕ್ಯ ಮಾರ್ಗವನ್ನು ತೋರಿಸುವುದಲ್ಲದೆ ನಮ್ಮ ರಾಜಕೀಯದ ಉತ್ತಮತೆಗೂ ಕಾರಣವಾಗಬಹುದು.

ಕುಟುಂಬ, ಕುಲ, ನಗರ, ರಾಜ್ಯ, ರಾಷ್ಟ್ರ, ವಿಶ್ವ—ಇವೆಲ್ಲವೂ ಆತ್ಮ ವಿಸ್ತರಣಾಭ್ಯಾಸಕ್ಕೆ ಒದಗಿ ಬರುವ ಕಾರ್ಯಕ್ಷೇತ್ರಗಳು, ನಮ್ಮ ಸಣ್ಣತನವನ್ನು ಸವೆಯಿಸಲು ಇರುವ ಉಪಕರಣಗಳು. ಆದ್ದರಿಂದ ಈ ಕಾರ್ಯಕ್ಷೇತ್ರಗಳಲ್ಲಿ ಕೆಲಸ ಮಾಡಬೇಕಾದದ್ದು ಪ್ರತಿಯೊಬ್ಬನಿಗೂ ಆಗಲೇ ಬೇಕಾದ ಸಂಸ್ಕಾರ.

ಗೃಹದಿ ರಾಷ್ಟ್ರದಿ ಸಮಾಜದಿ ಲೋಕಸಂಗತದಿ ।
ವಿಹಿತದ ಸ್ಥಾನದಿಂ ಸಹಜ ಗುಣಬಲದಿಂ- ॥
ದಿಹಪರಸಮನ್ವಯದೆ ಸರ್ವಹಿತಸಂಸ್ಥಿತಿಗೆ ।
ಸಹಕರಿಪುದಲೆ ಧರ್ಮ—ಮಂಕುತಿಮ್ಮ ॥

ಕೊಳದೊಳಲೆ ಬಳೆಯಾಗಿ ಸುಳಿಯಾಗಿ ಹರಹರಡಿ ।
ವಲಯ ವಲಯಗಳಾಗಿ ದಡವ ಸೋಕುವವೋಲ್ ॥
ಬಳೆಯಾಗಿ ನಿನ್ನ ಬಾಳ್ ವಲಯವಲಯಗಳಾಗಿ ।
ಬಲುಬಾಳನೊಳಗೊಳ್ಗೆ—ಮರುಳ ಮುನಿಯ ॥

ಮಮತೆಯಾ ಬಿಂದುವಲೆಯಲೆಯಾಗಿ ಹರಡುತ್ತೆ ।
ರಮಣಿ ಗೃಹ ಕುಲ ದೇಶ ಭೂವಲಯಗಳಲಿ ॥
ಕ್ರಮದೆ ಪರಿಯುತೆ ಕಡೆಗೆ ವಿಶ್ವಪ್ರಪಂಚದಲಿ ।
ವಿಮಲ ಸುಖರಸವಕ್ಕೆ—ಮರುಳ ಮುನಿಯ ॥

ನಾವು ಒಂದು ಕೊಳದ ದಡದ ಮೇಲೆ ನಿಂತು ನೀರಿನ ಮಧ್ಯಕ್ಕೆ ಒಂದು ಕಲ್ಲನ್ನೆಸೆದರೆ ಅಲ್ಲಿ ಅಲೆ ಹುಟ್ಟಿ ಬಳೆಬಳೆಯಾಗಿ ಹರಡಿ ದಡವನ್ನು ಮುಟ್ಟುತ್ತದೆಯಲ್ಲವೆ ? ನಮ್ಮ ಆತ್ಮವು ಹಾಗೆ ಕ್ರಮೇಣ ಅಲೆಗಳ ಸುತ್ತುಸುತ್ತುಗಳಾಗಿ ಉತ್ತರೋತ್ತರ ವಿಸ್ತಾರವಾಗಿ ಸಕಲ ಪ್ರಪಂಚವನ್ನೂ ಆವರಿಸಬೇಕು. ಮನೆ ಅಥವಾ ಕುಟುಂಬ, ಉದ್ಯೋಗ ಮಂಡಲಿ, ಊರು, ರಾಜ್ಯ, ಭಾರತ

ದೇಶ, ಮಾನವ ವರ್ಗ—ಹೀಗೆ ಏಳುಸುತ್ತಿನ ಮಲ್ಲಿಗೆಯಂತೆ ಅರಳಬೇಕು ಆತ್ಮ.

ಈ ಬಗೆಯಾದ ಲೋಕಜೀವನ ಸಹಭಾಗಿತೆ ಇಕ್ಕಟ್ಟುಗಳನ್ನೂ ಬಿಕ್ಕಟ್ಟುಗಳನ್ನೂ ತಂದು ಕೊಡುತ್ತದೆಯೆಂಬುದೇನೋ ನಿಜ. ಆದರೊಂದಿಗೆ ಭೋಗ ಲಾಭಗಳಲ್ಲಿ ಆಶೆಯನ್ನು ಮಿತಪಡಿಸಿಕೊಳ್ಳುವ ವಿವೇಕ, ಸಕಲ ಜನ ಸಹಾನುಭೂತಿ, ಜೀವನದಲ್ಲಿ ತಾನು ಹೇಗೆ ನಡೆದುಕೊಂಡರೆ ಜನ್ಮಸಾರ್ಥಕವಾದೀತು ಎಂಬುದರ ಚಿಂತನೆ ಹುಟ್ಟುತ್ತದೆ. ಹೀಗೆ ಲೋಕಸಂಪರ್ಕದಿಂದಲೇ ಅಂತರ್ದೃಷ್ಟಿಗೆ ಸಾಧಕವಾದ ಅಂತರಂಗ ಸಂಸ್ಕಾರ. ಇದರಿಂದಲೇ ಆತ್ಮವಿಕಸನ, ವಿಶ್ವವೈಭವದಲ್ಲಿ ಪಾಲುಗಾರಿಕೆ, ಬ್ರಹ್ಮವಿಲಾಸದಲ್ಲಿ ಸಹಕಾರ.

ಇವುಗಳ ಜೀವಿತರೂಪವೇ ಜೀವನೋತ್ಸಾಹ, ಪೌರುಷ ಪ್ರಯತ್ನ ಮತ್ತು ಲೋಕಸ್ನೇಹ. ಇದರ ಕಾರ್ಯರೂಪವೇ ಪ್ರಗತಿ, ವಿಜ್ಞಾನ ಮತ್ತು ಸೌಜನ್ಯ.

ಜೀವನ ಸೌಂದರ್ಯ ದರ್ಶನ ಮತ್ತು ಆತ್ಮವಿಸ್ತರಣ: ಇದೇ ಡಿ ವಿ ಜಿಯವರು ಜೀವಸಾರ್ಥಕ್ಯಕ್ಕೆ ತೋರಿಸುವ ದಾರಿ. ಇದೇ ಅವರು ಬಾಳಿನಲ್ಲಿ ಇಟ್ಟುಕೊಂಡಿದ್ದ ನಂಬಿಕೆ. ವ್ಯಕ್ತಿ ಮನುಷ್ಯನಲ್ಲಿ ಇದರ ಆಚರಣೆಯೇ ಅವರು ಕಂಡ ಸಂಸ್ಕೃತಿ. ಇದೇ ಅವರು ಉಪದೇಶಿಸಿದ ಜೀವನ ಧರ್ಮಯೋಗ.

ಡಿ ವಿ ಜಿ ನೆನಪು

ಡಿ ವಿ ಜಿ ಬ್ರಹ್ಮೀಭೂತರಾದಾಗ ಕನ್ನಡದ ಎಲ್ಲ ಪತ್ರಿಕೆಗಳೂ ತಮ್ಮ ಹಿರಿಯಣ್ಣನಿಗೆ ತಮ್ಮ ಶ್ರದ್ಧಾಂಜಲಿಯನ್ನು ಸಲ್ಲಿಸಿದವು. ಹೆಚ್ಚು ಕಡಿಮೆ ಎಲ್ಲ ಪತ್ರಿಕೆಗಳಲ್ಲೂ ಸಂಪಾದಕೀಯ ಲೇಖನಗಳೂ ವಿಶೇಷ ಲೇಖನಗಳೂ ಬಂದುವು.

'ಪ್ರಜಾವಾಣಿ' 'ಕನ್ನಡದ ದಿಗ್ಗಜ' ಎಂಬ ಸಂಪಾದಕೀಯ ಲೇಖನವನ್ನು ಬರೆಯಿತು. "ಪತ್ರಿಕೋದ್ಯಮದಿಂದ ಪಾರಮಾರ್ಥದ ವರೆಗೆ ಬದುಕಿನ ವಿವಿಧ ಕ್ಷೇತ್ರಗಳಲ್ಲಿ ಬಹುಮುಖ ಸಿದ್ಧಿಯನ್ನು ಗಳಿಸಿ, ಕನ್ನಡಿಗರ ಹೆಮ್ಮೆಗೆ ಕೋಡು ಮೂಡಿದಂತೆ, ಕನ್ನಡ ಸಾರಸ್ವತ ಲೋಕಕ್ಕೆ ಮಹಾದಿಗ್ಗಜದಂತೆ ವಿರಾಜ ಮಾನರಾಗಿದ್ದ ಡಿ ವಿ ಜಿ ಇನ್ನಿಲ್ಲ. ಅವರ ಆಸಕ್ತಿ ಅನೇಕ ಮುಖವಾದದ್ದು. ಅವರ ಪಾಂಡಿತ್ಯ ಎಲ್ಲೆಯಿಲ್ಲದ್ದು. ಸ್ವತಂತ್ರ ವಿಚಾರ, ಪ್ರಾಮಾಣಿಕತೆ, ನ್ಯಾಯೈಕ ದೃಷ್ಟಿ, ಜೀವನ ನಿಷ್ಠೆ, ಯುಕ್ತಾಯುಕ್ತ ವಿವೇಚನೆ—ಇಂಥ ಹಲವಾರು ವಿಶಿಷ್ಟ ಗುಣಗಳಿಗೆ ಸಾಕಾರ ಮೂರ್ತಿಯಂತಿದ್ದ ಡಿ ವಿ ಜಿ ಯವರು ಸಾರ್ವಜನಿಕ ಜೀವನದ ಸಮುನ್ನತ ಆದರ್ಶಗಳಿಗಾಗಿ ಕೊನೆಯ ತನಕ ಹೋರಾಡಿದವರು. ಅಗ್ಗದ ಜನಾನುರಾಗಕ್ಕಾಗಿ ಅವರು ತಮ್ಮ ಅಭಿಪ್ರಾಯ ಗಳನ್ನು ರೂಪಿಸಿಕೊಂಡವರಲ್ಲ. ಅನೇಕರಿಗೆ ಅಪ್ರಿಯವೆನಿಸಿದರೂ ದೇಶಕ್ಕೆ ಪಥ್ಯವೆನಿಸಿದ್ದನ್ನೇ ಮತ್ತೆಮತ್ತೆ ಪ್ರತಿಪಾದಿಸಿದರು."

'ಕನ್ನಡಪ್ರಭ' 'ಡಿ ವಿ ಗುಂಡಪ್ಪ' ಎಂಬ ಸಂಪಾದಕೀಯವನ್ನು ಬರೆ ಯಿತು : "ಕವಿ, ವಿಮರ್ಶಕ, ಪತ್ರಿಕೋದ್ಯಮಿ, ಸಾರ್ವಜನಿಕ ಜೀವಿ, ಪಂಡಿತ, ತುಂಬು ಜೀವಿ—ಇತ್ಯಾದಿ ಪದಗಳನ್ನು ಬಳಸಿದರೆ ತಮ್ಮ ಇಹ ಜೀವನದಿಂದ ನೆನ್ನೆ ನಿವೃತ್ತರಾದ ಡಿ ವಿ ಗುಂಡಪ್ಪನವರ ವ್ಯಕ್ತಿತ್ವವನ್ನು ಮೂರ್ತೀಕರಿಸಿ ದಂತಾಗುವುದಿಲ್ಲ. ಅವರದು ಎಲ್ಲ ಕ್ಷೇತ್ರಗಳಲ್ಲೂ ಮೇರುಸದೃಶವಾದ ಸಿದ್ಧಿಯ ಚೈತನ್ಯ. ಪರಂಪರೆಯ ಪಾಂಡಿತ್ಯ ಅವರ ಕೈಯಲ್ಲಿ ಜೀವನ ಮಾರ್ಗದರ್ಶಕ ರಸಚೇತನ. ಜೀವನ ಅವಿಭಾಜ್ಯ ಎಂಬುದನ್ನು ಜೀರ್ಣಿಸಿಕೊಂಡು ಸಮಗ್ರ ಜೀವನವನ್ನು ಬಾಳಿದವರು. ಕವಿತ್ವ, ನಾಟಕ, ಗದ್ಯಬರಹ, ವಿಮರ್ಶೆ, ಆರ್ಷೇಯ ತತ್ತ್ವ, ಆಧುನಿಕ ತತ್ತ್ವ, ರಾಜಕಾರಣ, ಸಾರ್ವಜನಿಕ ಸೇವೆ,

ಹೀಗೆ ಯಾವುದೂ ಜೀವನಕ್ಕೆ ಹೊರತಲ್ಲ, ಜೀವನದ ಜೊತೆಗೆ ಬಾಳಬೇಕಾದ ಕ್ರಿಯೆಗಳು ಎಂಬುದನ್ನು ಪ್ರತ್ಯಕ್ಷಪಡಿಸಿದವರು. ಅಷ್ಟೇ ಮಟ್ಟಿಗೆ ಅವುಗಳಲ್ಲೆಲ್ಲ ಪರಮ ಸೃಷ್ಟಿಶಕ್ತಿಯನ್ನು ಮೂಡಿಸಿದವರು. ಪಂಡಿತರೆಂದರೆ ಮಹಾಪಂಡಿತರು, ತತ್ತ್ವವೆಂದರೆ ಅದರ ಸಾರಸಂಗ್ರಾಹಕರು. ಪತ್ರಿಕೋದ್ಯಮಿಯೆಂದರೆ ಆದರ್ಶ ಪತ್ರಿಕೋದ್ಯಮಿ. ರಾಜಕಾರಣಿಯೆಂದರೆ ಅದರ ಲೋಭದಿಂದ ಮುಕ್ತರಾದವರು. ಸಾರ್ವಜನಿಕಾಸಕ್ತರೆಂದರೆ ಅವರು ಕಟ್ಟಲು ನೆರವಾದ ಕನ್ನಡ ಸಾಹಿತ್ಯ ಪರಿಷತ್ತು, ಅವರೇ ಕಟ್ಟಿದ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಗಳ ಅಚ್ಚುಕಟ್ಟು, ಪ್ರೌಢಿಮೆ ಆದರ್ಶಗಳ ಮೂಲಕ ಆಸಕ್ತಿಯ ಶೃಂಗಕ್ಕೇರಿದವರು. ಅವರಿಗೆ ಭಗವದ್ಗೀತೆಯಷ್ಟೇ ಉಮರ್ ಖಯ್ಯಾಂ ಪ್ರಿಯ. ಶಾಕುಂತಲದಷ್ಟೇ ಮ್ಯಾಕ್‌ಬೆತ್ ಕೂಡ ಮೆಚ್ಚುಗೆಯದು. ವಿಶ್ವವಿಶಾಲ ದೃಷ್ಟಿಯ ಅವರಿಗೆ ಸತ್ವ, ಸತ್ಯ, ತತ್ತ್ವ, ಬೆಳಕು ಎಲ್ಲಿಯಾದರೂ ಒಪ್ಪಿಗೆಯದೇ, ಗ್ರಹಣೀಯವಾದುದೇ, ಅನುಷ್ಠಾನಯೋಗ್ಯವಾದುದೇ. ಡಿ ವಿ ಗುಂಡಪ್ಪನವರ ಸರ್ವತೋಮುಖವಾದ ಸರ್ವವ್ಯಾಪ್ತವಾದ ಸರ್ವಶ್ರೇಷ್ಠವಾದ ವ್ಯಕ್ತಿತ್ವವನ್ನು ಪೂರ್ಣವಾಗಿ ಮಂಡಿಸುವುದು ಯಾರಿಗೂ ಅಸಾಧ್ಯ."

'ಸಂಯುಕ್ತ ಕರ್ನಾಟಕ', 'ಮೇರು ಪುರುಷ' ಎಂಬ ಸಂಪಾದಕೀಯವನ್ನು ಬರೆಯಿತು. "ಅನೇಕಮಂದಿ ಉದ್ದಾಮ ಸಾಹಿತಿಗಳು ಆಗಿ ಹೋಗಿದ್ದಾರೆ. ಪ್ರಕಾಂಡ ಪಂಡಿತರೆನಿಸಿಕೊಂಡವರೂ ಇದ್ದರು, ಇದ್ದಾರೆ; ಶಾಸ್ತ್ರಜ್ಞರೂ ಇಲ್ಲದಿಲ್ಲ. ಸಂಸ್ಕೃತಿಯ ಆಳ ಅಗಲ ಬಲ್ಲವರೂ ಉಂಟು. ಇವೆಲ್ಲವೂ ಒಬ್ಬ ವ್ಯಕ್ತಿಯಲ್ಲೇ ಸಮಾವೇಶಗೊಳ್ಳುವುದು ಅತ್ಯಂತ ಅಪರೂಪ. ಕೀರ್ತಿಶೇಷ ದೇವನಹಳ್ಳಿಯ ವೆಂಕಟರಮಣಯ್ಯ ಗುಂಡಪ್ಪ ಅವರು ಅಂಥ ವಿರಳರಲ್ಲಿ ವಿರಳ ವಿಲಕ್ಷಣ ವ್ಯಕ್ತಿ.... ಡಿ ವಿ ಜಿ ಯವರ ವ್ಯಕ್ತಿತ್ವದ ಅತ್ಯುಜ್ವಲ ಅಂಶ ಸರಳತೆ. ತಲೆಮಾರುಗಳ ಅಂತರ ಅವರನ್ನು ಸೋಂಕಲಿಲ್ಲ. ಹಿರಿಕಿರಿಯರೆಂಬ ಭೇದ ಅವರ ಬಳಿ ಹಾಯಲಿಲ್ಲ. ಎಲ್ಲರಿಗೂ ಏಕಪ್ರಕಾರ ವಾತ್ಸಲ್ಯ. ಹತ್ತಿರಕ್ಕೆ ಬಂದವರ ಯೋಗಕ್ಷೇಮ ಕುರಿತು ಅತ್ಯಂತ ಅಕ್ಕರೆ. ದುಡುಕಿ ಓಡಬೇಕೆನ್ನುವವರಿಗೆ ಬುದ್ಧಿವಾದದ ಕಡಿವಾಣ, ಉತ್ಸಾಹಕ್ಕೆ ಉತ್ತೇಜನ, ವಿಚಾರಕ್ಕೆ ಪ್ರೋತ್ಸಾಹ. ಅನುಭವದ ಗಟ್ಟಿನೆಲದ ಮೇಲೆ ನಿಂತು ಎಲ್ಲ ವಿಷಯಗಳನ್ನೂ ಅವಲೋಕಿಸುತ್ತಿದ್ದರು. ಅವರಲ್ಲಿ ಸರಸತೆ ಮನೆಮಾಡಿಕೊಂಡಿತ್ತು. ವಿನೋದದಿಂದ ಹರಟೆಕೊಚ್ಚುವ ಪ್ರವೃತ್ತಿ ಅವರ ವ್ಯಕ್ತಿತ್ವದ ಸೂಜಿಗಲ್ಲಾಗಿತ್ತು."

'ಡೆಕ್ಕನ್ ಹೆರಾಲ್ಡ್' ಪತ್ರಿಕೆ ಸಂಪಾದಕೀಯವೊಂದನ್ನು ಬರೆದು (8-10-1975) :

"The passing away of D. V. Gundappa, popularly known as D. V. G., removes from our midst a rare personality of authentic greatness who devoted all his energies towards the betterment of public life. He was a genius.... In truth he was an epicurean, with a difference........."ಎಂದು ಬರೆಯಿತು.

ಹಿರಿಯ ಗಾಂಧಿವಾದಿಗಳಾದ ಕೋಲಾರದ ಕೆ. ಪಟ್ಟಾಭಿರಾಮನ್ ಅವರು: "ಬೆಂಗಳೂರಿನ ಮೆಜೆಸ್ಟಿಕ್ ಥಿಯೇಟರಿನಲ್ಲಿ ಡಿ ವಿ ಜಿ ಸಮಾವೇಶ ಗೊಳಿಸಿದ ಮೈಸೂರು ಪೀಪಲ್ಸ್ ಕನ್‌ವೆನ್‌ಷನ್ .. ಪ್ರಾಯಶಃ ದೇಶೀಯ ಸಂಸ್ಥಾನಗಳಲ್ಲಿ ಜನಜಾಗ್ರತಿಯನ್ನುಂಟುಮಾಡಿ ರಾಜಕೀಯಕ್ಕೆ ನಾಂದಿ ಹಾಡಿದ ಪ್ರಪ್ರಥಮ ಯತ್ನ ಆದಿರಬಹುದು....ಮೈಸೂರಿನಲ್ಲಿ ಕಾಂಗ್ರೆಸ್ ಚಳವಳಿಗೆ ನಾಂದಿ ಹಾಡಿದವರು ಡಿ ವಿ ಜಿ ಎನ್ನಬಹುದು. ಮೈಸೂರಿನಲ್ಲಿ ಜವಾಬ್ದಾರಿ ಸರಕಾರ ಸ್ಥಾಪನೆ ಬೇರೆ ಮಾರ್ಗಗಳಿಂದ ಆಗಿದ್ದರೂ ಡಿ ವಿ ಜಿ ಯವರ ಕೊಡುಗೆ ಕಾರ್ಯಭಾರವನ್ನೂ ಮರೆಯುವಂತಿಲ್ಲ. ಮೈಸೂರಿನ ಆಧುನಿಕ ರಾಜಕೀಯದ ಜನಕರೆಂದೇ ಡಿ ವಿ ಜಿ ಯವರನ್ನು ಪರಿಗಣಿಸಬೇಕು," ಎಂದಿದ್ದಾರೆ. (ಕೋಲಾರ ಪತ್ರಿಕೆ, ವಿಶೇಷ ಸಂಚಿಕೆ 1984.)

"ಪ್ರಜಾಮತ" ತನ್ನ ಸಂಪಾದಕೀಯದಲ್ಲಿ (19-10-1975) :

'ಗ್ರಂಥವ್ಯಾಸಂಗ, ಕಲೋಪಾಸನೆ, ರಸಿಕ ಸಹವಾಸ, ಲೋಕಮರ್ಯಾದಾ ಪರಿಶೀಲನೆಗಳಿಂದ ಅವರ ಅಂತರಂಗ ಪರಿಪಾಕಗೊಂಡಿತ್ತು. ಸತ್ಪ್ರಜೆಯಾಗಿ ಸದ್ವ್ಯಕ್ತಿಯಾಗಿ 'ಇಲ್ಲಿಯೂ ಸಂದು ಅಲ್ಲಿಯೂ ಸಲ್ಲುವಂತೆ' ಬದುಕಿನ ಒಂದು ಮಹಾಕೃತಿಯನ್ನೇ ಅವರು ನಮ್ಮೆದುರು ನಿಲ್ಲಿಸಿ ಹೋಗಿದ್ದಾರೆ. ಒಬ್ಬ ವ್ಯಕ್ತಿ ಒಂದು ಶಕ್ತಿಯಂತೆ ಒಂದು ಸಂಸ್ಥೆಯಂತೆ ಬೆಳೆದ ಸಾದೃಶ್ಯ ಡಿ ವಿ ಜಿ ಅವರಲ್ಲಿದೆ. ಕನ್ನಡ ಭಾಷೆಯನ್ನು ಅವರಂತೆ ಗಹನ ವಿಚಾರಗಳಿಗೆ ಪರಿಪುಷ್ಟವಾಗಿ ಬೆಳೆಸಿದವರೂ, ಕ್ಲ್ಯಾಸಿಕ್ ಎತ್ತರಗಳಿಗೆ ಕೊಂಡೊಯ್ದವರೂ ತೀರ ವಿರಳ. ಶಬ್ದ ತೇಜಸ್ಸು, ಶೈಲಿಯ ಓಜಸ್ಸು, ವಿಷಯ ಗೌರವ ಎಂಥವರನ್ನೂ ಸೂಜಿಗಲ್ಲಿನಂತೆ ಸೆಳೆಯುತ್ತದೆ. ಜೀವನ ಸಂದರ್ಭಗಳ ಯುಕ್ತಾಯುಕ್ತ ವಿವೇಚನೆ, ವಸ್ತುಗಳ ಮೌಲ್ಯ, ತಾರತಮ್ಯ ಗಣನೆ, ಪರೇಂಗಿತಜ್ಞಾನ, ಸರಸಾಭಿರುಚಿ, ಧರ್ಮ

ಚಿಂತನೆಯ ಜಾಗರೂಕತೆ ಇವೆಲ್ಲವುಗಳಿಂದ ಏರ್ಪಟ್ಟವರೇ ಡಿ ವಿ ಜಿ. ಬದುಕಿನ ಉದ್ದಕ್ಕೂ ಅವರು ನಡಸಿದ್ದೇ ಆತ್ಮವ್ಯವಸಾಯ'—ಎಂದಿತು.

'ಪ್ರಪಂಚ' ಪತ್ರಿಕೆಯಲ್ಲಿ ಪಾಟೀಲ ಪುಟ್ಟಪ್ಪನವರು : ಘನವಾದ ಅವರ ಜೀವನದಲ್ಲಿ ಸೂಕ್ಷ್ಮದರ್ಶಕ ಹಿಡಿದು ಹುಡುಕಿದರೂ ಕ್ಷುದ್ರ ಎನ್ನುವುದರ ಲವಲೇಶವೂ ಸಿಕ್ಕುತ್ತಿರಲಿಲ್ಲ. ಸಣ್ಣಮಾತು, ಸಣ್ಣರೀತಿಯನ್ನು ಅವರು ಯಾವುದರಲ್ಲಿಯೂ ತೋರಿಸಲಿಲ್ಲ. ತಪ್ಪು ಮಾಡಿದವರು ಯಾರೇ ಆಗಿದ್ದರೂ ಅವರು ಅದನ್ನು ಸಹಿಸುತ್ತಿರಲಿಲ್ಲ. ಯಾವುದೋ ಮೂಲೆಯಲ್ಲಿ ಯಾವನಾದರೂ ಒಬ್ಬ ವ್ಯಕ್ತಿ ಅತ್ಯಲ್ಪ ಪ್ರತಿಭೆಯನ್ನು ತೋರಿಸಿದರೂ ಅವರು ಆತನ ಬೆಳವಣಿಗೆಯನ್ನು ಭಾರೀ ಆಸಕ್ತಿಯಿಂದ ಗಮನಿಸುತ್ತಿದ್ದರು. ಇಪ್ಪತ್ತೊಂದು ವರ್ಷಗಳ ಹಿಂದೆ ನಾನು ಪ್ರಪಂಚ ಪತ್ರಿಕೆ ಆರಂಭಿಸಿದಾಗ "ನೀವು ಜೀವ ಇರುವ ವಿದ್ಯುತ್ ತಂತಿಯಂತೆ ಇದ್ದೀರಿ. ನೀವು ಪ್ರತಿಯೊಂದನ್ನೂ ಬೆಳಗಿಸಬಲ್ಲಿರಿ" ಎಂದು ಬರೆದು ನನ್ನನ್ನು ಹರಸಿದ್ದರು" ಎಂದು ಬರೆದರು (19-10-1975).

ಕುಮುಟಾದ 'ಚುನಾವಣೆ' ಪತ್ರಿಕೆ (20-10-1975) ಸಂಪಾದಕೀಯವಾಗಿ "ಸಾರ್ವಜನಿಕ ಕಾರ್ಯಕರ್ತರು ಯಾವುದೇ ರೀತಿಯಿಂದ ಸಾರ್ವಜನಿಕ ಸೇವೆಯ ಬಗ್ಗೆ ಪ್ರತಿಫಲವಾಗಿ ಧನಾಪೇಕ್ಷೆ ತಳೆಯಬಾರದೆಂದೂ, ಅಂಥಾ ಅಪೇಕ್ಷೆ ಸಾರ್ವಜನಿಕ ಕಾರ್ಯವನ್ನು ನಿಃಸ್ಪೃಹತನದಿಂದ ಸಾಗಿಸಲು ಆತಂಕವಾಗುತ್ತದೆಂದೂ ಸಮಾಜಕ್ಕೆ ಪಾಠ ಹಾಕಿಕೊಟ್ಟು ಸಾರ್ವಜನಿಕರಿಗೆ ನೀತಿಪಾಠ ನಿರೂಪಿಸಿ ಅಮರ ಸೇವೆಗೈದಿದ್ದನ್ನು ಸ್ಮರಿಸಿಕೊಂಡಲ್ಲಿ ಗುಂಡಪ್ಪನವರ ನಿಧನದಿಂದ ರಾಷ್ಟ್ರಕ್ಕೆ ಉಂಟಾದ ತುಂಬಿ ಬರದ ನಷ್ಟದ ಕಲ್ಪನೆ ಬರಲೇಬೇಕು" ಎಂದು ಬರೆಯಿತು.

ಅಂಬಿಕಾತನಯ ದತ್ತರು "ಡೀವೀಜಿ" ಎಂಬ ಪದ್ಯವನ್ನೂ, ದೊಡ್ಡರಂಗೇಗೌಡರು 'ಡಿ ವಿ ಜಿ' ಎಂಬ ಕವನವನ್ನೂ ಬರೆದರು.

ಕುವೆಂಪು ಅವರು : "ಕನ್ನಡ ನಾಡಿನ ಸಾಹಿತ್ಯ ಗಗನದಲ್ಲಿ ನವೋದಯ ಉಷಃಕಾಲದ ದಿಗಂತದಲ್ಲಿ ಮೂಡಿದ ಮಹಾನಕ್ಷತ್ರ ಅಸ್ತಂಗತವಾಗಿದೆ. ಡಿ ವಿ ಜಿಯವರ ನಿಧನದಿಂದ ಒಬ್ಬ ಮಹಾನ್ ಸಾಹಿತಿ ಮಾತ್ರವಲ್ಲ ಒಬ್ಬ ಮಹಾನ್ ವ್ಯಕ್ತಿ ಕಣ್ಮರೆಯಾಗಿದ್ದಾರೆ. ನನ್ನ ಸಾಹಿತ್ಯ ಜೀವನದ ಪ್ರಾರಂಭದಲ್ಲಿ ಇಂಗ್ಲಿಷ್ ಕವಿಗಳಿಂದ ಪಡೆದ ಪ್ರಭಾವವನ್ನು ಬಿಟ್ಟರೆ ಪರಿಣಾಮಕಾರಿಯಾಗಿ ಪ್ರಭಾವ ಬೀರಿದ ಲೌಕಿಕ ವ್ಯಕ್ತಿಗಳೆಂದರೆ ನನ್ನ ವಿದ್ಯಾಗುರುಗಳ ಹೊರಗೆ—ಡಿ ವಿ ಜಿ

ಮತ್ತು ಮಾಸ್ತಿ ಅವರು. ಡಿ ವಿ ಜಿ ಅವರ 'ವನಸುಮದೊಲೆನ್ನ' ಎಂಬ ಪ್ರಾರ್ಥನೆ ಭಾವಗೀತೆಯನ್ನು ಆಲಿಸಿದಂದು ವಿದ್ಯಾರ್ಥಿಯಾಗಿದ್ದ ನನ್ನ ಚೇತನಕ್ಕೆ ಒಂದು ಅನಿರ್ವಚನೀಯ ಬೋಧೆಯಾಗಿತ್ತು. ಡಿ ವಿ ಜಿ ಯವರ ಮಂಕುತಿಮ್ಮನಕಗ್ಗವನ್ನೋದಿ 'ನಿನ್ನ ಪುಸ್ತಕಕ್ಕೆ ಕೈಮುಗಿದೆ ಮಂಕುತಿಮ್ಮ' ಎಂದು ಹಿಂದೆ ಬರೆದು ಕಳುಹಿಸಿದ್ದೆ. ಹಾಗೆಯೇ ಇಂದೂ ಅವರ ಸ್ಮರಣೆಗೆ ಕೈಮುಗಿಯುತ್ತಿದ್ದೇನೆ. ವಿಚಾರಶೀಲರಾದ ಅವರ ಸಾಹಿತ್ಯ ಅವರನ್ನು ಅಮರ ರನ್ನಾಗಿಸಿದೆ. ತುಂಬು ಜೀವನ ನಡಸಿ ಸಾರ್ಥಕವಾಗಿ ನಾಗರಿಕತೆ-ಸಂಸ್ಕೃತಿಯ ಸೇವೆ ಮಾಡಿರುವ ಅವರ ಮರಣವು ಅಮರತ್ವದ ಒಂದು ವಿನ್ಯಾಸ. ಅವರ ಪುಣ್ಯಸ್ಮೃತಿಗೆ ಅನಂತ ನಮನ" ಎಂದಿದ್ದಾರೆ. (ಪ್ರಜಾವಾಣಿ 8-10-75)

ಡಿ ವಿ ಜಿ ಯವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುವ ಸಲುವಾಗಿ ಗೋಖಲೆ ಸಂಸ್ಥೆಯಲ್ಲಿ 19-10-1975 ರಲ್ಲಿ ಒಂದು ಸಾರ್ವಜನಿಕ ಸಭೆ ನಡೆಯಿತು. ಬೆಂಗಳೂರು ನಗರಸಭೆಯ ಆಡಳಿತಾಧಿಕಾರಿಗಳಾಗಿದ್ದ ಎನ್. ಲಕ್ಷ್ಮಣ ರಾಯರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಡಿ ವಿ ಜಿ ಯವರನ್ನು ಕುರಿತು ಮಾಸ್ತಿಯವರು, ಕೆ. ಎಸ್. ರಾಮಸ್ವಾಮಿ, ವಿ. ಕೃಷ್ಣಮೂರ್ತಿ, ಮಿರ್ ಇಕ್ಬಾಲ್ ಹುಸೇನ್, ವಿ. ಎಸ್. ನಟರಾಜನ್, ಜಿ. ಪಿ. ರಾಜರತ್ನಂ, ಎಂ. ವಿ. ಸೀತಾರಾಮಯ್ಯ, ರಾಳ್ಳಪಲ್ಲಿ ಅನಂತ ಕೃಷ್ಣ ಶರ್ಮ, ಎನ್. ರಂಗ ನಾಥ ಶರ್ಮಾ, ಎಸ್. ವಿ. ಜಯಶೀಲರಾವ್, ವಿ. ಸೀತಾರಾಮಯ್ಯ ಅವರು ಮಾತನಾಡಿದರು (ಪಬ್ಲಿಕ್ ಅಫೇರ್ಸ್, ಅಕ್ಟೋಬರ್—ನವಂಬರ್ 1975)

ಅಂದಿನಿಂದ ಪ್ರತಿವರ್ಷ ಸುಮಾರು ಅಕ್ಟೋಬರ್ (ನವರಾತ್ರಿ) ಯ ಸಮಯದಲ್ಲಿ ಡಿ ವಿ ಜಿ ಜ್ಞಾಪಕಾರ್ಥವಾಗಿ ಗೋಖಲೆ ಸಂಸ್ಥೆಯಲ್ಲಿ ಸಮಾ ರಂಭಗಳು ನಡೆಯುತ್ತಿವೆ. ಮಲ್ಲೇಶ್ವರದ ಗೋಖಲೆ ಸಂಸ್ಥೆಯ ಶಾಖೆ ಎಸ್. ಜಿ. ರಾಮಚಂದ್ರ ಅವರ ಪ್ರಯತ್ನದಿಂದ 'ಡಿ ವಿ ಜಿ ಸಿವಿಕ್ ಸೆಂಟರ್' ಎಂಬ ಕಟ್ಟಡವನ್ನು ಕಟ್ಟಿ ಡಿ ವಿ ಜಿ ಯವರು ಹಾಕಿಕೊಟ್ಟ ಮಾರ್ಗದಲ್ಲಿ ಹೋಗಲು ಯತ್ನಿಸುತ್ತಿದೆ.

1987, ಡಿ ವಿ ಜಿ ಜನ್ಮಶತಮಾನೋತ್ಸವ ಸಂವತ್ಸರ. ಜನ್ಮಶತಮಾ ನೋತ್ಸವವನ್ನು ನಡಸಲು ನಿಟ್ಟೂರು ಶ್ರೀನಿವಾಸರಾಯರ ಅಧ್ಯಕ್ಷತೆಯಲ್ಲಿ ಜಿ. ನಾರಾಯಣ ಅವರ ಕಾರ್ಯಾಧ್ಯಕ್ಷತೆಯಲ್ಲಿ ಒಂದು ಸಮಿತಿ ಕಾರ್ಯ ಕ್ರಮಗಳನ್ನು ನಡಸುತ್ತಿದೆ. ಎಂ. ವಿ. ಸೀತಾರಾಮಯ್ಯನವರೂ ಬಿ. ಎಂ. ಶ್ರೀ ಪ್ರತಿಷ್ಠಾನದ ಸ್ನೇಹಿತರೂ ಗೋಖಲೆ ಸಂಸ್ಥೆಯ ಸದಸ್ಯರೂ ಈ ಕಾರ್ಯದಲ್ಲಿ

ನಿರತರಾಗಿದ್ದಾರೆ. ಮುಳಬಾಗಿಲಿನಲ್ಲಿ, ಬೆಂಗಳೂರಿನಲ್ಲಿ, ಮೈಸೂರಿನಲ್ಲಿ, ಕಾರ್ಕಳದಲ್ಲಿ, ಬೊಂಬಾಯಿಯಲ್ಲಿ, ಇಂಗ್ಲೆಂಡಿನಲ್ಲಿ, ಮ್ಯಾನ್‌ಚೆಸ್ಟರಿನಲ್ಲಿ ಇನ್ನೂ ಅನೇಕ ಕಡೆಗಳಲ್ಲಿ ಡಿ ವಿ ಜಿ ಜನ್ಮಶತಮಾನೋತ್ಸವ ಸಭೆಗಳಾದವು. ಅವರ ಜೀವನ ಮತ್ತು ಸಾಧನೆಗಳನ್ನು ಕುರಿತು ವಿಚಾರ ಸಂಕಿರಣಗಳು ನಡೆದವು.

ಈ ಸಂದರ್ಭದಲ್ಲಿ ಸಮಿತಿ 'ಬಾಳಿಗೊಂದು ನಂಬಿಕೆ,' 'ಸಂಸ್ಕೃತಿ,' 'ಕಾವ್ಯ ಕುಸುಮಾಂಜಲಿ,' 'ಮಂಕುತಿಮ್ಮನ ಕಗ್ಗ,' 'ಕೆಲವು ಮಹನೀಯರು' 'ಜೀವ ಸಾರ್ಥಕ್ಯ ದೀಪಿಕೆ' ಎಂಬ ಡಿ ವಿ ಜಿ ಸೂಕ್ತ ಸಂಕಲನ, 'ಜೀವನ ಸೌಂದರ್ಯ ಮತ್ತು ಸಾಹಿತ್ಯ' ಗ್ರಂಥಗಳನ್ನು ಮುದ್ರಿಸಿ ಸುಲಭ ಬೆಲೆಯಲ್ಲಿ ಮಾರಾಟ ಮಾಡುವ ಏರ್ಪಾಟು ಮಾಡಿದೆ. 'ವನಸುಮ' ಎಂಬ ಜ್ಞಾಪಕ ಗ್ರಂಥವನ್ನೂ 'ಧೀಮಂತ' ಎಂಬ ಅಭಿನಂದನ ಗ್ರಂಥವನ್ನೂ ಪ್ರಕಟಿಸಿದೆ.

ಭಾರತ ಸರಕಾರ ಡಿ ವಿ ಜಿ ಯವರ ಮತ್ತು ಗೋಖಲೆ ಸಂಸ್ಥೆಯ ಕಟ್ಟಡವನ್ನೊಳಗೊಂಡ ಅಂಚೆ ಚೀಟಿಯನ್ನು 17–3–1988 ರಂದು ಹೊರ ತಂದಿತು.

ಕರ್ನಾಟಕ ಸರಕಾರ ಶತಮಾನೋತ್ಸವಕ್ಕೆ ಧನ ಸಹಾಯ ಮಾಡಿರುವುದಲ್ಲದೆ ಅವರ ಎಲ್ಲ ಕೃತಿಗಳನ್ನು ಹಲವು ಸಂಪುಟಗಳಲ್ಲಿ ಪ್ರಕಟಿಸಲು ಉದ್ದೇಶಿಸಿದೆ. ಹಾ. ಮಾ. ನಾಯಕರ ಸಂಪಾದಕತ್ವದಲ್ಲಿ ಡಿ ವಿ ಜಿ ಕೃತಿಶ್ರೇಣಿಯ ಮೊದಲ ಸಂಪುಟ ಹೊರಬಂದಿದೆ.

ಹೀಗೆ ಡಿ ವಿ ಜಿ ತಮ್ಮ ಗ್ರಂಥಗಳ ಮೂಲಕ, ಗೋಖಲೆ ಸಂಸ್ಥೆಯ ಮೂಲಕ, ಅವರ ಸ್ನೇಹಿತರ ಅಭಿಮಾನಿಗಳ ಅಂತರಂಗದಲ್ಲಿ ಜೀವಿಸಿದ್ದಾರೆ.

ಅನುಬಂಧ

ಡಿ ವಿ ಜಿ ಯವರ ಗ್ರಂಥಗಳ ಮತ್ತು ಲೇಖನಗಳ ಪಟ್ಟಿ ಈಗಾಗಲೇ ಈ ಕೆಳಕಂಡ ಪತ್ರಿಕೆಯಲ್ಲಿ ಮತ್ತು ಗ್ರಂಥಗಳಲ್ಲಿ ಸಿಗುತ್ತದೆ:

1. "Public Affairs" : October – November 1975
2. ನೀಲತ್ತಹಳ್ಳಿ ಕಸ್ತೂರಿಯವರ ಡಾ|| ಡಿ ವಿ ಗುಂಡಪ್ಪ–ಜೀವನ ಮತ್ತು ಸಾಧನೆ
3. ಟಿ.ವಿ. ವೆಂಕಟರಮಣಯ್ಯನವರ ಕನ್ನಡಭಾಷಾ–ಸಾಹಿತ್ಯ ಲೇಖನ ಸೂಚಿ
4. ಗೋಖಲೆ ಸಂಸ್ಥೆ ಪ್ರಕಟಿಸಿದ "ಧೀಮಂತ".

ಆದ್ದರಿಂದ ಅಲ್ಲಿ ಕೊಟ್ಟಿರುವ ಲೇಖನಗಳ ಹೆಸರನ್ನುಳಿದು ಮಿಕ್ಕ ಲೇಖನಗಳ ಪಟ್ಟಿಯನ್ನಿಲ್ಲಿಕೊಡಲಾಗಿದೆ. ಈ ಪಟ್ಟಿಯನ್ನು ಸಿದ್ಧಮಾಡುವುದರಲ್ಲಿ ಸ್ನೇಹಿತರಾದ ವಿ. ಶ್ರೀಕಂಠಯ್ಯನವರು ಸಂಗ್ರಹಿಸಿದ್ದ ಕೆಲವು ಲೇಖನಗಳಿಂದ ನೆರವು ಪಡೆದಿದ್ದೇನೆ.

ಇದರೊಂದಿಗೆ ಡಿ ವಿ ಜಿ ಯವರ ಗ್ರಂಥಗಳನ್ನು ಕುರಿತ ವಿಮರ್ಶೆಗಳ ಪಟ್ಟಿಯನ್ನು, ಅವರ ಗ್ರಂಥಗಳು ಇತರ ಭಾಷೆಗಳಿಗೆ ಅನುವಾದವಾಗಿರುವ ಪಟ್ಟಿಯನ್ನು ಕೊಡಲಾಗಿದೆ.

ಇದರಲ್ಲಿ ಉಪಯೋಗಿಸಿರುವ ಹ್ರಸ್ವ ಸ್ವರೂಪಗಳ ವಿವರಣೆ ಹೀಗಿದೆ:

ಕ. ಸಾ. ಪ. ಪ. : ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ

ಕ. ನು. : ಕನ್ನಡ ನುಡಿ

ಪು. ಪ್ರ. : ಪುಸ್ತಕ ಪ್ರಪಂಚ

(ಇಲ್ಲಿ ಸೇರದೆ ಇರುವ ಲೇಖನಗಳ ವಿವರಗಳನ್ನು ವಾಚಕರು ದಯಮಾಡಿ ಕೊಟ್ಟರೆ ಲೇಖಕನು ಕೃತಜ್ಞನಾಗಿರುತ್ತಾನೆ.)

ಡಿ ವಿ ಜಿ ಯವರ ಲೇಖನಗಳು ಇತ್ಯಾದಿ

An Open Letter to V. P. Madhava Rao 1908

Swadeshi Library; Vande Mataram Series

Samyukta & United India 1908
Religion & Nationalism in India 1908
Vedanta & Nationalism 1909
Tolstoy and India 1909

ಸುಮತಿ ಗ್ರಂಥಮಾಲೆ

ಲೇಟ್ ದಿವಾನ್ ರಂಗಾಚಾರ್ಲು 1908
ಕನಕಾಲುಕ ಅಥವಾ ಕಮಲಿನೀಚರಿತಂ 1908
ಬೆಕ್ಕೋಜಿ 1908
ಜಾರ್ಜ್ ಚಕ್ರವರ್ತಿಗಳ ಕಿರೀಟ ಧಾರಣಾ ಪ್ರಶಂಸೆ 1911
ಇಂದ್ರ ವಜ್ರ 1912
ರಾಮ ಮೋಹನ ರಾಯ್
ವಂದೇ ಮಾತರಂ
ರಾಮಕೃಷ್ಣ – ವಿವೇಕಾನಂದ
Western Influence on Indian Society and Religion *Mysore Times* 1911
Dewan Rangacharlu *Indian Review* Aug. 1912
Ram Mohan Roy, Vivekananda & Indian Nationalism *The Hindustan Review* May-June 1912
The Surplus Revenues of the Civil & Military Station. 1913
ಮೈಸೂರಿನ ಕೈಗನ್ನಡಿ ಎಂಬ 'ಕರ್ನಾಟಕ' ವಾರ್ಷಿಕ ಪುಸ್ತಕ 1915
The Indian Native States & The Montagu-Chelmsford Report Aug. 1918
ತಿಲೋತ್ತಮೆ ಕ.ಸಾ.ಪ.ಪ. ಏಪ್ರಿಲ್ 1921
ವಿಶೇಷ ಪದಕೋಶ ಉಪಸಭೆಯ ವರದಿ, ಕ.ಸಾ.ಪ.ಪ. ಜುಲೈ 1922

ಕರ್ನಾಟಕ ವಿಶ್ವಕೋಶ ಉಪಸಭೆಯ ವರದಿ ಜುಲೈ 1922

The Administration of Mysore *New India* 4.11.1924

The Administration of Indore *Servant of India* 23.4.1925

The Govt. of India & The Indian States—
A Draft Scheme of Federation June 1926

ಮೈಸೂರು ಸರ್ವಜನಾಭ್ಯುದಯ ಸಂಸ್ಥೆ (ಪ್ರಸಿದ್ಧ ಪತ್ರಿಕೆ) **1927**

Social Dynamics *The Hindu* 2.4.1927

The Indian Institute of Science ,, 4.4.1927

The Recent Elections in Mysore ,, 7.4.1927

An Appeal to Workers for
Indian States and Their Friends 30.4.1927

The Problem of the Indian States *The Hindu* 7.5.1927

On the Location of the Medical College
The Evening Mail 14.5.1927

For Medical College in Mysore
The Wealth of Mysore 11.6.1927

The Mysore Constitution *The Hindu* 8.8.1927

A Public Meeting of Rate-Payers, *Daily Post* 17.9.1927

Bangalore Municipal Politics *The Hindu* 21.9.1927

Bus Accidents in Mysore *The Evening Mail* 12.11.1927

ಮೈಸೂರು ವಿಶ್ವವಿದ್ಯಾನಿಲಯ : ಗೊತ್ತುವಳಿಗಳು
ವಿಶ್ವಕರ್ನಾಟಕ **13.11.1927**

Bridging the Gulf; A Royal Commission Suggested
The Pioneer 16.5.1928

The Nehru Committee and the Indian States
Indian States Review 18/ 25.8.1928

What is Wrong With The State of Mysore;
Bangalore Disturbances and After, *Swarajya* 15.9.1928

ದೇಶೀಯ ಸಂಸ್ಥಾನ ಸಹಿತವಾದ ಇಂಡಿಯದ ಸಂಯುಕ್ತ
ರಾಜ್ಯಮಂಡಲ ವ್ಯವಸ್ಥೆ ಭಾಷಾಂತರಕ್ಕೆ ಮುನ್ನುಡಿ 1929

ಗಣಪತಿ ಪ್ರಸಂಗದ ಗೂಢಾರ್ಥ	ವಿಶ್ವಕರ್ನಾಟಕ	6.1.1929
ಅಪಾಯವೇನು ?	ವಿಶ್ವಕರ್ನಾಟಕ	13.1.1929
The Mysore State Congress	*Proceedings*	10.5.1929
The Indian States Peoples' Day	*An Appeal*	18.5.1929
The Points for Princes: Plea for Patriotism and Vision	*The Bombay Chronicle*	27.6.1929
Princes *Vs.* Subjects; People's Irresistible Claim	*The Bombay Chronicle*	
The Cause of the States People	*The Hindu*	1929
States People & the Round Table Conference Correspondence with P S to the Viceroy	*The Hindu*	Nov. 1929
Indian States Position	*Swarajya*	4.11.1929
The States People and the Round Table Conference	*The Indian Review*	Dec. 1929
All About Mysore		1929
The Salt Tax Campaign	ತಾಯಿನಾಡು	25.4.1930
ಎಂ. ವೆಂಕಟಕೃಷ್ಣಯ್ಯನವರನ್ನು ಕುರಿತು	ಉಪನ್ಯಾಸ	11.9.1932
Problems of the Indian Federation	*The Hindu*	13.12.1932
Mysore Legistature's Powers	,,	8.12.1933
The Rights of the States People	,,	26.12.1933
The Cause of the States People	*The Bombay Chronicle*	28.12.1933
Disallowed Matters in Council	*The Hindu*	23.6.1934
Privileges of the Legislature	ಪ್ರಜಾಮತ *(Supplement)*	22.7.1934
The Cause of the States People : Sir Samuel Hoare & The Indian States	*The Servant of India*	4.4.1935
Problem of Linguistic Provinces	ವಿಶ್ವಕರ್ನಾಟಕ	10.12.1935
ಮೊದಲು ಕನ್ನಡ ಕಲಿಯಿರಿ	ವಿಶ್ವಕರ್ನಾಟಕ	27.3.1937
ಹಿಂದಿಯನ್ನು ಕುರಿತು (ಪತ್ರ)	ವಿಶ್ವಕರ್ನಾಟಕ	ಏಪ್ರಿಲ್ 1937

Indian States & The National Congress
The Bombay Chronicle 1937
ಎಸ್.ಕೆ. ವೆಂಕಟರಂಗಯ್ಯಂಗಾರ್ಯರ ಪ್ರವಾದ
ತಾಯಿನಾಡು 11.4.1938
Religious Conversions *The Madras Mail* 3.7.1939
ಪ್ರಗತಿ, ಸ್ವಾತಂತ್ರ್ಯ ಕ. ನು. 16.2.1940
Mysore's Political History *Daily News* 28.1.1941
ಸಂಸ್ಥಾನಗಳು ಮತ್ತು ಅವುಗಳ ಕರಾರುಗಳು
ವಿಚಾರವಾಹಿನಿ ಏಪ್ರಿಲ್ 1941
ಕವಿ ರವೀಂದ್ರರನ್ನು ಕುರಿತು ಕ. ನು. 15.8.1941
ಬಿ.ಎಂ.ಶ್ರೀ ಅವರನ್ನು ಕುರಿತು 19.9.1941
Scientific Terminology in Indian Languages
Current Science 10.10.1941
Science to Re-build ,, Nov. 1941
Science and Ethics ,, 12.12.1941
Towards a New World Order 1942
So-Called Merger of the Smaller States
Daily News 19.4.1943
Release Gandhi—A National Demand ,, 29.5.1943
The Indian States & The Linguistic Provinces
Year Book of International Affairs 1944
All India Union March 1945
Conditions of Freedom in Literature
Paper Submitted to the All India Writers' Conference Jaipur Oct. 1945
England and India; Essay in Mutual Understanding
The Aryan Path Nov. 1945
ಹಿಂದೂಸ್ಥಾನದ ಭಾಷೆಗಳಲ್ಲಿ ವೈಜ್ಞಾನಿಕ ವಿದ್ಯೆಗೆ ಸಂಬಂಧಪಟ್ಟ
ವಿಶಿಷ್ಟ ಪದಗಳು ವಾಗ್ಭೂಷಣ ಜುಲೈ–ಸೆಪ್ಟೆಂಬರ್ 1946
ಇಂಡಿಯಾದ ರಾಷ್ಟ್ರಯೋಜಕ ಸಭೆ 1946

Outcome of London Talks 16.11.19
For Responsible Government in Mysore Sept. 19
ಸ್ವತಂತ್ರ ಭಾರತ ಅಭಿನಂದನಸ್ತವ ಕ. ನು. 15.8.194
ಆರು ಮುಖ ಕಾರ್ಯಗಳು ದೇಶಬಂಧು 9.9.194
H.H. The Maharaja's Proclamation *Daily News* 29.9.19
ರಾಜಘೋಷಣೆಯ ಅರ್ಥ ವಿಮರ್ಶೆ ದೇಶಬಂಧು ಅಕ್ಟೋಬರ್ 194
ಜವಾಬ್ದಾರಿ ಸರಕಾರ ಚಳವಳಿ ಬ್ರಾಹ್ಮಣರ ಪಿತೂರಿಯಲ್ಲ
ದೇಶಬಂಧು 30.9.194
ಸಾಹಿತ್ಯವನ್ನು ಸಾಹಿತ್ಯವೆಂದೇ ನೋಡತಕ್ಕದ್ದು
ಕ. ನು. ಡಿಸೆಂಬರ್ 194
ಚಿನ್ಮಾತೆಗೆ (ಸಂಗೀತ ಕೃತಿ) ಕ. ನು. ಡಿಸೆಂಬರ್ 194
Two Precautions About Indian States 19
Puppet Pieces of Patel Bhai 1948
ಕನ್ನಡಿಗರು ಆರ್ಥಿಕ ಸಾಂಸ್ಕೃತಿಕ ಉನ್ನತಿಯನ್ನು ಸಾಧಿಸಬೇಕು
ಸಂಯುಕ್ತ ಕರ್ನಾಟಕ 18.1.194
ಮಹಾತ್ಮ ಗಾಂಧಿ ಕ. ನು. 6.2.194
ಬಿ. ಎಂ. ಶ್ರೀ ಅವರನ್ನು ಕುರಿತು ಕ. ನು. 26.3.194
ಮೈಸೂರು ರಾಜ್ಯಾಂಗ ಮೊದಲು ಕನ್ನಡದಲ್ಲಿ ರೂಪುಗೊಳ್ಳಬೇಕು
ಕ. ನು. 30.4.194
ಗೋಪಾಲ ಕೃಷ್ಣ ಗೋಖಲೆ ಸಂಜೀವನ ಫೆಬ್ರುವರಿ 194
The Press in Mysore
Souvenir of the All India Newspapers Editors' Conference May. 19
1850–1950–2000 *Mysindia* 26.1.19
To Pandit Jawaharlal Nehru (A Poem)
(Translation by K. Sampathgiri Rao)
Mysindia 19.2.19
A Life of Positive Asceticism—Prof. M. Hiriyanna
Daily News 22.9.19

ಇಂಡಿಯದ ನೂತನ ರಾಜ್ಯ ನಿಬಂಧನೆ, ಪ್ರಬುದ್ಧ ಕರ್ನಾಟಕ
ದ್ವಿಪಕ್ಷ ಘಟನೆಯ ಆವಶ್ಯಕತೆ ಜೈಹಿಂದ್ 31.12.1950
ಮುಖ್ಯಮಂತ್ರಿತ್ವಕ್ಕಿರಬೇಕಾದಶಾಸನಸದಸ್ಯತ್ವದ ಅರ್ಹತೆ
ಜೈಹಿಂದ್ 14.1.1951
ಭರ್ತೃಹರಿ *A talk at the GIPA* 5.1.1952
The Press in Karnataka
The South Indian Journalist (Sp. Annual) Nov. 1952
Man and the Infinite Triveni 1952
ಎ. ಆರ್. ಕೃಷ್ಣಶಾಸ್ತ್ರಿಗಳನ್ನು ಕುರಿತು ಕ. ನು. ಫೆಬ್ರುವರಿ 1953
ವೃತ್ತಪತ್ರಿಕೆ ಮತ್ತು ಶಾಸನ ಸಂಸ್ಥೆ ಜನಪ್ರಗತಿ 16.8.1953
ಕನ್ನಡ ಸಂಗೀತ ಜನಪ್ರಗತಿ 21.2.1954
ಕನ್ನಡ ಸಂಗೀತ : ಒಂದು ಅನುಬಂಧ ಜನಪ್ರಗತಿ 14.3.1954
ಶಾಸನ ರಚನೆ ಮತ್ತು ಪ್ರಜಾಭಿಪ್ರಾಯ 1954
Congress Govt. & Party *Indian Express* 21.1.1955
ಮಾನವ ಸಮಾಜ ಸಂಪರ್ಕದಲ್ಲಿನ ಧರ್ಮ ಪ್ರಜಾವಾಣಿ 15.2.1955
The Reforms We Need in Education
The Journal of the Mysore State Education Federation July. 1955
Liberalism in India *Confluence* Autumn 1956
The New States ; Hopes and Fears
The Indian Express 1.11.1956
ನಮ್ಮ ಜವಾಬ್ದಾರಿ ಸರ್ಕಾರ ಹೇಗೆ ಸಾಗುತ್ತಿದೆ
ಪ್ರಜಾಮತ ದೀಪಾವಳಿ ಸಂಚಿಕೆ 1957
Vote is Not a Moral Principle *Deccan Herald* 18.5.1958
Mysore Ministry & Congress *Indian Express* 20.5.1958
Gokhale for Today-Liberalism Retold Triveni July 1958
Independence Day Reflections *Deccan Herald* 15.8.1958
Mirza -- A Constructive Statesman ,, 7.1.1959

ರಾಜಚರಿತ ವಿಶಾರದ–ರಾವ್ ಬಹದ್ದೂರ್ ಸಿ. ಹಯವದನರಾವ್
Speech at Mysore State Journalists Association 29.5.1959
ಎಂ. ವಿ. : ಮೈಸೂರಿಗರ ಮಮತೆಯ ಆಸ್ತಿ ಪ್ರಜಾವಾಣಿ 15.9.1960
ಮನುಸ್ಮೃತಿ ಪ್ರಜಾಮತ ದೀಪಾವಳಿ ಸಂಚಿಕೆ 1960
ರಾಜಾಜಿ 9.12.1960
Wither India? *Gandhi Marg* Apr. 1961
ಋಷಿ ಪರಂಪರೆಯ ಪ್ರತೀಕ ರವೀಂದ್ರರು ಪ್ರಜಾವಾಣಿ 8.5.1961
Tagore – Symposium 21.5.1961
ಒಳ್ಳೆಯ ಸರಕಾರ ಪೌರವಾಣಿ 16.11.1961
ಸಂಸ್ಕೃತಿ ಪೌರವಾಣಿ ವಿಶೇಷ ಸಂಚಿಕೆ 1962
Mr. Nehru's Ambivalence *Swarajya Annual* 1962
ರಾಜ್ಯ ಸಂಗೀತ ಅಕಾಡಮಿ ಹೇಗಿರಬೇಕು ? ಪ್ರಜಾವಾಣಿ 28.2.1962
ಶ್ರೀಕೃಷ್ಣ ಗೋಪೀ ವಿಲಾಸ ಪ್ರಜಾಮತ ದೀಪಾವಳಿ ಸಂಚಿಕೆ 1962
ನಮ್ಮ ಸಾಹಿತ್ಯದ ಬೆಳವಣಿಗೆ
ರಾಯಚೂರು ಕರ್ನಾಟಕ ಸಂಘದ ರಜತ ಮಹೋತ್ಸವ 29.4.1962
ಜನಸತ್ವವೇ ಸಾಹಿತ್ಯ ಸ್ಫೂರ್ತಿಸ್ಥಾನ ಸಂಯುಕ್ತ ಕರ್ನಾಟಕ 2.5.1962
ಎ. ಪಿ. ಜೈನರ ಉಮೇದುವಾರಿಕೆ ಜನವಾಣಿ 26.5.1962
The Gokhale Way *Mysindia* 27.5.1962
The Writer and The Public
The Literary Criterion Summer 1963
Thoreau *Swarajya*
ಶ್ರೀಮದ್ಭಗವದ್ಗೀತಾ–ರಾಮಕಥಾ ಸಮನ್ವಯ
ಪ್ರಜಾಮತ 26.5.1963
ಕನ್ನಡ ಕಾದಂಬರಿ ಪ್ರವರ್ತಕರು ಎಂ. ಎಸ್. ಪುಟ್ಟಣ್ಣನವರು
ಕ. ನು. ಜೂನ್ 1963
Unity Through Culture *The Aryan Path* Oct. 1963
ಕ್ಷೇತ್ರಜ್ಞ ಪ್ರಜಾಮತ ದೀಪಾವಳಿ ಸಂಚಿಕೆ 1963

ನೇಂದರುಳ್ ಒರು ವೇದಾಂತಿ (ತಮಿಳು) ಕಲ್ಕಿ 3.5.1964

Purandara *Bhavan's Journal* 15.8.1965

GIPA, its Birth, Growth, Prospects & Ideals
GIPA Souvenir 1965

ಸತ್ಯ ಮತ್ತು ಸೌಂದರ್ಯ ಪ್ರಜಾಮತ ದೀಪಾವಳಿ ಸಂಚಿಕೆ 1965

ಕನ್ನಡಿಗರ ಆಲಸ್ಯತನ ; ಸಮೃದ್ಧ ಕರ್ನಾಟಕದ ದಾರಿಯಲ್ಲಿ
ದೊಡ್ಡ ಆತಂಕ ಸಂಯುಕ್ತ ಕರ್ನಾಟಕ ಡಿಸೆಂಬರ್ 1965

In Memoriam of Gopal Krishna Gokhale
Swarajya 7.5.1966

Gopal Krishna Gokhale *Kalki* 8.5.1966

Gokhale – The Citizen *Bhavan's Journal* 8.5.1966

ಗೋಖಲೆಯವರು ನಿರೂಪಿಸಿದ ರಾಷ್ಟ್ರಕ ಧರ್ಮ ಪ್ರಜಾವಾಣಿ 8.5.1966

Going Where *Swarajya (Annual)* 1966

The Two World Views from Moses to Marx
Deccan Herald 26.1.1967

Beauty & Truth *Swarajya (Annual)* 1967

ಮಹತ್ವಾಕಾಂಕ್ಷೆ–ಮಹತ್ಪ್ರಯತ್ನಗಳಿಗೆ ಪ್ರೇರಕ ಶಕ್ತಿ ಯಾವುದು
ಸುಧಾ ಯುಗಾದಿ ವಿಶೇಷಾಂಕ 1968

To Make Democracy Work Better in India
Swarajya (Annual) 1968

Five Immediate Questions ,, 1969

From Ideology to Common-sense *Swarajya Annual* 1970

ತಾಜ್‌ಮಹಲ್ ಪ್ರಜಾಮತ ದೀಪಾವಳಿ ಸಂಚಿಕೆ 1970

Our Constitution : Some Points for Consideration
Swarajya Annual 1971

ನಮ್ಮ ಬೌದ್ಧಿಕನಿಗೆ ಏನಾಗಿದೆ ಕಸ್ತೂರಿ ಮಾರ್ಚ್ 1972

Economics, Politics and Philosophy *Swarajya Annual* 1972

Self-Renunciation in Preparation for World Participation
Swarajya Annual 1973

ಕರ್ನಾಟಕದ ಪ್ರಗತಿ ಪಥ ಭಾಷಣ 2.4.1974

Hinduism *Illustrated Weekly of India* 24.11.74
Faith and Reason
ಭಗವದ್ಭಕ್ತೆ ತಂಗಿ ಸುಬ್ಬುಲಕ್ಷ್ಮಿ ಗಾಯನಗಂಗಾ ಜೂನ್ 1975
Advaita : Faith and Practice Oct. 1975
ಅತಿವಾಸ್ತವಿಕತೆ ಸಾಕ್ಷಿ ಜೂನ್ 1981
ಸಂಸ್ಕೃತಿ ಪ್ರಜಾವಾಣಿ 30.8.1987

ಸಂಭಾವನಾ ಗ್ರಂಥಗಳಿಗೆ, ಜ್ಞಾಪಕ ಸಂಚಿಕೆಗಳಿಗೆ ಲೇಖನಗಳು

'ವಿದ್ಯಾದಾಯಿನಿ' ಸುವರ್ಣ ಮಹೋತ್ಸವ ಸಂಚಿಕೆ 1944
Sir PSS: A Great Assayer of Ideas,
Sir Sivaswamy Aiyer Satabhishekam Souvenir 1944
Biographical Note on Late Rajasevasakta
Sri D. Venkataramiah in
The Panchapadika of Padmapada, Translated by Sri D. Venkataramaiah 1948
ಮೈಸೂರು ಪತ್ರಿಕೋದ್ಯಮದ ಇತಿಹಾಸ
ಪತ್ರಿಕೋದ್ಯಮ–ಮೂರನೆಯ ಅಧಿವೇಶನದ ವಿಶೇಷ ಸಂಚಿಕೆ 1945
"Public Life Must be Spiritualised"
Thakkar Bapa Jayanthi Commemoration Volume 1950
ಸೌಂದರ್ಯ ತ್ರಿಕೂಟ ಸುಬೋಧ ರಜತ ಮಹೋತ್ಸವ ಸಂಚಿಕೆ 1951
ಪರಿಚಯ ಪ್ರಭಾವಮು (ತೆಲುಗು)
ಶ್ರೀ ರಾಳ್ಳಪಲ್ಲಿ ಅನಂತಕೃಷ್ಣ ಶರ್ಮ ಸನ್ಮಾನ ಸಂಚಿಕಾ 1961
ಒಂದು ವ್ಯಕ್ತಿ ಚಿತ್ರ ಪಂಜೆಯವರ ನೆನಪಿಗಾಗಿ 1962
T. Raghavachari *Raghava Memorial Souvenir* 1965
Bus Indispensable *Mysore State Road Safety Convention Souvenir* 15.3.1965

Sangeeta Kalanidhi K. Vasudevacharya
Bangalore Gayana Samaja Golden and Diamond Jubilee Souvenir Nov. 1965

ಷೇಕ್ಸ್‌ಪಿಯರಿಗೆ ನಮಸ್ಕಾರ ಷೇಕ್ಸ್‌ಪಿಯರಿಗೆ ನಮಸ್ಕಾರ 1966

The Press in Mysore *AINEC Souvenir Bangalore* 1949

ಗೋಪಾಲಸ್ವಾಮಿ ಅಯ್ಯಂಗಾರ್ಯರು
National College Golden Jubilee Souvenir 1967

Purandara : *Souvenir of the Thyagaraja Sangeeta Vidwat Samajam Mylapore*

The Greatest Patriot of Mysore,
ತಾತಯ್ಯ ಸಂಸ್ಮರಣ ಸಂಪುಟ

ಪಂಕ್ತಿಪಾವನ ವೆಂಕಟಕೃಷ್ಣಯ್ಯನವರು
ತಾತಯ್ಯ ಸಂಸ್ಮರಣ ಸಂಪುಟ

A Gentleman to the Press Too
M.V. Birth Centenary Commemoration Volume 1960

ಅನಂತಾಚಾರ್ಯ
Acharya Pathashala Silver Jubilee Souvenir 1969

Good Wishes to Shorthand Writers
Shorthand Writers Association Jubilee Souvenir 1969

ವರದಾಚಾರ್ಯರ ರಸಜ್ಞತೆ ಶೀಲೋನ್ನತಿ
ವರದಾಚಾರ್ಯ ಜನ್ಮಶತಮಾನೋತ್ಸವ ಸ್ಮಾರಕ ಗ್ರಂಥ 1969

Rajaji : Torch Bearer of Dharma *Rajaji 93: Souvenir* 1971

Prof. M. Hiriyanna—A Tribute
Prof. M. Hiriyanna Birth Centenary Commemoration Volume 1972

Self Renunciation and World Participation :
The Message of the Ramayana
ಶ್ರೀರಾಮ ಭಜನ ಸಭಾ ಮಲ್ಲೇಶ್ವರ :
ಸುವರ್ಣ ಮಹೋತ್ಸವ ಸಂಸ್ಮರಣ ಸಂಚಿಕೆ 1972

ಸರಸಿ ಸ್ನೇಹಪ್ರಿಯ ಗೋರೂರು ಗೌರವ ಗ್ರಂಥ 1973

ಸಂದೇಶಗಳು

ಹಿರಿಯರ ಹರಕೆ :

ಶ್ರೀ ಬೇಂದ್ರೆಯವರಿಗೆ ಐವತ್ತನೆಯ ಹುಟ್ಟುಹಬ್ಬದ ಕಾಣಿಕೆ 1946

ಶುಭಾಶಂಸನ : ಬಾಗಿನ–ಎಸ್. ವಿ. ರಂಗಣ್ಣನವರಿಗೆ ಒಪ್ಪಿಸಿದ್ದು 1954

ಹಿತವಚನ : ಕುವೆಂಪು ಅವರಿಗೆ ಶಿಷ್ಯರೂ ಮಿತ್ರರೂ ಒಪ್ಪಿಸಿದ್ದು 1956

ಸಂದೇಶ : N. R. Colony Assn. Ramotsava Souvenir 1964

ಶುಭಾಶೀರ್ವಾದಗಳು : ಮಧುರಸ್ಮೃತಿ : ಡಿ. ಪುಟ್ಟಸ್ವಾಮಯ್ಯನವರ
ಅರವತ್ತನೆಯ ವರ್ಷ 1965

Message : Desha Bhakta Konda Venkatappayya
Centenary Souvenir 1966

ಸಂದೇಶ : ಪುಸ್ತಕ ಭಾಗ್ಯ 1972

ಸಂದೇಶ : ನಿಜಲಿಂಗಪ್ಪನವರ 72 ನೆಯ ಜನ್ಮದಿನೋತ್ಸವ
ಸ್ಮರಣ ಗ್ರಂಥ : ಕಣ್ಮಣಿ 1973

Goodness Itself : ವಿ. ಸೀ. 1973

ಆಶೀರ್ವಾದ : ಬೆಳ್ಳಿಶಾರದೆ :
ಹೆಚ್.ಎಂ. ಶಂಕರನಾರಾಯಣರಾವ್ ಅಭಿನಂದನ ಗ್ರಂಥ 1973

ನಿಷ್ಠಾವಂತ : ಕರ್ಮಯೋಗಿ ತಗಡೂರರ
ಆತ್ಮ ಕಥನ ಮತ್ತು ಅಭಿನಂದನ ಗ್ರಂಥ 1974

Message : Mythic Society Diamond Jubilee Souvenir 1973

Message : Mahila Seva Samaja Diamond
Jubilee Souvenir 1974

ಡಿ ವಿ ಜಿ ಯವರ ಗ್ರಂಥವಿಮರ್ಶಾ ಲೇಖನಗಳು

Rabindranath Tagore ಕ.ಸಾ.ಪ.ಪ. ಅಕ್ಟೋಬರ್ 1921
—E. J. Thomson

Narayan Vaman Tilak ಕ.ಸಾ.ಪ.ಪ. ಏಪ್ರಿಲ್ 1924

An Introduction to the Study of Relation of the Indian States with the Govt. of India —K. M. Panikkar	*The Hindu*	28.9.1927
Shree Bhavagat Singhjee : The Maker of Modern Gondal	*The Hindu*	8.11.1934
The Classical Age —Bharatiya Vidya Bhavan	*Triveni*	October 1954
Bharati for English Readers, —Prema Nandakumar	*Swarajya*	
The Charm of Vighneshwara —Our New Rulers	*Swarajya*	30.12.1961
I Meet Rajaji–Monica Felton	*Swarajya*	19.5.1962

ಆಕಾಶವಾಣಿಯಲ್ಲಿ ಡಿ ವಿ ಜಿ ಯವರ ಭಾಷಣಗಳು

ಸ್ವಾತಂತ್ರ್ಯಪ್ರಾಪ್ತಿಯಿಂದ ಕಾವ್ಯಕ್ಕೆ ನವಸ್ಫೂರ್ತಿ		15.8.1954
ಸಂಸ್ಕೃತಿ		7.1.1955
ಬೇಲೂರು ದೇವಾಲಯ :	ಆಕಾಶವಾಣಿ ಪ್ರಸಾರಿಕಾ	ಜನವರಿ 1957
Public Opinion	—	22.4.1957
ರಘುನಾಥರಾಯರು		23.8.1957
ದಾದಾಭಾಯಿ ನವರೋಜಿ		4.9.1957
The Politician in the Democratic State		16.9.1957
ಈ ಐವತ್ತು ವರ್ಷಗಳಲ್ಲಿ	ಕ. ನು.	ಸೆಪ್ಟೆಂಬರ್ 1957
ಸಮಾಧಾನಮಾರ್ಗ	ಪ್ರಜಾವಾಣಿ	1960
The Attitude of the Public		14.6.1962
ಶ್ರೀ ಶಂಕರಾಚಾರ್ಯರ ತತ್ತ್ವಸಾರ	ಪ್ರಜಾವಾಣಿ	
ಕರ್ನಾಟಕ ಸಂಗೀತ ಪರಂಪರೆ	*Madras Tamil Sangam Souvenir*	1962
ನನ್ನ ಮೇಲೆ ಪ್ರಭಾವ ಬೀರಿದ ಪುಸ್ತಕಗಳು	ಕ. ನು.	10.4.1966

ಡಿ ವಿ ಜಿ ಯವರ ಪತ್ರಗಳು ಮುದ್ರಿತವಾದ ಗ್ರಂಥಗಳು/ಪತ್ರಿಕೆಗಳು

ದ. ಕೃ. ಭರದ್ವಾಜರ ಲೇಖನಗಳನ್ನು ಕುರಿತು ಕ. ನು. 17.11.1944

Letters of Rt. Hon'ble V. S. Srinivasa Sastry
(Ed.) T. N. Jagadisan 1944

ನಮ್ಮ ಕಾಗದಗಳು (ಮುನ್ನುಡಿ ಪತ್ರ)
ಸಂ॥ ನಾಡಿಗ ಕೃಷ್ಣಮೂರ್ತಿ 1950

Channa Basava Nayaka of Masti Translated by
Navaratna Rama Rao *(Letters in Preface)* 1957

ಗರುಡಗಂಬದ ದಾಸಯ್ಯ (ಹೊರಹೊದಿಕೆ)
—ಗೋರೂರು ರಾಮಸ್ವಾಮಿ ಅಯ್ಯಂಗಾರ್ 1965

ಸಾಹಿತ್ಯಲಾಲನೆ : ಮಾಸ್ತಿ 1967

ಕರ್ಮಯೋಗಿ ತಗಡೂರರ ಆತ್ಮಕಥನ 1974

ಪತ್ರಗಳು–ಮಾಸ್ತಿ 1977

ರಾಳ್ಳಪಲ್ಲಿ ಮತ್ತು ಡಿ ವಿ ಜಿ ಪತ್ರಪ್ರಸಂಗ
—ಎಸ್. ಆರ್. ರಾಮಸ್ವಾಮಿ ಅನಂತರಾಗಂ 1977

ಗೋವಿಂದ ಪೈ ಅವರಿಗೆ ಪತ್ರ ತರಂಗ 20.3.1983

ಡಿ ವಿ ಜಿ ಯವರ ಗ್ರಂಥಗಳ ಅನುವಾದಗಳು

ಮೂಢ ತಿಮ್ಮ ದರ್ಶನ (ಹಿಂದಿ) ಸರೋಜಿನಿ ಮಹಿಷಿ

The Ramblings of Thimma, The Dull
(ಇಂಗ್ಲಿಷ್) ಡಿ. ಶೇಷಗಿರಿರಾವ್

Song of the Wayfarers (ಇಂಗ್ಲಿಷ್) ವಿ. ಸೀತಾರಾಮಯ್ಯ

ಅದ್ವೈತ : ತತ್ತ್ವ ಮತ್ತು ಅನುಷ್ಠಾನ (ಕನ್ನಡ)
ಡಿ. ಆರ್ ವೆಂಕಟರಮಣನ್

ಡಿ ವಿ ಜಿ ಯವರನ್ನು ಕುರಿತು ಗ್ರಂಥಗಳು

D. V. G. Sanmana Samiti Souvenir		1970
D. V. Gundappa	ವಿ. ಸೀತಾರಾಮಯ್ಯ	1972
ಡಿ ವಿ ಜಿ	ಎಸ್. ಆರ್. ರಾಮಸ್ವಾಮಿ	1976
ಡಿ ವಿ ಗುಂಡಪ್ಪ	ಎನ್. ಎಸ್. ಲಕ್ಷ್ಮೀನಾರಾಯಣಭಟ್ಟ	1976
ನಮ್ಮ ಪರಿಷತ್ತು (ಡಿ ವಿ ಜಿ)	ವೆಂಕಟೇಶ ಸಾಂಗಲಿ	1977
G I P A Malleswaram Souvenir		1978
ಡಾ|| ಡಿ ವಿ ಗುಂಡಪ್ಪ : ಜೀವನ ಮತ್ತು ಸಾಧನೆ	ನೀಲತ್ತಹಳ್ಳಿ ಕಸ್ತೂರಿ	1988
ಪದ್ಮಭೂಷಣ ಡಾ|| ಡಿ ವಿ ಗುಂಡಪ್ಪ	ಡಿ ವಿ ಶೇಷಗಿರಿರಾವ್	1983
D V G or the Spirit of Poetry	S. Narain	1977
ಡಿ ವಿ ಜಿ ಕೃತಿಶ್ರೇಣಿ ಸಂಪುಟದ ಮುನ್ನುಡಿ	ಹಾ. ಮಾ. ನಾಯಕ	1987
ಡಿ ವಿ ಜಿ	*A G O R C*	1988
ವನಸುಮ	ಡಿ ವಿ ಜಿ ಜನ್ಮಶತಮಾನೋತ್ಸವ ಸಮಿತಿ	1988
ಧೀಮಂತ	ಡಿ ವಿ ಜಿ ಜನ್ಮಶತಮಾನೋತ್ಸವ ಸಮಿತಿ	1988

ಡಿ ವಿ ಜಿ ಯವರ ಪ್ರಸ್ತಾವ ಬರುವ ಇತರ ಗ್ರಂಥಗಳು

ಪಂಚ ಕಳಸ ಗೋಪುರ	ಬಿ. ಜಿ. ಎಲ್. ಸ್ವಾಮಿ	
ಬಿ. ಜಿ. ಎಲ್. ಸ್ವಾಮಿ	ಬಿ. ಪಿ. ರಾಧಾಕೃಷ್ಣ	ಜೂನ್ 1985
ನನ್ನ ತಂದೆ	ಬಿ. ಪಿ. ರಾಧಾಕೃಷ್ಣ	
ಗಮಕ ಶಾರದೆ	ಬಿ. ಶ್ರೀ. ಪಾಂಡುರಂಗರಾವ್	1982
ವಿಚಾರ	ಜಿ. ನಾರಾಯಣ	1984

ಡಿ ವಿ ಜಿ ಯವರ ಗ್ರಂಥಗಳ ವಿಮರ್ಶೆ

ಸಾಹಿತ್ಯ ಮತ್ತು ಜನಜೀವನ ಕ. ಸಾ. ಪ. ಪ. ಎಪ್ರಿಲ್ 1921

ಕರ್ನಾಟಕ ಜನಜೀವನ ಮತ್ತು ಅರ್ಥಸಾಧಕ ಪತ್ರಿಕೆ
ಕ. ಸಾ. ಪ. ಪ. ಜನವರಿ 1923

The Karnataka ಕ. ಸಾ. ಪ. ಪ. ಜುಲೈ 1925

ಕನ್ನಡದಲ್ಲಿ ರಾಷ್ಟ್ರೀಯ ಕಾವ್ಯ
ಕ. ಸಾ. ಪ. ಪ. ಅಕ್ಟೋಬರ್ 1936 ರಂ ಶ್ರೀ ಮುಗಳಿ

ಜೀವನಪ್ರಭಾತ-ಮುನ್ನುಡಿ
ಕ. ಸಾ. ಪ. ಪ. ಅಕ್ಟೋಬರ್-ಡಿಸೆಂಬರ್ 1939 ರಂ ಶ್ರೀ ಮುಗಳಿ

ಆಕಾಶವಾಣಿಯಲ್ಲಿ ಮ್ಯಾಕ್‌ಬೆತ್
ರುದ್ರನಾಟಕದ ಪ್ರಯೋಗ ಕ. ನು. 19.2.1943 ಮಂ

ಮಂಕುತಿಮ್ಮನ ಕಗ್ಗ ಕೊರವಂಜಿ ಫೆಬ್ರುವರಿ 1944

ಮಂಕುತಿಮ್ಮನ ಕಗ್ಗ ಕರ್ನಾಟಕ ವೈಭವ
27.5.1945 ವಿ. ಆರ್. ಜಹಗೀರದಾರ

ಡಿ ವಿ ಜಿ ಯವರೂ ಅವರ ಕೃತಿಗಳೂ ದೇಶಬಂಧು
29.4.1945 ಕಂಡಾಡಿ

ಮೂರು ರುಬಾಯಿಯಾತ್ ಕ.ನು. 15.6.1945 ಜಿ. ಪಿ. ರಾಜರತ್ನಂ

ಶ್ರೀರಾಮ ಪರೀಕ್ಷಣಂ ದೇಶಬಂಧು 10.3.1946 ಕಂಡಾಡಿ

ಸ್ವತಂತ್ರ ಭಾರತ ಅಭಿನಂದನ ಸ್ತವ ಕ. ನು. 22.8.1947

ಸ್ವತಂತ್ರ ಭಾರತ ಅಭಿನಂದನ ಸ್ತವ ದೇಶಬಂಧು 31.8.1947

ಮಹಾತ್ಮಗಾಂಧಿ ಜ್ಞಾಪಕ ಪದ್ಯ ಸಂಗ್ರಹ
ಕ. ನು. 8.9.1948 ಸಂಪಾದಕ

ಮಹಾತ್ಮರ ಮರಣ ಮತ್ತು ಇತರ ಉಪನ್ಯಾಸಗಳು
1948 ಜಿ. ಪಿ. ರಾಜರತ್ನಂ

(ಸ್ವತಂತ್ರ ಭಾರತ ಅಭಿನಂದನಸ್ತವ ಮತ್ತು ಶ್ರೀರಾಮ ಪರೀಕ್ಷಣಂ)

ಮಹಾತ್ಮ ಗಾಂಧಿ ಜ್ಞಾಪಕ ಪದ್ಯ ಸಂಗ್ರಹ
ಪ್ರ. ಪ್ರ. ಮಾರ್ಚ್ 1948 ಎಸ್. ವಿ. ಶ್ರೀ.

ಅಂತಃಪುರ ಗೀತೆ ಪ್ರ. ಪ್ರ.
ಆಗಸ್ಟ್ 1950 ಕೆ. ಎಸ್. ನರಸಿಂಹಸ್ವಾಮಿ

ವಿಕಟಕವಿ ವಿಜಯ–ಮುನ್ನುಡಿ ಕ. ನು.
ಮೇ 1951 ಎಲ್. ಎಸ್. ಶೇಷಗಿರಿರಾವ್

ರಾಜ್ಯಶಾಸ್ತ್ರ ವಿಶ್ವಕರ್ನಾಟಕ 16.3.1952 ತಿ. ತಾ. ಶರ್ಮ

ಕೈಲಾಸಂ ಸ್ಮರಣೆ ಮುನ್ನುಡಿ ಕ. ನು. ಮೇ 1953 ಎಸ್. ವಿ. ಪಿ.

ಅಂತಃಪುರಗೀತೆ ಕ. ನು. ಜೂನ್ 1953 ಎಲ್. ರಾಜಾರಾವ್

ಸಂಸ್ಕೃತಿ ಪ್ರ. ಪ್ರ. ಮಾರ್ಚ್ 1954 ದೇ. ಜ. ಗೌ.

ಪುರುಷ ಸೂಕ್ತ, ಈಶೋಪನಿಷತ್ತು
ಪ್ರ. ಪ್ರ. ಮಾರ್ಚ್ 1954 'ಅಭಿಮಾನಿ'

ಶ್ರೀ ಡಿ ವಿ ಜಿ ಯವರು ಚಿತ್ರಿಸಿರುವ ರಾಮಚಂದ್ರ ಪ್ರಭು
ಮಾರ್ಚ್ 1952 ಜಿ. ಪಿ. ರಾಜರತ್ನಂ

ಪ್ರಾರ್ಥನೆಗಳು ಆರೆಮೂಕ 1956 ಹೆಚ್. ವಿ. ಸುಬ್ಬರಾವ್

ಡಿ ವಿ ಜಿ ಯವರ ಪ್ರಾರ್ಥನೆ ಆರೆಮೂಕ 1956 ಸುಮತೀಂದ್ರರಾವ್

ಗೀತಶಾಕುನ್ತಲ ಆಕಾಶವಾಣಿ ಭಾಷಣ
22.1.1962 ಶ್ರೀಧರಮೂರ್ತಿ

ಗೀತಶಾಕುನ್ತಲ ಪ್ರಜಾಮತ 19.3.1961 ಎನ್. ರಂಗನಾಥ ಶರ್ಮಾ

ಕನ್ನಡ ಮ್ಯಾಕ್‌ಬೆತ್ ಆಕ್ಟೋಬರ್ 1964 ಕನ್ನಡ ಭಾರತಿ ದೆಲ್ಲಿ

Monumental Treatise on the Gita
Deccan Herald 13.3.1966 S. R. Krishnamurthy

ಶ್ರೀಮದ್ಭಗವದ್ಗೀತಾತಾತ್ಪರ್ಯ ಸಂಯುಕ್ತ ಕರ್ನಾಟಕ
13.6.1966 ಹ.ರ. ಪುರೋಹಿತ

ಶ್ರೀಮದ್ಭಗವದ್ಗೀತಾತಾತ್ಪರ್ಯ, ಅಧ್ಯಾತ್ಮ ಪ್ರಕಾಶ
ಜೂನ್ 1966 ಸಚ್ಚಿದಾನಂದೇಂದ್ರ ಸರಸ್ವತಿ ಸ್ವಾಮಿಗಳು

A Modern Classic on the Gita
Deccan Herald 19.6.1966 K. Krishna Murth

A Commentary on the Gita
Mysindia 24.12.1966 C.H. Prahlada Rao

ಮಂಕುತಿಮ್ಮನಕಗ್ಗ *Journal of the Mysore State Education Federation* ಏಪ್ರಿಲ್–1971 ಅಬ್ದುಲ್ ಖಯ್ಯೂಂ

ಶೃಂಗಾರ ಮಂಗಳಂ ಕಾಮ ಸಾಮ್ರಾಜ್ಯ 1971 ಜಿ.ಪಿ. ರಾಜರತ್ನಂ

ಡಿ ವಿ ಜಿ ಯವರ ಆಲೋಚನೆಗಳು ಪು. ಪ್ರ. ಎಸ್. ವಿ. ಶ್ರೀ.

ಜೀವನ ಧರ್ಮಯೋಗ ಮೂರು ರೇಡಿಯೋ ಭಾಷಣಗಳು
ಪು.ತಿ. ನರಸಿಂಹಾಚಾರ್, ಜಿ.ಪಿ. ರಾಜರತ್ನಂ, ಎನ್. ರಂಗನಾಥ ಶರ್ಮಾ

ವಿಶ್ವಜೀವಾಶ್ವತ್ಥ 1972 ಜಿ.ಪಿ. ರಾಜರತ್ನಂ
ಓದದ ಬಾಯ್ 1972 ,,

ಮಂಕುತಿಮ್ಮನಕಗ್ಗ ಕಾವ್ಯ ಕಲ್ಪನೆ 1975 ಚಿ.ನ. ಮಂಗಳ

ಬಾಳಿಗೊಂದು ನಂಬಿಕೆ ಬಾಡದ ಹೂವುಗಳು 1977 ಎಂ. ರಾಮಚಂದ್ರ

ತಾತ್ತ್ವಿಕ ಹಿನ್ನೆಲೆ ಹೊಸಗನ್ನಡದ ಕಾವ್ಯದ ಎರಡು ಮಾರ್ಗಗಳು
1972 ಸುಜನಾ
ಹೊಸಗನ್ನಡ ಸಾಹಿತ್ಯ ಎಲ್.ಎಸ್. ಶೇಷಗಿರಿರಾವ್
ಕುಸುಮಾರ್ಪಣೆ (ಗೋಖಲೆ ಸಂಸ್ಥೆ)

ಡಿ ವಿ ಜಿ ಅವರ ಶ್ರೀರಾಮ ಪರೀಕ್ಷಣಂ ಶೂದ್ರ
ಆಗಸ್ಟ್ 1983 ಕೆ.ಜಿ. ನಾಗರಾಜಪ್ಪ

ಮಾರುತಿ ಮಹಿಮೆ ಡಿ ವಿ ಜಿ ಯವರು ಚಿತ್ರಿಸಿರುವ
ಶ್ರೀಮದಾಂಜನೇಯಸ್ವಾಮಿ 1981 ಡಿ. ಆರ್. ವೆಂಕಟರಮಣನ್

ಡಿ ವಿ ಜಿ ಯವರ ಸಾಹಿತ್ಯ ಕೃತಿಗಳು : ಒಂದು ಅಧ್ಯಯನ
1988 ಗುಂಡ್ಮಿ ಚಂದ್ರಶೇಖರ ಐತಾಳ

0163.

ಡಿ.ವಿ.ಜಿ. ಜನ್ಮಶತಮಾನೋತ್ಸವ ಸ್ಮೃತಿ ಮಾಲೆ

	ರೂ. ಪೈ.
ಜೀವ ಸಾರ್ಥಕ್ಯ ದೀಪಿಕೆ (ಸೂಕ್ತಿ ಸಂಕಲನ)	15-00
ಮಂಕುತಿಮ್ಮನ ಕಗ್ಗ	6-00
ಬಾಳಿಗೊಂದು ನಂಬಿಕೆ	5-00
ಸಂಸ್ಕೃತಿ	6-00
ಕೆಲವು ಮಹನೀಯರು (ಜ್ಞಾಪಕ ಚಿತ್ರಶಾಲೆಯ ಸಂಗ್ರಹ)	5-00
ಕಾವ್ಯ ಕುಸುಮಾಂಜಲಿ (ಕವನ ಸಂಕಲನ)	4-00
ಸಾರ್ವಜನಿಕದಲ್ಲಿ ಸಾತ್ತ್ವಿಕ	2-00
ಮಂಕುತಿಮ್ಮನ ಕಗ್ಗ—ಆಯ್ದ ಪದ್ಯಗಳು	1-00
ವನಸುಮ (ಸಂಸ್ಮರಣ ಸಂಚಿಕೆ)	10-00
ಧೀಮಂತ (ಸಂಭಾವನಾ ಸಂಪುಟ)	60-00
ಡಿ.ವಿ.ಜಿ. ಅವರ ಬಿಡಿ ಬರಹಗಳು	10-00
ಜೀವನ ಸೌಂದರ್ಯ ಮತ್ತು ಸಾಹಿತ್ಯ	10-00
ವಿರಕ್ತ ರಾಷ್ಟ್ರಕ ಡಿ ವಿ ಜಿ	25-00
ಡಿ.ವಿ.ಜಿ. ಅವರ ಮುನ್ನುಡಿಗಳು ಭಾಗ-1, 2	ಅಚ್ಚಿನಲ್ಲಿದೆ

ಬೆಲೆ : ರೂ. 25/-